ವಾರ್ಷಿಕ ಚಂದಾ ರೂಪಾಯಿ ೩. ಬಿಡಿ ಸಂಚಿಕೆ 1 ಆಣೆ. ಟಪ್ಪಾಲು ಹಾಸಲು ಸೇರಿ ರೂ. ೩-12-0.

Fine Printing is the Success of your Trade

Consult Sharada Press Mangalore

ಸ್ವದೇಶಾಭಿಮಾನಿ
SWADESHABHIMANI

For Everything that is best in Life Insurance
The Bombay Life Assurance Co., Ltd., Bombay.
Madras Branch Secretaries:
Kochikar Bros., Udipi.

ಕೊಂಗ್ರೆಸ್ ಸಂಚಿಕೆ ESTABLISHED 1906 Congress Number

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೮. ಮಂಗಳೂರು ತಾ. ೨ನೇ ಶುಕ್ರವಾರ ನವಂಬರ ೧೯೩೪. (2-11-'34) ಸಂಚಿಕೆ ೪೪

ನಲ್ವತ್ತೆಂಟನೇ ರಾಷ್ಟ್ರೀಯ ಸಭಾಧಿವೇಶನ: ಬೊಂಬಾಯಿ

ಅಧ್ಯಕ್ಷರ ಭಾಷಣ; ಶ್ವೇತಪತ್ರದ ಆಯೋಜನೆಯ ಟೀಕೆ.

ಬೊಂಬಾಯಿ, ತಾ. ೨೬-೧೦-೧೯೩೪.

ನಲ್ವತ್ತೆಂಟನೇ ರಾಷ್ಟ್ರ ಸಭಾಧಿವೇಶನವು ಈ ದಿನ ಸಾಯಂಕಾಲ ಆರಂಭವಾಯಿತು. ಕೊಂಗ್ರೆಸ್ ನಗರವು ಅತ್ಯಪೂರ್ವ ಉತ್ಸಾಹದಿಂದಲೂ ಚಟುವಟಿಕೆಗಳಿಂದಲೂ ಒಪ್ಪಿ, ಕಂಗೊಳಿಸುತ್ತಿತ್ತು. ಮೂರುವರೆ ವರ್ಷಗಳ ನಂತರ ಸೇರಿದ ಅಧಿವೇಶನವಿದು; ಹಾಗೂ ಬೊಂಬಾಯಿಯಂತಹ ಅನುಕೂಲ ನಗರದಲ್ಲಿ! ಆದುದರಿಂದ, ಈ ಬಾರಿಯ ಕೊಂಗ್ರೆಸ್ ಅಧಿವೇಶನಕ್ಕೆ ವಿಶೇಷ ಕಳೆಯೇರಿದುದು ಮಾತ್ರವೇ ಅಲ್ಲದೆ, ದೇಶದ ಸಮಸ್ತ ಭಾಗಗಳಿಂದಲೂ ಸಾವಿರಾರು ಜನರು ಬಂದು ನೆರೆದಿದ್ದರು. ಪ್ರೇಕ್ಷಕರಾಗಿಯೂ ಡೆಲಿಗೇಟರಾಗಿಯೂ ಕೊಂಗ್ರೆಸ್ ಚಪ್ಪರದೊಳಗೇ ಅರ್ಧ ಲಕ್ಷಕ್ಕೂ ಮಿಕ್ಕಿ ಜನರು ಸೇರಿದ್ದರಾಗಿ ಎಣಿಕೆಯಿದೆ. ಎಲ್ಲಿ ನೋಡಿದರೂ ಖಾದಿ ಟೊಪ್ಪಿಗಳನ್ನು ಧರಿಸಿದ ಜನರು! ಅದೊಂದು ಖಾದಿ ಟೊಪ್ಪಿಗಳ ಜನಸಾಗರ!

ಸಾಯಂಕಾಲ ೭ ಘಂಟೆಗೆ ಸರಿಯಾಗಿ ಅಧ್ಯಕ್ಷರ ಮೆರವಣಿಗೆ, ಕೊಂಗ್ರೆಸ್ ಡೇರೆಯಿಂದ ಹೊರಟು ಸಭಾಂಗಣಕ್ಕೆ ಬಂತು. ಪದ್ಧತಿಯಂತೆ ಕೊಂಗ್ರೆಸ್ಸಿನ ಮಾಜಿ ಅಧ್ಯಕ್ಷರುಗಳಾದ ಪಂಡಿತ ಮಾಲವೀಯ, ಡಾ॥ ಅನ್ಸಾರಿ, ಮಹಾತ್ಮಾ ಗಾಂಧಿ, ಸರೋಜಿನಿ ನಾಯ್ಡು, ಮೌಲಾನಾ ಅಬುಲ್ ಕಲಂ ಅಜಾದ್ ಇವರು ಮುಂದೆ ಸಾಗಿದ್ದರು. ಅವರ ಹಿಂದೆ ಈ ಅಧಿವೇಶನದ ಅಧ್ಯಕ್ಷರಾದ ಬಾಬೂ ರಾಜೇಂದ್ರರು ಬಿಳಿಯ ಖಾದಿ ಟೊಪ್ಪಿ, ಅಂಗಿ ಮತ್ತು ಧೋತಿಗಳನ್ನು ಧರಿಸಿ, ಖಾದಿ ಮಾಲೆಯಿಂದಲಂಕೃತರಾಗಿ ಸಾಗಿದ್ದರು. ಅನಂತರ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ॥ ನರಿಮ್ಯಾನರು ಮತ್ತು ಇತರ ಮುಖಂಡರು—ಹೀಗೆ ಕ್ರಮವಾಗಿ ಮೆರವಣಿಗೆಯು, ಇಬ್ಬದಿಗಳಲ್ಲಿಯೂ ಜಯಘೋಷವಾಗುತ್ತಿರಲು ಸಭಾಂಗಣವನ್ನು ಪ್ರವೇಶಿಸಿತು. ಅಧ್ಯಕ್ಷರು ಪೀಠವನ್ನೇರಲು, ವಂದೇ ಮಾತರಂ ಗೀತವು ಹಾಡಲಾಗಿ, ನರಿಮ್ಯಾನರು ಅಧ್ಯಕ್ಷರನ್ನು ಗೌರವದ ಬಿಲ್ಲೆಯಿಂದ ಭೂಷಿಸಿದರು.

ಕೊಂಗ್ರೆಸ್ ಸಭಾ ಮಂದಿರವು ವಿದ್ಯುದ್ದೀಪಗಳಿಂದಲಂಕೃತವಾಗಿ ಅನುಪಮ ಶೋಭೆಯಿಂದ ಒಪ್ಪುತ್ತಿತ್ತು. ಅಪರಾಹ್ನ ನಾಲ್ಕು ಘಂಟೆಯಿಂದಲೂ ಜನರು ತಂಡೋಪತಂಡವಾಗಿ ಬಂದು ಕೂಡಿದ್ದರು. ಪ್ರೇಕ್ಷಕರಿಗೂ ಡೆಲಿಗೇಟರಿಗೂ ಸ್ಥಳವನ್ನು ಕರಗತವಾರಾಗಿ ಪ್ರತ್ಯೇಕಿಸಿದ್ದರು. ಜೀನಿಯ ಬಡಗಿಗಳಿಂದ, ಚಾಣಾಕ್ಷ ಇಂಜಿನಿಯರುಗಳ ಮೇಲ್ವಿಚಾರದಲ್ಲಿ ರಚಿತವಾದ ಆ ಕೊಂಗ್ರೆಸ್ ನಗರ, ಸಭಾಂಗಣ, ಅಧಿವೇಶನಾರಂಭದ ದಿನದ ಆ ಜನಸಾಗರದ ದೃಶ್ಯ—ಅದರ ಗಾಂಭೀರ್ಯವನ್ನೂ ಅಂತೇ ರಮ್ಯನೋಟವನ್ನೂ ಹೊಗಳಿದಷ್ಟೂ ಸಾಲದು.

ಪ್ರಾರ್ಥನೆಯಾದ ನಂತರ ಶ್ರೀ ನರಿಮ್ಯಾನರು ಸ್ವಾಗತ ಸಮಿತಿಯ ಅಧ್ಯಕ್ಷಭಾಷಣ

ಕೊಂಗ್ರೆಸ್ ಅಧ್ಯಕ್ಷರಾದ ಶ್ರೀ॥ ಬಾಬೂರಾಜೇಂದ್ರ ಪ್ರಸಾದರವರು;
(ಮತ್ತು ಅವರ ಧರ್ಮಪತ್ನಿಯವರು.)

ವನ್ನು ಕೊಟ್ಟರು. ಬಾಬೂರಾಜೇಂದ್ರ ಪ್ರಸಾದರವರು, ತಮ್ಮ ಭಾಷಣವನ್ನು ಸವಿವರವಾಗಿ ಕೊಡಲಿಲ್ಲ. ಹಿಂದೀಯಲ್ಲಿ ಸಾರಾಂಶವನ್ನು ಮಾತ್ರ ಓದಿಹೇಳಿದರು.

ಅಧ್ಯಕ್ಷರ ಭಾಷಣ:—

ಬಂಧುಭಗಿನಿಯರೇ,

ಮೂರುವರೆ ವರ್ಷಗಳ ಶ್ರಮೋದ್ಯಮ—ಕಷ್ಟಾನುಭವಗಳ ನಂತರ ನಾವಿಲ್ಲಿ ಪುನಃ ಸೇರಿರುವೆವು. ತನ್ನ ಜೀವನಕ್ರಮ ಮತ್ತು ಕಾರ್ಯಶಕ್ತಿಯ ಉಜ್ವಲತೆಯಿಂದ ಹಲವರಿಗೆ ಪ್ರೇರಕಸ್ವರೂಪರಾಗಿದ್ದ ಅಸ್ಸಿಬಿಸೆಂಟರವರನ್ನೂ ಮುತ್ಸೋರ್ವ ದೇಶಭಕ್ತರಾದ ಸರ್ ಶಂಕರನ್ ನಾಯರರನ್ನೂ, ೧೬ ವರ್ಷಗಳ ಹಿಂದೆ ಇದೇ ನಗರದಲ್ಲಿ ಕೊಂಗ್ರೆಸ್ಸಿನ ಒಂದು ವಿಶೇಷ ಅಧಿವೇಶನದಲ್ಲಿ ಅಧ್ಯಕ್ಷತನವನ್ನು ವಹಿಸಿದ್ದ—ಅಚಲ ರಾಷ್ಟ್ರೀಯರಾದ ಮಿ॥ ಸಯದ್ ಹಸನ್ ಇಮಾಮರನ್ನೂ ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಂಟರಾದ ಶ್ರೀ ವಿಠ್ಠಲಭಾಯಿ ಪಟೇಲರನ್ನೂ, ದೇಶಪ್ರಿಯ ಜತೀಂದ್ರ ಮೋಹನ ಸೇನಗುಪ್ತರನ್ನೂ, ಅಸಾಧಾರಣ ಪತ್ರಿಕಾ ವ್ಯವಸಾಯಿಗಳಾದ ರಂಗಸ್ವಾಮಿ ಅಯ್ಯಂಗಾರರನ್ನೂ ಕಳಕೊಳ್ಳುವ ದುರ್ಭಾಗ್ಯವು, ಆ ಮಧ್ಯಾವಧಾನದಲ್ಲಿ, ನಮ್ಮದಾಯಿತು. ಗೃಹತಾಪತ್ರಯಗಳಿಂದಾಗಲಿ ಇತರ ಸಂಕಷ್ಟಗಳಿಂದಾಗಲಿ ತನ್ನ ತಾರುಣ್ಯದ ಹುರುಪನ್ನು ಕಳಕೊಳ್ಳದೆ,

ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಪ್ರಥಮದ ಅಪಜಯ.

ಬೊಂಬಾಯಿ, ತಾ. ೨೮-೧೦-'೩೪.

ವಿಷಯ ನಿಯಾಮಕ ಕಮಿಟಿಯ ಸಭೆಯು ಈ ದಿನ ಸೇರಿ, ಕೊಂಗ್ರೆಸ್ಸಿನಲ್ಲಿ ಕೆಲ ತಿದ್ದುಪಡಿಗಳಾಗಬೇಕೆಂಬ ಬಗೆಗೆ, ಕಾರ್ಯಕಾರಿ ಸಮಿತಿಯ ಪರವಾಗಿ ಮಿ॥ ಅಬುಲ್ ಕಲಂ ಅಜಾದರು ಮುಂತಂದ ಠರಾವನ್ನು ಚರ್ಚಿಸಿತು. ಈ ವಿಷಯವನ್ನು ಪ್ರಾಂತಿಕ ಕಮಿಟಿಗಳ ಪರ್ಯಾಲೋಚನೆ ಹಾಗೂ ಅಭಿಪ್ರಾಯ ಸಂಗ್ರಹಕ್ಕಾಗಿ ಕಳುಹಬೇಕೆಂದು ಬಹುಮತವು ವ್ಯಕ್ತವಾದ ಬಗೆಯಿಂದ, ಅಜಾದರ ಠರಾವು ಇದಕ್ಕಿದ್ದಂತೆ ಮಂಜೂರಾಗದೆ ೭೧ ಮತಗಳಿಗೆ ೯೩ ಮತಗಳ ಪ್ರಬಲ ವಿರೋಧವು ವ್ಯಕ್ತವಾಗಿ, ಕೊಂಗ್ರೆಸ್ ಕಾರ್ಯಕಾರಿ ಸಮಿತಿಯು ಪ್ರಥಮದ ಬಾರಿಗೆ ಅಪಜಯ ಹೊಂದಿತು.

ಬದಲಾವಣೆ ಸೂಚಿಸಿಬಂದ ಠರಾವುಗಳು:—

(೧) 'ನ್ಯಾಯವಾದ ಮತ್ತು ಶಾಂತವಾದ' ಎಂಬುದರ ಬದಲಿಗೆ 'ಸತ್ಯವಾದ ಮತ್ತು ಅಹಿಂಸಾಬದ್ಧ' ಎಂದು ತಿದ್ದಿಕೊಳ್ಳುವುದು. (೨) ನಿತ್ಯವೂ ಶುದ್ಧ ಖಾದಿ ಧರಿಸುವವರಲ್ಲದೆ ಇತರರು ಕೊಂಗ್ರೆಸ್ ಕಮಿಟಿಗಳಿಗೆ ಸದಸ್ಯರಾಗಿಯಾಗಲಿ ಇತರ ಯಾವ ಅಧಿಕಾರಸ್ಥಾನಗಳಿಗಾಗಲಿ ಚುನಾವಣೆಗೆ ಅರ್ಹರಾಗುವುದಿಲ್ಲ. (೩) ಆರು ತಿಂಗಳುಗಳಿಂದ ತಿಂಗಳಿಗೆ ೧೦ನೇ ನಂಬ್ರದ ೫೦೦ ಗಜನೂಲು ತಂದೊಪ್ಪಿಸುವುದು ಮತ್ತು ತಿಂಗಳಿಗೆ ೮ ತಾಸುಗಳಿಗೆ ಕಡಿಮೆಯಾಗದಷ್ಟು ನೂಲುವುದು ಅಥವಾ ಇದಕ್ಕೆ ಸಮಾನವಾದ ಇತರ ಯಾವುದಾದರೂ ದೈಹಿಕ ಶ್ರಮವನ್ನು ಕೊಂಗ್ರೆಸ್ ಪರವಾಗಿ ಮಾಡುವವರಲ್ಲದೆ ಕೊಂಗ್ರೆಸ್ ಕಮಿಟಿಗಳ ಸದಸ್ಯತನಕ್ಕೆ ಅರ್ಹರಾಗುವುದಿಲ್ಲ.

ಖಾದಿ ವಿಷಯಕವಾದ ಠರಾವು.

ಕೊಂಗ್ರೆಸ್ ಕಮಿಟಿಗಳ ಮೆಂಬರರೆಲ್ಲ ನಿತ್ಯಖಾದಿಧಾರಿಗಳಾಗಿರಬೇಕೆಂಬ ಠರಾವು, ತಿದ್ದುಪಡಿಗಳು ಸ್ವೀಕೃತವಾಗದೆ, ಬಹುಮತದಿಂದ ಮಂಜೂರಾಗಿದೆ.

ಕಷ್ಟಗಳಿಂದ ಜರ್ಝರಿತವಾದರೂ ಎದೆಗೆಡದೆ ಭಾರತವರ್ಷದ ಯುವಕಜನಾಂಗದ ಪ್ರತಿನಿಧಿಯಾಗಿರುವ ಜವಾಹರಲಾಲರ ನೆನಪನ್ನೂ ಇಲ್ಲಿ ಮಾಡಬೇಕಾಗಿದೆ. ಅತ್ತ ಪರದೇಶದಲ್ಲಿರುವ ಸುಭಾಸ್‌ಬೋಸರನ್ನೂ ಮರೆಯುವ

(ಕಡೇ ಪುಟಕ್ಕೆ ಮುಂದುವರಿದುದು.)

[illegible]

ಮುಂಬಯಿಯಲ್ಲಿ ಕಾಂಗ್ರೆಸ್ ಮಹಾ ಸಭೆಯು ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಜರಗುತ್ತಿರುವುದೆಂದು ಕನ್ನಡಿಗರಿಗೆ ಪುನಃ ಪುನಃ ಹೇಳಬೇಕಿಲ್ಲವಷ್ಟೆ! ಕಾರಂತರು ಬರುತ್ತಿರುವ ಕಾಂಗ್ರೆಸ್ ನ್ಯೂಸ್ ಗಳನ್ನು ಓದಿ ... ಇದ್ದರೂ ಅರ್ಥ; — ಅಸೆಂಬ್ಲಿಯಲ್ಲಿದ್ದರೂ ... — ದೇಶ ಪ್ರೇಮದಿಂದಲ್ಲಿದ್ದರೂ ... ಕೊಟ್ಟು ನೇಮಕ್ಕಾಗಿ ಪತ್ರಿಕೆಗಳಲ್ಲಿ ಓದಿರಬಹುದು!

× × × × ×

ಹೊಸ್ತ ಅದಿತ್ಯವಾರ ಕಾಂಗ್ರೆಸ್ ಮಂದಿರದಲ್ಲಿ ಮಾಲವೀಯರ ಭಾಷಣಾರಂಭವಾಯಿತು! ಅಲ್ಲಿಗೆ ಬೇಯಿ ಮುಂಡಾಸನ್ನು ಸುತ್ತಿ, ಅದಕ್ಕೆ ಉರೂಟು ಸಾಹುವನ್ನಿಟ್ಟ, ಕೈಯಲ್ಲೊಂದು ಪತ್ರ ಹಿಡಿದು ಮಾಲವೀಯರು — ಪಂಡಿತರಂತೆ ಎದ್ದು ನಿಂತರು. ಒಡನೆ ಆರಂಭವಾಯಿತಲ್ಲ!—“ಸ್ವಾಮಿ, ಪಂಡಿತರೇ, ‘ಪುರಾಣಂ ಪಂಡಿತ ಲಕ್ಷಣಂ’ ಎಂಬುದನ್ನು ಮರೆತಿರಾ? ಕುಳಿತುಕೊಳ್ಳಿ; ಸಾಕು ನಿಮ್ಮ ವಾದ!” ಎಂಬ ಅರ್ಥ ಬರುವ ನಾಲ್ಕು ಕಡೆಗಳಿಂದ ಕೇಳಲಾರಂಭಿಸಿತು, ಆದರೂ ಪಂಡಿತರು ತನ್ನ ಸಾದದ ಮೇಲೆ ವಿಶ್ವಾಸವಿಟ್ಟು ಭಾಷಣವನ್ನು ಮುಂದುವರಿಸಿದರು. ಜನರ ಬೊಬ್ಬೆಯ ಸಮುದ್ರದಲ್ಲಿ ಅವರ ‘ಸಹಲ ಕಾವೇರಿಯೊಂದು ಚಿರು ತೊರೆ’ ಎಂದಂತೆ ಮಾಲವೀಯರ ಭಾಷಣದ ಗತಿಯಾಯಿತು!

× × × × ×

ಮಾಲವೀಯರ ಪಕ್ಷದವರು “ಶೇಮು ಶೇಮು”—(Shame! Shame!!) ಎಂದು ಶ್ಯಾಮನ ಸ್ಮರಣೆ ಮಾಡಿ ಬೊಬ್ಬಿಟ್ಟವರಿಗೆ ಬೈದರು! ಅಧ್ಯಕ್ಷರು ಜನರೂ ಜನ ಬೇಡಿಕೊಂಡು “ಶಾಂತರಾಗಿರಿ!” ಎಂದರು. ಕೆಲವು ಸಭಿಕರಿಗೆ ಅವರ ‘ಶಾಂತರಾಗಿರಿ’ ಎಂಬ ಶಬ್ದದೆದುರು ಒಂದು ‘ಅ’ ಕೂಡಿದಂತೆ ಕೇಳಿ, ಅಧ್ಯಕ್ಷರು “ಅಶಾಂತರಾಗಿರಿ” ಎಂದರೆಂದು ಭ್ರಮೆಗೊಂಡು ಚಪ್ಪಾಳೆ ಗಟ್ಟಿ ಎಚ್ಚರ ತಪ್ಪಿದರು! ಅವರಿಗೆ ಕಿವಿಗಳನ್ನು ಕೊಟ್ಟ ಆವರ ದೇವರ ಕಿವಿ ಮುಚ್ಚಿಹೋಗಲಿ!

× × × × ×

“ಮಾಲವೀಯರ ಕಡೆ ಎಷ್ಟು ಜನರು? ಕೈ ಎತ್ತಿ” ಎಂದರು ಅಧ್ಯಕ್ಷರು! ಆ ನಿಮಿಷಗಳಲ್ಲಿ ೧೩ ಕೈಗಳು ಹೇಗೂ ಮೇಲೆ ನಿಂತುವು.

× × × × ×

“ಆವರ ಕಮ್ಯೂನಲ್ ಎವಾರ್ಡಿನ ಪ್ರಶ್ನೆಗೆ ಎಷ್ಟು ಜನರು ವಿರೋಧ?” ಎಂದು ಅಧ್ಯಕ್ಷರು ಕೇಳಿದೊಡನೆ ಗದ್ದೆಯಲ್ಲಿನ ಹುಲ್ಲಿನಂತೆ ಕೈಗಳು ಎದ್ದು ನಿಂತುವು! ಪೈ ಮಾಲವೀಯರ ವ್ಯಸನಕ್ಕೆ!

× × × × ×

ಆಶ್ಚ್ಯಾಗುವಾಗ ನಮ್ಮ ಆನೆಯವರಿಗೆ ಆನೆಗಳ ನೆನಪಾಯಿತೆಂದು ತೋರುತ್ತೆ! ತನ್ನ ಮಿತ್ರ ಮಾಲವೀಯರ ಗತಿಯನ್ನು ನೋಡಿ ಅವರ ಮುಖ ಕಪ್ಪಗಾಯಿತು! ಮಳೆ ಬರುವ ಮೊದಲು ಆಕಾಶ ಹೇಗಿರುವುದೋ ಹಾಗೆ ಅವರ ಮುಖವಾಯಿತು!

× × × × ×

ತನ್ನ ಕುದುರೆಗೆ ಕಣ್ಣಿಲ್ಲದಿದ್ದರೂ ನೋಡುತ್ತದೆ, ಓಡುತ್ತದೆ, ಆಡುತ್ತದೆ—ಎಂದು ಮಾಲವೀಯರ ವಾದ. “ನಿಮ್ಮ ಕುದುರೆಯೇನೋ ಕೆಟ್ಟುದಲ್ಲ—ಆದರೆ ಸವಾರರಾದ ನಿಮ್ಮ ಹಟ ಮಾತ್ರ ಕೆಟ್ಟುದು!” ಎಂದು ಜನರ ಪ್ರವಾದ! ಅಂತೂ ಇಂತೂ ಮಾಲವೀಯರು ಬಿದ್ದರಲ್ಲ! ಏಳದಂತೆ ಬಿದ್ದರಲ್ಲ!

× × × × ×

ಪಂಡಿತರು ಕಾಂಗ್ರೆಸ್ ಸಭೆಯಲ್ಲಿ ತೋರಿಸಿದಷ್ಟು ಹಟವನ್ನು ಲಂಡನಿನಲ್ಲಾದ ರೌಂಡ್‌ಟೇಬಲಿನ ಮೇಲೆ ತೋರಿಸಲಿಲ್ಲವೇಕೆ? ಎಂಬುದು ಸಾಯ್ಬನಿಗೊಂದು ಆಶ್ಚರ್ಯದ ವಿಷಯ!

× × × × × ×

“ನಿಮ್ಮ ಹಟ ಬಿಡಿ ಸ್ವಾಮಿ” ಎಂದು ವಲ್ಲಭಭಾಯಿಯವರು ಪಂಡಿತರೊಡನೆ ಬೇಡಿರುವರು; ಪಂಡಿತರಿಗೆ ಕೇಳಲಿಲ್ಲವೋ?

‘ಸಾಯ್ಬ’.

ಬೆಳೆಯುತ್ತಿರುವ ಮಕ್ಕಳಿಗೆ ಸರಿಯಾದ ಪೋಷಣೆಯು ಅಗತ್ಯ.

ಮುಂದಕ್ಕೆ ಚೆನ್ನಾಗಿ ಬೆಳೆಯಬೇಕಾದರೆ ಚಿಕ್ಕಂದಿನಲ್ಲೇ ಮಕ್ಕಳನ್ನು ಚೆನ್ನಾಗಿ ಸಲಹಬೇಕು. ಬೆಳೆಯುತ್ತಿರುವ ಮಕ್ಕಳು ಮನಸ್ಸು, ದೇಹಗಳಲ್ಲಿ ಆರೋಗ್ಯವಾಗಿಯೂ ಪುಷ್ಟರಾಗಿಯೂ ಬೆಳೆಯಬೇಕಾದರೆ ಸರಿಯಾದ ಪೋಷಣೆಯು ಬೇಕು. ನಿತ್ಯದ ಭೋಜನಗಳಲ್ಲಿ ಸರಿಯಾದ ಪೋಷಣೆ ಸಾರವಿಲ್ಲ. ಎಷ್ಟೋ ಚೆನ್ನಾಗಿದ್ದರೂ, ನಿತ್ಯದ ಆಹಾರದಲ್ಲಿ ಮಕ್ಕಳ ಮನದೇಹಗಳನ್ನು ಬೆಳೆಸುವಷ್ಟು ಸಾರವಿರುವುದಿಲ್ಲ. ಒಂದೇ ಆಹಾರವು ನಿಮ್ಮ ಮಕ್ಕಳನ್ನು ಆರೋಗ್ಯ, ಬಲ, ಶಕ್ತಿಗಳಿಂದ ಪೋಷಿಸುವುದು. ಅದೇ ಆಹಾರವು ‘ಓವಲ್ಟಿನ್.’

ಓವಲ್ಟಿನ್ ಎಂಬುದು ಅಮೋಘವಾದ ಆಹಾರ. ಅದನ್ನು ಪ್ರಕೃತಿಸಿದ್ಧ ವಸ್ತುಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ಕೋಳಿಮೊಟ್ಟೆಗಳಿಂದ ತಯಾರಿಸಲ್ಪಟ್ಟಿದೆ. ಆರೋಗ್ಯಶಾಲಿಯರಾದ ಮಕ್ಕಳಿಗೆ ಅಗತ್ಯ ಬೇಕಾದುದು—ಹೆಸರಾದುದು.

OVALTINE

ಮೆದುಳು, ನರ, ದೇಹಗಳನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಹಸ್ತ ಸ್ಪರ್ಶವಾಗಿಲ್ಲ — ಎಲ್ಲಾ ಸ್ಟೋರುಗಳಲ್ಲಿಯೂ ಕೆಮಿಸ್ಟರಲ್ಲಿಯೂ ಸಿಗುತ್ತದೆ

ಏಜಂಟ್—ಜೇಮ್ಸ್ ರ್ಯಾಟ್, ೮೫ಎ. ಕ್ಲೈವ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ, ಮದ್ರಾಸುಗಳಲ್ಲಿ.

OV/[illegible]

Canara Bank, Limited.

Established 1906.

Authorised Capital	10,00,000—0—0.	**Paid up Capital**	3,30,000—0—0.
Subscribed Capital	6,00,000—0—0.	**Reserves**	4,31,000—0—0.

***Head office*—BUNDER, MANGALORE.** ***Local offices*—CITY & BUNDER.**

Branches—Bombay, Cochin, Calicut, Ernakulam, Alleppey, Chikmagalur, Bangalore, Ganguli, Coondapoor, Udipi, Karkal, Puttur, Kasaragod, & Buntwal Out-agency.

Interest is allowed on Current, Fixed & Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

A. Madhava Pai, ***Secretary.***

ಅನುಕ್ರಮಣಿಕೆ.

ಅಗ್ರಲೇಖ
ಕೊಂಗ್ರೆಸ್ ಅಧಿವೇಶನ ೧
ಸ್ಫುಟವಿಚಾರಗಳು ೫
ಟಿಪ್ಪಣಿಗಳು ೧೦
ವರ್ತಮಾನ ಸಂಗ್ರಹ ೨
ವಿವಿಧ ಸಮಾಚಾರಗಳು ೧೨
ಪತ್ರವ್ಯವಹಾರ ೧೪
ಪೇರು ೪
ಮಂಗಳೂರು ೧೧
ನಲ್ವತ್ತೆಂಟನೇ ರಾಷ್ಟ್ರಸಭಾಧಿವೇಶನ ಬೊಂಬಾಯಿ ೧
ಕಮ್ಯುನಲ್ ಎವಾರ್ಡ: ಮಾಲವೀಯರ ತಿದ್ದುಪಡಿ ೧೯
ಗ್ಯಾಸ. ೬

ಸ್ವದೇಶಾಭಿಮಾನಿ.

ತಾ. ೨ನೇ ಶುಕ್ರವಾರ ನವಂಬರ '೩೪

ಕೊಂಗ್ರೆಸ್ ಅಧಿವೇಶನ.

ಅಭೂತಪೂರ್ವ ಉತ್ಸಾಹ—ವೈಭವಗಳಿಂದ ಈಗಾಗಲೇ ಜರುಗಿ ಮುಗಿದ ರಾಷ್ಟ್ರೀಯಮಹಾಸಭೆಯ ಅಧಿವೇಶನವು, ಕೆಲವೊಂದು ಮಹತ್ವದ ಠರಾವುಗಳನ್ನು ಜನಾಂಗದ ಮುಂದಿರಿಸಿದೆ. 'ಕೊಂಗ್ರೆಸ್ ರಾಜಕೀಯ'ಗಳ ಅಗ್ರಸ್ಥಾನ ಪಡೆದಿರುವ ಬೊಂಬಾಯಿ ನಗರವನ್ನು ಅಧಿವೇಶನಕ್ಕಾಗಿ ಆರಿಸಿದುದು ಮಾತ್ರವಲ್ಲ, ಮೂರುವರೆ ವರ್ಷಗಳ ಕಾಲ ಅಧಿವೇಶನಗಳು ಜರುಗಿರದಿದ್ದುದೂ, ದಿನೇ ದಿನೇ ಜನತೆಯ ರಾಜಕೀಯ ಪರಿಜ್ಞಾನದ ಬೆಳವಣಿಗೆಯಾಗುತ್ತಿರುವಾಗ—ಸ್ವಾತಂತ್ರ್ಯದ ಹಸಿವು ಪ್ರವರ್ಧಿಸುತ್ತಿರುವಾಗ—ಶ್ವೇತಪತ್ರದ ಯೋಜನೆಯಾದದೂ, ಇತ್ತ ಮಹಾತ್ಮಾಜಿಯವರು ಸೂಚಿಸಿದ ತಿದ್ದುಪಡಿಗಳ ಸೂಚನೆ ಹಾಗು ನಿವೃತ್ತಿಯ ವಿಚಾರವೂ ಈ ಬಾರಿಯ ಕೊಂಗ್ರೆಸ್ಸಿನ ಮಹತ್ವವು ಹೆಚ್ಚಲು ಕಾರಣವಾದುವು

ಮಹಾತ್ಮಾಜಿಯವರ ಪ್ರತಿಬಿಂಬದಂತಿರುವ ಮತ್ತು ಅವರ ಅಚಲ ಭಕ್ತರಾಗಿರುವ ಬಾಬೂರಾಜೇಂದ್ರ ಪ್ರಸಾದರವರ ಅಧ್ಯಕ್ಷ ಭಾಷಣದಲ್ಲಿ ಬಹುಮಟ್ಟಿಗೆ ಮಹಾತ್ಮಾಜಿಯವರ ಅಂತರ್ಯವೇ ಪ್ರಕಟವಾದುದರಲ್ಲಿ ಆಶ್ಚರ್ಯವೇನೂ ಇಲ್ಲ ವಾಸ್ತವವಾಗಿ ಕೊಂಗ್ರೆಸ್ ಅಧಿವೇಶನಗಳಲ್ಲಿ ಅಧ್ಯಕ್ಷರು ಕಳೆದ ರಾಜಕೀಯ ಸಂಗ್ರಾಮದ ಸಿಂಹಾವಲೋಕನವನ್ನು ಮಾಡಿ, ಪ್ರಚಲಿತ ಸಮಸ್ಯೆಗಳ ವಿಷಯದ ಮೇಲೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ಮುಂದಿನ ಧೋರಣೆಯನ್ನು ಸಂಕ್ಷೇಪವಾಗಿ ಸೂಚಿಸುವುದು ರೂಢಿಯಾಗಿರುವಂತೆ, ಶ್ರೀ ಪ್ರಸಾದರವರೂ ಗಂಭೀರ ಹಾಗು ಹೃದಯಂಗಮವಾದ ತಮ್ಮ ಶೈಲಿಯಲ್ಲಿ ನಮ್ಮ ರಾಜಕೀಯ ಸಮಸ್ಯೆಗಳ ವಿಚಾರ ಪತ್ರಿ ಭಾಷಣ ಮಾಡಿರುವರು. ಅವರ ಭಾಷಣದಲ್ಲಿ ನಿರ್ಭೀತಿ, ದೃಢನಿಶ್ಚಯ, ಮತ್ತು ಉತ್ಪ್ರೇಕ್ಷಾಲಂಕಾರವಿಲ್ಲದ ವಿವರಣೆ ಇವುಗಳು ಒಡೆದು ಕಾಣುತ್ತವೆ. ಕೊಂಗ್ರೆಸ್ಸಿನ ಸ್ವಾತಂತ್ರ್ಯ ಸಂಗ್ರಾಮದ ಸ್ಥೂಲ ವಿಮರ್ಶೆ ಮಾಡಿ ಪ್ರಸಾದರವರು ಈಗ ದೇಶದ ಮುಂದಿರುವ ಕುತೂಹಲದ ಸಮಸ್ಯೆಯಾದ ಶ್ವೇತಪತ್ರದ ಟೀಕೆಯನ್ನೆ ತಮ್ಮ ಭಾಷಣದಲ್ಲಿ ಪ್ರಾಮುಖ್ಯಾಂಗವಾಗಿ ತೆಗೆದುಕೊಂಡು ಸವಿಸ್ತಾರವಾಗಿ ವಿಮರ್ಶಿಸಿ, ಪಾಮರನಿಗೂ ತಿಳಿವಂತೆ ಅದರ ಸಾಧಕ ಬಾಧಕಗಳನ್ನು ವಿವರಿಸಿರುವರು. ಮಹಾತ್ಮಾಜಿಯವರು ಸೂಚಿಸಿದ ತಿದ್ದುಪಡಿಗಳನ್ನು ಪ್ರಸಾದರವರು ಅನುಮೋದಿಸುವರೆಂಬುದೇನೂ ಅನಿರೀಕ್ಷಿತವಲ್ಲ.

ಕೊಂಗ್ರೆಸ್ ಕೊನ್‌ಸ್ಟಿಟ್ಯೂಶನಿನಲ್ಲಿ ಮಹಾತ್ಮಾಜಿಯವರು ಸೂಚಿಸಿದ ಬದಲಾವಣೆಗಳು ಅಲ್ಪಸ್ವಲ್ಪ ತಿದ್ದುಪಡಿಯಿಂದ ಸ್ವೀಕೃತವಾಗಿವೆ. ಕಳೆದ ಹದಿನೈದು ವರ್ಷಗಳಿಂದಲೂ ಕೊಂಗ್ರೆಸ್ಸಿನ ಮೇಲೆ ಅಬಾಧಿತವಾದ ವರ್ಚಸ್ಸನ್ನು ಬೀರಿ ಸರ್ವಾಧಿಕಾರಿಯಂತಿದ್ದ ಮಹಾತ್ಮರು ಸನ್ಯಸ್ತ ಹೊಂದುವ ಈ ದಿನದಲ್ಲೂ ವಿಜಯಿಯಾಗಿಯೇ ನಿವೃತ್ತಿಹೊಂದಿರುವರು. ಡೆಲಿಗೇಟರುಗಳ ಸಂಖ್ಯೆಯನ್ನು ಆರು ಸಾವಿರದಿಂದ ಎರಡು ಸಾವಿರಕ್ಕೆ ಇಳಿಸುವುದು, ಕೊಂಗ್ರೆಸ್ ಕಾರ್ಯಸ್ಥರೆಲ್ಲ ಖಾದಿಯನ್ನೆ ಧರಿಸುವುದು ಇವೆಲ್ಲ ಠರಾವುಗಳು ಸರ್ವಾನುಮತದಿಂದ ಮಂಜೂರಾಗಿವೆ ಆದರೆ, ನುಡಿಯಲ್ಲಿ ಮಾತ್ರ ಸುಲಭವಿದ್ದು ನಡೆಯಲ್ಲಿ ಕಷ್ಟತನುವೆಂದು ತೋರುವ ನಿರ್ಧಾರಗಳೂ ಒಂದೆರಡು ಇವೆ,—ನೂಲಿನ ಮತದಾರಿಕೆ ಮತ್ತು ಕೊಂಗ್ರೆಸ್ ಕಾರ್ಯಸ್ಥರಿಗೆ ದೈಹಿಕ ಶ್ರಮದ ಕಠಿನ ನಿಯಮ ತರ್ಕದ ದೃಷ್ಟಿಯಿಂದ ಇವು ಉತ್ತಮವೇನೋ ಇರಬಹುದು ಪರಂತು, ಇವುಗಳನ್ನು ಆಚರಿಸುವ ಮೂಲಕ, ಮಾನ್ಯ ಮಾಡುವ ಬದಲಾಗಿ ಉಲ್ಲಂಘಿಸಿ ನಾಸಿಸುವುದು ಹೆಚ್ಚಾಗಬಹುದೋ ಎಂಬುದೊಂದು ಸಂದೇಹವೂ ತೋರುವುದು ಇಂತಹ ಕಠಿನ ನಿಬಂಧನೆಗಳಿಂದ ಕೊಂಗ್ರೆಸ್ಸು, ಅನೇಕ ಯೋಗ್ಯ ಕೆಲಸಗಾರರ ಸಹಾಯವನ್ನು ಹೊಂದಲಸಮರ್ಥವಾಗುವುದೆಂದು ಬೆದರಬೇಕಾಗಿದೆ.

ಕೊಂಗ್ರೆಸ್ ಅಧ್ಯಕ್ಷರು ತಮ್ಮ ಕಾರ್ಯಕಾರಿ ಮಂಡಲವನ್ನು ತಾವೇ ಚುನಾಯಿಸಿ ರಚಿಸುವಂತೆ ಅಧಿಕೃತರಾದುದು ವಿಹಿತವೇ ಆಗಿದೆ ಇದರಿಂದ ಅಧ್ಯಕ್ಷರ ಕಾರ್ಯವು ಸುಗಮವಾಗುವುದು ಕೌನ್ಸಿಲ್ ಪ್ರವೇಶದ ಕಾರ್ಯಕ್ರಮಕ್ಕೆ ಸಂಪೂರ್ಣ ಬೆಂಬಲ ದೊರೆತುದು ಸಂತೋಷಕರ ಕಮ್ಯುನಲ್ ಎವಾರ್ಡಿನ ವಿಷಯಕವಾದ ಮಾಲವೀಯಜಿಯವರ ಠರಾವು ಬಹುಮತ ದೊರೆಯದೆ ಬಿದ್ದುಹೋದುದು ನಿರೀಕ್ಷಿತವೇ

ಗ್ರಾಮೋದ್ಯೋಗಗಳನ್ನು ಪುನರುಜ್ಜೀವಿಸುವ ಸಲುವಾಗಿ "ಅಖಿಲಭಾರತ ಗ್ರಾಮ ಕೈಗಾರಿಕಾ ಸಂಸ್ಥೆ"ಯನ್ನು ಸ್ಥಾಪಿಸಲು ನಿರ್ಧರಿಸಿದುದು, ಈ ಬಾರಿಯ ಕೊಂಗ್ರೆಸ್ ಅಧಿವೇಶನದ ಅತಿ ಮಹತ್ವದ ಠರಾವಾಗಿದೆ ಇದಕ್ಕೆ ಸರ್ವಾನುಮೋದನೆಯಂತೆ ಸರ್ವತೋಮುಖ ಬೆಂಬಲವೂ ದೊರೆಯುದಿರದು ಇದನ್ನು ಕೊಂಗ್ರೆಸ್ಸಿನ ಮೇಲ್ವಿಚಾರದಲ್ಲಿಯೆ ನಡೆಸುವರಾದರೂ ಕೊಂಗ್ರೆಸ್ ರಾಜಕೀಯಗಳೊಂದಿಗೆ ಸಂಬಂಧಿಸದೆ, ಪ್ರತ್ಯಕ್ಷ ಸಂಬಂಧವಿರಿಸದೆ, ಪ್ರತ್ಯೇಕವಾದ ಒಂದು ಸಂಸ್ಥೆಯಾಗಿ (ಅಖಿಲ ಭಾರತ ಚರಕಾ ಸಂಘದಂತೆ) ನಡೆಸಬೇಕೆಂದು ತೀರ್ಮಾನಿಸಿದುದು ಜಾಣತನವೆನ್ನಬೇಕು

ಈ ಸಂದರ್ಭದಲ್ಲಿ,—ತಮ್ಮ ಸೂಚನೆಗಳನ್ನು ರಾಷ್ಟ್ರಸಭೆಯು ಮಾನ್ಯ ಮಾಡಿದರೂ ಗಾಂಧಿಜಿಯವರು ನಿವೃತ್ತರಾದುದು ಅನೇಕರಿಗೆ ದುಃಖವನ್ನುಂಟುಮಾಡಿದೆ. ಆದರೆ, ಅವರ ಸಹಾನುಭೂತಿಯೂ, ಕಾಲಾವಶ್ಯದಲ್ಲಿ ಸಹಾಯವೂ ದೊರೆವುದೆಂಬ ಭರವಸೆಯಿರುವಾಗ,—'ಗಾಂಧಿಜಿಯವರ ಕಾರ್ಯವಿಧಾನಗಳು ಅನುಕೂಲಕ್ಕೆ ಬದಲಾಗಿ ಆತಂಕ'ವೆನ್ನುವವರ ಸಮಾಧಾನಕ್ಕಾಗಿ,—ಕೊಂಗ್ರೆಸ್ಸನ್ನು ಬಲಗೊಳಿಸುವುದಕ್ಕಾಗಿಯೇ ಅವರು ನಿವೃತ್ತರಾದರೆಂಬುದನ್ನು ತಿಳಿದು, ಬಾಬೂರಾಜೇಂದ್ರ ಪ್ರಸಾದ, ವಲ್ಲಭಭಾಯಿ ಮೊದಲಾದವರ ಪರಿಚಾಲತ್ವದಲ್ಲಿ ಪೂರ್ಣ ಭರವಸೆಯನ್ನಿಟ್ಟು, ಜನಾಂಗವು, ರಾಷ್ಟ್ರೀಯ ಸಭೆಯು ನಿರ್ಧರಿಸಿದುದನ್ನು ನಡೆಸಿಕೊಡಲು ತ್ರಿಕರಣಪೂರ್ವಕವಾಗಿ ಸಹಾಯಮಾಡುತ್ತಿರಲಿ!

ಸ್ಫುಟವಿಚಾರಗಳು.

ಉಡುಪಿಯ "ಕಿರಿಯರ ಪ್ರಪಂಚ"ವು

೧೯೩೦ರಲ್ಲಿ ಸ್ಥಾಪಿತವಾದಂದಿನಿಂದ ತನ್ನ ತನುಮನ ಧನಗಳನ್ನು ಕರ್ನಾಟಕ ಮಾತೆಯ ಚರಣಾರವಿಂದದಲ್ಲರ್ಪಿಸಿ ಸೇವಾತತ್ಪರನಾಗಿದ್ದು, 'ಕಾವ್ಯ ಸಾಮ್ರಾಜ್ಯ' ಮೊದಲಾದ ಉಜ್ವಲ ಗ್ರಂಥಗಳನ್ನು ಮುದ್ರಿಸಿ ಕನ್ನಡ ನಾಡಿಗೇ ಭೂಷಣಪ್ರಾಯವಾಗಿದೆ ಈ ವಿಧದ ಸೇವೆಗೆ ಧನದ ಬೆಂಬಲವು ಎಷ್ಟು ಬೇಕೆಂದು ಊಹಿಸಲಳವಲ್ಲ. ಇದೇ ತಾ ೧೧ಕ್ಕೆ ಮುಂಬಾಯಿಯ ಸೌತ್ ಕೆನರಾ ಫಿಸಿಕಲ್ ಕಲ್ಚರ್ ಇನ್ಸ್‌ಟಿಟ್ಯೂಟಿನವರು ಪ್ರೊಫೆಸರ್ ಶೀಪಪ್ಪನವರ ಸೌಹಾರ್ದ್ರದಿಂದ ಸರ್ ಕವಾಸ್ಜಿ ಜಹಾಂಗೀರ್ ಮಂದಿರದಲ್ಲಿ 'ಕಿರಿಯರ ಪ್ರಪಂಚ'ದ ಪರವಾಗಿ ವ್ಯಾಯಾಮ ಪ್ರದರ್ಶನವೊಂದನ್ನು ಮಾಡಲಿರುವರು ಮುಂಬಾಯಿ ಪಟ್ಟಣದಲ್ಲಿ ಕನ್ನಡಿಗರು,—ಅದರಲ್ಲೂ, ದಕ್ಷಿಣ ಕನ್ನಡಿಗರು ಕಡಿಮೆ ಸಂಖ್ಯೆಯಿಂದಿಲ್ಲ. ಇವರಿಲ್ಲರು, 'ಕಿರಿಯರ ಪ್ರಪಂಚ'ದವರೂ ಪ್ರೊಫೆಸರ್ ಶೀಪಪ್ಪನವರೂ ತಮ್ಮವರೆಂಬ ಸತ್ಯವಿಷಯವನ್ನರಿತು ದೇಶಾಭಿಮಾನವನ್ನುತೋರ್ಪಡಿಸಿ ಅವರ ಈ ಸಾಹಸದಲ್ಲಿ ಪರಿಪೂರ್ಣ ಸಹಕಾರವನ್ನಿತ್ತು ಅವರನ್ನು ವಿಜಯಿಗಳನ್ನಾಗಿ ಮಾಡುವರೆಂದು ನಂಬಿದವರಿದ್ದೇವೆ

ಶ್ವೇತಪತ್ರದ ಹಾವಳಿಯೇನು?—

ಎಂಬುದು ಬಾಬೂರಾಜೇಂದ್ರ ಪ್ರಸಾದರು ಕೊಂಗ್ರೆಸ್ಸಿನ ಅಧ್ಯಕ್ಷರಾಗಿ ಮೊನ್ನೆ ಮುಂಬಾಯಿಯಲ್ಲಿ ಮಾಡಿದ ಭಾಷಣದಿಂದ ಸಾಧಾರಣ ವ್ಯಕ್ತಿಗಳಿಗೂ ಸುವ್ಯಕ್ತ ಶ್ರೀ ಪ್ರಸಾದರ ಭಾಷಣವೆಂಬುದು ಮಹಾತ್ಮರ ಪುಷ್ಟೀಕರಣ ಶ್ರೀ ಪ್ರಸಾದರ ಅಭಿಪ್ರಾಯಗಳೆಲ್ಲ ಮಹಾತ್ಮಾಜೀಯವರ ಅಭಿಪ್ರಾಯಗಳೇ ಶ್ವೇತಪತ್ರದ ಕುರಿತು ಮಹಾತ್ಮರು ತಮ್ಮ ಅನೇಕ ಭಾಷಣಗಳಲ್ಲಿ ಯಾವ ಭಾವಗಳನ್ನು ಹೇಗೆ ವ್ಯಕ್ತಗೊಳಿಸಿ ಅದರ ಹಾನಿಯನ್ನು ಬಣ್ಣಿಸಿರುವರೋ, ಅದೇ ರೀತಿಯಿಂದ ಪ್ರಸಾದರೂ ವಿವರಿಸಿ ದೇಶದ ಕೋಟಿಗಟ್ಟಳೆ ದ್ರವ್ಯವು—ಹೀಗಿಸಿಯ ಒಂದೇ ಪ್ರಯೋಗದಿಂದ ಹೇಗೆ ಹೊರಗೆ ಹರಿದು ಹೋಗುವುದೆಂದು ವಿವರಿಸಿರುವರು ಅಧ್ಯಕ್ಷ ಭಾಷಣವು ರಾಜೇಂದ್ರ ಪ್ರಸಾದರನ್ನು ಮಹಾರಾಜಕಾರಣ ವ್ಯಕ್ತಿಯೆಂದು ನಿರ್ಣಯಿಸಿದೆ ಅಂತಹ ಧೀರರ ಬೆಂಬಲದಿಂದ ಈ ವರ್ಷದ ಕೊಂಗ್ರೆಸ್ಸಿನ ನಡವಳಿಕೆಯು ದೇಶಕ್ಕೆ ಎಷ್ಟು ಯಶಸ್ಸನ್ನು ತರುತ್ತದೆಂದು ನಿರೀಕ್ಷಿಸೋಣ

ಎಕ್ಸೈಜ್ ಕಂದಾಯವು ಬಿತ್ತು

ಮದ್ರಾಸು ಸಂಸ್ಥಾನದಲ್ಲಿನ ಎಕ್ಸೈಜ್ ಕಂದಾಯವು ೧೯೩೩ಕ್ಕಿಂತ ಕಡಿಮೆಯಾಗಿದೆಯೆಂದು ಅಧಿಕಾರಿಗಳ ಪ್ರಕಟಣೆ 'ಟೆಂಪರೆನ್ಸ್ ಚಳವಳಿ'ಯೆಂಬುದು ಪರದೆಯೊಳಗಾಗಿ ಬಹುಕಾಲವಾಯಿತು ಅದರ ಪರಿಣಾಮವು ಕುಡುಕರ ಮೇಲಾಗದೆಯೇ ಎಕ್ಸೈಜ್ ಕಂದಾಯವು ಬಿತ್ತೆಂದರೆ, ಈ ಇಳಿತಾರಕ್ಕೆ ಅವುದೋ ಕಾರಣವಿರಬೇಕು, ಆರ್ಥಿಕ ಸಂಕಷ್ಟವೆಂಬುದು ಎಲ್ಲೆಲ್ಲೂ ಮನೆಮಾಡಿಕೊಂಡಿದೆ ಅದರಲ್ಲೂ ಕುಡಿಕತನಕ್ಕೆ ಬಲಿಬಿದ್ದವರ ಪಾಡು ಹೇಳತೀರದು —ಎಂದಾಗ ಎಕ್ಸೈಜ್ ಕಂದಾಯವು ಇಳಿದಿರುವುದು ಅಸ್ವಾಭಾವಿಕವಲ್ಲ ರಿಪೋರ್ಟಿನ ಈ ವರ್ಷದಲ್ಲಿ ಅಬ್ಕಾರಿ ಎಕ್ಸೈಜರಿಗೆ ೩೩,೧೯೯ ತಕ್ಸೀರುಗಳು ನಡೆದಿವೆಯೆಂದು ಅಧಿಕಾರಿಗಳು ಲೆಕ್ಕಹಾಕಿರುತ್ತಾರೆ ಇದಕ್ಕೂ ಜನರ ದಾರಿದ್ರ್ಯವೇ ಕಾರಣ. ಅಭ್ಯಾಸವನ್ನು ತ್ಯಜಿಸಲಾರದ ಬಡವರೇ ಈ ತಕ್ಸೀರುಗಳಿಗೆ ಬಲಿಬಿದ್ದರೆಂಬುದನ್ನು ಕಂಡುಕೊಂಡರೆ, ಈ ದಾರಿದ್ರ್ಯ ರೋಗಕ್ಕಾಗಿ ಶೀಘ್ರದಲ್ಲೇ ಔಷಧಿ ಹುಡುಕದಿದ್ದರೆ ದುಷ್ಕರ್ಮವು ಹೆಚ್ಚುತ್ತ ಹೋಗುವುದೆಂಬುದರಲ್ಲಿ ಸಂದೇಹವಿಲ್ಲ.

ಶುಭವಾಗಲಿ!

"ನನ್ನ ದೇಶದ ಭಾಗ್ಯವೇ ನನ್ನ ಭಾಗ್ಯ. ಗ್ರಾಮ ಸಂಘಟನೆ ಮಾಡಿ ಬ್ರಿಟಿಷ ಸರಕಾರದಿಂದ ನಾನು ಸ್ವರಾಜ್ಯವನ್ನು ಗೆಲ್ಲುವೆನು" ಎಂದೆನ್ನುತ್ತ ಗಾಂಧಿಜೀಯವರು ಕೊಂಗ್ರೆಸ್ಸಿನಲ್ಲಿ ತನ್ನ ಅಂತಿಮೋಕ್ತಿಗಳನ್ನು ನುಡಿದರು. ಎಂತಹ ಉಜ್ವಲ ದೇಶಪ್ರೇಮವೋ ಎಂತಹ ಉಗ್ರ ಪ್ರತಿಜ್ಞೆ! ಕೊಂಗ್ರೆಸ್ಸಿನ ಮೇಲಿನ ಪ್ರೇಮಕ್ಕಿಂತಲೂ ಗಾಂಧಿಜೀಯವರಿಗೆ ದೇಶದ ಮಮತೆಯು ಅಧಿಕವಾಗಿದೆಯೆಂಬುದಕ್ಕೆ ಬೇರೆ ನಿದರ್ಶನವೇ ಬೇಡವೆಂದಿರುವಾಗ, ಮಹಾತ್ಮರು ರಾಜಕೀಯದಿಂದ ಹೊರಗಾಗುವರೆಂಬ ಊಹನೆಯು ತೀರ ಅಸಂಬದ್ಧವೆಂದು ತಿಳಿಯದೇ? ಮಹಾತ್ಮರ ಗುರಿಯು ಸುಲಭಸಾಧಕವಲ್ಲ, ಅತ್ಯುನ್ನತವಾದುದು ಇದಕ್ಕೆ ಮುಖ್ಯವಾಗಿ ಹಿಂದೂದೇಶದ ಧಂಡವಾಳಿಗರ ಸಹಾಯವು ಬೇಕು, ಅದರೊಡನೆ ಹಳ್ಳಿಗರಿಗೆ ಮಹಾತ್ಮರ ಉದ್ದೇಶದ ಮೇಲೆ ಸಂಪೂರ್ಣ ವಿಶ್ವಾಸವಿರಬೇಕು. ಅಲ್ಲದೆ ಸರಕಾರದ ಸಹಾನುಭೂತಿಯೂ ಅಗತ್ಯ' ಮಹಾತ್ಮರಿಗೆ ಶುಭವಾಗಲಿ!

ಆದರೂ ಹಿಂದೀಯರು ಬೇಡ!!

ದಕ್ಷಿಣಾಫ್ರಿಕದಲ್ಲಿ ಹಿಂದೀಯರ ಸಂಕಷ್ಟಗಳೇನೆಂದು ಪದೇ ಪದೇ ಪ್ರಕಟವಾಗಿ ಈಗದು ಮನೆಮಾತಾಗಿದೆ ಹಿಂದೀಯರೆಂಬವರು ಆಫ್ರಿಕದಲ್ಲಿ ಸರ್ವಥಾ ನೆಲೆಸಲ್ಲಕೂಡದೆಂಬ ಭಾವನೆಯು ಅಲ್ಲಿ ತಲೆದೋರಿದೆ ಅವರನ್ನು ಹಿಂದೂದೇಶಕ್ಕೆ ಹಿಂದಟ್ಟುವ ಯತ್ನವು ಬಹುಮುಖವಾಗಿ ನಡೆಯುತ್ತಿದೆ ಇದೊಂದನ್ನು ಕೇಳಿ "ನೇಟಲ್ ಎಡ್ವರ್ಟೈಸರ್" ಎಂಬುದರಲ್ಲಿ ಒಬ್ಬನು ಹೀಗೆ ಬರೆದಿರುತ್ತಾನೆ—"ದಕ್ಷಿಣಾಫ್ರಿಕದಲ್ಲಿರುವ ಕುಟುಂಬಗಳಿಗೆ ತಲಾ ಒಂದಕ್ಕೆ ಒಂದು ಪೌಂಡಿನಂತೆಯೂ, ಸಂಪಾದನೆ ಮಾಡುವವರಿಗೆ ತಲಾ ಒಬ್ಬಕ್ಕೆ ಐದು ಶಿಲ್ಲಿಂಗುಗಳಂತೆಯೂ ಪೆನ್ಶನ್ ಕೊಟ್ಟರೆ, ಈಗ ಈ ದೇಶದಲ್ಲಿರುವ ಬಹುಸಂಖ್ಯಾತ ಹಿಂದೀಯರು ಈ ಪೆನ್ಶನನ್ನು ಪಡೆದು ಹಿಂದೂದೇಶಕ್ಕೆ ಹಿಂತೆರಳುವರು ಹೀಗೆ ಪೆನ್ಶನ್ ಕೊಡಲು ನಮಗೇನೋ ೫,೦೦೦,೦೦೦ ಪೌಂಡುಗಳು ೨೦ ವರ್ಷಗಳಿಗೆ ಬೇಕಾಗಬಹುದು ಇದರಿಂದ ೫೦,೦೦೦ ಜನರಿರುವ, ೧೦,೦೦೦ ಕುಟುಂಬಗಳನ್ನು ನಾವು ಅವರ ನಾಡಿಗೆ ಕಳುಹಿಸಬಹುದು ಆದರೆ, ಇಷ್ಟು ಜನರಿಗೆ ಪ್ರತ್ಯೇಕ ವಸಾಹತುಗಳನ್ನು ನಿರ್ಮಿಸಿ ಅವರು ಇಲ್ಲಿ ನೆಲೆ ನಿಲ್ಲುವಂತೆ ಏರ್ಪಾಡು ಮಾಡಿದರೆ ನಮಗೆ ಈ ಮೊಬಲಗಿಗಿಂತ ದ್ವಿಗುಣಿತ ವೆಚ್ಚವಾಗುವುದು" ಎಂತಹ ಉಪಾಯ! ಎಂತಹ ಗಣಿತ! ಆದರೂ ದಕ್ಷಿಣಾಫ್ರಿಕದಲ್ಲಿ ಹಿಂದೀಯರು ಬೇಡ"

ಬಹುಮತದೆದುರೂ ಹಟವೇ?

ದೇಶದ ಈ ಬಿಕ್ಕಟ್ಟ ಸ್ಥಿತಿಯಲ್ಲಿ ಪಂಡಿತ ಮಾಲವೀಯರು ರಾಷ್ಟ್ರೀಯ ಪಕ್ಷವೊಂದನ್ನು ಸ್ಥಾಪಿಸಿ ಶ್ರೀ ಅಣೆ ಮತ್ತು ಶ್ರೀ ಜಮ್ನಾದಾಸ ಮೇಥಾರವರ ಸಹಕಾರದಿಂದ ಕೊಂಗ್ರೆಸ್ಸಿನೆದುರು ನಿಂತು ಹೋರಾಡಿ ಹಟವನ್ನು ಸಾಧಿಸುತ್ತಿದ್ದರು. ಆದರೂ ರಾಷ್ಟ್ರ ಸಭಾಧಿವೇಶನದಲ್ಲಿ ಬಹುಮತದೆದುರಾಗಿ ನಿಂತು ಇವರು ತನ್ನ ಛಲವನ್ನು ಮುಂದೊತ್ತಲೊಲ್ಲರು ಎಂಬ ಊಹನೆಯು ಎಲ್ಲರಲ್ಲಿತ್ತು. ಆದರೆ ಘಟಿಸಿದುದೇನು? ಕಮ್ಯೂನಲ್ ಎವಾರ್ಡಿನ ಒಂದೇ ವಿಷಯವು ಮಹಾ ಮೇರುವಿನಂತಾಗಿ, ಸಭಾಧಿವೇಶನದಲ್ಲಿ ಹಾಹಾಕಾರವು ತಲೆದೋರಿ ಪಂಡಿತರೂ ಅವರ ಅನುಯಾಯಿಗಳೂ ಹೊರಗೆ ನಿಂತರಲ್ಲ! ಇದೀಗ ಆಶ್ಚರ್ಯ! ಕೊಂಗ್ರೆಸ್ಸಿನ ಪಥವನ್ನು ಸಮರ್ಥಿಸಿದ ನೂರಿನ್ನೂರು ವೋಟುಗಳೆಲ್ಲಿ? ಪಂಡಿತರ ಹಟವನ್ನು ಪುಷ್ಟೀಕರಿಸಿದ ೧೩೦ ವೋಟುಗಳೆಲ್ಲಿ? ಹೀಗಾದರೂ ಮಾಲವೀಯರು ತನ್ನ ಮನೋಪರಿವರ್ತನೆಯನ್ನು ಮಾಡದೆ ಕೊಂಗ್ರೆಸ್ಸಿಗೆ ಪ್ರತಿಭಟಿಸಿ ನಿಂತುದು ದೇಶಕ್ಕೆ ಎಂದೂ ಹಿತಕರವಲ್ಲ. ಡೆಮೊಕ್ರೆಟಿಕ್ ಸ್ವರಾಜ್ಯ ಪಾರ್ಟಿಯ ಪರವಾಗಿ ನ್ಯಾಯವಿಧಾಯಕ ಸಭೆಯ ಚುನಾವಣೆಗೆ ನಿಂತ ಶ್ರೀ ಜಮ್ನಾದಾಸರ ಕಾರ್ಯಕಲಾಪಗಳನ್ನು ಎದುರು ನೋಡಬೇಕಾಗಿದೆ.

ಲೋಧ್ರ

ಪುತ್ರವತ್ಯಾಗಿ ದಿವ್ಯ ಟಾನಿಕ್,
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1-10-0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಚಿತ್ರಾವಳಿ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್
ಅವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ.
ಬೆಲೆ ಆಣೆ 8.
30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ:— **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು

ಕಿರ್ಲೋಸ್ಕರವು



ಗುಣ-ಬಾಳಿಕೆಗಳ ಸೂಚಕವು.

ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,—ಅದರ ಖರ್ಚು ಕಡಿಮೆಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ. ಶಾಸ್ತ್ರೀಯವಾಗಿಯೂ ಪೂರ್ಣ ತೃಪ್ತಿ ಕೊಡುವಂತೆಯೂ ಅವು ರಚಿಸಲ್ಪಟ್ಟಿವೆ.

ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯಿದೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,
ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು!— ಸ್ಪೆನ್ಸರ್ ಪೆರ್ರಿ ಎಂಡ್ ಕೊ. ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಾತುಕುಟ್ಟಿ ವೈದ್ಯರ
ವಿಶೂಚಿಕಾ ಸಂಹಾರಿ
Vishuchika Samhari
(PILCO)
ಕಾಲರೆಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ದಪ್ಪಿ 1ಕ್ಕೆ ರೂ. 1-0-0.

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)
ಗುಹ್ಯರೋಗ ನಿವಾರಣೆಗೆ ಅಮೋಘ ಪಚ್ಚಿಲೆ ಔಷಧಿ ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.
8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2-8-0.
ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಸೈಂಟಿಫಿಕ್ ಸ್ವರ್ಣಾಭರಣಗಳು
(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)
ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.
ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.



ಹೊಸ ಕೆಟಲಾಗು ಧರ್ಮಾರ್ಥ.
ವಿಳಾಸ:-
The Scientific Gold Bangles Co., Ltd.,
Head Office:-43, Byragimatam Street,
Post Box No. 203, Madras.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ॥ ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇದೆ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೨೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಬ್ಬನ್ ಪೇಟೆ ಬೆಂಗಳೂರು (ಅಂಚೆ ಪೆಟ್ಟಿಗೆ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.
P. No. 104

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವತರದ ಉಡುಪುತೊಡುಪುಗಳನ್ನು ಒದಗಿಸವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ—ಬೈರವಾಸು—ಚೆಕ್ಕ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For — **A. & F. Harvey,**
Managers: Madura Mills Co, Ltd.,

An Advertisement in
'Swadeshabhimani'
Means a sure fortune to you
Ask for Contract Rates.
The Swadeshabhimani office,
Car Street, Mangalore.

---

preserve Your Wealth by BIRTH-CONTROL.
ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಭರ್ಗವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:— **ಪಂಡಿತ ಕೆ. ನಾರಾಯಣರಾವ್,** ಆಯುರ್ವೇದ ಭಿಷಕ್, ಕಾರ್ಕಳ, ದ. ಕ.
Branches—Kukkundoor & Kaikamba, (Gurpoor) ಬ್ರಾ:—ಕುಕ್ಕುಂದೂರು, ಕೈಕಂಬ, ಗುರ್ಪುರ
[N. B.—ಉತ್ತರವನ್ನಪೇಕ್ಷಿಸುವವರು ಒಂದೂವರೆ ಆಣೆಯ ಸ್ಟಾಂಪಿನೊಂದಿಗೆ ಬರೆಯಬೇಕು.]

(ಕೊನೆಯ ಪುಟದಿಂದ ಮುಂದುವರಿದುದು.)

ದಲ್ಲಿ — ಹಾಗೆಯೇ ದೇಶಕ್ಕಾಗಿ ಇನ್ನೂ ಕಷ್ಟ ಪಟ್ಟು—ಪಡುತ್ತಿರುವ—ಇತರ ಎಷ್ಟೋ ಅನಾಮಧೇಯರ ಸ್ಮರಣೆಯನ್ನೂ ಮಾಡಬೇಕಾಗಿದೆ.

ಅತ್ಯಂತ ಸಂದಿಗ್ಧ ಸಮಯದಲ್ಲಿ ನೀವು ನನ್ನನ್ನು ಅಧ್ಯಕ್ಷತನದ ಕಾರ್ಯಭಾರವನ್ನೊಪ್ಪಿಸಿ, ಆಮಂತ್ರಿಸಿರುವಿರಿ. ಸ್ಥಾನವು ಮಹತ್ತರ ಜವಾಬುದಾರಿಯನ್ನುಳ್ಳುದು. ನನ್ನ ಪ್ರಾಂತ್ಯದಲ್ಲಿ ಒತ್ತಟ್ಟಿಗಿದ್ದು, ಒಬ್ಬಂಟಿಗನಾಗಿಯೇ ನನ್ನ ಸೇವೆಯನ್ನರ್ಪಿಸಲು ಸಂತೋಷಪಡುತಿದ್ದೆ. ಪರಂತು, ದೇಶದ ಕರೆಯನ್ನು ಅವಮಾನಿಸಲಾಗದು. ನನ್ನ ಪರಿಮಿತಿಗಳನ್ನು ನಾನು ಬಲ್ಲೆ. ನನ್ನಲ್ಲಿ ನೀವಿರಿಸಿದ ಭರವಸೆಯನ್ನು ನಾನು ಸ್ವಂತಕ್ಕಾಗಿ ಸ್ವೀಕರಿಸಿಲ್ಲ; ನನ್ನ ಪ್ರಾಂತ್ಯವು ಸ್ವರಾಜ್ಯ ಸಂಗ್ರಾಮದಲ್ಲಿ ಸಲಿಸಿದ ಸೇವೆಯನ್ನು ನೀವು ಗೌರವಿಸಿರುವಿರೆಂದೆಣಿಸುವೆನು. ಹೇಗಿದ್ದರೂ, ನನ್ನ ಮುಂದಿನ ಕಾರ್ಯಪಥದಲ್ಲಿ ನಿಮ್ಮ ಸಹಕಾರ ಸಹಾನುಭೂತಿಗಳಿಂದ ಮಾತ್ರ ಮುಂದುವರಿಯುವ ಭರವಸೆಯುಳ್ಳವನಾಗಿದ್ದೇನೆ. ಕಳೆದ ೧೦ ತಿಂಗಳುಗಳಿಂದಲೂ ನಿಸರ್ಗ ದೇವತೆಯ ಕೋಪಾಗ್ನಿಗೆ ಒಂದಲ್ಲ ಒಂದು ವಿಧದಿಂದ ತುತ್ತಾದ—ಸಂಕಷ್ಟಮಯ ಪ್ರಾಂತ್ಯದಿಂದ ಬಂದಿರುವ ನಾನು, ನಮ್ಮ ಕಷ್ಟಾನುಭವದಲ್ಲಿ ಸಹಾಯಮಾಡಿದವರೆಲ್ಲರಿಗೆ ಕೃತಜ್ಞತೆಯನ್ನು ಸೂಚಿಸಲಿಳಿಸಿ, ರಾಷ್ಟ್ರೀಯ ಜಾಗೃತಿಯೇ ಸಮಸ್ತರಲ್ಲೂ ಬಂಧು ಪ್ರೇಮವನ್ನೂ ಭೂತದಯೆಯನ್ನೂ ಹೆಚ್ಚಿಸಿದ ಫಲವಾಗಿಯೇ ಬಿಹಾರಿಗೆ ಎಲ್ಲೆಲ್ಲಿಂದಲೂ ಅಪೂರ್ವ ಸಹಾಯವು ಬಂದೊದಗಿತೆಂಬುದನ್ನು ಇಲ್ಲಿ ಹೇಳಲಿಚ್ಛಿಸುವೆನು.

ಕೊಂಗ್ರೆಸ್ಸು, ತನ್ನ ಅರ್ಧಶತಮಾನದ ಜೀವಿತದಲ್ಲಿ ನಾನಾ ಸ್ಥಿತಿಗಳ ಅವಸ್ಥಾಂತರವನ್ನು ಹೊಂದಿ ಮುಂದುವರಿದಿದೆ. ಅದರ ಪೂರ್ವಚರಿತ್ರದ ಕಡೆಗೆ ವಿಹಂಗಮ ದೃಷ್ಟಿಯನ್ನಾದರೂ ಎಸೆವ ಆತುರವಿದ್ದರೂ ಅದನ್ನು ತೊರೆದು, ಅದರ ಇತ್ತೀಚೆಗಿನ ಚರಿತ್ರವನ್ನಷ್ಟೆ ವಿಮರ್ಶಿಸಲಿಚ್ಛಿಸುವೆನು.

ಗಾಂಧಿ—ಐರ್ವಿನ್ ಸಂಧಿಯು ಅನಂತರ, ೧೯೩೧ರಲ್ಲಿ, ೪೬ನೇ ರಾಷ್ಟ್ರಸಭಾಧಿವೇಶನವು ಕರಾಚಿಯಲ್ಲಿ ಜರಗಿತ್ತು. ಆ ಸಂಧಿಯೇ ಇಂಡಿಯಾ—ಬ್ರಿಟೈನುಗಳೊಳಗೆ ಶಾಶ್ವತ ಶಾಂತಿಯನ್ನುಂಟುಮಾಡುವುದೆಂದು ಆಶಿಸಲಾಗಿತ್ತು. ಈಗ, ಶಾಸನಭಂಗ ಚಳವಳವು ಹಿಂದೆಗೆಯಲ್ಪಟ್ಟ ಕಾರಣ,—ಮಹಾತ್ಮರು ದ್ವಿತೀಯ ರೌಂಡ್ ಟೇಬಲ್ ಪರಿಷತ್ತಿನಿಂದ ಮರಳಿಬಂದ ಮೇಲೆ ಶಾಸನ ಭಂಗ ಚಳವಳವು ಪುನಃ ಏಕೆ ಆರಂಭಿಸಲ್ಪಟ್ಟಿತೆಂಬ ಕಾರಣಗಳನ್ನು ಇಲ್ಲಿ ಪ್ರಸ್ತಾಪಿಸಿ ಕುರಿತುಕೊಳ್ಳುವುದು ನಿರರ್ಥಕ. ಆದರೆ, ಕೆಲವೇ ಕೆಲವು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಸಂಧಿಯನ್ನು ಪೂರೈಸಿ ಐರ್ವಿನರು ನಿವೃತ್ತರಾಗಿ ತೆರಳಿದರು. ವಿಲ್ಲಿಂಗ್ಡನ್ನ ಪ್ರಭುಗಳು ಆಗಮಿಸಿದರು. ಅತ್ತ ಇಂಗ್ಲಾಂಡಿನಲ್ಲಿ ಲೇಬರ್ ಸರಕಾರವು ತೊಲಗಿ, ರಾಷ್ಟ್ರೀಯ ಸರಕಾರದ ರಚನೆಯಾಗಿತ್ತು. ಐರ್ವಿನರ ಸಡಿಲುಗೈಯನ್ನು ತೀವ್ರ ಟೀಕಿಸಿದ ಟೋರಿಗಳು ವಿಲ್ಲಿಂಗ್ಡನ್ನರ ಸರಕಾರಕ್ಕೆ ಭದ್ರಮುಷ್ಟಿಯ ಪ್ರೇರೇಪಣೆಕೊಟ್ಟರು. ದಂಡ ಹಸ್ತವು ಪ್ರದರ್ಶಿಸುವಂತೆ ಸಾಧನೆಗಳಾದುವು. ಗಾಂಧಿ—ಐರ್ವಿನ್ ಸಂಧಿಯ ಶರ್ತಗಳು ಬ್ರಿಟಿಷರಿಂದ ಮಾನಿಸಲ್ಪಡಲಿಲ್ಲ. ಸಂಯುಕ್ತ ಪ್ರಾಂತ್ಯದಲ್ಲಿ ಬಡರೈತರು ಕ್ಷಾಮದ ದೆಸೆಯಿಂದ ತೆರಿಗೆ ತೆರಲಾರದುದನ್ನು 'ಕರನಿರಾಕರಣಾ' ಚಳವಳವೆಂದು ನಾಮಕರಣ ಮಾಡಲಾಯಿತು. ಸರಕಾರ ಮತ್ತು ಮುಖಂಡರೊಳಗೆ ಪರಸ್ಪರ ವಿಚಾರ ವಿನಿಮಯ ಮತ್ತು ವಾಸ್ತವ ಸ್ಥಿತಿಯ ನಿವೇದನೆಯಾಗುವುದರೊಳಗೆ ಪಂಡಿತ ಜವಾಹರಲಾಲ, ಶರ್ವಾನಿ, ತಂಡನ್, ಗಫರ್‌ಖಾನರಂತಹವರ ದಸ್ತಗಿರಿಗಳಾದುವು. ಒರ್ಡಿನೆನ್ಸು ರಾಜ್ಯಭಾರವಾರಂಭವಾಯಿತು. ಸರಕಾರದೊಡನೆ ಸಹಕಾರವನ್ನಪೇಕ್ಷಿಸಿ ಪ್ರಕಟಣೆಗಳನ್ನು ಕೊಡುತ್ತಿದ್ದ ಮಹಾತ್ಮಾಜಿಯವರು 'ಸ್ವದೇಶಕ್ಕೆ ಬಂದಿಳಿವಾಗ, ಮುಖಂಡರ ಬಂಧನದ ವದಂತಿಯನ್ನು ಕೇಳಿದರು. ಆದರೂ ಪುನಃ ಸಹಕಾರವನ್ನೆ ಕೋರಿ, ವಿಲ್ಲಿಂಗ್ಡನ್ನರೊಡನೆ ಭೇಟಿ ಕೇಳಲಾಯಿತು. ಅದು ಕೆಲವೊಂದು ಶರ್ತಗಳಿಗೊಳಪಟ್ಟು ತಿರಸ್ಕೃತವಾದುದು ಎಲ್ಲರಿಗೂ ವಿದಿತವಿರುವ ವಿಷಯ. ಗಾಂಧಿಜಿಯವರಿಗೆ ಪುನಃ ಶಾಸನಭಂಗ ಚಳವಳವನ್ನು ಪುನರುಜ್ಜೀವನಗೊಳಿಸಬೇಕಾಯಿತು. ಇದಕ್ಕೆ ಉತ್ತರರೂಪವಾಗಿ ಬಂದುದೂ ತಿಳಿದುದೇ—ದಸ್ತಗಿರಿಗಳು! ಆಕಸ್ಮಿಕವಾಗಿ ಸರಕಾರವೂ ಚಳವಳದ ಮೇಲೆ ಯುದ್ಧ ಹೂಡಿತು. ಮುಖಂಡರು ಬಂಧಿಸಲ್ಪಟ್ಟರು; ಚರಸ್ಥಿರ ಸೊತ್ತುಗಳು ಮುಟ್ಟುಗೋಲು—ಹಾಕಲ್ಪಟ್ಟವು. ಲಾಠಿಚಾರ್ಜುಗಳು—ಕೈದುಗಳು—ದಂಡನೆ—ಇವುಗಳೆಲ್ಲ ಯಥೇಚ್ಛ ನಡೆದುವು. ಒಂದೇ ಪಕ್ಷದೊಳಗೆ ಚಳವಳದ ನಿರ್ಮೂಲನ ಮಾಡುವೆವೆಂದು ಸರಕಾರದ ನಿರ್ಧಾರ. ಆದರೆ, ಕೆಲ ತಿಂಗಳ ತನಕ ಸರಕಾರವು ಕೃತಕೃತ್ಯವಾಗಲಿಲ್ಲ. ಕೊಂಗ್ರೆಸ್ಸಿನ ವಿಶೇಷ ಅಧಿವೇಶನಗಳು ಢಿಲ್ಲಿ—ಕಲ್ಕತ್ತಗಳಲ್ಲೂ ಲಾಠಿ ಮತ್ತು ಕೈದುಗಳ ನಡುವೆ ನಡೆಸಲಾದುವು. ಒರ್ಡಿನೆನ್ಸುಗಳು ಅನುಕೂಲ ಶಾಸನ ಸಭೆಗಳ ಸಹಾಯದಿಂದ ಮಸೂದೆಗಳಾಗಿ ರೂಪಾಂತರ ಹೊಂದಿದುವು. ಮೆಜಿಸ್ಟ್ರೇಟರುಗಳಿಗೆ ವಿಶೇಷಾಧಿಕಾರಗಳು ಕೊಡಲಾದುವು. ಹೊಸ ತಕ್ಸೀರುಗಳ ಸೃಷ್ಟನೆಯೂ ಆಯಿತು. ಬಂಗಾಳದ ಬಗ್ಗೆಯೇ ಉಂಟಾದ ಶಾಸನಗಳೂ ಉಲ್ಲೇಖನೀಯವಾಗಿವೆ. ಸರಕಾರವು ಭದ್ರಮುಷ್ಟಿಯನ್ನು ಬಿಗಿಪಡಿಸುತಿದ್ದಷ್ಟಕ್ಕೆ ಅಲ್ಲಿಯ ಭಯೋತ್ಪಾದಕ ಚಳವಳವನ್ನು ಕಿತ್ತುಹಾಕುವ ಯತ್ನಗಳು ವಿಫಲವಾಗುವುವೆನ್ನಬೇಕು. ಕೊಂಗ್ರೆಸ್ಸು ಎಂದಾದರೂ ಭಯೋತ್ಪಾದಕ ಚಳವಳವನ್ನು ಅನುಮೋದಿಸಿಲ್ಲ; ತೀವ್ರವಾಗಿ ನಿಷೇಧಿಸಿದೆ. ಆದರೆ ಆ ತಲೆತಿರುಕ ತರುಣರನ್ನು ದಂಡಹಸ್ತದಿಂದ ಯಾರೂ ಸಮಾಧಾನಗೊಳಿಸಲಾರರು.

ದೇಶವು ಧಾರುಣವಾದ ಆರ್ಥಿಕ ಸಂಕಷ್ಟಗಳಲ್ಲಿ ತೊಳಲಾಡುತ್ತಿದೆ. ಅದು, ಬ್ರಿಟೈನಿನ ಹಿತಚಿಂತನೆಯಿಂದ ಆಳುವ ಇಂಡಿಯಾ ಸರಕಾರದ ಧೋರಣೆಯಿಂದ ಮತ್ತಷ್ಟು ಬಿಗಿಯಾಗುವುದಾಯಿತು. ಕಳೆದ ಕೆಲವರ್ಷಗಳಿಂದ, ಚರಿತ್ರದಲ್ಲಿ ಕಂಡೂಕೇಳದ ದಾರಿದ್ರ್ಯದಲ್ಲಿ ನಮ್ಮ ದೇಶವು ತೊಳಲಾಡುತ್ತಿದೆ. ವಿಶೇಷವಾಗಿ ರಹಿತ ಜನಾಂಗದ ಗೋಳು ಹೇಳತೀರದು. ಗೋಲ್ಡ್ ಸ್ಟೆಂಡಾರ್ಡು ತೊಲಗಿದಂದಿನಿಂದ ಬಂಗಾರದ ಪ್ರವಾಹವು ವಿದೇಶಗಳಿಗೆ ಹರಿಯಲಾರಂಭಿಸಿದೆ. ಇನ್ನು ಒಟ್ಟಾವಾ ಒಪ್ಪಂದದ ವಿಷಯ. ಈ ಒಪ್ಪಂದವು ಹೇಗೆ ಇಂಪೀರಿಯಲ್ ಪ್ರಿಫರೆನ್ಸಿನ ಬ್ರಿಟಿಷರ ರಥದ ಗಾಲಿಗಳಿಗೆ ಹಿಂದೂದೇಶವನ್ನು ಕಟ್ಟಿ, ವಿಶೇಷವಾಗಿ ನಮ್ಮ ರೈತರ ಅವನತಿಗೆ ಕಾರಣವಾಗುವುದೋ ಅದು ವ್ಯಕ್ತವಾಗುತ್ತಿದೆ. ಬ್ರಿಟಿಷ್ ಸಾಮ್ರಾಜ್ಯದೊಳಗಿನ ವಸಾಹತಗಳೊಳಗಿನ ಹಿಂದೀ ನಿವಾಸಿಗಳ ಪಾಡು ಕರುಣಾಜನಕವಾಗಿದೆ. ಹಿಂದಣ ಕತೆಯೇ ಇಂದಿಗೂ ನಡೆಯುತ್ತಲೇ ಇದೆ. ದಕ್ಷಿಣಾಫ್ರಿಕದಲ್ಲಿನ ಹಿಂದೀ ನಿವಾಸಿಗಳ ಸಂಕಷ್ಟಗಳು, ಝಂಝೀಬಾರಿನ ಇತ್ತೀಚೆಗಿನ ವಿದ್ಯಮಾನಗಳು—ಇವೆಲ್ಲ, ಹಿಂದೀಯರನ್ನು ಬಿಳೇ ಜನಾಂಗವು ಸಮಸ್ಥಾನಕೊಟ್ಟು ಆದರಿಸುವುದಿಲ್ಲವೆಂದೂ, ಹಿಂದೀಯರಿಗೆ ಸಾಮಾನ್ಯ ಪ್ರಜೆಯ ಹಕ್ಕುಬಾಧ್ಯತೆಗಳಾದರೂ ದೊರೆಯುತ್ತಿಲ್ಲವೆಂದೂ ಸಾರುತ್ತಿವೆ.

ನಮ್ಮ ಸರಕಾರವು ತನ್ನ ದ್ವಂದ್ವ ಧೋರಣೆಯನ್ನು ಮುಂದೊತ್ತುತ್ತಿದೆ. ಒಂದು ಕಡೆಯಿಂದ ಸುಧಾರಣೆಗಳ ಭಾಷೆ; ಮತ್ತೊಂದು ಕಡೆಯಿಂದ ಒತ್ತಾಳಿಕೆ! ಮೂರು ರೌಂಡ್ ಟೇಬಲ್ ಕೊನ್ಫರೆನ್ಸುಗಳಾಗಿ ನಮಗೆ ದೊರೆಯಲಿರುವುದು ಶ್ವೇತಪತ್ರದಲ್ಲಿನ ಸುಧಾರಣೆಗಳು. ಇವು, ಕೆಲ ಭಾವಿಕ ಜನರನ್ನು ಸಮಾಧಾನಗೊಳಿಸಲೆಂದು ಕೊಡಲಾಗುವುವು. ಆದರೆ, ಜೊಯಿಂಟ್ ಪಾರ್ಲಿಮೆಂಟರಿ ಬೋರ್ಡಿನ ವರದಿಯು ಪ್ರಕಟವಾದ ನಂತರ, ಮಂದ ಪಕ್ಷೀಯರನ್ನು ಕೂಡ ಈ "ಸುಧಾರಣೆ"ಗಳು ಸಮಾಧಾನಪಡಿಸಲಾರವೆಂದು ನನಗೆ ಖಚಿತವಿದೆ. ಅತ್ತ, ಚಳವಳವನ್ನು ನಿರ್ಮೂಲನಗೊಳಿಸಲಿಕ್ಕಾಗಿ ಗದಾಪ್ರಹಾರ; ನಾನಾ ಶಾಸನಗಳು. ಇವೂ, ಸಾಮಾನ್ಯ ಪ್ರಜೆಯ ಹಕ್ಕುಬಾಧ್ಯತೆಗಳನ್ನು ಕೂಡ ನಮ್ಮಿಂದ ಕಿತ್ತು ಕೆಡಿವೆಯೆನ್ನಬಹುದು.

ಕೊಂಗ್ರೆಸ್ಸಿಗೆ ಬೇಕಾದುದು,—ಪೂರ್ಣ ಸ್ವಾತಂತ್ರ್ಯ. ಸೈನ್ಯ, ಹಣಕಾಸು ಮತ್ತು ಪರದೇಶ ವ್ಯವಹಾರಾದಿಗಳ ವಿಷಯದಲ್ಲಿ ಪೂರ್ಣ ಅಧಿಕಾರವೇ ನಮ್ಮ ಜನಾಂಗಕ್ಕೆ ಬೇಕಾದುದು. ಇವಾವುದನ್ನೂ ಶ್ವೇತಪತ್ರವು ನಮಗೆ ಕೊಡುವುದಿಲ್ಲ. ಆದರೂ, ಶ್ವೇತಪತ್ರದೊಳಗಿನ ಸುಧಾರಣೆಗಳನ್ನು ಕೂಡ ಕೊಡಬಾರದೆಂದು ಇಂಗ್ಲಾಂಡಿನಲ್ಲಿ ಪ್ರಯತ್ನಗಳಾಗುತ್ತಿವೆ. ಈ ಸುಧಾರಣೆಗಳು ನಮ್ಮನ್ನು ಡೊಮಿನಿಯನ್ ಸ್ಟೇಟಸ್ ಎಂಬ ಆ ಸಾಮ್ರಾಜ್ಯಾಂತರ್ಗತ ಸ್ವರಾಜ್ಯದ ಕಡೆಗೆ ಕೂಡ ಒಯ್ಯುವುದಿಲ್ಲ. ಬದಲಾಗಿ ದೇಶವನ್ನು ತೀರ ವಿರುದ್ಧವಾದ ಮತ್ತೊಂದು ದೆಸೆಗೊಯ್ದು, ಪ್ರಚಲಿತ ಸ್ಥಿತಿಗಿಂತ ಕಠಿನವಾದ ಸ್ಥಿತಿಯಲ್ಲಿರಿಸುತ್ತವೆನ್ನಬೇಕು. ಶ್ವೇತಪತ್ರದಲ್ಲಿನ "ಸುಧಾರಣೆ"ಗಳನ್ನು ನಾಲ್ಕು ವಿಭಾಗಗಳಾಗಿ ವಿಭಜಿಸಬಹುದು.

ಮೊದಲನೆಯದು ಸಮ್ಮಿಳಿತ ಶಾಸನ ಸಭೆ. ಇದರಲ್ಲಿ, ಸಂಸ್ಥಾನಗಳಿಂದ ಪ್ರತಿನಿಧಿಗಳು 'ನೇಮಕ' ಮಾಡಲ್ಪಡುವರು; ಪ್ರಜೆಗಳಿಂದ ಚುನಾವಣೆ ಇಲ್ಲ. ಇದು ಮೊಂಟೆಗ್ಯೂ ಸುಧಾರಣೆಗಳಲ್ಲಿ ನಮೂದಿಸಿದುದಕ್ಕಿಂತ ನೇಕಡಾ ೬೦ರಷ್ಟು ಹೆಚ್ಚು. ಕೇವಲ ಸಂಖ್ಯಾಬಲವನ್ನು ಮಾತ್ರ ನಾವು ಕಾಣುವೆವು. ಈ ನೇಮಿತ ಪ್ರತಿನಿಧಿಗಳ ದೆಸೆಯಿಂದ ಬ್ರಿಟಿಷ್ ಸರಕಾರದ ಕೈಯು ಮತ್ತಷ್ಟು ಸಶಕ್ತವಾಗುವುದು. ಹಾಗೆಯೇ, ಬಂಗಾಳ, ಬಿಹಾರ ಮತ್ತು ಒರಿಸ್ಸಾ ಮತ್ತು ಸಂಯುಕ್ತ ಪ್ರಾಂತ್ಯದ ಶಾಸನ ಸಭೆಗಳಿಗೆ ದ್ವಿತೀಯ ನ್ಯಾಯಮಂಡಲವೊಂದನ್ನು ರಚಿಸುವರಂತೆ. ಇದು ನ್ಯಾಯವೆಂದು ರಾಷ್ಟ್ರೀಯರಿಗೆ ಖಂಡಿತ ತೋರುವುದಿಲ್ಲ.

ಎರಡನೆಯದಾಗಿ ಅಧಿಕಾರಿಗಳ ವರ್ಗ. ಶ್ವೇತಪತ್ರವು, ಗವರ್ನರ ಜನರಲರಿಗೆ, ವಿಶೇಷಾಧಿಕಾರಗಳನ್ನು ಕೊಡುವುದು. ಮಂತ್ರಿಗಳು ಅನುಮೋದಿಸಿದುದನ್ನು ಗವರ್ನರ ಜನರಲರು ತಮಗೆ ಹಿತಕಾಣದಿದ್ದರೆ ರದ್ದುಗೊಳಿಸಬಹುದಾಗಿದೆ. ಪ್ರಾಂತಿಕ 'ಸ್ವಾತಂತ್ರ್ಯ'ವೆಂಬುದೂ ಹೀಗೆಯೇ. ಈ 'ಸ್ವಾತಂತ್ರ್ಯ'ವೆಂಬುದು ಜೆಚ್ಚಾಗಿ ಆಯಾಯ ಪ್ರಾಂತ್ಯದ ಗವರ್ನರರಿಗೇ ಇರುವುದು.

ಗವರ್ನರ ಜನರಲರಿಗೆ ಕಾದಿಟ್ಟ ಅಧಿಕಾರಗಳು ಇವು:-(೧) ಹಿಂದೂದೇಶದ ಶಾಂತಿಗೆ ಭಂಗವುಂಟಾಗದಂತೆ ತಡೆಯುವುದು. (೨) ಆರ್ಥಿಕ ಜವಾಬ್ದಾರಿ ಮತ್ತು ಫೆಡರೇಶನಿನ ಮೌಲ್ಯವನ್ನು ಕಾಪಾಡುವುದು. (೩) ಮೈನಾರಿಟಿಗಳ ನ್ಯಾಯವಾದ ಹಕ್ಕುಬಾಧ್ಯತೆಗಳ ಪಾಲನೆ. (೪) ಸಾರ್ವಜನಿಕ ನೌಕರರ ಹಕ್ಕುಬಾಧ್ಯತೆಗಳ ಸಂಪಾದನೆ ಮತ್ತು ಪಾಲನೆ. (೫) ವಾಣಿಜ್ಯ ವಿಚಾರವಾಗಿ ಭೇದಾಭೇದಗಳು ತಲೆದೋರದಂತೆ ತಡೆಯುವುದು. (೬) ಹಿಂದೀ ಸಂಸ್ಥಾನಗಳ ಹಕ್ಕುಬಾಧ್ಯತೆಗಳ ಪಾಲನೆ. (೭) ಗವರ್ನರು ಜನರಲರ ಕೈಕೆಳಗಿನ ಯಾವುದಾದರೂ ಇಲಾಖೆಗಳಲ್ಲೇಳಬಹುದಾದ ಸಮಸ್ಯೆಯ ವಿಚಾರ. ಇಂತಹ ಅಧಿಕಾರಗಳೇ ಗವರ್ನರುಗಳಿಗೂ ಕೊಡಲಾಗಿವೆ. ಹೀಗೆ ಶ್ವೇತಪತ್ರವು ಮುಖ್ಯವಾದ ಯಾವ ಅಧಿಕಾರಗಳನ್ನೂ ಹಿಂದೀಯರಿಗೆ ಕೊಡುವುದಿಲ್ಲ. ಕೆಲ ಪ್ರಸಂಗಗಳಲ್ಲಿ ಇದ್ದ ಹಕ್ಕುಬಾಧ್ಯತೆಗಳಿಗೂ ಸೊನ್ನೆ ಸುತ್ತುವುದು.

ಆರ್ಥಿಕ ವಿಚಾರವೇನು? ಸರಕಾರದ ಜುಮ್ಲಾ ಆದಾಯದಲ್ಲಿ ನೇಕಡಾ ೮೦ರಷ್ಟನ್ನು ಸೈನ್ಯವೇ ನುಂಗುವುದು! ಇದಾವುದೂ ಎಸೆಂಬ್ಲಿಯ ಅಧಿಕಾರದಲ್ಲಿಲ್ಲ. ಉಳಿದ ನೇಕಡಾ ೨೦ರಷ್ಟು ಹಣದಿಂದ ಮಂತ್ರಿಗಳು, ಎರಡೂ ಶಾಸನಸಭೆಗಳ ಬಹುಮತದಿಂದ ಕಾರ್ಯನಿರ್ವಹಣವನ್ನು ನಡೆಸಬೇಕಾಗುವುದು. ಇದರಲ್ಲಿ, ಉದ್ದಿಷ್ಟ ಕಾರ್ಯಕ್ಕೆಂದು ಮಂತ್ರಿಗಳು ಕೇಳುವ ಹಣದ ಮೊತ್ತವು ಆ ಕಾರ್ಯಕ್ಕೆ ಸಾಕಾಗದಷ್ಟು ಇದ್ದರೆ ಗವರ್ನರ ಜನರಲರು ಅಧಿಕ ಮೊತ್ತವೊಂದನ್ನು ಮಂಜೂರು ಮಾಡಬಹುದು. ಹೀಗೆ ಹಣದ ಚೀಲದ ಮೇಲೆಯೂ ಮಂತ್ರಿಗಳಿಗೆ ಅಧಿಕಾರವಿಲ್ಲ.

ಇನ್ನು ಕೇಂದ್ರ ಶಾಸನಸಭೆ ಮತ್ತು ಪ್ರಾಂತಿಕ ಕೌನ್ಸಿಲುಗಳ ವೆಚ್ಚವಾದರೂ ಒಟ್ಟು ೧೦ ಕೋಟಿಗಳಷ್ಟಾಗಬಹುದೆಂದೆಣಿಸಲಾಗಿದೆ. ದಾರಿದ್ರ್ಯ ಲಕ್ಷ್ಮಿಯ ನಿವಾಸವಾದ ಹಿಂದೂದೇಶಕ್ಕೆ ಇಷ್ಟು ಶ್ರೀಮಂತಿಕೆಯ ಆಡಳಿತ ಬೇಕೆ?

ಬರಲಿದೆ—ಬರುವುದು—ಎಂದಿದ್ದ ಆ ಸಮ್ಮಿಳಿತ ಶಾಸನಸಭೆಯ ಇನ್ನೊಂದು ರೂಪವೇನು? ಹಿಂದೂದೇಶದೊಳಗಿನ ಸಂಸ್ಥಾನಗಳಿಂದ ⅓ ಅಂಶ ನೇಮಿತ ಪ್ರತಿನಿಧಿಗಳು ಬರುವರು. ಇವರಿಗೆ, ಬ್ರಿಟಿಷ್ ಇಂಡಿಯದೊಳಗಿನ ಚುನಾಯಿತ ಪ್ರತಿನಿಧಿಗಳಷ್ಟೆ ಹಕ್ಕುಬಾಧ್ಯತೆಗಳಿವೆ. ಆದರೆ, ಬ್ರಿಟಿಷ್ ಇಂಡಿಯದ ಪ್ರತಿನಿಧಿಗಳಿಗೆ ಸಂಸ್ಥಾನಗಳ ಮೇಲೆ ತಿಲಮಾತ್ರ ಅಧಿಕಾರವಿರುವುದಿಲ್ಲ. ಪರಂತು, ಸಂಸ್ಥಾನಾಧಿಪತಿಗಳು ಬ್ರಿಟಿಷರ ಕೈಯಲ್ಲಿ ಕೂಸುಗೊಂಬೆಗಳಾಗಬೇಕಾಗುವುದು.

ಸರಕಾರದ ದ್ವಂದ್ವ ಧೋರಣೆಯ ಮಾತು ಅಲ್ಲಿಗೆ ಸಾಕು. ಇನ್ನು ನಮ್ಮ ಸ್ವಂತ ಧೋರಣೆ ಹಾಗೂ ಆಯೋಜನೆಗಳ ಕುರಿತು ಮಾತನಾಡುವ. (ಹೀಗೆಸ್ಮುತ್ತ ಶಾಸನಭಂಗ ಚಳವಳವು ನಿಲ್ಲಿಸಲ್ಪಡಲು ಕಾರಣವಾದ ವಿದ್ಯಮಾನಗಳನ್ನು ವಿವರಿಸಿ, ಕಮ್ಯೂನಲ್ ಎವಾರ್ಡಿನ ಕುರಿತಾದ ಕೊಂಗ್ರೆಸ್ ಕಾರ್ಯಕಾರಿ ಕಮಿಟಿಯ ತೀರ್ಮಾನವನ್ನು ಸಮರ್ಥಿಸಿ, ವಿರೋಧಿಸಿ ಮಹಾತ್ಮಾಜಿಯವರ ವಿಷಯವನ್ನೆತ್ತಿದರು.) ಮಹಾತ್ಮಾಜಿಯವರು ನಿವೃತ್ತರಾಗುವ ವಿಷಯ ನನ್ನದೂ ಅನುಕೂಲಮತವಿದೆ. ಪ್ರಸ್ತುತದ ಪರಿಸ್ಥಿತಿಯಲ್ಲಿ ಅವರು ಕೊಂಗ್ರೆಸ್ಸಿನಲ್ಲಿ ಅನುಕೂಲ್ಯಕ್ಕೆ ಬದಲಾಗಿ ಪ್ರತಿಕೂಲವಾಗಿಯೇ ತೋರದಿರರು.

ಇನ್ನು ಕೊಂಗ್ರೆಸ್ಸಿನಲ್ಲಾಗಬೇಕಾದ ತಿದ್ದುಪಡಿಗಳ ವಿಚಾರ. 'ನ್ಯಾಯವಾದ ಮತ್ತು ಶಾಂತಿಯುತವಾದ' ಎಂಬುದರ ಬದಲಿಗೆ 'ಸತ್ಯಯುಕ್ತ ಹಾಗೂ ಅಹಿಂಸಾಬದ್ಧ' ಎಂಬ ಶಬ್ದಗಳನ್ನಿರಿಸುವುದನ್ನು ನಾನೂ ಅನುಮೋದಿಸುವೆನು. ಕೊಂಗ್ರೆಸ್ಸಿನ ಚರಿತ್ರವು ಅದರಿಂದ ವಿರಹಿತವಾಗಿಲ್ಲ. ನಾವು ಅನುಸರಿಸಬೇಕಾದುದನ್ನೆ ನಿಯಮವನ್ನಾಗಿ ಸ್ವೀಕರಿಸುವುದರಲ್ಲಿ ಯಾರದೂ ಆಕ್ಷೇಪವಿರದಷ್ಟೆ. ಅವರ ನಿವೃತ್ತಿಯು ಕೊಂಗ್ರೆಸ್ಸನ್ನು ಅಬಲಪಡಿಸುವುದಕ್ಕಾಗಿ ಇಲ್ಲ; ಬಲಪಡಿಸುವುದಕ್ಕಾಗಿಯೇ ಆಗಿದೆ. ಅದರಿಂದ ಅಂತಹ ಶಂಕೆಯನ್ನು ನಾವು ತೊರೆಯಬೇಕು. ಡೆಲಿಗೇಟರುಗಳ ಸಂಖ್ಯೆಯನ್ನು ಆರು ಸಾವಿರದಿಂದ ಒಂದು ಸಾವಿರಕ್ಕೆ ಇಳಿಸುವಂತೆ ಮಹಾತ್ಮಾಜಿಯವರ ಸೂಚನೆಯಿದೆ. ಇದನ್ನು ನೀವು ಚೆನ್ನಾಗಿ ಪರ್ಯಾಲೋಚಿಸಿರಿ. ನಾವು ನಮ್ಮ ಕಾರ್ಯವನ್ನು ಇಂದಿನಿಂದ ಪುನಃ ಹೊಸದಾಗಿಯೇ ಆರಂಭಿಸೋಣ. ಅಧಿಕಾರಗಳಾವುದನ್ನೂ ತ್ಯಜಿಸಬಾರದೆಂಬ ಆಳುವವರ ನಿರ್ಧಾರವು ಇಂದು ಮತ್ತಷ್ಟು ಬಲಗೊಳ್ಳುತ್ತಿದೆ. ಬಂಗಾಳದಲ್ಲಿ ಭಯೋತ್ಪಾದಕರ ಕೃತ್ಯಗಳು; ಇವು ಶೋಚನೀಯವಹುದು. ಆದರೆ ಸರಕಾರವು ಕೈಕೊಂಡ ಕಾರ್ಯಕ್ರಮ ಮಾತ್ರ ಸರಿಯಾದುದೆಂದು ತೋರುವುದಿಲ್ಲ. ಅತ್ತ ಗಡಿನಾಡಿನಲ್ಲಿ ಗಫರ್‌ಖಾನರ ಅನುಯಾಯಿಗಳ ಚಳವಳದ ನಿರ್ಮೂಲನಕ್ಕಾಗಿ ಕಠಿನ ಕಾಯಿದೆ; ಗಫರ್‌ಖಾನರಿಗೆ ಅಲ್ಲಿಗೆ ತೆರಳದಂತೆ ಪ್ರತಿಬಂಧ!

ಮಹಾತ್ಮಾಜಿಯವರು ಸ್ವದೇಶೀ ವಿಷಯವಾಗಿ ಕೊಟ್ಟ ಸೂಚನೆಯನ್ನು ನಾವು ಸುಲಭದಲ್ಲಿ ಕಾರ್ಯಕ್ರಮಕ್ಕೆ ಹಚ್ಚಬಹುದು.

(೧೧ನೇ ಪುಟಕ್ಕೆ ಮುಂದುವರಿದುದು.)

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಜ್ಞಾನ.

(ಪ್ರಬಂಧಮಾಲೆ)

ಲೇಖಕರು:—ಶ್ರೀ ಶಿವರಾಮ ಕಾರಂತ

ಅಧ್ಯಾಯ ೧೮

ವಿಕಲೆ

ಯಾವುದು ಹಿಂದೆ ಹೇಳಿದ ರೀತಿಯ ಕಲೆಯು ಅಲ್ಲವೋ—ಅದು ವಿಕಲೆ. ವಿಕಲೆಯಲ್ಲೂ ಕಲೆ ಉಂಟೆಂದು ಹಲವರು ಯೋಚಿಸುತ್ತಾರೆ. ಯೋಚಿಸಲಿ, ನಾವು ಅದರ ವಿಚಾರವನ್ನಷ್ಟೇ ತೆಗೆದುಕೊಳ್ಳುವ. ಈ ವಿಕಲೆಯ ಸ್ವಾರಸ್ಯವೆಂದರೆ—ಚಿತ್ರಕಲೆಯಲ್ಲಾಗಲಿ, ಶಿಲ್ಪದಲ್ಲಾಗಲಿ ಈ ಎಲ್ಲಾ ವಿಕಲಾವಿದರು ಒಂದೇ ಹಾದಿ ಹಿಡಿಯುವುದಿಲ್ಲ. ಅವರ ಭಿನ್ನಭಿನ್ನ ಚಿತ್ರಲೇಖನ ಪದ್ಧತಿಗಳಿಗೆ ಇಸುಮುಗಳನ್ನು (?) ತ್ತಾರೆ. ಫ್ಯೂಚರಿಸುಮು, ಕ್ಯೂಬಿಸುಮು—ಇಂಪ್ರೆಶನಿಸುಮು—ಹೀಗೆ ಹಲವು ಸುಮುಗಳಿವೆ. ಇವುಗಳ ಸ್ವಾರಸ್ಯವು ಒಂದೊಂದು ರೀತಿಯಲ್ಲಿ. ಒಂದು ಇಸುಮಿನವರು ಚಿತ್ರ ಬರೆಯಲು ಜಲವರ್ಣ ಉಪಯೋಗಿಸಿದರೆ, ಇನ್ನೊಂದು ಪದ್ಧತಿಯವರು—ಎಸೆಲ್ಯಾನ ಬಣ್ಣ ಉಪಯೋಗಿಸುತ್ತಾರೆ. ಒಬ್ಬರು ಮೋಟರಿನ 'ಡ್ಯುಕೋ' ಪೈಂಟು ಉಪಯೋಗಿಸಿದರೆ, ಇನ್ನೊಬ್ಬರು ರಕ್ತ, ಕೆಸರು ಮೊದಲಾದ ನೈಸರ್ಗಿಕ ವಸ್ತುಗಳಿಂದಲೇ ಚಿತ್ರ ಬರೆಯುತ್ತಾರೆ. ಒಬ್ಬರು ಗೋಡೆಯ ಮೇಲೆ ಚಿತ್ರ ಬರೆದರೆ ಇನ್ನೊಬ್ಬರು ಹಲಗೆಯ ಮೇಲೆ ಬರೆಯುತ್ತಾರೆ. ಒಬ್ಬ ವಿಕಲ ಶಿಲ್ಪಿಯು ಕಲ್ಲಿನಲ್ಲಿ ಕೆತ್ತಿದರೆ ಇನ್ನೊಬ್ಬನು ಮೇಣವನ್ನು ತಬ್ಬುತ್ತಾನೆ. ಮೂರನೆಯವನು ಚಿಮಣಿ ಡಬ್ಬಿಯ ಚೂರುಗಳನ್ನು ಒಟ್ಟುಮಾಡುತ್ತಾನೆ. ನಾಲ್ಕನೆಯವನು ಬಾರ್ಬರನ ಅಂಗಡಿಯಿಂದ ಬಿದ್ದ ಕ್ಷೌರದ ಕೇಶಗಳನ್ನು ತಂದು ವಿಗ್ರಹರಚನೆ ಮಾಡುತ್ತಾನೆ. ವಿಕಲಾವಿದನು ಸ್ವತಂತ್ರನೆಂದು ತೋರಿಸುವುದು ಇವರ ಪ್ರಥಮ ಗುರಿ. ಸ್ವಾತಂತ್ರ್ಯವಿಲ್ಲದೆ ಕಲೆಯಿಲ್ಲವಷ್ಟೆ.

ತಾವು ಉಪಯೋಗಿಸುವ ವಸ್ತುಗಳಲ್ಲಿ ಇಷ್ಟು ಸ್ವಾತಂತ್ರ್ಯ ವಹಿಸಿದರೆ, ಬರೆಯುವ ರೀತಿಯಲ್ಲೂ ಕಡಿಮೆ ಸ್ವಾತಂತ್ರ್ಯವಿಲ್ಲ. ನೋಡುವ ದೃಷ್ಟಿಯಲ್ಲೂ ಹಾಗೇನೆ. ಒಬ್ಬನು—ಸತ್ಯವು ಸರಳಮಾರ್ಗ—ಆದ ದರಿಂದ ಚಿತ್ರವನ್ನು ನೇರಾದ ಗೆರೆಗಳಿಂದಲೇ ಬರೆಯುತ್ತಾನೆ. ಕೋಳಿಮೊಟ್ಟೆಯನ್ನು ಸಹ ನೇರವಾಗಿ ಬರೆಯುತ್ತಾನೆ. ಇನ್ನೊಬ್ಬನು ವಕ್ರರೇಖೆಯ ಲಾಲಿತ್ಯವು ಸರಳರೇಖೆಗಿಲ್ಲವೆಂದು ಪಕ್ಷಿಯನ್ನೂ ವಕ್ರರೇಖೆಯಲ್ಲಿ ಬರೆಯುತ್ತಾನೆ. ನೇರವಾಗಿ ಬೀಳುವ ಸೂರ್ಯರಶ್ಮಿಯು ಸಹ ಅವನ ಕೈಯಲ್ಲಿ ಕೇರೆ ಹಾವಿನಂತೆ ಹೊಸವುವು. ಕಲಾ ಜಾತಿಗಳು ಬಣ್ಣ ಬರೆಯಲು ಪಡುವಷ್ಟು ಕ್ರಮವನ್ನು ವಿಕಲಾವಂತರು ವಹಿಸುತ್ತಿಲ್ಲ. ಗಿಡದ ಹಸುರನ್ನು ವಿಧಿಸುವುದಾದರೆ—ಹಸುರು ಬಣ್ಣವನ್ನು ಬರೆಯುವ ಬದಲು, ಅದನ್ನು ಕೊಡುವ ಹಳದಿ, ನೀಲಗಳನ್ನು ಒಂದು ಪಂಗಡದವರು ಬರೆಯುತ್ತಾರೆ. ಇನ್ನೊಂದು ಪಂಗಡದವರು ಬರೇ ನೀಲವನ್ನು ಬರೆಯುವರು. ಮತ್ತೊಂದು ಪಂಗಡದವರು—'ಈಗ ಅದು ಹಸುರಿದ್ದರೂ, ಮುಂದೆ ಹಳದಿಯಾಗುವುದು. ಅದೇ ಸತ್ಯವೆಂದು' ಎಲೆಗಳನ್ನು ಹಳದಿಯಾಗಿ ಬರೆಯುವರು. ನಾಲ್ಕನೆಯ ಜಾತಿಯವರು—ಹಸುರು ಬಣ್ಣ ಕಂಡ ತುಸು ಹೊತ್ತಿನ ನಂತರ ಬಿಳಿ ಗೋಡೆ ಕಂಡರೆ ಅದು ಕೆಂಪಾಗಿ ಕಾಣಿಸುವುದರಿಂದ ನಿಜವಾದ ಹಸುರು ಮನಸ್ಸಿನಲ್ಲಿ ಕೆಂಪಾಗುವುದೆಂದು ಕೆಂಪಿನಲ್ಲಿ ಚಿತ್ರವನ್ನು ಬರೆಯುವರು. ಹಿಂದೆ ಹೇಳಿದ ಪಬ್ಲಿಕ್ ಪಾರ್ಕಿನ ಗುಲಾಬಿ ಗಿಡವನ್ನು ಬರೆಯುವುದಾಗಿದ್ದಲ್ಲಿ ಅದರ E, F, G ಹೂಗಳನ್ನು ಚಿತ್ರಕಾರನು ಹಸುರಾಗಿಯೂ, ಅದರ K, L, M, N... ...X, Y, Z—ಎಲೆಗಳನ್ನು ಕೆಂಪಾಗಿಯೂ ಬರೆಯುತ್ತಾನೆ.

ಇದು ಬರೆಯುವ ರೀತಿಯ ವಿಚಾರ. ಇನ್ನು ಕಲಾವಿದನ ದೃಷ್ಟಿಯೊಂದಿದೆಯಲ್ಲ. ನಾವು ನೋಡಿದಂತೆ ಅವನು ನೋಡುವುದಿಲ್ಲವೆಂದೂ ಮತ್ತೂ ಆಳವಾಗಿ ಕಾಣುವನೆಂದೂ ಜ್ಞಾನಿಗಳು ಅನ್ನುತ್ತಾರೆ. ಉದಾ—Bಯು ಮರದ ಕೆಳಗೆ Cಯನ್ನು ಕಂಡ ಬಗೆ. ನಮ್ಮ ನೋಟಕ್ಕೆ Cಯ ಚೆಲುವಿಗೆ ಆಕೆಯ ಒಡ್ಡಿ ಬಟ್ಟೆ ಅಡ್ಡಬರುತ್ತಿತ್ತು. ಆದರೆ Bಯು ಅದಕ್ಕೂ ಆಳವಾಗಿ ಅವಳನ್ನು ಕಾಣುವನು. ಇನ್ನೂ ಹೆಚ್ಚಿನ ಕಲಾವಿದನಾದರೆ—ಅವನು ಚರ್ಮಕ್ಕೆ ಆಳವಾಗಿರುವ—ಎಲುಬು, ಮಾಂಸಗಳನ್ನೆಲ್ಲಾ ಕಾಣಬಹುದು. ಹೀಗೆ ಕಲಾವಿದನ ದೃಷ್ಟಿಯಿದ್ದಂತೆ, ವಿಕಲಾವಂತನಿಗೂ ದೃಷ್ಟಿಯಿದೆ. ಅವರ ಈ ದೃಷ್ಟಿಯಿಂದಾಗಿ, ಅವರಿಗೆ ಕಂಡದ್ದು ನಮಗೆ ಕಾಣುವುದಿಲ್ಲವಾದುದರಿಂದ ನಮ್ಮಲ್ಲಿ ಮತಭೇದವಾಗುವುದು ಎನ್ನುತ್ತಾರೆ. ನಾವೂ Bಯೂ ಇಬ್ಬರೂ ವೈಷ್ಣವ ಬ್ರಾಹ್ಮಣರೇನೆ (ಹಿಂದುಗಳು) ಆದರೂ ಹೀಗೆ ಮತಭೇದವಾಗಬಹುದಂತೆ.

ಈಗ ವಿಕಲಾವಿದರ ತತ್ವವನ್ನು ನೋಡುವ. ಸತ್ಯವೇ ಸೌಂದರ್ಯ—ಸೌಂದರ್ಯವೇ ಸತ್ಯ—ಎಂಬುದು ಅವರಲ್ಲಿ ಒಂದು ಪಂಗಡದವರ ಅಭಿಪ್ರಾಯ. ಚೆಲುವಾದುದೆಲ್ಲಾ ತಾಜಮಾಲು, ತಾಜಮಾಲಿಲ್ಲಿ ಚೆಲುವಾದುದು—ಎಂದು ಕೆಲವರ ಅಭಿಪ್ರಾಯ. Cಯ ಮುಖಾರವಿಂದವು ಚೆಲುವಾದುದಾದರೆ ಅದು ಸತ್ಯ. ಆಕೆಯು ಮುದುಕಿಯಾಗಿ ಮುಖವು C—ಆಗಿ ನಿರಿಗಟ್ಟಿದ್ದರೆ ಅದರಲ್ಲಿ ಚೆಲುವಿಲ್ಲದೆ ಅದು ಅಸತ್ಯವಾಗುವುದು. ಅಥವಾ Cಯು ತನ್ನ ಸೌಂದರ್ಯವನ್ನು ಸೀರೆಯಿಂದ ಮುಚ್ಚಿಕೊಂಡಾಗ ಕಾಣಿಸಿದ್ದು ಅಸತ್ಯ (ಕೃತಿಮತೆ) ಅದು ಮಳೆಯಿಂದ ಈ ಪರೆಯು ಅದೃಶ್ಯವಾಗಲು ಸತ್ಯವಾಯಿತು. Bಯ 7ನೇ ಚಿತ್ರವು ಸುಂದರವಾಗಲು ಇದೂ ಒಂದು ಕಾರಣ.

ಇನ್ನು ಕೆಲವರ ಅಭಿಪ್ರಾಯದಂತೆ—ಈ ಸೃಷ್ಟಿಯ ಎಲ್ಲಾ ವಸ್ತುಗಳು ಚೆನ್ನಾಗಿವೆ. ಅವನ್ನು ನೋಡುವವನ ಕಣ್ಣಿನ ಮೇಲೆ ಅವನಿಗೆ ಚೆಲುವಾದುದು ಕಾಣಿಸುತ್ತವೆ. ಯಾರು ಎಲ್ಲವುದರಲ್ಲೂ ಚೆಲುವನ್ನು ಕಾಣುತ್ತಾನೋ ಅವನು ಪರಮ (ವಿ) ಕಲಾವಿದನು. ಈ ತತ್ವದಿಂದ ಯಾರೂ Cಯನ್ನು ಸಹ ಕುರೂಪಿಯೆಂದು ತಿಳಿದು ಚಿತ್ರಿಸಬೇಕಾಗಿಲ್ಲ. ಆದರೆ Bಯಂತಹ ಚಿತ್ರಕಾರನು Cಯನ್ನು ಸಹ ಸುಂದರಿಯೆಂದು ತಿಳಿದು ಚಿತ್ರ ಬಿಡಿಸಿದ ಬಳಿಕ ಆಕೆಯು ಸುಂದರಿಯೆಂಬ ಸತ್ಯದ ಕಲ್ಪನೆಯು, ಜಗತ್ತಿಗೆ ಉಂಟಾಗುವುದು.

ಇನ್ನೊಂದು ಪಂಗಡದವರು—ಸೌಂದರ್ಯವು ಪ್ರತಿ ವಸ್ತುವಿನಲ್ಲೇ ಇದೆ. ಕೆಲವು ವಸ್ತುಗಳು ಸ್ವಾಭಾವಿಕ ಕುರೂಪವಾದುವು. ಕೆಲವು ಸ್ವಾಭಾವಿಕ ಸುರೂಪವಾದುವು ಎಂದು ತಿಳಿಯುವರು. Bಯು Cಯನ್ನು ಪ್ರಣಯಸಿರಾಕರಣೆಗೆ ಮೊದಲೂ, ಆ ಬಳಿಕವೂ ತಿಳಿದ ರೀತಿಯದು. Bಯ ಸಿಟ್ಟೇ ಅವಳ ಸೌಂದರ್ಯವನ್ನು ಸೊಟ್ಟುಮಾಡಿತು.

ಹೀಗೆ ಎಲ್ಲೆಲ್ಲಿ ಸೌಂದರ್ಯ ಬಿದ್ದಿದೆಯೋ, ಅದನ್ನು ಒಟ್ಟುಮಾಡಿ, ಆ ಸುಂದರ ವಸ್ತುಗಳಿಂದ ಅದನ್ನು ಗಾಳಿಸಿ ತೆಗೆದು, ಸಾಧ್ಯವಾದರೆ ಸೌಂದರ್ಯವನ್ನು ಬಿಚ್ಚಿ ಇಳಿಸಿ ಕೊಡುತ್ತಾನೆ. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡುವ.

ಈಗ ರವಿವರ್ಮನೆಂಬ ಚಿತ್ರಕಾರನಿದ್ದಾನೆ. ಅವನು ಪ್ರಪಂಚದ ಹಲವು ನಾರಿಯರನ್ನು ಕಂಡು ಅವರಲ್ಲಿ ಕೆಲವರು ಸುಂದರಿಯರು—ಎಂದು ನಿರ್ಣಯಿಸಿದ್ದಾನೆ. ಅವನು ವಿಷ್ಣುವಿನ ಚಿತ್ರವನ್ನು ಬರೆದನು—ವಿಷ್ಣುವಿನ ಒಳಿ ರುಕ್ಮಿಣಿಯನ್ನು ಬರೆಯಬೇಕಲ್ಲ. ವಿಷ್ಣುವಿನ ಚೆಲುವಿಗೆ ತಕ್ಕ ರಮಣಿಯರು ಅವನಿಗೆ ಸಿಗಲಿಲ್ಲವೆಂದು ವಿಷ್ಣುವಿನ ತಂಗಿಯನ್ನೇ ತಂದು ಅವನ ಮಡದಿಯಾಗಿ ಮಾಡಿದನು. ಗರುಡವಾಹನ ಕೃಷ್ಣನಿಗೆ ಅವನ ಎರಡು ಜನ ತಂಗಿಯರನ್ನು (ಸತ್ಯಭಾಮೆ ರುಕ್ಮಿಣಿಯರಾಗಿ) ಕೊಟ್ಟನು. ಇದೊಂದು ಸತ್ಯದ ಹಾದಿ.

ಈಗ—ಡಾ। ಅವನೀಂದ್ರ, ನಂದೂಲಾರರಂಥ ಇತರ ಚಿತ್ರಕಾರರಿರುತ್ತಾರೆ. ಅವರು ಭಾರತೀಯ ಚಿತ್ರಲೇಖನದ ಹಾದಿ ಹಿಡಿಯುತ್ತಾರೆ. ಇವರು ತಮ್ಮ ಚಿತ್ರವ್ಯಕ್ತಿಗಳನ್ನು ಕ್ಷಯರೋಗದ ಆಸ್ಪತ್ರೆಯಿಂದಲೇ ತರುತ್ತಾರಂತೆ. ಕಾರಣ, ಅವರ ಉದ್ದೇಶವು ಮಾನವನ ದೈವತ್ವವನ್ನು ಚಿತ್ರಿಸುವುದು. ಮನುಷ್ಯತ್ವಕ್ಕೆಂದಣವಾದ ರಕ್ತಮಾಂಸಗಳು ಕಡಿಮೆಯಾದಂತೆ ದೈವತ್ವವು ಬೆಳೆಯುವುದೆಂದು ಅವರು ಹೀಗೆ ಮಾಡುವರು. ಅವರು ಒಬ್ಬ ಸುಂದರ ನಾರಿಯ ಚಿತ್ರ ಬರೆಯುವರೆಂದು ತಿಳಿಯಿರಿ. ತಿರಿಗಿ ನಾವು ಹಿಂದೆ ಹೇಳಿದ ಪಬ್ಲಿಕ್ ಪಾರ್ಕಿಗೆ ಹೋಗುವ. Cಯು ಅಲ್ಲಿಗೆ ಬಂದಿದ್ದಾಳೆ. Bಯು ಅಲ್ಲಿ ಬರಲು P—ಎಂಬ ಭಾರತೀಯ ಕಲಾವಿದನಿದ್ದಾನೆ. ಅವನು ಗುಲಾಬಿ ಗಿಡಕ್ಕೆ ಸಿಕ್ಕಿದ Cಯನ್ನು ವಿಚಿತ್ರವಾಗಿ ಬಿಡಿಸುವನು. ಅವಳು ತನ್ನ ಸೆರಗನ್ನು ಗುಲಾಬಿ ಗಿಡದ ಮುಳ್ಳಿಂದ ತಪ್ಪಿಸಲು ಯತ್ನಿಸುವ ಕೈಯ ರೀತಿ ಲಾವಣ್ಯವನ್ನು ಕಂಡು ಮರುಳಾಗುವನು. ಆ ಬೆರಳುಗಳ ಚೆಲುವನ್ನು ತೋರಿಸಲು—ಒಂದು ಇಂಚಿನ ತೋಳಿಗೆ ಎಂಟು ಇಂಚಿನ ಕೈಬೆರಳುಗಳನ್ನು ತಗಲಿಸಬಹುದು. ಇದು ಸೌಂದರ್ಯದ ಬಟ್ಟಿ ಇಟ್ಟಂತಲ್ಲವೇ! ಭೀತಿಯಿಂದ ಅವಳ ಕಣ್ಣು ತೆರೆದಿದ್ದರೂ ನಾಚಿಕೆಯು Cಯ ಸ್ವಭಾವವಾದುದರಿಂದಲೂ Cಯು ಸ್ತ್ರೀವರ್ಗದಲ್ಲೇ ಬೀಳುವುದರಿಂದಲೂ ಅವಳ ಕಣ್ಣನ್ನು ಕಿರಿದು ಮುಡಿಸುತ್ತಾನೆ. ಹಾಗೆ ಮಾಡಿದರೆ ಅವಳ ಕಣ್ಣಿಗೆ ಸಾಕಷ್ಟು ಬೆಳಕು ಸಿಗದೆಂದು ಅಂಜಿ, ಕಣ್ಣಿನ ಅಗಲದ ಬದಲು ಉದ್ದವನ್ನು ಹೆಚ್ಚಿಸಿ, ಕಣ್ಣಿನ ರೆಪ್ಪೆಯ ಸೀಳನ್ನು ಕಿವಿಗೆ ಮುಟ್ಟಿಸುತ್ತಾನೆ.

ಈಗ—Bಯ ಸ್ಥಾನದಲ್ಲಿ Y ಎಂಬ ಜಪಾನಿ ಚಿತ್ರಕಾರನಿದ್ದಾನೆಂದು ತಿಳಿಯುವ. ಅವನು Cಯು ಮುಳ್ಳಿಗೆ ಭೀತಿಪಡುವ ಚಿತ್ರದ ಬದಲು J ಎಂಬ ಗುಲಾಬಿ ಮುಳ್ಳೇ ನಾಚಿ ನೊಂದಂತೆ ಬಿಡಿಸಿದರೂ ಬಿಡಿಸಿದನೆ. ಇನ್ನು Cಯನ್ನೇ ಬಿಡಿಸುವುದಾದರೂ ಅವಳನ್ನು ಒಯ್ದು—ತನ್ನ ವಾಲ್‌ಪೇಪರಿನ (8"×4") ಪ್ರಮಾಣಕ್ಕೆ ಅವಳನ್ನು ಎಳೆದು, ಅವಳ ಎಲುಬು ಮಾಂಸಗಳನ್ನು ಕಿತ್ತು—ಹಪ್ಪಳದಂತೆ ಈ ಪರದೆಗೆ ಅಂಟಿಸುತ್ತಾನೆ. ಸ್ತ್ರೀಯು ಚಂಚಲಾಕ್ಷಿಯೆಂದು ಅಂಜಿ, ಅವಳ ಕಣ್ಣುಗಳಿರುವ ಸ್ಥಳದಲ್ಲಿ ಎರಡು ಗುರುತನ್ನು ಮಾತ್ರ ಹಾಕಿಬಿಡುತ್ತಾನೆ.

ಇದೇ ವಿಷಯವನ್ನು Yನ ಬದಲು H ಎಂಬ 'ಪಿಕಾಸೊ'ವಿನಂಥ ಒಬ್ಬ ಚಿತ್ರಕಾರನಾಗಲಿ, Dನೆಂಬ ಎಪ್ಸ್ಟೀನ್‌ನಂಥ ಶಿಲ್ಪಿಯಾಗಲಿ ಬರೆದರೆ ಅದರ ಪಾಡು ಬೇರೆ. Cಯ ಸೌಂದರ್ಯವೆಲ್ಲ ಆಕೆಯ ಅಧರ, ಇಲ್ಲವೆ ನಯನಗಳಲ್ಲಿದೆಯೆಂದು Hನು ತಿಳಿದು ಒಂದು ದೊಡ್ಡ ಸೊನ್ನೆಯನ್ನು ಬರೆದು ಮುಖವೆಂದು ನಾಮಕರಣ ಮಾಡಿ, ಅದಕ್ಕೂ ದೊಡ್ಡ ಎರಡು ಕಣ್ಣು, ಒಂದು ಬಾಯಿಯನ್ನು ಬಿಡಿಸಬಹುದು. Dನು—'ಆಕೆಯೆಂದರೆ ಸ್ತ್ರೀ. ಸ್ತ್ರೀ—ಎಂದರೆ ತಾಯಿ. ತಾಯಿಯೆಂದರೆ ಶಿಶುಸಂಗೋಪಕಳು'—ಎಂದು ತಿಳಿದು ಹಿಂದಿನ ಮರದ ಬುಡವನ್ನು ಸೇರಿ ಒಂದು ಕಲ್ಲನ್ನು ಕೆತ್ತಲು ಸಿದ್ಧನಾಗುವನು. ತನ್ನ ಶಿಲಾವಿಗ್ರಹದಲ್ಲಿ ಸ್ತ್ರೀಯ ಚೆಲುವು, ಸತ್ಯಗಳನ್ನು ತೋರುವ ಎದೆ, ನಡುಗಳನ್ನಷ್ಟೇ ಬರೆದು,—ಉಳಿದುದನ್ನೆಲ್ಲಾ ಕೆತ್ತಿ ಹಾರಿಸುವನು. ಮಳೆಯು ಬಂದು ತಲೆಗೂದಲು ಅಸ್ತವ್ಯಸ್ತವಾಗಿದ್ದರೆ, ಅವಳು ಚಳಿಯಿಂದ ನಡುಗಬಾರದೆಂದು, ತಲೆಗೂದಲನ್ನು ಕೆತ್ತಿ ಅದರಿಂದ ಅವಳ ಮೈಯನ್ನು ಮುಚ್ಚುವನು.

ಇನ್ನೂ ಹಲವು ವಿಕಲಾವಿದರು ಚಿತ್ರವನ್ನು ಇದಕ್ಕೂ ವಿಕಾರವಾಗಿ ಬರೆಯುವರು. ಯಾರು ಬರೆದ ಚಿತ್ರವು ಅತಿ ಕಡಿಮೆ ಜನರಿಗೆ ತಿಳಿಯುವುದೋ, ಅದೇ 'ಕಲೆ'ಯೆಂದು ಈ ಜನರು ತಿಳಿಯುವರು. ಹಾಗೆ ಎಲ್ಲರಿಗೂ ಅವನು ಬರೆದುದು ತಿಳಿಯಲು ಕಲಾಶಿಕ್ಷಣ, ಕಲಾವಿದನ ತಪಸ್ಸುಗಳು ಬೇಕಷ್ಟೆ.

ಈಗ ಉಪಸಂಹಾರದಿಂದಿಷ್ಟೇ ಹೇಳುವೆವು. ಯಾವುದು ನೀವು ಕಂಡಂತೆಯೇ ಇದ್ದು ಬರುವುದೋ ಅದು—'ಕಲೆ'. ಯಾವುದ ನಿಮ್ಮಿಂದ ಕಾಣಲಾರದ್ದೋ ಅದು—'ವಿಕಲೆ'. ಈ ಎರಡು ತತ್ವಗಳನ್ನೇ ಬೇರೆ ಬೇರೆ ಪ್ರಮಾಣದಲ್ಲಿ ಬೆರಸಿದಲ್ಲಿ ಬೇರೆ ಬೇರೆ ಕಲಾಪಂಥಗಳಾಗುವುವು.

ರಷ್ಯದಲ್ಲಿ ಚಹಾ ತೋಟಗಾರಿಕೆ.

ರಷ್ಯದಲ್ಲಿ ಚಹಾ ತೋಟಗಾರಿಕೆಯಲ್ಲಿ ಅದ್ಭುತವಾದ ಅಭಿವೃದ್ಧಿಯಾಗುತ್ತಿದೆ. ಚಹಾ ತೋಟಗಾರಿಕೆಯು ಇಲ್ಲಿ 1892ರಲ್ಲಿ ಆರಂಭಿಸಲ್ಪಟ್ಟಿತಾದರೂ 1926ರ ತನಕ 8000 ಎಕ್ರೆಗಳಷ್ಟು ಸ್ಥಳದಲ್ಲಿ ಮಾತ್ರ ಚಹಾ ಬೆಳೆಸುತ್ತಿದ್ದರು. ಅಂದಿನಿಂದ ಇದು ಹೆಚ್ಚಿಸಲ್ಪಡುತ್ತಲೇ ಇದ್ದು, ಈಗ 80000 ಎಕ್ರೆ ಸ್ಥಳವನ್ನು ಚಹಾ ತೋಟಗಳು ಆಕ್ರಮಿಸಿವೆ. ಇದನ್ನಿನ್ನು ಸದ್ಯದಲ್ಲೇ 250,000 ಎಕ್ರೆ ಸ್ಥಳಗಳಿಗೆ ವಿಸ್ತರಿಸುವ ಮಹದ್ಯೋಜನೆಯಾಗಲಿದೆ.

ಚಹಾವನ್ನು ಉತ್ಕೃಷ್ಟವಾಗಿಯೇ ಬೆಳೆಸಬೇಕೆಂದು ರಷ್ಯದವರ ಪ್ರಯತ್ನವಿದೆ. ಚೀನದಲ್ಲಿ ಬೆಳೆಯಿಸಲ್ಪಡುವಂತಹ ಉತ್ತಮ ಚಹವನ್ನೇ ಈಗ ಅಲ್ಲಿ ಬೆಳೆಸುತ್ತಿರುವರು. ಹಿಂದೂದೇಶದಲ್ಲಿ ಈ ವಿಭಾಗದಲ್ಲಿ ಅಷ್ಟು ಪ್ರಶಸ್ತ ಯತ್ನಗಳಾದುದಿಲ್ಲ. ಹಿಂದೂದೇಶದಲ್ಲಿ ಬೆಳೆಸಲ್ಪಡುತ್ತಿರುವ ಚಹದಲ್ಲಿ ಹೆಚ್ಚಿನದು ಕಪ್ಪು ಬಣ್ಣದ ಒಂದು ವಿಧದ ಅಮಲುಕರ—ಚಹವಾಗಿದೆ.

ರಷ್ಯದಲ್ಲಿ ಚಹಾ ಕುಡಿಯುವವರ ಸಂಖ್ಯೆಯೂ ಹೆಚ್ಚುತ್ತಿದೆ. ಅದು ಕಾರಣ, ಅವರಿಗೇ ಪೂರೈಸಲು ಅಲ್ಲಿ ಬೆಳೆವ ಚಹವು ಸಾಕಾಗುವುದು.

"ಮಹಿಳಾ ಮೆಜಿಸ್ಟ್ರೇಟರು ಕೋಮಲ ಹೃದಯಿಗಳಲ್ಲ"

ಲಕ್ನೋ ನಗರದಲ್ಲಿ ಮಹಿಳಾ ಹೊನರರಿ ಮೆಜಿಸ್ಟ್ರೇಟರುಗಳ ನೇಮಕವಾಗುವ ಆಲೋಚನೆಯಿದೆ. ಆದರೆ, ಸ್ವಾಭಾವಿಕ ದಯಾಳು ಸ್ವಭಾವಿಗಳಾದ ಇವರು, ಕನಿಕರದಿಂದ ಅಪರಾಧಿಗಳಿಗೆ ಕಠಿನ ಶಿಕ್ಷೆಗಳನ್ನು ವಿಧಿಸುವುದರಲ್ಲಿ ಹಿಮ್ಮೆಟ್ಟರೇ ಎಂಬೊಂದು ಪ್ರಶ್ನೆ. ಆ ವಿಚಾರವಾಗಿ, ಅಲ್ಲಿಯ ಮಿಸೆಸ್ ಅಹಮುದ್ ಶಹಾರವರು ಹೀಗೆ ನುಡಿಯುವರು:—"ಮಹಿಳಾ ಮೆಜಿಸ್ಟ್ರೇಟರು ನ್ಯಾಯದ ವಿಚಾರದಲ್ಲಿ ಪುರುಷರಿಗಿಂತ ಕೋಮಲ ಹೃದಯಿಗಳಲ್ಲ" ಎನ್ನುತ್ತ,—"ಪರದಾ ಸ್ತ್ರೀಯರು ಕೋರ್ಟಿನ ಮುಂದೆ ಹಾಜರಾಗಬೇಕಾದ ಸಂದರ್ಭಗಳಿಗಾಗಿ ಮಹಿಳಾ ಮೆಜಿಸ್ಟ್ರೇಟರುಗಳ ಕೋರ್ಟು ಅವಶ್ಯವಿದೆ. ಸ್ತ್ರೀಯರು ಮತ್ತು ಮಕ್ಕಳ ಹೃದಯವನ್ನು ಸ್ತ್ರೀಯರೇ ಚೆನ್ನಾಗಿ ಬಲ್ಲರು!" ಎಂದೂ ಅಭಿಪ್ರಾಯಪಡುತ್ತಾರೆ.

ವಿಮರ್ಶೆ.

ರಾಜಾನಂದ:—ಬೆಂಗಳೂರಿನ 'ನವೀನ ಗ್ರಂಥಮಾಲೆ'ಯ ಪ್ರಥಮ ಪುಷ್ಪ; ಕಾದಂಬರಿ; ಬೆಲೆ ಆಣೆ ೧೦; ಲೇಖಕರು—ಶ್ರೀ ಕುಮಾರ. ಪುಟ ಸಂಖ್ಯೆ ೧೫೦+೬.

ಬೆಂಗಳೂರಿನ ಶ್ರೀ ಗುಳೂರು ಗುಂಡಪ್ಪನವರ ಸಂಚಾಲಕತ್ವದಲ್ಲಿ 'ನವೀನ ಗ್ರಂಥಮಾಲೆ'ಯೊಂದು ಹೊರಟಿದ್ದು, ಪ್ರಥಮ ವರ್ಷದಲ್ಲಿ ೫ ಕಾದಂಬರಿಗಳನ್ನು ಹೊರಡಿಸಬೇಕೆಂದು ಸಂಕಲ್ಪಿಸಿರುವರು. ಪ್ರಥಮ ಪುಷ್ಪವಾಗಿ ಈ ರಾಜಾನಂದವು ಹೊರಟಿದೆ. 'ರಾಜಾನಂದ'ದ ಕಥಾವಸ್ತುವು ಸ್ವತಂತ್ರವೆಂಬುದರಲ್ಲಿ, ಓದುಗರಲ್ಲಿ ಎರಡಭಿಪ್ರಾಯಗಳಿರಲಾರವು. ರಾಜನೂ ಆನಂದನೂ ಕಾಲಾಗೆಳೆಯರು. ಅವರ ಗೆಳೆತನವು-ಒಬ್ಬನು ಮತ್ತೊಬ್ಬನ ಭಗಿನಿಯನ್ನು ವಿವಾಹವಾಗಿ ಮತ್ತಷ್ಟು ದೃಢವಾಗುವುದು. ಆದರೆ, ಈ ಸುಖಗಳನು ಬಹು ಕಾಲ ಉಳಿಯಲಾರದಂತಹ ಘಟನೆಗಳುಂಟಾಗುತ್ತವೆ. ಗೆಳೆಯನಾದ ರಾಜನು ನ್ಯಾಯಾಧಿಪತಿಯಾಗಿ—ಕರ್ತವ್ಯದ ಮುಂದೆ ಪ್ರೇಮವನ್ನೂ ನಂಬಿಸುವ ಸಂಭವವುಂಟಾಗುವುದು. ಆನಂದನೂ ಅಕನ ಪತ್ನಿ (ರಾಜನ ಭಗಿನಿ)ಯೂ ರಾಜನ ಸಮ್ಮುಖದಲ್ಲಿ ಬಂಧಿಗಳಾಗಿ ನಿಂತು, ಕಠೋರವಾದ ಶಿಕ್ಷೆಯನ್ನು ಕೇಳುವರು; ಅನುಭವಿಸುವರು. ಮುಂದೆ ಧೃಕ್ಸು ಅಕಸ್ಮಿಕವಾಗಿ ಪರಿವರ್ತನವಾಗಿ, ಎಲ್ಲರೂ ಒಟ್ಟುಗೂಡುವರು. ಆನಂದನ ಜ್ಞಾನ ಚಕ್ಷುಗಳು ತೆರೆದುಕೊಳ್ಳುವುವು. ರಾಜನ ಅಂತರ್ಯವು ಮತ್ತಷ್ಟು ವಿಕಾಸಗೊಳ್ಳುವುದು.

ಸನ್ನಿವೇಶಗಳು ಮನೋಹರವಾಗಿವೆಯೆಂದು ಹೇಳದಿರಲಾಗುವುದಿಲ್ಲ. ಪರಂತು, ಅವುಗಳನ್ನು ಹೇಳುವಕ್ರಮ, ಜೋಡಿಸಿತಂದ ರೀತಿ, ಇವುಗಳಿನ್ನೂ ಪಳಗದ ಕೈಯನ್ನು ಬಯಲುಪಡಿಸುತ್ತವೆ. ಆರಂಭದ ಅಧ್ಯಾಯವು ಪೀಠಿಕಾರೂಪವಾದ್ದುದು—ಮುಂದಿನ ಕಥೆಯ ಅಸ್ತಿವಾರವು; ಅದು ಚೆನ್ನಾಗಿದೆಯೆನ್ನುವಾಗ—ಮುಂದಿನ ಕೆಲವು ಅಧ್ಯಾಯಗಳು ವಾಚಕನಿಗೆ ಅರ್ಥವಾಗದಂತೆ ವಿವೃತವಾಗಿವೆ. ಕಥೆಯನ್ನು ಪೋಣಿಸಿ ತರುವುದು ಸಾಮಾನ್ಯವಾದ ಶ್ರಮವಲ್ಲ. ಕಥಾವಸ್ತುವು ನಿಶ್ಚಿತವಾಗಿ ಲೇಖನಿ ಮೂಲಕ ಹರಿಯುವಾಗ, ಅಸ್ತವ್ಯಸ್ತವಾಗಿ ಹರಿದುಹೋಗಬಾರದು. ಸಾಮಾನ್ಯ ಓದುಗನೇ ನಿಜವಾದ ಟೀಕಾಕಾರನೆಂಬುದನ್ನು ಮರೆಯಬಾರದು.

ಘಟನೆಗಳಲ್ಲಿ ಅಸಾಧ್ಯವಾದುದಾವುದೂ ಇಲ್ಲ; ಆದರೂ ಕೆಲಕಡೆಗಳಲ್ಲಿ ವಿವರಿಸಿದ ಕ್ರಮವು 'ಇದು ಹೀಗಾಗುವುದು ಸಂಭವವೇ?' ಎಂಬ ಪ್ರಶ್ನೆಯೇಳುವಂತೆ ಮಾಡುವುದು. ಸುಶೀಲೆಯ 'ದೊಡ್ಡಮ್ಮ'ನಂತಹವರು ಕಡಿಮೆಯಿಲ್ಲ—ಆದರೂ ಆ ಪಾತ್ರರಚನೆಯು ಸ್ವಾಭಾವಿಕತನವನ್ನೊಳಗೊಂಡಂತೆ ತೋರುವುದಿಲ್ಲ. ಹಾಗೆಯೇ ಸರಸ್ವತಿ-ರಾಜರೊಳಗಿನ ಕೋರ್ಟಿನ ಸಂಭಾಷಣೆಯ ವಿಷಯವಾಗಿಯೂ ಹೇಳಬಹುದು.

ಕಾದಂಬರಿಯ ಅಂತ್ಯವೂ ನಿರಾಶೆಯನ್ನುಂಟುಮಾಡುವುದು. ಪ್ರಜಾಪಕ್ಷದಿಂದ ಹೋರಾಡಿ ಸರ್ವಸ್ವವನ್ನು ಕಳಕೊಂಡ ಒಬ್ಬ ಮುಕ್ಸದ್ದಿಯು—ಕೊನೆಗೆ ಹೋರಾಟವನ್ನೆ ಬಿಟ್ಟು ಕೊಟ್ಟನೆಂದರೆ—ಅದೊಂದು ಪರಿಣಾಮಕಾರೀ ಶೀಲವನ್ನೊಳಗೊಂಡಿಲ್ಲ. ಆನಂದನು ಕೊನೆಗೆ ಸಾರುವುದು 'ವಿಶ್ವಪ್ರೇಮ'ವನ್ನು ಎಂದು ಗ್ರಂಥರಚಯಿತರ ಪ್ರತಿಪಾದನೆಯಿರಬಹುದು. ಪರಂತು, 'ಎಲ್ಲವನ್ನು ಪ್ರೀತಿಸುವ'ವನು ಹೋರಾಟವನ್ನೆ ತೊಲಗಿ ಕರ್ಮರಹಿತನಾದನೆಂಬುದರಿಂದ,—ಸುಗುಣಿಯೆಂದು ಚಿತ್ರಿಸಹೋದ ಕಥಾನಾಯಕನ ವಿಷಯವಾಗಿ ಸ್ವಲ್ಪ ಜುಗುಪ್ಸೆ ಹುಟ್ಟಲವಕಾಶವಾಗುವುದು. ಈ ಕಥಾನಾಯಕನು ಯಾರಿಗೆ 'ಆದರ್ಶ'ನೋ ಹೇಳಬರುವುದಿಲ್ಲ. ಕೊನೆಯ ಅಧ್ಯಾಯವು ಪರಿಣಾಮಕಾರಿಯಾಗಿಲ್ಲವೆನ್ನಬೇಕು.

ಏನಿದ್ದರೂ ಲೇಖಕರಲ್ಲಿ ಸ್ವತಂತ್ರವಾಗಿ ಬರೆಯುವ ಪ್ರತಿಭೆಯುಂಟೆಂಬುದು ಸ್ವಯಂವ್ಯಕ್ತ. ಅವರ ಮೊದಲನೆ ಯತ್ನವಿದು ಕೆಲವು ದೋಷಗಳನ್ನೊಳಗೊಂಡಿರಬಹುದಾದರೂ—ಮುಂದೆ ಶೀಘ್ರದಲ್ಲಿ ಇವರ ಉತ್ತಮವಾದ ಕಾದಂಬರಿಗಳನ್ನು ಕರ್ನಾಟಕಕ್ಕೆ ಕಾಣಿಕೆಯಾಗಿ ಅರ್ಪಿಸುವರೆಂಬ ಭರವಸೆ ತೋರುವುದು.

ನವೀನ ಗ್ರಂಥಮಾಲೆಯವರ ಈ ಉದ್ಯಮಕ್ಕಾಗಿ ಅವರನ್ನು ಕೊಂಡಾಡಿ, ಅವರಿಗೆ ಸಕಲ ಕನ್ನಡಿಗರೂ ಕೈಗೊಟ್ಟು, ಮುನ್ನಡೆಯಿಸಬೇಕೆಂದು ಹಾರೈಸುವೆವು.

ಮುದ್ರಣ ದೋಷಗಳು ಪ್ರತಿಯೊಂದು ಪುಟದಲ್ಲಿಯೂ ಇದ್ದೇ ಇವೆಯೆನ್ನಬಹುದು. ಮುದ್ರಣವು ಅಂದವಾಗಿದ್ದರೂ ಅಕ್ಷರ ತಪ್ಪುಗಳು ಕಣ್ಣಿಗೆ ಎದ್ದು ಕಾಣುತ್ತಿವೆ. ಮುಂದೆ ಮುದ್ರಣ ದೋಷಗಳಾವುವೂ ಬಾರದಂತೆ ಎಚ್ಚರ ತೆಗೆದುಕೊಳ್ಳಬೇಕೆಂದು ತಿಳಿಯಲಿಚ್ಛಿಸುವೆವು.

'ವಾರಿಜ.'

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ರಾಶಿ ಅಕ್ಕಿ ...	4—3	4—10
ಮುಸ್ಕಿ ...	4—2	5—
ಗುಡ್ಡು ...	4—4	4—10
ಸುಗ್ಗಿ ...	4—2	4—8
ಊರ ಅಕ್ಕಿ ಕೆಲ್ಸಿಗೆ ...	4—12	5—4
ರಂಗೂನು ಬಿ. ಗೋ. ಅಕ್ಕಿ ...	6—0	6—4
ಎಲ್ಲಾ ರುಟಿ. ಮು. ಅಕ್ಕಿ ...	4—0	4—0
ಗೋದಿ ಗೋಣಿ ಅಕ್ಕಿ ...	10—0	12—8
ತೊಗರಿ ಗೋಣಿ ಅಕ್ಕಿ ...	9—8	10—0
ಹುರುಳಿ ಗೋಣಿ ಅಕ್ಕಿ ...	7—6	7—10
ಕಡಲೆ ಗೋಣಿ ಅಕ್ಕಿ ...	7—8	8—0
ತೊಗರಿಬೇಳೆ ಗೋಣಿ ಅಕ್ಕಿ ...	10—0	17—0
ಉದ್ದು ಗೋಣಿ ಅಕ್ಕಿ ...	7—0	7—8
ಹೆಸರು ಗೋಣಿ ಅಕ್ಕಿ ...	7—0	7—8
ಊರುಬೆಲ್ಲ ಖಂಡಿ ಅಕ್ಕಿ ...	40—0	45—0
ಉಪ್ಪು ಗೋಣಿ ಅಕ್ಕಿ ...	5—6	5—8
ಕೊಬ್ರಿ ಖಂಡಿ ಅಕ್ಕಿ ...	40—0	42—0
ಕೊಬ್ರಿ ಹಿಂಡಿ ಖಂಡಿ ಅಕ್ಕಿ ...	19—2	19—10
ಎಳ್ಳೆಂಡಿ ಖಂಡಿ ಅಕ್ಕಿ ...	23—12	27—0
ಕೊಬ್ರಿ ಎಣ್ಣೆ ಮಣ ಅಕ್ಕಿ ...	2—15	3—14
ಎಳ್ಳೆಣ್ಣೆ ಮಣ ಅಕ್ಕಿ ...	5—2	5—10
ಟಿಮುಕಿಎಣ್ಣೆ ಪೆಟ್ಟಿಗೆ ಅಕ್ಕಿ ...	6—8	8—0
ಮೋರಿಸ ಸಕ್ಕರೆ ಮು. ಅಕ್ಕಿ ...	3—8	3—12
ಮೇಣಸು ...	7—0	7—8
ಸಾಸಿವೆ ಮುಡಿ ಅಕ್ಕಿ ...	4—8	5—4
ಕಾಳುಮೆಣಸು ಖ. ಅಕ್ಕಿ ...	136—8	137—8
ಯೇಲಕ್ಕಿ ಮಣ ಅಕ್ಕಿ ...	18—0	22—0
ಹೊಸ ಗೇರುಬೀಜ ಮು. ಅಕ್ಕಿ ...	3—4	3—5
ಕಬ್ಬಿಣ ಖಂಡಿ ಅಕ್ಕಿ ...	42—0	44—0
ತಾಂಬ್ರತಗಡು ಮು. ಅಕ್ಕಿ ...	10—0	10—0
ತಾಂಬ್ರಪಾತ್ರಗಳು ಮು. ಅಕ್ಕಿ ...	13—0	14—8
ಚೀನಬೆಳ್ಳಿ ಸೇರು ಅಕ್ಕಿ ...	14—12	15—0
ಹಿತ್ತಾಳೆ ತಗಡು ಮು. ಅಕ್ಕಿ ...	9—2	9—10
ಪವನು ಅಕ್ಕಿ ...	20—10	21—0
ಹುಣಸೆ ಹುಳಿ ಖಂಡಿ ಅಕ್ಕಿ ...	30—0	35—0
ನೇಟಿವ್ ಕಾಫಿ ಖಂಡಿ ಅಕ್ಕಿ ...	182—0	198—0
ಫ್ಲಾಂಟೇಶನ್ ಕಾಫಿ ಖಂಡಿ ಅಕ್ಕಿ ...	296—8	280—8
ಹಳೆ ಅಡಿಕೆ ...	118—0	124—0
ಹೊಸ ಅಡಿಕೆ ...	62—0	92—0

ಶಾಲಿವಾಹನ ಬ| ಶಕ ೧೮೫೯ನೆಯ ಭಾವ ಸಂವತ್ಸರದ ಆಶ್ವೀಜ ಬ| ೧೧ ಶನಿವಾರದಿಂದ—ಕಾರ್ತಿಕ ಶು| ೨ ಶುಕ್ರವಾರದ ವರೇಗಿನ ಪಂಚಾಂಗ. (೧೯೩೭ನೇಯ ಸಿಂಹಸೋಣ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ.	ಸೂರ್ಯ ಅಸ್ತ	[illegible]
3	ಶನಿ	೧೧	[illegible]	ಉತ್ತರ	[illegible]	[illegible]	6.22	6.18	
4	ರವಿ	೧೨	೧೦।	ಉತ್ತರ	೧೫।	೧೮	6.22	6.17	
5	ಸೋಮ	[illegible]	[illegible]	ಹಸ್ತ	[illegible]	[illegible]	6.22	6.17	
6	ಮಂಗಳ	೧೪	[illegible]	ಚಿತ್ರ	[illegible]	[illegible]	6.23	6.16	
7	ಬುಧ	●	[illegible]	ಸ್ವಾತಿ	[illegible]	[illegible]	6.22	6.15	
8	ಗುರು	೧	[illegible]	ವಿಶಾಖ	[illegible]	[illegible]	6.22	6.14	
9	ಶುಕ್ರ	೨	[illegible]	ಅನುರಾಧ	[illegible]	[illegible]	6.22	6.14	

FOR SALE
Erika Portable Typewritor

Apply to:
Canara School of Commerce,
Hampankatta Mangalore.

ರೋಗಬಾರದಿರಲು...

ದುಷ್ಟ ರೋಗಗಳಲ್ಲಿ ಹೆಂಗಸರ ಮೋಹಕ್ಕೆ ಸಿಕ್ಕಿ ಬಾಯಿಲಿ ಹಚ್ಚಿಕೊಳ್ಳಬೇಡಿ!
ಆ ರೋಗ ಹತ್ತದಂತೆ ಇರಲು ನಾವು ಜರ್ಮನಿಯಿಂದ ತರಿಸಿರುವ ರಬ್ಬರಿನ ಸಾಧನವನ್ನು ಉಪಯೋಗಿಸಿರಿ
ಗಂಡಸರದ್ದು ಬೆಲೆ 1 8 0
ಹೆಂಗಸರಿಗೆ (ಗರ್ಭನಿರೋಧಕ್ಕೆ) 2 – 4 – 0
ಆರ್ಡರಿನೊಡನೆ 4 ಆಣೆ ಸ್ಟಾಂಪು ಇರಬೇಕು.
ವಿಳಾಸ—ಕರ್ನಾಟಕ ಏಜನ್ಸಿ,
32, ಕೃಷ್ಣಪ್ಪ ನ್ಯಾಕ್ ಟೇಂಕ್ ಸ್ಟ್ರೀಟ್,
ಜಿ. ಟಿ. ಮದ್ರಾಸು.

"ಮಿತಸಂತತಿ'—ಮಿತಸಂತತಿ'' ಎಂದು ಬಲುಬಿದರೆ ಫಲವಿಲ;
ಪ್ರೊರೆಸ್' ಕೇಪ್ ಪೆಸರಿ

ವೆಂಬ ಈ ಅಮೂಲ್ಯ ಚೀಲವನ್ನುಪಯೋಗಿಸುವುದರಿಂದ 'ಮಿತಸಂತತಿ'ಯ ಸೂತ್ರವು ಪರಿಪಾಲಿಸಲ್ಪಡುವುದು. ಈ ಚೀಲದ ಉಪಯೋಗವನ್ನು ಪ್ರಸಿದ್ಧ ವೈದ್ಯರೂ ಡಾ| ಮೇರಿಸ್ಟೋಪರೂ ಪರೀಕ್ಷಿಸಿ ಜಗತ್ತಿಗೆ ಶಿಫಾರಸು ಮಾಡಿರುವರು.
1 ಆಣೆ ಅಂಚೆ ಚೀಟು ರವಾನಿಸಿದರೆ ಕೆಟಲಾಗು ಕಳುಹಿಸುತ್ತೇವೆ

ಪ್ರೊರೆಸ್ ಚಿನೊಸೋಲ್ ಸೊಲ್ಯುಬ್ಲ್ (Prorace Chinosal Soluble)
ಎಂಬುದನ್ನು ಇದರೊಡನೆ ಉಪಯೋಗಿಸಿರಿ. ಇದು ದ್ರಾವಕದಂತಿದೆ.
ಪ್ರೊರೆಸ್ ಎಂಬ ಹೆಸರುಳ್ಳದು ಸರ್ವೋತ್ಕೃಷ್ಟ! ಇದರ ಕ್ರಯ ಒಂದು ಟಿನ್ನಿಗೆ ರೂ. 2—0—0 (ಹನ್ನೆರಡು ಬಾಟ್ಲಿಗಳಿವೆ.)
ಮುಖ್ಯ ಪ್ರವರ್ತಕರು:—The Pioneer Book Depot,
373/375 Esplanade Road, Madras.
ಮಂಗಳೂರು ಏಜಂಟರು:—
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ಮಂಗಳೂರು.

ಪತ್ರಿಕಾ ಪ್ರಪಂಚ.

ಜರ್ಮನಿಯಲ್ಲಿ ಕೆಲಸದ ವೇಳೆ.

ನೇಶನಲ್ ಸೋಶಿಯಲಿಸ್ಟ್ ಸರಕಾರವು ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದೊಡನೆ ಅದು ಪ್ರಥಮದಲ್ಲಿ ಬಗೆಹರಿಸ ಲೆತ್ನಿಸಿದ ಸಮಸ್ಯೆಯು ನಿರುದ್ಯೋಗತೆ. ಈ ವಿಷಯಕ್ಕಾಗಿ ಅವರು ಮೊದಲು ವಾರಂಪ್ರತಿಯ ಉದ್ಯೋಗವೇಳೆಯನ್ನು ಕಡಮೆ ಮಾಡಿದರು. ಈ ಸಂಬಂಧವಾಗಿ ಸರಕಾರವು ವಿಶಿಷ್ಟ ಶಾಸನಗಳನ್ನು ಪ್ರಚಾರಕ್ಕೆ ತಂದು, ಉದ್ಯೋಗವನ್ನು ಹೇಗೆ ಹಂಚಿಕೊಡಬೇಕೆಂದು ಧಂಡನಾಳಿಗಂಗಿ ತಿಳಿಸಿತು. 'ಇಂಟರ್‌ನೇಶನಲ್ ಲೇಬರ್ ರಿವ್ಯೂ' ಎಂಬುದರಲ್ಲಿ ಹೀಗಿದೆ— ೧೯೩೩ರಲ್ಲಿ ಜರ್ಮನಿಯಲ್ಲಿ ಪ್ರಥಮದಲ್ಲಾಗಿ ವಾರಕ್ಕೆ ೪೦ ಘಂಟೆಗಳ ಉದ್ಯೋಗ ನಿಯಮವು ಪ್ರಚಾರಕ್ಕೆ ಬಂತು. ಈ ಸಮಯದಲ್ಲಿ ಬ್ರುನಿಂಗ್ ಸರಕಾರವು ಒಂದು ಸಮಿತಿಯನ್ನು ಸ್ಥಾಪಿಸಿ ದೇಶದಲ್ಲಿನ ನಿರುದ್ಯೋಗ ಸಮಸ್ಯೆಯನ್ನು ತಿಳಿದುಕೊಳ್ಳಬೇಕಾಗಿ ಯೋಚಿಸಿತು. ಆದರ ಶಿಫಾರಸಿನ ಮೇರೆಗೆ—ನಿರುದ್ಯೋಗತೆಯನ್ನು ಕಡಮೆ ಮಾಡುವುದಕ್ಕಾಗಿ ಕೆಲಸದ ತಾಸುಗಳನ್ನು ಕಡಮೆ ಮಾಡಲಾಜ್ಞಾಪಿಸಿತು. ಕಾರ್ಖಾನೆಗಳಲ್ಲಿಯೂ ಇನ್ನಿತರ ಕೈಗಾರಿಕೆಯ ಮಂದಿರಗಳಲ್ಲಿಯೂ ವಾರಕ್ಕೆ ೪೦ ಘಂಟೆಗಳ ಕೆಲಸ ಮಾಡುವ ಕ್ರಮವನ್ನು ಪ್ರಚಾರಕ್ಕೆ ತರಬೇಕೆಂದು ಸ್ಪಷ್ಟವಾಗಿ ತಿಳಿಸಲಾಯಿತು. ಅಲ್ಲದೆ ಕೆಲಸದ ತಾಸುಗಳು ಕಡಮೆಮಾಡಲ್ಪಟ್ಟಂತೆ ಕೆಲಸಗಾರರಿಗೆ ಸಿಗುವ ಕೂಲಿಯನ್ನೂ ಕಡಮೆಮಾಡಬೇಕೆಂದು ತೀರ್ಮಾನಿಸಿತು. ಹೀಗೆ ಸಂಬಳ ಕಡಮೆ ಮಾಡುವುದರಿಂದ ಧಂಡನಾಳಿಗರು, ನಿರುದ್ಯೋಗಿಗಳನ್ನು ಹೆಚ್ಚು ಹೆಚ್ಚಾಗಿ ಕೆಲಸಕ್ಕಿಡಬಹುದೆಂದು ಯೋಚಿಸಲ್ಪಟ್ಟಿತು. ೧೯೩೩ರ ಜೂನ್ ೨೦ ರಲ್ಲಿ ಸರಕಾರವು ಒಂದು ಶಾಸನವನ್ನು ಪ್ರಕಟಿಸಿ ಫೆಡರಲ್ ಕೌನ್ಸಿಲಿನ ಅನುಮೋದನೆಯ ಮೇರೆಗೆ ಪೋಲೀಸಿನಂತೆ ಕೆಲಸದ ತಾಸುಗಳನ್ನು ಇಳಿಸಿತು. ಕೆಲಸ ಮಾಡ ಮಾಲೀಕರು ಮಾಡಿಸುವವರೊಳಗೆ ಒಪ್ಪಂದವನ್ನು ಮಾಡಿ ಈ ಸಂಧಿಯನ್ನು ಮುಂದರಿಯಿಸಿದ್ದಿತು.

ಇಷ್ಟಲ್ಲದೆ, ಕೆಲಸದ ತಾಸುಗಳನ್ನು ಇನ್ನಷ್ಟು ಇಳಿಸುವುದಕ್ಕಾಗಿ ಬ್ರುನಿಂಗ್ ಸರಕಾರವು ಕೆಲವು ಕಾರ್ಖಾನೆಗಳಿಗೆ ಆಜ್ಞಾಪಿಸಿತು. ಆದರೆ ವೋನ್ ಪೆಪನ್ ಸರಕಾರವು ಈ ಯೋಜನೆಯ ಅವಧಿಯನ್ನು ಪರಿಶೋಧಿಸಿ ಇದರ ಸ್ಥಾನದಲ್ಲಿ ಮತ್ತೊಂದು ಯೋಜನೆಯನ್ನು ಹೂಡಿತು. ೧೯೩೩ರಲ್ಲಿ ಜರ್ಮನ್ ಸರಕಾರವು ಅಧಿಕಾರಕ್ಕೆ ಬಂದೊಡನೆ ವಾರಕ್ಕೆ ೪೦ ಘಂಟೆಗಳ ನಿಯಮವನ್ನು ಪ್ರಚಾರಕಾರ್ಯದ ಮೂಲಕ ಸ್ಥಾಪಿಸಿತು.

ಹೀಗಾಗಿ ೪೦ ತಾಸುಗಳ ವಾರವು ನೆಲೆನಿಂತಿತು. ಅದರೊಡನೆ ಕೆಲವು ಪರಿವರ್ತನೆಗಳನ್ನು ತಂದೊಡ್ಡಿತು. ಇದರ ಅಪ್ಪಣೆ ಮೇರೆಗೆ ಸಂಬಳವನ್ನು ಮಧ್ಯದ ತರಗತಿಯಲ್ಲಿ ತಂದು ನಿಲ್ಲಿಸಲಾಯಿತು. ಫಲವಾಗಿ, ಪ್ರತಿಯೊಬ್ಬನಿಗೆ ಮಧ್ಯಮ ತರಗತಿಯ ಸಂಪಾದನೆಯು ದೊರೆಯಿತು.

'ಇಂಟರ್ನೇಶನಲ್ ಲೇಬರ್ ರಿವ್ಯೂ.'

ಡಾ॥ ರವೀಂದ್ರನಾಥ ಠಾಗೂರರ ಪ್ರಶಸ್ತಿ.

ಶ್ರೀ ಡಿ. ಪಿ. ರಾವ್ ಎಂಬವರು ಬರೆಯುವುದೇನೆಂದರೆ,—ರವೀಂದ್ರನಾಥ ಠಾಗೂರರೆಂದರೆ ಪೌರ್ವಾತ್ಯ ಜನಜೀವನವನ್ನು ಆದರ್ಶಪೂರ್ವಕವಾಗಿ ಲೋಕಕ್ಕೆ ಪ್ರಕಟಿಸುವವರು. ಪೌರ್ವಾತ್ಯ ಕಾವ್ಯಪ್ರಪಂಚದ ನೈಜ ಅನುಪಮತೆಯನ್ನು ಪ್ರದರ್ಶಿಸುವವರು. ಅವರ ಭಾವನೆಯು ಸಮುದ್ರಕ್ಕಿಂತಲೂ ವಿಶಾಲವಾದುದು. ಅದಕ್ಕೆ ಸಮಯ ಮತ್ತು ಸ್ಥಾನವಿಲ್ಲ. ಅವರ ಆತ್ಮವು ನಕ್ಷತ್ರದಷ್ಟು ಉನ್ನತವಾದುದು. ಅವರ ನೈತಿಕ ಪ್ರಭಾವವನ್ನವರು, ಬಲಾತ್ಕರಿಸಿ ತಿಳಿಯಪಡಿಸುವುದಿಲ್ಲ. ತನ್ನ ಹೃದಯದಲ್ಲಿರುವ ಭಾವವನ್ನು ವಿನೀತರಾಗಿ ಪ್ರಸಾರಗೊಳಿಸುವವರು; ದೈವಜ್ಞಾನವೆಂಬುದು ಅವರಲ್ಲಿ ಮೂರ್ತಿಮತ್ತಾಗಿದೆ. ಅರಿಯಲಾರದವನನ್ನು ಅದನ್ನು ಅರಿತುಕೊಳ್ಳಬೇಕೆಂಬುದೇ ಅವರ ಬಯಕೆ. ಅವರಿಗೆ ಜೀವಮಾನವೆಂಬುದು ಸತ್ಯಾನ್ವೇಷಣದ ಮಹದ್ವಿಷಯ. "ನಾವು ಅರಿಯಲಾರದವನ ಮಹಾ ಸಮಸ್ಯೆಯನ್ನು ಬಗೆಹರಿಸಲೆತ್ನಿಸುವವರು" ಎಂದು ಅವರ ಮತ. ಭೌತಿಕವಾದವನ್ನೂ, ನವನಾಗರಿಕತೆಯನ್ನೂ ಅವರು ಸುವ್ಯಕ್ತವಾಗಿ ಖಂಡಿಸುವವರು. ಇವು ಮನುಷ್ಯನನ್ನು ಯಂತ್ರಸಮಾನನನ್ನಾಗಿ ಮಾಡಿ ಅವನನ್ನು ಆತ್ಮರಹಿತನನ್ನಾಗಿ ಮಾಡಿರುತ್ತವೆ,—ಸ್ವಾರ್ಥಿಯನ್ನಾಗಿ ಮಾಡಿರುತ್ತವೆ ಎಂಬುದೇ ಅವರ ಮತ. ಮತ, ವಿದ್ಯೆ, ಬುದ್ಧಿಗಳೆಂದು ಜನರು ನಿರ್ಬಂಧಗಳನ್ನು ಕಲ್ಪಿಸಿಕೊಂಡು ದೇವರ ಶಾಪ-

-ಕ್ಕೆ ಒಳಗಾಗಿರುವರೆಂದು ಅವರು ಹೇಳುವರು. ಜನರಲ್ಲಿನ ಅಂಧಶ್ರದ್ಧೆಯು ಹೋಗಬೇಕು; ಅಜ್ಞಾನವು ತೊಲಗಬೇಕು; ಎಂದು ಅವರು ಎಲ್ಲೆಲ್ಲಿ ಬೋಧಿಸುತ್ತಿರುವರು. ಪ್ರತಿಯೊಬ್ಬನೂ ಪ್ರೇಮ, ಧಾನಧರ್ಮ, ವಿಜ್ಞಾನ, ಸಾಹಿತ್ಯ, ತತ್ವಗಳನ್ನರಿತು ಪ್ರಭಾವಶಾಲಿಗಳಾಗಬೇಕು ಎಂದು ಅವರ ಆಶಯ.

'ದಿ ಎಡ್ಯುಕೇಶನಲ್ ರಿವ್ಯೂ'

ಸ್ವದೇಶಿಯ ಕುರಿತು ಹೊಸ ಸೂಚನೆ.

"ಸ್ವದೇಶೀ ಸಂಘದ ಸ್ವದೇಶೀ ಸಾಮಾನುಗಳೆಂದರೆ— ಅವುಗಳು ಹಿಂದೂದೇಶದಲ್ಲಿ ಪ್ರತ್ಯಪ್ರತ್ಯೇಕ ಕೆಲಸಗಾರರಿಂದ ಅಥವಾ ಅವರ ಕುಟುಂಬದವರಿಂದ ಸಂಘದ ಸೂಚನೆಗಳಿಗನುಸಾರವಾಗಿ ತಯಾರಿಸಲ್ಪಟ್ಟಂತಹವುಗಳಾಗಬೇಕು. ಸ್ವದೇಶೀ ಸಾಮಾನುಗಳ ತಯಾರಿಗಾಗಿ ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ಸಂಘದ ಸೂಚನೆ ಮೇರೆಗೆ ಕೆಲಸಗಾರರು ಪಡೆಯುವಂತಾಗಬೇಕು. ಹೀಗೆ ತಯಾರಿಸಲ್ಪಟ್ಟವುಗಳೇ "ಸ್ವದೇಶೀ" ಸಾಮಾನುಗಳೆಂದು ಪರಿಗಣಿಸಲ್ಪಡಬೇಕು. ಅಲ್ಲದೆ, ಕೂಲಿಗಳ ಮೂಲಕ ಕಾರ್ಖಾನೆಗಳು ತಯಾರಿಸುವ ಸಾಮಾನುಗಳೆಲ್ಲ ಸ್ವದೇಶೀಯಲ್ಲವೆಂದು ಪರಿಗಣಿಸಲ್ಪಡಬೇಕು. ಅಂದರೆ—ಸ್ವದೇಶೀ ಎಂಬುದಕ್ಕೆ ಈ ಅರ್ಥ ಬರಬೇಕು.

ಹಿಂದೂದೇಶದಲ್ಲಿ ಸಿದ್ಧವಾದುವುಗಳು ಮನೆಯಲ್ಲೇ ತಯಾರಿಯಾದುವುಗಳು, ಕುಟುಂಬಿಕರು ಒಟ್ಟಾಗಿ ತಯಾರಿಸಿದವುಗಳು.

ಈ ಸೂತ್ರವನ್ನು ಸ್ವೀಕರಿಸಿದರೆ, ಸ್ವದೇಶೀ ಚಳವಳದಲ್ಲಿ ನೂತನ ಕ್ರಾಂತಿಯುಂಟಾದೀತು. ಸ್ವದೇಶೀ ಚಳವಳದಲ್ಲಿ ನಿಶ್ಚಲ ಮತ್ತು ಸ್ಥಿರ ಸುಧಾರಣೆಗಳಾಗುವುವು. ಆರಂಭದಲ್ಲಿ ಹೆಚ್ಚಿನ ಅನಾನುಕೂಲತೆಯು ತಲೆದೋರಬಹುದಾದರೂ, ಕಾಲಕ್ರಮೇಣ ಈ ಸೂತ್ರವು ಹಿಂದೂದೇಶದ ಆರ್ಥಿಕೋನ್ನತಿಗೆ ಸಹಕಾರವಾಗುವುದು. ಇದರ ಅರ್ಥವು ಪ್ರತಿಯೊಬ್ಬ ಕೆಲಸಗಾರನಿಗೆ ತಿಳಿದು ದೇಶಕ್ಕೆ ಕಲ್ಯಾಣವಾಗುವುದು" ಎಂದು ಮಿ॥ ಪಾಲ್ ರಿಚ್ ಫ್ರೆಡ್‌ಮೇನರ ಮತ.

'ಇಂಡಿಯಾ ಎಂಡ್ ದಿ ವರ್ಲ್ಡ್'

ಮತವೆಂಬುದು ಖಾಸಗಿ ವಿಷಯವೋ?

ಮತವೆಂಬುದು ಒಬ್ಬನ ಖಾಸಗಿ ವಿಷಯವೆಂದು ಅನೇಕರು ಹೇಳುವುದಿದೆ. ಆದರೆ ಪ್ರೊ॥ ಕೆನ್ನೆತ್ ಸಿ ವಾಕರ್ ಎಂಬವರು ಈ ರೀತಿಯ ಅಭಿಪ್ರಾಯಕ್ಕೆ 'The Christian Register' ಎಂಬುದರ ಸಂಪಾದಕೀಯದಲ್ಲಿ ಹೀಗೆಂದು ಉತ್ತರವಿತ್ತಿರುವರು.—

ಒಂದು ಮತವನ್ನಿತ್ತು ಕಿವಿಡ ನಡೆಸಿದನೆಂದರೆ ಒಡನೆ "ಅದು ಕೆವಿಟರವು ಮನುಷ್ಯನ ಖಾಸಗಿ ವಿಷಯ"ವೆಂದು ಹೇಳಲ್ಪಡುವುದನ್ನು ನಾವು ಕೇಳುತ್ತೇವೆ. ಸಮಾಜದ ಜೀವನದ ಸ್ವಭಾವವನ್ನು ನಾವು ಅರಿಯದಿರುವ ವರೆಗೆ ಆ ಅಭಿಪ್ರಾಯವನ್ನು ಸಿಂಧುವೆಂದು ನಾವು ಸ್ವೀಕರಿಸಬಹುದು. ಅಥವಾ ಹಾಗೆ ಕಾಣಲೂ ಬಹುದು. ಆದರೆ, ಈಗ ಖಾಸಗಿ ವಿಚಾರವೆಂಬುದೇ ಇಲ್ಲವೆಂದು ನಮ್ಮೆದುರು ನಡೆಯುವ ವಿದ್ಯಮಾನಗಳು ಬಯಲುಗೊಳಿಸುತ್ತವೆ. ಈ ಒಂದು ವಿಷಯದಲ್ಲೇ ಅಲ್ಲ ಅರ್ಥಶಾಸ್ತ್ರ, ರಾಜಕೀಯ, ಸಾಮಾಜಿಕ ವಿಷಯಗಳಿಗೂ ಈ ಮಾತು ಅನ್ವಯಿಸುತ್ತದೆ. ಮನುಷ್ಯನಿಗೆ ಸಾಕಷ್ಟು ಸಾಮಾಜಿಕ ನೀತಿಯು ತಿಳಿದಿಲ್ಲವೆಂಬುದು ನಮಗೆ ಕಂಡುಬರುತ್ತದೆ. ಮತಸಂಬಂಧ ಪ್ರಶ್ನೆಯು ಖಾಸಗೀ ವಿಚಾರವೆಂದು ತಿಳಿದಿರುವುದರಿಂದಲೇ ನಾವು ಈ ವಿಷಯದ ಸತ್ಯತೆಯನ್ನು ತಿಳಿಯಲು ಹೆಣಗಾಡುತ್ತಿರುವುದಾಗಿದೆ. ಮಾತೆಂದರೆ ಒಬ್ಬ ವ್ಯಕ್ತಿ ಮತ್ತು ಅವನ ದೇವರು, ಒಬ್ಬ ವ್ಯಕ್ತಿ ಮತ್ತು ಸಂಗಡಿಗರೆಂಬುದರಿಂದಲೇ ಭ್ರಾಂತಿಗೆ ಕಾರಣವಾಗಿದೆ. ಒಬ್ಬ ವ್ಯಕ್ತಿಯು ಏನನ್ನು ಯೋಚಿಸಿ ಏನನ್ನು ಮಾಡುತ್ತಾನೆ,—ಏನನ್ನು ಯೋಚಿಸದೆ ಏನನ್ನು ಮಾಡತ್ತಾನೆ ಎಂಬುದನ್ನರಿತರೆ, ಅವನ ಇಂತಹ ವರ್ತನೆಯಿಂದ ಕಾಲಕ್ರಮೇಣ ಅವನ ಖಾಸಗಿ ಜೀವನದ ಮೇರೆಯನ್ನು ಮೀರಿ ಪರಿಣಾಮಗಳು ತಲೆದೋರುವುವೆಂದು ತಿಳಿಯದಿರದು.

ಹೀಗಿರುವುದರಿಂದ ಜಾತಿಯೆಂಬುದು ತನ್ನ ಹಿಂಬಾಲಕರ ಖಾಸಗಿ ಭಾವನೆ ನೀತಿ, ವಿಶ್ವಾಸಗಳನ್ನು ಪ್ರಶ್ನಿಸುವ ಅಧಿಕಾರವನ್ನುಳ್ಳುದಾಗಿದೆ.

ಶಾಲೆ ಮತ್ತು ಮನೆಗಳೊಳಗಿನ ಸಂಬಂಧ

ಶ್ರೀ ಪರೇಶಚಂದ್ರಸೇನ್, ಎಂ. ಎ. ಬಿ. ಟಿ. ಇವರು ಮಕ್ಕಳ ಹೆತ್ತವರಿಗೆ ಕೆಲವು ಸೂಚನೆಗಳನ್ನಿತ್ತಿರುವರು.

ಮಕ್ಕಳು ಮನೆಯಲ್ಲಿ ಸತ್ಯ ವಿಧೇಯತೆ ಶುಚಿತ್ವ ಶ್ರದ್ಧೆಗಳನ್ನು ಕಲಿಯುವಂತೆ ಹೆತ್ತವರು ಎಚ್ಚರಿಕೆ ತೆಗೆದುಕೊಳ್ಳಬೇಕು. ಮಕ್ಕಳು ತಮ್ಮ ಹೆಚ್ಚಿನ ಸಮಯವನ್ನು ಮನೆಯಲ್ಲೇ ಕಳೆಯ ತ್ತಾರೆ ಹಾಗಿರುವುದರಿಂದ ಹೆತ್ತವರು ತಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣವನ್ನು ಕೊಡಲು ಅತ್ಯಂತ ಸುಲಭವಿದೆ. ತಕ್ಕವೇಳೆಯಲ್ಲಿ ತಕ್ಕ ಕೆಲಸವನ್ನು ಮಕ್ಕಳು ಮಾಡುವಂತಹ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸಬೇಕು. ಅವರು ಕ್ಲಪ್ತ ಕಾಲಕ್ಕೆ ಶಾಲೆಗೆ ಹೋಗುವಂತೆಯೂ ಸಮಯದ ಬೆಲೆಯನ್ನರಿತು ಆಟಪಾಠಗಳಲ್ಲಿ ನಿಮಗ್ನರಾಗುವಂತೆಯೂ ಅವರನ್ನು ತರಬೇತುಗೊಳಿಸಬೇಕು. ಶಾಲಾ ಕೆಲಸಗಳನ್ನು ಮಕ್ಕಳು ಮನೆಯಲ್ಲಿ ಕ್ಲಪ್ತವೇಳೆಯಲ್ಲಿ ಮಾಡುತ್ತಾರೋ ಎಂಬುದನ್ನು ವಿಚಾರಿಸುತ್ತಿದ್ದು ಹೆತ್ತವರು ಅನೆ ಭವವನ್ನೀಯಬೇಕು. ರಕ್ಷಕರು ಶಿಕ್ಷಕರೊಡನೆ ಸಹಕರಿಸಿ ನಡೆದು ಮಕ್ಕಳ ಪ್ರಗತಿಯು ಆವಾವ ವಿಧದಿಂದ ಸಾಧ್ಯವಿದೆಯೆಂಬುದನ್ನು ತರ್ಕಿಸಿಕೊಳ್ಳಬೇಕು. ಒಂದು ಮಗುವು ಶಾಲೆಗೆ ಸೇರಿಸಲ್ಪಟ್ಟೊಡನೆ ಶಿಕ್ಷಕನು ಅದರ ಹೆತ್ತವರನ್ನು ಕಂಡು ಆ ಮಗುವಿನ ಗುಣಾವಗುಣಗಳೇನೆಂಬುದನ್ನು ತಿಳಿದುಕೊಂಡು, ಆ ಮಗುವಿನ ಸ್ವಭಾವಾನುಸಾರವಾದ ಶಿಕ್ಷಣವನ್ನು ಕೊಡುತ್ತಾ ಬರಬೇಕು. ಶಾಲೆಯ ನಿಯಮಗಳೇನೇನೆಂಬುದನ್ನು ಶಿಕ್ಷಕನು ಹೆತ್ತವರಿಗೆ ತಿಳಿಸಿ ಅವುಗಳಿಗನುಸಾರವಾಗಿ ಹೆತ್ತವರು ಮಕ್ಕಳನ್ನು ಸದ್ಯಾರಿಗೆ ತರಬೇಕು. ಮಕ್ಕಳ ಪ್ರಗತಿಸೂಚಕ ವರದಿಯನ್ನು ಅಧ್ಯಾಪಕರು ಮಕ್ಕಳ ತಂದೆತಾಯಿಗಳಿಗೆ ಕೊಡಬೇಕು. ಅದರಲ್ಲಿ ಮಕ್ಕಳ ಗುಣದೋಷಗಳನ್ನು ವಿಶದೀಕರಿಸಬೇಕು. ವರ್ಷದಲ್ಲೊಂದು ದಿನವನ್ನು ಪ್ರತ್ಯೇಕಿಸಿಟ್ಟು ಆ ದಿನದಲ್ಲಿ ಹೆತ್ತವರೂ ಶಿಕ್ಷಕರೂ ಶಾಲಾ ನಿಬಂಧನೆ ಮೊದಲಾದ ಕುರಿತು ವ್ಯವಸ್ಥೆ ಮಾಡಬೇಕು.

'ದಿ ಟೀಚರ್ಸ್ ಜರ್ನಲ್'

"ನಾನು ನೋಡಲೂ ಕೇಳಲೂ ಬಯಸಿ ಬಂದುದು ಆ ದೊಡ್ಡವರನ್ನೆ—ಬಾಪೂಜಿಯವರನ್ನು!" ಎಂದನು!

'ಅಬ್ದುಲ್ ಗಫರ್‌ಖಾನ್ ನಗರ'.

ಇದು ಈ ಬಾರಿಯ ಬೊಂಬಾಯಿ ಕಾಂಗ್ರೆಸ್ ಅಧಿವೇಶನವು ಜರಗಿದ ಸ್ಥಳದ ಹೆಸರು. ಗಫರ್‌ಖಾನ್ ನಗರದ ವರ್ಣನೆಯನ್ನು ಸಂಕ್ಷೇಪವಾಗಿ, ಪ್ರೇಕ್ಷಕರೊಬ್ಬರು ಈ ಮಾತುಗಳಲ್ಲಿ ಮಾಡಿರುವರು.—

"ಇದು ನೋಟಕ್ಕೆ ಅತ್ಯಾಶ್ಚರ್ಯಕರವಾಗಿದೆ. ಕಳೆದ ೪೭ ಕಾಂಗ್ರೆಸ್ ನಗರಗಳ ಶೋಭೆಯನ್ನೂ ಇದು ಮೀರಿಸಿ ಮೆರೆಯುತ್ತಿದೆ. ನಿತ್ಯವೂ ಇದನ್ನು ನೋಡಲು ಸಾವಿರಾರು ಜನರು ಗುಂಪುಕಟ್ಟಿ ಹೋಗುತ್ತಿರುವರು. ಆ ಕಡೆ ಹೋಗುವ ರೈಲುಬಂಡಿಗಳಲ್ಲಿಯೂ ಬಸ್ಸುಗಳಲ್ಲಿಯೂ ಸ್ಥಳಾಭಾವ. ಪ್ರೇಕ್ಷಕನಿಗೆ ಮೊದಲಾಗಿ ದೃಷ್ಟಿಗೆ ಬೀಳುವುದು ವಿದ್ಯುದ್ದೀಪಗಳಿಂದ ಬೆಳಗಲ್ಪಟ್ಟ "Indian National Congress—48th Session–Abdul Gaffer Khan Nagar" ಎಂದೀ ಅಕ್ಷರಗಳು! ಒಳಗೆ ಪ್ರವೇಶಿಸುತ್ತಲೇ ಪ್ರದರ್ಶನಾಲಯ. ಈ ವರ್ಷದ ಪ್ರದರ್ಶನವು ಆಶ್ಚರ್ಯಕರ ನೀಯುವಾದ ಪ್ರದರ್ಶನದಲ್ಲಿ ಒಂದು ಸುತ್ತು ಸಂಚರಿಸಿ ಬರುವ ಪ್ರತಿಯೋರ್ವನೂ, ಸ್ವದೇಶಿ ಪ್ರಗತಿಯನ್ನು ಕಂಡು ಬೆರಗಾಗದಿರನು. ಆಗ್ರದ ಚಂದ್ರಕಾಂತ ಶಿಲಾ ಕೆಲಸಗಳೂ ಮಾವಾಡದ ಹೋಮ್ ಇಂಡಸ್ಟ್ರೀಸ್ ಇವರ ಕೈಗಾರಿಕೆಗಳೂ, ಇನ್ನನೇಕ ಇಂತಹ ವಸ್ತುಗಳೂ ಪ್ರೇಕ್ಷಕನಲ್ಲಿ ಚಿರಸ್ಥಾಯಿಯಾದ ಪರಿಣಾಮವನ್ನುಂಟುಮಾಡುವುವು.

"ನಗರದ ಸುತ್ತಳತೆಯು ಸುಮಾರು ೩ ಮೈಲುಗಳಿರಬಹುದು. ಒಳಗೆ ಸಭಾ ಮಂಟಪ, ಪ್ರದರ್ಶನಾಲಯ ನಾನಾ ಕೇರಿಗಳು, ಡೆಲಿಗೇಟರ ಸ್ಥಳಗಳೆಂದು ಹಲವು ವಿಭಾಗಗಳಿವೆ. ನಗರದ ನಕಾಶೆಯು ಸಿಗುವುದಾದರೂ ಪ್ರೇಕ್ಷಕನಿಗೆ ತನಗೆ ಬೇಕಾದ ಸ್ಥಳವನ್ನು ಕಂಡು ಹಿಡಿಯಲು ಸುಲಭವಾಗಿಲ್ಲ. ಆದರೆ ಸ್ವಯಂಸೇವಕರು ಸಹಾಯಮಾಡುತ್ತಿರುವುದು ಸಂತೋಷಕರ.

"ನಗರದೊಳಗಿನ ಕೇಂದ್ರ ಪ್ರದೇಶದಲ್ಲಿ ಧ್ವಜಾಂಗಣವಿದೆ. ಇದರ ನಡುವೆ, ನೂರಡಿ ಉನ್ನತವಾದ ಸ್ತಂಭದ ಮೇಲೆ ರಾಷ್ಟ್ರೀಯಧ್ವಜವು ಹಾರಾಡುತ್ತಿರುವುದು. ಪ್ರತಿದಿನವೂ ಬೆಳಿಗ್ಗೆ ಧ್ವಜವಂದನಾ ಸಮಾರಂಭವು ನಡೆಯುತ್ತಲಿದೆ. ಈ ಸಮಯದಲ್ಲಿ ಯಾವನಲ್ಲಿಯೂ ತನ್ನ ಧ್ವಜ, ತನ್ನ ದೇಶ ಎಂಬ ಅಭಿಮಾನವು ಉಕ್ಕಬಾರದಿರದು. ಮತ್ತೊಂದು ಕಡೆಯಲ್ಲಿ ವಿಷಯನಿಯಾಮಕ ಸಮಿತಿಯ ಚಪ್ಪರವಿದೆ. ಅದರ ಬಳಿಯಲ್ಲಿ, ನಾಲ್ಕೈದು ಪುಟ್ಟ ಹಳ್ಳಿಯ ಗುಡಿಸಲುಗಳಿವೆ— ಮಹಾತ್ಮಾಜಿ, ರಾಜೇಂದ್ರ ಪ್ರಸಾದ, ಅಬ್ದುಲ್ ಗಫರ್ ಖಾನ್ ಮತ್ತು ಸರದಾರ ವಲ್ಲಭಭಾಯಿ ಪಟೇಲರು. ಗಾಂಧಿಜಿಯವರ ಕೇರಿಯ ಬಳಿ, ಅವರಿಗೆ ಕಾವಲಿರುವ ಖಾನ್ ಅದೆ.

"ಎನೇ ಇರಲಿ, ಆಕರ್ಷಣವಿಶೇಷವೆಂದರೆ ಗಾಂಧಿಜಿಯವರೇ! ಅವರು ಕಾಂಗ್ರೆಸ್ಸಿನಿಂದ ನಿವೃತ್ತರಾಗುವರೆಂಬುದರಿಂದ ಅವರ ವರ್ಚಸ್ಸೇನೂ ಕಡಿಮೆಯಾದುದು ಇಲ್ಲ. ಒದಲಾಗಿ ಮತ್ತಷ್ಟು ಹೆಚ್ಚಿದೆ. ಅನೇಕರು ಬರುತ್ತಿರುವುದು ಈ ಮಹಾತ್ಮನ ದರ್ಶನಕ್ಕಾಗಿ. ವಿಠ್ಠಲ್ ಭಾಯಿ ಪಟೇಲರ ನೂರಡಿ ಪ್ರತಿಮೆ ಉದ್ಘಾಟನೆಯಂದು ಆಜಾದ್ ಮೈದಾನದಲ್ಲಿ ಪ್ರಚಂಡ ಸಭೆ ನೆರೆದಿತ್ತು. ಗಾಂಧಿಜಿಯವರ ಭಾಷಣವಾಗಿ ಅವರು ಹೋಗುತ್ತಲೇ ಸಭಿಕರಲ್ಲಿ ಹಲವರು ಸಭೆಯನ್ನು ತೊರೆದರು. ಜನಸಂದಣಿಯಿಂದ ಹೊರಗಿನವನೊಬ್ಬನನ್ನು "ನೀನು ಇಷ್ಟು ಬೇಗನೇ ಹೋಗುವುದೇಕೆ?" ಎಂದು ಪ್ರಶ್ನಿಸಲಾಗಿ

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸು ಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ	ಆ	ಪೈ	ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.	ರೂ	ಆ	ಪೈ
ನಾಲ್ಕನೇ ದರ್ಜೆ	0	6	0	ಐದನೇ ದರ್ಜೆ	0	3	0
ಮೂರನೇ ,,	0	4	6	ನಾಲ್ಕನೇ ಸಚಿತ್ರ	0	3	0
ಎರಡನೇ ,,	0	4	0	ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.			
ಸಿವಿಕ್ಸ್ ಮತ್ತು ನೀತಿಬೋಧೆ.							
ಐದನೇ ದರ್ಜೆ	0	3	0	ಎರಡನೇ ದರ್ಜೆ	0	3	6
ನಾಲ್ಕನೇ ,,	0	3	0	ಮೂರನೇ ,,	0	3	0
ಮೂರನೇ ,,	0	2	6	ನಾಲ್ಕನೇ ,,	0	3	0
ಎರಡನೇ ,,	0	2	0	ಐದನೇ ,,	0	4	0

ಅಜ್ಜಿ ಕಥೆಗಳು (ಸಚಿತ್ರ).

ಮೂರು ಕರಡಿಗಳು
ಹೇನು ಸತ್ತು ಕಾಗೆ ಬಡವಾಯಿತು
ಮೊಣಸಿನ ಕಾಳಪ್ಪ
ಅಗಸ ಮುದ್ದ
ಇಲಿಗಳ ಧಕ್ಕ ಷ್ಟೆ
ಅಂಗಳ ದುಗ್ಗ
ಗುಡುಗುಡು ಗುಮ್ಮಟ ದೇವರು
ಒಡ್ಡನ ಓಟ
(ಇವುಗಳ ಕ್ರಯ. 1ಕ್ಕೆ 0-0-9)

ಮತ್ತು

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸಮಾಜಶಾಸ್ತ್ರ' ಸಿದ್ಧವಾಗುತ್ತಿದೆ.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು/ ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

1935ರ ಡೈರಿಗಳು, ಎಲ್ಲಾ ಕೋರ್ಟು ಫಾರ್ಮುಗಳು, ಬೇಕೆಂದಾದರೆ

ಶಾರದಾ ಛಾಪಖಾನೆ, ಮಂಗಳೂರು.

ರಾಷ್ಟ್ರೀಯ ಸಭಾಧಿವೇಶನದ ಮುಕ್ತಾಯ.

NOTES
ನೋಟಗಳು.

ಶಾರದಾ ಮಸೂದೆಯನ್ನು ಅಳಿಸಬೇಕೆನ್ನುವ ಸಂಸ್ಥಾನದ ಪ್ರತಿನಿಧಿಯಾಗಿ ಎಸೆಂಬ್ಲಿ ಚುನಾವಣೆಗೆ ತನ್ನ ಉಮೇದ್ವಾರಿಕೆಯನ್ನು ಜ್ಯಾಹೀರು ಪಡಿಸಿದ ರಾವ್ಸಾಹೆಬ್ ರಾಜರಿಗೆ 'ಅರ್ಹ'ರಲ್ಲವೆಂಬಾಯಿತು. ಕಾರಣ, ಎಸೆಂಬ್ಲಿಗೆ ಇವರಿನ್ನೂ 'ಮೈನರ್'.

* * *

ಪ್ರಾಯ ಸಾಲದಿದ್ದರೇನಾಯಿತು? ಬುದ್ಧಿ ತೀಕ್ಷ್ಣತೆಯನ್ನೇನೂ ಇವರು ಸಾಲ ತರಬೇಕಾಗಿರಲಿಲ್ಲ. ಶ್ರೀಕೃಷ್ಣನೇನು ಅರುವತ್ತರ ಮುಂದಿಯವನಾದ ಮೇಲೆ ಧರ್ಮರಕ್ಷಣೆಗೆ ಹೊರಟವನೇ?

* * *

ಇರಲಿ. '.. ಸಂಭವಾಮಿ ಯುಗೇ ಯುಗೇ' ಎಂಬಂತೆ, ಪುನಃ ಪುನಃ ಮುಂದೆ, ಚುನಾವಣೆಗೆ ನಿಂತರಾಯಿತು. ಮುಂದೆ ಎಂದಾದರೊಮ್ಮೆ ಪ್ರಾಯ ತುಂಬದೆ ಇರಲಾರದು. ಆದರೆ, ಮೊದಲೇ ಜೀವವಿಲ್ಲದೆ ಬಿದ್ದುಕೊಂಡ ಮಸೂದೆಯ ಮೇಲೇಕೆ ಇವರಿಗೆ ಪರಾಕ್ರಮ ತೋರಿಸುವ ತವಕ?

* * *

'ಬೆರಳು ತೋರಿಸಿದರೆ ಕೈ ನುಂಗಿದ' ಎಂಬ ಗಾದೆಯು ಸುಳ್ಳಲ್ಲ. ಕಂಡಿಯ ಸಿಂಹಾಸನವನ್ನು ಬ್ರಿಟಿಷರು ಸಿಲೋನಿನವರಿಗೆ ಮರಳಿ ಕೊಟ್ಟರೆಂದು—ಆಫ್ರಿಕದ ಮೂಲನಿವಾಸಿಗಳ ಒಂದು ತಂಗಡವು, ಅರ್ಧ ಶತಮಾನದ ಹಿಂದೆ ದಂಗೆಯೆದ್ದು, ಬ್ರಿಟಿಷರ ಕೈಯಲ್ಲಿ ಮಡಿದ ತಮ್ಮ ಮಾಜಿ ವೀರನೊಬ್ಬನ (ಅರಸು) ರುಂಡವನ್ನು ಕೇಳಿರುವರಂತೆ!

* * *

ಇನ್ನು, 'ಕೊಹಿನೂರ'ನ್ನೂ ಮಯೂರ ಸಿಂಹಾಸನವನ್ನೂ ಕೇಳುವ ಹುಚ್ಚರು ಹುಟ್ಟಬಾರರಷ್ಟೆ?

* * *

ಮದರಾಸು ಸರಕಾರಕ್ಕೆ ನಮ್ಮ ಜಿಲ್ಲೆಯಿಂದ ತಲುಪಿದ 'ಸ್ಕೀಮ್ ರಿಪೋರ್ಟಿನ ಆಕ್ಷೇಪಣೆಗಳು' ಸಂಬಂಧಪಟ್ಟ ಆಫೀಸರರು ಇನ್ನು ಕೆಲವು ವರ್ಷಗಳಿಗೆ ಓದಿ ಮುಗಿಸದಷ್ಟಾಯಿತೋ ಎಂದು ಸಂದೇಹ.

* * *

ಈ ನಡುವೆ, 'ಈ ವರ್ಷದ ಬೆಳೆ ಚೆನ್ನಾಗಿದ್ದರೂ ಹೊಟ್ಟು ಭತ್ತವೂ ಇಲ್ಲದಿಲ್ಲ' ಎಂದು ಒಬ್ಬ ಬಾಕ್ಕಿದಾರರ ಅಭಿಪ್ರಾಯ. ಆಕ್ಷೇಪಣೆಗಳನ್ನು ಮುದ್ರಿಸಿ ಕಳುಹುವ ಬದಲಾಗಿ ಆ ಹೊಟ್ಟು ಭತ್ತವನ್ನು ಕಳುಹಿಸಿದರೆ, ಆಕ್ಷೇಪಣೆಗಳನ್ನು ಬರೆವ ಶ್ರಮವೂ, ಮುದ್ರಿಸುವ ಹಣ ಕಾಸೂ ಉಳಿಯುತ್ತಿತ್ತಲ್ಲ! (ಸರಕಾರದವರಿಗೂ ಓದುವ ಶ್ರಮ ಕೊಡದಂತಾಗಬಹುದಿತ್ತೆಂಬುದೂ ಅಹುದು)

* * *

ಪಡುಬಿದರೆಯಲ್ಲಿ 'ನಗರಭಜನೆ'ಯಾರಂಭವಾಗಿದೆ. ಸಮಾಜದ ಗುರುವರ್ಯರ ಮತ್ತು ದೇವರ ಪಟಗಳ ಕೆಳಗೆ ಮಹಾತ್ಮಾ ಗಾಂಧಿಯವರ ಪಟವನ್ನೂ ಓರ್ವ ಮಹನೀಯರು ಇರಿಸಿದರೆಂದು 'ಗಾಂಧಿ' ಎಂಬ ಹೆಸರನ್ನುಚ್ಚರಿಸಲಾರದವರೊಬ್ಬರು ಆಕ್ಷೇಪಿಸಿ, ಕೋಪಿಸಿ, ಜರಿದು, ನಿಂದಿಸಿ, ಅಂದಿನ ತಮ್ಮ 'ಭಜನೆ'ಯನ್ನು ಆ ರೀತಿ ಮುಗಿಸಿದರೆಂದೊಂದು ವಾರ್ತೆ

* * *

ಮುಖಂಡ ಮಹನೀಯರ ಪಟಗಳನ್ನು ನೋಡಿದ ಮಾತ್ರದಿಂದ, ರೋಮೋನ್ಮತ್ತರಾಗಿ—ಬಲವಾಗಿ ಕುಣಿವವರಿದ್ದರೆ, ಬೇಸಾಯಾರಂಭದ ಸಮಯದಲ್ಲಿ ಹೊಲಗಳಲ್ಲಿ ನಾಲ್ಕೈದು ಪಟಗಳನ್ನು ಇರಿಸಿ, ಗದ್ದೆ ಉಳುವ ಶ್ರಮವನ್ನು ಉಳಿಸಬಹುದೆಂದು,—ಆರ್ಥಿಕ ಸಂಕಷ್ಟದ ಈ ಕಾಲದಲ್ಲಿ ರೈತರಿಗೆ ಹೇಳಿಕೊಟ್ಟಂತಾಯಿತು, ಅಷ್ಟೆ.

* * *

ಮಹಾತ್ಮರು ಪಟಗಳಲ್ಲಿ ಅಡಗಿಯೂ ದೇಶಸೇವೆ ಮಾಡುವರೇ?

ಕೊನೆಯ ದೃಶ್ಯಗಳು.

ಮುಂಬಯಿ, ತಾ. ೩೮

—ಇಂದು ರಾಷ್ಟ್ರೀಯ ಸಭಾಧಿವೇಶನದ ಕೊನೆಯ ದಿನ. ಪ್ರೇಕ್ಷಕರು ಕೊಂಗ್ರೆಸ್ ನಗರದಲ್ಲಿ ಕಿಕ್ಕಿರಿದು ಕೂಡಿದ್ದರು. ಸಭಾಭವನದಲ್ಲಿ ೮೦ ಸಾವಿರ ಪ್ರೇಕ್ಷಕರಿದ್ದರೆಂದು ಅಂದಾಜು ಮಾಡಲಾಗಿದೆ.

ಕೊಂಗ್ರೆಸ್ಸಿನಿಂದ ನಿವೃತ್ತರಾಗಲಿರುವ ಮಹಾತ್ಮಾಜಿಯವರನ್ನು ನೋಡುವ ಉತ್ಸಾಹವೇ ಎಲ್ಲರಲ್ಲಿ! ಅವರು ಸಭಾಂಗಣವನ್ನು ಪ್ರವೇಶಿಸಿದಾಗ ಸಭೆಯು ಎದ್ದು ನಿಂತು ಪೂಜ್ಯಭಾವ—ಗೌರವಗಳನ್ನು ಪ್ರದರ್ಶಿಸಿತು.

ಕೊನೆಯ ದಿನವೆಂದೇ ಅಪರಾಹ್ನ ಎರಡು ಘಂಟೆಯಿಂದಲೂ ಜನರು ತಂಡೋಪತಂಡವಾಗಿ ಬಂದು ನೆರೆಯಲಾರಂಭಿಸಿದ್ದರು. ಸಾಯಂಕಾಲ ಘಂಟೆ ೬ಕ್ಕೆ ಸರಿಯಾಗಿ ಕಾರ್ಯಾರಂಭವಾಯಿತು.

ಠರಾವುಗಳು

ಗಾಂಧಿಜಿಯವರು ಸೂಚಿಸಿದ ತಿದ್ದುಪಡಿಗಳು, ಪುನರ್ವಿಚಾರಕ್ಕಾಗಿ ಒಂದು ವಿಶೇಷ ಸಮಿತಿಗೆ ಒಪ್ಪಿಸಲಾಗಿದ್ದವು. ಆ ಸಮಿತಿಯ ವರದಿಯಂತೆ ಆ ಠರಾವುಗಳೆಲ್ಲ ಬಹುಮತದಿಂದ ಮಂಜೂರಾದುವು. (೧) "ನ್ಯಾಯವಾದ ಮತ್ತು ಶಾಂತವಾದ" ಎಂಬುದರ ಬದಲಿಗೆ "ಸತ್ಯಯುಕ್ತ ಹಾಗೂ ಅಹಿಂಸಾಬದ್ಧ" ಎಂದು ತಿದ್ದಿಕೊಳ್ಳುವುದು (೨) ಡೆಲಿಗೇಟರುಗಳ ಸಂಖ್ಯೆಯನ್ನು ೨೦೦೦ ಎಂದು ನಿರ್ಣಯಿಸುವುದು (೩) ಅಖಿಲಭಾರತ ಗ್ರಾಮಕೈಗಾರಿಕಾ ಸಂಘದ ಸ್ಥಾಪನೆ (೪) ಪ್ರದರ್ಶನಗಳನ್ನು ಅಖಿಲಭಾರತ ಚರಕಾ ಸಂಘದವರೂ ಅ. ಭಾ. ಗ್ರಾಮ ಕೈಗಾರಿಕಾ ಸಂಘದವರೂ ಜರಗಿಸುವುದು (೫) ಕೊಂಗ್ರೆಸ್ ಕಮಿಟಿ ಮೆಂಬರರೂ ಇತರ ಅಧಿಕಾರಿಗಳೂ ಖಾದಿ ಧರಿಸಬೇಕು. (೬) ನೂಲಿನ ಸದಸ್ಯತನವು ಜ್ಯಾರಿಗೆ ತರಲ್ಪಡುವುದು. (ಇವು ಗಾಂಧಿಜಿಯವರು, ಕೊಂಗ್ರೆಸ್ಸಿನಲ್ಲಾಗಬೇಕಾದ ಬದಲಾವಣೆಗಳನ್ನು ಸೂಚಿಸಿದ ಠರಾವುಗಳು)

ಇತರ ಠರಾವುಗಳು.

(೧) ಗಾಂಧಿಜಿಯವರು ನಿವೃತ್ತರಾಗಲಿರುವ ದೆಸೆಯಿಂದ, ಅವರ ಹಿಂದಣ ಸೇವೆಯನ್ನೂ ಕೃತಜ್ಞತೆಯನ್ನೂ ಈ ಸಭೆಯು ಸ್ಮರಿಸಿ, ಮುಂದೆ ಅವಶ್ಯವಿದ್ದಾಗ ಅವರು ಕೊಂಗ್ರೆಸ್ಸಿಗೆ ತನ್ನ ಸಲಹಾಲೋಚನೆಯನ್ನೂ ಸೇವೆಯನ್ನೂ ಅರ್ಪಿಸುವರೆಂಬ ಆಶ್ವಾಸನೆಯನ್ನು ತೃಪ್ತಿಯಿಂದ ಅಂಗೀಕರಿಸುತ್ತದೆ. (೨) ಸಂಸ್ಥಾನಗಳೊಳಗಣ ಆಡಳಿತದ ವಿಚಾರದಲ್ಲಿ ಕೊಂಗ್ರೆಸ್ಸು ಕೈಹಾಕುವುದಿಲ್ಲ. ಆದರೂ, ಹಿಂದೂದೇಶವೆಲ್ಲ ವಿಭಜಿಸಲಾರದ ಒಂದು ಅಖಂಡ ದೇಶವೆಂಬುದಾಗಿಯೂ ಗ್ರಹಿಸಿ, ಇಂಡಿಯದಲ್ಲಿನ ಕೆಲ ಭಾಗಗಳಲ್ಲಿನ ಜನರನ್ನು ಸಂಸ್ಥಾನಾಧೀಶರು ವಿದೇಶಿಯರೆಂದು ಕಾಣುತ್ತಿರುವುದಕ್ಕಾಗಿ ವಿಷಾದಿಸಿ, ಸಂಸ್ಥಾನಾಧೀಶರು ತಮ್ಮ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರಗಳನ್ನು ಸ್ಥಾಪಿಸಬೇಕಾಗಿ ಕೇಳಿಕೊಳ್ಳುತ್ತದೆ.

ಗಾಂಧಿಜಿಯವರು ತಮ್ಮ ಸೂಚನೆಗಳನ್ನು ವಿವರಿಸಿ ವಿಸ್ತಾರಪೂರ್ಣ ಭಾಷಣಮಾಡಿರುವರು.

ಇದೇ ಒಕ್ಟೋಬರ ತಾ. ೨೮ನೇ ಮಧ್ಯರಾತ್ರಿಯಿಂದ ಗಾಂಧಿಜಿಯವರ ಕೊಂಗ್ರೆಸ್ ಮೆಂಬರಿಕೆಯು ರದ್ದಾಯಿತು.

ಅವರ ಕೊನೆಯ ಸಂದೇಶ.

"ಹಿಂಸೆಯಿಂದ ದೊರಕಿಸಿಕೊಳ್ಳುವ ಸ್ವರಾಜ್ಯವನ್ನು ನಾನು ಅಂಗೀಕರಿಸೆನು. ಭವಿಷ್ಯವು ಹಿಂದೂದೇಶದ ಕೈಯಲ್ಲಿದೆ. ದೇಶದ ಆಶಯಗಳೇ ನನ್ನ ಆಶಯ. ನಾನು ಗ್ರಾಮಸಂಘಟನೆಯ ಮೂಲಕ ಬ್ರಿಟಿಷ್ ಸರಕಾರದಿಂದ ಸ್ವರಾಜ್ಯವನ್ನು ಜಯಿಸಿ ಪಡೆಯಲು ತೆರಳುವೆನು."

ಅಧ್ಯಕ್ಷರ ಮುಕ್ತಾಯ ಭಾಷಣ.

"ನಿಮ್ಮ ಮುಂದಿರುವ ಜಲಧಿಯನ್ನು ಸಾಕ್ಷಿಯಾಗಿಟ್ಟು, ನೀವು ನಿರ್ಧರಿಸಿರುವ ಕಾರ್ಯವೆಲ್ಲವನ್ನು ಪೂರೈಸುವೆವೆಂಬ ಶಪಥಮಾಡಿಕೊಳ್ಳಿರಿ. ಕಳೆದ ಅರ್ಧ ಶತಮಾನದಿಂದ ನಿಮ್ಮ ಆತ್ಮತ್ಯಾಗದಿಂದ ನಿಮ್ಮ ರುಧಿರದಿಂದ ನಿಮ್ಮ ಶ್ರಮದಿಂದ, ನಿಮ್ಮ ಯತ್ನಗಳಿಂದ ಈ ಮಹಾ ರಾಜಕೀಯ ಸಂಸ್ಥೆಯನ್ನು ನಿರ್ಮಿಸಿರುವಿರಿ. ಸರಕಾರವು ಏನೂ ಹೇಳಲಿ, ಪ್ರಚಾರಕರು ಬೇಕಾದಂತೆ ನುಡಿಯಲಿ, ವಿದೇಶಿಯರು ಮನಬಂದಂತೆ ಆಡಲಿ. ಪರಂತು ಹಿಂದೂಸ್ಥಾನದ ಹೃದಯವು ಕೊಂಗ್ರೆಸ್ಸಿನೊಂದಿಗಿದೆ. ಕೊಂಗ್ರೆಸ್ಸು ಪಾರ್ಲಿಮೆಂಟರಿ ಬೋರ್ಡಿನ ಕಾರ್ಯಕ್ರಮವನ್ನು ಅನುಮೋದಿಸಿದೆ. ವೋಟು ಇದ್ದವರು ಅದನ್ನು ಕೊಂಗ್ರೆಸ್ ಉಮೇದ್ವಾರರಿಗೆ ಕೊಡಿರಿ, ಇಲ್ಲದವರು, ಇದ್ದ ತಮ್ಮ ಸ್ನೇಹಿತರನ್ನು ಕೊಂಗ್ರೆಸ್ ಉಮೇದ್ವಾರರ ಕಡೆಗೊಲಿಸಿರಿ. ಗಾಂಧಿಜಿಯವರು ಕೊಂಗ್ರೆಸ್ಸಿನ ರಚನಾಂಗವನ್ನು ತಿದ್ದುವ ಸಲಹೆ ಕೊಟ್ಟಿರುವರು. ಅದನ್ನು ಪಾಲಿಸಿ ಯಶಸ್ಸು ತರುವ ನಿರ್ಧಾರದಿಂದ ಮನೆಗೆ ತೆರಳಿರಿ."

೨೮ ನೇ ಮಧ್ಯರಾತ್ರಿಯು ಕಳೆದ ಕುಸು ಹೊತ್ತಿನಲ್ಲಿ "ವಂದೇ ಮಾತರಂ" ಗೀತೆಯಾಗಿ, ಕೊಂಗ್ರೆಸ್ ಅಧಿವೇಶನವು ಮುಕ್ತಾಯ ಹೊಂದಿತು.

ಮದ್ರಾಸಿನ ಹೊಸ ಗವರ್ನರರು.

ಲೋರ್ಡ್ ಎರ್ಸ್ಕಿನ್‌ರವರು ತಮ್ಮ ಧರ್ಮಪತ್ನಿ ಹಾಗೂ ಕಿರಿಯ ಮಗುವಿನೊಂದಿಗೆ, ಇದೇ ತಾ ೨೭ ರಲ್ಲಿ ಲಂಡನಿನಿಂದ ಹಿಂದೂದೇಶಕ್ಕೆ ಹೊರಟಿರುವರು, ಇಲ್ಲಿಗೆ ಬಂದು ತಕ್ಷಣವೇ ಗವರ್ನರರಾಗಿ ಚಾರ್ಜು ವಹಿಸಿಕೊಳ್ಳುವರು.

ಈ ವರ್ಷದ ಶಾಂತಿಯ ನೊಬೆಲ್ ಬಹುಮಾನ.

ಇದನ್ನು, ಮಹಾತ್ಮಾಜಿಯವರಿಗೇ ಕೊಡಬಹುದೆಂಬೊಂದು ಸುದ್ದಿಯ ಸುಳಿವು ಅಮೇರಿಕದಿಂದ ತಿಳಿದುಬಂದಿದೆ. ಆದರೂ, ನಿಶ್ಚಯವಿಲ್ಲ.

ಸಂಕ್ಷೇಪವಾರ್ತೆ.

ರುಮೇನಿಯಾ ರಾಜಪುತ್ರರು ಎಥೆನ್ಸ್ ನಗರದಲ್ಲಿ, ತನ್ನ ಸ್ನೇಹಿತರ ಮುಂದೆ ವಿನೋದಕ್ಕಾಗಿ ಮಹಡಿಯ ಕಿಟಿಕಿ ಹಿಡಿದು ಕಸರತ್ತು ಮಾಡುತ್ತಿದ್ದಾಗ ಕೆಳಗೆ ಬಿದ್ದು ಮಡಿದರು.

ಅಲ್ಲಹಾಬಾದಿನ ಮಾಘಮೇಳ ಎಂಬ ಪ್ರಸಿದ್ಧ ಉತ್ಸವದ ಸಮಯದಲ್ಲಿ ಪ್ರಪಂಚದ ಸಾವಿರಾರು ಬಗೆಯ ಪತ್ರಿಕೆಗಳ ಒಂದು ಪ್ರದರ್ಶನವನ್ನು ಏರ್ಪಡಿಸುವರು.

ಪ್ರಾಂತ್ಯದೊಳಗಿನ ರಹಿತರ ಸಾಲಮಾಲೆಗಳ ಮಾಹಿತಿ ಪಡೆಯಲು ಮದರಾಸು ಸರಕಾರದವರು ಒಬ್ಬ ಸ್ಪೆಶಲ್ ಆಫೀಸರರನ್ನು ನೇಮಿಸುವ ನಿರ್ಧಾರ ಮಾಡುವರೆಂದು ತಿಳಿದುಬಂದಿದೆ.

ಸಿಲೋನಿನಲ್ಲಿ ರೈಲ್ವೇ ಆಯವು ಹೆಚ್ಚುತ್ತಿರುವ ಅಂಕೆ ಸಂಖ್ಯೆಗಳು ಪ್ರಕಟವಾಗಿವೆ.

ಕಳೆದ ತಿಂಗಳ ಸ್ಪೈನ್ ಗಲಭೆಗಳಲ್ಲಿ ೨೮೮ ಮಂದಿ ಸರಕಾರೀ ಸೈನಿಕರು ಮಡಿದಿರುವರೆಂದು ಎಣಿಕೆಯಾಗಿದೆ.

ಸಾರ್ವಭೌಮರ ಆಳ್ವಿಕೆಯ ರಜತೋತ್ಸವವು ಬರುವ ಮೇ ತಿಂಗಳಲ್ಲಿ ಜರಗುವ ಸಂದರ್ಭದಲ್ಲಿ, ಇಂಡಿಯಾ ಸರಕಾರದವರು, ಆ ಉತ್ಸವದ ಸ್ಮರಣಾರ್ಥ ಕೆಲವು ಹೊಸ ಅಂಚೆಚೀಟುಗಳನ್ನು ಹೊರಡಿಸುವರಾಗಿ ತಿಳಿದುಬಂದಿದೆ.

ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರರಿಗೆ ದಂತವ್ಯಾಧಿ. ಶಸ್ತ್ರಕ್ರಿಯೆ ಅಗತ್ಯವಿದೆಯಂತೆ.

ಪಂಡಿತ ಜವಾಹರಲಾಲರನ್ನು ನೈನಿತಾಲದಿಂದ ಅಲ್ಮೋರ ಜೈಲಿಗೆ ವರ್ಗಾಯಿಸಿರುವರು.

ಮದರಾಸಿನಲ್ಲಿಯೂ, ಪಶ್ಚಿಮ ಕರಾವಳಿಯಲ್ಲಿಯೂ ಈ ವಾರ ಚೆನ್ನಾಗಿ ಮಳೆ ಬಂದಿರುತ್ತದೆ.

ರಹಸ್ಯವಾಗಿ ಪರದೇಶಗಳಿಂದ ಶಸ್ತ್ರಾಸ್ತ್ರಗಳನ್ನು ತರಿಸುತ್ತಿದ್ದ ಕಲಕತ್ತೆಯ ಕೆಲವು ಮಂದಿಗಳನ್ನು, ಕಲ್ಕತ್ತಾ ನಗರದಿಂದ ೩೦ ವರ್ಷಗಳ ಅವಧಿಗೆ ಗಡೀಪಾರು ಮಾಡಿರುವರು.

ನೌಕಾ ಪರಿಷತ್ತು ಲಂಡನಿನಲ್ಲಿ ಸೇರಿದೆ. ಸಬ್‌ಮೆರಿನುಗಳು ರಕ್ಷಣೆಗಾಗಿ ಅವಶ್ಯವೆಂದು ಜಪಾನಿನವರ ಹಟ. ಅವು ಮಹಾ ಅಪಾಯಕಾರಿಗಳೆಂದು ಬ್ರಿಟಿಷರ ಹಟ. ಅವುಗಳ ಸಂಖ್ಯೆಯನ್ನು ಎಷ್ಟು ಇಳಿಸಬಹುದೆಂದು ಆಲೋಚನೆಯಾಗುತ್ತಿದೆ.

ಇಟಾರ್ಸಿಯಿಂದ ನಾಗಪುರಕ್ಕೆ ಬರುವ ರೈಲುಬಂಡಿಯನ್ನು ಕಂಬಿಗಳಿಂದುರುಳಿಸಲು, ಯಾರೋ ದುರಾತ್ಮರು ಕಳೆದ ವಾರ, ಒಂದು ಕಬ್ಬಿಣದ ತುಂಡನ್ನು ಕಂಬಿಗಳಲ್ಲಿರಿಸಿದುದು ಸುದೈವವಶಾತ್ ಪತ್ತೆಯಾಗಿ, ಅಪಘಾತ ತಪ್ಪಿತು.

ಶ್ರೀ। ಸ್ವಾಮಿವೆಂಕಟಾಚಲಂ ಚೆಟ್ಟಿಯವರು

ಮದರಾಸು ನಗರದಿಂದ ಶ್ರೀ। ರಾಮಸ್ವಾಮಿ ಮುದಲಿಯಾರರಿಗೆದುರಾಗಿ ಕೊಂಗ್ರೆಸ್ ಪಕ್ಷದಿಂದ ಎಸೆಂಬ್ಲಿ ಚುನಾವಣೆಗೆ ಉಮೇದ್ವಾರರು.



ಶ್ರೀ। ಕೆ ನಾಗೇಶ್ವರರಾವ್ ಪಂತಲು

ಆಂಧ್ರ ಕೊನ್ಸ್‌ಟಿಟ್ಯೂಯೆನ್ಸಿಯಿಂದ ಶ್ರೀ। ಆರ್ ಕೆ ಷಣ್ಮುಗಂ ಚೆಟ್ಟಿಯಾರರಿಗೆ (ಎಸೆಂಬ್ಲಿಯ ಈಗಿನ ಅಧ್ಯಕ್ಷರು) ಎದುರಾಗಿ ಎಸೆಂಬ್ಲಿ ಮೆಂಬರಿಕೆಗೆ ಕೊಂಗ್ರೆಸ್ ಪಕ್ಷದಿಂದ ಉಮೇದ್ವಾರರು

ಮಂಗಳೂರು.

"ಬರುವ ತಾ. 10-11-34ಕ್ಕೆ ನಡೆವ ಎಸೆಂಬ್ಲಿ ಚುನಾವಣೆಗೆ ಕಾಂಗ್ರೆಸ್ ಪ್ರತಿನಿಧಿಯಾದ ಶ್ರೀ ಸಾಮುವೇಲ್ ಆರೋನರ ಪರವಾಗಿ ಇದೇ ಜಿಲ್ಲೆಯಲ್ಲಿ ಕೆಲಸವು ಸುವ್ಯವಸ್ಥಿತ ರೀತಿಯಲ್ಲಿ ನಡೆಯುವುದು ತುಂಬಾ ಸಂತೋಷಕರವಾಗಿದೆ. ಕಾಂಗ್ರೆಸ್ಸಿಗೆ ದೇಶದ ಬೆಂಬಲವಿದ್ದದೆ ಎಂಬುದನ್ನು ಪರೀಕ್ಷೆ ಮಾಡುವ ಈ ಸಂದರ್ಭದಲ್ಲಿ ತನ್ನ ಕೈಲಾದ ಸಹಾಯವನ್ನು ಮಾಡುವುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯವಿದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇಲೆಕ್ಷನ್ ಸಮಿತಿಯ ಪರವಾಗಿ ಕೆಲಸಗಾರರು ಜಿಲ್ಲೆಯಲ್ಲಿ ಹಲವು ಸಾರಿ ಪ್ರವಾಸ ಮಾಡಿದರೂ ಅಸಂಖ್ಯಾತ ಕಾಂಗ್ರೆಸ್ ಕೆಲಸಗಾರರನ್ನು ಅಲ್ಲದೆ ಹಿತೈಷಿಗಳನ್ನು ಕಾಣುವುದು ಕಷ್ಟಸಾಧ್ಯ. ಕಾರಣ, ದೇಶದ ಗೌರವವನ್ನು ಕಾಪಾಡಬೇಕಾದ ಈ ಕಾರ್ಯದಲ್ಲಿ ಎಲ್ಲರೂ ಉತ್ಸಾಹಪೂರ್ಣ ಕೆಲಸ ಮಾಡಬೇಕಾಗಿ ವಿಜ್ಞಾಪನೆ" ಎಂದು ದೇಶಭಕ್ತ ಸದಾಶಿವ ರಾವ್ ಕಾರ್ನಾಡರವರು ತಿಳಿಸುತ್ತಾರೆ.

ಕುಂದಾಪುರ ಎಕ್ಸ್ಟೆಸ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಎಚ್. ನಾಗಪ್ಪ, ಬಿ. ಎ., ಇವರು ಉಡುಪಿ ಹೆಮ್ಮಕ್ಕಳ ಶಾಲೆಯ ಫಸ್ಟ್ ಅಸಿಸ್ಟೆಂಟ್ ಶ್ರೀಮತಿ ಎಮ್. ಚಂದ್ರಪ್ರಭಾ, ಬಿ. ಎ. ಎಲ್. ಟಿ. ಇವರನ್ನು ವಿವಾಹವಾಗಲಿರುವರು. ಇವರಿಬ್ಬರೂ ಮಂಗಳೂರಿನ ಬಿಲ್ಲವ ಸಮಾಜದ ಶ್ರೀಮಂತ ಕುಟುಂಬದವರಾಗಿರುವರು.

ಮಂಗಳೂರು ಮುನಿಸಿಪಾಲಿಟಿಯ ಕೊನೆಯ ಸಭೆಯು ಇದೇ ಕಳೆದ ತಾ. 22ರಲ್ಲಿ ಜರಗಿತು. ಮದರಾಸಿನ "ಠಾಕೂರ ಸಪ್ತಾಹ"ದ ಸಂಚಾಲಕರು, ಠಾಕೂರ ನಿಧಿಗೆ ಧನಸಹಾಯವನ್ನು ಕೋರಿ ಪತ್ರ ಬರೆದಿದ್ದರು. ಪ್ರಕೃತ ಧನಾಭಾವದ ಪರಿಸ್ಥಿತಿಯಲ್ಲಿ ಇದು ಸಾಧ್ಯವಿಲ್ಲವೆಂದು ನಿಶ್ಚಯಿಸಲಾಯಿತು. ಇನ್ನು ಹೊಸ ಮುನಿಸಿಪಲ್ ಚೆಯರ್ಮ್ಯಾನರ ಚುನಾವಣೆಯಾಗಿ, ಹೊಸ ಕೌನ್ಸಿಲಿನಲ್ಲಿ ಮುಂದಿನ ವಿಷಯಗಳು ಪರ್ಯಾಲೋಚಿಸಲಾಗುವುವು.

"ಶ್ರೀ ಕೃಷ್ಣ ಸಿನೆಮದಲ್ಲಿ ಇಂದಿನಿಂದ "ರ್‍ಯೂಇನ್ ಬುಡಪೆಸ್ಟ್" ಎಂಬ ಫೋಕ್ಸ್ ಕಂಪನಿಯವರ ಚಿತ್ರವು ಪ್ರದರ್ಶಿಸಲ್ಪಡುವುದು. ಲೊರೆಟಾ ಯಂಗ್ ಮೊದಲಾದ ಸುಪರಿಚಿತ ನಟರು ಇದರಲ್ಲಿ ಅಭಿನಯಿಸಿರುವರು. ತಾ. ೬ರಿಂದ ಇ. ಬಿಲ್ಲಿಮೋರಿಯಾ, ಮಾಧುರಿ, ಖಾನ್ ಪ್ಯಾರಿ, ಶಾಂತಿ, ಖಟೂನ್, ಹಾಸ್ಯಗಾರ ಘೋರಿ ಮೊದಲಾದ ಸುಪ್ರಸಿದ್ಧ ನಟಿ ನಟಿಯರ ಅಭಿನಯವಿರುವ ರೋಚಕ ಕಂಪೆನಿಯವರ "ವೀರ ಬಭ್ರುವಾಹನ" ಎಂಬ ಚಿತ್ರವನ್ನು ಪ್ರದರ್ಶಿಸಲಾಗುವುದು." ಎಂದು ಆಡಳಿತಗಾರರು ತಿಳಿಸುತ್ತಾರೆ.

ಈ ವಾರದಲ್ಲಿ ಕೊಂಚ ಮಳೆ ಬಂದಿದೆ.

"ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಉಡುಪಿ ಲಿಮಿಟೆಡ್, ಉಡುಪಿ" ಇದರ ಮತ್ತೊಂದು ಶಾಖೆಯು, ಬಂದರದಲ್ಲಿ, ಇದೇ ಬರುವ ತಾ. ೧೨ನೇ ದಿನ ತೆರೆಯಲ್ಪಡುವುದು.

ಗವರ್ನಮೆಂಟ್ ಕಾಲೇಜಿನ "ಕರ್ನಾಟಕ ಸಭಾ" ಇದರ ವಾರ್ಷಿಕೋತ್ಸವವು ಇದೇ ತಾ. ೪ನೇ ರವಿವಾರ ಸಾಯಂಕಾಲ, ಭಾಷಣ-ನಾಟಕಾದಿ ವಿನೋದಗಳ ಕಾರ್ಯಕ್ರಮಗಳಿಂದ ಜರಗುವುದು.

ಕೆನರಾ ಹೈಸ್ಕೂಲಿನ "ಸ್ಟುಡೆಂಟ್ಸ್ ಯೂನಿಯನ್" ಆಶ್ರಯದಲ್ಲಿ ಕಳೆದ ರವಿವಾರ, ಕೆನರಾ ಹೈಸ್ಕೂಲಿನಲ್ಲಿ ಇಂಗ್ಲಿಷ್ ಭಾಷಣ ಸ್ಪರ್ಧೆಯೊಂದು ಏರ್ಪಡಿಸಲಾಗಿತ್ತು. ವಕೀಲರಾದ ಶ್ರೀ ಟಿ. ಸೋಮಶೇಖರ ರಾಯರು ಅಧ್ಯಕ್ಷತನವನ್ನು ವಹಿಸಿದ್ದರು. ಸ್ಪರ್ಧೆಯಲ್ಲಿ ಅನೇಕ ವಕೀಲರು ಭಾಗವಹಿಸಿದ್ದು, ಸ್ಪರ್ಧೆಯು ಉತ್ಸಾಹಪೂರ್ಣವಾಗಿ ನಡೆಯಿತು.

ಇದೇ ಕಳೆದ ಬುಧವಾರ, ಶ್ರೀ ಕೃಷ್ಣ ಸಿನೆಮದವರು, "ಟೆನ್‌ಟೂರ್" ಚಿತ್ರದ ಅಂದಿನ ದ್ವಿತೀಯ ದೇಖಾವೆಯ ಉತ್ಪತ್ತಿಯನ್ನು ಸ್ಥಳೀಯ "ವೈ. ಎಮ್. ಸಿ. ಎ." ಸಹಾಯಾರ್ಥ ಕೊಟ್ಟರು. ಸುಮಾರು ೧೭೫ ರೂಪಾಯಿ ಹುಟ್ಟಿ ಬರಬಹುದೆಂದೆಣಿಸಲಾಗಿದೆ.

ಮಂಗಳೂರು ಸನ್ಯಾಸಿ ಗುಡ್ಡೆಯಲ್ಲಿರುವ ಆರ್ಯಸಮಾಜ ಮಂದಿರದಲ್ಲಿ ಇದೇ ತಿಂಗಳ ತಾ. ೬ಕ್ಕೆ ಮಂಗಳವಾರ ಸಾಯಂಕಾಲ ೪.೩೦ಕ್ಕೆ ಋಷಿ ದಯಾನಂದರ ನಿಧನೋತ್ಸವವು ರೆವರೆಂಡ್ ಇ. ಸುಬ್ಬಕೃಷ್ಣಯ್ಯ, ಎಮ್. ಎ., ಬಿ. ಎಸ್. ಸಿ., ಬಿ. ಡಿ. ಇವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಡುವುದು. ಈ ಸಮಾರಂಭದಲ್ಲಿ ಶ್ರೀಯುತ ಕೆ. ಲಕ್ಷ್ಮಣ ಬಿ. ಎ., ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿ ಮೊದಲಾದ ಮಹನೀಯರು ಭಾಷಣ ಮಾಡುವರು. ಸರ್ವರಿಗೂ ಸುಸ್ವಾಗತ.

ಗೌಡಸಾರಸ್ವತ ಬ್ರಾಹ್ಮಣ ಸಭಾ, ಮುಂಬಾಯಿ.

ಈ ಮೇಲಿನ ಸಂಘದ ಆಶ್ರಯದಲ್ಲಿ, ಮುಂಬಾಯಿಯಲ್ಲಿ, ಮುಜಫರಬಾದ್ ಹೋಲ್, ಗ್ರಾಂಟ್ ರೋಡ್ ಇಲ್ಲಿ, ಕಳೆದ ತಾ. ೧೭ನೇ ಬುಧವಾರ ಧ್ವಜಾ ಮಹೋತ್ಸವವು ಆಚರಿಸಲ್ಪಟ್ಟಿತು. ದಕ್ಷಿಣ ಕನ್ನಡ ಹಾಗೂ ಕೇರಳದ ಗೌಡ ಸಾರಸ್ವತ ಸ್ತ್ರೀಪುರುಷ-ಬಾಲಕರೆಲ್ಲ ಸೇರಿದ್ದರು. ಡಾ॥ ಎ. ಎಸ್. ಪೈಯವರು ಅಗ್ರಾಸನವನ್ನು ವಹಿಸಿದ್ದರು.

ಭಾರತ ಸೇವಾ ಮೇಳದವರಿಂದ ಪ್ರಾರ್ಥನಾ ಗೀತದೊಡನೆ ಸಮಾರಂಭವಾರಂಭವಾಯಿತು. ಗೌಡ ಸಾರಸ್ವತ ಬ್ರಾಹ್ಮಣ ಸಭೆಯ ಅಧ್ಯಕ್ಷರಾದ ಶ್ರೀ ಆರ್. ಕೆ. ಪ್ರಭುಗಳವರು, ಈ ಸಭೆಯ ಆಶ್ರಯದಲ್ಲಿ ಏರ್ಪಡಿಸಲ್ಪಟ್ಟ ಪ್ರಥಮದ ಈ ಸಮಾರಂಭದಲ್ಲಿ,—ಸ್ವಸಮಾಜದ ರಾಜಕೀಯ, ಆರ್ಥಿಕ-ಸಾಮಾಜಿಕ ಏಳ್ಗೆಗಾಗಿ ಏರ್ಪಟ್ಟ ಸಭೆಯ ಉದ್ದೇಶಗಳನ್ನೂ, ನಿಯಮಗಳನ್ನೂ ವಿವರಿಸಿ, ಸಕಲರೂ ಪ್ರಾಮಾಣಿಕವಾಗಿ ಸಹಾಯ ಮಾಡಬೇಕೆಂದೂ ಒಗ್ಗಟ್ಟಾಗಿ ಶ್ರಮಿಸಬೇಕೆಂದೂ ಹಿತಕಾರಕವಾದ ಭಾಷಣಮಾಡಿದರು.

ಅಧ್ಯಕ್ಷ ಮಹಾಶಯರು, ಸ್ವಸಮಾಜದ ಆಶಯಗಳೆಲ್ಲವೂ ಪೂರೈಸಲ್ಪಡಲು ಒಗ್ಗಟ್ಟು ಹೇಗೆ ಅವಶ್ಯಕವೋ ಹಾಗೆ, ಸ್ವತಸ್ಪೂರ್ತಿಕವಾದ ನಿಷ್ಕಾಮಸೇವೆಯೂ ಆಗತ್ಯವೆಂದೂ, ಸಮಾಜಬಂಧುಗಳೆಲ್ಲ ಸದಸ್ಯರಾಗಿ ಸೇರಿ ಸಂಸ್ಥೆಯನ್ನು ಪ್ರಬಲಗೊಳಿಸಬೇಕೆಂದೂ ಭಾಷಣ ಮಾಡಿದರು.

ಅಂದಿನ ಮುಖ್ಯ ಅತಿಥಿಗಳಾದ ಶ್ರೀ ಎ. ಉಪೇಂದ್ರ ಪೈಯವರು ಈ ಸಭೆಯನ್ನು ಏರ್ಪಡಿಸಿದ ಕಾರ್ಯವನ್ನು ಶ್ಲಾಘಿಸುತ್ತ, ಸಮಾಜದ ಕೇಂದ್ರ ಸಂಘಟನೆಯ ಆವಶ್ಯಕತೆಯನ್ನು ಕುರಿತ ಈ ಕಾಲದಲ್ಲಿ ಸಮಯೋಚಿತವಾಗಿ ಜನನಕ್ಕೆ ಬಂದ ಸಂಘವಿದನ್ನು ಜಾತಿಬಾಂಧವರು ಸರ್ವಪ್ರಕಾರದಿಂದಲೂ ಕೈಗೂಡಿಸಿ ನಡೆಸಬೇಕೆಂಬ ತನ್ನ ಭರವಸೆಯನ್ನು ವ್ಯಕ್ತಗೊಳಿಸಿ, ಗೌಡಸಾರಸ್ವತರು ದಕ್ಷಿಣ ಕನ್ನಡದಲ್ಲಿ ವಾಣಿಜ್ಯ ಹಾಗೂ ಕೈಗಾರಿಕೆಗಳ ಉನ್ನತಿಗೆ ಮೂಲಪುರುಷರೆಂದೂ, ಇತರ ಸಮಾಜಗಳ ಮೆಚ್ಚುಗೆಗೆ ಪಾತ್ರರಾದವರೆಂದೂ ನುಡಿದು, ಈ ಸಭೆಯ ವ್ಯವಸ್ಥಾಪಕರ ಶ್ರಮವನ್ನು ಕೊಂಡಾಡಿ, ಯಶಸ್ಸನ್ನು ಕೋರಿ ಸುದೀರ್ಘ ಉಪನ್ಯಾಸ ಮಾಡಿದರು.

ಅಧ್ಯಕ್ಷರಿಗೂ ಅತಿಥಿಗಳಿಗೂ ಧನ್ಯವಾದಗಳನ್ನರ್ಪಿಸಿದ ನಂತರ, ಫಲಾಹಾರವಾಗಿ, ಒಂದು ಸಿನೇಮಾ ದೇಖಾವೆಯ ನಂತರ, ಅಂದಿನ ಸಮಾರಂಭವು ಕೊನೆಗಂಡಿತು.

ತಾಲೂಕುಗಳಿಂದ.

ಉಡುಪಿ—"ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್, ಉಡುಪಿ ಲಿಮಿಟೆಡ್" ಈ ಸಂಸ್ಥೆಯು ದಿನೇ ದಿನೇ ತನ್ನ ವ್ಯವಹಾರಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತಿದ್ದು, ಸರ್ವ ಜನಾದರಣೀಯವಾಗಿ, ಸರ್ವಾನುಕೂಲವಾಗಿ ಅಭಿವೃದ್ಧಿ ಹೊಂದುತ್ತಿರುವುದು ಸಂತೋಷಕರ. ಬ್ಯಾಂಕಿನ ಈಗಿನ ಲೆಕ್ಕಗಳಂತೆ, ರಿಸರ್ವ್ ಇತ್ಯಾದಿ ನಿಧಿಗಳು ರೂ. ೨,೬೦,೯೫೭-೬-೮; ಸರಕಾರೀ ಪತ್ರಗಳ ಭದ್ರತೆಯಲ್ಲಿ ರೂ. ೬,೫೧,೫೫೯-೧೫-೧; ಇದೆ. ಠೇವಣಾತಿಗಳು ಹೆಚ್ಚುತ್ತಿದ್ದು, ಕಳೆದ ತಿಂಗಳಲ್ಲಿ ಆ ಅಂಕಸಂಖ್ಯೆಗಳು ರೂ. ೨೪,೧೩,೪೭೮-೪-೧೦ರಷ್ಟು ಏರಿತವನ್ನು ತೋರಿಸುವುದು ಈ ಬ್ಯಾಂಕಿನ ಮೇಲೆ ಜನರಿಗೆ ಹೆಚ್ಚುತ್ತಲಿರುವ ವಿಶ್ವಾಸ-ಆದರಗಳನ್ನು ವ್ಯಕ್ತಪಡಿಸುತ್ತವೆ. ಬ್ಯಾಂಕು ಉಡುಪಿಯಲ್ಲದೆ, ಮಂಗಳೂರು, ಕುಂದಾಪುರ, ಮದರಾಸು, ಶಿವಮೊಗ್ಗೆಗಳಲ್ಲಿಯೂ ತನ್ನ ಶಾಖೆಗಳನ್ನು ತೆರೆದಿರುವುದು. ಇದು 'ಸಾರ್ವಜನಿಕ' (Cosmopolitan) ದೃಷ್ಟಿಯಿಂದ ಜೋಡಿಸಿದ ನಮ್ಮ ಜಿಲ್ಲೆಯ ಪ್ರಥಮದ ಬ್ಯಾಂಕ್ ಆಗಿರುವುದು.

ಬಸರೂರು—ಇಲ್ಲಿಯ ಹಿಂದೂ ಏಡೆಡ್ ಹಾ. ಎ. ಶಾಲೆಯಿಂದ VI, VII ಮತ್ತು VIII ನೇ ತರಗತಿಯ ವಿದ್ಯಾರ್ಥಿಗಳೂ ಕೆಲವು ಉಪಾಧ್ಯಾಯರೂ ಇದೇ ಕಳೆದ ತಾ. ೧೯ರಲ್ಲಿ, ಕೊಲ್ಲೂರು ಕ್ಷೇತ್ರಕ್ಕೆ ವಿಹಾರಾರ್ಥ ಕಾಲ್ನಡೆಯಾಗಿಯೇ ತೆರಳಿದ್ದರು. ರಾತ್ರಿ ವಂಡ್ಸೆಗೆ ತಲುಪಿ, ಅಲ್ಲಿ ನಿಂತು, ಮರುದಿನ ಮುಂಜಾನೆ ಕೊಲ್ಲೂರಿಗೆ ಮುಂದರಿದು, ಪೂರ್ವಾಹ್ನ ೧೧ಕ್ಕೆ ತಲುಪಿ, ಅಲ್ಲಿ ಒಂದು ದಿನ ಉಳಕೊಂಡು ಮರುದಿನ ಹೊರಟು ಬಂದರು.

ಉದ್ಯಾವರ—ಇಲ್ಲಿಯ ರಾಷ್ಟ್ರೀಯ ವಾಚನ ಮಂದಿರದ ಪ್ರಥಮ ವಾರ್ಷಿಕೋತ್ಸವವು, ಇದೇ ಕಳೆದ ತಾ. ೧೭ರಲ್ಲಿ, ಶ್ರೀ ಕೊಟ್ಟಾರ ನರಸಿಂಹ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ವರದಿ ವಾಚನ, ಶ್ರೀ ಕಟೀಲ ಗಣಪತಿ ಶರ್ಮ, ವೆಂಕಟೇಶ್, ಬಿ.ಎ., ರಾಮಚಂದ್ರಾಚಾರ್, ಬಿ.ಎ., ಕೆ. ಸಾಧುರಾಯಶೆಟ್ಟಿ ಮೊದಲಾದವರ ಭಾಷಣಗಳಾದ ನಂತರ ಅಧ್ಯಕ್ಷ ಮಹಾಶಯರು ತಮ್ಮ ಅನುಭವಸಿದ್ಧವಾದ ಕೆಲವು ಪ್ರಾಮುಖ್ಯ ಸೂಚನೆಗಳನ್ನಿತ್ತು ಸುವಿಚಾರಯುಕ್ತ ದೀರ್ಘ ಭಾಷಣ ಮಾಡಿ, ಪುಸ್ತಕ ಭಂಡಾರವನ್ನು ತೆರೆದರು. ಅನಂತರ, ಸಭಿಕರಿಗೆ ಧನ್ಯವಾದ ಸಮರ್ಪಣೆಯಾಗಿ ಅಂದಿನ ಸಮಾರಂಭವು ಕೊನೆಗಂಡಿತು.

ಕಿನ್ನಿಮೂಲ್ಕಿ—ಇಲ್ಲಿನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವರ್ಷಾಂಪ್ರತಿ ಜರಗುತ್ತಿದ್ದ ಶಾರದಾ ಪೂಜೆಯು ಕಾರಣಾಂತರದಿಂದ ಕಳೆದ ವರ್ಷ ಜರಗಲಿಲ್ಲವಾದರೂ ಈ ವರ್ಷ ಊರ ಮಹನೀಯರೂ ವಿದ್ಯಾರ್ಥಿಗಳ ಮತ್ತು ಕೆಲವು ಉಪಾಧ್ಯಾಯರ ಪ್ರೋತ್ಸಾಹದಿಂದ ಇದೇ ತಿಂಗಳ ತಾರೀಕು ೧೮ನೇ ಗುರುವಾರ ಅಪರಾಹ್ನ ಘಂಟೆ ೩ಕ್ಕೆ ಸ್ಕೂಲ್ ಕಮಿಟಿ ಮೆಂಬರರಾದ ಶ್ರೀಯುತ ಪಣಿಕರ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ಜರಗಿತು.

ಪಣಂಬೂರು—ಮೊದಲೇ ನಿಶ್ಚಯವಾದಂತೆ ತಾ. ೨೬-೧೦-'೩೪ನೇ ಶನಿವಾರ ರಾತ್ರಿ ಪಣಂಬೂರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ, ಅಂಗದ ಸಂಧಾನ ಯಕ್ಷಗಾನ ಸಮಾರಂಭವು ಶ್ರೀಮಾನ್ ಕೆ. ಆರ್. ಆಚಾರ್, ಎಮ್. ಎ., ಎಲ್. ಎಲ್. ಬಿ. ಇವರ ಅಧ್ಯಕ್ಷತೆಯಲ್ಲಿ ಬಹುವಿಜೃಂಭಣೆಯಿಂದ ಜರಗಿತು.

ಹರಿಹರ ಸಂಸ್ಕೃತ ಶಾಲಾ ಮತ್ತು ಸಂಘದ ಚತುರ್ಥ ವಾರ್ಷಿಕ ವರ್ಧಂತಿ ಮಹೋತ್ಸವ ಮತ್ತು ಸಾಹಿತ್ಯ ಸಭೆಯು ಇದೇ ಕಳೆದ ತಾ. ೧೮ ೧೦-೩೪ಕ್ಕೆ ಸದ್ರಿ ಶಾಲಾ ಕಟ್ಟಡದಲ್ಲಿ ಶ್ರೀ ಎಚ್. ದಾಮೋದರ ರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು.

ಸ್ಥಳೀಯ ಹರಿಹರ ಶಾಲೆಯಿಂದ ಎಮ್. ಆರ್. ಪಣಂಬೂರು ಮತ್ತು ಸಿ. ವಿ. ಐಗಳ್, ಇವರುಗಳ ಸಂಪಾದಕತ್ವದಲ್ಲಿ "ಬಾಲ ಸೂರ್ಯ" ಎಂಬ ಹಸ್ತಲಿಖಿತ ದ್ವೈಮಾಸಿಕ ಪತ್ರಿಕೆಯ ಪ್ರಥಮ ಸಂಚಿಕೆಯು ಇದೇ ಕಳೆದ ವಿಜಯ ದಶಮಿ ದಿನ ಹೊರಬಿದ್ದಿರುವುದು.

ಹಾರಂಗಾಳ—"ಇಲ್ಲಿಯ ನಾಡವರ ಜಾತಿಯ ಜಾಣು ಶೆಟ್ಟಿ ಎಂಬವನು, ಬೇಳೂರು ಎಲ್ಲಪ್ಪ ಶೆಟ್ಟಿ ಎಂಬವರ ಒಂದು ದನವನ್ನು ಕದ್ದೊಯ್ದನೆಂಬ ಅಪವಾದನೆಯಲ್ಲಿ ಕೈದು ಮಾಡಲ್ಪಟ್ಟು ಉಡುಪಿಗೆ ಒಯ್ಯಲ್ಪಟ್ಟಿರುವನೆಂದು ತಿಳಿದುಬರುತ್ತದೆ. ಹಿಲಿಯಾರ್ ಗ್ರಾಮದಲ್ಲಿಯೂ ಒಂದು ದನದ ಕಳವಾಗಿದ್ದು, ಆ ದನವು ಜಾಣು ಶೆಟ್ಟಿಯ ಮನೆಯಲ್ಲಿ ದೊರೆಯಿತೆಂದು ಕೇಳುತ್ತೇನೆ" ಎಂದು ಬಾತ್ಮೀದಾರರೊಬ್ಬರು ಬರೆಯುತ್ತಾರೆ.

ಇಂದಿನ ಸುದ್ದಿ.

ಕೋಂಗ್ರೆಸ್ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರವರು, ಉಬ್ಬಸವು ಕಡಿಮೆಯಾಗಿ, ಕೊಂಚ ಅಸ್ವಸ್ಥವಾಗಿರುವರು. ಈ ದಿನ ಬೊಂಬಾಯಿಯಿಂದ ವಾರ್ಧಕ್ಕೆ ತೆರಳುವರು.

ಮಹಾತ್ಮಾ ಗಾಂಧಿಯವರು ಇದೇ ಕಳೆದ ಬುಧವಾರ ವಾರ್ಧಕ್ಕೆ ಹೊರಟುಹೋಗಿರುವರು.

ಸಿಂದಾಬಾಲ (ಗಾಂಧಿಜಿಯವರ ಆಂಗ್ಲ ಶಿಷ್ಯೆ)ಯವರು ಅಮೇರಿಕದ ಸಂಚಾರವನ್ನು ಮುಗಿಸಿ ಇಂಗ್ಲೆಂಡಿಗೆ ಹೊರಟರು. ಅಲ್ಲಿ ಐದು ದಿನ ಉಳಕೊಂಡು, ಹಿಂದೂದೇಶಕ್ಕೆ ಹೊರಡುವರು.

ಕೋಂಗ್ರೆಸ್ ಕಾರ್ಯಕಾರಿ ಕಮಿಟಿ.

ಶ್ರೀಯುತ ಬಾಬೂ ರಾಜೇಂದ್ರ ಪ್ರಸಾದರವರು ಈ ಕೆಳಗಿನ ಕಾರ್ಯಕಾರಿ ಸಮಿತಿಯನ್ನು ರಚಿಸಿರುವರು.

ಪಂಡಿತ ಜವಾಹರಲಾಲ; ಡಾ॥ ಸಯ್ಯದ್ ಮಹಮ್ಮದ್, ಆಚಾರ್ಯ ಕೃಪಾಲಾನಿ; ಸೇಟ್ ಜಮ್ನಾಲಾಲ್, ವಲ್ಲಭಭಾಯಿ; ಗಫರ್ ಖಾನ್, ಸರೋಜಿನಿ ನಾಯ್ಡು; ಸರದಾರ್ ಶಾರ್ದೂಲ ಸಿಂಘ್, ಡಾ. ಅನ್ಸಾರಿ; ಅಬ್ದುಲ್ ಕಲಾಂ ಆಜಾದ್; ಶ್ರೀ ಸಿ. ರಾಜಗೋಪಾಲಾಚಾರಿ; ಗಂಗಾಧರರಾವ್ ದೇಶಪಾಂಡೆ; ಪಟ್ಟಾಭಿ ಸೀತಾರಾಮಯ್ಯ; ಜೈರಾಮ್‌ದಾಸ್ ದೌಲತರಾಮ್.

ಬೇಕಾಗಿದೆ.

ಆರು ಯಾ ಏಳು ಸ್ತ್ರೀ ವಿದ್ಯಾರ್ಥಿನಿಯರಿಗೆ ಖಾಸಗಿಯಿಂದ ಶಿಕ್ಷಣ ಕೊಡಲು ಮೆಟ್ರಿಕ್ ಯಾ 8ನೇ ತರಗತಿ ವರೆಗೆ ಕಲಿತ ಸಂಗೀತ ಮತ್ತು ಕಸೂತಿವಗೈರೆ ಅಭ್ಯಾಸವುಳ್ಳ ಬ್ರಾಹ್ಮಣ ಯಾ ಗೌಡಸಾರಸ್ವತ-ಸಾರಸ್ವತ ಹಿಂದೂ ಸಮಾಜದ ಯೋಗ್ಯ ಸ್ಥಿತಿಯ ಉಪಾಧ್ಯಾಯಿನಿಯು ಬೇಕಾಗಿದೆ. ವಸಾಹತಿ ಬಗ್ಗೆ ಯಾ ಹೆಚ್ಚಿನ ವಿವರದ ಬಗ್ಗೆ ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳಬಹುದು.

Addr ss—

M. Sheshagiri Rao,
Mananje, ZAMINDAR, Coondapur,
Post Shankernarayana.

ಅಥವಾ

A. Krishnaraya Kodgi,
Amavasebail, Dt. Board Member,
Post Shankaranarayana.

ಧ್ವಜವಂದನೆ.

[illegible]

[illegible] ... ಮುಂದಿನ ಸ್ಥಿತಿಯಲ್ಲಿ ಬರೆಯುತ್ತೇವೆ. (ಸಂ.-ಸ್ವ.)

ಅಜೆಕಾರಿಗೊಂದು ಹಾ. ಎ. ಶಾಲೆಯ ಅವಶ್ಯಕತೆ.

ಅಜೆಕಾರ ಮತ್ತು ಸೆರ್ಕಳಯ ಗ್ರಾಮಸ್ಥರು, ಅಜೆಕಾರಲ್ಲಿ ಬೋ. ಹಾ. ಎ. ಶಾಲೆಯ ಮೇಲಿನ ಮೂರು ತರಗತಿಗಳನ್ನು ತೆರೆಯಬೇಕಾಗಿ, ಡಿ. ಬೋರ್ಡಿಗೆ ಮನವಿ ಮಾಡಿರುವರು. ಸಾಧಾರಣವಾಗಿ ಅಜೆಕಾರು ಈ ಮೂರು ಪ್ರಾಂತ್ಯದ ಗ್ರಾಮಗಳಿಗೆಲ್ಲ ದೊಡ್ಡದಾಗಿಯೂ ವಿಶಾಲವಾಗಿಯೂ ಇದ್ದು, ಜನನಿಬಿಡವಾದ ಪ್ರದೇಶವಾಗಿರುವುದು. ಇದು ಸುಮಾರು ಎರಡು ಯಾ ಮೂರು ಮೈಲು ದೂರದೊಳಗಿರುವ ಎಂಟು ಗ್ರಾಮಗಳಿಗೆ ಮಧ್ಯ ಸ್ಥಳವಾಗಿದ್ದು, ಹಲವು ವಿಧಗಳಿಂದ ಮುಂದೊತ್ತಿ ಬರುವ ಒಳ್ಳೇ ಕೇಂದ್ರವಾಗಿರುವುದು. ಇಲ್ಲಿಯ ಸ್ಥಿತಿಗತಿಗಳನ್ನು ವಿಮರ್ಶಿಸಿ ನೋಡಿದರೆ ಯಾವತ್ತೂ ಅಧೀಕಾರರಾಗಲೀ, ಯಾ ಯೋಗ್ಯ ಮಹನೀಯರಾಗಲೀ 'ಇಲ್ಲಿಗೆ ಒಂದು ಹಾಯರ್ ಎಲಿಮೆಂಟರಿ ಶಾಲೆಯು ಆಗತ್ಯ' ವೆಂಬ ಸಹಜಭಿಪ್ರಾಯಪಡುವರೆಂದರೆ ಹೆಚ್ಚುಗಳಿರದು. ಸ್ಥಳೀಯ ವಿದ್ಯಾದಾನಗಳು ಹೀಗಿರುತ್ತಾ, ಈ ಪ್ರಾಂತ್ಯದಲ್ಲಿ ಬೇರೆ ಯಾವ ಹಾ. ಎ. ಶಾಲೆಯೂ ಇಲ್ಲದೆ, ಬಡ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಜನೆಯನ್ನು ಅಪೂರ್ಣವಾಗಿಯೇ (ಅಂದರೆ ೫ನೇ ತರಗತಿಯ ವರೆಗೆ ಮಾತ್ರ) ಬಿಡಬೇಕಾಗಿರುವ ಪ್ರಸಂಗವು ಹಲವು ಕಾಲದಿಂದಿರುವುದು ಗ್ರಾಮಸ್ಥರಾದ ನಮ್ಮ ದೌರ್ಭಾಗ್ಯವೇ ಸರಿ! ಈ ಅಭಾವವನ್ನು ತೊಲಗಿಸಬೇಕಾಗಿ ನಾವು ಸಂಬಂಧಪಟ್ಟವರಲ್ಲಿ ಸವೇ ಸದೇ ವಿಜ್ಞಾಪಿಸಿಕೊಂಡಿದ್ದೆವು. ಇದರ ಫಲಿತಾಂಶವಾಗಿ ಈಗ ನಾಮಶೇಷವಾಗಿರುವ ಕಾರ್ಕಳ ತಾಲೂಕು ಬೋರ್ಡಿನವರು "ಆಗತ್ಯವಿರುವ ಕಟ್ಟೋಣವನ್ನು ಕಟ್ಟಿಸಿ ಕೊಟ್ಟಲ್ಲಿ ಹಾ. ಎ. ಶಾಲೆಯನ್ನು ತೆರೆಯುವ ವಿಷಯ ಆಲೋಚಿಸುವೆವು" ಎಂದು ನಿರ್ಣಯಿಸಿ, ಡಿಸ್ ನಂ. 371/K T B/31ನೇ ಹುಕುಂ ದಯಪಾಲಿಸಿದ್ದರು. ಅಂದಿನಿಂದಲೂ ನಾವು ಕಟ್ಟೋಣದ ವಿಷಯ ಸದಾ ನಿರತರಾಗಿದ್ದು, ಈಗ ಸದ್ರಿ ಕಟ್ಟೋಣವನ್ನು ಡಿ. ಬೋರ್ಡಿಗೆ ೧೯೩೫ನೇ ಇಸವಿ ಮಾರ್ಚ ಅಂತ್ಯದೊಳಗೆ ಒಪ್ಪಿಸಿಕೊಡುವ ನಿರ್ಣಯ ಮಾಡಿರುವುದರಿಂದ, ವಿದ್ಯಾಭಿಮಾನಿಗಳೂ ಗ್ರಾಮಾಭ್ಯುದಯದ ಹಿತೈಷಿಗಳೂ ಜನಪ್ರಿಯರೂ ಆಗಿರುವ ಸನ್ಮಾನ್ಯ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ತಮ್ಮ ಕೃಪಾದೃಷ್ಟಿಯನ್ನು ಈ ಕಡೆಗೆ ಬೀರಿ ಹಲವು ವಿಧದಿಂದ ಅಭಿವೃದ್ಧಿ ಹೊಂದಲು ತುಂಬಾ ಅಸ್ಪದವಿರುವ ಅಜೆಕಾರಲ್ಲಿ ಆತ್ಯಗತ್ಯವಾದ ಹಾ. ಎ. ಶಾಲೆಯ ಮೇಲಿನ ಕ್ಲಾಸುಗಳನ್ನು ಶೀಘ್ರವಾಗಿ ಕ್ರಮೇಣ ತೆರೆದು, ವಿದ್ಯಾಪ್ರಸಾರವಾಗುವಂತೆ ನೆರವಾಗಬೇಕಾಗಿ ಪ್ರಾರ್ಥನೆ"

ಬಡ ಹಳ್ಳಿಯವ

ಬಂಟ್ವಾಳ ಲೋಕಲ್ ಫಂಡ್ ಆಸ್ಪತ್ರೆ

ಬಂಟ್ವಾಳದಲ್ಲಿರುವ ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಇತ್ತೀಚೆಗೆ ನಡೆದ ಒಂದು ವರ್ತಮಾನವನ್ನು ನಾನು ಕೇಳಿರುತ್ತೇನೆ. ಇದೇ ರೀತಿಯಲ್ಲಿ ಆಸ್ಪತ್ರೆಯ ಕೆಲಸವು ನಡೆಯುವುದಾದರೆ, ಬಡ ಜನರು ಮದ್ದು ಯಾ ಇತರ ಕೆಲಸಗಳಿಗೆ ಹೋಗುವುದೇ ಕಷ್ಟವಾಗಿರುವುದು. ಸುಮಾರು ೨೫ ದಿವಸಗಳ ಮುಂಚೆ ಒಬ್ಬ ಕುಲೀನ ಸ್ತ್ರೀಯು ತನ್ನ ಹಲ್ಲೊಂದನ್ನು ತೆಗೆಸುವರೆ ಆಸ್ಪತ್ರೆಗೆ ಹೋಗಿದ್ದಳಂತೆ. ಡಾಕ್ಟರ ಮಹಾಶಯರು ಕೆಲಸದ ಒತ್ತಾಯದಿಂದಲೋ ಯಾ ಇನ್ನಾವ ಕಾರಣದಿಂದಲೋ ಹಲ್ಲನ್ನು ತೆಗೆಯುವರೆ ವ್ರಣ ಮೊದಲಾದುವುಗಳನ್ನು ತೊಳೆಯುವವನೆ (ಡ್ರೆಸ್ಸರ್) ಕೂಡೆ ಹೇಳಿದರಂತೆ. ಅವನು, ಇಕ್ಕುಳದಿಂದ ಹಲ್ಲನ್ನು ತೆಗೆದುಬಿಟ್ಟನಂತೆ. ಇವನ ಈ ತೆರದ ಸಾಹಸವನ್ನು ನಾನು ತುಂಬಾ ಅಭಿನಂದಿಸುತ್ತೇನೆ. ಪ್ರಿಯರೆ! ಇದು ಡಾಕ್ಟರ ಮಹಾಶಯರ ದೀರ್ಘಕಾಲದ ಅನುಭವದ ಫಲವಾಗಿರಬಹುದೋ? ಇನ್ನು ಒಂದೆರಡು ವರ್ಷಗಳ ನಂತರ ಆಸ್ಪತ್ರೆಯ ನೌಕರರು, ಬಂದ ರೋಗಿಗಳಿಗೆ ಮದ್ದು ಕೊಟ್ಟು, ಶುದ್ಧಿ ತೊಳೆಯುವ ಅನುಭವವನ್ನು ಪಡೆದು ಆಸ್ಪತ್ರೆಯಲ್ಲಿ ಇನ್ನು ಮುಂದೆ ಡಾಕ್ಟರ ಮಹಾಶಯರ ಅಗತ್ಯವೇ ಇಲ್ಲದಂತೆ ಮಾಡಬಹುದು, ಇದು ಸ್ಪಷ್ಟ.

[illegible] ... ಈ ವರ್ತಮಾನವು ನಿಜವಾದರೆ, ಡಾಕ್ಟರ ಮಹಾಶಯರು ರೂಲ್ಸಿಗೆ ವಿರೋಧವಾಗಿ ಕೆಲಸವನ್ನು ಮಾಡಿರುವರೆಂಬುದಾಗಿ ನಿಶ್ಚಯ. ಹೀಗೆ ಅವರು ಮಾಡಲು ಕಾರಣವೇನೋ ತಿಳಿಯದು. ಕೆಲಸ ಹೆಚ್ಚಾಗಿರುವುದಾದರೆ ಒಬ್ಬ ಅಸಿಸ್ಟೆಂಟ್ ಡಾಕ್ಟರರನ್ನಾದರೂ ಇಡಬಾರದೇ? ಈ ತರದ ಕೆಲಸವನ್ನು ಮಾಡಿದ್ದರೆ ಆಸ್ಪತ್ರೆಗೆ ಹೋಗುವ ರೋಗಿಗಳು ತಮ್ಮ ಜೀವವನ್ನು ಕೈಯಲ್ಲಿ ಹಿಡಿದು ಹೋಗಬೇಕಾದೀತು.

ಈ ಬಗ್ಗೆ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಆ ಸ್ತ್ರೀಯ ಕಡೆಯ ಜನರು ಅರ್ಜಿ ಮಾಡಿರುವರಾಗಿ ತಿಳಿದು ಬರುತ್ತದೆ. ಇದರ ಕುರಿತು ಯೋಗ್ಯ ವಿಚಾರಣೆಯನ್ನು ಮಾಡಿ ಸಂಬಂಧಪಟ್ಟ ಅಧಿಕಾರಿಗಳು ಇಂತಹ ಅನಾಹುತಗಳು ಇನ್ನು ಮುಂದಾದರೂ ನಡೆಯದಂತೆ ನೋಡಿಕೊಳ್ಳುವರಾಗಿ ನಂಬುತ್ತೇನೆ.

ಬಂಟ್ವಾಳ ನಿವಾಸಿ.

ಮಲ್ಪೆಯಲ್ಲಿ ಒಂದು ಹಾಯರ್ ಎಲಿಮೆಂಟರಿ ಶಾಲೆ.

ಮಲ್ಪೆಯಲ್ಲಿ ಅರ್ಧ ಅಥವಾ ಒಂದು ಫರ್ಲಾಂಗು ಫಾಸಲೆಯೊಳಗೆ ಏಳು ಎಲಿಮೆಂಟರಿ ಶಾಲೆಗಳು. ಬಾಲಕಬಾಲಿಕೆಯರ ಸಂಖ್ಯೆ ಸುಮಾರು ೫೦೦ಕ್ಕಿಂತಲೂ ಹೆಚ್ಚು. ಅದಲ್ಲದೆ ೫ನೆ ಕ್ಲಾಸಿಗೂ ಆ ಮೇಲಿನ ಕ್ಲಾಸುಗಳಿಗೂ ಉಡುಪಿಗೆ ಹೋಗುವ ಬಾಲಕಬಾಲಿಕೆಯರು ಸುಮಾರು ೧೫೦. ಮಲ್ಪೆಯಲ್ಲಿ ಹಾಯರ್ ಎಲಿಮೆಂಟರಿ ಶಾಲೆ ಇಲ್ಲದೆ ಇದ್ದುದರಿಂದ ೪ನೆ ಕ್ಲಾಸು ಮುಗಿದಕೂಡಲೇ ವಿದ್ಯಾರ್ಥಿಗಳು ನೆಟ್ಟಗೆ ಉಡುಪಿಗೆನೇ ಹೋಗುವರು. ಹೀಗಾಗಿ ಮಲ್ಪೆಯ ವಿದ್ಯಾರ್ಥಿಗಳಿಗೆ ಒಂದು ಗೋಳು! ಇಲ್ಲಿಗೊಂದು ಹಾಯರ್ ಎಲಿಮೆಂಟರಿ ಶಾಲೆಯನ್ನು ಎಷ್ಟೋ ಹಿಂದೆಯೇ ಬೋರ್ಡಿನವರು ಕೊಡಬೇಕಾಗಿತ್ತು. ಯಾಕೋ ಹಾಗೆ ನಡೆಯಲಿಲ್ಲ.

ಈಗಲಾದರೂ ಮಲ್ಪೆ ಕಡೆಯವರಿಂದ ಚುನಾಯಿಸಲ್ಪಟ್ಟ ಡಿ. ಬೋ. ಮೆಂಬರರಾದ ಮಾನ್ಯ ಟಿ. ಟಿ. ಆಚಾರ್ಯರವರು ಮಲ್ಪೆಗೆ ಒಂದು ಹಾಯರ್ ಎಲಿಮೆಂಟರಿ ಶಾಲೆ ಬೇಕೆಂದು ಕಳೆದ ೩ ಬೋ. ಮೀಟಿಂಗಿನಲ್ಲಿ ಒಂದು ಠರಾವನ್ನು ಸೂಚಿಸಿದರು. ೨ ಫರ್ಲಾಂಗು ಫಾಸಲೆಯೊಳಗೆ ಸುಮಾರು ೫೦೦ಕ್ಕಿಂತಲೂ ಹೆಚ್ಚು ಮನೆಗಳಿರುವ ವಠಾರಕ್ಕೆ ಅದು ಬೇಡವೆಂದೂ ಅಲ್ಲಿಗಿಂತ ಉತ್ತರಪೂರ್ವಕ್ಕೆ ಸುಮಾರು ೧½ ಮೈಲು ದೂರ ಕಲ್ಯಾಣಪುರ ರಸ್ತೆಬದಿಯಲ್ಲಿ ಹಳ್ಳಿಯ ಒಂದು ಕಡೆಯಲ್ಲಿ ಅದು ಗ್ರಾಮಕೇಂದ್ರವೆಂದೂ ಅಲ್ಲಿ ಒಳ್ಳೇ ಹವೆಯೆಂದೂ ಅಲ್ಲಿಯೇ ಶಾಲೆ ಇಡಬೇಕೆಂದೂ ಆ ಕಡೆಯ ಬ್ರಾಹ್ಮಣ ಪ್ರೇರಿತವಾದ ಒಂದು ಅರ್ಜಿಯು ಡಿಸ್ಟ್ರಿಕ್ಟ್ ಬೋರ್ಡಿಗೆ ಹೋಯಿತು. ಆ ಕಡೆಯಿಂದ ಒಬ್ಬರು ಪ್ರತಿನಿಧಿಗಳೂ ಮಂಗಳೂರಿನಲ್ಲಿ ಮೀಟಿಂಗಿನ ಸಮಯ ಹಾಜರಿದ್ದಂತೆ ತಿಳಿದು ಬರುತ್ತದೆ. ಈ ಠರಾವಿಗೆ ಮಾನ್ಯ ಅಂದ್ರಾದೆಯವರದು ಒಂದು ಉಪಸೂಚನೆಯಂತೆ ಅದೇನೆಂದರೆ—"ಮಲ್ಪೆಗೆ ಎಂಬ ಶಬ್ದದ ನಂತರ ಅಥವಾ ಕೊಡವೂರಿಗೆ ಎಂಬುದನ್ನು ಸೇರಿಸಬೇಕೆಂ"ದು. ಇದಕ್ಕೆ ಮ. ರಾ. ಬೇಳಂಜೆ ಹೆಗ್ಗಡೆಯವರ ಅನುಮೋದನೆಯಂತೆ. ಮಾನ್ಯ ಹೆಗ್ಗಡೆಯವರಿಗೆ ಮಲ್ಪೆ ಕೊಡವೂರು ಇವುಗಳ ವಿಷಯ ಸಂಪೂರ್ಣ ಗೊತ್ತಿಲ್ಲದೆಯಿದ್ದರೂ ಇರಬಹುದು. ಆದರೆ ಮಾನ್ಯ ಅಂದ್ರಾದೆಯವರು ಮಲ್ಪೆಯ ಸ್ಥಿತಿಯನ್ನು ಸಂಪೂರ್ಣ ತಿಳಿದವರಾಗಿಯೂ ಹೀಗೆ ಒಪ್ಪಿದರೋ ತಿಳಿಯದು. ಆಗಲಿ—ಹೇಗೂ ಕಡೆಯಲ್ಲಿ ಅವರು ತಮ್ಮ ಉಪಸೂಚನೆಯನ್ನು ಹಿಂದಕ್ಕೆ ತಕ್ಕೊಂಡದ್ದಕ್ಕೆ ಅವರಿಗೆ ಮಲ್ಪೆಯವರ ಅಭಿವಂದನೆಗಳು. ಠರಾವನ್ನು ಮನ್ನಿಸಿದ ಡಿ. ಬೋರ್ಡಿಗೆ ಮಲ್ಪೆಯವರು ಚಿರಋಣಿಗಳು.

ಮಾನ್ಯ ಆಚಾರ್ಯರವರ ಠರಾವು ಪಾಸಾದಂದಿನಿಂದ ಕೊಡವೂರು ಸೆಂಟರಿನ ಸ್ಕೂಲುಕಡೆಯವರೂ ಅತ್ತಲಾಗೆ ಆದಿ ಉಡುಪಿ ಬಡೆಕ್ ಹಾಯರ್ ಎಲಿಮೆಂಟರಿ ಶಾಲೆಯವರೂ ಬಹಳ ವ್ಯಥೆಪಡುವಂತೆ ಕಂಡುಬರುವುದು. ಮಲ್ಪೆಯ ಬಡ ಮಕ್ಕಳ ಮೇಲೆ ಇವರಿಗೇನು ಕಕ್ಕುಲತೆಯದಾಗಿದೆ. ಆದಿ ಉಡುಪಿ ಶಾಲೆಯು [illegible] ... ಮಲ್ಪೆ ಮಕ್ಕಳಿಂದ ಶಾಲೆಗೆ ೫ನೆ ಕ್ಲಾಸಿಗೆ ಬರುವವರು ಸರೀ ೧೫ ಹುಡುಗರೆಂದು ಅವರೇ ಒಪ್ಪುತ್ತಾರೆ. ಸುಮಾರು ೧೫೦ ಹುಡುಗಹುಡುಗಿಯರು ಅವರ ಶಾಲೆಯನ್ನು ದಾಟಿಕೊಂಡು ಮುಂದೆ ಉಡುಪಿಗೇ ಹೋಗುತ್ತಾರೆ. ಕಾರಣವೇನೆಂಬುದು ವಿದ್ಯಾರ್ಥಿಗಳಿಗೂ ಶಾಲಾ ಮೆನೇಜರರಿಗೂ ತಿಳಿದಿರಬಹುದು. ಅಲ್ಲಿ ದೊಡ್ಡ ಮೈದಾನು, ಒಳ್ಳೇ ಶುದ್ಧಗಾಳಿ, ಅಟದ ಬಯಲು ಎಲ್ಲಾ ಅನುಕೂಲವಿರುತ್ತದೆ. ಹಾಗಿದ್ದರೂ ವಿದ್ಯಾರ್ಥಿಗಳು ಮಾತ್ರ ಉಡುಪಿಶಾಲೆಗಳೇ ಆಗಬೇಕೆನ್ನುವರು.

ಇಷ್ಟು ಅನುಕೂಲವಿರುವ ಶಾಲೆಯನ್ನು ಬಿಟ್ಟು ಮಲ್ಪೆಯಲ್ಲಿ ಆಟದ ಬಯಲು ಇಲ್ಲಾ—ಅದು ಇಲ್ಲಾ—ಇದು ಇಲ್ಲಾ—ಕೊಡವೂರು ಸೆಂಟರಿನಲ್ಲಿ ಮಲ್ಪೆಯಲ್ಲಿ ಸಿಕ್ಕದವುಗಳೆಲ್ಲಾ ಉಂಟೆಂಬ ಸಬಬಿನ ಮೇಲೆ ಮಲ್ಪೆ ಬಿಟ್ಟು ಆದಿ ಉಡುಪಿಗಿಂತಲೂ ಹಳ್ಳಿಯಾದ ಮಲ್ಪೆ ಉತ್ತರಪೂರ್ವಕ್ಕೆ ಒಂದೂವರೆ ಮೈಲು ದೂರದಲ್ಲಿರುವ ಕೊಡವೂರು ಶಾಲೆಗೆ ಹೋಗುವರೆಂದು ಭಾವಿಸಲು ಸಾಧ್ಯವೆ? ಹಾಗಿದ್ದರೆ ಉಡುಪಿ ಶಾಲೆಗಳನ್ನೆಲ್ಲಾ ಮಲ್ಪೆ, ಕಲ್ಯಾಣಪುರ, ಪರ್ಕಳ ಮತ್ತು ಆಗತ್ಯವಿದ್ದ ಪರಿಯಾ ಬಹದೂರ್‌ಗಡದಲ್ಲಿಯೂ ಇಡಬಹುದಿತ್ತು.

ಪಟ್ಟಣವಾಸಿ ವಿದ್ಯಾರ್ಥಿಗಳು ಹಳ್ಳಿಯ ಶಾಲೆಗಳಿಗೆ ಹೋಗುವುದನ್ನು ಯಾರೂ ಎಂದೂ ಕೇಳಿಲ್ಲ. ಹಳ್ಳಿಯವರಾದರೂ ದೂರವಾದರೂ ನಡೆದು ಪೇಟೆಗೆ ಹೋಗುವರು. ಪೇಟೆಪಟ್ಟಣಗಳ ನಿವಾಸಿಗಳಿಗೆ ಅವರದ್ದಲ್ಲಿಯೇ ವಿದ್ಯಾನುಕೂಲಗಳನ್ನು ಕಲ್ಪಿಸಿಕೊಡಬೇಕು. ಬೇಕಾದರೆ ನೋಡಲಿ! ಕೊಡವೂರಲ್ಲಿಯೇ ಶಾಲೆ ಇಟ್ಟು, ಮಲ್ಪೆಯನ್ನು ಬಿಟ್ಟರೆ, ಮಲ್ಪೆಯಿಂದ ಒಬ್ಬ ವಿದ್ಯಾರ್ಥಿಗಳು ಹೋಗುವಹಾಗಿಲ್ಲ. ಅವರು ಕಷ್ಟಪಟ್ಟಾದರೂ ಉಡುಪಿಗೆ ಹೋಗದೇ ಹೋಗುವರು. ಹೀಗಾಗುವುದರಿಂದ ಉಡುಪಿಗೆ ಹೋಗಲಾರದ ವಿದ್ಯಾರ್ಥಿಗಳು ಶಾಲೆಯನ್ನೇ ಬಿಡಬೇಕು. ಈ ವರ್ಷದಿಂದ ೪ನೇ ಕ್ಲಾಸು ೮ನೇ ಕ್ಲಾಸು ಮುಗಿಸಿದೊಡನೆಯೇ ವಿದ್ಯಾರ್ಥಿಗಳು ಶಾಲೆಯನ್ನು ಬಿಡುವರು. ಹೀಗಾಗಿ ೫ನೇ ಕ್ಲಾಸಿಗೆ ಸಹಾ ಮಲ್ಪೆಯಲ್ಲಿ ಹೆಚ್ಚು ವಿದ್ಯಾರ್ಥಿಗಳು ಸಿಗುವುದಿಲ್ಲ. ೫ನೆ ಕ್ಲಾಸಿಗೆನೆ ಉಡುಪಿಗೆ ಹೋಗುವರು. ಇಲ್ಲದೆ ೪ನೆ ಕ್ಲಾಸು ಮುಗಿದ ಕೂಡಲೇ ಮನೆಯಲ್ಲಿ ಕೂತುಕೊಳ್ಳುವರು. ಕಾರಣ ಸುಮಾರು ೭೦ ಯಾ ೪೦ ವಿದ್ಯಾರ್ಥಿಗಳು ಮುಂದೆ ವಿದ್ಯೆಯಿಲ್ಲದೆ ಹೋಗುವರು. ಆದಿ ಉಡುಪಿಯವರದು ಏಡೆಡ್ ಶಾಲೆ. ಅದಕ್ಕೆ ಮಲ್ಪೆಯಿಂದ ೫ನೆ ಕ್ಲಾಸಿಗೆ ಹತ್ತು ಹುಡುಗರಾದರೂ ಬಾರದೇ ಹೋದರೆ ಅವರು ದೊಡ್ಡ ಶಾಲೆಮಾಡಿ ಏನಾದರೊಂದು ಕಸುಬು ಮಾಡುವವೆಂದು ಅದರಮೇಲೆ ವೆಚ್ಚಮಾಡಿದ ರೂಪಾಯಿ ಸುಮಾರು ೩೦೦೦ ಅವರಿಗೆ ನಷ್ಟವಾಗುವುದಂತೆ. ಕೊಡವೂರು ಸೆಂಟರಿನಲ್ಲಿ ಶಾಲೆಮಾಡದೆ ಹೋದರೆ ಆ ಕಡೆ (ಗ್ರಾಮದ ಕೇಂದ್ರವಂತೆ ಅದು) ಬಡಾಯಿಸುವಹಾಗಿಲ್ಲ—ಆ ಕಡೆಯ ಹುಡುಗರಿಗೆ ಕಷ್ಟವಾಗುವುದಂತೆ. ಇವರಿಷ್ಟರ ಸಂಕಷ್ಟವೇನೋ? ನಿಜವಿದ್ದರೂ ಇರಬಹುದು. ಅಲ್ಲವೆನ್ನುವವರ್‍ಯಾರು? ಆದರೆ, ನೂರಾರು ಹುಡುಗರೂ ಹುಡುಗಿಯರೂ ಆಹಾರವಿಲ್ಲದೆ ಹೋಗಿಬರುತ್ತಾ, ದಿವಸಕ್ಕೆ ಆರು ಮೈಲು ಕಾಲುಸವಾರಿ ಮಾಡಿ, ಹೊಟೆಲ್ ತಿಂಡಿ ತಿಂದು ಓದುಬರಹಕ್ಕೆ ಸಮಯ ಸಾಲದೆ, ಆರೋಗ್ಯ ಕೆಡಿಸಿಕೊಂಡರೂ ಚಿಂತಿಲ್ಲ—ಅಥವಾ—ತಮ್ಮ ತಮ್ಮ ಶಾಲೆಗಳಿಗೇನೇ ಬಂದು ಅದೇ ಸಂಕಷ್ಟಗಳನ್ನನುಭವಿಸಿದರೂ ಚಿಂತಿಲ್ಲ. ಮಲ್ಪೆಗೆ ಮಾತ್ರ ಶಾಲೆ ಕೊಡಬೇಡ—ನಮಗೆ ತೊಂದರೆಯಾಗುತ್ತದೆಂದು ಹೇಳುವುದರಲ್ಲೇನು ಅರ್ಥವೊ? ತಿಳಿಯಲಾರೆ.

ವಾಸ್ತವವಾದರೆ ಕೊಡವೂರಲ್ಲಿ ಸಾಕಷ್ಟು ವಿದ್ಯಾರ್ಥಿಗಳಿದ್ದರೆ ಅಲ್ಲಿಯೂ ಒಂದು ಶಾಲೆ ಇಡಬಹುದು. ಆದಿ ಉಡುಪಿಯಲ್ಲಿಯೂ ಇಡಬಹುದು. ಎರಡೂ ಸುಸೂತ್ರವಾಗಿ ನಡೆಯಬಹುದು. ಮಲ್ಪೆಯ ವಿದ್ಯಾರ್ಥಿಗಳು ತಪ್ಪಿದರೆ, ತಮ್ಮ ಶಾಲೆ ಹೋಗುವುದೆಂಬ ಆದಿ ಉಡುಪಿಯವರ ಭಯಕ್ಕೂ, ಕೊಡವೂರಲ್ಲಿ ಶಾಲೆಯಾದರೆ, ಒಳ್ಳೇ ಹವೆ, ಆಟಪಾಟದ ಆತಿಯಿಂದ ಕೊಡವೂರು ಶಾಲೆಗೆ ಮಲ್ಪೆ ಹುಡುಗರು ಸಾಲುಸಾಲಾಗಿ ಬಂದು ಆ ಕಡೆ ಬಡಾವಣೆಯಾಗುವದೆಂಬ ಕೊಡವೂರಿನವರ ಅಭಿಪ್ರಾಯಕ್ಕೂ ನಿಜವಾಗಿಯಾದರೂ ಏನೂ ಅವಕಾಶವಿಲ್ಲ. Malpe is a separate educational unit by itself and it would be criminal to penalise Malpe pupils and deprive them of higher educational facilities. ಮಲ್ಪೆಯವರಲ್ಲಿ ಹೆಚ್ಚಿನವರು [illegible] ... argument [illegible] ... ಹೋಗಲಿ, ವಿಷಯವಾದರೂ ಏನೇ. ಉಡುಪಿಗೆ ಮಲ್ಪೆಯಿಂದ ಹೋಗುವ ನೂರು ಹುಡುಗರು ಯಾರ ಮಕ್ಕಳು? ಕೊಡವೂರಿನಿಂದ ಯಾ ಅಲ್ಲಿಯ [illegible] ಯಿಂದ ಹತ್ತು ಹುಡುಗರಾದರೂ [illegible] ಉಡುಪಿಗೆ ಹೋಗುತ್ತಾರೆಯೆ? ಮಲ್ಪೆಯಲ್ಲಿ ಸುಮಾರು [illegible] ೪೦೦ಕ್ಕೆ ಮಿಕ್ಕಿ land tax, ರೂ. ೪೦೦ಕ್ಕೆ [illegible] profession tax, ರೂ. ೧೦೦೦ಕ್ಕೂ ಮಿಕ್ಕಿ income tax ಕೊಡುವವರು ಇರುವುದನ್ನು ಎಲ್ಲರೂ ತಿಳಿದಿರುವರು. ಇದು ನಿವಾಸಿಗೆ ತಿಳಿಯದೊ? ಏನಾದರೂ ಒಪ್ಪಿದರೆ ಮಲ್ಪೆಗೆ ಶಾಲೆಯಾದರೆ ಕೊಡವೂರು ಬಡಾಯಿಸ ದ ಬಗೆ ಹೇಗೆಂಬ ಭಯ.

ಮಲ್ಪೆ ನಿವಾಸಿ

ಮಂಗಳೂರು 'ಸ್ವದೇಶಾಭಿಮಾನಿ' ಪತ್ರದ ಸಂಪಾದಕರವರಿಗೆ—

ಮಹನೀಯರೇ,

'ಮುಂಬಾಯಿ ಗೌಡಸಾರಸ್ವತ ಸಭಾ' ಎಂಬ ಸಂಸ್ಥೆಯ ಬಗ್ಗೆ ತಮಗೆ ಬಂದ ಬಾತ್ಮಿಯನ್ನು ಒಕ್ಟೋಬರ ತಿಂಗಳ ೧೯ನೇ ತಾರೀಕಿನ ಪತ್ರಿಕೆಯಲ್ಲಿ ತಾವು ಪ್ರಕಟಿಸಿದ್ದೀರಿ. ತಮ್ಮ ಬಾತ್ಮಿದಾರರು ಕಳುಹಿಸಿದ ಸಂಗತಿಗಳು ಸದ್ಯಕ್ಕೆ ಸ್ಥಾಪಿತವಾದ ಗೌಡಸಾರಸ್ವತ ಸಭಾ ಮುಂಬಾಯಿ ಎಂಬ ಸಂಸ್ಥೆಯ ಬಗ್ಗೆ ಇರುವುದೆಂಬುವುದರಲ್ಲಿ ಸಂದೇಹವುಂಟಾಗುತ್ತದೆ. ತಾವು ಪ್ರಕಟಿಸಿದ ಸಂಗತಿಗಳು ಮೇಲೆ ಬರೆದ ಸಭೆಯ ಬಗ್ಗೆ ಎಂದು ತಿಳಕೊಂಡರೆ ಅವು ಬಹಳೇ ತಪ್ಪುತಿಳುವಳಿಕೆಗಳನ್ನು ಹುಟ್ಟಿಸುವವು. ಸಭೆಯ ಮೀಟಿಂಗ್ ಇದುವರೆಗೆ ಒಂದೂ ಆಗದಿರುವಾಗ ಯೋಗ್ಯ ಮಾಹಿತಿ ಪಡೆಯದೆ ಸಿಕ್ಕ ಬಾತ್ಮಿಯನ್ನು ಆತುರದಿಂದ ತಮಗೆ ಕಳುಹಿಸುವುದರಲ್ಲಿ ತಮ್ಮ ಬಾತ್ಮಿದಾರರು ಯೋಗ್ಯರೀತಿಯಿಂದ ನಡಕೊಳ್ಳಲಿಲ್ಲ. ಈ ಸಭೆಯ ಹೆಸರಿನಲ್ಲಿ ಒಂದು ಕಾರ್ಯಕಾರಿ ಮಂಡಳಿಯು ಊರೂರುಗಳಲ್ಲಿ ಧನಸಂಗ್ರಹ ಮಾಡುತ್ತದೆಂದೂ ಆ ಹಣವನ್ನು ಶಾಲೆಗಳಲ್ಲಿ ಅಭ್ಯಾಸ ಮಾಡುವ ಸ್ವಸಮಾಜದ ಬಾಲಕರಿಗೆ ಸ್ಕೊಲರ್‌ಶಿಪ್ ರೂಪದಿಂದ ಸಹಾಯ ಮಾಡಲಿಕ್ಕಾಗಲೀ ಸ್ವಸಮಾಜದ ಬಡವರ ಆರ್ಥಿಕ ಅಡಚಣೆಗಳನ್ನು ಸುಧಾರಿಸಲಿಕ್ಕಾಗಲೀ ಉಪಯೋಗಿಸದೆ ರಾಮೇಶ್ವರ ಮೊದಲಾದ ಸ್ಥಳಗಳಲ್ಲಿ ಮಠಗಳನ್ನು ಜೀರ್ಣೋದ್ಧಾರ ಮಾಡಲಿಕ್ಕೆ ವಿನಿಯೋಗಿಸಲಾಗುವುದೆಂದೂ ತಮ್ಮ ಬಾತ್ಮಿದಾರರು ಬರೆಯುತ್ತಾರೆ. ಈ ಸಂಗತಿಗಳು ಬಹಳೇ ಆಶ್ಚರ್ಯಕಾರಕವಿದ್ದು ಸಂಪೂರ್ಣ ನಿರಾಧಾರವಾಗಿರುತ್ತದೆ. ತಮ್ಮ ಬಾತ್ಮಿದಾರರಿಗೆ ಸುಳ್ಳು ಬಾತ್ಮಿ ಎಲ್ಲಿ ಸಿಕ್ಕಿತೆಂದು ತಿಳಿಯದು. ಮಠಗಳ ಜೀರ್ಣೋದ್ಧಾರದ ಬಗ್ಗೆ ಹಣ ವಿನಿಯೋಗಿಸಬೇಕೆಂತ ಸಭೆಯಲ್ಲಿ ಸೂಚನೆಯೇ ಬರಲಿಲ್ಲ. ಮುಂಬಾಯಿ ಮತ್ತು ಅದರ ಉಪನಗರಗಳಲ್ಲಿ ವಾಸಿಸುವ ಸಮಾಜದ ಜನರ ಸಾಮಾಜಿಕ ಮತ್ತು ಆರ್ಥಿಕ ಏಳ್ಗೆಯೇ ಸಭೆಯ ಉದ್ದೇಶವಿದ್ದು ಸಂಗ್ರಹಿಸುವ ಹಣವು ಅಂಥ ಕೆಲಸಗಳಿಗೆ ಮಾತ್ರ ಉಪಯೋಗಿಸಲ್ಪಡುವುದು. ವಾಳ್ಕೇಶ್ವರ ರಾಮೇಶ್ವರ ಮೊದಲಾದ ಸ್ಥಳಗಳಲ್ಲಿ ಮಠಗಳನ್ನು ಜೀರ್ಣೋದ್ಧಾರ ಮಾಡುವ ಬಗ್ಗೆ ಕಾಶಿಯ ಕೆಲವು ಜನರ ಒಂದು ಮಂಡಳವು ಹಣಸಂಗ್ರಹ ಮಾಡುವುದನ್ನು ಮೇಲೆ ಹೇಳಿದ ಸಭೆಯ ಚಟುವಟಿಕೆಗಳಲ್ಲಿ ತಮ್ಮ ಬಾತ್ಮಿದಾರರು ಮಿಶ್ರಿಸಿದ್ದಾರೆ. ಆ ಮಂಡಳವು ಈ ಸಭೆಗಿಂತ ಮುಂಚಿತವಾಗಿ ಸ್ಥಾಪಿತವಾಗಿದ್ದು ಈ ಸಭೆಗೂ ಆ ಮಂಡಳಕ್ಕೂ ಏನೂ ಸಂಬಂಧವಿಲ್ಲ. ಸತ್ಯ ಸ್ಥಿತಿ ಚೌಕಶಿ ಮಾಡದೆ ಸಿಕ್ಕಿದ ಸುಳ್ಳುಸುದ್ದಿಗಳನ್ನು ತಮಗೆ ಕಳುಹಿಸುವುದರಲ್ಲಿ ತಮ್ಮ ಬಾತ್ಮಿದಾರರು ಬೇಜವಾಬ್ದಾರಿಯ ಕೆಲಸವನ್ನು ಮಾಡಿದ್ದಾರೆಂಬುದನ್ನು ಈ ಮೂಲಕ ನಿಮ್ಮ ವಾಚಕರಿಗೆ ತಿಳಿಸುವುದು ನನ್ನ ಕರ್ತವ್ಯ.

ರಾ. ಕೃ. ಪ್ರಭು,
ಅಧ್ಯಕ್ಷ,
ಗೌಡಸಾರಸ್ವತ ಸಭಾ, ಮುಂಬಾಯಿ

ಮುಂಬಯಿ,
26-10-34.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ

O. P. No. 98/1984.

1. ಅಣ್ಣಪ್ಪ, 2. ಸೇಸ, 3. ಗೋಪು— ಕಡ್ತಾಲಕಾಳು ಮಡಿವಾಳನ ಅಳಿಯಂದಿರು ಇವರ ಕ್ಷೇಮಚಿಂತಕ, ತಂದೆ ಪುಟ್ಟ ಮಡಿವಾಳ—ಅಂಗು ಮಡಿವಾಳನ ಅಳಿಯ— ಕಾರ್ಕಳ ತಾಲೂಕು ಕಾರ್ಕಳ ಕಸಬೆಯಲ್ಲಿರುವವ—ಅರ್ಜಿದಾರರು

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರರಿಗೆ ಸದ್ರಿಯವರ ಮಾವ ಮೃತಪಟ್ಟ ಕಾಳು ಮಡಿವಾಳನಿಗೆ ಹೊರಗಿನಿಂದ ಬರತಕ್ಕ ಸಾಲಗಳ ವಸೂಲಿ ಹಕ್ಕಿನ ಕುರಿತು ಒಂದು ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 15-11-1984ಕ್ಕೆ ತನ್ಖಿಗೆ ಇಟ್ಟಿರುತ್ತದೆಂತಲೂ, ಆಕ್ಷೇಪವುಳ್ಳವರು ಸದ್ರಿ ದಿವಸ ಬೆಳಿಗ್ಗೆ 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಹರಿಸಬೇಕೆಂತ ಸಹಾ ಈ ಮೂಲಕ ತಿಳಿಸೋಣಾಗುತ್ತದೆ

Karkala, 26-10-34. } A N S Achar, *Pleader for Petitioners*

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O P No 100/34

1 ದಾರಿ ಹೆಂಗ್ಸು, 2 ಸಾಂತು ಭಂಡಾರಿ, 3 ಕೊರಗ ಭಂಡಾರಿ, 4 ಮೊಣ್ಣ ಭಂಡಾರಿ, 5 ಅಕ್ಕು ಹೆಂಗ್ಸು, 6 ದಾರಮ್ಮ ಹೆಂಗ್ಸು, 7 ಅಪ್ಪಿ ಹೆಂಗ್ಸು, ಉಡುಪಿ ತಾಲ್ಲೂಕ ಕಳತೂರು ಗ್ರಾಮದಲ್ಲಿರುವವರು—ಅರ್ಜಿದಾರರು

1ನೇ ಅರ್ಜಿದಾರಳ ಮಗ, 6ನೇ ಅರ್ಜಿದಾರಳ ಮೊಮ್ಮಗ, 7ನೇ ಅರ್ಜಿದಾರಳ ಗಂಡ 2ರಿಂದ 5ನೇ ವರೆಗಿನ ಅರ್ಜಿದಾರರ ಸಹೋದರ ಹಾಲಿ ಮೃತನಟ್ಟ ಪುದ್ದು ಭಂಡಾರಿಯು ಕಳೆದ ತಾ 2-7-1932ರಲ್ಲು ಸದರಿ ಕಳತ್ತೂರು ಗ್ರಾಮದ ಪೂಕ ಸ್ವಾಕನಿಂದ ರೂ. 45/-ಕ್ಕೆ ಬರೆಸಿಕೊಂಡ ಡಿಮಾಂಡ್ ನೋಟಿನ ಪ್ರಕಾರ ಬಹಾ ಅಸಲು ಬಡ್ಡಿ ದಿವೆಜನ್ನು ವಸೂಲು ಮಾಡುವರೆ 1ನೇ ಅರ್ಜಿದಾರಳ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜಿದಾರರು ಕೊಟ್ಟ ಅರ್ಜಿಯು ತಾ 28-11-'84ಕ್ಕೆ ತನಿಕೆಗೆ ಇಟ್ಟಿರುವುದರಿಂದ ಈ ವಿಷಯದಲ್ಲಿ ಆಕ್ಷೇಪವುಳ್ಳವರು ಸದ್ರಿ ದಿವಸ ಬೆಳಿಗ್ಗೆ 10 ಘಂಟೆಗೆ ಸದರಿ ಕೋರ್ಟಿನ ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬಹುದೆಂದು ಈ ಮೂಲಕ ಪ್ರಕಟಿಸೋಣಾಗುತ್ತದೆ

Karkala 28 10 34 } P V Upadhyaya, B A LL B *Vakil for Petitioners*

ಸ್ವೀಕಾರ

'Indian Cricket' ಕ್ರಿಕೆಟ್ ಕ್ಲಬ್ ಇಂಡಿಯಾ ಲಿಮಿಟೆಡ್' ಇವರ ನೇತೃತ್ವದಲ್ಲಿ ಹೊರಡುತ್ತಿರುವ ಇಂಗ್ಲಿಷ ಮಾಸಪತ್ರಿಕೆ ಇದರ ಪ್ರಥಮ ಸಂಚಿಕೆಯು ಇದೇ ಕಳೆದ ಅಕ್ಟೋಬರ ತಾ 15ಕ್ಕೆ ಹೊರಟಿದೆ ಬೆಲೆ ಬಿಡಿ ಸಂಚಿಕೆ ಆಣೆ 8 ಉತ್ತಮವಾದ ಹೊಳಪಿನ ಗ್ಲೇಜ್ ಕಾಗದದಲ್ಲಿ, ಡೆಮಿ ಆಕಾರದಲ್ಲಿ ಸಚಿತ್ರವಾಗಿ ಹೊರಟಿದೆ ಮೊಂಬಾಯಿಯ ಟೈಮ್ಸ್ ಒಫ್ ಇಂಡಿಯಾ ಛಾಪಖಾನೆಯವರ ಮುದ್ರಣ ಪತ್ರಿಕೆಯು ಪ್ರಪಂಚದ ಎಲ್ಲ ಭಾಗಗಳ ನಾನಾ ಆಟಗಳ ವಿಷಯಕವಾಗಿ ಲೇಖನಗಳನ್ನೂ ವರದಿಗಳನ್ನೂ ಒಳಗೊಂಡು, ಸಚಿತ್ರವಾಗಿ ಹೊರಡುವುದು ಮಹಾಮಾನ್ಯ ವೈಸರಾಯರೇ ಈ ಕ್ಲಬ್ಬಿನ ಪ್ರಧಾನ ಪೋಷಕರಾಗಿರುವರು ಪಾಟಿಯಾಲಾ ಮಹಾರಾಜರು ಅಧ್ಯಕ್ಷರು ಕಮಿಟಿಯಲ್ಲಿ ಮಹಾರಾಜರೂ ನವಾಬರೂ ಸರ್ ಮಹಾಶಯರೂ ಇರುವರು ಪ್ರಥಮ ಸಂಚಿಕೆಯಾದಿದರಲ್ಲಿ ವೈಸ್ರಾಯರೇ ಮೊದಲಾದ ಮಹನೀಯರ ಸಂದೇಶಗಳೂ, ಹಲವು ಚಿತ್ರಗಳೂ, ಕ್ರಿಕೆಟ್ ವಿಷಯಕವಾದ ಲೇಖನಗಳೂ ಒಳ್ಳೆವರಿಂದ ಬರೆಸಲಾಗಿವೆ. ಮುದ್ರಣ ಸೌಂದರ್ಯದ ವಿಷಯವಾಗಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಹಿಂದೂದೇಶದಲ್ಲಿನ ಪ್ರಚಲಿತ ಆಟಗಳ ಪ್ರಸಾರ ಹಾಗೂ ಉನ್ನತಿ ಸಾಧನೆಯ ದೃಷ್ಟಿಯಿಂದ ಹೊರಟ ಈ ಪತ್ರಿಕೆಯು ಆಂಗ್ಲ ಪ್ರಪಂಚದಲ್ಲಿ ಆದರಣೀಯವಾಗದಿರದು. ಪ್ರತಿಗಳನ್ನು ರೈಲ್ವೆ ಬುಕ್ ಸ್ಟಾಲುಗಳಿಂದಾಗಲಿ, ನೆಟ್ಟಗೆ F J Collins 143 Esplanade Road, Bombay' ಇವರಿಂದಾಗಲಿ ತರಿಸಿಕೊಳ್ಳಬಹುದು

New Arrivals

MEDICINES

Dr Schuessler's Twelve Tissue Remedies ½ gr bot As 4/
Homoeopathy Medicines 5 gr bot As 5/—
Sugar of Milk Dr. Schwabe's original bot 1lb Rs 2/-
Haarlem Oil a world renowned remedy As 8/ per phial
Dr Haelo s New Curative Earth—Radium Cure Rs 4/—per lb
Dr Schwabe s other special remedies are always in stock
Please consult us for your requirements
Kanarese Book a Family Guide to Biochemistry Re 1
Domestic Homoeopathy Rs 1-4 -
If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2 6
Delightful in aroma, charming in appearance Please try

KIRLOSKAR PUMPS

We are the Respresentatives for Kirloskar Brothers for their reliable Shallow-well and Deep-well Pumps Spring Cots, Spring Couches etc, and stock
Pipes and pipe fittings at cheap prices Coir Mates and mattings.

Steadler Pencils and Stationeries

We are the recognised agents for STEADLER all stationeries and shall be glad to serve you.

Olympia Typwriter

An up to date Machine in Standard and portable sizes
[illegible]

Basel Mission Book & Tract Depository,
Mangalore, S. K or Hubli, S

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter -

Modern Hindu Hotel
Calicut, 17—6—1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.
ಅಲ್ಲದೆ
ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು–ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು
ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ-
– ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ,
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! **ಉತ್ಸಾಹಕರ ಸೌಕರ್ಯ!**

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

([illegible])

[illegible]ಯಾದಾಗ [illegible] ಪ್ರವೇಶದ ವಿಚಾರ. ಕಾಂಗ್ರೆಸ್ಸಿನವರು ಇಂದು ಎಸೆಂಬ್ಲಿ ಸ್ಥಾನಗಳನ್ನಾಕ್ರಮಿಸುವ ಕಾರ್ಯಕ್ರಮವನ್ನು ಕೈಗೊಂಡಿರುವರು. ಪ್ರತಿಯೋರ್ವ ದೇಶಾಭಿಮಾನಿ ಮತದಾರನು ತನ್ನ ವೋಟನ್ನು ಕಾಂಗ್ರೆಸ್ ಉಮೇದ್ವಾರರಿಗೇ ಕೊಟ್ಟು, ಕಾಂಗ್ರೆಸ್ಸಿನ ಮೇಲೆ ತನಗಿರುವ ಭರವಸೆಯನ್ನು ವ್ಯಕ್ತಗೊಳಿಸಬೇಕಾಗಿದೆ. ನಮ್ಮ ಸ್ವಾತಂತ್ರ್ಯ ಸಮರವು ತೀರ ನೂತನವಾದುದು. ಸಶಸ್ತ್ರ ಶಕ್ತಿಗೆದುರಾಗಿ ನಿಶಸ್ತ್ರರ ಹೋರಾಟವಿದು. ಪ್ರಪಂಚವೂ ಕಾಲನೂ ನಮ್ಮನ್ನೇ ಅವ್ಯಕ್ತವಾಗಿ ಸಹಾಯ ಮಾಡುತ್ತಿರುವುವು.

ಪೂರ್ಣ ಸ್ವಾತಂತ್ರ್ಯವೇ ನಮ್ಮ ಗುರಿಯಾಗಿದೆ. ಸಾಮುದಾಯಿಕವಾದ ಅಹಿಂಸಾ ಪ್ರತಿಭಟನೆ [illegible] ನಮ್ಮದು. ನಾವು ಒಮ್ಮೆ ಅಪಜಯ ಹೊಂದಿರಬಹುದು. ಎರಡನೆ ಬಾರಿಯೂ ಜಯಶೀಲರಾಗದೆ ಮರಳಿರಬಹುದು. ಆದರೆ, ಮತ್ತೊಮ್ಮೆ ಎಂದಾದರೂ ಜಯಹೊಂದದೆ ಇರೆವೆಂಬುದು ಖಂಡಿತ. ನಮಗೆ ಬರುವ ಕಷ್ಟಕ್ಲೇಶಗಳಿಗೆ ಎದೆಗುಂದದೆ ಇರುವ, ನಮ್ಮ ಧ್ಯೇಯಗಳಿಗೂ ನಿಯಮಗಳಿಗೂ ಚ್ಯುತಿ ಬಾರದಂತ ನಡೆದುಕೊಳ್ಳುವ. ಸತ್ಯಾಗ್ರಹವು, ಅದರ ತೀಕ್ಷ್ಣ ರೂಪದಲ್ಲಿ ಒಮ್ಮೊಮ್ಮೆ ತಾತ್ಕಾಲಿಕವಾದ ಅಘಾತಗಳನ್ನು ಪಡೆಯಬಹುದು. ಪರಂತು, ಅಪಜಯವೆಂಬುದೇ ಅದಕ್ಕೆ ತಿಳಿದಿಲ್ಲ. ಅದುವೇ ತಾನೊಂದು ಮಹತ್ತಾದ ವಿಜಯ.

ಮುಂದಿನ ರಾಷ್ಟ್ರೀಯ ಸಭಾಧಿವೇಶನ.

ಬರುವ ರಾಷ್ಟ್ರ ಸಭಾಧಿವೇಶನವನ್ನು ಲಕ್ನೋ ನಗರದ (ಸಂಯುಕ್ತ ಪ್ರಾಂತ್ಯ)ದಲ್ಲಿ ಜರಗಿಸಬೇಕೆಂದು ನಿರ್ಧಾರವಾಗಿದೆ.

ಚಲಚ್ಚಿತ್ರ ವಾರ್ತೆ.

ಜೋರ್ಜ್ ಭೂಪತಿಗಳ ಆಳ್ವಿಕೆಯ ಸಾರಾಂಶವನ್ನೊಳಗೊಂಡ ಒಂದು ಚಲಚ್ಚಿತ್ರವು ಬ್ರಿಟಿಷ್ ಕಂಪೆನಿಯಲ್ಲಿ ಸಿದ್ಧವಾಗುತ್ತಿದೆ. ಇದಕ್ಕೆ ೫೦ ಸಾವಿರ ಪವನು ವೆಚ್ಚ ತಗಲುವುದು.

* * * * *

ಎರಡು ತಿಂಗಳ ಹಿಂದೆ ಕಾಲವಾದ ಮೇರಿ ಡ್ರೆಸ್ಲರಳ ಆಸ್ತಿಯು ೫೦ ಸಾವಿರ ಪವನಿನ ಮೌಲ್ಯವುಳ್ಳದೆಂದು ನಿಶ್ಚಯಿಸಲಾಗಿದೆ.

* * * * *

'ರಿನ್-ಟಿನ್-ಟಿನ್' ಎಂಬ ನಾಯಿಯು ಚಲಚ್ಚಿತ್ರಗಳಲ್ಲಿ ಅತ್ಯಾಶ್ಚರ್ಯಕರವಾಗಿ ಅಭಿನಯಿಸಿ ಕೀರ್ತಿಪಡೆದ ನಾಯಿ. ಅದು ಎರಡು ವರ್ಷಗಳ ಹಿಂದೆ ಸತ್ತುಹೋಯಿತು. ಈಗ ಪುನಃ ಅಂತಹ ಚುರುಕು ಬುದ್ಧಿಯ ನಾಯಿಯನ್ನು ಹೊಲಿವುಡ್ಡಿನ ಚಲಚ್ಚಿತ್ರ ಕಂಪೆನಿಯವರು ಹುಡುಕುತಿದ್ದಾರೆ.

* * * * *

ಹಿಟ್ಲರ್, ಸ್ಟ್ಯಾಲಿನ್, ಡೊಲ್ಫಸ್ ಮತ್ತು ಮುಸ್ಸಲೋನಿ, ಇವರ ಆಳ್ವಿಕೆಯ ಚಿತ್ರಗಳನ್ನೊಳಗೊಂಡ ಒಂದು ಚಿತ್ರವನ್ನು ಬ್ರಿಟಿಷ್ ಕಂಪೆನಿಗಳು ತಯಾರಿಸುವುವಂತೆ. ಜರ್ಮನನೊಬ್ಬನು ಇದರಲ್ಲಿ ಅಭಿನಯ ನಿರ್ದೇಶಕನಾಗುವನು.

ದೀಪಾವಳಿಯ ಹಬ್ಬ! ದೀಪಾವಳಿಯ ಹಬ್ಬ!!

ಕುಂತಲ ಕೌಮುದಿ ತೈಲ

ಶ್ರೀ ಕೃಷ್ಣನು ಲೋಕಕಂಟಕನಾದ ನರಕಾಸುರನೆಂಬ ದೈತ್ಯನನ್ನು ವಧಿಸಿ

ಆ ಯುದ್ಧದ ಶ್ರಮವನ್ನು ಪರಿಹರಿಸಲೆಂದು ತೈಲಾಭ್ಯಂಗವನ್ನು ಮಾಡಿದನೆಂದೂ, ಆತನು ಮಾಡಿದ ಆ ಲೋಕೋಪಕಾರದ ಸ್ಮಾರಕವಾಗಿ ಹಾಗೂ ನಮ್ಮಿಂದ ಕೂಡುವಷ್ಟು ಲೋಕಸೇವೆಯನ್ನು ನಾವೂ ಮಾಡಬೇಕೆಂಬ ಧ್ಯೇಯದ ಕುರುಹು ಆಗಿ, ದೀಪಾವಳಿಯಂದು, ಎಣ್ಣೆ ಹಾಕಿ ಮೀಯಬೇಕೆಂಬ ಕಟ್ಟಳೆ ಬಹಳ ಹಿಂದಣ ಕಾಲದಿಂದ ನಡೆದು ಬಂದದೆ. ಅನ್ಯಥಾ ವಿಚಾರಿಸಿದರೆ, ವಿಂಧ್ಯಾದುತ್ತರ ಭಾಗದಲ್ಲಿ ಕಾರ್ತಿಕಾದಿ ಎಂದೂ ದಕ್ಷಿಣ ಭಾಗದಲ್ಲಿ ಚೈತ್ರಾದಿ ಎಂದೂ ಇಬ್ಬಗೆಯಾಗಿರುವ ಈ ಸಂವತ್ಸರಗಳಲ್ಲಿ ಕಾರ್ತಿಕಾದಿಯಾದ ಗಣನವು ಪ್ರಾಚೀನವೆಂದು ತಿಳಿಯುವುದರಿಂದ, ಕಾರ್ತಿಕಾದಿಯಾದ ವರ್ಷದ ಕೊನೆಯ ದಿನವೆಂಬಂತಿರುವ ದೀಪಾವಳಿಯ ದಿನದಂದು ಮಾಡಬೇಕೆಂದು ಏರ್ಪಡಿಸಿರುವ ತೈಲಾಭ್ಯಂಗವು ಆ ವರ್ಷದಲ್ಲಿ ನಾವು ಪಟ್ಟ ಅವಷ್ಟೂ ಕಷ್ಟಕ್ಲೇಶಗಳೆಂಬ ಕೊಳೆಯನ್ನು ತೊಳೆದುಬಿಟ್ಟು ಆ ಸ್ನಾನದಿಂದ ಮನಸ್ಸಿಗೂ ದೇಹಕ್ಕೂ ನಿಶ್ಚಿತವಾಗಿ ಸುಖದೋರುವಂತೆ ಹೊಸ ವರ್ಷದಲ್ಲಿ ನಮಗೆ ಸುಖದೋರಲೆಂಬ ಕೋರಿಕೆಯ ಸಂಕೇತವಾಗಿದೆ ಎನ್ನಬಹುದು. ಇನ್ನೊಂದು ರೀತಿಯಲ್ಲಿ ಬಗೆದರೆ, ವ್ಯಾಯಾಮಕ್ಕೆ ಸಲ್ಲದ ಹಾಗೂ ವಿವಿಧ ರೋಗಗಳ ತವರ್ಮನೆಯೆಂತಿರುವ ಮಳೆಗಾಲವು ಹೆಚ್ಚುಕಡಿಮೆ ದೀಪಾವಳಿಯೊಂದಿಗೆ ಮುಗಿಯುವುದರಿಂದ, ಆ ವರೆಗೆ ಹೆಚ್ಚಾಗಿ ಮನೆಯೊಳಗೆ ಇರಬೇಕಾಗಿ ಉಂಟಾಗತಕ್ಕ ಜಾಡ್ಯವನ್ನು ನೀಗಲೆಂದೂ ದೀಪಾವಳಿಯ ಕೊಂಚ ಕಾಲದಲ್ಲಿ ಕಳೆದೋರುವ ಹಿಮಕಾಲದಲ್ಲಿಯೂ ಸಂಭವಿಸತಕ್ಕ ಅನಾರೋಗ್ಯವನ್ನು ಎದುರಾಡಿಸಲಿಕ್ಕೆ ದೇಹವನ್ನು ಸಮರ್ಥೀಕರಿಸಲೆಂದೂ ಯಾವಾಗಲಾದರೂ ಮೀಯದಾತನು ಅಂದಾದರೂ ಒಮ್ಮೆ ಮಿಂದು ನವಚೇತನವನ್ನು ಹೊಂದಲೆಂದೂ ಹೇಗೂ ಹಬ್ಬದ ದಿನವಾದ ದೀಪಾವಳಿಯಂದು ತೈಲಾಭ್ಯಂಗವನ್ನು ಹೇಳಿರಬೇಕೆಂದು ಭಾವಿಸಲೂ ಬಹುದು. ಹೀಗೆ ಧರ್ಮದ ದೃಷ್ಟಿಯಿಂದಾಗಲಿ ಆರೋಗ್ಯದ ದೃಷ್ಟಿಯಿಂದಾಗಲಿ ದೀಪಾವಳಿಯ ತೈಲಾಭ್ಯಂಗವು ಸರ್ವರಿಗೂ ಅವಶ್ಯವೆನಿಸುತ್ತದೆ.

ಕುಂತಲ ಕೌಮುದಿ ತೈಲ

ಆಯಾಸವಾದ ದೇಹಕ್ಕೆ ಯಾವಾಗಲೂ ತನುವಿನ ಆಹಾರವು ಅವಶ್ಯವಾದಂತೆ ರೋಮಕೂಪಗಳಿಂದ ಬೆಳೆಯುವ ಕೂದಲಿಗೂ ಒಂದು ತರದ ಆಹಾರವು ಅಗತ್ಯವಿದೆ. ಅದಕ್ಕೆ

"ಕುಂತಲ ಕೌಮುದಿ ತೈಲ"ವನ್ನು ತಲೆಗೂ ಮೈಗೂ ಸವರಿ ಹೊಸ ಕೂದಲನ್ನು ಬೆಳೆಯುವಂತೆಯೂ ಉದುರುವ ಕೂದಲನ್ನು ನಿಲ್ಲುವಂತೆಯೂ ಈ ಕುಂತಲ ಕೌಮುದಿ ತೈಲವನ್ನು ಉಪಯೋಗಿಸಿ ಇಂದಿನ ದೀಪಾವಳಿಯ ತೈಲಾಭ್ಯಂಗದ ಉತ್ಸಾಹ, ಮನೋಲ್ಲಾಸ, ತಣು, ಆನಂದದ ಹಬ್ಬದ ಮೋಸಲನ್ನು ತಮ್ಮ ಮಿತ್ರರೊಡನೆ ಕುಂತಳ ಕೌಮುದಿಯ ಗುಣವರ್ಣನೆಯನ್ನು ತಾವಾಗಿಯೇ ತಿಳಿಯುವಿರಿ.

೬ ಔನ್ಸಿನ ಶೀಸೆ ೧ಕ್ಕೆ ೦-೧೨-೦

Manufactured by Messrs. **R. C. Sen & Co., Limited.**

ಏಜಂಟರು:—

ಮಾ ಕಂಪೆನಿ, ಗವರ್ನಮೆಂಟ್ ಕೋಲೇಜಿನ ಎದುರು, ಮಂಗಳೂರು.

ಸ್ವದೇಶೀಯ ಉದ್ಯಮವನ್ನು ಪ್ರೋತ್ಸಾಹಿಸಿ! ನಿಮ್ಮದೀ ಸಂಸ್ಥೆಗೆ ಉತ್ತೇಜನ ಕೊಡಿ!!

ದಿ ಪೋಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್, ಹೆಡ್ ಆಫೀಸು.—ಮಂಗಳೂರು

ಪಶ್ಚಿಮ ಕರಾವಳಿಯಲ್ಲಿ ಇದೇ ಮೊದಲನೆಯ ವಿಮಾಸಂಘ.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ! ಸ್ತ್ರೀಯರ ಜೀವವಿಮೆಯನ್ನೂ ಸ್ವೀಕರಿಸಲಾಗುತ್ತದೆ!

ಜೀವವಿಮೆಯ ಒಳ್ಳೆಯ ಎಲ್ಲ ಸೌಕರ್ಯಗಳನ್ನೂ ಸಾಧ್ಯವಷ್ಟು ಸುಲಭ ದರದಲ್ಲಿ ಒದಗಿಸಿಕೊಡುವ ಈ ಕಂಪೆನಿಗೆ ಮುಕ್ತಹಸ್ತರಾಗಿ ಸಹಕರಿಸಿ!!

[ವಿ. ಸೂ.— 'ಇಂಡಸ್ಟ್ರೀಯಲ್ ವಿಮೆ' ಎಂಬ 'ರೂಪಾಯಿ ಪೋಲಿಸಿ'ಗಳ ಸುಲಭ ಕಂತಿನ ವಿಮೆಯ ವಿಷಯವಾಗಿ ವಿಚಾರಿಸಿರಿ.]

ಪ್ರತಿಯೊಂದು ತಾಲೂಕಿನಲ್ಲಿ, ಜಿಲ್ಲೆಯಲ್ಲಿ ಮತ್ತು ನಗರದಲ್ಲಿ ಪರಿಚಿತರೂ ಆದ ಯೋಗ್ಯ ಗೃಹಸ್ಥರಿಂದ ಏಜನ್ಸಿಯ ಕುರಿತು ಅರ್ಜಿಗಳು ಅಪೇಕ್ಷಿಸಲ್ಪಟ್ಟಿವೆ. ಮನಸ್ಸಿಟ್ಟು ಕೆಲಸ ಮಾಡುವವರಿಗೆ ಧಾರಾಳ ಕಮಿಶನ್ ಕೊಡಲಾದೀತು. ಹೆಚ್ಚಿನ ವಿವರಕ್ಕೆ ಹೆಡ್ ಆಫೀಸಿಗೆ ಬರಕೊಳ್ಳತಕ್ಕದ್ದು.

ಪಾಲಿಸಿ ನಂಬ್ರ 939 — ಮೋಟ ಮರಕಲ (ಮೃತಪಟ್ಟಾತ)

"ಸುಮಾರು 6 ತಿಂಗಳ ಹಿಂದೆ, 'ಪಾಪ್ಯುಲರ್ ಇನ್ಸುರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು' ಎಂಬೀ ಸಂಸ್ಥೆಯಲ್ಲಿ ನನ್ನ ಮೃತಪುತ್ರನು ಪಡೆದ ವಿಮೆಯ ಪೋಲಿಸಿಯ ಸಂಬಂಧವಾಗಿ ರೂ. 997-8-0ನ್ನು ಪಾವತಿ ಪಡೆದಿರುತ್ತೇನಾಗಿ ತಿಳುಹಲು ನನಗೆ ಅತ್ಯಾನಂದವಾಗುತ್ತದೆ. ಕಂಪೆನಿಯು ನನಗೆ ಸಲ್ಲತಕ್ಕ ಈ ಮೊಬಲಗಿನ ಪಾವತಿಯನ್ನು ಕೂಡಲೇ ಮಾಡಿರುವುದಕ್ಕಾಗಿ ನಾನು ಮನಃಪೂರ್ವಕವಾಗಿ ವಂದಿಸುತ್ತೇನಲ್ಲದೆ, ಮ್ಯಾನೇಜಿಂಗ್ ಡೈರೆಕ್ಟರರಾದ ಶ್ರೀ ಬಿ. ವಿಠ್ಠಲ ರಾಯರು ನಮ್ಮಲ್ಲಿಗೆ ಸ್ವತಹ ಬಂದು ನನ್ನ ಕೈಯಲ್ಲಿಯೇ ಆ ಮೊಬಲಗಿನ ಚೆಕ್ಕನ್ನೂ ಕೊಟ್ಟು ಹೋದರೆಂಬುದನ್ನೂ ಸ್ಮರಿಸದಿರಲಾರೆ. ಇದರಿಂದ ಈ ವಿಮಾ ಕಾರ್ಯಾಲಯದ ಮೂಲಕ ಅರ್ಪಿಸಲಾಗುವ ಜನಸೇವಾ ಸೌಕರ್ಯಗಳೆಷ್ಟೆಂಬುದು ಚನ್ನಂತೆ ವ್ಯಕ್ತವಾಗುತ್ತದೆ. ಈ ಕಂಪೆನಿಗೆ ಸರ್ವದಾ ಯಶಸ್ಸು ಉಂಟಾಗಲೆಂದು ನನ್ನ ಹಾರೈಕೆ.

ಮಲ್ಪೆ 9-9-1934.

ನಾಗು ಮರಕಾಲತಿ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಥ್ಯುಶಾಸನ - (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)

ಮಹಾಮದನ ಕಾಮೇಶ್ವರೀ ಲೇಹ್ಯ - (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)

ಹಿಮಸಾಗರ ತೈಲ್ಯ - (ನಿದ್ರಾನಾಶಕ್ಕೆ ಅತೀ ಉಪಯುಕ್ತ)

ಮಹಾಮಾಷ ತೈಲ್ಯ - (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)

ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)

ಗುಡ ಪಿಪ್ಪಲಿ - (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.

ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ಪಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್: — ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು: — ರಾಘವೇಂದ್ರ ರಂಗ ಪೈ, ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ

ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ವಿಷಯನ್ನರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಬಿಲ್ಲು ಹಾಕಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents — Shah Company, MANGALORE

„ Pearl & Sons, MANGALORE.

Atank Nigrah Pharmacy,
Chickpet, Bangalore.

ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

A Recurring Pleasure *To Smoke them*

REGISTERED

TRADE MARK

Mangalore Darbar Beedies

Regd. Trade Mark.

Thousands enjoy them daily all over India.

When buying see our Trade Mark!

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!

ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.

ಇವರಿಂದ ತಯಾರಿಸಲ್ಪಟ್ಟವುಗಳು.

ಡಾಕ್ಟರ ವಾಮನ ಗೋಪಾಳರವರ



ಪಿಂಡಾಯಿಡ್ಡ ಸಾರ್ಸಪರಿಲಾ.

ಕೆಟ್ಟ ರಕ್ತಕ್ಕೆ ಪರಮೌಷಧ.

೪೫ ವರ್ಷದ ಅನುಭವ.

ಉಪಯೋಗಿಸಿದವರೇ ಹೇಳಿದ್ದಾರೆ.

ಡಾ॥ ಗೌತಮ ರಾವ್ ಕೇಶವರವರ

ಫೊಸ್ಪರಸ್ ಗುಳಿಗೆಗಳು.

ಅತ್ಯುತ್ತಮ ಟಾನಿಕ್.

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಾಯಿ ೨.

ಸ್ಟಾಕಿಸ್ಟ್ - ಶಾ ಕಂಪೆನಿ, ಮಂಗಳೂರು.

[ಪತ್ರವ್ಯವಹಾರ 'ಇಂಗ್ಲಿಷ್ ಅಕ್ಷರ ಮುದ್ರಿತಯಲ್ಲಿ]

ವಿವಿಧ ವಿಷಯ.

ಅಂಧನಿಗೆ ಕಣ್ಣೂ ಇದೆ!

ನ್ಯೂಯಾರ್ಕಿನ ಒಬ್ಬ ವ್ಯಕ್ತಿಯು ೪೦ ವರ್ಷಗಳಿಂದ ಅಂಧನಾಗಿದ್ದು, ಅಂಬಾನಿನ ಆಸ್ಪತ್ರೆಗೆ ಬಂದನು. ಡಾ. ಟ್ರೂಬರ್ ಹೂಮರ್ ಎಂಬವರು ಆತನ ಕಣ್ಣನ್ನು ತೆಗೆದು, ಹುಟ್ಟಿದ್ದವನು ಕಳಕೊಂಡಿದ್ದ ಒಂದು ಕಣ್ಣನ್ನು ಇಟ್ಟುಕೊಂಡರು. ಶಸ್ತ್ರಕ್ರಿಯೆ ಮುಗಿದು, ಕಣ್ಣು ವಾಸಿಯಾದನಂತರ, ಕಟ್ಟಿದ ವಸ್ತ್ರವನ್ನು ತೆಗೆದು ನೋಡಲಾಗಿ —ನ್ಯೂಯಾರ್ಕಿನವನಿಗೆ ದೃಷ್ಟಿ ಬಂದಿತ್ತು!

ಗಾಜಿನ ಪಾದರಕ್ಷೆಗಳು.

ಇವುಗಳೀಗ ಲಂಡನಿನ ಒಂದು ಪಾದರಕ್ಷೆಗಳ ಪ್ರದರ್ಶನದಲ್ಲಿ ಬಂದಿವೆ. ಗಾಜನ್ನು ಒಂದು ವಿಧದಲ್ಲಿ ಪಾಕದಂತೆ ಪೋಣಿಸಿ, ಈ ಪಾದರಕ್ಷೆಗಳನ್ನು ಮಾಡಿರುವರು. ನೋಡಲು ಬಲು ಮನಮೋಹಕವಾಗಿದೆ. ಪರಂತು, ಚಳಿಗಾಲದಲ್ಲಿ ಇವುಗಳೊಳಗೆ ಯಾರು ಕಾಲನ್ನು ತುರುಕಲು ಧೈರ್ಯಪಡುವರೋ ಅದನ್ನಿನ್ನು ನೋಡಬೇಕಾಗಿದೆ.

ಹಂದಿಯ ಸುದ್ದಿಯೆಂದು ನಿರಾಕರಿಸಬೇಡಿರಿ!

'ಆಳಿ' ಈಗ 'ಮಹಾತಾಯಿ', ಪ್ರೊಫೆಸ್ಸರನ ಒಬ್ಬ ಬೇಸಾಯಗಾರನಲ್ಲಿ ನೆಮ್ಮದಿಯಿಂದಿದ್ದಾಳೆ. ೨೨ ಬಾರಿ ಬಾಣಂತಿಯಾದಳು, 'ಮಕ್ಕಳ' ಸಂಖ್ಯೆ ಹೆಚ್ಚಿಲ್ಲ— ಒಟ್ಟು ೩೮೫. ಇನ್ನಾಕೆ ಸಾಯದೆ ಇರಲಾರಳೆಂದು ಈಗಾಗಲೇ 'ಆಳಿ'ಗೊಂದು ಸಮಾಧಿಬೇಕೆಂದು ಸ್ಥಳವನ್ನು ಮೀಸಲಾಗಿರಿಸಿರುವರು. ಆದರೆ, 'ಅವಳಿಗೆ' ಸಾಯುವ ಮನಸ್ಸಿಲ್ಲ. ಇನ್ನೊಮ್ಮೆ ಗರ್ಭಿಣಿ. ೪೦೦ರ ಸಂಖ್ಯೆಯನ್ನು ಮುಟ್ಟದೆ ಇಹಲೋಕ ಬಿಡೆನೆಂಬ ಹಟ ವಿರಬಹುದು. ಪ್ರಪಂಚದಲ್ಲಿ ಹೆರಿಗೆಯ ದಾಖಲೆ ಇವಳದೇ.

'ಭೂತ'ಗಳೂ ಹೆದರುವುವು!

"ಮುಂಬಾಯಿಯ ರಿಡಿಮನಿಟಿರೀಸ್ ಕಟ್ಟೋಣವು ಸರ್ ಕವಾಸ್ಜಿ ಜಹಾಂಗೀರರ ಸೊತ್ತು. ಅಲ್ಲಿ, ಕೆಲವು ವರ್ಷಗಳ ಹಿಂದೆ, ಭೂತಗಳ ಉಪಟಳವಿತ್ತೆಂದು, ಯಾರೂ ನಿಲ್ಲಲಿಚ್ಛಿಸುತ್ತಿದ್ದಿಲ್ಲ. ಎಂಟು ವರ್ಷಗಳ ಹಿಂದೆ, ಶ್ರೀ ಕೆ. ಎಫ್. ನರಿಮ್ಯಾನರು ಬಂದರು. ಅಂದಿನಿಂದಿತ್ತ 'ಭೂತ'ಗಳ ಸುದ್ದಿಯೆಯಿಲ್ಲ. ನರಿಮ್ಯಾನರು ಆ ಭೂತಗಳನ್ನೋಡಿಸಿದರಂತೆ. ಅದನ್ನು ನಾವು ನಂಬುವೆವು" ಎಂದು "ಚಿಟ್ಟರ್‌ಬೋಕ್ಸ್" ನಾಮಧೇಯರು "ಹಿತವಾದ" ಪತ್ರಿಕೆಯಲ್ಲಿ ಬರೆಯುತ್ತಾರೆ.

ಮೌನವು ಭಂಗಾರವೆನ್ನುವರು.

ಅದೇನು ಸುಳ್ಳೇ? ಲಂಡನಿನ ಒಂದು ವ್ಯಾಪಾರೀ ಸಂಸ್ಥೆಯಲ್ಲಿ ಮಿಸ್ ವಿನಿಫ್ರೆಡ್ ಕೆಂಪ್‌ಬೆಲ್ ಎಂಬಾಕೆ ಕಾರ್ಯದರ್ಶಿನಿ. "ಸಂಸ್ಥೆಯ ಅಥವಾ ಇನ್ನಾವ ರಹಸ್ಯವನ್ನೂ ಹೊರಗೆಡಹಬೇಡ" ಎಂದು ಅಧಿಕಾರಿಯ ಬೋಧನೆ ಆಕೆಗೆ. ಆಕೆನೀಗ ಮರಣಪಡಲು, ಉಯಿಲನ್ನು ತೆರೆದು ನೋಡಿದಾಗ – ವಿನಿಫ್ರೆಡ್ಡಳಿಗೆ ೫ ಸಾವಿರ ಪವನು ಬರೆದಿಟ್ಟಿರುವುದು ಕಂಡುಬಂದಿದೆ!

ಪರ್ವತಗಳು ತೇಲುವುವಂತೆ!

ಈಗಲೀಗ ಭೂಶಾಸ್ತ್ರಜ್ಞರು ನಮಗೆ ಹಾಗೆ ಹೇಳುತ್ತಾರೆ! ಭೂಮಿಯ ಅಡಿಗೆ ಒಂದು ವಿಧದ ಅಂಟಾದ ದ್ರಾವಕವಿರುವುದೆಂದೂ, ಅದರ ಮೇಲೆ ಈ ಪರ್ವತಗಳು ನಿಂತಿರುವುವೆಂದೂ, ಅವು ಮೇಲೆದ್ದು ನಿಂತಷ್ಟೆ ಕೆಳಗೂ ಇವೆಯೆಂದೂ ಇವರು ಅಭಿಪ್ರಾಯಪಡುತ್ತಾರೆ.

ನಯಗಾರಾನದಿಯ ಸೆಳವು—

—ಕ್ರಮೇಣ ಕಡಿಮೆಯಾಗುತ್ತಿದೆಯಂತೆ. ಕಾರಣ? ನೀರು ದುಮ್ಮಿಕ್ಕುವಲ್ಲಿಂದ ಪ್ರತಿ ವರ್ಷ ಸಾವಿರಾರು ಟನ್ ಬಂಡೆಗಲ್ಲುಗಳು ಕೆಳಗೆ ಪ್ರವಾಹಕ್ಕೆ ಉರುಳುತ್ತಲೇ ಇದ್ದು, ಸೆಳವಿನ ಭರವು ಕಡಿಮೆಯಾಗುವುದೆಂದು ಕಂಡುಹಿಡಿಯಲಾಗಿದೆ. ಆ ಸೆಳವು ಸಂಪೂರ್ಣವಾಗಿ ನಿಂತು ಹೋಗಲು ನೂರುಗಟ್ಟಲೆ ವರ್ಷಗಳು ಬೇಕಾಗಬಹುದೆಂದೂ ಕಂಡುಹಿಡಿದಿರುವರು. ಆದರೂ, ಈ ನೀರಿನ [illegible]ದ ವಿದ್ಯುಚ್ಛಕ್ತಿಯನ್ನು ದೊರಕಿಸಿಕೊಳ್ಳುವ ಕಂಪೆನಿಗಳು, ಇನ್ನೂ ಇನ್ನೂ ೮ ಬಂಡೆಗಲ್ಲುಗಳು ಉರುಳದಂತೆ ಈಗಲೇ ಲಕ್ಷೋಪಲಕ್ಷ ಪವನುಗಳ ವೆಚ್ಚದಿಂದ ಕಾಮಗಾರಿ ನಡೆಸುವ ಯೋಜನೆಯಲ್ಲಿವೆ.

ಪ್ರಚಲಿತಸಮಾಚಾರ.

ರೈಲುಬಂಡಿಯಲ್ಲಿ ಕುಳಿತು ಆಳುವರು!

—ಕೆಮಲ್‌ಪಾಶರವರು! ತುರ್ಕಿಯ "ಸರ್ವಾಧಿಕಾರಿ"ಯವರು, ಪಂಚವಾರ್ಷಿಕ ಯೋಜನೆಯನ್ನು ಕೈಗೊಂಡಿದ್ದಾರೆ. ತುರ್ಕಿಸ್ಥಾನದಲ್ಲೆಲ್ಲ ಸಂಚರಿಸಿ, ಕಾರ್ಯನಿರ್ದೇಶಕರಾಗುವರು. ಆದಕ್ಕಾಗಿ ರೈಲುಬಂಡಿಯಲ್ಲಿ ಜೀವನ ನಡೆಸುವರಂತೆ. ಆ ಬಂಡಿಯಲ್ಲಿ ಇವರ ಕಾರ್ಯದರ್ಶಿ, ಕಾರಕೂನರು, ಬಿಡಾರ—ಎಲ್ಲವೂ ರೈಲುಬಂಡಿಯಲ್ಲೇ!

ಇಂದೋರಿನ ಮಾಜಿ ಮಹಾರಾಜರು—

—ಆರು ವರ್ಷಗಳ ಹಿಂದೆ ಅಮೇರಿಕದ ನ್ಯಾನ್ಸಿ ಮಿಲ್ಲರ್ ಎಂಬ ಮಹಿಳೆಯನ್ನು, ಶರ್ಮಿಷ್ಠಾದೇವಿಯೆಂಬ ನಾಮಧೇಯವಿತ್ತು, ಹಿಂದೂ ಮತಕ್ಕೆ ಸಂಪರ್ಕಿಸಿ ವಿವಾಹವಾದುದು ನೆನಪಿದೆಯಷ್ಟೆ. ಅವರಿಗೆ ಈಗ ಮೂರು ಹೆಣ್ಣು ಮಕ್ಕಳು ಇರುವುವು. ಫ್ರಾನ್ಸಿನಲ್ಲಿ ಒಂದು ಬಂಗಲೆಯನ್ನು ಕೊಂಡುಕೊಂಡು ಇರುತ್ತಿದ್ದರು. ಈಗ ಅದನ್ನು ವಿಕ್ರಯಿಸಿ, ಇಂಗ್ಲಾಂಡಿಗೆ ಹೋಗಿ ವಾಸಿಸುವರಂತೆ. ಸರಕಾರದ ಬೊಕ್ಕಸದಿಂದ ಇವರಿಗೆ ವರ್ಷಕ್ಕೆ ೫ ಲಕ್ಷ ರೂಪಾಯಿಗಳಿಗೆ ಕಡಿಮೆಯಾಗದಷ್ಟು ಜೀವನಾಂಶ ದೊರೆಯುತ್ತಿದೆ. (ಅವರ ಫ್ರಾನ್ಸಿನ ಮನೆಯಲ್ಲಿ ೫೦ ಎಕ್ರೆ ವಿಸ್ತೀರ್ಣದ ಉದ್ಯಾನವಿದೆ; ೨೨ ಶಯ್ಯಾಗೃಹಗಳಿವೆ; ೬ ಸ್ನಾನಗೃಹಗಳಿವೆ; ೧ ನಾಟಕಮಂದಿರವಿದೆ; ಜಲಕ್ರೀಡೆಗಾಗಿ ಕೆರೆ ಇದೆ.)

ನೀವಪೇಕ್ಷಿಸುವುದು ಶಾಂತಿ.

ಗದ್ದಲ ಯಾರಿಗೆ ಬೇಕಾಗಿದೆ? ಎಂದೇ ಮೋಟಾರಿನವರೂ, ವಿಶೇಷ ಶಬ್ದಮಾಡದ ಮೋಟಾರುಗಳನ್ನು ತಯಾರಿಸುವ ಪ್ರಮದಲ್ಲಿರುವರು. ಈ ವರ್ಷದ ಒಲಿಂಪಿಯಾ ಪ್ರದರ್ಶನದಲ್ಲಿ ಒಂದು ಮೋಟಾರು ಬಂದಿದೆ. "ಲಿಂಚೆಸ್ಟರ್ ೧೪" ಎಂದು ಹೆಸರು. ಪ್ರಪಂಚದಲ್ಲಿ ಇದರಷ್ಟು ಶಾಂತವಾದ (ಓಟದಲ್ಲಿ ಶಾಂತಿ ಅಲ್ಲ!) ಮೋಟಾರೇ ಇದು ಮನುಷ್ಯನ ಸ್ವರದಷ್ಟೂ ಶಬ್ದವಿಲ್ಲವಂತೆ.

ಮುಂಬಾಯಿಯಲ್ಲಿ ೨೦ ಸಾವಿರ "ಮವಾಳಿ"ಗಳಿರುವರು!

"ಮವಾಳಿ" ಎಂದರೆ ಕಾಳಪೋಕ ಅಥವಾ ದುರ್ಗುಣಿ ಎಂದರ್ಥ. ಇಂತಹವರು ಮುಂಬಾಯಿ ನಗರದೊಳಗೆ ಇಪ್ಪತ್ತು ಸಾವಿರದಷ್ಟು ಇರುವರೆಂದು, ಒಂದು ಕಮಿಟಿಯ ವರದಿ!

ಈ ಕಮಿಟಿಯನ್ನು—ಚಿಕ್ಕ ಮಕ್ಕಳ ಅಪರಾಧಗಳು ಹೆಚ್ಚುತ್ತಿರುವುದೇಕೆಂಬ ವಿಷಯವಾಗಿ ವಿಚಾರಣೆ ನಡೆಸಲು ನೇಮಕವಾಗಲಾಗಿತ್ತು. ಈ ಮವಾಳಿಗಳೇ ಆ ಮಕ್ಕಳನ್ನು, ಕಿಸೆಗಳ್ಳತನ, ಮನೆಗಳನ್ನೂ ಅಂಗಡಿಗಳನ್ನೂ ಪ್ರವೇಶಿಸಿ ಚಿಕ್ಕ ಪುಟ್ಟ ಕಳ್ಳತನ, ಅಫೀಮು—ಗಾಂಜಾ ಇತ್ಯಾದಿಗಳನ್ನು ಅಧಿಕಾರಿಗಳ ಕಣ್ಣುತಪ್ಪಿಸಿ ಒಯ್ಯೋಣ, ಆಗಾಗ್ಗೆ ಬೇಡುವವರ ವೇಷಹಾಕಿ ಬೇಡೋಣ ಮತ್ತು ಸಂದರ್ಭ ಸಿಕ್ಕಿದಾಗ ಕದಿಯೋಣ—ಇವೆಲ್ಲ ದುರ್ಗುಣಗಳನ್ನು ಕಲಿಸುವರೆಂದು ತಿಳಿದುಬಂದಿದೆ.

ಮವಾಳಿಗಳನ್ನು ಹತೋಟಿಗೆ ತರಲು ಕಠಿಣವಾದ ಕಾಯಿದೆಗಳಾಗಬೇಕೆಂದು ಕಮಿಟಿಯು ಅಭಿಪ್ರಾಯಪಡುತ್ತದೆ.

ಲಂಡನಿನಲ್ಲಿ ಅಕ್ಕಿವ್ಯಾಪಾರದ ಕಂಪೆನಿ.

ಇದೇ ಬರುವ ನವಂಬರ ತಾ. ೧೦ರಂದ "ಇಂಟರ್‌ನೇಶನಲ್ ರೈಸ್ ಕಂಪೆನಿ" ಎಂಬ ಹೆಸರಿನಿಂದ ಲಂಡನಿನಲ್ಲಿ ಕೆಲವು ಸಾಹುಕಾರರು, ಅಕ್ಕಿಯ ವ್ಯಾಪಾರದ ಒಂದು ಕಂಪೆನಿ ತೆರೆವರೆಂದು ಪ್ರಕಟವಾಗಿದೆ. ೫೦ ಸಾವಿರ ಪವನಿನ ಭಂಡವಾಳ; ೧ ಪವನಿನ ಪಾಲುಗಳು.

ಒಂಭತ್ತು ದಿನಗಳ ಸಮಾಧಿ.

ಕೃಪಾಲಪುರಿ ಮಹಂತರ ಶಿಷ್ಯನಾದೊಬ್ಬ ಸಾಧುವು ಹೊಶಂಗಾಬಾದಿನಲ್ಲಿ 'ಸಮಾಧಿಯ ಅದ್ಭುತವನ್ನು ತೋರಿರುವನು. ನವರಾತ್ರಿ ಆರಂಭದ ದಿನ ಆತನನ್ನು ಎಡೆಯ ತನಕ ಹೂಳಿ, ಅವನ ಸುತ್ತಲೂ ಗೋಡೆಯನ್ನು ಎಬ್ಬಿಸಿದರು. ೯ ದಿನಗಳಲ್ಲಿ ಆ ಗೋಡೆಯು ಮೋಳಕಾಲಿಷ್ಟು ೧ ಅಡಿ ಎತ್ತರದ ಬೆಳೆಯಿತು. ಆ ಒಂಭತ್ತು ದಿನಗಳ ತನಕ ನಿಶ್ಚೇಷ್ಟಿತನಾಗಿದ್ದ ಸಾಧುವು, ೯ನೇ ದಿನ ಕಣ್ಣು ತೆರೆದ ಮೇಲೆ ಆತನನ್ನು ಮಣ್ಣಿನಿಂದ ಮೇಲಕ್ಕೆ ತೆಗೆದರು.

(೪೮ನೇ ರಾಷ್ಟ್ರೀಯ ಸಭಾಧಿವೇಶನ).

ಸ್ವಾಗತಾಧ್ಯಕ್ಷರಾದ ಶ್ರೀ| ಕೆ. ಎಸ್. ನರಿಮ್ಯಾನರ ಭಾಷಣ.

ಬೊಂಬಾಯಿ, ತಾ. ೨೬.

ಬಂಧುಭಗಿನಿಯರೇ ಮತ್ತು ಗೆಳೆಯರೇ,

ನಲ್ವತ್ತೆಂಟನೇ ರಾಷ್ಟ್ರೀಯ ಸಭಾಧಿವೇಶನ ಮತ್ತು ಕೊಂಗ್ರೆಸ್ ರಾಜಕೀಯಗಳ ಹಾಗೂ ವಾಣಿಜ್ಯ ಕೇಂದ್ರವಾದ ಈ ಬೊಂಬಾಯಿ ನಗರದ ಪರವಾಗಿ ನಾನು ನಿಮ್ಮನ್ನು ಇಲ್ಲಿಗೆ ಸ್ವಾಗತೀಕರಿಸಲು ಆನಂದಪಡುತ್ತೇನೆ. ಬೊಂಬಾಯಿಯಲ್ಲಿ ಕೊಂಗ್ರೆಸ್ ಅಧಿವೇಶನ ಜರಗಿ ೧೬ ವರ್ಷಗಳಾದುವು. ಆಗಲೂ, (೧೯೧೮) ಬ್ರಿಟಿಷರು ಕೊಡಲಿರುವ ಸುಧಾರಣೆಗಳ ವಿಷಯವಾಗಿಯೇ ಚರ್ಚೆಯಾಗಿತ್ತು. ಸ್ವರಾಜ್ಯದ ಭಾಷೆಯನ್ನು ಕೊಟ್ಟ ಬ್ರಿಟಿಷ್ ಸರಕಾರದ ಪರವಾಗಿ ಮೊಂಟೆಗ್ಯೂರವರು ಹಿಂದೂದೇಶಕ್ಕೆ ಬಂದಿದ್ದರು. ಜನಾಂಗವು ಆ ಸುಧಾರಣೆಗಳನ್ನು ಸ್ವೀಕರಿಸದೆ ತಿರಸ್ಕರಿಸಿಬಿಟ್ಟಿತು. ಅದನ್ನು ಲಕ್ಷಿಸದೆ ಸುಧಾರಣಾ ಮಸೂದೆಯ ಜ್ಯಾರಿಗೆ ತರಲ್ಪಟ್ಟಿತು. ಆದರೆ ಆ ಮಸೂದೆಯು ಹಿಂದೂದೇಶದಲ್ಲಿ ಶಾಂತಿಯನ್ನು ತರಲಾರದೆ ಹೋಯಿತು. ಇನ್ನೂ ಹೆಚ್ಚಿನ ಸುಧಾರಣೆಗಳ ಬಗ್ಗೆ ಮುಂದೆ ಹತ್ತು ವರ್ಷಗಳಲ್ಲಿ ಆಲೋಚಿಸಲಾಗುವುದೆಂಬ ಭರವಸೆಯು ಮಾತೊಂದೂ ಕೊಡಲಾಗಿತ್ತು. ಅದರಂತೆ ಕಮಿಷನುಗಳು ಬರುತ್ತಲೂ ಹೋಗುತ್ತಲೂ ಇದ್ದುವು. ಮೂರು ರೌಂಡ್ ಟೇಬಲ್ ಪರಿಷತ್ತುಗಳೂ ಆದುವು. ಅವುಗಳ ಫಲವಾಗಿ ಇಂದು ಶ್ವೇತಪತ್ರವು ಹೊರಟಿದೆ. ಆದರೆ, ಅತೃಪ್ತ ಜನಾಂಗವಿಂದು, ಅವುಗಳನ್ನು ತಿರಸ್ಕರಿಸಿ, ಹೊಸ ಸಂಗ್ರಾಮದ ಸಿದ್ಧತೆಗಾಗಿ ಇಲ್ಲಿ ನೆರೆದಿದೆ.

ಬೊಂಬಾಯಿಯ ಮೂರು ಕೊಂಗ್ರೆಸ್ ಅಧಿವೇಶನಗಳಲ್ಲೂ ಬಿಹಾರಿನ ಮುಖಂಡ ಮಹನೀಯರೇ ಅಧ್ಯಕ್ಷತನ ವಹಿಸುವಂತಾಯಿತೆಂಬುದೊಂದು ವಿಶೇಷ. ೧೯೧೫ರಲ್ಲಿ ಲೋರ್ಡ್ ಸಿಂಹರವರೂ, ೧೯೧೮ರಲ್ಲಿ ಸಯದ್ ಹಸನ್ ಇಮಾಮರವರೂ, ಇಂದು ಬಿಹಾರಿನ ಮುಖಂಡರಾದ ಬಾಬೂ ರಾಜೇಂದ್ರ ಪ್ರಸಾದರೂ! ದೇಶದ ಕರೆಯನ್ನು ತಿರಸ್ಕರಿಸಲಾರದೆ, ಭೂಕಂಪ ಪೀಡಿತಗಳ ಪ್ರದೇಶದಲ್ಲಿನ ತನ್ನ ಮಹತ್ತಾದ ಕಾರ್ಯವನ್ನು ತೊರೆದೂ, ತನ್ನ ದೇಹಾಲಸ್ಯವನ್ನು ಚಿಂತಿಸದೆಯೂ ಅವರಿಂದು ಇಲ್ಲಿಗೆ ಬಂದಿರುವುದು—ಅವರ ದೇಶಾಭಿಮಾನವನ್ನೂ ವಿಶಾಲ ಹೃದಯವನ್ನೂ ವ್ಯಕ್ತಗೊಳಿಸುತ್ತದೆ. (ಇಲ್ಲಿ ಗತ ಮುಖಂಡರ ಹಾಗೂ ಕಾರಾಗೃಹದಲ್ಲಿರುವವರ ಬಗ್ಗೆ ಎರಡು ಔಪಚಾರಿಕ ಮಾತುಗಳನ್ನಾಡಿ ಮುಂದೆ)—೧೯೧೮ರಲ್ಲಿ ಬೊಂಬಾಯಿಯಲ್ಲಿ ಅಧಿವೇಶನವು ಜರಗಿದಾಗ, ಬೊಂಬಾಯಿ ನಗರವು ಮುಂದ ಪಕ್ಷೀಯರ ನಗರವಾಗಿತ್ತು. ಸರ್ ಫಿರೋಜ್ ಷಾ, ಗೋಖಲೆ ಮೊದಲಾದವರು ಅಂದಿನ ಮುಖಂಡರು. "ನಮ್ಮ ವಿನಂತಿ"ಗಳೂ—"ತೀವ್ರ ನಿಷೇಧ"ಗಳೂ ಅಂದಿನ ಅವರ ಶಸ್ತ್ರಗಳಾಗಿದ್ದುವು. ಆದರೆ ಈಗ ಹಿಂದೀ ರಾಜಕೀಯಗಳು ತೀವ್ರ ಪ್ರಗತಿ ಹೊಂದಿವೆ. ಅಂದು ಸಾಮ್ರಾಜ್ಯಾಂತರ್ಗತ ಪಂಥ್ಯದಲ್ಲಿ ತೃಪ್ತಿ ಪಡಬಹುದಾಗಿದ್ದ ನಾವು ಇಂದು ಪೂರ್ಣ ಸ್ವಾತಂತ್ರ್ಯಕ್ಕಾಗಿ ಹಸಿದಿರುವೆವು. ಈಗ "ನಮ್ಮ ವಿನಂತಿ"ಗಳಲ್ಲ. ಬದಲಾಗಿ, ಶಾಂತವೂ ನ್ಯಾಯವೂ ಆದ ನೇರಾದ ಕಾರ್ಯ. ಇದರಲ್ಲಿ ಬೊಂಬಾಯಿಯು ಎಂದೆಂದೂ ಮುಂದೆ ನಿಂತಿರುವುದೆಂಬುದನ್ನು ಗೌರವದಿಂದಾಡುವೆನು. ಮೊಂಟೆಗ್ಯೂ ಸುಧಾರಣೆಗಳು ಜ್ಯಾರಿಗೆ ತರಲ್ಪಟ್ಟ ಅಲ್ಪ ಕಾಲದಲ್ಲೆ ಮಹಾತ್ಮಾಜಿಯವರು ನಮ್ಮ ರಾಜಕೀಯ ರಂಗಸ್ಥಳಕ್ಕಿಳಿದರು. ಹಿಂದೂದೇಶದ ಬಂಧವಿಮೋಚನೆಗಾಗಿ ಸತ್ಯಾಗ್ರಹ ಅಸ್ತ್ರವನ್ನು ಪ್ರಯೋಗಿಸಬೇಕೆಂದು ನಾಗಪುರ ಕೊಂಗ್ರೆಸ್ಸಿನಲ್ಲಿ ಸೂಚಿಸಿದರು. ಆದರೆ, ಅದರ ಪ್ರಯೋಗವೂ ಪರೀಕ್ಷೆಯೂ ಆಗಿ ಮುಗಿದ ಮೊದಲು ಅದು ೧೯೨೨ರಲ್ಲಿ ಹಿಂದೆಗೆಯಲ್ಪಟ್ಟಿತು. ಅಂದಿನಿಂದ ೮ ವರ್ಷಗಳ ತನಕ ಜನಾಂಗವು ಮುಂದಿನ ಒಂದು ಸಂಗ್ರಾಮಕ್ಕಾಗಿ ಸಿದ್ಧತೆಗಳನ್ನು ನಡೆಸಿತು. ಕಲ್ಕತ್ತೆಯಲ್ಲಿ, ಪೂರ್ಣಸ್ವಾತಂತ್ರ್ಯವೇ ನಮ್ಮ ಧ್ಯೇಯವೆನ್ನುತ್ತ (೧೯೨೮ರಲ್ಲಿ) ತನ್ನ ಧ್ವಜವನ್ನಾರೋಹಿಸಿತು. ಪ್ರಿನ್ಸ್ ಒಫ್ ವೇಲ್ಸರ ಆಗಮನ ಕಾಲದಲ್ಲಿ ಬಹಿಷ್ಕಾರವನ್ನು ವ್ಯವಸ್ಥೆಗೊಳಿಸಿಯೂ, ತಿಲಕ ಸ್ವರಾಜ್ಯ ಫಂಡಿಗೆ ೬೦ ಲಕ್ಷಗಳ ಚಂದಾವನ್ನೆತ್ತಿಯೂ ಬೊಂಬಾಯಿಯು ೧೯೩೦ರಲ್ಲಿ ಮುಂದಾಳಾಯಿತು. ಲಾಹೋರ್ ಕೊಂಗ್ರೆಸ್ಸಿನ ನಂತರ ನಡೆದ ಸತ್ಯಾಗ್ರಹ ಚಳವಳಿಯಲ್ಲಿ ಬೊಂಬಾಯಿ ನಗರವು ವಹಿಸಿದ ಕಾರ್ಯಭಾಗವನ್ನೆಲ್ಲರೂ ಬಲ್ಲರು. ಸಾವಿರಾರು ಮಂದಿ ಸ್ತ್ರೀಯರೂ ಮುಂದೆ ಬಂದರು. ಮುದ್ರಾಲಯ ಶಾಸನಕ್ಕೆದುರಾಗಿ ಕೊಂಗ್ರೆಸ್ ಬುಲೆಟಿನ್ ಪತ್ರಿಕೆಯು ಪ್ರಕಟಿಸಲ್ಪಟ್ಟಿತು. ವಿಶೇಷವೆಂದರೆ—ಕೊಂಗ್ರೆಸ್ಸಿನ ಕಾರ್ಯಕ್ರಮವು ರೇಡಿಯೊ ಮೂಲಕವೂ ಪ್ರಚಾರಪಡಿಸಲಾಯಿತು.

ಇಲ್ಲಿ ಶ್ರೀ ನರಿಮ್ಯಾನರು ಗಾಂಧಿ-ಇರ್ವಿನ್ ಸಂಧಿ, ಓರ್ಡಿನೆನ್ಸ್ ಆಳ್ವಿಕೆ, ಚಳವಳಿವನ್ನು ಹಿಂದೆಗೆದ ವಿದ್ಯಮಾನಗಳು, ಇವುಗಳನ್ನು ವಿವರಿಸಿ, ಬೊಂಬಾಯಿ ಕೊಂಗ್ರೆಸ್ಸನ್ನು ಚರ್ಚ್‌ಗೇಟ್ ಬಳಿಯಲ್ಲಿ ಜರಗಿಸುವುದಕ್ಕೆ ಸರಕಾರದವರು ಅಪ್ಪಣೆ ಕೊಡದುದನ್ನು ನೊಂದ ನುಡಿಯಿಂದ ಚುಚ್ಚಿ ಪ್ರಕಟಿಸಿ, "ಹಾಗೆ ತಿರಸ್ಕರಿಸಿದುದೇ ನಮ್ಮ ದೇಶದಲ್ಲಿ ನಮಗೆ ಅಧಿಕಾರವಿಲ್ಲದ ನಮ್ಮ ನಪುಂಸಕತ್ವವನ್ನು ಸಾರುತ್ತಿದೆ"ಯೆಂದು ಸಂತಾಪದಿಂದ ಅದಿ ಕೊಂಗ್ರೆಸ್ಸನ್ನು ಅಕ್ಟೋಬರದಲ್ಲೆ ಜರಗಿಸಲು ಘಟಿಸಿಬಂದ ಕಾರಣಗಳನ್ನು ವಿವರಿಸಿ, ಕೌನ್ಸಿಲ್ ಪ್ರವೇಶದ ಕಾರ್ಯಕ್ರಮವನ್ನು ವಿಶದೀಕರಿಸಿ, ವೋಟರರು ಕೊಂಗ್ರೆಸ್ ಉಮೇದ್ವಾರರನ್ನೆ ಆದರಿಸಬೇಕೆಂಬ ವಿನಂತಿ ಮಾಡಿದ ಮಾತುಗಳನ್ನಾಡಿ, ಕೆಮ್ಮಾರ್ನೆ ಏಕಾಏಕಿಯಿಂದ ಬಂದ, ಅದರ ವಿಷಯವಾಗಿ ಎದ್ದಿರಬಹುದಾದ ಸಂದೇಹಗಳನ್ನು ನಿವಾರಿಸಿ, ಮಹಾತ್ಮಾಜಿಯವರು ನಿವೃತ್ತರಾಗುವುದರ ಕುರಿತು ಶ್ರೀ ವಲ್ಲಭ ಭಾಯಿಯವರು ಪ್ರಕಟಿಸಿದ ರೀತಿಯ ಅಭಿಪ್ರಾಯಗಳನ್ನು ಮತ್ತಷ್ಟು ಸ್ಫುಟವಾಗಿ ನುಡಿದು, ಮುಂದಿನ ಕೊಂಗ್ರೆಸ್ ಕಾರ್ಯಕ್ರಮಗಳಲ್ಲಿ ದೇಶ ಭಕ್ತರೆಲ್ಲರೂ ಹೃತ್ಪೂರ್ವಕವಾಗಿ ಶ್ರಮಪಡುವರೆಂಬ ಭರವಸೆಯನ್ನು ವ್ಯಕ್ತಪಡಿಸಿ, ಈ ಅಧಿವೇಶನದ ನಿಷ್ಕರ್ಷೆಗಳ ಕುರಿತೂ ತಿಳಿಸಬೇಕಾದುದನ್ನು ತಿಳಿಸಿ, "ವಂದೇ ಮಾತರಂ" ಮಂತ್ರದಿಂದ ತಮ್ಮ ಭಾಷಣವನ್ನು ಮುಗಿಸಿದರು.

ತುಂಡು ಸುದ್ದಿ.

ಕಲ್ಕತ್ತೆಯ ಶ್ರೀ ಎನ್. ಧಾನುಕ ಎಂಬ ಓಟುಗಾರನು ೫ ಘಂಟೆ ೨೦ ನಿಮಿಷಗಳಲ್ಲಿ ೪೦ ಮೈಲುಗಳಷ್ಟು ಓಡಿ ಪ್ರಥಮ ಬಹುಮಾನವನ್ನು ಪಡೆದಿರುವನು.

ನೋಪೆಡಪುರದ ಮಹಾರಾಜಾ ಬಹದ್ದೂರರು ಈ ವರ್ಷದ ದುರ್ಗಾಪೂಜೆಯನ್ನು ವಿಜೃಂಭಣೆಯಿಂದ ಜರಗಿಸಿದರು. ದೇವಿಗೆ ೧ ಲಕ್ಷ ಕಮಲಪುಷ್ಪಗಳ ಅರ್ಚನೆ; ಸಾವಿರಾರು ಜನರಿಗೆ ಭೋಜನ; ಸಾವಿರಾರು ಮಂದಿಗೆ ಉಡುಗೊರೆ; ಮತ್ತು ದಾನ.

ವನ್ಯಜಂತುಗಳ ರಕ್ಷಣೆಯ ಸಂಬಂಧವಾದ ಅಖಿಲ ಭಾರತ ಪರಿಷತ್ತೊಂದನ್ನು ಇದೇ ತಿಂಗಳಲ್ಲಿ ಡಿಲ್ಲಿಯಲ್ಲಿ ಜರಗಿಸಲು ಸನ್ನಾಹಗಳಾಗುತ್ತಿವೆ.

ಮುಂಬಾಯಿಯಲ್ಲಿ ಅತ್ಯದ್ಭುತ ವ್ಯಾಯಾಮ ಪ್ರದರ್ಶನ.

೧೯೩೦ರಲ್ಲಿ ಸ್ಥಾಪಿತವಾಗಿ ದಕ್ಷಿಣದ ಸಾಹಿತ್ಯಸೇವೆ ಮಾಡುತ್ತಿರುವ ಉಡುಪಿಯ ಕಿರಿಯರ ಪ್ರಪಂಚ'ದ 'ತೊದಲ್ನುಡಿ' ಗ್ರಂಥಮಾಲೆಯ ಸಹಾಯಾರ್ಥವಾಗಿ ಸೌತ್ ಕೆನರಾ ಫಿಸಿಕಲ್ ಇನ್ಸ್ಟಿಟ್ಯೂಟಿನವರು ತಾರೀಕು ೧೧—೧೧—೩೪ನೇ ಆದಿತ್ಯವಾರ ದಿನ ಸಂಜೆ ೪-೩೦ರಿಂದ ೭-೩೦ರ ತನಕ ಮುಂಬಾಯಿಯ ಸರ್ ಕವಾಸ್ಜಿ ಜಹಾಂಗೀರ್ ಹೋಲಿನಲ್ಲಿ ತಮ್ಮ ಅತ್ಯದ್ಭುತ ವ್ಯಾಯಾಮ (ಸರ್ಕಸ್) ಪ್ರದರ್ಶನವನ್ನು ನಡೆಸಲಿರುವರು. ಈ ವ್ಯಾಯಾಮಸಂಸ್ಥೆಯ ಡೈರೆಕ್ಟರ್ ಮತ್ತು ಇನ್ಸ್ಟ್ರಕ್ಟರರೂ ದಕ್ಷಿಣ ಕನ್ನಡಿಗರೂ ಆದ ಶ್ರೀ ಕೇಶವ್ರನವರು ಹಲವು ವಿಧದಿಂದ ನಾಡಸೇವೆಯನ್ನು ಮಾಡುತ್ತಿರುವರಾಗಿ, ಅವರ ಊರಿನದೇ ಆದ 'ಕಿರಿಯರ ಪ್ರಪಂಚ'ದ ಸಹಾಯಾರ್ಥವಾಗಿ ಜರಗಿಸುವ ಈ ಪ್ರದರ್ಶನವು ಅತ್ಯಂತ ಜಯಶೀಲವಾಗುವಂತೆ ಮುಂಬಾಯಿಯ ಕನ್ನಡ ಬಂಧುಗಳು ನೆರವಾಗುವರಾಗಿ ಹಾರೈಸುತ್ತೇವೆ. 'ಕಿರಿಯರ ಪ್ರಪಂಚ'ದ ಕಾರ್ಯದರ್ಶಿ ಶ್ರೀ ಕೆ. ಹೊನ್ನಯ್ಯ ಶೆಟ್ಟರು ಇದಕ್ಕಾಗಿ ಮುಂಬಾಯಿಗೆ ತೆರಳಿರುವರು. ಮುಂಬಾಯಿಯ ನಿವಾಸಿಗಳಾದ ಕೊಡುಗೈಯ ಕನ್ನಡಿಗರು ಈ ಪ್ರದರ್ಶನದ ಟಿಕೇಟುಗಳನ್ನು ಪಡೆದೂ ಗ್ರಂಥಮಾಲೆಗೆ ಪೋಷಕರಾಗಿ ಸೇರಿಯೂ ಪ್ರೋತ್ಸಾಹಿಸುವರೆಂದು ನಂಬುತ್ತೇವೆ. ಅಲ್ಲಿಯ ಕನ್ನಡಿಗರ ಸಂಸ್ಥೆಗಳವರೂ ಈ ಸಂದರ್ಭದಲ್ಲಿ ಶ್ರೀ ಶೆಟ್ಟರಿಗೆ ತುಂಬಾ ಸಹಕಾರವನ್ನೀಯುವರಾಗಿ ಕೋರುತ್ತೇವೆ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

Shiromani Narayanacharya,
Choukhamba, Benares City

ಶಾಸ್ತ್ರಿಗಳೇ ಪೂರ್ಣಿಕರು ಅರೋಗ್ಯರೇ ಅಥವಾ ಈಗಿನವರೇ? ದಾರುಣ್ಯಯುತ್ವನವರೇ ಪೂರ್ಣಕರ ಆರೋಗ್ಯವೇ ಘಾಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ದಿನದಿನ ಯೋಗಿಗಳೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಕೀರ್ತಿವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವವು ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ನಕ್ಷ ಆಕ್ಕೆ ಪ್ರಮಾಣದ ಠಂತಿಸರ 1ಕ್ಕೆ ಅತಿ 100ರ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅತಿ 300ರ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 300ರ ರೂ. 50ರ ವರೆಗೆ. ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಅತಿ 400ರ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 20ರ 30ರ ವರೆಗೆ. 12-13–14 ಮುಖದ ಕಾಳು 1ಕ್ಕೆ ರೂಪಾಯಿ 50ರ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆಕಾಳಿಗಿಂತ ಸಣ್ಣದಾಗಿದ್ದಲ್ಲಿ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅವರೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಅತಿ ಸ್ಪೆಂಕ್ಸ್ ಕಳುಹಿಸಿದರೆ 3 ಇನಾಮುಗಳು–1 ವಿಶ್ವೇಶ್ವರ ಪಟ, 1 ಕಾಶೀ ಪಟ್ಟೆ, 1 ಕೆಟಲಾಗ ಸೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಿಸ್ (ಕಾಶೀ)

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ, ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ಸಿರೋಗಿಗಳೂ, ಶ್ರಮಜೀವಿಗಳೂ ಇದನ್ನು ಕ್ರಮಿಸಿ ಸೇವಿಸಿದ್ದಲ್ಲಿ ಕ್ರಮ ಪರಿಹಾರವಾಗಿ ಸುಖನಿದ್ರೆಯೂ ಲಭಿಸುವುದು.

ಬಾಟ್ಲಿ 1ರ ರೂ. 2–0–0. ಬಾಟ್ಲಿ 3ರ ರೂ. 5–12–0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಒಂದು ತಡಿಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2–8–0. ಡಬ್ಬಿ 3ರ ರೂ. 7–0–0.

ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ನಂಜಿನ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದವುಗಳನ್ನು ಹೋಗಲಾಡಿಸಿ ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1–8–0. ಬಾಟ್ಲಿ 2ರ ರೂ. 3–0–0.

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆಕೃತಿಯು ಅಶಕ್ತಿಯಾಗುತ್ತದೆ. ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತರುವಾಯ ಏನು ಮಾಡಿದರೂ ಶುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಕಿರಿ. ಮುಂಬೈ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಡುತ್ತಾರೆ. ಸೂಚನೆ:—ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ತಿಮ್ಮಕ್ಕು ರೂ. ೪–೦–೦. ವಿ. ಪಿ. ಅಂಚೆ ೮.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೋ. ಮಿರಜ, S. M. C

'ಜವಾಹಿರ್' ಚಿಮ್ಣಿ ಎಣ್ಣೆ

ರಾತ್ರಿಯಲ್ಲಿ ಸೂರ್ಯನಂತೆ ಪ್ರಕಾಶಕೊಡುವುದೆಂದರೆ

ಇದೇ

'ಜವಾಹಿರ್' ಚಿಮ್ಣಿ ಎಣ್ಣೆ

ನಿಮ್ಮೂರಲ್ಲಿ ಇದು ಮಾರಲ್ಪಡುತ್ತಿದೆಯೋ? ಇಲ್ಲವಾದರೆ ಕೂಡಲೇ ವಿಚಾರಿಸಿಗಾಗಿ ಬರೆದುಕೊಳ್ಳಿರಿ.

ವಿಳಾಸ:—

T. Madhava Pai,
Distributor, Kasargod, S. K.

ರೇಶ್ಮೆಯಂತೆ, ನುಣುಪಾದ ಮತ್ತು
ಹೊಳಪಾದ ಕೇಶಧಾಮ



ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನವಮುಗ್ಧಕರವಾದ ಸುಗಂಧವನ್ನುಳ್ಳುದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ತೈಲ,
ವೆಂಕಟೇಶ್ ಅಸ್ಪತ್ರಿ ಎದುರು, ಮಂಗಳೂರು



ಸ್ಕಿಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶನಿಗೂ ಜನಕೋಟಿಗೂ ಇದುವೇ
ರಾಜಮದ್ದು

ಮಲೇರಿಯ, ಇನ್‌ಫ್ಲುಯಂಜಾ ಮತ್ತು ಜ್ವರಗಳನ್ನು
ಗುಣಪಡಿಸುತ್ತದೆ;

ಮೆಡನ್ ಸನ್ಸ್ ಎಂಡ್ ಕೋ.,
ಬೊಂಬಾಯಿ, 2.

MADON SONS & Co
PHARMACEUTICAL CHEMISTS, BOMBAY

ಸಾಹಿತ್ಯ

ಸಾಹಿತ್ಯ ವಿಚಾರಗಳು.

ಲೋಕದಲ್ಲಿ ಕೋಟಿಗಟ್ಟಲೆಯಾಗಿ ಜನರಿದ್ದರೂ ಒಬ್ಬನಂತೆ ಇನ್ನೊಬ್ಬನಿಲ್ಲ; ಪ್ರತಿಯೊಬ್ಬನೂ ಒಂದೊಂದು ವೈಶಿಷ್ಟ್ಯದಿಂದ. ಮನುಷ್ಯನ ಒಳಗಣ ಮತ್ತು ಹೊರಗಣ ಎರಡು ವ್ಯಕ್ತಿಗಳಲ್ಲಿಯೂ ಈ ವೈಶಿಷ್ಟ್ಯವು ಸ್ಫುಟವಾಗಿ ತೋರುವುದು.

ಮನುಷ್ಯನ ಶೈಲಿ. ವಿವಿಧಾಂಗಗಳಿಂದ ಕೂಡಿದ ದೇಹವೆ ಹೊರಗಣ ವ್ಯಕ್ತಿ. ಭಾವನೆಯು, ಅದರ ಆಚರಣೆಯು, ಸಂಸ್ಕಾರ ರೂಪವಾದ ಶೀಲವೆ ಒಳಗಣ ವ್ಯಕ್ತಿ. ಅವನವನ ಶೀಲಕ್ಕೆ ಅವನವನೆ ನಿರ್ಮಾತೃ. ದೇಹವು ದೈವದತ್ತವಾದುದು. ತನ್ನಿಂದಲೆ ಸೃಷ್ಟವಾದ ಶೀಲಕ್ಕನುಗುಣವಾಗಿ ದೈವದತ್ತವಾದ ತನ್ನ ದೇಹಕ್ಕೆ ಒಂದು ರೀತಿಯ ಮಿರುಗು ಕೊಟ್ಟು ಮನುಷ್ಯನು ಅದನ್ನು ಬೇಕಾದಂತೆ ಉಪಯೋಗಿಸುವನು. ಈ ಮಿರುಗನ್ನೂ ಶೀಲವನ್ನೂ ಶೈಲಿಯೆಂದು ಕರೆಯುತ್ತೇವೆ. ಇದು ಮನುಷ್ಯನ ಶೈಲಿ.

ಕವಿಯ ವೈಶಿಷ್ಟ್ಯವು ಅವನ ಶೈಲಿಯಲ್ಲಿ ವಿಶದವಾಗುತ್ತದೆ. ಇದೇ ಅರ್ಥವನ್ನು ಆಂಗ್ಲ ಕವಿಯೊಬ್ಬನು 'Style is the man' 'ಮನುಷ್ಯನೆ (ಕವಿಯು) ಶೈಲಿ' ಎಂಬ ಮಾತಿನಿಂದ ಹೇಳುತ್ತಾನೆ.

ಕಾವ್ಯದ ಶೈಲಿ. ಕವಿನಿರ್ಮಿತವಾದ ಕಾವ್ಯಕ್ಕೆ ಶಬ್ದರೂಪವಾದ ದೇಹವೂ ಶೀಲರೂಪವಾದ ಅಲಂಕಾರಗಳೂ ಇದ್ದೇ ಇವೆ. ಇಲ್ಲಿಯೂ ಶೀಲದಿಂದ ಶರೀರಕ್ಕೆ ಸಂಸ್ಕೃತಿಯುಂಟಾಗುವುದು ಸಹಜ. ಅಂತೂ ಯಾವುದಾದರೊಂದು ವಸ್ತು ತನ್ನ ವ್ಯಕ್ತಿತ್ವವನ್ನು ಪ್ರಕಟಗೊಳಿಸುವ ರೀತಿಯೆ ಶೈಲಿ. ಒಂದೆ ಅರ್ಥವು ಬೇರೆ ಬೇರೆ ಕವಿಗಳ ಕೈಗೆ ಸಿಕ್ಕಿ ಬೇರೆ ಬೇರೆ ರೀತಿಯ ಮಿರುಗನ್ನು ಪಡೆಯುವುದು; ಅಥವಾ ಬೇರೆ ಬೇರೆ ಶೈಲಿಯಲ್ಲಿ ವ್ಯಕ್ತವಾಗುವುದು. ಆದುದರಿಂದ ಕವಿಯ ವೈಶಿಷ್ಟ್ಯವು ಅವನ ಶೈಲಿಯಲ್ಲಿ ವಿಶದವಾಗುತ್ತದೆ. ಹೀಗೆ ಕಾವ್ಯದ ಶೈಲಿಯೆಂದರೆ ವಿಷಯ ಪ್ರತಿಪಾದನ ಕ್ರಮ, ವಸ್ತು ಸಂವಿಧಾನ, ಬಂಧದ ಪದ್ಧತಿ, ಉಚಿತ ಪದ ಪ್ರಯೋಗ, ಇವಿಷ್ಟರಿಂದ ಕಾವ್ಯಕ್ಕುಂಟಾಗುವುದೊಂದು ಶೋಭೆ.

ನಿಷ್ಠುರವಾದ ಅಕ್ಷರಗಳುಳ್ಳ ಬಂಧವು ಓದುವವನಿಗೂ ಕೇಳುವವನಿಗೂ ಸುಖವೆನಿಸುವುದಿಲ್ಲ. ವಾಚಕನಿಗೆ ಉಚ್ಚಾರಣೆಗೆ ಕಷ್ಟ; ಕೇಳುವವನಿಗೆ ಕಿವಿಗೆ ಕರ್ಕಶ. ಆದುದರಿಂದ ಬಂಧವು ನಿಷ್ಠುರಾಕ್ಷರಪ್ರಾಯವಲ್ಲದಿರುವುದು ಉತ್ತಮ ಶೈಲಿಯ ಒಂದು ಲಕ್ಷಣ. ಸಮರ್ಪಕವಾದ ಅರ್ಥಕೊಡುವ ಕ್ಲಿಷ್ಟವಲ್ಲದ, ವ್ಯಾಕರಣ ದೋಷವಿಲ್ಲದ ಪದಗಳೆ ಉಚಿತವಾದ ಪದಗಳು. ಇದು ಉತ್ತಮ ಶೈಲಿಯ ಎರಡನೆಯ ಲಕ್ಷಣ.

ಶೈಲಿಯ ಲಕ್ಷಣ.

ಇನ್ನು ಸಂದರ್ಭೋಚಿತವಾಗಿ ಇಂತಹ ಶಬ್ದಗಳು ಗಾಢವಾಗಿಯೊ ಶಿಥಿಲವಾಗಿಯೊ ಪರಸ್ಪರ ಸಂಧಿಯಾಗಿಯೊ ವಿರಳಿತದಿಂದಲೊ ಕುಣಿಯುವಂತೆಯೊ ನಿರರ್ಗಲವಾಗಿ ಬರುವ ಬಂಧವೆ ಉತ್ಕೃಷ್ಟ ಶೈಲಿಯ ಮೂರನೆಯ ಲಕ್ಷಣ. ಪ್ರಯೋಗದಲ್ಲಿ ಯಾವ ದೋಷವೂ ಇರಬಾರದೆಂದ ಮೇಲೆ ಬೇರೆ ಹೇಳುವುದಗತ್ಯವಿಲ್ಲ. ಇಂತಹ ಶೈಲಿಯು ಭಾಷಾಪ್ರೇಮಿಯಾದ ಯಾವನ ಮನಸ್ಸನ್ನಾದರೂ ಅಪಹರಿಸದಿರದು.

ಹೊಸಗನ್ನಡ ಕವಿಗಳ ಶೈಲಿಯು ಉತ್ಕೃಷ್ಟವಾಗಲು ಇನ್ನೂ ಅನೇಕ ವರ್ಷಗಳೂ ವಿಶೇಷ ಯತ್ನವೂ ಸತತಾಭ್ಯಾಸವೂ ಬೇಕು. ಇಲ್ಲಿ 'ಕವಿ'ಯೆಂದರೆ ಬರಿ ಕವಿತೆಯನ್ನು ಬರೆಯುವಾತನೆಂದು ಗ್ರಹಿಸಬಾರದು. ಈಗಳಿನ ಪರಭಾಷೆಯಲ್ಲಿ ಹೇಳುವುದಾದರೆ 'ಲೇಖಕ'ನೆಂದು ವ್ಯವಹರಿಸಬಹುದು.

ಸಾರ್ಥಕ ಪ್ರಬಂಧ. ಕನ್ನಡಿಗರಲ್ಲಿ ವಿದ್ಯಾಭಿವೃದ್ಧಿಯೂ ತನ್ಮೂದ ಒಂದು ಸಂಸ್ಕೃತಿಯೂ ಬಾರದೆ ಭಾಷಾಭಿವೃದ್ಧಿಯಾಗದು. ಭಾಷೆಯು ಬಾಲ್ಯಾವಸ್ಥೆಯಲ್ಲಿ [illegible] ಒಂದು ದಿಕ್ಕು ತೋರಲಾರದು. ಆದರಿಂದ ಅವನ ಶಾಸ್ತ್ರವು—ಎಂದರೆ ಲೇಖಕನ ಲೇಖವು, ಗದ್ಯವಾಗಿರಲಿ, ಪದ್ಯವಾಗಿರಲಿ ಕೇವಲ ವಾರ್ತಾಪತ್ರಿಕೆಯ ಒಂದು ವಾಕ್ಯಖಂಡವಾಗಿರಲಿ—ಸುಂದರವೂ ಸರ್ವಜನಗ್ರಾಹ್ಯವೂ ಹೊಸ್ತಾದುದೂ ಅರ್ಥಪ್ರದವೂ (Paying) ಕೀರ್ತಿದಾಯಕವೂ ಆಗುವುದು. ವಿಷಯವು ಗಂಭೀರವಾಗಿದ್ದರೂ ಕವಿಯು (ಲೇಖಕನು) ತುಂಬಾ ಓದಿದವನಿದ್ದರೂ ಅವನಲ್ಲಿ ವಿಷಯಸಂಗ್ರಹವು ಯಥೇಚ್ಛವಾಗಿದ್ದರೂ ಶೈಲಿಯ ಬೆಂಬಲವಿಲ್ಲದಿದ್ದರೆ ಅವನ ಪಥವು ಸಾಗದು; ತನ್ನ ವಿಷಯವನ್ನು ತಕ್ಕಂತೆ ಪ್ರತಿಪಾದಿಸುವ ಸಾಮರ್ಥ್ಯವು ಅವನಿಗೆ ಬಾರದು. ವಸ್ತು ಪ್ರತಿಪಾದನೆ ಸಂಯುಲ್ಲದಿದ್ದರೆ ಅರ್ಥವು ಸ್ಪಷ್ಟವಾಗುವುದು ಹೇಗೆ ಸಾಧ್ಯ? ಅರ್ಥವು ಸ್ಪಷ್ಟವಿಲ್ಲದ ಪ್ರಬಂಧವು ಕೇವಲ ನಿಷ್ಫಲ. ನಿಷ್ಫಲ ಪ್ರಬಂಧವು ಕವಿಗೆ (ಲೇಖಕನಿಗೆ) ಹಾಸ್ಯಾಸ್ಪದ. ಆದುದರಿಂದ ಲೇಖಕನಾಗುವವನು ಮೊದಲು ವಿದ್ಯಾವಂತನಾಗಬೇಕು. ಅನಂತರ ಯತ್ನಪೂರ್ವಕವಾಗಿ ಬರೆಯುತ್ತಾ ಬರೆಯುತ್ತಾ ಉತ್ತಮ ಶೈಲಿಯನ್ನು ಕಂಡುಕೊಂಡು ತನ್ನ ವಿದ್ಯೆಯ ಫಲವನ್ನು ಲೋಕಕ್ಕೆ ಕಾಣಿಕೆಯಿತ್ತು ಪ್ರತಿಯಾಗಿ ಲೋಕದ ಕೃತಜ್ಞತೆಗೆ ಪಾತ್ರನಾಗುವುದಕ್ಕಿಂತ ಮೇಲಾದುದು ಯಾವುದು?

—'ಪದ್ಮನಾಭ'.

ಉಪಾಧ್ಯಾಯರು ತಮ್ಮ ವ್ಯವಸಾಯದ ಉನ್ನತಿ ಮಾಡಬೇಕು.

(ಲೇಖಕ ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ ಕಾರ್ಕಳ.)

'ಲೋಕದಲ್ಲಿ ನಮ್ಮ ಅಸ್ತಿತ್ವವೇ ಇಲ್ಲವೆಂದು ಎಂದೂ ಆಲೋಚಿಸಬೇಡಿರಿ. ಸ್ವಲ್ಪ ಸಾವಧಾನವಾಗಿ ಸೂಕ್ಷ್ಮರೀತಿಯಿಂದ ಆಲೋಚಿಸಿರಿ. ನಾವು ಹಳ್ಳಿಹಳ್ಳಿಗಳ ಊರು ಕೇರಿಗಳ ಸಮಸ್ತ ದೇಶದ ಬಾಲಕರಿಗೆ ವಿದ್ಯಾದಾನ ಮಾಡುವವರಾಗಿದ್ದೇವೆ. ಅವರ ಮನಸ್ಸು ಮತ್ತು ಶಕ್ತಿಯ ವಿಕಾಸನಮಾಡುವವರಾಗಿದ್ದೇವೆ. ಅವರ ಆತ್ಮಬಲವನ್ನು ಬೆಳಕಿಗೆ ತರುವವರಾಗಿದ್ದೇವೆ. ಅವರ ನೀತಿಧರ್ಮರೂಪಿ ವೃಕ್ಷದ ಮೂಲಕ್ಕೆ ನೀರೆರೆಯುವವರಾಗಿದ್ದೇವೆ. ಸಂಕ್ಷೇಪವಾಗಿ ಹೇಳುವುದಾದರೆ, ಅವರ ಮಾರ್ಗದರ್ಶಕರೂ ಮುಖಂಡರೂ ನಾವೇ ಆಗಿದ್ದೇವೆ ಎಂದು ಶಿಕ್ಷಣ ಪತ್ರಿಕೆಯಲ್ಲಿ ಗಿಜೂ ಬಾಯಿಗಳೆಂಬ ಸಹೋದ್ಯೋಗಿಗಳು ಬರೆಯುತ್ತಾರೆ. ಅವರು ಮುಂದೆ ಬರೆಯುವುದನ್ನು ಓದಿ:-

'ನಾವು ಗುರುಗಳೆಂದೂ ಮಾಸ್ತರರೆಂದೂ ತಿಳಿಯುತ್ತೇವೆ. ನಮಗೆ ಯಾರ ಲಕ್ಷ್ಯವೂ ಇಲ್ಲವೆನ್ನುತ್ತೇವೆ. ಹೀಗೆ ಹೇಳುತಿದ್ದೂ ಒಬ್ಬ ಸರ್ವಸಾಧಾರಣ ಪೋಲೀಸ ಸಿಪಾಯಿಯನ್ನು ದೂರದಲ್ಲಿಯೇ ಕಂಡು ನಡುಗುವಷ್ಟು ದೀನಾವಸ್ಥೆಯು ನಮ್ಮವರದಾಗಿದೆ. ಕೊಂಡುಕೊಡುವ ಒಬ್ಬ ಸಾಮಾನ್ಯ ಗುಮಾಸ್ತನ ಪ್ರತಿಷ್ಠೆಯು ನಮಗಿಂತ ಎಷ್ಟೋ ಪಾಲು ಹೆಚ್ಚಿಗಿದೆ. ಅಂಚೆಕಟ್ಟೆಯಲ್ಲಿ ಕೂತು ಪತ್ರ ಪತ್ರಿಕೆಗಳ ವ್ಯವಸ್ಥೆ ಮಾಡುವವನ ಸ್ಥಾನವು ನಮಗಿಂತ ಎಷ್ಟೋ ಉಚ್ಚವಾದುದೆಂದು ತಿಳಿಯಲ್ಪಡುತ್ತದೆ.

'ಇಂಥ ದೀನತೆಯಾದರೂ ಯಾಕೆ ಇರಬೇಕು? ವೇತನವು ಬೇಕಾದರೆ ಕಡಿಮೆ ಸಿಕ್ಕಲಿ. ಅಥವಾ ಹೆಚ್ಚಿಗೆ; ನಮ್ಮ ಮಸ್ತಕವನ್ನು ಎತ್ತಿ ಹಿಡಿದು ನಾವೇಕೆ ನಡೆಯುತ್ತಿರಕೂಡದು? ಡಾಕ್ಟರ, ವಕೀಲ ಅಥವಾ ಬೇರೆ ಯಾವ ಉದ್ಯೋಗಸ್ಥನ ಸಮಾನಸ್ಥಾನವನ್ನು ಪಡೆಯಲಾರೆವೆಂದು ನಾವೇಕೆ ನಮ್ಮ ವರ್ತನದಿಂದ ತೋರಿಸಿಕೊಡಬೇಕು?

'ನಾವು ನಮ್ಮ ವ್ಯವಸಾಯದ ಕ್ಷಮತೆಯನ್ನೂ ಮೌಲ್ಯವನ್ನೂ ಇನ್ನೂ ತಿಳಿದಿಲ್ಲ. ನಮ್ಮ ಉದ್ಯೋಗವು ರೋಗಿಗಳನ್ನು ಸ್ವಸ್ಥರಾಗಿ ಮಾಡುವುದಲ್ಲ. ತಂಟೆತಕರಾರು ಮಾಡುವವರ ಜಗಳ ನಿರ್ಣಯಮಾಡುವುದಲ್ಲ; ಅಪರಾಧಿಗಳನ್ನು ಶಿಕ್ಷಿಸಿ ಕಾರಾವಾಸಕ್ಕೆ ಕಳುಹಿಸಿಕೊಡುವುದಲ್ಲ; ಅರಾಜಕ ಪ್ರಜೆಗಳನ್ನು ಅಂಕೆಯಲ್ಲಿಟ್ಟು ರಾಜ್ಯಭಾರ ಮಾಡುವುದೂ ಅಲ್ಲ; ಆದರೆ ಮುಗ್ಧರೂ ಕೋಮಲರೂ ಆದ ಬಾಲಕರ ಆಂತರಿಕ ಕಲೆ ಶಕ್ತಿಗಳನ್ನು ಸತ್ಯವಾದ ಶಿಕ್ಷಣದ ಮೂಲಕ ಪ್ರಕಟಗೊಳಿಸುವುದು, ಅವರು ಉಪಯೋಗವಿಲ್ಲದ [illegible] ಲಾದವುಗಳನ್ನು ನಷ್ಟಮಾಡುವ ಔಷಧಿಯನ್ನು ತಯಾರಿಸುವುದು, ವ್ಯವಸ್ಥೆ ಮತ್ತು ಶಾಂತಿಗಾಗಿ ಮೊದಲಿನಿಂದಲೇ ಸದುಪಾಯಗಳನ್ನು ಚಿಂತಿಸುವದು—ಇದೇ ನಮ್ಮ ವ್ಯವಸಾಯವಾಗಿದೆ.

'ಬಾಲಕರು ಮನುಷ್ಯಜಾತಿಯ ಮೂಲವಾಗಿದ್ದಾರೆ. ಅವರ ಶಿಕ್ಷಣಭಾರವು ನಮ್ಮ ಕೈಯಲ್ಲಿದೆ. ಅವರ ಭವಿಷ್ಯವು ನಮ್ಮ ಅಧಿಕಾರದಲ್ಲಿದೆ. ಅವರಲ್ಲಿ ನಾವು ಬಿತ್ತಿದುದೇ ಹುಟ್ಟುವುದು, ಬೆಳೆಯುವುದು. ಬೀಜವನ್ನು ನೆಟ್ಟು ಬೆಳೆಮಾಡುವ ವ್ಯವಸಾಯವೇ ನಮ್ಮದು; ಆದ್ದರಿಂದಲೇ ಅದು ಸರ್ವೋತ್ಕೃಷ್ಟ ವ್ಯವಸಾಯವೆಂದೆಣಿಸಲ್ಪಡುತ್ತದೆ.'

ಗಿಜೂಬಾಯಿಗಳು ಮುಂದೆ ಬರೆಯುವುದೇನಂದರೆ:— 'ಹೀಗಿದ್ದೂ ನಮ್ಮ ಸ್ಥಿತಿಯು ಹೀಗೇಕೆ ಆಗಿದೆ? ನಾವು ನಮ್ಮ ವ್ಯವಸಾಯದ ಉನ್ನತಿ ಮಾಡಲಿರುವುದೇ ಅದರ ಕಾರಣವು. ನಾವು ನಮ್ಮ ಸ್ವಾಭಿಮಾನದ ರಕ್ಷಣೆ ಮಾಡುತ್ತಿಲ್ಲ. ನಾವು ಉಚ್ಚಶಿಕ್ಷಕರಾಗುತ್ತಿಲ್ಲ. ಜಗತ್ತಿನಲ್ಲಿ ಯೋಗ್ಯತೆಯಿರುವವರಿಗೇ ಮರ್ಯಾದೆ; ಅಯೋಗ್ಯರನ್ನು ಜಗತ್ತು ಮನ್ನಿಸುವುದಿಲ್ಲ. ಅದಕ್ಕೆ ತಾಜಾ ವಸ್ತು ಬೇಕು; ನಕಲಿ ಬೇಡ. ಇಂದು ವೈದ್ಯ ವಕೀಲರಿಗಿಂತಲೂ ಸಾವಿರ ಪಾಲು ಹೆಚ್ಚಿಗೆಯಾಗಿ ಶಿಕ್ಷಕರ ಆವಶ್ಯಕತೆ ಇದೆ. ಯೋಗ್ಯ ಶಿಕ್ಷಕರಾದ ಮೇಲೆ ಜನರು ನಮ್ಮನ್ನು ನಮ್ಮ ಮನೆಯಲ್ಲಿಯೇ ಕೇಳಿ ಬರುವರು; ಚರಣಗಳನ್ನು ತೊಳೆಯಲು ಸಿದ್ಧರಾಗುವರು; ಓದಿಸುವುದಕ್ಕಾಗಿ ಮನೆಮನೆ ಅಲೆದಾಡುವ ಅಗತ್ಯ ಬೀಳದು. ಪೂರ್ವಕಾಲದಲ್ಲಿ ಋಷಿ ಮುನಿಗಳಿದ್ದಲ್ಲಿಗೆ ರಾಜಕುಮಾರರು ಕೂಡ ವಿದ್ಯಾಲಾಭಕ್ಕಾಗಿ ಹೋಗಬೇಕಾಗುತ್ತಿತ್ತು; ಇಷ್ಟುಮಾತ್ರವಲ್ಲ, ಅವರ ಚರಣಸೇವೆಯನ್ನು ಮಾಡಬೇಕಾಗುತಿತ್ತು. ಅಂಥ ಸ್ಥಿತಿಯು ಇಂದೂ ಮುಂದೂ ಉಂಟಾಗಬಲ್ಲದು. ಆದರೆ ಅದಕ್ಕಾಗಿ ನಮ್ಮ ವ್ಯವಸಾಯೋನ್ನತಿಯನ್ನು ಮಾಡಲೇಬೇಕಾಗಿದೆ.

'ಏನು, ಇಂದು ನಾವು ನಮ್ಮ ವ್ಯವಸಾಯೋನ್ನತಿಯನ್ನು ಮಾಡುತ್ತಿದ್ದೇವೆಯೆ?

'ಇಲ್ಲ; ನಮ್ಮಲ್ಲಿ ಜ್ಞಾನಸಂಪತ್ತಿ ಎಳ್ಳಷ್ಟೂ ಇಲ್ಲ. ಉತ್ತಮ ವಿದ್ವಾಂಸರಾಗಿರುವದರ ಬದಲು ನಾವು ಸಾಧಾರಣ ವಿದ್ವಾಂಸರಾಗಿಯೂ ಇಲ್ಲ. ಸಾಹಿತಿಗಳಾಗುವುದರ ಬದಲು ಶುದ್ಧ ಭಾಷೆಯಲ್ಲಿ ಬರೆಯುವ ಯೋಗ್ಯತೆಯನ್ನೂ ಬಹಳ ಕಡಿಮೆ ಇಟ್ಟುಕೊಂಡಿದ್ದೇವೆ. ಜ್ಞಾನಭಾಂಡಾರವು ನಾವಾಗಿರುವುದರ ಬದಲು ಸುಮಾರಾಗಿ ಅಲ್ಪಜ್ಞರೇ ಆಗಿದ್ದೇವೆ. ಇಂಥ ಜ್ಞಾನಹೀನರನ್ನು ಶಿಕ್ಷಕರೆಂದು ಯಾರು ತಾನೇ ಹೇಳಬಲ್ಲರು? ವೈದ್ಯಕೀಯ ಜ್ಞಾನವಿಲ್ಲದೆ ಯಾರು ತಾನೇ ವೈದ್ಯನೆಂದು ಕರೆಯಲ್ಪಡಬಲ್ಲನು?

'ಲೋಕಜ್ಞಾನವಂತೂ ನಮ್ಮಲ್ಲಿ ಸೊನ್ನೆಯಾಗಿರಬಹುದೆಂದು ಹೇಳಬಹುದು. ಮಾತ್ರವಲ್ಲ; ಯಾವ ವಿಷಯಗಳನ್ನು ಕಲಿಸಬೇಕಾಗಿದೆಯೋ ಅವುಗಳಾದರೂ ನಮಗೆ ಪೂರ್ಣರೂಪವಾಗಿ ತಿಳಿದಿದೆಯೋ ಎಂಬುದು ಸಂದೇಹಕರವಾಗಿದೆ. ಇತಿಹಾಸ ಭೂಗೋಳ ಮೊದಲಾದ ವಿಷಯಗಳಲ್ಲಿ ಈಗ ತಿಳಿದಿರುವುದಕ್ಕಿಂತ ಹೆಚ್ಚಿಗೆ ನಾವು ತಿಳಿಯಬೇಕಾದ ಆವಶ್ಯಕತೆ ಇಲ್ಲವೆ?

'ಕಲಿಸುವ ಪದ್ಧತಿಯ ಕುರಿತಾದರೂ ನಾವೆಷ್ಟು ವಿಚಾರ ಮಾಡಿದ್ದೇವೆ? ಈಗ ಪ್ರಪಂಚದಲ್ಲಿ ಯಾವ ಯಾವ ಹೊಸ ಪದ್ಧತಿಗಳ ಶೋಧನೆಗಳಾಗುತ್ತಲಿದೆಯೋ ಯಾವ ಪದ್ಧತಿಗಳ ಮೂಲಕ ಶಿಕ್ಷಣಕಾರ್ಯವು ಸರಳವಾಗುತ್ತಲಿದೆಯೋ ಅವುಗಳ ಸ್ವಲ್ಪ ಪರಿಚಯವನ್ನಾದರೂ ನಾವು ಮಾಡಿಕೊಂಡಿರುವೆವೇ?

'ನಮ್ಮ ಹಳೇ ಜ್ಞಾನ ಸಂಪತ್ತಿಯು ಎಂದಿನ ತನಕ ಉಪಯೋಗಕ್ಕೆ ಬರುತ್ತಲಿದ್ದೀತು? ಎಂದಿನ ತನಕ ನಾವು ಹಳೇವೇಷ, ಹಳೇ ರೀತಿ, ಹಳೇ ಪದ್ಧತಿಗಳನ್ನು ಬಿಟ್ಟು, ಅವುಗಳ ಬದಲಿಗೆ ನವೀನವಾದವುಗಳನ್ನು ಸ್ವೀಕರಿಸುವುದಿಲ್ಲವೋ ಅಂದಿನ ತನಕ ನಮ್ಮ ಶಿಕ್ಷಣವನ್ನು ಯಾರೂ ಗ್ರಹಿಸಲಿಕ್ಕಿಲ್ಲ. ಹಾಗೆ ಮಾಡುವುದು ಉಚಿತವೂ ಆಗದು.

'ಮನೋವಿಜ್ಞಾನದ ಮೂಲತತ್ವಗಳನ್ನಾದರೂ ನಾವು ತಿಳಿದಿರುವೆವೆ? ಶರೀರ ವಿಜ್ಞಾನವನ್ನು ತಿಳಿಯದೆ ಔಷಧ ಕೊಡಲು ಸಿದ್ಧರಾಗುವಷ್ಟೇ ಮೂರ್ಖತನವು, ಮನೋವಿಜ್ಞಾನವನ್ನು ತಿಳಕೊಂಡಲ್ಲದೆ ಮಕ್ಕಳಿಗೆ ಪಾಠ ಹೇಳಿಕೊಡುವುದರಲ್ಲಿದೆ. ಇಂದಿನ ನವೀನ ಜಗತ್ತಿನ ಶಿಕ್ಷಕರು ನವೀನ ಡಾಕ್ಟರರಂತಿದ್ದಾರೆ—ನವೀನ ವೈಜ್ಞಾನಿಕರಂತಿದ್ದಾರೆ. ಅವರು ತಮ್ಮ ಕಾರ್ಯದಲ್ಲಿ ಅಪ್-ಟು-ಡೇಟ್ ಆಗಿದ್ದಾರೆ.

'ನಾವು ಕೂಡ ಎಲ್ಲ ವಿಷಯಗಳಲ್ಲಿ 'ಅಪ್-ಟು-ಡೇಟ್' ಆಗಿರತಕ್ಕದ್ದು. ಆ ಹಿಂದಿನ ಕೊಳೆತುನಾರುವ ವಸ್ತುಗಳನ್ನು ದೂರ ಒಗೆದುಬಿಡಿರಿ. ನವೀನ ಜ್ಯೋತಿಯನ್ನು ಹೃದಯದಲ್ಲಿ ಬೆಳಗಿಸಿ ತಮ್ಮ ವ್ಯವಸಾಯದ ಉನ್ನತಿಯಲ್ಲಿ ತೊಡಗಿರಿ. ಆ ಮೇಲೆ ನಮ್ಮನ್ನು ಅನಾದರದಿಂದ ಕಾಣುವ ಶಕ್ತಿಯು ಯಾರಿಗೆ ತಾನೆ ಬರಬಹುದು? ನಮ್ಮಲ್ಲಿ ಒಮ್ಮೆ ಶಕ್ತಿಯುಂಟಾಯಿತೆಂದರೆ ಮತ್ತೆ ಎಲ್ಲರೂ ಭಕ್ತಿ ಮಾಡತೊಡಗುವರು.'

ಹಿಂದೀ ಭಾಷೆಯಲ್ಲಿ ಬರೆಯಲ್ಪಟ್ಟ ಈ ಲೇಖನವನ್ನು ಓದಿದೊಡನೆ ಖೇದ ಆಶ್ಚರ್ಯಗಳೂ—ಜೊತೆಗೆ ಆನಂದವೂ ಉಂಟಾದರೆ, ಅದು ವಿಶೇಷವೆನಿಸಲಿಕ್ಕಿಲ್ಲ. ಹಿಂದೀ ಲೇಖನದಲ್ಲಿ ಲೇಖಕರು ಇಂದಿನ ಉಪಾಧ್ಯಾಯರನ್ನು ಕುರಿತು ಮಾಡಿದ ವರ್ಣನೆಯಲ್ಲಿ ಅತಿಶಯೋಕ್ತಿ ಇರಬಹುದೆ? ಹೇಗಿದ್ದರೂ ಅವರ ಸ್ಪಷ್ಟೋಕ್ತಿಗಾಗಿ—ಅವರ ಸಾಹಸಕ್ಕಾಗಿ ನಾವು ಆಶ್ಚರ್ಯಪಡಲೇಬೇಕು; ಉಪಾಧ್ಯಾಯರ ಈಗಿನ ದೀನಾವಸ್ಥೆಗಾಗಿ ಖೇದಪಡಲೇಬೇಕು. ಆದರೆ ಅವರ ಭವಿಷ್ಯೋದ್ಧಾರಗಳಿಗಾಗಿ ಏಕಕಾಲದಲ್ಲಿ ಆನಂದವೂ ಆಗುತ್ತದೆ. ಇರಲಿ, ಶಿಕ್ಷಕರಲ್ಲಿ ಶಕ್ತಿಯೂ ಜನರಲ್ಲಿ ಭಕ್ತಿಯೂ ಉಂಟಾಗಲಿ. ಅದಕ್ಕಾಗಿಯೇ ನಾವೆಲ್ಲರೂ ಪ್ರಯತ್ನಿಸುತ್ತಿರೋಣ.

ಬಹುಮಾನ.

ಕಾಸರಗೋಡು ತಾಲ್ಲೂಕು ಪಾಡಿಮೊಗರೆ ಕಾರಡ್ಕ ಗ್ರಾಮ (ಆದೂರು ಪೋಸ್ಟ್) ಮೈಕಾನ ಕುಡಂಗೋಡ್ಲು ಕೃಷ್ಣಭಟ್ಟರ ಮಗ, ರಾಮ ಭಟ್ಟನು ಸರ್ವರಿಗೆ ತಿಳಿಯಪಡಿಸುವುದೇನೆಂದರೆ:—

ಪುತ್ತೂರು ತಾಲೂಕು ಅಳಿಕೆ ಗ್ರಾಮದ ಕೇಕಣಾಜೆ ಮಹಾಬಲೇಶ್ವರ ಭಟ್ಟ ಮಗ ನಾರಾಯಣ ಭಟ್ಟನು ನನಗೆ ತಾ. 10-11-31ರಲ್ಲು ರೂ. 450ಕ್ಕೆ ಬರಕೊಟ್ಟ ಡಿ. ಪ್ರೊ. ನೋಟನ್ನು ಕಳೆದ ತಾ. 28-10-'34ಕ್ಕೆ ನಾನು ಪುತ್ತೂರಿಗೆ ಸಿ. ವಿ. ಸಿ. ಬಸ್ಸಿನಲ್ಲಿ ಬರುವಾಗ್ಯೆ ಸ್ವದೇಶಾಭಿಮಾನಿಯ ದಸರಾ ಸಂಚಿಕೆ ಪುಸ್ತಕದಲ್ಲಿಟ್ಟಿದ್ದೆ. ನನ್ನ ಸಮೀಪ ಕೂತ ಒಬ್ಬ ಬ್ರಾಹ್ಮಣನು ಆ ಪುಸ್ತಕವನ್ನು ಓದಲಿಕ್ಕೆ ತೆಗೆದು ಪೆರ್ಲ ಸಮೀಪ ಬರುವಾಗ್ಯೆ ನನಗೆ ವಾಪಾಸು ಕೊಟ್ಟವ ಆತ ಪೆರ್ಲದಲ್ಲಿ ಇಳಿದ. ನಂತರ ನೋಡುವಾಗ್ಯೆ ಆ ನೋಟು ಸದ್ರಿ ಪುಸ್ತಕದಲ್ಲಿರಲಿಲ್ಲ. ಬಿದ್ದು ಹೋಯಿತೋ ಯಾರಾದರೂ ತೆಗೆದಿದ್ದಾರೊ ಎಂಬುದು ತಿಳಿಯುವುದಿಲ್ಲ. ಸದ್ರಿ ನೋಟು ಯಾರಿಗಾದರೂ ಸಿಕ್ಕಿದರೆ ದಯವಿಟ್ಟು ನನಗೆ ಕಳುಹಿಸಿಕೊಡಿರಿ. ಅದನ್ನು ಕಂಡುಕೊಟ್ಟವರಿಗೆ ರೂ. 10ನ್ನು ಇನಾಮಾಗಿ ಕೊಡಲು ಸಿದ್ಧವಿರುತ್ತೇನೆ.

ತಾ. 1-11-'34. ರಾಮಭಟ್ಟ.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮನಂಬ್ರ 397/34.

ವಾದಿ—ನರಸಿಂಹ ಪೈ.

ಪ್ರತಿವಾದಿರು ಪಿಯು ಯಾನೆ ದುಮಿಂಗ ಡಿಸೋಜಾ ಕೂಡಾ.

ವಾದಿಯು ಪ್ರತಿವಾದಿರ ಮೇಲೆ ಯಡುರ್ಮುಡಿ ಶರ್ತ ಪ್ರಕಾರ ಆಸ್ತಿ ಸ್ವಾಧೀನತೆಗೂ ಗೇಣಿ ಬಾಕಿ ವಗೈರೆ ಮಾಡಿದ ಮೇಲ್ಕಂಡ ದಾವೆಯು ತಾ. 19-11-34ಕ್ಕೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪ ಇದ್ದರೆ ಆ ತಾರೀಕಿಗೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

ಕುಂದಾಪುರ, 30-10-34. K. Narasimha Kamath, *Pleader for Plaintiff.*

ಕಮ್ಯೂನಲ್ ಎವಾರ್ಡು: ಮಾಲವೀಯರ ತಿದ್ದುಪಡಿ.

ಬೊಂಬಾಯಿ, ತಾ ೨೮-೧೦-೧೯೩೪.

ಇಂದಿನ ಕೊಂಗ್ರೆಸ್ ಅಧಿವೇಶನದಲ್ಲಿ, ಕಮ್ಯೂನಲ್ ಎವಾರ್ಡಿನ ವಿಷಯವಾಗಿ, ಅದನ್ನು ಸಂಪೂರ್ಣ ತಿರಸ್ಕರಿಸಬೇಕೆಂಬ ಬಗೆಗೆ ಮಾಲವೀಯಜಿಯವರ ತಿದ್ದುಪಡಿ ಬಂತು. ಮಾಲವೀಯರು ೭೦ ನಿಮಿಷಗಳ ತನಕ ಅಸಾಮಾನ್ಯವಾದ ವಾಗ್ಪಟುತ್ವವನ್ನು ಪ್ರಕಟಿಸಿ ಭಾಷಣ ಮಾಡಿದರು. ಮಾಲವೀಯರ ಠರಾವನ್ನು ಶ್ರೀಯುತ ಅಣೆಯವರು ಅನುಮೋದಿಸಿದರು. ಪರಂತು, ಅದಕ್ಕೆ ಪ್ರತಿಕೂಲ ಮತಗಳು ಬಹು ಸಂಖ್ಯೆಯಲ್ಲಿದ್ದು, ಠರಾವು ಬಿದ್ದುಹೋಯಿತು. ಕಾರ್ಯಕಾರಿ ಸಮಿತಿಯ ಠರಾವೇ ವಿಜಯ ಹೊಂದಿತು.

ಪಂಡಿತ ಮದನಮೋಹನ ಮಾಲವೀಯರು.

ಕಮ್ಯೂನಲ್ ಎವಾರ್ಡಿನ ವಿಷಯಕವಾದ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಠರಾವನ್ನು ಪ್ರತಿ ಕೊಂಗ್ರೆಸ್ಸಿನ ಸ್ಥಾನಗಳನ್ನು ಬಿಡಿಸಿಕೊಂಡು, ರಾಷ್ಟ್ರೀಯ ಪಕ್ಷವನ್ನು ಕಟ್ಟಿಕೊಂಡಿರುವರು ಕೊಂಗ್ರೆಸ್ ಅಧಿವೇಶನದಲ್ಲಿ ಪರೂ ತನ್ನ ಅಭಿಪ್ರಾಯವನ್ನು ಮುಂದೊತ್ತಿ ವಿನೆಂದು ಬಂದು, ಕೈಕೊಂಡ ಅವರ ಯತ್ನವು ನಿಷ್ಫಲವಾಯಿತು.

ಇಂದಿನ ಸಭೆಯಲ್ಲಿ ಸ್ವಲ್ಪ ಗಲಭೆಯಾಯಿತು. ಮಾಲವೀಯ ಪಂಗಡದವರು, ಠರಾವಿನ ಅನುಕೂಲ—ಪ್ರತಿಕೂಲ ಮತಗಳನ್ನು ಕೈಯೆತ್ತಿದುದರಿಂದ ಗುರುತಿಸದೆ, ಬರಹ ಮೂಲಕ ಮತಗಳಿಂದಲೇ ಎಣಿಕೆ ಮಾಡಬೇಕೆಂದರು. ಆದರೆ, ಮಾಲವೀಯರ ಠರಾವಿಗೆ ಬಹುಮತವು ಪ್ರತಿಕೂಲವಾಗಿರುವುದು ಸ್ಪಷ್ಟವಾಗಿರುತ್ತಾ ಪುನಃ ಮತಗಳನ್ನು ಎಣಿಕೆ ಮಾಡುವುದರಿಂದ ವೃಥಾಕಾಲಹರಣವಾಗುವುದು. ಬಾಬೂರಾಜೇಂದ್ರ ಪ್ರಸಾದರವರು ಅವಕಾಶ ಕೊಡಲಿಲ್ಲ. ಮಾಲವೀಯ ಪಂಗಡದ ಕಡೆಯಿಂದ "ಶೇಮ್, ಶೇಮ್" ಎಂಬ ಕೂಗು ಎದ್ದಿತು. ಬಾಬೂರಾಜೇಂದ್ರರು ತೀಕ್ಷ್ಣ ಮಾತುಗಳನ್ನಾಡಿ ಅದನ್ನು ನಿಲ್ಲಿಸಬೇಕಾಯಿತು. ಕಾರ್ಯಕಾರಿ ಸಮಿತಿಯವರ ಠರಾವನ್ನು ಅಂಗೀಕರಿಸಿದುದರ ನಿಷೇಧಾರ್ಥ ಬಂಗಾಳದ ಮತ್ತು ಪಂಜಾಬಿನ ೬೦ ಡೆಲಿಗೇಟರುಗಳು ಸಭೆಯಿಂದೆದ್ದು ಹೋದರು.

ಟೀಕಿಸಲು ಬಂದಿದ್ದರು. ಆದರೆ, ಅವರ ಆಟವೇನೂ ಸಾಗಲಿಲ್ಲ. ಅವರ ಠರಾವುಗಳೆಲ್ಲ ಏನೇನೂ ಆಧಾರವಿಲ್ಲದೆ ಬಿದ್ದುಹೋಗುವುದಾಯಿತು.

ಅವರು ಪ್ರತ್ಯೇಕಪಕ್ಷವನ್ನು ಕಟ್ಟಿಕೊಂಡು ಕಾದಾಡುವುದರಿಂದ ಕೊಂಗ್ರೆಸ್ಸನ್ನು ದುರ್ಬಲಪಡಿಸಿದಂತಾಗುವುದೆಂದೂ, ಅದುಕಾರಣ ಈಗಲಾದರೂ ತಮ್ಮ ವಿರೋಧವನ್ನು ತೊಲಗಿ ಕೊಂಗ್ರೆಸ್ಸಿನೊಳಗೆ ಪುನಃ ಭುಕ್ತರಾಗಿ, ಸಹಾಯಕರಾಗಬೇಕೆಂದೂ ವಿನಂತಿಸಿಕೊಂಡರು.

ಖಾದಿ ಪ್ರದರ್ಶನವನ್ನು ತೆರೆವಾಗ ತೆಗೆದ ಭಾವಚಿತ್ರ.
(1) ಸರದಾರ ವಲ್ಲಭಭಾಯಿ ಪಟೇಲರು. (2) ಶ್ರೀಮತಿ ಸರೋಜಿನಿ ದೇವಿಯವರು.
(3) ಖಾನ್ ಅಬ್ದುಲ್ ಗಫರ್ ಖಾನರು.

ಕೊಂಗ್ರೆಸ್ ಅಧ್ಯಕ್ಷರಾದ ಶ್ರೀ। ಬಾಬೂರಾಜೇಂದ್ರ ಪ್ರಸಾದರವರಿಗೆ ಬೊಂಬಾಯಿಯವರ ಸ್ವಾಗತ.
(ವಿಕ್ಟೋರಿಯಾ ಟರ್ಮಿನಸ್ ರೈಲ್ವೆ ನಿಲ್ದಾಣದಲ್ಲಿ.)

ಕಾರ್ಯಕಾರಿ ಸಮಿತಿಯು ಕಣ್ಣುಮುಚ್ಚಿ ಗಾಂಧಿಜಿಯವರನ್ನನುಸರಿಸುತ್ತಿದೆಯೆಂದು ಶ್ರೀ। ಗೋಪಾಲ ಸಿಂಘರವರು ಪ್ರಲಾಪಿಸಿದರು.

ಸೋಶಲಿಸ್ಟರ ಕಾರಬಾರು.

ಸೋಶಲಿಸ್ಟರು ವ್ಯವಸ್ಥಿತವಾಗಿ, ಕೊಂಗ್ರೆಸ್ಸಿನ ಕೌನ್ಸಿಲ್ ಪ್ರವೇಶದ ಕಾರ್ಯಕ್ರಮವನ್ನು

ಸರದಾರ್ ವಲ್ಲಭಭಾಯಿಯವರು—

—ಪಂಡಿತ ಮಾಲವೀಯವರ ವಿಷಯವಾಗಿ ತಾನು ಗೌರವಪಡುವೆನಾದರೂ ಕಮ್ಯೂನಲ್ ಎವಾರ್ಡಿನ ವಿಷಯಕವಾದ ಅವರ ವರ್ತನೆಯು ತಪ್ಪೆಂದು ತಾನು ತಿಳಿವೆನಾಗಿಯೂ

ಅಹಿಂಸೆಯಲ್ಲಿ ಅಚಲ ವಿಶ್ವಾಸ.

'ಮಹಾತ್ಮಾಜಿಯವರು ಪ್ರಪಂಚಕ್ಕೆ ಹೊಸ ಮಂತ್ರವನ್ನುಪದೇಶಿಸಿರುವರು; ಹೊಸ ನಾಗರಿಕತನವನ್ನು ಪ್ರಕಾಶಕ್ಕೆ ತಂದಿರುವರು. ಪ್ರಪಂಚವೇ ಕೊಂಡಾಡುವ ಅಹಿಂಸಾ ಮಂತ್ರ



ಮಹಾತ್ಮಾ ಗಾಂಧಿಯವರು.
ಕೊಂಗ್ರೆಸ್ಸಿನಿಂದ ನಿವೃತ್ತನಾಗುವೆನೆಂದು ಸಿದ್ಧರಿರುವರು.

ವದು. ಅದರಲ್ಲಿ ನಮ್ಮ ಅಚಲ ವಿಶ್ವಾಸವಿದೆ. ಜನಾಂಗವು ಪಟ್ಟ ಕಷ್ಟಕ್ಲೇಷಗಳಿಗಾಗಿ ಈ ಸಭೆಯು ಅವರನ್ನು ಅಭಿನಂದಿಸಿ, ಅಹಿಂಸೆಯ ವಿಷಯಕವಾದ ತನ್ನ ವಿಶ್ವಾಸವನ್ನು ದೃಢೀಕರಿಸುತ್ತದೆ" ಎಂಬ ಠರಾವನ್ನು ಶ್ರೀಮತಿ ಸರೋಜಿನಿ ದೇವಿಯವರು ತರಲು, ಹೆಚ್ಚಿನ ತರ್ಕವಿಲ್ಲದೆ ಅದು ಮಂಜೂರಾಯಿತು.

೧೯೩೪ ಬೋನಸ್ಸಿನ ವರ್ಷ

ನೇಶನಲ್ ಇಂಡಿಯನ್ ಲೈಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್ 12 ಮಿಶನ್‌ರೋ ಕಲ್ಕತ್ತ.

ಚೆಯರ್‌ಮೆನ್
ಸರ್ ಆರ್. ಎಸ್. ಮುಖರ್ಜಿ, ಕೆ. ಸಿ. ಐ. ಇ. ಕೆ. ಓ. ವಿ. ಓ.

ಮೆನೇಜಿಂಗ್ ಏಜಂಟ್ಸ್
ಮಾರ್ಟಿನ್ ಎಂಡ್ ಕೊ.

೩೧-೧೨-೩೪ಕ್ಕೆ ನಡೆದು ಬಂದಿರುವ ಮತ್ತು ೩೧-೧೨-೩೪ರ ಒಳಗೆ ಪಡೆದ ಪೊಲಿಸಿಗಳು ಪ್ರಕೃತದ ೧೯೩೪ಕ್ಕೆ ಅಂತ್ಯವಾಗುವ ಪಂಚವಾರ್ಷಿಕ ಲಾಭದಲ್ಲಿ ಭಾಗವಹಿಸಲು ಹಕ್ಕುಳ್ಳವುಗಳಾಗಿವೆ.

ಯೋಗ್ಯಶರ್ತಗಳ ಮೇಲೆ ಏಜಂಟರು ಬೇಕಾಗಿದ್ದಾರೆ.

ವಿವರಗಳಿಗಾಗಿ ಬರೆಯಿರಿ:—

ಬಿ. ವಿ. ಎಸ್ ಪ್ರಭು, ಏಜಂಟ್.
ಶ್ರೀಕೃಷ್ಣ ನೊವೆಲ್ಟಿ ಹೌಸ್, ಮಾರ್ಕೆಟ್ ರೋಡ್, ಮಂಗಳೂರು.

ಟಿ. ವಿ. ರಾಘವಯ್ಯ ಮದ್ರಾಸು ಪ್ರಾಂತ್ಯ ಮತ್ತು ಆಶ್ರಿತ ಸಂಸ್ಥಾನಗಳಿಗೆ ಸೆಕ್ರೆಟರಿ,
ಟಿ. ಪಿ. ನಂಬ್ರ ೧೫೦, ಮದ್ರಾಸು

[illegible] Banking Corporation Udipi, Ltd.

(Incorporated in British India) ESTD. 1906.

[illegible]—UDIPI, S. K. Branches:—Coondapoor, Mangalore, Shimoga & Madras.

Authorised Capital Rs. 3,50,000/— Subscribed & Paid up Rs. 2,25,000/—

Statement of Assets and Liabilities as on 20th October 1934.

CAPITAL & LIABILITIES.		
1. Paid up Capital	Rs.	2,25,000—0—0
2. Reserve and other funds	„	2,60,953—7—8
3. Deposits	„	24,13,428—4—10
4. Due to Bankers	„	16,486—8—11
5. Sundries	„	92,538—10—9
6. Bills per contra	„	20,393 10—3
Total	Rs.	30,28,800—10—5

PROPERTY & ASSETS		
1. Bank Premises	Rs.	68,167—12—5
2. Investment on G. P. Notes of the market value of Rs 6,85,154—8—0 at cost.	„	6,51,559—15—0
3. Authorised Investments	„	21,61,270—9—4
4. Bill for collection	„	20,393—10—3
5. Sundries	„	42,617—7—10
6. Cash on hand & with Bankers at call	„	84,791—3—7
Total		30,28,800—10—5

N. B:—151 shares of the Corporation, with accrued dividend since 1—1—1934, advertised for sale on 27—10—34, were sold at Rs. 95/- per share.

Office of the Corporation, Udipi, S. K. 27—10—1934.

M. Shrinivas Prabhu,
Ag. Manager.

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು:—ಇದು ರಿಂಗ್ ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ, ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೊಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೊಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು, ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು:—(1) ಪೋಸ್ಟು ಬೋಕ್ಸ್ ನಂಬ್ರ 337, ಪರಾಂಟ್ ರೋಡ್, ಮದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲೊಹರ್ ಚಾಳ್, ಬೊಂಬಾಯಿ, ನಂಬ್ರ 2; (6) ಕಲ್ಲಿಕೋಟೆ

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ತಾ. 10-10-1934ರಲ್ಲಿ ನಮ್ಮ ಡಿಸ್ಪೆನ್ಸಿಂಗ್ ಇಲಾಖೆಯನ್ನು ತೆರೆದಂದಿನಿಂದ ನಮ್ಮ ಗಿರಾಕಿಗಳು ತಮ್ಮ ಕಾಹಿಲೆಗಳನ್ನು ನಮ್ಮ ಡಾಕ್ಟರರಿಂದ ಧರ್ಮಾರ್ಥವಾಗಿ ಪರೀಕ್ಷಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಡವರಿಗೆ ಧರ್ಮಾರ್ಥವಾಗಿ ಔಷಧವನ್ನು ಕೊಡುವ ಏರ್ಪಾಡೂ ಮಾಡಿರುತ್ತದೆ. ಈಗ ಪರವೂರಿನವರಿಗೂ ಇದರ ಪ್ರಯೋಜನ ಸಿಕ್ಕುವಂತೆ ಪತ್ರ ಮುಖಾಂತರವೂ ಔಷಧಗಳನ್ನು ಸೂಚಿಸುವ ಏರ್ಪಾಡನ್ನು ಮಾಡಿರುತ್ತೇವೆ.

- ದ್ರಾಕ್ಷಾಸವ (ಉಲ್ಲಾಸ ಉಂಟುಮಾಡುವುದಕ್ಕೆ)
- ಪ್ರಸೂತಿ ಸಂಜೀವನ (ಬಾಣಂತಿಯರಿಗೆ)
- ಹಿಮಸಾಗರ ತೈಲ (ನಿದ್ರಾನಾಶಕ್ಕೆ)
- ನಿಯೋವಿಗರ್ (ನಿತ್ರಾಣಕ್ಕೆ)
- ಗ್ರ್ಯಾಪ್ ಲಿಕ್ಷಿಡ್ (ಮಕ್ಕಳ ಆರೋಗ್ಯಕ್ಕೆ)
- ಚ್ಯವನಪ್ರಾಶ (ಕ್ಷಯಕ್ಷೀಣಾದಿಗಳಿಗೆ)
- ಬ್ರಹ್ಮಿ ತೈಲ (ಮೆದುಳಿನ ಕೆಲಸಗಾರರಿಗೆ)
- ಕ್ಷೀರಬಲಾ (ಪಕ್ಷವಾತಕ್ಕೆ)
- ಕಾರ್ವೊಫ್ಲೊಜಿಸ್ಟಿನ್ (ಕಫ, ಬಾವು ಇತ್ಯಾದಿಗೆ)
- ಯುಟಿರೀನಾ (ಋತುಶೂಲೆ ಇತ್ಯಾದಿಗೆ)

ಮೆನೇಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ:—(1) ಜೀವಕರಾಜ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್—(2) 1/70 ನ್ಯಾಪಿಯರ್ ಕ್ಯಾಕನ ಬೀದಿ, ಪಾರ್ಕ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

Fine Printing
is the
Success of your
Trade

Consult:
Sharada Press
Mangalore

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
By a policy in THE BOMBAY LIFE
Madras Branch Secretaries
Kochikar Brothers,
Udipi, Mangalore, Bangalore, Madras Bombay and Calicut.

ದೀಪಾವಳಿ ಸಂಚಿಕೆ — ESTABLISHED 1906 — Deepavali Number
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.
ಪುಸ್ತಕ ೨೮. ಮಂಗಳೂರು ತಾ. ೯ನೇ ಶುಕ್ರವಾರ ನವಂಬರ ೧೯೩೪. (9-11-'34) ಸಂಚಿಕೆ ೪೪

ಗಾಂಧೀಜೀಯವರ ಗ್ರಾಮ ಸಂಘಟನಾ ಸಾಹಸ!

ಎರಡು ವರ್ಷಗಳೊಳಗೆ ಸಂಘಟನಾ ಕಾರ್ಯವಾಗುವುದು!

ಅಹಮ್ಮದಾಬಾದಿನ ಕೇಂದ್ರದಿಂದ ಕೆಲಸ

ಅಹಮ್ಮದಾಬಾದ್, 5-11-'34.

ಕೊಂಗ್ರೆಸ್ಸಿನಿಂದ ಹೊರಗಾದ ಮಹಾತ್ಮರು ಗ್ರಾಮಕೈಗಾರಿಕೆ ಸಂಘವನ್ನು ಸ್ಥಾಪಿಸುವ ಅವಸರದಲ್ಲಿರುವರು. ಕುಕ್ಕಿ ಹೆಣೆಯುವ ಕೈಗಾರಿಕೆಯಿಂದ ಮೊದಲುಗೊಂಡು ಗೋಪಾಲನೆಯ ವರೆಗಿನ ಎಲ್ಲಾ ಮನೆಗೆಲಸಗಳ ವಿವರವನ್ನು ಅವರು ಪಡೆಯುತ್ತಿದ್ದು, ಲೆಕ್ಕಹಾಕುತ್ತಿರುವರು. ಒಂದು ಸೆಂಟ್ರಲ್ ಬೋರ್ಡನ್ನು ಅಹಮ್ಮದಾಬಾದಿನಲ್ಲಿ ಸ್ಥಾಪಿಸಿ ಅದರ ಪ್ರಾಂತಿಕ ಮತ್ತು ಜಿಲ್ಲಾ ಬೋರ್ಡುಗಳ ಮೂಲಕ ಪ್ರಚಾರ ಕಾರ್ಯವು ನಡೆಯುವುದು. ಒಬ್ಬೊಬ್ಬ ಸದಸ್ಯನು ಐದರಿಂದ ಹದಿನೈದು ಗ್ರಾಮಗಳ ಮೇಲ್ವಿಚಾರ ನೋಡುವನು. ಮಹಾತ್ಮರ ಆಲೋಚನೆಯಂತೆ ಗ್ರಾಮಸಂಘಟನಾ ಕೆಲಸವು ಎರಡು ವರ್ಷಗಳೊಳಗೆ ಕೊನೆಗೊಳ್ಳುವುದು. ಮಹಾತ್ಮರು ವಾರ್ಧಾ ಮತ್ತು ಸಬರ್ಮತಿ ಆಶ್ರಮಗಳ ಸದಸ್ಯರ ಸಹಾಯದಿಂದ ಈ ಕಾರ್ಯವನ್ನು ಪೂರೈಸುವರು. ಮಹಾತ್ಮರು ಗುಜರಾತ್ ವಿದ್ಯಾಪೀಠದಲ್ಲಿ ಇಳಿಯುವರು.

ಕೊಂಗ್ರೆಸ್ ಅಧ್ಯಕ್ಷರು ಸ್ವಸ್ಥರಾಗಿಲ್ಲ!

ಒಂದು ವಾರದ ವಿಶ್ರಾಂತಿ ಪಡೆಯುವರು.

ಪಾಟ್ನಾ, 5-11-'34.

ಉಬ್ಬಸದ ಬಾಧೆಯಿರುವ ಬಾಬು ರಾಜೇಂದ್ರ ಪ್ರಸಾದರು ನಿನ್ನೆಯಿಂದ ಸ್ವಸ್ಥರಾಗಿಲ್ಲ. ಒಂದು ವಾರ ಸಂಪೂರ್ಣ ವಿಶ್ರಾಂತಿಯನ್ನು ಹೊಂದಬೇಕಾಗಿ ಅವರಿಗೆ ವೈದ್ಯರ ಸೂಚನೆಯಾಗಿದೆ. ಅದುಕಾರಣ, ಅವರು ತನ್ನ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಗೊಳಿಸಿರುವರು. ಭಯಕ್ಕೆ ಕಾರಣವೇನೂ ಇಲ್ಲ.

ಮದ್ರಾಸಿನ ಮೇಯರರು!

ಕುಮಾರರಾಜ ಮುತ್ತಯ್ಯ ಚೆಟ್ಟಿಯಾರರು.

ತಾ. ೫ರಲ್ಲಿ ಮದ್ರಾಸ್ ಕೊರ್ಪೊರೇಶನ್ ಕೌನ್ಸಿಲಿನ ಸಭೆ ಜರಗಿ, ಕುಮಾರ ರಾಜ ಮುತ್ತಯ್ಯ ಚೆಟ್ಟಿಯಾರರನ್ನು ಬಹುಮತದಿಂದ ಮೇಯರರನ್ನಾಗಿ ಆರಿಸಲಾಯಿತು.

ಗಾಂಧೀಜೀಯವರ ರಾಜಿನಾಮೆ ತಲಪಿತು!

ಪಾಟ್ನಾ, ೫-೧೧-'೩೪.

ಮಹಾತ್ಮಾ ಗಾಂಧಿಯವರು ಅಖಿಳ ಭಾರತ ಕೊಂಗ್ರೆಸ್ ಕಮಿಟಿಯ ಸದಸ್ಯತನವನ್ನು ಬೊಂಬಾಯಿನ ರಾಷ್ಟ್ರಸಭಾಧಿವೇಶನದಲ್ಲಿ ಬಿಟ್ಟರಾದರೂ, ಅವರ ಕ್ರಮಪ್ರಕಾರದ ರಾಜಿನಾಮೆಯು ಅಧ್ಯಕ್ಷ ಬಾಬೂರಾಜೇಂದ್ರ ಪ್ರಸಾದರಿಗೆ ಈ ದಿನ ತಲಪಿತು.

ಮಹಾತ್ಮಾಜಿಯವರು.

ಹೃದಯವೇದನೆಯು ಆಗಾಗ್ಗೆ ಆಗುತ್ತಾ ಇದೆ. ಕೆಲವು ದಿನಗಳಿಂದ ಸ್ವಲ್ಪ ಸ್ವಸ್ಥರಾಗಿದ್ದ ಕಮಲಾ ನೆಹರುರವರ ಸ್ಥಿತಿಯು ಈಗ ಪುನಃ ಆತುರಕ್ಕೆಡೆ ಮಾಡಿದೆಯೆಂದು ತಿಳಿದುಬಂದಿದೆ.

ಮದರಾಸು ಗವರ್ನರರು ಅಸ್ವಸ್ಥರಾದರು!

ಜ್ವರ ಬಂದು ಗುಣಮುಖರಾದರು

ಮದ್ರಾಸು, ೫-೧೧-'೩೪.

ನಿನ್ನೆ ದಿನ ಮದ್ರಾಸು ಗವರ್ನರರಾದ ಮಾನ್ಯ ಸರ್ ಜೋರ್ಜ್ ಫ್ರೆಡರಿಕ್ ಸ್ಟೇನ್ಲಿಯವರಿಗೆ ಜ್ವರ ಬಂದಿತು. ಈ ದಿನ ಸೌಖ್ಯವಾಗಿರುವರು. ಅವರ ಎರಡು ದಿನಗಳ ಕಾರ್ಯಕ್ರಮಗಳು ರದ್ದುಗೊಳಿಸಲ್ಪಟ್ಟವು. ತಾ. ೧೫ಕ್ಕೆ ಇಂಗ್ಲಾಂಡಿಗೆ ಹೊರಡುವ ಗವರ್ನರರಿಗೂ ಅವರ ಪತ್ನಿಯವರಿಗೂ ವಿದಾಯವನ್ನರ್ಪಿಸ ಬೇಕೆಂದಿರುವವರೆಲ್ಲ ಸೆಂಟ್ರಲ್ ಸ್ಟೇಷನಿಗೆ ಹೋಗಬೇಕಾದರೆ ಮಿಲಿಟರಿ ಸೆಕ್ರೆಟರಿ, ಗವರ್ನಮೆಂಟ್ ಹೌಸ್ ಇವರಿಗೆ ಅರ್ಜಿ ಮಾಡಬೇಕೆಂದು ಸರಕಾರವು ಪ್ರಕಟಿಸಿರುತ್ತದೆ. ಮದರಾಸು ಗವರ್ನರರಾಗಿ ನೇಮಕ ಹೊಂದಿರುವ ಲೋರ್ಡ್ ಎರ್ಸ್ಕಿನ್‌ರವರು ಒಕ್ಟೋಬರ ೨೬ರಲ್ಲಿ ಇಂಗ್ಲಾಂಡಿನಿಂದ ಹೊರಟಿದ್ದು ತಾ. ೧೬ರಲ್ಲಿ ಮುಂಬಾಯಿಗೂ ತಾ. ೧೮ರಲ್ಲಿ ಮದ್ರಾಸಿಗೂ ತಲಪುವರು.

ಕಮಲಾ ನೆಹರುರವರ ನಿರಾಶಾಜನಕ ಸ್ಥಿತಿ!!!

ಜವಾಹರಲಾಲರ ಭೇಟಿ!

ಜವಾಹರಲಾಲರು ಖಿನ್ನರಾಗಿರುವರು!

ಅಲ್ಲಹಾಬಾದ್ 5-11-'34.

ಪಂಡಿತ ಜವಾಹರಲಾಲರನ್ನು ಅಲ್ಮೋರಾ ಸೆರೆಗೂಡಿನಿಂದ ಬಿಡುಗಡೆಗೊಳಿಸಿದ ಬಳಿಕ ... ಭೋವಾಲಿಯಲ್ಲಿರುವ ಶ್ರೀಮತಿ ಕಮಲಾ ನೆಹರುರವರನ್ನು ಮನೆಯಲ್ಲಿ ಕಂಡರು. ಪತ್ನಿಯ ದುಃಸ್ಥಿತಿಯನ್ನು ಕಂಡು ಪಂಡಿತರು ಬಹು ಖಿನ್ನರಾಗಿರುವರು. ಅವರ ಮುಖದಲ್ಲಿ ನಿರಾಶೆಯ ಚಿಹ್ನೆಯು ತೋರಿಬರುತ್ತಿದ್ದಿತು. ಶ್ರೀಮತಿಯವರಿಗೆ ಪದೇ ಪದೇ ಕೆಮ್ಮು ಬರುತ್ತಿದೆ.

ಗಂಡನಿಗೆ ಗುಂಡಿಕ್ಕಿ ಕೊಂದಳು.

ಭೋಜನಕ್ಕೆ ತಪ್ಪಿದುದಕ್ಕಾಗಿ ಶಿಕ್ಷೆ!

ಪೆರಿಸ್, ೪-೧೧-'೩೪.

ಮೆಡಮ್ ಗಿಬ್ಬಿ ಎಂಬ ೩೫ ವರ್ಷ ಪ್ರಾಯದ ಸುಂದರ ಸ್ತ್ರೀಯೋರ್ವಳು, ತನ್ನ ಪತಿಯು ಮಧ್ಯಾಹ್ನದ ಊಟಕ್ಕೆ ಮನೆಗೆ ಬಾರದಿದ್ದುದನ್ನು ಕಂಡು, ಅವನನ್ನು ಹುಡುಕುತ್ತಾ ಹೋಗಿ, ಶರಾಬಿನ ಅಂಗಡಿಯಲ್ಲಿ ಅವನು ಕುಡಿದು ಮತಿಗೆಟ್ಟುದನ್ನು ಕಂಡಳು. ರೋಷಾವಿಷ್ಟಳಾಗಿ ಒಡನೆ ರಿವಾಲ್ವರು ತೆಗೆದು ಅವನನ್ನು ಗುಂಡಿಕ್ಕಿ ಕೊಂದಳು. ಅವಳನ್ನು ಒಡನೆ ಕೈದುಮಾಡಿ ಸ್ವೇಷನಿಗೊಯ್ಯಲಾಯಿತು. ವಿಚಾರಣೆಯಾಗಿ, ಅವಳಿಗೆ ಅವಳಿಗೆ ಎರಡು ವರ್ಷಗಳ ಸಜೆಯು ವಿಧಿಸಲ್ಪಟ್ಟಿದೆ. ಪೆರಿಸ್ ದೇಶದಲ್ಲೆಲ್ಲಾ ಈ ವಾರ್ತೆ ಹರಡಿ ಜನರೆಲ್ಲ ಆಶ್ಚರ್ಯಗೊಂಡಿರುವರು.

ಕೊಂಗ್ರೆಸ್ ಉಮೇದ್ವಾರರಿಗೇ ನಿಮ್ಮ ವೋಟು ಕೊಡಿರಿ

ಶ್ರೀ ಬಾಬೂರಾಜೇಂದ್ರ ಪ್ರಸಾದರವರ ವಿನಂತಿ.

"ಕಮ್ಯುನಲ್ ವಿವಾದೀಯ ವಿಷಯಕವಾದ ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರವನ್ನೂ, ಧೋರಣೆಯನ್ನೂ ರಾಷ್ಟ್ರೀಯ ಸಭಾಧಿವೇಶನವು ಸಮರ್ಥಿಸಿರುವ ಪ್ರಯುಕ್ತ ಪಂಡಿತ ಮಾಲವೀಯರ ರಾಷ್ಟ್ರೀಯ ಪಕ್ಷವು ಅದನ್ನು ಸ್ವೀಕರಿಸಿ, ಅದರಂತೆ ನಡೆಕೊಳ್ಳುವುದೆಂದು ನನ್ನ ನಿರೀಕ್ಷೆಯಿತ್ತು. ಆದರೆ, ಮಾಲವೀಯರ ಪ್ರಕಟನೆಯು ನನ್ನನ್ನು ನಿರಾಶನನ್ನಾಗಿ ಮಾಡಿತು. ಯಾವುದನ್ನು ಆ ಪಕ್ಷವು ಅಂಗೀಕರಿಸಲು ಇಚ್ಛಿಸುವುದಿಲ್ಲವೋ ಅದನ್ನು ದೇಶವು ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಉಮೇದ್ವಾರ ವೋಟು ಕೊಡುವುದರ ಮೂಲಕ ಪೂರ್ಣ ಬೆಂಬಲವಿತ್ತು ಸಮರ್ಥಿಸಬೇಕು. ರಾಷ್ಟ್ರೀಯ ಸಭಾಧಿವೇಶನದ ನಂತರ, ಮಾಲವೀಯರು ಒಂದೆ ಕೊಂಗ್ರೆಸ್ ಸಂಬಂಧವನ್ನು ಕಳಕೊಂಡಿದ್ದರೆಂಬ ನೆವದಿಂದ ಅವರಿಗೆ ಸಹಾಯ ಮಾಡುವುದು ಅಕ್ಷಮ್ಯವಾದುದು. ರಾಷ್ಟ್ರೀಯ ಪಕ್ಷದವರಿಗೆ ಕೊಟ್ಟ ವೋಟುಗಳು ಕೊಂಗ್ರೆಸ್ಸಿಗೆ ವಿರುದ್ಧವಾದುದೆಂದು ಖಂಡಿತವಾಗಿ ತಿಳಿದು, ಕೊಂಗ್ರೆಸ್ಸನ್ನು ಸಮರ್ಥಿಸಲಿಚ್ಛಿಸುವವರು ಕೊಂಗ್ರೆಸ್ ಉಮೇದ್ವಾರರಿಗೇನೇ ವೋಟು ಕೊಡಬೇಕಾಗಿ ವಿನಂತಿಸಿಕೊಳ್ಳುವೆನು."

[illegible]

(All Rights reserved).

[illegible] Objections to Scheme Report [illegible] ಪ್ರಶ್ನೆಗಳಿಗೆಲ್ಲ ಉತ್ತರವೀಯು [illegible] ಕಮಿಟಿಯು ವರದಿ ಯನ್ನು [illegible] ಗ್ರಂಥವನ್ನ ಮುದ್ರಿಸಲಾಯಿತೆಂದು [illegible]!

× × × × ×

ಹಾ! ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲಿಕರ ಸಂಘವೂ, ಉಡುಪಿ ಭೂಮಾಲಿಕರ ಸಂಘವೂ ರಾತ್ರಿ ಹಗಲು ದುಡಿದು, ಬರೆದು, [illegible] ಬಂದಾಗ [illegible] ಲಕೋಟೆಯೊಳಗೆ ಹಾಕಿ ಜಾಗ್ರತೆಯಿಂದ ಸರಕಾರಕ್ಕೂ, ಸಂಪಾದಕರುಗಳಿಗೂ, ವರ್ತಮಾನದಾರರಿಗೂ ಕಳುಹಿಸಿದ್ದೇ ಬಂತು. (ಕನ್ನಡ ಭಾಷಾಂತರ ಸಮೇತ) ಮಾಡುವುದು ಏನು? ಅದನ್ನು ಓದುವಾಗ ಮಾತ್ರ ಹಣೆಗೆ ಅಮೃತಾಂಜನ ಮುಟ್ಟಿಸುವ ಗತಿ ಬಂತು!

× × × × ×

ಅಯ್ಯಾ ಭೂಮಾಲಿಕರೇ, ಅಮೃತಾಂಜನದ ಜಾಹೀರಾತು ಮಾಡಿದೆನೆಂದು ಭಾವಿಸಬೇಡಿ! ಹೇಳುವೆನು;— ಕೇಳಿ: ನನ್ನ—ನನ್ನ ಶ್ರೀ ಯು. ಸಿ. ಸುಬ್ರಹ್ಮಣ್ಯ ದೇವರು ನೆನ್ನೆ ಮದ್ರಾಸು ಕೌನ್ಸಿಲಿನಲ್ಲಿ ರೆವಿನ್ಯೂ ಮೆಂಬರರಿಗೊಂದು ಪ್ರಶ್ನೆಯಿಟ್ಟು "ಅಯ್ಯಾ, ಕಂದಾಯ ಸದಸ್ಯರೇ, ದ. ಕ. ಜಿಲ್ಲಾ ಭೂಮಾಲಿಕರ 'ವಿಘ್ನ ಗ್ರಂಥ' (Objection book) ನಿಮಗೆ ತಲುಪಿದೆಯೋ? ಹಾಗಾದರೆ ಏನು ಮಾಡಿದಿರಿ?" ಎಂದು ಕೇಳಿದರು. ಕ್ಷಣದಲ್ಲಿ 'ಕಂದಾಯಸದಸ್ಯರು' ಎದ್ದು "ಅದು ತಲುಪಿದೆ ಯಯ್ಯಾ! ಅದು ಬಹಳ ಉದ್ದವಿದ್ದು, ಇಗೋ, ನನ್ನ ಮೇಜಿನ ಮೇಲೆ ಕೈಕಾಲು ಬಿಟ್ಟು ಮಲಗಿದೆ" ಎಂದರು. ಈ ಗ್ರಂಥದೊಡನೆ ಅಮೃತಾಂಜನದ ಡಬ್ಬಿಯೊಂದನ್ನು ಕಳುಹಿಸಿದರೆ ಏನಾಗುತ್ತಿತ್ತು?

× × × × ×

ಅದರೂ ಸರ್ ಆರ್ಚಿಬಾಲ್ಡ್ ಕೇಂಪ್‌ಬೆಲ್ಲರಿಗೆ ಈ 'ವಿಘ್ನ ಗ್ರಂಥ'ದ ಮುದ್ರಣಕ್ಕೆ ಹಿಡಿದ ವೆಚ್ಚ ತಗಲಿದೆಯೆಂದು ಗೊತ್ತು ನೋಡಿ! ಅದುದರಿಂದ "The lengthy representation will be duly considered" ಎಂದು ನುಡಿದು ಬಿಟ್ಟಿದ್ದಾರೆ ಅವರು!

ನಿಮ್ಮ ಕುಟುಂಬದ ಸದಾರೋಗ್ಯ

ರುಚಿಕರವಾದ ಓವಲ್ಟಿನ್ನನ್ನು ನಿಮ್ಮ ಕುಟುಂಬದ ಪಾನೀಯವಾಗಿ ದಿನನಿತ್ಯ ಉಪಯೋಗಿಸಿರಿ. ಪ್ರಕೃತಿ ಸಿದ್ಧವಾದ ಪಾನೀಯವು ನಿಮ್ಮ ಕುಟುಂಬದವರ ಆರೋಗ್ಯವನ್ನು ವೃದ್ಧಿಸುವುದು. ಓವಲ್ಟಿನ್ ಎಂಬುದು ಸಂಪೂರ್ಣ ಮತ್ತು ಸಂತೃಪ್ತಿಕರವಾದ ಆಹಾರ. ಇದನ್ನು ಪ್ರಕೃತಿಯ ಅಮೂಲ್ಯ ಟೋನಿಕ್ ಆಹಾರಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ದಪ್ಪ ಹಾಲು ಮತ್ತು ವಿಶಿಷ್ಟ ಕೋಕೋಗಳಿಂದ ಇದು ತಯಾರಾಗಿದೆ. ಆರೋಗ್ಯ ಮತ್ತು ಶಕ್ತಿವರ್ಧನೆಗಳಿಗಾಗಿ ಇದು ಎಲ್ಲಾ ಚೈತನ್ಯವನ್ನು ಕೊಡುತ್ತದೆ.

ಬೆಳಗ್ಗೂ ರಾತ್ರಿಯೂ ಒಂದು ಕಪ್ ಓವಲ್ಟಿನ್ ತೆಗೆದುಕೊಂಡರೆ ಇದು ನಿಮ್ಮನ್ನು ಆರೋಗ್ಯವಂತರನ್ನಾಗಿ ಇಡುವುದು. ದಿನದ ಕೆಲಸಕ್ಕೆ ಇದು ಚೈತನ್ಯ ಶಕ್ತಿಗಳನ್ನು ಕೊಟ್ಟು ರಾತ್ರಿ ಗಾಢ ನಿದ್ರೆಯನ್ನು ಅದರ ಅಮೋಘ ಶಕ್ತಿಯಿಂದ ಕೊಡುತ್ತದೆ. ನಿಮ್ಮ ಕುಟುಂಬವು ಇದರ ರುಚಿಯನ್ನರಿತು ಆರೋಗ್ಯವಂತವಾಗಿ ಬಾಳಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ.

ಏಜಂಟ್—ಜೇಮ್ಸ್ ರೈಟ್, 85ಎ. ಕ್ಲೈವ್ ಸ್ಟ್ರೀಟ್, ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/210

ಎಲ್ಲಾ ಉಂಟು ಆ "ಡಬ್ಬಿ"ಯೊಳಗೆ! ಆ ಡಬ್ಬಿ ಮೆಂಬರಿಗೆ ಜಯವಾಗಲಿ!

× × × × × ×

ಇನ್ನೊಂದು ಪ್ರಶ್ನೆ!: ಗವರ್ನಮೆಂಟ್ ಕಾಲೇಜಿನಲ್ಲಿ ಆದಿತ್ಯವಾರ ನಡೆದ ಕರ್ನಾಟಕ ಸಂಘದ ವಾರ್ಷಿಕೋತ್ಸವದ ವೇಳೆ ಅಚಾರ್ಯರು 'ದೇಶಾಭಿಮಾನ'ಯನ್ನು ಬಾಯಿ ತುಂಬ ಹೊಗಳಿದರು. ಸ್ವದೇಶಾಭಿಮಾನ ಎಂದು ಇದಿ ಹೆಸರು ಮಾತ್ರ ಹೇಳಲಿಲ್ಲವೇಕೆ? "ಸ್ವದೇಶ"ದ ಹೆಸರು ಇವರಿಗೆ ಸಿಹಿಸ್ಸನೇ? ಉಚ್ಚರಿಸಲು ಕಷ್ಟವಾಯಿತೆ? ಪಂಡಿತರಪ್ಪ!

× × × × ×

ನಮ್ಮ ನಗರಸಭೆಗೆ ಯಾರು ಚೆಯರ್ಮನರಾಗುವರೆಂದು ಯೋಚನೆ! ಡಾ। ಬಿ. ಶಿಟ್ಟರ ಸ್ಥಾನದಲ್ಲಿ ಶ್ರೀ ಬಾಳಿಗರವರು ಇದ್ದಂತೆ ಸಾಯ್ಬನು ಕನಸು ಕಂಡನಾದರೂ, ಬಿ. ಸಿ. ಡಿ.ಯವರು ಯತ್ನಿಸುತ್ತಿರುವರಾದುದರಿಂದ ಆಶೆ ಕಡಿಮೆ!

'ಸಾಯ್ಬ'.

Canara Bank, Limited.

Established 1906.

Authorised Capital	10,00,000—0—0.	Paid up Capital	8,30,000—0—0.
Subscribed Capital	6,00,000—0—0.	Reserves	4,31,000—0—0.

Head office—BUNDER, MANGALORE. *Local offices*—CITY & BUNDER.

BRANCHES—Bombay, Cochin, Calicut, Ernakulam, Alleppey, Chikmagalur, Bangalore, Ganguli, Coondapoor, Udipi, Karkal, Puttur, Kasaragod, & Bunwal out-agency

Interest is allowed on Current, Fixed & Savings Bank Accounts, rates of which may be ascertained on application. Advances made on approved securities at easy rates. All kinds of Banking business transacted. Rules of business on application.

A. Madhava Pai, *Secretary.*

ಅನುಕ್ರಮಣಿಕೆ.

ಅಗ್ರಲೇಖ
ಸಹಕಾರ ಚಳವಳವೂ ರೈತರೂ ... [illegible]
ಸ್ಫುಟವಿಚಾರಗಳು ... [illegible]
ಕೋಟೆಗಳು ... ೧೦
ವರ್ತಮಾನ ಸಂಗ್ರಹ ... [illegible]
ವಿಚಿತ್ರ ಸಮಾಚಾರಗಳು ... [illegible]
ಪತ್ರವ್ಯವಹಾರ ... [illegible]
ನೀರು! ... [illegible]
ಮಂಗಳೂರು ... ೧೧
ಕ್ರೀಡಾ ... [illegible]
ಕೊಂಗ್ರೆಸ್ಸಿನ ಕೋಟೆಯ ಪ್ರಮೋದ, ಮಾಲವೀಯರ ಪ್ರಕಟನೆ ... ೧೯
ಗ್ರಾಹಕ ... [illegible]

ಸ್ವದೇಶಾಭಿಮಾನಿ.

ತಾ. ೯ನೇ ಶುಕ್ರವಾರ ನವಂಬರ '೩೪

ಸಹಕಾರ ಚಳವಳವೂ ರೈತರೂ.

ಬಾಡಿಕೆಯಾಗಿ, ಸಹಕಾರಿ ಚಳವಳದ ಪ್ರಸಾರವು ನಮ್ಮ ಬಡಜನರ ಉದ್ಧಾರಕ್ಕಾಗಿದೆ ಎನ್ನುವುದುಂಟು. ಆಗಾಗ್ಗೆ ತಮ್ಮ ಅಂತರಾತ್ಮನಿಗೆ ಕಸಿವಿಸಿಯಾದಾಗ, ವಿಶೇಷವಾಗಿ ಅಧಿಕಾರಿ ವರ್ಗವು, ಮಹಾಸಮುಸ್ಯೆಗಳನ್ನು ಅಬಗೆಯಾಗಿ ಹೇಳಿ, ಅಲ್ಲಿಗೇ ಮುಗಿಸಿಬಿಟ್ಟು ತಾತ್ಕಾಲಿಕ ನೆಮ್ಮದಿಯಿಂದಿರುವುದು ಅವಿರಳವಲ್ಲ. ಹಾಗೆಯೇ, ರೈತರು ಮುಳುಗಿ ಏಳಲಾರದಂತಹ ಸಾಲದ ಹೊರೆಯಲ್ಲಿ ಬಿದ್ದಿರಲು ಅವರ ಉದ್ಧಾರ ಹೇಗಾಗಬೇಕೆಂದಾಗ — 'ಲ್ಯಾಂಡ್ ಮೊರ್ಗೇಜ್ ಬ್ಯಾಂಕಿನ ಸ್ಥಾಪನೆ' ಎಂಬ ಉತ್ತರವನ್ನು ಕೇಳುತ್ತೇವೆ. ಸಹಕಾರೀ ಪದ್ಧತಿಯ ಆದೊಂದು ಆಯೋಜನೆಯಿಂದ, ಕೃಷಿ ಉತ್ಪತ್ತಿಗಳನ್ನು ಕಳ್ಳವಿಕ್ರಯಕ್ಕೆ ಹೆಚ್ಚಿನ ಧಾರಣೆಗಳಿಗೆ ವಿಕ್ರಯಿಸುವುದರಿಂದಲೂ ಮತ್ತೆ ಕೆಲವು ಅಂತಹ ಕಾರ್ಯಗಳಿಂದಲೂ ಜನಸಾಮಾನ್ಯದ ಉದ್ಧಾರವಾಗುವುದೆಂದು ಆಶ್ವಾಸನೆ ಕೊಡಲಾಗುತ್ತಿದೆ.

ಆದರೆ, ವಾಸ್ತವವಾಗಿ ಇಂಡಿಯದ ಸಹಕಾರ ಚಳವಳದ ಪ್ರಸಾರಕ್ಕೆ, ಪರಿಸ್ಥಿತಿಯು ಅನುಕೂಲವಾಗಿಲ್ಲವೆಂದೇ ತೋರದಿರದು. ನಮ್ಮ ಕೃಷೀವಲರ ಸ್ಥಿತಿಯು ಎಂತಹದೆಂಬ ಕಲ್ಪನೆಯು ಸ್ಕೀನ್ ರಿಪೋರ್ಟಿಗೆ ಉತ್ತರವಾಗಿ ಬರಕೊಂಡ ಆಕ್ಷೇಪಣಾರೂಪದ ಮನವಿಗಳಿಂದ ಕೊಂಚವಾದರೂ ಕಲ್ಪಿಸಬರುವುದು. ಕೃಷಿಯ ವಿಷಯಕವಾದ ಸರಕಾರದ ಧೋರಣೆಯು ಆಮೂಲಾಗ್ರ ಬದಲಾಗಿ ಬೇಸಾಯವನ್ನು ಸದ್ಯಸ್ಥಿತಿಗಿಂತಲೂ ಹೆಚ್ಚಿಗೆ ಆದಾಯಕರವಾಗುವಂತೆ ಮಾಡುವುದು ಸಾಧ್ಯವಲ್ಲವಾದರೆ — ಸಾಲ ಕೊಡುವ ಈ ಹೊಸ ಚಳವಳವಾದರೂ ಯಶಸ್ವಿಯಾಗುವುದೆಂದು ಹೇಳಬರುವುದಿಲ್ಲ! ಪ್ರಕೃತದ ಅಸ್ಥಿರ ಧಾರಣೆವಾಸಿಗಳಿಂದ ರೈತನು ತನ್ನ ಧನಿಗೂ, ರಾಜನಿಗೂ, ಸಾಲಿಗನಿಗೂ ಕೊಟ್ಟು, ತನ್ನ ಕುಟುಂಬವನ್ನು ಪೋಷಿಸಲಾರನು — ಅಥವಾ ಕುಟುಂಬ ಪೋಷಣೆಯು ಅನಿವಾರ್ಯವೆಂದಾಗ ಧನಿಗೂ, ರಾಜನಿಗೂ, ಸಾಲಿಗನಿಗೂ ಕೊಡಲಾರದವನಾಗಿರುವನು. ಸಹಾಯಕರವೆನ್ನಬಹುದಾದ ಉಪಸಂಪಾದನೆಯ ವೃತ್ತಿಗಳೇ ಈಗ ರೈತನ ಮುಂದೆ ಇಲ್ಲ. ಅದು ಕಾರಣ, ಹಿಂದೂದೇಶದಲ್ಲಿ ಸಹಕಾರ ಚಳವಳದಿಂದ ಉದ್ಧಾರವಾಗುವುದೆಂಬ ಪ್ರತ್ಯಾಶೆಯು ನಿರರ್ಥಕವೆನ್ನಬಹುದು.

ಮತ್ತೊಂದು ವಿಚಾರ—ಹಿಂದೂದೇಶದಲ್ಲಿ ಸಹಕಾರ ಚಳವಳವು ಬಹುಮಟ್ಟಿಗೆ ಇಂದು ಪ್ರತೀಕಾರರ (reactionaries) ವರ್ಗದ ಅಧಿಕಾರದೊಳಗಿದ್ದು, ಅಧಿಕಾರವರ್ಗದವರು ನಿರ್ದೇಶಕರಾಗಿರುವರು. ಹೀಗಾಗಿ, ಅದು ಬೂರ್ಜ್ವಾಯ ಭಾರವನ್ನು ಬಡವರ ಮೇಲಿರಿಸುವ ಪದ್ಧತಿಯ ಮತ್ತೊಂದು ರೂಪವಾಗಿದೆ. ರೈತರ ಬಗ್ಗೆ ಇರುವ ಸಹಕಾರ ಸಂಘಗಳು ಸರ್ವಸಾಮಾನ್ಯವಾಗಿ ಬಡ್ಡಿ ದರವನ್ನಿಳಿಸಲು ಕಾರಣವಾಗಿವೆಯೆನ್ನುವವರಿದ್ದಾರೆ. 'ಇದನ್ನು ಸ್ವೀಕರಿಸಲು ಸಾಧ್ಯವೆಂದು ನಾವೆಣಿಸುವುದಿಲ್ಲ. ಜನಸಂಖ್ಯೆಯ ನೇಕಡಾ ೬೦ರಷ್ಟು ಅಂಶದಷ್ಟಕ್ಕು ಅದು ಇನ್ನೂ ಮುಟ್ಟಿಲ್ಲವೆನ್ನಬಹುದು. ಖಾಸಗಿ ಬ್ಯಾಂಕರರು ಅಧಿಕಾಧಿಕ ಬಡ್ಡಿಯನ್ನು ವಿಧಿಸಿರುವುದು ನಿಜವಾದರೂ ಅನೇಕ ವೇಳೆ ಬಡ್ಡಿ ಕಗ್ಗಿಸಿದುದೂ ಇದೆ; ಒಮ್ಮೊಮ್ಮೆ ಮೂಲಸಾಲದ ಮೊಬಲಗಿನಿಂದಲೇ ಒಂದಂಶವನ್ನು ಬಿಟ್ಟುಕೊಟ್ಟ ಸಂಭವವೂ ಇದೆ. ಆದರೆ, ಸಹಕಾರಿ ಸಂಘಗಳು ಬಡ್ಡಿಯನ್ನು ಕೂಡಿಸಿಡುತ್ತಲೇ ಹೋಗುತ್ತಿವೆ; ಸಾಲದ ಮೊತ್ತವು ಹೆಚ್ಚುತ್ತಲೇ ಇದೆ. ರೈತರ ಈಗಳಿನ ಸಾಲಸೋಲಗಳನ್ನು, ಅವರ ಪರಿಸ್ಥಿತಿಯನ್ನು ಚೆನ್ನಾಗಿ ವಿಮರ್ಶಿಸಿ ಅನುಕೂಲವಾಗಿ ತೀರ್ಮಾನಿಸುವುದೂ ಅವಶ್ಯವಿದೆ. ಹಾಗೆಯೇ ಗೇಯುವವರಿಗೆ ನ್ಯಾಯವಾದ ಕೂಲಿ ದೊರೆತು ಅವರ ಸ್ಥಿತಿಯಲ್ಲಿ ಸುಧಾರಣೆಯಾಗುವಂತೆ ಆಂದೋಲನವನ್ನು ನಡೆಯಿಸುವ ಕೇಂದ್ರಗಳಾಗಿಯೂ ಮಾರ್ಪಡಬೇಕಾಗಿದೆ. ಹಾಗಾದರೆ ಮಾತ್ರ 'ಮೂಕವಿಲ್ಲಿಯ'ಗಳ ಉದ್ಧಾರವು ಸಾಧ್ಯ; ಸಹಕಾರ ಚಳವಳದ ಮತ್ತು ಲ್ಯಾಂಡ್ ಮೊರ್ಗೇಜ್ ಬ್ಯಾಂಕಿನ ಸಾರ್ಥಕತೆ. ಇನಿಲ್ಲದೆ, ಕೇವಲ ಖಾಸಗಿ ಜನರು ಅಪರಿಮಿತ ಬಡ್ಡಿಗೆ ಹಣಕೊಡುವುದನ್ನು ತಡೆವಂತಹ ಶಾಸನವನ್ನು ಮಾತ್ರ ಜ್ಯಾರಿಗೆ ತಂದರೆ, ಅದರಿಂದ ನಿರೀಕ್ಷಿಸಿದಷ್ಟು ಪರಿಣಾಮವಾಗದು. ಮದ್ರಾಸು ಕೌನ್ಸಿಲಿನಲ್ಲಿ ಕಳೆದವಾರ ಮಂಜೂರಾದ 'ಮನಿ ಲೆಂಡರ್ಸ್ ಬಿಲ್' ಇದೂ ರೈತರ ಆರ್ಥಿಕ ಸ್ಥಿತಿ ಸುಧಾರಣೆಯ ಯೋಗ್ಯ ಯೋಜನೆಗಳೂ ಒಂದನ್ನೊಂದು ಬಿಟ್ಟಿಲ್ಲವೆನ್ನಬೇಕು. ಆ ಮಸೂದೆಯನ್ನು ಜ್ಯಾರಿಗೆ ತಂದು ಉಪಕಾರ ಮಾಡುವ ದಯಾಳು ಸರಕಾರವು ರೈತರ ಮೇಲಿನ ಇತರ ಹೊರೆಗಳನ್ನೂ ಕೊಂಚ ಇಳಿಸುವುದೇ?

ಸ್ಫುಟವಿಚಾರಗಳು

ಒಂದು ಎಚ್ಚರಿಕೆ!

ಯಾರಿಗೆಂದು ಹೇಳಲು ಸಾಧ್ಯವಿಲ್ಲ! ಕಲ್ಕತ್ತದಲ್ಲಿ ಕನ್ಸಲ್ ಜನರಲ್ ಆಗಿದ್ದ ವಿ. ಪಿ. ಸ್ಟೋಲ್ ಎಂಬವರು 'ಹಿಂದೂಸ್ಥಾನದ ಮೇಲೆ ವಿದೇಶೀಯನ ನೋಟ' ಎಂಬುದರಲ್ಲಿ ಪ್ರಕಟಿಸಿದುದು: 'ಬ್ರಿಟಿಷರೊಳಗೂ ಹಿಂದೀಯರೊಳಗೂ ಅನೇಕ ವಿಪತ್ತುಗಳು ಜರಗುವುವು, ಅನೇಕ ಮಾತುಕತೆಗಳಾಗುವುವು. ಆದರೂ ಬ್ರಿಟಿಷರನ್ನು ಹಿಂದೂಸ್ಥಾನದ ಹೊರಗಟ್ಟಲು ಸಾಧ್ಯವಿಲ್ಲ. ಬ್ರಿಟನು ಹಿಂದೂಸ್ಥಾನವನ್ನು ಬಿಟ್ಟಿತೆಂದರೆ ಪಶ್ಚಿಮ ದೇಶಗಳಲ್ಲಿ ಮತ್ತೂ ಕೋಲಾಹಲವು ತಲೆದೋರುವುದು. ಹಿಂದೂದೇಶದ ಮೇಲೆ ಆಧರಿಸಿರುವ ಯೂರೋಪಿಯ ದೇಶಗಳೆಲ್ಲ ಮಣ್ಣು ಮುಕ್ಕುವುವು' ಎಂದು ಸ್ಟೋಲರವರ ಸೂಚನೆ! ಅಧಿಕಾರ ವರ್ಗದಿಂದಲೇ, ಸ್ವಬಾಂಧವರಿಂದಲೇ, ಇಂತಹ ಎಚ್ಚರಿಕೆಯು ಸಿಗುವಾಗಲಾದರೂ, ಹಿಂದೂದೇಶದ ಕೇಳಿಕೆಗಳು ಕುರುಡು ಕಿವಿಗಳ ಪಾಲಾಗುತ್ತಿವೆಯಲ್ಲ! ಅದೇ ಆಶ್ಚರ್ಯ!

ದಿವಾಳಿಖೋರರ ಸಂಖ್ಯೆ ಇಳಿದಿದೆ.

ಬ್ರಿಟನಿನಲ್ಲಿ ದಾರಿದ್ರ್ಯವಿಲ್ಲವೆಂದು ಕೆಲವರ ಅಭಿಪ್ರಾಯವಿರಬಹುದು. ಅದು ಸತ್ಯವಲ್ಲ. ೧೯೩೩ರಲ್ಲಿ 4665 ಜನರು ದಿವಾಳಿ ಅರ್ಜಿ ಹಾಕಿದರು—ದಿವಾಳಿಯಾದರು. 1934ರಲ್ಲಿ, ಈ ಸಂಖ್ಯೆಯು 4110ಕ್ಕೆ ಇಳಿದಿದೆ. ಇವರಲ್ಲಿ 428 ಮಂದಿ ಬೇಸಾಯಗಾರರು. ಇವರ ಸಾಲದಲ್ಲಿ 797,842 ಪೌಂಡುಗಳು ಮುಳುಗಿಹೋದುವು. ಈ ದಿವಾಳಿಗಿರಿಯಲ್ಲಿ ಒಂದು ವೈಶಿಷ್ಟ್ಯವೆಂದರೆ ಇದರಲ್ಲಿ 298 ಮಂದಿ ಸ್ತ್ರೀಯರೂ ಇರುವಂತಹುದು! ಬ್ರಿಟನಿನಲ್ಲಿ ಸ್ತ್ರೀಯರು ಹಲವು ವಿಷಯಗಳಲ್ಲಿ ಮುಂದರಿದಂತೆ ಇದರಲ್ಲೂ ಮುಂದರಿದಿರುವರು; ಇದು ಒಂದು ವಿಶೇಷ. ಹಿಂದೂಸ್ಥಾನದಲ್ಲಿ ದಿವಾಳಿಖೋರರ ಸಂಖ್ಯೆಯೆಷ್ಟೆಂದು ತಿಳಿದುಬಂದಿಲ್ಲವಾದರೂ, ಸ್ತ್ರೀಯರು ಇದರಲ್ಲಿರುವುದು ಅಪರೂಪ. ದುಃಖದಲ್ಲೊಂದು ಸಂತೋಷವೆಂದರೆ, ಬ್ರಿಟನಿನಲ್ಲಿ ದಿವಾಳಿಖೋರರ ಸಂಖ್ಯೆಯು ಇಳಿಯುತ್ತಿರುವುದು.

ಗವರ್ನಮೆಂಟ್ ಕೋಲೇಜಿನ ಕರ್ಣಾಟಕ ಸಂಘವು

ತಾ. ೬ನೇ ಆದಿತ್ಯವಾರ ಬಹು ವಿಜೃಂಭಣೆಯಿಂದ ಜರಗಿತು. ಸಂಗೀತ, ಪ್ರಹಸನ, ನರ್ತನಗಳೇ ಮೊದಲಾದ ಕಾರ್ಯಕ್ರಮಗಳು ಹೆಚ್ಚು ಪ್ರೇಕ್ಷಕರನ್ನು ಆಕರ್ಷಿಸಿರುವುದರಿಂದ ಸಂಘದ ತರುಣರ ಯತ್ನವೂ ತುಂಬ ನಡೆದಿರಬೇಕೆಂದು ಊಹಿಸಲೆಡೆಯಿದೆ. ಗವರ್ನಮೆಂಟ್ ಕೊಲೆಜಿನ ಹಿರಿಯ ಕರ್ಣಾಟಕ ಪಂಡಿತರಾದ ಶ್ರೀ. ಉ. ಸೀತಾರಾಮಾಚಾರ್ಯರ ಭಾಷಣದಲ್ಲಿ ಕನ್ನಡ ವಾಙ್ಮಯದ ಸಂಕ್ಷಿಪ್ತ ಸಿಂಹಾವಲೋಕನವಿತ್ತಾದರೂ, ಕರ್ಣಾಟಕ ಸಂಘದ ಉದ್ದೇಶವೇನು?—ಅದನ್ನು ನೆರವೇರಿಸುವ ಬಗ್ಗೆ ಸಾಹಸವೆಂತು?—ಎಂಬ ವಿಷಯಗಳು ಅದಕವಾಗಿರಲಿಲ್ಲವೆನ್ನಬಹುದು. ವರದಿಯನ್ನೋದಿದರೆ ಸಂಘವು ಸಾಕಷ್ಟು ಪ್ರಗತಿಹೊಂದಿದೆಯೆಂದು ತಿಳಿಯಬಹುದು. ಈ ಕರ್ಣಾಟಕ ಸಂಘವು ತನ್ನ ಕಾರ್ಯಕಲಾಪಗಳನ್ನು ಆಗಾಗ್ಗೆ ಬಹಿರಂಗಪಡಿಸಿ, ಕನ್ನಡಿಗರೆಲ್ಲರಿಗೆ ಇದರ ಚಟುವಟಿಕೆಯು ತಿಳಿದು ಬಂದು ವಿಜಯವನ್ನು ಹೊಂದಲೆಂದು ಕೋರುವೆವು.

ಮಹಾತ್ಮಾಜಿಯವರ ಗ್ರಾಮ ಕೈಗಾರಿಕಾ ಸಂಘವು

ಅಹಮ್ಮದಾಬಾದನ್ನು ಕೇಂದ್ರವನ್ನಾಗಿ ಮಾಡಿ ಪ್ರಾಂತಿಕ ಮತ್ತು ಜಿಲ್ಲಾ ಬೋರ್ಡುಗಳನ್ನು ಸ್ಥಾಪಿಸಿ, ತನ್ನ ಕೆಲಸಗಾರರನ್ನು ಗ್ರಾಮಗಳಿಗೆ ಕಳುಹಿಸಿ ಗ್ರಾಮಗಳಲ್ಲಿನ ಕೈಗಾರಿಕೆಗಳ ಪುನರುದ್ಧಾರ ಕಾರ್ಯವನ್ನೇ ಸಗತೊಡಗುವುದೆಂದು ಚಿಕ್ಕ ವಿವರವು ಪ್ರಕಟವಾಗಿದೆ. ಮಹಾತ್ಮರ ಅಭಿಪ್ರಾಯದಂತೆ ಈ ಸಂಘಟನಾ ಕಾರ್ಯವು ಎರಡು ವರ್ಷಗಳೊಳಗೆ ಪೂರ್ಣವಾಗುವುದೆಂದು ಗೊತ್ತಾಗಿದೆ. ನಿಜವಾಗಿಯೂ ಆನಂದಕರ ವಾರ್ತೆ. ಯೋಗ್ಯ ಶ್ರದ್ಧಾಳುಗಳೂ, ನಿಷ್ಠಾವಂತರೂ, ಕ್ಲೇಶಸಹಿಷ್ಣುಗಳೂ ಆದ ಪ್ರಚಾರಕರ ಬೆಂಬಲವು ಮಹಾತ್ಮಾಜಿಯವರಿಗೆ ದೊರೆತರೆ—ಅಲ್ಲದೆ ಅದರೊಡನೆ ಸರಕಾರದ ಸಹಾನುಭೂತಿಯೂ ಲಭ್ಯವಾದರೆ ಮಹಾತ್ಮರ ಈ ಮಹೋದ್ದೇಶವು ಇದಕ್ಕಿಂತಲೂ ಶೀಘ್ರವಾಗಿ ನೆರವೇರುವುದರಲ್ಲಿ ಸಂದೇಹವಿಲ್ಲ. ಮಹಾತ್ಮರೇನೋ—ತನ್ನ ಪೂರ್ವಾನುಭವದ ಪರಿಣಾಮವಾಗಿ—ಯೋಗ್ಯ ಕಾರ್ಯಕಾರೀ ಮಂಡಳಿಯನ್ನು ಆರಿಸಿ ಸ್ಥಾಪಿಸುವರೆಂಬ ಭರವಸೆಯುಂಟಾದರೂ, ಹರಿಜನೋದ್ಧಾರ, ಖಾದಿಪ್ರಚಾರಗಳಂತಹ ದೇಶಹಿತಕರ ವಿಷಯಗಳ ಅನುಮೋದನೆಗೆ ಹಿಂದರಿದ ಸರಕಾರವು ಮಹಾತ್ಮರ ಈ ಸಾಹಸದಲ್ಲಿ ಸಹಕಾರವನ್ನೀಯುವುದೇ? ಇದನ್ನು ಇನ್ನು ನೋಡುತ್ತಿರುವ.

'ಮನಿಲೆಂಡರ್ಸ್ ಬಿಲ್'

ಎಂಬುದು ಕಳೆದ ತಿಂಗಳ ತಾ. 24ರಲ್ಲಿ ಮದ್ರಾಸು ಕೌನ್ಸಿಲಿನಲ್ಲಿ ಚರ್ಚೆಗೆ ಬಂದು, ಬಹುಮತದಿಂದ ಶಾಸನವಾಗಿ ಅನುಮೋದಿಸಲ್ಪಟ್ಟುದು ಸಂತಸಕ್ಕೊಂದು ಶುಭಸಂಗತಿ; ಈ ಸಂಬಂಧವಾಗಿ ಶ್ರಮಿಸಿದ ಕೌನ್ಸಿಲರರನ್ನು, ಮುಖ್ಯವಾಗಿ—ಶ್ರೀ ಸಿ. ವಾಸುದೇವರನ್ನು ಅಭಿನಂದಿಸಬೇಕಾಗಿದೆ. ಧಂಡನಾಳಿಗರ ಲಾಭಸಂಪಾದನೆಯು ನಿರ್ಬಂಧವು ಈ 'ಸಾಲಿಗರ ಮಸೂದೆ'ಯಿಂದಾಗುವುದಾದರೂ, ಪ್ರತಿಭಾಶಾಲಿ ಸದಸ್ಯರ ಒತ್ತಾಯವನ್ನು ಸಹಿಸಿಯೂ ಸರಕಾರವು ಬಡ್ಡಿಯ ದರವನ್ನು ನಿರ್ದೇಶಿಸಲು ಸಿದ್ಧವಿಲ್ಲದೆ ಹೋಗಿರುವುದರಿಂದ ಈ ಮಸೂದೆಯು ಪೂರ್ಣ ಫಲಬಿಡಲು ಆತಂಕವಾಗಿದೆ. ಬಡ್ಡಿಯ ದರವನ್ನೂ ಸರಕಾರವೇ ನಿಷ್ಕರ್ಷಿಸುತ್ತಿದ್ದರೆ ಆಗುವುದಾದರೂ ಏನಿತ್ತು? ಚೇಂಬರ್ಸ್ ಒಫ್ ಕೊಮರ್ಸ್ ಮತ್ತು ಟ್ರೇಡ್ ಯೂನಿಯನ್ ಮೊದಲಾದುವುಗಳ ಅಭಿಪ್ರಾಯ ಸಂಗ್ರಹಮಾಡುವುದು ಯಥಾರ್ಥವೂ ಸಾಧುವೂ ಹೌದು ನಿಜ; ಆದರೂ ಬಡ್ಡಿಯ ದರದ ನಿರ್ಣಯದೊಂದಿಗೆ ಈ ಮಸೂದೆಯು ಶಾಸನವಾಗಿ ಫಲಬಿಡುತ್ತಿದ್ದರೆ ಸರಕಾರವು ವಂದನಾರ್ಹವಾಗುತ್ತಿತ್ತೆಂಬುದರಲ್ಲಿ ಭಿನ್ನಾಭಿಪ್ರಾಯವಿರದು.

ಮದ್ರಾಸು ಗವರ್ನರರಾದ

ಸರ್ ಜೋರ್ಜ್ ಫ್ರೆಡರಿಕ್ ಸ್ಟೇನ್ಲಿಯವರು ಇದೇ ತಾ. ೧೫ರಲ್ಲಿ—ತನ್ನ ಐದು ವರ್ಷಗಳ ಆಡಳಿತ ಅವಧಿಯು ಮುಗಿದು—ಇಂಗ್ಲಾಂಡಿಗೆ ತೆರಳಲಿರುವರು. ಮದ್ರಾಸಿನ ಶೆರಿಫರು ಮಾನ್ಯ ಗವರ್ನರರಿಗಾಗಿ ಏರ್ಪಡಿಸಿದ ವಿದಾಯ ಸತ್ಕಾರ ಕೂಟದಲ್ಲಿ ಗವರ್ನರರು ಮಾಡಿದ ಭಾಷಣವು ಪ್ರೇಮಪೂರಿತವೂ ಅರ್ಥಗರ್ಭಿತವೂ ಇದೆ. ಸರ್ ಸ್ಟೇನ್ಲಿಯವರ ಐದು ವರ್ಷಗಳ ದೇಶಾಡಳಿತವು ಸುಸೂತ್ರವಾಗಿ ನಡೆದು ಅವರಿಗೆ ಯಶಸ್ಸನ್ನು ತಂದಿತೆಂಬುದರಲ್ಲಿ ಸಂದೇಹವಿಲ್ಲ. ಅವರ ಕಾಲದಲ್ಲಿ ಮದ್ರಾಸು ಸಂಸ್ಥಾನದಲ್ಲಿ ಹಲವು ಉಪಯುಕ್ತ ಶಾಸನಗಳೂ ಹೊರಬಿದ್ದುವು. ಅಂತೂ, ಗವರ್ನರರ ನಡತೆಯು ಸಂಸ್ಥಾನದ ಮೇಲಿನ ಪ್ರೇಮವನ್ನು ಪ್ರಕಟಿಸಿತು. ಇವರ ಕಾಲದಲ್ಲಿ ರಿಸೆಟ್ಲ್ಮೆಂಟಿನ ಬೆದರಿಕೆಯೊಂದು ಜನರ ಮನಸ್ಸಿನಿಂದ ಅಳಿಸಿಹೋಗುವಂತಾಗುತ್ತಿದ್ದರೆ ಮಾನ್ಯರ ಯಶಸ್ಸು ಚಿರಸ್ಥಾಯಿಯಾಗುತ್ತಿತ್ತೆಂದು ಬೇರೆ ಹೇಳಬೇಕಿಲ್ಲ. ಸರ್ ಸ್ಟೇನ್ಲಿಯವರಿಗೆ ಶುಭಸಂಚಾರವನ್ನು ಬಯಸುವೆವಲ್ಲದೆ, ಅವರ ಸ್ಥಾನಕ್ಕೆ ಬರುವ ಲೋರ್ಡ್ ಎರ್ಸ್ಕಿನ್ ಪ್ರಭುಗಳಿಗೆ ಮನಃಪೂರ್ವಕ ಸ್ವಾಗತವನ್ನೀಯುವೆವು.

ಡಾ। ಠಾಕೂರರಿಗೆ ಥೈಲಿಯಿಲ್ಲ!

ಮದ್ರಾಸಿಗೆ ಬಂದಿರುವ ಡಾ। ರವೀಂದ್ರನಾಥ ಠಾಕೂರರನ್ನು ಮಂಗಳೂರಿಗೆ ಆಮಂತ್ರಿಸುವ ಸೂಚನೆಯನ್ನು ನಮ್ಮ ಹಿಂದಣ ಸಂಚಿಕೆಯಲ್ಲಿ ಪ್ರಕಟಿಸಿದ್ದೆವು. ಅವರ ಆಗಮನವೆಂಬುದು ವೆಚ್ಚಕ್ಕೊಂದು ದಾರಿಯಾಗುವುದಾದರೂ, ನಮ್ಮ ನಗರಸಭೆಯವರು ಅವರನ್ನು ಸ್ವಾಗತೀಕರಿಸಿ 'ವಿಶ್ವಭಾರತಿ'ಗೆ ಕೊಡಿದಷ್ಟು ಸಹಾಯವನ್ನಾದರೂ ಮಾಡಬಹುದಿತ್ತು. ಅದಾಗದಾಯಿತು. ಮದ್ರಾಸಿನ 'ಠಾಕೂರ ಸಪ್ತಾಹ'ದವರು ನಮ್ಮ ನಗರಸಭೆಗೊಂದು ಪತ್ರ ಬರೆದು 'ಠಾಕೂರ ಥೈಲಿ'ಗೆ ಆರ್ಥಿಕ ಸಹಾಯವನ್ನು ಕೋರಿದರು. ಆದರೆ ಮುನಿಸಿಪಾಲಿಟಿಯು 'ಆರ್ಥಿಕ ಸಂಕಷ್ಟ'ವನ್ನೆದುರಿಟ್ಟು ಆ ಸಾಹಸವು ಕೂಡಾ [illegible]ದ ದುಃಸ್ಸಾಧ್ಯವೆಂದಿತು. ಹಳೆಯ ಕೌನ್ಸಿಲು ಹೊಸದಕ್ಕೆ ಸ್ಥಾನಕೊಡಲಿರುವ ಸಂದರ್ಭ ಸ್ಥಿತಿಯಲ್ಲಿ ಅಂತಹ ಏರ್ಪಾಡುಗಳು ಪ್ರಸ್ತುತವಾಗಲಾರವಾದರೂ, ನಮ್ಮ ಮುನಿಸಿಪಾಲಿಟಿಯು 'ಠಾಕೂರ ಸಪ್ತಾಹ'ದವರ ಅರಿಕೆಗೆ ಇನ್ನೂ ಸುಧಾರಿತ ನುಡಿಗಳಿಂದ ಉತ್ತರವೀಯಬಹುದಿದ್ದಿತು. ನಮ್ಮ ಕೌನ್ಸಿಲರರಲ್ಲಿ ಅನೇಕರಿಗೆ ಠಾಗೂರರನ್ನು ಇಲ್ಲಿಗೆ ಕರೆಯಲಿಚ್ಛೆಯಿರಬಹುದು; ಆದರೆ ಕಮಿಶನರರ ಮೇಲ್ಮೆಗೆ ಭೀತಿಗೊಂಡು ಹೀಗಾಯಿತೋ ಯಾರು ಬಲ್ಲ?

ಲೋಧ್ರ

ಸುಪ್ರಸಿದ್ಧವಾಗಿ ದಿವ್ಯ ಟಾನಿಕ್.
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮುಟ್ಟು, ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1–10–0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವ ಲೇಹ.
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮವೈದ್ಯಾಶ್ರಮ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

ಟಿಪ್ಪಣಿ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.
ಇವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ಸಹಿತ,
ಬೆಲೆ ಆಣೆ 8.
80, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕಿರ್ಲೋಸ್ಕರವು
ಗುಣ–ಬಾಳಿಕೆಗಳ ಸೂಚಕವು.



ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,—ಅದರ ಖರ್ಚು ಕಡಿಮೆಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ. ಶಾಸ್ತ್ರೀಯವಾಗಿಯೂ ಪೂರ್ಣ ತೃಪ್ತಿ ಕೊಡುವಂತೆಯೂ ಅವು ರಚಿಸಲ್ಪಟ್ಟಿವೆ.

ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯಿದೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,
ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:— ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಾತುಕುಟ್ಟಿ ವೈದ್ಯರ
ವಿಶೂಚಿಕಾ ಸಂಹಾರಿ
Vishuchika Samhari
(PILCO)
ಕಾಲರಕ್ಕೆ ದಿವ್ಯಾಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಪ್ಪಿ 1ಕ್ಕೆ ರೂ. 1–0–0.

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)
ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ಈ ತಗಲಿದ ರೋಗವು ಗುಣವಾಗುವುದು. ಸರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.
8 ಔನ್ಸಿನ ಬಾಟ್ಲಿ 1ಕ್ಕೆ ರೂ. 2—8–0.
ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಸೈಂಟಿಫಿಕ್
ಸ್ವರ್ಣಾಭರಣಗಳು
(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ)
ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.
ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.
ವಿಳಾಸ:-
The Scientific Gold Bangles Co., Ltd.,
Head Office:-43, Byragimatam Street,
Post Box No. 203, Madras.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ: ವಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ತೂಕವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವೇ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ ಡಿ. ಗೋಪಾಲಾಚಾರ್ಲುರವರ **ಜೀವಾಮೃತವು**

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. 306, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ಕಾಪಿ ಚಿಕ್ಕಪೇಟೆ ಬೆಂಗಳೂರು. (ಉಡುಪಿ ಹೋಟೆಲ್ ಹತ್ತಿರ)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ— ಬೈರವಾಸು— ಚೆಕ್ಸು— ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,
[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For— **A. & F. Harvey,**
Managers Madura Mills Co, Ltd.,

An Advertisement In
'Swadeshabhimani'
Means a sure fortune to you.
Ask for Contract Rates.
The Swadeshabhimani office,
Car Street, Mangalore.

---

preserve Your Wealth by BIRTH-CONTROL.
ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ಕೂಡಲೆ ಗರ್ಭವಾಗುವಂತೆ ಔಷಧವಿದೆ.
ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.
ವಿಳಾಸ:— ಪಂಡಿತ ಕೆ. ನಾರಾಯಣರಾವ್, ಆಯುರ್ವೇದ ಫಾರ್ಮಸಿ, ಕಾರ್ಕಳ, ದ. ಕ.
Branches—Kokkundoor & Kaikamba (Gurpoor) [illegible]
[N. B.— [illegible]

ಉಪನ್ಯಾಸಸಾಮ್ರಾಟರಾದ

ಪ್ರೇಮಚಂದಜೀಯವರು.

(ಲೇಖಕ—ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ ಮತ್ತು ಹಿಂದೀ ಪ್ರಚಾರಕ, ಕಾರ್ಕಳ.)

[ಹಿಂದೀ ಸಾಹಿತ್ಯವನ್ನರಿಯದ ಕನ್ನಡಿಗರಿಗೆ ಇತ್ತೀಚೆಗೆ, ಪ್ರೇಮಚಂದಜೀಯವರ ಕಥೆಗಳು, ಕನ್ನಡಕ್ಕೆ ಹೆಚ್ಚಾಗಿಯಾಗಿ ಓದಸಿಗುತ್ತಿವೆ, ಪ್ರೇಮಚಂದಜೀಯವರೆಂದರೆ ಯಾರೆಂದು ತಿಳಿದುಕೊಳ್ಳುವ ಕುತೂಹಲವು ಹಲವರಲ್ಲಿರಬಹುದು. ಈ ಲೇಖಕರು, ಸರಳವಾದ ನುಡಿಯಲ್ಲಿ, ಅವರ ಪರಿಚಯವನ್ನು ಮಾಡಿಕೊಡುವ ಪ್ರಯತ್ನ ಕೈಕೊಂಡಿರುವರು. ಸಂ. ಸ್ವ.]

ಹಿಂದಿಯಲ್ಲಿ ಉಪನ್ಯಾಸಗಳೆಂದರೆ ಕಾದಂಬರಿಗಳೆಂದರ್ಥ. ಪ್ರೇಮಚಂದಜೀ ಬಿ. ಎ. ಅವರು ಸುಪ್ರಸಿದ್ಧ ಹಿಂದೀ ಸಾಹಿತಿಗಳಾಗಿರುವರು. ಹಿಂದೀ ಸಾಹಿತ್ಯಕ್ಷೇತ್ರದಲ್ಲಿ ಅವರು ಪ್ರಾಮುಖ್ಯವಾದ ಉಚ್ಚಸ್ಥಾನವನ್ನಲಂಕರಿಸಿದ್ದಾರೆ. ಪ್ರೇಮಚಂದಜೀಯವರು ಕಾದಂಬರಿ ಲೇಖಕರಲ್ಲಿ ಶಿರೋಮಣಿ ಎಂಬಂತೆ ರಾರಾಜಿಸುತ್ತಿರುವರಷ್ಟೇ ಅಲ್ಲ; ಅವರು ಉತ್ತಮೋತ್ತಮ ಮೌಲಿಕ ಸಣ್ಣ ಕಥೆಗಳನ್ನೂ, ಜೀವನ ಚರಿತ್ರೆ ನಾಟಕಾದಿಗಳನ್ನೂ ಬರೆದು ಕೃತಾರ್ಥರಾಗಿದ್ದಾರೆ. ಆದರೂ ಅವರು ಅವರ ನಾನೂರಕ್ಕೂ ಮಿಕ್ಕಿದ ಸಣ್ಣ ಕತೆಗಳಿಂದಲೇ ಹೆಚ್ಚು ಪ್ರಸಿದ್ಧರಾಗಿದ್ದಾರೆ. ಅವರ ಪ್ರೇಮ ಚತುರ್ಥಿ, ಪ್ರೇಮ ಪಂಚಮಿ, ಸಪ್ತ ಸರೋಜ್, ಪ್ರೇಮ ಪೂರ್ಣಿಮಾ, ಪ್ರೇಮಪಚ್ಚೀಸಿ ಮೊದಲಾದ ಕಥಾಸಂಗ್ರಹಗಳನ್ನು ಓದದ ಹಿಂದೀ ಭಾಷಾಪ್ರೇಮಿಯೇ ಇಲ್ಲ. ಇವುಗಳೂ ಮತ್ತು ಮಹಾಶೇಖಸಾದಿ, ಪ್ರೇಮಾಶ್ರಮ, ಸಂಗ್ರಾಮ ಮೊದಲಾದ ಜೀವನಚರಿತ್ರೆ, ಕಾದಂಬರಿ ನಾಟಕಾದಿಗಳೂ ಹಿಂದೀ ಸಾಹಿತ್ಯ ಪರಿಷತ್ತುಗಳಲ್ಲಿ ವಿಶೇಷ ಮನ್ನಣೆಗೆ ಪಾತ್ರವಾಗಿ, ಅವು ಹಿಂದೀ ಸಾಹಿತ್ಯ ಪರಿಷತ್ಪರೀಕ್ಷೆಗಳಿಗೂ ಇನ್ನಿತರ ಪರೀಕ್ಷೆಗಳಿಗೂ ಪಠ್ಯಪುಸ್ತಕಗಳಾಗಿ ನಿಯುಕ್ತವಾಗಿರುವುವು. ಇಂದ ಮೇಲೆ ಅವರ ಕೃತಿಗಳನ್ನು ನಾವು ಹೊಗಳ ಬೇಕಾಗಿಲ್ಲವಷ್ಟೇಸಿದೇ? ಪ್ರೇಮಚಂದಜೀಯವರ ಗ್ರಂಥರತ್ನಗಳು ದೇಶ ವಿದೇಶಗಳಿಂದಲೂ ಅವರಿಗೆ ಶಾಶ್ವತವಾದ ಸತ್ಕೀರ್ತಿಯನ್ನು ತಂದುಕೊಟ್ಟಿವೆ ಅಂದರೆ ಅಷ್ಟೇ ಸಾಕು.

ಕರ್ನಾಟಕದ ಸಾಮಯಿಕ ಪತ್ರಪತ್ರಿಕೆಗಳನ್ನು ಅನುಶೀಲನ ಮಾಡುತ್ತಿದ್ದರೆ, ನಮ್ಮ ಪ್ರಾಂತದಲ್ಲಿ ರಾಷ್ಟ್ರಭಾಷೆಯ ಪ್ರಚಾರವಾಗ ತೊಡಗಿದಂದಿನಿಂದ, ನಾಡಿನ ಒಂದಲ್ಲೊಂದು ಪತ್ರ ಅಥವಾ ಪತ್ರಿಕೆಯಲ್ಲಿ ಒಂದಲ್ಲೊಂದು ಪುಟದಲ್ಲಿ ಹಿಂದೀ ಕಥಾದಿಗಳ ಭಾಷಾಂತರವೋ ರೂಪಾಂತರವೋ ಕರ್ನಾಟಕದ ಲೇಖಕರ ಹೆಸರುಗಳಿಂದ ಪ್ರಕಟವಾಗುವುದು ತೋರಿ ಬಾರದೆ ಇಲ್ಲ. ಲೇಖಕರಲ್ಲಿ ಹೆಚ್ಚಿನವರು ಮೂಲದ ನಾಮನಿರ್ದೇಶ ಮಾಡುತ್ತಲಿರುವರಾದರೂ, ನಾಮನಿರ್ದೇಶವಾಗದೆ ಹಿಂದೀ ಲೇಖಾದಿಗಳ ಅನುವಾದವು ಅಲ್ಲಲ್ಲಿ ಅಚ್ಚಾಗದೆ ಇಲ್ಲ. ಹೇಗೂ ಇರಲಿ. ರಾಷ್ಟ್ರಭಾಷೆಯ ಪ್ರಚಾರವು ಅಧಿಕಾಧಿಕವಾಗಿ ಆಗುತ್ತ ಹೋದಂತೆ ಈ ಉಭಯ ಭಾಷೆಗಳಲ್ಲಿ ಪರಿವರ್ತನಾದಿಗಳು ಆಗುವುದು ಸ್ವಾಭಾವಿಕವೆನ್ನೋಣ. ಅಲ್ಲ, ಆಗಲೇಬೇಕು. ಹಾಗಾದಲ್ಲಿ ಮಾತ್ರ ಏತದ್ದೇಶೀಯ ಭಿನ್ನ ಭಿನ್ನಭಾಷೆಗಳಲ್ಲಿ ವಿಚಾರ ವಿನಿಮಯದ ಮೂಲಕ ಸೌಹಾರ್ದಭಾವವು ಹೆಚ್ಚಲಿಕ್ಕೆ ಸಾಧ್ಯವಿದೆ.

ಈಗ ಕನ್ನಡ ಭಾಷೆಯಲ್ಲಿ ಪ್ರಕಟವಾಗುತ್ತಲಿರುವ ಹಿಂದೀ ಕಥೆಗಳಲ್ಲಿ ಹೆಚ್ಚಿನವುಗಳು ಪ್ರೇಮಚಂದಜಿಯವರಿಂದ ಬರೆಯಲ್ಪಟ್ಟವುಗಳಾಗಿವೆ. ಬಂಗಾಳಿ ಭಾಷೆಯಿಂದ ಬಂಕಿಂ ಚಂದ್ರನ ಕಾದಂಬರಿಗಳ ಅನುವಾದವೇ ಕನ್ನಡದಲ್ಲಿ ಬಹುಮಟ್ಟಿಗೆ ಆಗಿರುವಾಗ, ಹಿಂದೀ ಭಾಷೆಯಲ್ಲಿ ಸಿದ್ಧ ಬಂಕಿಂ ಚಂದ್ರರ ಸ್ಥಾನವನ್ನೆ ಅಲಂಕರಿಸಿರುವ ಪ್ರೇಮಚಂದ್ರರ ಕಥೆಗಳು ಕನ್ನಡಕ್ಕೆ ಸಹಜವಾಗಿ ಪರಿವರ್ತನವಾಗಬೇಕಾದವುಗಳೇ. ಇದನ್ನರಿತುಕೊಂಡೇ ಕೆಲವು ಲೇಖಕರು ಅವರ ಒಂದೇ ಕಥೆಯನ್ನು ತಮತಮಗೆ ಬೇಕಾದಂತೆ ಅನುವಾದಿಸಿ ಬೇರೆ ಬೇರೆ ಕನ್ನಡ ಪತ್ರಿಕೆಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಪ್ರಕಟಿಸಿ ಶ್ಲಾಘನೆಗೆ ಪಾತ್ರರಾಗಿದ್ದಾರೆ. ಹೀಗಿರುವಾಗ ಪ್ರೇಮಚಂದ್ರರ ಮತ್ತು ಅವರ ಕೃತಿಗಳಲ್ಲಿ ವಿಶೇಷತೆಯಾದರೂ ಏನೆಂದು ತಿಳಕೊಳ್ಳುವ ಲಾಲಸೆಯು ಕನ್ನಡನಾಡಿನ ಪತ್ರ-ಪತ್ರಿಕೆಗಳ ವಾಚಕರಿಗುಂಟಾದರೆ ಆಶ್ಚರ್ಯಪಡಲಿಕ್ಕೇನೂ ಇರುವುದಿಲ್ಲ.

ಪ್ರೇಮಚಂದ್ರರ ವ್ಯಕ್ತರೂಪ ಮತ್ತು ಅವರ ಕೃತಿಗಳಿಂದಾಗಿ ಹಿಂದೀ ಸಾಹಿತ್ಯ ಕ್ಷೇತ್ರದಲ್ಲಿ ಸಮಾಲೋಚಕರೊಳಗೆ ದೊಡ್ಡದೊಂದು ಸಾಹಿತ್ಯಸಂಗ್ರಾಮವೇ ಪ್ರತ್ಯಕ್ಷ ನಡೆಯುತ್ತಲಿದೆ. ಕೆಲವರು ಪ್ರೇಮಚಂದ್ರರನ್ನು 'ಏಕತಾಭಾವದ ಪ್ರಚಾರಕ'ರೆನ್ನುತ್ತಾರೆ. ಮತ್ತೆ ಕೆಲವರು ಅವರು ಬೀಭತ್ಸ ಭಾವದ ದೂತರೆನ್ನುತ್ತಾರೆ. ಪ್ರೇಮಚಂದ್ರರು ಉಪನ್ಯಾಸ (ಕಾದಂಬರಿ) ಸಾಮ್ರಾಟರಾಗಿರುವರೆಂದು ಹೇಳುವವರು ಕೆಲವರು. ಅವರಿಗೆ ಕಾದಂಬರಿಗಳನ್ನು ಬರೆಯಲಿಕ್ಕೇನೇ ಬರುವುದಿಲ್ಲೆಂದು ಇನ್ನು ಕೆಲವರ ಅಂಬೋಣ. ಒಬ್ಬರು ಪ್ರೇಮಚಂದ್ರರನ್ನು ಸಾಹಿತ್ಯದ ಅರಸನಾಗಿ ಮಾಡಲು ಇಚ್ಛಿಸುವರಾದರೆ ಇನ್ನೊಬ್ಬರು ಅವರ ಗ್ರಂಥಗಳನ್ನು ಕಸದ ಬುಟ್ಟಿಯಲ್ಲಿ ಚೆಲ್ಲಿಬಿಡಲಿಕ್ಕೂ ಹೇಸುವುದಿಲ್ಲ.

ಇಂಥ ಪರಸ್ಪರ ವಿರುದ್ಧಭಾವನೆಗಳು, ಅವರ ಕೆಲವೇ ಕೃತಿಗಳನ್ನು ಓದಿದ ಕರ್ನಾಟಕದ ಸಮಾಲೋಚಕರಲ್ಲಿಯೂ ಹುಟ್ಟಬಹುದು. ದಿಲ್ಲಿಯ 'ಅರ್ಜುನ' ಪತ್ರಿಕೆಯಲ್ಲಿ ಹಿಂದೀ ಲೇಖಕರೊಬ್ಬರು ಪ್ರೇಮಚಂದ್ರರ ಕುರಿತು ಬರೆದ ಮಾತುಗಳಿಂದಲೇ ಅವರ ಹಾಗೂ, ಅವರ ಕೃತಿಗಳ ಪರಿಚಯ ಮಾಡಿಕೊಟ್ಟು, ಆ ಸಂಬಂಧ ಉಂಟಾಗಬಹುದಾದ ಭ್ರಮನಿರಸನ ಮಾಡಲಿಚ್ಛಿಸುವೆವು. ಉಪರೋಕ್ತ ಲೇಖಕರು ಬರೆದ ಮಾತುಗಳು ಅಧಿಕ ಪ್ರಾಮಾಣಿಕವಾಗಬಲ್ಲುವೆಂದು ನಮ್ಮ ವಿಶ್ವಾಸ. ಈ ಪರಿಚಯದ ಮೂಲಕ ಮನೋರಂಜನದೊಂದಿಗೆ ವಾಚಕರಿಗೆ ಕೊಂಚವಾದರೂ ಲಾಭವುಂಟಾದರೆ ನಮ್ಮ ಪರಿಶ್ರಮವು ಸಫಲವಾಗುವುದು.

'ಪ್ರೇಮಚಂದ್ರರ ಕುರಿತಾದ ನಾನಾ ಪ್ರಕಾರದ ಭಿನ್ನಾಭಿಪ್ರಾಯಗಳನ್ನು ಓದಿದ ಒಬ್ಬ ಸಾಧಾರಣ ವ್ಯಕ್ತಿಯು ಭ್ರಮಜಾಲದಲ್ಲಿ ಸಿಕ್ಕಿಬಿಡುತ್ತಾನೆ; ಈ ಸಮಾಲೋಚಕರ ದೃಷ್ಟಿಯಿಂದ ಪ್ರೇಮಚಂದ್ರರು ದೇವ-ದಾನವರಲ್ಲಿ ಯಾವ ಕೋಟಿಗೆ ಸೇರಿದವರೆಂದು ಅವನಿಗೆ ಹೇಳಲಿಕ್ಕೇ ಬರುವುದಿಲ್ಲ. ಆದರೆ ಅವನಲ್ಲಿ ಈ ಭ್ರಮೆಯು ದೀರ್ಘಕಾಲದ ತನಕ ಉಳಿಯುವುದಿಲ್ಲ. ಪ್ರೇಮಚಂದ್ರರನ್ನು ಕಣ್ಣಾರೆಕಂಡು ನನ್ನದೇ ಆದ ಒಂದು ಅಭಿಪ್ರಾಯ ಮಾಡಿಕೊಳ್ಳುವೆನೆಂದು ಅವನು ಮನಸ್ಸಿನೊಳಗೇನೇ ನಿಶ್ಚಯಿಸುತ್ತಾನೆ. ಆ ಜಿಜ್ಞಾಸುವು ಪ್ರೇಮಚಂದ್ರರ ದರ್ಶನಕ್ಕೆ ಹೋಗುತ್ತಾನೆ.

ಪ್ರೇಮಚಂದ್ರರನ್ನು ಕುರಿತು ನಾನಾ ಬಗೆಯ ಚಿತ್ರಗಳನ್ನು ಬರೆದಿಟ್ಟುಕೊಂಡಿದ್ದ ಆ ಜಿಜ್ಞಾಸುವು ಪ್ರೇಮಚಂದ್ರರ ಮನೆಬಾಗಿಲನ್ನು ಮುಟ್ಟಿದನೆನ್ನಿ. ಪ್ರೇಮಚಂದ್ರರು ಉಪನ್ಯಾಸ (ಕಾದಂಬರಿ) ಸಾಮ್ರಾಟರಾಗಿದ್ದರಿಂದ ಅವರ ಮನೆಯ ಮುಂದೆ ಒಂದು ಹೂದೋಟವಿದ್ದಿರಬಹುದು, ಸಾಹಿತಿಗಳ ಮನೆಯಂತೆ ಅದು ಸುಂದರವಾಗಿದ್ದಿರಬಹುದು, ಪ್ರೇಮಚಂದ್ರರ ಮುಂದೆ ಅಂಜಲೀಬದ್ಧನಾಗಿ ಸಂಚಾರಕನು ನಿಂತುಕೊಂಡಿರಬಹುದು, ಅವರು ಸುಂದರವಾದ ರೇಶ್ಮೆ ವಸ್ತ್ರಗಳಿಂದಲಂಕೃತರಾಗಿರಬಹುದು, ಉಭಯಬಾಹು ಮೂಲ ಪ್ರದೇಶಗಳಲ್ಲಿ ಕೇಶಗುಚ್ಛಗಳು ಹಾರಾಡುತ್ತಲಿರಬಹುದು, ಮಸ್ತಕದಲ್ಲಿ ಸುಗಂಧಪೂರಿತವಾದ ತೈಲವು ಲೇಪಿತವಾಗಿರಬಹುದು, ಅವರು ಕೋಮಲಶಯ್ಯೆಯ ಮೇಲೆ ಆಸೀನರಾಗಿ ತಾಂಬೂಲವನ್ನು ಜಗಿಯುತ್ತಿರಬಹುದು, ಹೀಗಲ್ಲವಾದರೆ ಕೆಲವು ಸಮಾಲೋಚಕರೆನ್ನುವಂತೆ—'ನೀನು ಬ್ರಾಹ್ಮಣನಲ್ಲವಷ್ಟೆ?' ಎಂದು ಪ್ರಶ್ನಿಸುವ ಆಳು ದ್ವಾರದಲ್ಲಿ ನಿಂತು ಪಹರೆ ಮಾಡುತ್ತಿರಬಹುದು, 'ತಾನು ಬ್ರಾಹ್ಮಣ'ನೆಂದೊಡನೆ ಆ ಪಹರೆಯು ಗಧಾಪ್ರಹಾರ ಮಾಡುತ್ತಿರಬಹುದು, ಒಳಗೆ ಪ್ರವೇಶಿಸುತ್ತಲೇ, ಕ್ರೋಧಾಗ್ನಿಯಿಂದ ಕೆಂಪೇರಿದ ಕಣ್ಣುಗಳುಳ್ಳ, ಕಠಿಣವಾಗಿ ಮಾತಾಡುವವರೊಬ್ಬರನ್ನು ತಾನು ನೋಡಬಹುದು, ಎಂದು ಮೊದಲಾಗಿ ಆಲೋಚಿಸುತ್ತ ಹೋದ ಆ ಜಿಜ್ಞಾಸುವು ಅಲ್ಲಿ ಹೋಗಿ ಕಾಣುವುದೇನನ್ನು? ಕಣ್ಣ ಮುಂದೆ ಒಂದು ಸರ್ವಸಾಮಾನ್ಯ ಮನೆ. ಒಳಗಿಂದ ಮಾತನಾಡುವ ಸದ್ದಿಲ್ಲ. 'ಒಳಗೆ ಯಾರಿರುವರಪ್ಪಾ!' ಎಂದು ಕೂಗಿ ಕೇಳಿದಾಗಲೇ 'ಬನ್ನಿ ಸ್ವಾಮಿ' ಎಂದು ಪ್ರತ್ಯುತ್ತರ ದೊರೆಯುವುದು; ಅಲ್ಲಿ 'ಅಪ್ಪಾ! ನಮಗೆ ಪ್ರೇಮಚಂದ್ರರೊಡನೆ ಸ್ವಲ್ಪ ಕಾರ್ಯವಿದೆ. ಅವರೆಲ್ಲಿರಬಹುದು?' ಎಂದು ಮುಂದೆ ನಿಂತ ಸಜ್ಜನರೊಡನೆ ಜಿಜ್ಞಾಸುವು ಕೇಳುವನು. ಆ ಸಜ್ಜನರ ತಲೆಕೂದಲುಗಳೋ ಎಣ್ಣೆ ಹಚ್ಚಿ ಕೋಮಲವಾದವುಗಳಲ್ಲ; ಬಹು ಬಿರುಸು, ಬಹು ಉದ್ದ; ಮುಖಚರ್ಯೆಯೊ, ಸಾಹಿತಿಗಳದ್ದಲ್ಲ ಗುಮಾಸ್ತರದು; ನೀಳವಾದ ಮೀಸೆಗಳು ಮುಖದ ಕಾಂತಿಯನ್ನು ಬಹುಮಟ್ಟಿಗೆ ತಗ್ಗಿಸಿಬಿಟ್ಟಿವೆ. ಸಾಹಿತಿಗಳಿಗೆ ಶೋಭಿಸದ ಸಾಮಾನ್ಯ ಬಟ್ಟೆಗಳನ್ನೇ ಅವರು ಉಟ್ಟುಕೊಂಡಿದ್ದಾರೆ.

[ಸಶೇಷ]

ಕೈಗಾರಿಕೆಗಳ ಕೇಂದ್ರ—ಜಾಪಾನು.

ದಯಾಳು ಸರಕಾರದ ಸಹಾಯದಿಂದ ಕೇವಲ ಐವತ್ತು ವರ್ಷಗಳಲ್ಲಿ ಜಾಪಾನು, ಶೋಧಕರ, ಕೈಗಾರಿಕೆಗಳ—ಕೇಂದ್ರವಾಗಿ ನಿಂತು, ತಲೆಯೆತ್ತಿ, ಪ್ರಪಂಚವನ್ನೆಲ್ಲ ಗೌರವದಿಂದ ನೋಡುತ್ತಿದೆ. 'ಇನ್ವೆನ್ಶನ್ ವೀಕ್' ಎಂಬ ಹೆಸರಿನ ಸಪ್ತಾಹವೊಂದು ಕಳೆದ ತಿಂಗಳಲ್ಲಿ, ಜಾಪಾನು ಸಾಮ್ರಾಜ್ಯದಲ್ಲೆಲ್ಲ ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು. ಸಾಮಾನುಗಳನ್ನು 'ಪೇಟೆಂಟ್' ಮಾಡಿಸುವ ಪದ್ಧತಿಯು ಜ್ಯಾರಿಗೆ ತರಲ್ಪಟ್ಟು, ೫೦ ವರ್ಷಗಳಾದುವು. ಇದರ ಅರ್ಧ ಸಾಂವತ್ಸರಿಕೋತ್ಸವವೂ ಜರಗಿಸಲ್ಪಟ್ಟಿತು. ಕಳೆದ ವರ್ಷ ೧೩೯೦೦ ಬಗೆಯ ಸಾಮಾನುಗಳನ್ನು ಪೇಟೆಂಟ್ ಮಾಡಿಸಲು ಅರ್ಜಿಗಳಿದ್ದುವು; ಇವು ಮೊದಲನೆ (೧೮೮೫) ವರ್ಷಕ್ಕಿಂತ ೧೭ ಪಾಲು ಹೆಚ್ಚು! ಮಂಜೂರಾದ ಪೇಟೆಂಟ್‌ಗಳು ೫೫೦೦ ಅಂದರೆ ಮೊದಲನೆ ವರ್ಷಕ್ಕಿಂತ ೫೦ ಪಾಲು ಹೆಚ್ಚು. ಹೊಸ ಹೊಸ ವಸ್ತುಗಳನ್ನು ಸಿದ್ಧಗೊಳಿಸುವ ಜಾಪಾನಿನ ಪ್ರಾಜ್ಞತೆಯು ಎಂತಹದೆಂಬುದು ಮೇಲಿನ ಉದಾಹರಣೆಯಿಂದ ಕಲ್ಪನೆಯಾಗುವುದು.

ಪೇಟೆಂಟ್‌ಗಳ ರಿಜಿಸ್ಟ್ರೇಶನಿನಲ್ಲಿ ಜಾಪಾನು ಪ್ರಪಂಚದಲ್ಲಿ ಜರ್ಮನಿ, ಫ್ರಾನ್ಸು, ಗ್ರೇಟ್ ಬ್ರಿಟನ್ ಮತ್ತು ಸಂಯುಕ್ತ ಪ್ರಾಂತ್ಯಗಳ ನಂತರ ಐದನೇ ಸ್ಥಾನ ಪಡೆಯುತ್ತಿದೆ. ಹೀಗೆ, ಅದು ಪ್ರಪಂಚದ ಕೈಗಾರಿಕೆಗಳ ನೂತನ ಶೋಧಗಳಲ್ಲಿ ಗಣನೀಯ ಸ್ಥಾನವನ್ನು ಸಂಪಾದಿಸಿದೆ. ಜಾಪಾನಿನ ಕೈಗಾರಿಕೆಗಳ ಸಂಚಾಲಕರ ಮಾನಸಿಕ ಯೋಗ್ಯತೆಗಳೂ ಅಂಥವು.

ಹಳೇ ಜಾಪಾನಿನ ಚಿತ್ರವೇನು? ಭಯಾನಕವಾದುದು. ತನ್ನವನೇ ಆದೊಬ್ಬ ಅರಸನಿದ್ದು ಗುಲಾಮನಂತಿದ್ದವರು ಜಾಪಾನೀಯರು. ವಿದೇಶಗಳೇ ಅವರ ನಿತ್ಯೋಪಯೋಗದ ಹಾಗೂ ಇತರ ಸಾಮಾನುಗಳನ್ನೊದಗಿಸಬೇಕಾಗಿತ್ತು. ಆದರೆ, ಕೈಗಾರಿಕೆಗಳ ವಿಷಯಕ ಸ್ವಾತಂತ್ರ್ಯವು ದೊರೆಯುತ್ತಲೆ ಜಾಪಾನಿನಲ್ಲಿ ಆಕಸ್ಮಿಕವಾದ ಉತ್ಸಾಹವೂ ಹುರುಪೂ ಕಂಡುಬಂತು. ಪಾಶ್ಚಾತ್ಯ ನಾಗರೀಕತೆಯ ಗುಟುಕನ್ನು ಕುಡಿಯಿತು ಜಾಪಾನು! ವಿದೇಶೀಯರು ಜಾಪಾನಿನ ಕೆಲಸವನ್ನು ನೋಡಿ ನಕ್ಕರು—'ಜಾಪಾನು ಮಾಡುವುದೆಲ್ಲ ಕೃತ್ರಿಮ; ಪಾಶ್ಚಾತ್ಯರ ನಕಲು!' ಎಂದು. ಆದರೆ, ಆ ಭಾವನೆಯು ಅಲ್ಪಕಾಲದಲ್ಲಿ ಬದಲಾಗುವುದಾಯಿತು. ಕಾಲಕ್ರಮೇಣ, ಮಹಾ ಯುದ್ಧದ ಕಾಲದಿಂದೀಚೆ, ಜಾಪಾನು, ತನ್ನಲ್ಲಿಯೂ ಅಸಾಮಾನ್ಯ ಶೋಧನ ಮತ್ತು ಸೃಷ್ಟನೆಯ ಜ್ಞಾನ ಭಾಂಡಾಗಾರವಿದೆ ಎಂಬುದನ್ನು ತಿಳಿಸಿತು. ಈಗ,—

ನಿಃಶಸ್ತ್ರೀಯದಲ್ಲಿ—ಜಾಪಾನು.
ಕೈಗಾರಿಕೆಯಲ್ಲಿ—ಜಾಪಾನು.
ವ್ಯಾಪಾರದಲ್ಲಿ—ಜಾಪಾನು.
ಶಸ್ತ್ರಾಸ್ತ್ರ ಸಿದ್ಧತೆಯಲ್ಲಿ—ಜಾಪಾನು.
ನಾಣ್ಯ ವಿನಿಮಯದ ಚಾತುರ್ಯದಲ್ಲಿ—ಜಾಪಾನು.
ಸ್ಪರ್ಧೆಯಲ್ಲಿ-ದರಗಳಲ್ಲಿ—ಜಾಪಾನು.

ಎಲ್ಲೆಲ್ಲಿಯೂ ಜಾಪಾನಿನ ಗಾನ! ಪ್ರಪಂಚದ ವಾಣಿಜ್ಯ ಕೇಂದ್ರಗಳು ಜಾಪಾನ್ ಸರಕುಗಳಿಂದಲಂಕೃತವಾಗಿ, ಝಂಕರಿಸುತ್ತಿವೆ. ಪಾಶ್ಚಾತ್ಯ ಕೈಗಾರಿಕೆ ಕೇಂದ್ರಗಳು ಜಾಪಾನು ಮಾಡುವ 'ಹಾವಳಿ'ಯನ್ನು ನೋಡಿ ಕಂಗಾಲಾಗಿವೆ.

ಅತ್ಯಲ್ಪ ವೆಚ್ಚಗಳಲ್ಲಿ, ಅತಿ ಹೆಚ್ಚಿನ ಆದಾಯನ್ನು ಸಿದ್ಧಗೊಳಿಸುವಂಥ, ಬಹು ಸುಲಭ ಮಾರ್ಗಗಳನ್ನು ಜಾಪಾನು ಕಂಡು, ಬ್ರಿಟಿಷರನ್ನು ಬೆರಗುಗೊಳಿಸಿದೆ.

ಕೈಗಾರಿಕೆಗಳಿಗೂ ಪರಿಶೋಧಕರಿಗೂ ಉತ್ತೇಜನ ಕೊಡಲು ಜಾಪಾನ್ ಸರಕಾರವು ಪ್ರತಿ ವರ್ಷ ಧನಸಹಾಯ ಮಾಡುತ್ತಿದೆ.

೫೦೦ ವಿವಿಧ ಮತ-ಧರ್ಮಗಳು:

ಇಂತಹ ಜಾಪಾನಿನಲ್ಲಿ ಇಂದು, ಐನೂರಕ್ಕೆ ಕಡಿಮೆಯಿಲ್ಲದೆ ಮತ-ಧರ್ಮಗಳು ಪ್ರಚಾರದಲ್ಲಿವೆಯೆಂದರೆ, ಕೇಳಿ,—ಯಾರಿಗಾದರೂ ಆಶ್ಚರ್ಯವಾಗಬಹುದು. ಹಲವು ಧರ್ಮಗಳು—ಹಲವು ಕಟ್ಟಳೆಗಳು—ಇರುವಂತಹ ದೇಶದ ಪ್ರಗತಿಯು ಸುಲಭ ಸಾಧ್ಯವಲ್ಲವೆಂದು ವಾದಿಸುವ ಒಂದು ತಂಡವಿದೆ. ಅದಕ್ಕೆ ಉತ್ತರವಾಗಿಯೋ ಎಂಬಂತೆ ಜಾಪಾನಿನಲ್ಲಿಂದು ಐನೂರು ಮತ-ಧರ್ಮಗಳು ಇವೆ! ಆದರೂ ಹಿಂದೂದೇಶವನ್ನು ಜಾಪಾನಿಗೆ ತುಲನೆ ಮಾಡಿ ನೋಡಿ. ಹಿಂದೂದೇಶದಲ್ಲಿಯೂ ಮತ-ಧರ್ಮಗಳಿಗೆ ಕೊರತೆಯಿಲ್ಲ. ಕೈಗಾರಿಕೆಯ ಪ್ರಗತಿಯೆಂಬುದು ಮಾತ್ರ ಇಲ್ಲಿ ಹಾಸ್ಯದ ಮಾತಾಗಿ ಉಳಿದಿದೆ. 'ಪ್ರಗತಿ'ಯೆಂಬುದಂತಿರಲಿ; 'ಕೈಗಾರಿಕೆ'ಯೆಂದು ಕರೆವಷ್ಟರ ಮಟ್ಟಿಗೆ ಹಿಂದೂದೇಶದಲ್ಲಿ ಇರುವುದೇನು? ಟಾಟಾ ಅಥವಾ ಭದ್ರಾವತಿ ಕಬ್ಬಿಣದ ಕಾರ್ಖಾನೆಗಳೇ? ಬೊಂಬಾಯಿ-ಅಹಮ್ಮದಾಬಾದುಗಳ ಗಿರಣಿಗಳೇ?

ಹೊಸ ಹೊಸ ಮತಗಳು ಜಾಪಾನಿನಲ್ಲಿ ತಲೆಯೆತ್ತುತ್ತಿರುವ ಭರವನ್ನು, ಅಲ್ಲಿಯ 'ಬ್ಯೂರೋ ಆಫ್ ರಿಲಿಜನ್ಸ್'ನವರು, ವಾರಕ್ಕೊಂದರಂತೆ ಇರುವುದೆಂದು ಲೆಕ್ಕಹಾಕಿರುವರು. ದೇಶವು ಪ್ರಗತಿ ಹೊಂದುತ್ತಿರುವಷ್ಟಕ್ಕೆ, ಇದ್ದ ಮತ-ಧರ್ಮಗಳು ಅಪೂರ್ಣವೆಂದೋ ಏನೋ!—ಅವು ಸಾಕಾಗದೆ ಹೊಸ ಮತಗಳುಂಟಾಗುತ್ತಿರುವುವು. ಯುದ್ಧದಿಂದ ವಿಜಯಿಗಳಾಗಿ ಮರಳಿದ ವೀರರನ್ನು—'ನೀವು ನಮ್ಮ ಮತದ ದೇವತಾಶಕ್ತಿಯಿಂದ ಉಳಿದುಬಂದಿರಿ' ಎಂದು ಹೇಳಿ, ಅವರನ್ನು ಒಂದಲ್ಲ ಒಂದು ಮತದವರು ನಂಬಿಸಿ, ತಮ್ಮ ಕೂಟಕ್ಕೆ ಸೇರಿಸಿಕೊಳ್ಳುವುದಿದೆ."

FRESH CONSIGNMENT ARRIVED.

UNEQUAL QUALITY—————EXCEPTIONAL PRICE.

A TIRE THAT SAVES YOU REPUTATION AND MONEY.



The Canara Public Conveyance Co., Ltd.

MANGALORE.

ಗಾನ

(ಪ್ರಬಂಧಮಾಲೆ)

ಲೇಖಕರು — ಶ್ರೀ| ಶಿವರಾಮು ಕಾರಂತ

ಅಧ್ಯಾಯ ೧೯.

ಸಿನಿಮಾ ಇಲ್ಲವೆ ಚಲಚ್ಚಿತ್ರ

ಒಂದು ಚಿತ್ರ, ಒಂದು ಗೊಂಬೆ, ಒಂದು ಹಾಡು ಇವೆಲ್ಲ ಒಬ್ಬೊಬ್ಬ ಕಲಾವಿದನ ಸೃಷ್ಟಿಯಾದರೆ—ಹತ್ತೆಂಟು ಮಂದಿ ಕೂಡಿ ತಮ್ಮ ಸ್ಫೂರ್ತಿಯನ್ನೂ, ಪ್ರತಿಭೆಯನ್ನೂ ಕೆಡೆದು ಬಿಟ್ಟಲ್ಲಿ ಅದಕ್ಕೆ ಯಾವ ರೂಪ ಬರಬೇಕು? ಇದು ಅಸಾಧ್ಯದ ಮಾತಲ್ಲ ಎಲ್ಲರಿಗೂ ಒಂದೆ ಅಳತೆಯಲ್ಲಿ ಸ್ಫೂರ್ತಿ ಇತ್ಯಾದಿಗಳು ಉಂಟಾಗದೆ ಹೋದರೂ, ಒಂದೇ ವಿಷಯದಲ್ಲಿ ಉಂಟಾಗಬಹುದಷ್ಟೆ ಈ ರೀತಿಯ ಕಲಾಸೃಷ್ಟಿಗೆ—ನಾಟಕ, ಸಿನಿಮಾಗಳು—ಅನುಕೂಲವಾದುವು ನಾಟಕವು ಸಾಮಾನ್ಯವಾಗಿ 10—20 ಜನರ ಸ್ಫೂರ್ತಿಯನ್ನು ತುಂಬಿಸಿಕೊಳ್ಳಬಲ್ಲ ಪಾತ್ರೆ ಆದರೆ ಸಿನಿಮಾಕ್ಕೆ 10,000 ಜನರೂ ಕಡಿಮೆಯೆನಿಸಬಹುದು ಇಷ್ಟೆಲ್ಲ ಜನರು ಒಂದೇ ಮನಸ್ಸಿನವರಾದರೂ, ಸಮಯಕ್ಕೆ ಸರಿಯಾಗಿ ಒಂದು ಹಾದಿಯಲ್ಲಿ ಹೋಗುವಂತೆ—ಕಂಡಕ್ಟರ್, ಡೈರೆಕ್ಟರ್—ಎಂಬ ಜನರನ್ನು ಉಪಯೋಗಿಸಿಕೊಳ್ಳುತ್ತಾರೆ ಉಳಿದವರು ಇವರು ಹೇಳಿದಂತೆ, ಇಲ್ಲವಾದರೆ ಹೇಳದಂತೆ- ಕೇಳಿ ವರ್ತಿಸುತ್ತಾರೆ ಇದರಿಂದ ಒಂದು ಕಲಾವಿಶ್ವವನ್ನೇ ಸೃಷ್ಟಿಸಬಹುದು

ಈಗ ನಾವು ನಾಟಕ ಮತ್ತು ಸಿನಿಮಾ (ಸಿನೇಮಾದ ಶಬ್ದವ)ಗಳ ವಿಚಾರಮಾಡುವ ಈ ಮೊದಲು ಅವುಗಳ ಮುಖ್ಯ ಭೇದವು—ಒಂದು ಮಾತನಾಡುವುದು, ಇನ್ನೊಂದು ಮೂಕ ಎಂಬುದರಲ್ಲಿತ್ತು ಈಗ ಈ ಸಿನಿಮಾಗಳು ಮಾತಾಡತೊಡಗಿವೆಯಾದುದರಿಂದ ಇನ್ನು ಸೂಕ್ಷ್ಮಭೇದವನ್ನು ನಾವು ಸೂಚಿಸುವುದವಶ್ಯ ಅವುಗಳ ಮುಖ್ಯ ವ್ಯತ್ಯಾಸವಿಷ್ಟು

ನಾಟಕಕ್ಕೆ—6 ತಾಸು ಹಿಡಿದರೆ ನಾಟಕಕ್ಕೆ 20 ಜನರು ಸಾಕಾದರೆ	ಸಿನೇಮಾಕ್ಕೆ—2—9 ತಾಸು ಸಾಕು, 2000—3000 ಜನರು ಸಾಕು.
ನಾಟಕದ ಜನರು, ತಮಗೆ ತಿಳಿದುದನ್ನು ಹೇಳಿದರೆ	ಸಿನಿಮಾದವರು ತಿಳಿಯದ್ದನ್ನು ಹೇಳುತ್ತಾರೆ
ನಾಟಕದಲ್ಲಿ ಹಾಡುವವರು ಮಾತಾಡುವವರು—ನಟರು	ಇಲ್ಲಿ—ನಟರ ಪಾತ್ರಗಳು ಆ ಕೆಲಸವನ್ನು ಮಾಡುತ್ತವೆ
ನಾಟಕದ ನಟರು ಗಂಡಸರು	ಸಿನೆಮಾದಲ್ಲಿ ಯಾರೂ ಕೆಲಸವನ್ನು ಮಾಡಬಹುದು
ನಾಟಕವನ್ನು ಗುಟ್ಟಾಗಿ ಕಲೆತು ಬಹಿರಂಗವಾಗಿ ತೋರಿಸುವರು	ಸಿನೇಮಾವನ್ನು ಬಹಿರಂಗವಾಗಿ ಆಡಿ, ಗುಟ್ಟಾಗಿ ತೋರಿಸುವರು
ನಾಟಕದಲ್ಲಿ, ವಿಶೇಷ ಚುಂಬನಕ್ಕೆ ಎಡೆಯಿಲ್ಲ	ಸಿನೇಮಾದಲ್ಲಿ ಚುಂಬನಕ್ಕೆ ವಿಶೇಷ ಎಡೆಯಿದೆ.

ಸಾಮ್ಯ.

ಇವೆರಡನ್ನೂ ನೋಡಲು ಟಿಕೇಟನ್ನು ತೆಗೆದುಕೊಳ್ಳಬೇಕಾಗುವುದು. ಇವೆರಡೂ ಕಂಪೆನಿಯರ್‌ರೊಡನೆ, ಪ್ರದರ್ಶನವು ನಮಗೆ ರುಚಿಸಲಿಲ್ಲವೆಂದು—ತಿಳಿಸಿದರೆ ಹಣವನ್ನು ಹಿಂದಕ್ಕೆ ಕೊಡುವುದಿಲ್ಲ

ಇವೆರಡನ್ನು ಪರಿಶೀಲಿಸಿದಲ್ಲಿ—ಇವೆರಡರಲ್ಲಿ ಮುಖ್ಯವಾದುದು ಸಿನಿಮವೇ—ಎಂದು ನಿರ್ವಿವಾದವಾಗಿ ತಿಳಿಯುವರು ಅದರಲ್ಲಿ ತರಲು ಚಿಕ್ಕದೆಂದು ತೋರಿದ ವಿಷಯವನ್ನು ನಾಟಕವಾಗಿಯೂ, ನಾಟಕಕ್ಕೆ ಮಿಕ್ಕಿದ್ದನ್ನು ಸಿನಿಮಾಕ್ಕೆ ತರುವುದು ಈಗಿನ ರೂಢಿ

ಸಿನಿಮವು ಬಲು ದೊಡ್ಡ ಕಲೆಯಾದುದರಿಂದ ಅದರಲ್ಲಿ ಸೌಂದರ್ಯವು ತುಂಬಿ, ಫಿಲ್ಮಿನ ನಾಲ್ಕು ಸುತ್ತು ಚೆಲ್ಲುತ್ತಿರಬೇಕು. ಒಂದು ಚಿತ್ರವು ಯಶಸ್ವಿಯಾಯಿತೇ ಇಲ್ಲವೇ—ಎಂಬುದನ್ನು, ಅದರ ಉತ್ಪನ್ನದ ಮೇಲೆ ನಿರ್ಣಯಿಸುತ್ತಾರೆ ಯಾವ ಚಿತ್ರವು—ಥಿಯೇಟರಿನ ಯಜಮಾನನನ್ನು ನಷ್ಟಕ್ಕೆ ಗುರಿಪಡಿಸುವುದಿಲ್ಲವೋ, ಅದು ಕಲಾಪೂರ್ಣ ಚಿತ್ರವೆಂದು ತಿಳಿಯತಕ್ಕದು

ಚಲಚ್ಚಿತ್ರದ ಸೌಂದರ್ಯವು ಹೆಚ್ಚಲು, ಸ್ವಾಭಾವಿಕವಾಗಿ, ಅದರಲ್ಲಿನ ಸುಂದರಿಯರ ಸಂಖ್ಯೆಯು ಹೆಚ್ಚಾಗಬೇಕು ಯಾವ ಚಿತ್ರದಲ್ಲಿ 1000ಕ್ಕೂ ಮೇಲ್ಪಟ್ಟ ಅರಸಿದ ಸುಂದರ ತರುಣಿಯರಿದ್ದರೆ, ಅದು ಸುಪರ್ ಚಿತ್ರವೆನಿಸುವುದು. ಚಿತ್ರದ ಮುಖ್ಯ ನಟಿಯರು, ಚಿತ್ರದ ಜೀವಕಳೆ ಇವರು ಪ್ರತಿ ದಿನ, 6 ತಾಸನ್ನಾದರೂ ಖಾಸಗಿಯಿಂದ, ಚುಂಬನ ವ್ಯಾಸಂಗದಲ್ಲಿ ಕಳೆಯಬೇಕು ಇವರ ರೂಪಲಾವಣ್ಯವು, ಭಾರತೀಯ ಚಿತ್ರಕಾರರ ನಿಡಿದನಾರಿಯರಿಗಿಂತ ನಿಡಿಯಲ್ಪಟ್ಟಿರಬೇಕು ಗಾಳಿ ಬೀಸದಿರುವಾಗಲೂ ಇವರ ಶರೀರವು ನೂರಾರು ಮುಡಿಕೆಯಿಂದ ತೇಲಿಹೋಗಬೇಕು. ಬಳುಕುವ ಹಾವಿನಂತೆ ಅವರು ಚಲಿಸಿದಲ್ಲಿ ಅದು ಅಭಿನಯ ವಿಶೇಷವಾಗುವುದು ಚಲಚ್ಚಿತ್ರದ ಅಭಿನಯಕ್ಕೆ, ಉಡುಗೆತೊಡುಗೆಗಳು ಆತಂಕಗಳೆಂದು ನೀವು ಸುಲಭದಲ್ಲಿ ತಿಳಿಯುವುದು ಅವಶ್ಯ. ಒಮ್ಮೆ ಅವು ಅನಿವಾರ್ಯ ಆದಲ್ಲಿ, ತೊಡತಕ್ಕ ಬಟ್ಟೆಗಳು-000087 ಮಿಲ್ಲಿಯ ಮಿಟರಿಗಿಂತ ದಪ್ಪನಾಗಿರಕೂಡದು ಒಮ್ಮೆ ಇಡೀ ನಾಟಕದಲ್ಲಿ ಹೀಗಿರಲು ಅನಾನುಕೂಲವಾದರೆ, ರೀಲಿಗೊಮ್ಮೆ ಯಾದರೂ ಈ ರೀತಿ ಕಾಣಿಸಿಕೊಳ್ಳುವುದು—ಅತಿ ಅವಶ್ಯದ ವಿಷಯ

ಇಂಥ ಉತ್ಕೃಷ್ಟ ಚಿತ್ರಗಳು—ಹಾಲಿವುಡ್ಡೆಂಬ ಚಿತ್ರಲೋಕದಲ್ಲಿ ತಯಾರಾಗುತ್ತವೆ ಅಲ್ಲಿನ ಹವಾಗುಣದಿಂದ ಅವರ ಆರೋಗ್ಯವು ಕೆಡದಂತೆ, ನಟಿಯರ ಮೇಲೆ ಜನರ ದೃಷ್ಟಿದೋಷವು ಪರಿಣಮಿಸದಂತೆ—ಚಿತ್ರತಾರೆಗಳು (Stars) ವ್ಯಾನಿಟಿ ಬ್ಯಾಗ್, ಅದರ ಬಣ್ಣ, ಉಗುರು, ತಲೆಗೂದಲು, ಕತ್ತು, ಮೂತಿ—ಇವನ್ನೆಲ್ಲಾ ವಿಮೆಮಾಡುವುದು ಅತಿ ಅವಶ್ಯವು ಇವರ ಸ್ಫೂರ್ತಿ, ಪ್ರತಿಭೆಗಳು ಜನರಿಗೆ ಮುಂದಾಗಿ ತಿಳಿಯುವುದು ಅವಶ್ಯವಾದುದರಿಂದ ಬಚ್ಚಲು ಮನೆಯ ದಿವಾನಖಾನೆಯು ಅವರ ಸಂಚಾರ ಮೊದಲಾದವುಗಳು ಯಾವತ್ತು ದಿನಚರಿಕಥೆಯನ್ನು, ಕಲಾಪ್ರೇಮಿಗಳು, ವರ್ತಮಾನ ಪತ್ರಗಳಿಂದ ತಿಳಿಯಬೇಕು

ಪ್ರಸಿದ್ಧ ಚಿತ್ರತಾರೆಯು, ಕಲಾಸೇವೆಗಾಗಿ, ಹದಿನಾರು ಗಂಡಂದಿರೊಡನಾದರೂ ವಿವಾಹ ವಿಚ್ಛೇದವನ್ನು ಹೊಂದಿರಬೇಕು ಇಂಥ ನಟಿಯರೊಡನೆ ಮೇಳಯಿಸಿ ಕೆಲಸ ಮಾಡುವ ನಟರೂ, ಕೆಲವು ನೇಮಗಳಿಗೆ ಒಳಗಾಗಿರಬೇಕು ಇವರನ್ನು ನೋಡಿದೊಡನೇ, ಬೀದಿಯ ತರುಣಿಯರ ಧಾವಿಸಿಬರುವಂಥ ಆಕರ್ಷಣ ಶಕ್ತಿಯು ಇವರಲ್ಲಿರಬೇಕು

ಹಿಂದುಸ್ಥಾನದ ಚಲಚ್ಚಿತ್ರ ಕಲಾದೃಷ್ಟಿ ಬೇರೆಯೇ ಇದೆ ವಿಲಾಯತಿಯ ಸುಂದರಿಯರು ನಮ್ಮ ಸುಂದರಿಯರಾಗರು ನಮ್ಮ ದೇಶದಲ್ಲಿ ನಟಿಯೊಬ್ಬಳ ಕನಿಷ್ಠ ತೂಕವು—800 ರಾತ್ತಲುಗಳಿರಬೇಕೆಂಬ ನಿರ್ಬಂಧವಿದೆ ತಾನು ವಹಿಸುವ ಭೂಮಿಕೆಯು 8 ವಾಲು ವಯಸ್ಸಿನದ್ದರೂ ಆಕೆಗೆ ಆಗಿರುವುದು ಅವಶ್ಯ ಇವರಾದರೂ ಸೆಳೆಗಾಲದ ದೇಶೀಯರಂತೆ ವರ್ತಿಸಬೇಕು ಅವರ ದಂತ ಪಂಗ್ತಿಗಳ ಚೆಲುವು ಕೆಮರಾದ ಕಣ್ಣಿಗೆ ಸಿಗಕೂಡದು ಆದರೆ ನಮ್ಮಲ್ಲಿನ ನಟರಿಗೆ ಇಷ್ಟು ನಿಯಮವಿಲ್ಲ ಅವರು—ಒಂದು ಹೇಸರ ಕತ್ತೆಯ ಮೇಲೆ, ತಾಸಿಗೆ 2-8 ಮೈಲು ದೂರ ಓಡಬಲ್ಲರಾದರೆ ನಟನ ಅರ್ಹತೆಯನ್ನು ಪಡೆಯುವರು

ಈಗ ನಟ ಜನರ ವಿಚಾರ ಹೇಳಿಯಾಯಿತು ಇನ್ನೂ ಕಥೆಗಳ ವಿಷಯ ಇದು ಚಲಚ್ಚಿತ್ರಕ್ಕೆ ಅವಶ್ಯವೆ ದಲ್ಲ ಕಥೆಯನ್ನು ಉಪಯೋಗಿಸಬಹುದು ಬರೇ ಸೌಂದರ್ಯವನ್ನು ಹೊರಗೆಡುವಲ್ಲಿ ಅದರ ನಿರ್ಬಂಧವಿಲ್ಲ ಕಥೆಯಲ್ಲಿ, ಕನಿಷ್ಠ, ಇಬ್ಬರು ನಾಯಿಕೆಯರು, ಆರೆಂಟು ಪ್ರತಿನಾಯಕರು, ಇರಬೇಕು A ಎಂಬವನು ನಾಯಕನು—ಎಂದು ತಿಳಿಯಿರಿ B C D ಇವರು ಪ್ರತಿನಾಯಕರು E, F, ನಾಯಕಿಯರು E ಮುಖ್ಯ ನಾಯಕಿ E ಯು B ನ ಹೆಂಡತಿ ಆಕೆಗೆ A ನೊಡನೆ ಪ್ರೇಮ C ನೊಡನೆ ಗೆಳೆತನ ಉದ್ದೇಶ ಪೂರ್ತಿಗೆ D ಸಹಾಯಬೇಕು ಇವರೆಲ್ಲರನ್ನು ಅವಳು ತೃಪ್ತಿಪಡಿಸಿ ಕೊನೆಗೆ ಉಪಾಯ ಕಾಣದೆ, G ಎಂಬ ಯಾರನ್ನೊ ಮದುವೆಯಾಗುವಳು A, B, C D G ಇವರೆಲ್ಲ ಒಂದೊಂದು ರೀತಿಯ ಕೆಲಸ ಮಾಡುವರು A ನಂತಹ ಚುಂಬನ ವಿಶಾರದನಿಲ್ಲ B ಯಂತೆ ಹಾಡುಗಾರನಿಲ್ಲ C ಯೂ D ಯೂ ಮೋಟಾರು ವಿಮಾನಗಳನ್ನೇರಿ ದರೋಡೆ ಮಾಡುವವರು ಹೀಗೆಲ್ಲಾ ಅವರಲ್ಲಿ ಜಿದ್ದಾಟಕ್ಕೆ ಅನುಕೂಲವಾದ ವಸ್ತುಗಳಿವೆ F, ಪ್ರತಿನಾಯಿಕೆಯು ಇವಳು D ನ ಹೆಂಡತಿ ಇಲ್ಲವೆ—ಅಂಥವಳಿರಬಹುದು E ಯ ಮೇಲೆ ಅವಳಿಗೆ ಸ್ನೇಹ ಇಲ್ಲವೆ ಅಸೂಯೆ ಇರಬಹುದು ಇವರ ಸ್ಪರ್ಧೆಯಲ್ಲಿ ಕೆಲವು ಮೇಜುಗಳಿಂದ ತೊಡಗಿ, ಕೆಲವು ರೈಲುಗಳು ಪುಡಿಯಾದರೆ—ಅವಶ್ಯ ಬಿದ್ದಲ್ಲಿ ನಗರಗಳು, ರಾಜ್ಯಗಳೂ ಹುಡಿಯಾಗಬಹುದು—ಆಗ ಕಥೆಯು ಪೂರ್ಣವಾಗುವುದು

ಪ್ರತಿನಾಯಕರಾದ C, D, G ಗಳು ಕಾಡುಜನರಾಗಲೂ ಬಹುದು ಹಾಗಿರುವಲ್ಲಿ, E—A ಗೇನೇ (ಬಿಳಿಯವನು) ಸಲ್ಲಬೇಕು

ಬೇರೆ ಬೇರೆ ವಿಧದಿಂದ ಇವರ ಸ್ಪರ್ಧೆಯನ್ನು ಕೂಡಿಸಿ ಕಳೆದು ಕಥಾ ನಿರ್ಮಾಣಮಾಡಬೇಕು ಅಲ್ಲಲ್ಲಿ ಸೌಂದರ್ಯವು ಮಿಗುವಂತೆ ಹೊಳೆ, ಬೆಟ್ಟ ಮೊದಲಾದ ಅನುಕೂಲ ಸ್ಥಳಗಳೂ—ಗಾನನರ್ತನಗಳೂ ಇರಬೇಕು E ಯು ಪ್ರತಿ 15 ನಿಮಿಷಕ್ಕೊಂದೆರಡು ಬಾರಿಯಾದರೂ A'ಯ ಮೇಲೆ ಕುಪಿತಳಾಗಿ ಅವನನ್ನು ಚುಂಬಿಸಬೇಕು.

ಇಂಥ ಕಥೆಯು ಸಾಲದಾದಲ್ಲಿ, ಕಥೆಯ ನಡುವೆ ಹುಲಿ, ಸಿಂಹ, ಹಿಪ್ಪೊಪೊಟಿಸ್, ಎಲಿಗೇಟರ್, ಗೋರಿಲ್ಲಾ, ಕಪ್ಪೆ—ಮೊದಲಾದ ವಸ್ತುಗಳನ್ನು ತಂದಾಗಲಿ, ನಾಯಕನಾಯಕಿಯರನ್ನು ಅವಿರುವಲ್ಲಿಗೆ ಒಯ್ದಾಗಲಿ—ಕಲಾಪ್ರೇಮಿಗಳು ಎಚ್ಚರಗೊಂಡಿರುವಂತೆ ಮಾಡಬೇಕು

ಇಂಥ ಘಟನೆಗಳು—ಶಾಹಾರದ ಮರುಭೂಮಿಯಲ್ಲೋ, ಕಾಂಗೊವಿನ ಕಗ್ಗಾಡಿನಲ್ಲೊ, ಹಾಲಿವುಡ್ಡಿನ ಅಮರಾವತಿಯಲ್ಲೋ—ನಡೆಯುವಾಗ ಅದರ ಫೊಟೋ ತೆಗೆದು ಫಿಲ್ಮು ತಯಾರಿಸಬೇಕಾಗುವುದು 10,000 ಡಾಲರು ಬೆಲೆಯ ಏಣಿಯ ಮೇಲೆ ನಿಂತು, ಆ ಏಣಿಯನ್ನು 1,000,000 ಡಾಲರು ಬೆಲೆಯ ರೈಲಿಗೆ ಇಲ್ಲವೆ ವಿಮಾನಕ್ಕೆ ತಗಲಿಸಿ ಅದನ್ನು—100,000,00 ಡಾಲರು ಬೆಲೆಯ ವೇದಿಕೆಯ ಸುತ್ತ ಚಲಿಸುತ್ತಿದ್ದು—ಆ ಏಣಿಯ ತುದಿಗೆ, ಕೆಮರಾವನ್ನೂ, ಫೊಟೋಗ್ರಾಫರನನ್ನೂ ತೂಗಿ, ಕೆಳಗೆ, ಅತ್ತ, ಇತ್ತ—ನಡೆಯುವ ಈ ದೃಶ್ಯಾವಳಿಗಳ ಚಿತ್ರವನ್ನು ತೆಗೆಯಬೇಕು ಇಂಥ ಯಂತ್ರದಲ್ಲಿ, ಕೆಮರಾ ನಡೆಯಿಸುವವನು ಆಕಸ್ಮಿಕವಾಗಿ ಬಿದ್ದು ಪ್ರಾಣಹೋದರೆ, ಕಲೆಯ ಕೀರ್ತಿ ಇನ್ನೂ ಹೆಚ್ಚುವುದು

ಹೀಗೆ ತೆಗೆದ ಚಿತ್ರದ ಚೂರುಗಳನ್ನು ಒಬ್ಬ ಸಂಪಾದಕನಿಗೆ ಕೊಡುತ್ತಾರೆ ಅವನು, ಅದನ್ನು ಜೋಡಿಸಿ—ನೋಡುತ್ತಾನೆ ಸಭಿಕರು ಇಂಥದೇ ಭಾಗನೋಡಿ ಕೈ ಚಪ್ಪಾಳೆ ಹೊಡೆಯರು, ಇಲ್ಲಿ ಅವರಿಗೆ ನಟಿಯ ಮೇಲೆ ಮೋಹವು ನಾಟದು—ಎಂದು ಕಂಡರೆ ಆ ಭಾಗಗಳನ್ನು ಕತ್ತರಿಸಿ ಬಿಟ್ಟು, ತಿರುಗಿ ಜೋಡಿಸಿ ನೋಡುವನು ಹೀಗೆ 100,000 ಅಡಿ ಉದ್ದದ ಫಿಲ್ಮನ್ನು ಒಟ್ಟು ಗೊಳಿಸಿ 8-10 ಸಾವಿರಕ್ಕೆ ತರುವರು ಆ ಕ್ರಮಕ್ಕೆ ವಿರುದ್ಧ ಕ್ರಮವು ನಮ್ಮ ದೇಶದ ಕಲಾವಿದರದು ನಮ್ಮ ಚಿತ್ರ ತೆಗೆಯುವಾಗ 5,700 ಅಡಿ ಇದ್ದ ಚಿತ್ರವು—ಸಂಪಾದಕನ ಕೈಯಲ್ಲಿ ಬೆಳೆದು 17,600 ಅಡಿಯಾಗುವುದು ಅಂತು ಇದ್ದಂತೆ ಅದು ಇರದಿದ್ದರಾಯಿತು.

ಈ ವಿಷಯವಾಗಿ ಮುಖ್ಯ ತಿಳಿದಿರಬೇಕಾದ ಸಂಗತಿಯೆಂದರೆ—10,000 000 ಡಾಲರಿಗಿಂತ ಕಮ್ಮಿ ಬೆಲೆಯ, ಇಲ್ಲವೆ, 10,000ಕ್ಕಿಂತ ಕಡಿಮೆ ನಟರು ಇರುವ ಚಿತ್ರವು ಚಿತ್ರವಲ್ಲವೆಂದೂ ನಾಟಕವೆಂದೂ ತಿಳಿದರಾಯಿತು.

ಇನ್ನು ಇದನ್ನು ತಯಾರಿಸಿ ಆ ಬಳಿಕ ಜಾಹೀರಾತು ಕೊಡುತ್ತಾರೆ ಹಿಂದಿನ—E ನ ಚಿತ್ರಗಳನ್ನು ಈ ಚಿತ್ರವು ಮೀರಿಸುವುದು A G ತನಕ ಎಲ್ಲರೂ ಚಿತ್ರತಾರೆಗಳೇ ಎಂದು ಸಾರುತ್ತಾರೆ ಚಿತ್ರಗಳಿಗೆ ಯೋಗ್ಯ ನಾಮಕರಣವೂ ಬೇಕು ಕಥೆ ಬರೆದವನು ಅದಕ್ಕೆ ಚೆನ್ನಾದ ಹೆಸರು ಕೊಡದಿದ್ದಲ್ಲಿ—ಕಂಪೆನಿಯವರು ಕೊಡುವುದವಶ್ಯ ಮುಖ್ಯವಾಗಿ, ಎಲ್ಲರಿಗೂ E ಯ ವಿಷಯವಾಗಿ ಆಸೆಹುಟ್ಟಬೇಕಾದುದು ಮುಖ್ಯ ಹಾದಿಹೋಕರೂ ಬರಬಹುದು 'ಪಾಪದ ಬೀದಿಯಲಿ — ಚುಂಬನದ ನದಿ' 'ಪ್ರಣಯದಗಿಲ್ಲದ ಸಿದ್ದಲ್ಲಿ ಸ್ವರ್ಗ' 'ಸೀಸಿದ್ದ ನರಕವು ಸ್ವರ್ಗ' 'ಅನರಾಗದ ಕೆರೆ' ಈ ರೀತಿಯಲ್ಲಿ ಅವು ಕಲಾಪೂರ್ಣವಾಗಿ ಕಾಣಿಸಬೇಕು

ಈ ವಿಷಯವನ್ನು ವಾರಕ್ಕೆ ಕನಿಷ್ಠ 8 ಚಿತ್ರಗಳಲ್ಲಾದರೂ ನೋಡದವರಿಗೆ ಹೇಳಿಯೇ ಫಲವಿಲ್ಲ

ಲಂಡನಿನಲ್ಲಿ ಮಸೀದಿ.

ಲಂಡನ್ ನಗರದಲ್ಲಿ, ಬಕ್ಕಿಂಗ್ಯಾಮ್ ಅರಮನೆಯ ಬಳಿಯಲ್ಲಿ, ಮುಸ್ಲಿಮರಿಗಾಗಿ ಒಂದು ಸುಂದರವಾದ ಮಸೀದಿಯನ್ನು ಕಟ್ಟಿಸುವ ಆಯೋಜನೆಯಾಗಿದ್ದು, ಇದರ ಶಂಕುಸ್ಥಾಪನೆಯು, ಸಾರ್ವಭೌಮರ ಅಳ್ವಿಕೆಯ ರಜತೋತ್ಸವನಂದು, ಆಗಾಖಾನರವರ ಹಸ್ತದಿಂದ ಜರಗಿಸಲ್ಪಡುವುದಾಗಿ ತಿಳಿದುಬರುತ್ತದೆ ಇದಕ್ಕೆ ಸುಮಾರು 1,70 000 ಪವನು ವೆಚ್ಚ ತಗಲಬಹುದಾಗಿ ಅಂದಾಜು ಮಾಡಲಾಗಿದೆ

'ಮೃತ್ಯುಕಿರಣ'ದ ಭೀಕರ ದುರ್ಘಟನೆ.

[illegible] ಕ್ರಿಸ್ಟಸ್ ಸಾಹೇಬರು ಕಂಡುಹಿಡಿದ ಕಿರಣವದು—'ಮೃತ್ಯುಕಿರಣ' ಅದು ಅನೇಕ ಮೈಲು ದೂರವಿರುವವರನ್ನೂ ಕೊಲ್ಲಬಲ್ಲುದು.

ಪ್ಯಾರಿಸ್ ಬಳಿಯ ಒಂದು ಗ್ರಾಮದಲ್ಲಿ ಒಂದು ವಿನೋದಕೂಟ ಜರಗಿತ್ತು. ಸ್ತ್ರೀಯರೂ ಪುರುಷರೂ ಸೇರಿ ನೃತ್ಯವಿಲಾಸದಲ್ಲಿ ಮಗ್ನರಾಗಿದ್ದರು. ಆಕಸ್ಮಿಕವಾಗಿ ಎಲ್ಲರೂ ಬಿದ್ದು ಮರಣಹೊಂದಿದರು.

ಕಾರಣವೇನು? ಮೃತ್ಯುಕಿರಣವನ್ನು ಕಂಡುಹಿಡಿದ ಕ್ರಿಸ್ಟಸ್ ಸಾಹೇಬರು, ಆ ದೂರದಿಂದ ಕಿರಣದ ಗುಣಗಳನ್ನು ಯಾರಿಗೋ ತೋರಿಸುತ್ತಿದ್ದರು ಈ ಗ್ರಾಮವಾಸಿಗಳಿಗೆ ಅದು ತಿಳಿದಿರಲಿಲ್ಲ.

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ಸಂಖ್ಯೆ 191/1934.

ಬಿ. ಗೋಪಾಲಕೃಷ್ಣಾಚಾರ್ಯ–ವಾದಿ.

ಮತ್ತು

1. ಭಾಬುರಾಯ ಯಾನೆ ರಾಮರಾಯ, 2. B. ಕೆ. ಶ್ರೀನಿವಾಸ ರಾವ್, 3. B. ಕೆ. ವೆಂಕಟರಾವ್–ಪ್ರತಿವಾದಿಗಳು.

ಮೇಲೆ ಹೆಸರು ಕಾಣಿಸಿದ ವಾದಿಯು ಪ್ರತಿವಾದಿರಿಂದ ರೂ. 548-2-0ನ್ನು ಮುಂದಿನ ಬಡ್ಡಿ ವ ಖರ್ಚು ಸಮೇತ ಬರಮಾಡಿಕೊಳ್ಳುವರೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 21-11-'34ಕ್ಕೆ ಅಖೈರು ತನ್ಖಿ ಬಗ್ಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪವಿದ್ದರೆ ಪ್ರತಿವಾದಿರು ಸದ್ರಿ ತಾರೀಕಿಗೆ ಮೇಲಿನ ಕೋರ್ಟಿನ ಮುಂದೆ ಬೆಳಿಗ್ಗೆ 11 ಘಂಟೆಗೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳಬಹುದು. ತಪ್ಪಿದರೆ ಪ್ರತಿವಾದಿರ ಗೈರಿ ಹಾಜರಿಯಲ್ಲಿ ಸದ್ರಿ ನಂಬ್ರವು ತೀರ್ಮಾನಿಸಲಾದೀತು.

ಮಂಗಳೂರು, 5-11-'34. } **B. R. Vyasarayachar,** *Advocate for Plantiff.*

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S 479/34. R. I. A 1279/34

ವಂಡಾರು ಮುತ್ತಯ್ಯ ಹೆಗ್ಡೆ–ವಾದಿ–ಅರ್ಜಿದಾರ.

1 ಕರ್ಣೀಕ ಮಹಾಬಲೇಶ್ವರಯ್ಯ, ಕರ್ಣೀಕ ರಾಮಕೃಷ್ಣಯ್ಯನವರ ದತ್ತದ ಮಗ.

2. ಮೈನರ ರಂಗಪ್ಪಯ್ಯ, 3. ಮೈನರ ನಾಗಪ್ಪಯ್ಯ–1ನೇ ಪ್ರತಿವಾದಿ ಮಕ್ಕಳು, ಇವರ ಗಾರ್ಡಿಯನ್ ದತ್ತದ ಅಜ್ಜ 4ನೇ ಪ್ರತಿವಾದಿಳು ವೆಂಕಮ್ಮ.

4 ವೆಂಕಮ್ಮ, ಕರ್ಣೀಕ ರಾಮಕೃಷ್ಣಯ್ಯನವರ ವಿಧವೆ, ವ 1ನೇ ಪ್ರತಿವಾದಿ ದತ್ತದ ತಾಯಿ ಕುಂದಾಪುರ ತಾಲ್ಲೂಕು ಕಾವರಾಡಿ ಗ್ರಾಮ–ಪ್ರತಿವಾದಿರು–ಎದ್ರಿರು

ಮೇಲೆ ಹೆಸರು ಕಾಣಿಸಿದ ಪ್ರತಿವಾದಿರಿಂದ ವಾದಿಗೆ ದಿಮಾಂಡ್ ನೋಟಿನ ಪ್ರಕಾರ ಬರತಕ್ಕ ರೂ 1829-6-0 ವಗೈರೆಯ ನ್ನು ಬರಮಾಡಿಕೊಳ್ಳುವ ಬಗ್ಗೆ ಒಳ್ಳೂರು ಗ್ರಾಮದಲ್ಲಿರುವ ವೆಂಕಮ್ಮ ಸೆಡ್ತಿರ ಮಗಳು ಮಂಜಮ್ಮ ಸೆಡ್ತಿರಿಗೆ ಪ್ರತಿವಾದಿರು ತಾ 17-2-'33ನೇಗೆ ರಿಜಿಸ್ಟ್ರಿ ನಿಶಿಂ ಬರಕೊಟ್ಟ ಕ್ರಯ ದಸ್ತಾವೇಜಿನಲ್ಲಿ ವಾದಿಗೆ ತೆರಬೇಕಾಗಿ ಒಳಪಡಿಸಿದ ಹಣವನ್ನು ಸದ್ರಿ ಮಂಜಮ್ಮ ಸೆಡ್ತಿರು ಯಾವ ವಿಧದಿಂದಲೂ ಪ್ರತಿವಾದಿರಿಗೆ ವಸೂಲು ಕೊಡದ ಹಾಗೂ ಸದ್ರಿ ಪ್ರತಿವಾದಿರು ವಸೂಲು ಮಾಡದ ಹಾಗೂ ವ ಸದ್ರಿ ಹಕ್ಕನ್ನು ಬೇರೆಯವರಿಗೆ ಪರಾಧೀನ ವಗೈರೆ ಮಾಡದ ಹಾಗೂ ಕೈಪೇತು ಜಪ್ತು ಮಾಡಿಸಿಯಿಡಬೇಕೆಂತ ವಗೈರೆ ಕಾಣಿಸಿ ಮೇಲಿನ R I A 1279/34ಕ್ಕೆ ದಾಖ್ಲು ಮಾಡಿದ ಜಪ್ತಿ ಅರ್ಜಿ ಸಹಾ ತಾ. 15 11-34ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ಖಿಗೆ ಇಟ್ಟಿದೆ ಆ ವಿಷಯ ಆಕ್ಷೇಪವಿದ್ದರೆ ಸದ್ರಿ ದಿವಸ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿದೆ

Coondapoor, 2--11--'34. } **B S. Shetty,** B. A., B. L. *Vakil for Plaintiff.*

ಕೊಪ್ರೆಸ್ ದಂತಮಂಜನದ ನಳಿಗೆ(tube)ಗಳ

ಸ್ಕ್ರ್ಯೂ ಕೇಪ್ ಮತ್ತು ಕ್ಲಿಪ್ ಕೇಪ್‌ಗಳನ್ನು ಸಂಗ್ರಹಿಸಿರಿ–

ಸುಂದರವಾದ ಉಚಿತ ಉಡುಗೊರೆಗಳನ್ನು ಪಡೆಯಿರಿ

ಈ ಕೆಳಗೆ ಕೆಲವನ್ನು ಕೊಟ್ಟಿರುತ್ತದೆ.–

ಕನ್ನಡಿ ಸಹಿತವಿರುವ ಸೇಫ್ಟಿರೇಜರ್ ಪೆಟ್ಟಿಗೆಯೊಂದು. ಒಂದು ಪೆಟ್ಟಿಗೆ ಬ್ಲೇಡ್‌ಗಳು. ಮೊರೊಕೊ ಚರ್ಮದ ಚೀಲ (ಇದರಲ್ಲಿ ವಿಭಾಗಗಳಿವೆ) ಫೌಂಟನ್ ಪೆನ್; 14 ಕ್ಯಾರೆಟ್ ಭಂಗಾರದ ನಿಬ್; ಇರಿಡಿಯಮ್ ಇರುವಂಥದ್ದು. ಸೆಲ್ಫ್ ಫಿಲ್ಲಿಂಗ್ ರೋಲ್ಡ್‌ಗೋಲ್ಡ್ ಪಟ್ಟಿ ಮತ್ತು ಕ್ಲಿಪ್ ಇದೆ. ಪ್ರಸಿದ್ಧ ಪಟ್ಟಿ ನಮೂನೆದ್ದು ಸ್ತ್ರೀಯರ ಸುಂದರ ಕೈಪೆಟ್ಟಿಗೆ; ಕನ್ನಡಿಯಿದೆ, ಅದರೊಡನೆ ಜೇಬಿನ ಪಕೆಟ್ ಇದೆ.



ಮನೋಹರವಾದ ಮೇಜಿನ ಗಡಿಯಾರ.

ಸ್ವಿಸ್ ತಯಾರಿಯ ಲಿವರ್ ರಿಸ್ಟ್‌ವಾಚ್ (ಜಂಪಿಂಗ್ ಫಿಗರ್ಸ್)

ವಿವರಕ್ಕೆ ಗಿರಾಕಿಗಳನ್ನು ಕಾಣಿರಿ ಅಥವಾ

ಕೊಪ್ರೆಸ್ ಕೆಮಿಕಲ್ ಕೊ., ಲಿಮಿಟೆಡ್,

83–85 ತಾರದೇವ್ ರೋಡ್, ಮುಂಬಾಯಿ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 2	3— 4
ಹಳ್ಳು ಮಸ್ಕತಿ	4— 2	4—12
ಹಳ್ಳು ಗುಡ್ಡು	4— 2	4— 8
ಹಳ್ಳು ಸುಗ್ಗಿ	3—12	4— 2
ಊರ ಅನ್ನಲ್ ಚೆಗೈ	4—12	5— 4
ರಂಗೂನು ಬೆ ಗೋ ಂಕ್ಕೆ	5— 4	6— 4
ಎಲ್ಲೂರು ಬೆ ಮು ಂಕ್ಕೆ	4— 0	4— 0
ಗೋದಿ ಗೋಣಿ ಂಕ್ಕೆ	10— 0	12— 8
ತೊಗರಿ ಗೋಣಿ ಂಕ್ಕೆ	9— 8	10— 0
ಹುರುಳಿ ಗೋಣಿ ಂಕ್ಕೆ	7 — 6	7—10
ಕಡಲೆ ಗೋಣಿ ಂಕ್ಕೆ	7 — 8	8— 0
ತೊಗರಿಬೇಳೆ ಗೋಣಿ ಂಕ್ಕೆ	10— 0	17— 0
ಉದ್ದು ಗೋಣಿ ಂಕ್ಕೆ	7— 0	7— 8
ಹೆಸರು ಗೋಣಿ ಂಕ್ಕೆ	7— 0	7— 8
ಊರುಬೆಲ್ಲ ಖಂಡಿ ಂಕ್ಕೆ	40— 0	45 — 0
ಉಪ್ಪು ಗೋಣಿ ಂಕ್ಕೆ	4 12	5— 4
ಕೊಬ್ರಿ ಖಂಡಿ ಂಕ್ಕೆ	41 — 0	42— 0
ಕೊಬ್ರಿ ಹಿಂಡಿ ಖಂಡಿ ಂಕ್ಕೆ	23— 0	24 0
ಎಳ್ಳಿಂಡಿ ಹಿಂಡಿ ಂಕ್ಕೆ	30 — 0	3 – 2
ಕೊಬ್ರಿ ಎಣ್ಣೆ ಮಣ ಂಕ್ಕೆ	3— 2	3—14
ಎಳ್ಳೆಣ್ಣೆ ಮಣ ಂಕ್ಕೆ	5— 2	5—10
ಚಿಮಿಣಿಎಣ್ಣೆ ಪೆಟ್ಟಿಗೆ ಂಕ್ಕೆ	6— 8	8— 0
ಮೋರಿಸ ಸಕ್ಕರೆ ಮ ಂಕ್ಕೆ	3 7	3—10
ಮೆಣಸು	6—12	7— 8
ಸಾಸಿವೆ ಮುಡಿ ಂಕ್ಕೆ	4 —12	5— 4
ಕಾಳುಮೆಣಸು ಖ ಂಕ್ಕೆ	175— 0	190 0
ಯೇಲಕ್ಕಿ ಮಣ ಂಕ್ಕೆ	22— 0	28— 0
ಹೊಸ ಗೇರುಬೀಜ ಮು. ಂಕ್ಕೆ	3—10	4 — 0
ಕಬ್ಬಿಣ ಖಂಡಿ ಂಕ್ಕೆ	42— 0	44— 0
ತಾಂಬ್ರುತಗಡು ಮ ಂಕ್ಕೆ	9 – 8	10—0
ತಾಂಬ್ರುಪಾತ್ರಗಳು ಮ ಂಕ್ಕೆ	13— 0	14— 0
ಚೀನಬೆಳ್ಳಿ ಸೇರು ಂಕ್ಕೆ	14—12	15— 0
ಹಿತ್ತಾಳೆ ತಗಡು ಮ ಂಕ್ಕೆ	9— 2	9—10
ಪವನು ಂಕ್ಕೆ	20—10	21— 0
ಹುಣಿಸೆ ಹುಳಿ ಖಂಡಿ ಂಕ್ಕೆ	30— 0	35— 0
ನೇಟಿವ್ ಕಾಫಿ ಖಂಡಿ ಂಕ್ಕೆ	180— 0	190— 0
ಫಿಬೇರಿ ಕಾಫಿ ಖಂಡಿ ಂಕ್ಕೆ	280— 0	290— 0
ಹಳೆ ಅಡಿಕೆ	80 — 0	120— 0
ಹೊಸ ಅಡಿಕೆ	55 0	61 — 0

"ಮಿತಸಂತತಿ"–ಮಿತಸಂತತಿ" ಎಂದು ಹಲುಬಿದರೆ ಫಲವಿಲ್ಲ;

ಪ್ರೊರೆಸ್ ಕೇಪ್ ಪೆಸರಿ

ವೆಂಬ ಈ ಅಮೂಲ್ಯ ಚೀಲವನ್ನುಪಯೋಗಿಸುವುದರಿಂದ 'ಮಿತಸಂತತಿ'ಯ ಸೂತ್ರವು ಪರಿಪಾಲಿಸಲ್ಪಡುವುದು ಈ ಚೀಲದ ಉಪಯೋಗವನ್ನು ಪ್ರಸಿದ್ಧ ವೈದ್ಯರೂ ಡಾ। ಮೆರಿಸ್ಟೋಪರೂ ಪರೀಕ್ಷಿಸಿ ಜಗತ್ತಿಗೆ ಶಿಫಾರಸು ಮಾಡಿರುವರು.

1 ಆಣೆ ಅಂಚೆ ಚೀಟು ರವಾನಿಸಿದರೆ ಕೆಟಲಾಗು ಕಳುಹಿಸುತ್ತೇವೆ

ಪ್ರೊರೆಸ್ ಚಿನೋಸೋಲ್ ಸೊಲ್ಯುಬ್ಲ್ಸ್ (Prorace Chinosal Solubles)

ಎಂಬುದನ್ನು ಇದರೊಡನೆ ಉಪಯೋಗಿಸಿರಿ, ಇದು ದ್ರಾವಕದಂತಿದೆ

ಪ್ರೊರೆಸ್ ಎಂಬ ಹೆಸರುಳ್ಳದು ಸರ್ವೋತ್ಕೃಷ್ಟ, ಇದರ ಕ್ರಯ ಒಂದು ಟಸ್ಸಿಗೆ ರೂ 2 0—0 (ಹನ್ನೆರಡು ಬಾಲ್ಲಗಳಿವೆ)

ಮುಖ್ಯ ಪ್ರವರ್ತಕರ –The Pioneer Book Depot 373/375 Esplanade Road Madras

ಮಂಗಳೂರ. ಏಜಂಟ

ದಿ ಮಂಗಳೂರು ಟ್ರೇಡಿಂಗ್ ಎಸೊಸಿಯೇಶನ್ ಲಿಮಿಟೆಡ್, ಮಂಗಳೂರು.

ಅದರ ಬೆಲೆಯೇನೂ ಇಲ್ಲ –

ಅಂದರೆ – ನೀವದರ ಹಲವು ಗುಣಗಳನ್ನು ಗಣಿಸಿದರೆ! 'ಬೇಬಿಸ್ ಜುವೆನೋಲ್'ವು ಮಕ್ಕಳಿಗೆ ಪ್ರಪಂಚದ ಅತಿದಿವ್ಯ ಟಾನಿಕ್ ಎಂಬುದಕ್ಕೆ,– ಇತ್ತಲಾಗೆ ದೇಶದ ಪ್ರಸಿದ್ಧ ವೈದ್ಯರೂ ವೈಜ್ಞಾನಿಕರೂ ಜರಗಿಸಿದ 'ಆಲ್ ಇಂಡಿಯಾ ಸೆಸಿಟಿ ಮತ್ತು ಸೈಂಟಿಫಿಕ್ ಎಗ್ಜಿಬಿಶನು' ನಲ್ಲಿ ಸ್ವರ್ಣಪದಕವನ್ನು ಪಡೆದಿದೆ ಎಂಬುದಕ್ಕಿಂತ ಬಲವಾದ ರುಜುವಾತು ಬೇಕೆ? ಇಂದಿನಿಂದಲೇ ನಿಮ್ಮ ಮಗುವಿಗೆ ಈ ಸರಳ, ಸುರಕ್ಷಿತ ಹಾಗೂ ಶಾಸ್ತ್ರೋಕ್ತ ಅಮೃತವನ್ನು ಕೊಡಲಾರಂಭಿಸಿ ನಿಮ್ಮ ಮಗುವು ಆರೋಗ್ಯ – ಪುಷ್ಟಿಗಳನ್ನು ಹೊಂದಿ ಬಹು ಕಾಲ ಬಾಳ ವುದೇ ನಿಮಗೊಂದು ಮಹಾನಿಧಿಯ ರಕ್ಷಣೆಯಾಗಿಂತೆ

ಇದನ್ನ ಕೊಂಡುಕೊಳ್ಳುವ ಆಗ್ರಹವಿರಲಿ–

BABY'S Juveol

RECOMMENDED ...

ಎಲ್ಲಾ ಕೆಮಿಸ್ಟರಲ್ಲಿಯೂ ರೂ. 2 ಮತ್ತು ರೂ. 1¼ಕ್ಕೆ ದೊರೆಯುತ್ತದೆ.

ಅಥವಾ

ಮೆಸರ್ಸ್ ಪೈ ಫಾರ್ಮಸಿ ಎಂಡ್ ಕಂಪೆನಿ,

ರಥಬೀದಿ, ಮಂಗಳೂರು.

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಕಾರ್ತಿಕ ಶು॥ ೩ ಶನಿವಾರದಿಂದ– ಕಾರ್ತಿಕ ಶು॥೧೦ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ಸಿಂಹಸೋಣ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ	ವಿಶೇಷ
10	ಶನಿ	೪	[illegible]	ಜ್ಯೇಷ್ಠ	[illegible]	[illegible]	6.22	6.18	[illegible]
11	ರವಿ	೫	[illegible]	ಮೂಲ	[illegible]	[illegible]	6.22	6.17	
12	ಸೋಮ	೬	[illegible]	ಪೂ.ಷಾಢ	[illegible]	[illegible]	6 22	6 17	
13	ಮಂಗಳ	೭	[illegible]	ಶ್ರವಣ	[illegible]	[illegible]	6 2 2	6 16	
14	ಬುಧ	೮	[illegible]	ಧನಿಷ್ಠ	[illegible]	[illegible]	6 22	6 15	
15	ಗುರು	೯	[illegible]	ಶತಭಿಷ	[illegible]	[illegible]	6-22	6.14	
16	ಶುಕ್ರ	೧೦	[illegible]	ಪೂ.ಭಾದ್ರ	[illegible]	೪೦	6.22	6.14	

ಪತ್ರಿಕಾ ಪ್ರಪಂಚ.

ಬಾಯ್‌ಕಾಟ್ ಶಬ್ದವು ಹೇಗೆ ಉಂಟಾಯಿತು?

ಕೆಲವು ಶಬ್ದಗಳ ಉತ್ಪತ್ತಿಯು ಬಹು ರಂಜಕವಾಗಿರುವುದು, ಇದರಂತೆ 'ಬಾಯ್‌ಕಾಟ್' (ಬಹಿಷ್ಕಾರ) ಎಂಬ ಇಂಗ್ಲಿಷ್ ಶಬ್ದದ ಉತ್ಪತ್ತಿಯಾಗಿದೆ. ಸ್ವರಾಜ್ಯ ಸಂಬಂಧವಾದ ಪ್ರಕೃತದ ಚಳವಳದ ವೇಳೆ ಈ ಶಬ್ದಕ್ಕೆ ಹೆಚ್ಚಿನ ಪ್ರಾಧಾನ್ಯವಿರುತ್ತದೆ. ಆದುದರಿಂದ ಇದರ ಉತ್ಪತ್ತಿಯ ವಿಷಯವಾಗಿ ಎರಡು ನುಡಿಗಳನ್ನಾಡಬಹುದು. ಐಯರ್ಲೆಂಡಿನಲ್ಲಿ "ಬಾಯ್‌ಕಾಟ್" ಎಂಬ ಅಧಿಕಾರಿಯೊಬ್ಬನಿದ್ದನು. ಅವನ ಆಡಳಿತದ ಸಮಯದಲ್ಲಿ ಜನರು ಬಹಿಷ್ಕಾರವನ್ನು ಹಾಕಬೇಕೆಂದು ನಿರ್ಧರಿಸಿದರು. ಬಾಯ್‌ಕಾಟ ದೊರೆಯು ಕಂದಾಯ ವಸೂಲಾತಿಗೆ ಹೋದಲೆಲ್ಲ ಅವನಿಗೆ ಬಹಿಷ್ಕಾರವನ್ನು ಹಾಕಿದರು. ಯಾವ ಹಳ್ಳಿಯಲ್ಲಾಗಲೀ ಜನರಲ್ಲಾಗಲೀ ಅವನಿಗೆ ಆಶ್ರಯವಾಗಲೀ ಆಹಾರಪಾನೀಯಗಳಾಗಲೀ ಅಲಭ್ಯವಾಯಿತು. ಇದನ್ನು ಕಂಡು ಅವನು ರಾಜಧಾನಿಗೆ ಹಿಂದಿರುಗಿಸವನೇ ತನ್ನ ಉದ್ಯೋಗಕ್ಕೆ ರಾಜಿನಾಮೆಯನ್ನು ಕೊಟ್ಟನು. ಅಂದಿನಿಂದ, ಬಾಯ್‌ಕಾಟ್ ದೊರೆಗೆ ಸಿಕ್ಕಿದ ಉಪಟಳವು 'ಬಾಯ್‌ಕಾಟ್' ಎಂದೇ ಕರೆಯಲ್ಪಟ್ಟಿತು.

'ಹಿಂದೂ'.

ಕ್ಷಯ ರೋಗಕ್ಕೆ ಕಾರಣಗಳಾವುವು?

ಹಿಂದೂದೇಶದಲ್ಲಿ ಈಗೀಗ ಕ್ಷಯ ರೋಗವು ದಿನೇ ದಿನೇ ಹೆಚ್ಚುತ್ತಾ ಹೋಗುತ್ತಿದೆ. ಫಲವಾಗಿ, ಅನೇಕ ಯುವಕ ಯುವತಿಯರು ಮೃತ್ಯುವಿಗೆ ತುತ್ತಾಗುತ್ತಿರುವರು. ಇದರ ನಿರ್ಮೂಲನಕ್ಕಾಗಿ ಸರಕಾರವು ಯತ್ನಿಸಬೇಕಾಗಿದೆ. ಈ ರೋಗದ ಕಾರಣಗಳನ್ನು ವೈದ್ಯಶಾಸ್ತ್ರದಲ್ಲಿ ಹೀಗೆ ನಿರೂಪಿಸಲ್ಪಟ್ಟಿದೆ: ೧. ಹೊಟ್ಟೆಗೆ ಸರಿಯಾದ ಆಹಾರವಿಲ್ಲದಿರುವುದು; ಅಥವಾ ಸಾಕಷ್ಟು ಆಹಾರವು ದೊರೆಯದಿರುವುದು. ೨. ಸೂರ್ಯಪ್ರಕಾಶವಿಲ್ಲದ ಕತ್ತಲೆಯ ಕೋಣೆಯಲ್ಲಿ ವಾಸಿಸುವುದು. ೩. ಸದಾ ಚಿಂತೆಯಲ್ಲಿರುವುದು. ೪. ಸನ್ನಿಪಾತ ರೋಗಕ್ಕೆ ಗುರಿಯಾಗುವುದು. ೫. ದೇಹಶಕ್ತಿಯು ಕುಂದಿರುವಾಗ ಅತಿಶ್ರಮಕರವಾಗಿ ಕೆಲಸ ಮಾಡುವುದು. ೬. ಮತ್ತನೇ ನೋಡಲಾದ ಮಾದಕ ದ್ರವ್ಯಗಳನ್ನು ಸೇವಿಸುವುದು. ಈ ಕಾರಣಗಳನ್ನು ಗೂಢವಾಗಿ ಬಿಟ್ಟಿಗೆ ನಿರ್ಬಂಧಿಸಿದರೆ ಈ ರೋಗವು ತಲೆದೋರಲಾರದು. ಪ್ರಾರಂಭಾವಸ್ಥೆಯಲ್ಲಾದರೂ ಈ ರೋಗವನ್ನು ಬೇಗನೆ ತಕ್ಕುದಾಗಿ ವೈದ್ಯಕೀಯ ಸಹಾಯವನ್ನು ಪಡೆಯಬೇಕು.

'ಹಿಂದೀ ಕರ್ನಾಟಕ'.

ಪಾಶ್ಚಾತ್ಯರ ಅರ್ಥ ಜಗತ್ತು.

ಫ್ರಾನ್ಸಿನ ಮಹಾಕ್ರಾಂತಿ (French Revolution) ಯಾದಂದಿನಿಂದ ಪಶ್ಚಿಮ ದೇಶದ ಜನರು ಹೊರಗಿನ ಪ್ರಪಂಚವನ್ನು ಗೆಲ್ಲುವ ಅಸಾಧಾರಣ ಉದ್ಯೋಗದಲ್ಲಿಯೇ ತೊಡಗಿರುವರು. ಇಲ್ಲಿಯವರೆಗೆ ಅವರ ಪ್ರಯತ್ನವೆಲ್ಲ ಸುಖಜೀವನದ ಒಂದೇ ವಿಷಯದಲ್ಲಿ ಮುಂದುವರಿಯುತ್ತಿದೆ. ಒಬ್ಬ ಪಾಶ್ಚಾತ್ಯನನ್ನು ಪ್ರಶ್ನಿಸಿದೊಡನೆ ಅವನು — "ನೋಡಿರಿ: ಈಗ ಪ್ರತಿಯೊಬ್ಬನು ತನ್ನ ದೈನಂದಿನ ಬಾಳಿನಲ್ಲಿ ಎಷ್ಟು ಸುಖದಿಂದ ಜೀವಿಸುವುದಕ್ಕೆ ಅನುಕೂಲವಾಗಿದೆ" ಎಂದು ಹೆಮ್ಮೆಯಿಂದ ಹೇಳುವನು. ಮತ್ತೂ ಮುಂದುವರಿದು ಹೇಳುತ್ತಾನೆ— "ಒಂದು ಶತಮಾನದ ಹಿಂದಿದ್ದ ಪೂರ್ವಿಕರ ಜೀವನಕ್ರಮವನ್ನೂ ಈಗಿನ ನಮ್ಮ ಜೀವನ ಕ್ರಮವನ್ನೂ ಸ್ವಲ್ಪ ಹೋಲಿಸಿ ನೋಡಿ, ಆಗ ನೀವೇ ನಮ್ಮ ಕೆಲಸವನ್ನು ನೋಡಿ ಹಳಿದೂಗುವಿರಿ" ಎನ್ನುತ್ತಾನೆ. "ಈಗ ನಾವು ಅಂತರಿಕ್ಷದಲ್ಲಿ ಹಾರಾಡಬಲ್ಲೆವು, ಸಮುದ್ರದ ಮೇಲೆಯೂ ನೀರಿನೊಳಗೂ ಸಂಚರಿಸಬಲ್ಲೆವು. ಭೂಮಿಯ ಒಂದು ಕಡೆಯಿಂದ ಇನ್ನೊಂದು ಕಡೆಗೆ ಒಂದೆರಡು ಕ್ಷಣಗಳಲ್ಲಿ ಸುದ್ದಿಗಳನ್ನು ಹರಡಿಸಬಲ್ಲೆವು." ಇದೇನು ಅದ್ಭುತವಲ್ಲವೇ? ನಿಷ್ಪಕ್ಷಪಾತರಹಿತ ದೃಷ್ಟಿಯಿಂದ ಇದು ಅದ್ಭುತವೇ ಸರಿ. ಆದರೆ ಅದೇ ನಿಷ್ಪಕ್ಷಪಾತಿಗೆ ಇನ್ನೊಂದು ಯೋಚನೆಯೂ ತೋರದಿರದು. ಪಾಶ್ಚಾತ್ಯರು ತಾವು ಎಷ್ಟು ಮುಂದುವರಿದಿದ್ದೇವೆಂಬುದರ ಗಡಿಬಿಡಿಯಲ್ಲಿ ಹೊಸಹೊಸ ಭೌತಿಕ ಶೋಧನೆಗಳನ್ನು ಮಾಡುತ್ತಿರುವರೇ ಅಲ್ಲದೆ ಮತ್ತೊಂದು ವಿಷಯವನ್ನು ಮರೆತೇ ಬಿಟ್ಟಿರುತ್ತಾರೆ. ನಾಗರಿಕತೆಯನ್ನು ಚಿರಸ್ಥಾಯಿಗೊಳಿಸುವುದಕ್ಕೆ ಪ್ರಪಂಚದಲ್ಲಿ ನೀತಿಧರ್ಮಗಳಿರುವುವೆಂಬುದನ್ನು ಮರೆತಂತೆ ತೋರುತ್ತದೆ.

ಮಹಾಬೋಧಿ, ವಿ. ವಿಂಟೆಕ್ಸ್ ನೆಲ್ಸನ್, ಬಿ. ಎ., ಬಿ. ಎಸ್. ಸಿ.

ಲವಂಗ

ಸಂ. ಲವಂಗ; ಹಿಂ. ಲವಂಗ; ತ. ಲವಂಗಂ; ತೆ. ಲವಂಗಮು. ಇಂ. Cloves. ಲ್ಯಾ. Canyophyllus aromationis. ಬೆಳೆಯುವ ಪ್ರದೇಶ: ಮಲಕ್ಕಾ ದೇಶದ ಕಾಡುಗಳಲ್ಲಿ ಬೆಳೆಯುತ್ತದೆ. ದಕ್ಷಿಣ ಹಿಂದೂಸ್ಥಾನದಲ್ಲಿ ಇದನ್ನು ಬೆಳೆಸುತ್ತಾರೆ. ಪ್ರಮಾಣ: ೫ ಗುಂಜಿಯಿಂದ ೮ ಗುಂಜಿಗಳ ವರೆಗೆ. ಇದರ ಚೂರ್ಣವನ್ನು ಜೇನುತುಪ್ಪದಲ್ಲಾಗಲೀ, ಇತರ ಅನುಪಾನಗಳಲ್ಲಿಯಾಗಲೀ ಸೇವಿಸಬಹುದು. ಉಪಯೋಗ: ಲವಂಗವು ಪಾಚಕ, ದೀಪಕ ಮತ್ತು ಪಾಚಕ. ಲವಂಗವನ್ನು ಅಡಿಗೆಗಳಲ್ಲೂ ಉಪಯೋಗಿಸುತ್ತಾರೆ. ಇದನ್ನು, ಭೇದಿಯಾಗುವಾಗ ಹೊಟ್ಟೆ ಕಡಿತವನ್ನು ನಿಲ್ಲಿಸುವುದಕ್ಕೂ ವಾತವನ್ನು ಹರಿಸುವುದಕ್ಕೂ ಉಗುಳನ್ನು ಹೆಚ್ಚಿಸುವುದಕ್ಕೂ ಉಪಯೋಗಿಸುತ್ತಾರೆ. ಇದರ ಜೊತೆಯಲ್ಲಿ ಇನ್ನು ಬೇರೆ ಮಸಾಲೆ ಸಾಮಾನುಗಳನ್ನೂ ಮತ್ತು ಸೈಂಧವ ಲವಣವನ್ನೂ ಬೆರಸಿ ಹೊಟ್ಟೆನೋವಿಗೂ, ಅಜೀರ್ಣಕ್ಕೂ, ವಾಂತಿಗೂ ಉಪಯೋಗಿಸಬಹುದು. ಲವಂಗದ ಕಷಾಯವು ಬಾಯಾರಿಕೆಯನ್ನು ಹರಿಸುತ್ತದೆ. ಲವಂಗವು ಗಂಟಲುನೋವನ್ನು ಮತ್ತು ಹಲ್ಲುನೋವನ್ನು ಕಡಿಮೆ ಮಾಡುತ್ತದೆ. ಗಂಟಲು ರೋಗಗಳಿಗೆ ಲವಂಗವನ್ನು ಸುಟ್ಟು ಅದರ ಹೊಗೆಯನ್ನು ನುಂಗಿದರೆ ಒಳ್ಳೆಯದು. ಲವಂಗವು ಪಿತ್ತವಿಕಾರಗಳು, ಜ್ವರ, ವಾಂತಿ, ಗರ್ಭಿಣಿಯರ ವಾಂತಿ, ಅರುಚಿ, ಕೆಮ್ಮು, ನೆಗಡಿ, ತಲೆನೋವು, ರಕ್ತಸ್ರಾವ, ಮಂದಾಗ್ನಿ, ಇವುಗಳಲ್ಲೆಲ್ಲಾ ಉಪಯೋಗವಾಗುತ್ತದೆ. ಇದು ಹೃದಯ, ಯಕೃತ್, ಗುಲ್ಮ, ಜಠರ, ಸಣ್ಣಕರುಳು, ದವಡೆ ಇವುಗಳಿಗೆ ಬಲಕೊಡುತ್ತದೆ. ಲವಂಗವು ಬಲಕಾರಿ ಮತ್ತು ಸೂತಿಕಾ ಜ್ವರವನ್ನೂ ಹೊಟ್ಟೆಯ ಉರಿಯನ್ನೂ ನಿಲ್ಲಿಸುತ್ತದೆ. ಲವಂಗವನ್ನು ಹಾಲಿನಲ್ಲಿ ಅಥವಾ ನೀರಿನಲ್ಲಿ ಗಂಧಮಾಡಿ ಹಚ್ಚಿದರೆ ವಾತದಿಂದ ಉಂಟಾದ ತಲೆನೋವನ್ನು ಕಡಿಮೆ ಮಾಡುತ್ತದೆ.

'ಪ್ರೇಮ'

ಸೌಂದರ್ಯ—ಪ್ರಯೋಜನ

"ಜನರಿಗೆ ಪ್ರಯೋಜನಕರವಾದುದನ್ನು ನಾನು ಮಾಡಿದರೆ ದೇವರು ಅದನ್ನು ಕೊಂಡಾಡುತ್ತಾನೆ. ಆದರೆ ನಾನೊಂದು ಕವಿತೆಯನ್ನು ಜನರಿಗಾಗಿ ಹಾಡಿದೆನೆಂದರೆ ಆತನ ಪ್ರೇಮವೇ ನನ್ನದಾಗುವುದು. ಹೀಗೆಂದು ನನ್ನ ಭಾವನೆ. ಉಪಯೋಗದಲ್ಲಿರುವ ಪ್ರಪಂಚಕ್ಕೆ ನಾವು ಗೌರವವನ್ನೀಯಬೇಕು. ಅದರ ಕ್ರಮನಿಯಮಗಳನ್ನು ತಿಳಿದುಕೊಳ್ಳಬೇಕು! ಇಲ್ಲದಿದ್ದರೆ ನಮಗೆ ಶಿಕ್ಷೆಯಾಗುವುದು. ಆದರೆ ಸೌಂದರ್ಯ ಪ್ರಪಂಚವು ಹಾಗಲ್ಲ, ಅದು ಎಷ್ಟು ದಿನವಾದರೂ ನಮಗಾಗಿ ಕಾದು ಕುಳಿತುಕೊಳ್ಳುತ್ತದೆ. ಅವುಗಳನ್ನು ನೋಡದೆ ನಾವು ದಾರಿ ಸಾಗಿದರೂ ಗುಲಾಬಿಯ ಹೂಗಳು ನಗುಮೊಗದಿಂದ ಸುಂದರವಾಗಿಯೇ ಇದ್ದುಕೊಂಡು ಅವುಗಳನ್ನು ನಾವು ಕಂಡು ಆನಂದಿಸುವ ವರೆಗೂ ಸುಮ್ಮನೆ ಕಾದುಕೊಂಡಿರುತ್ತದೆ. ಪ್ರೇಮವೆಂಬುದು ಈ ಪ್ರಪಂಚದಲ್ಲಿ ನಮಗೆ ಎಡೆಬಿಡದೆ ಮಾಡುತ್ತಿರುವ ಉಪಕಾರವನ್ನು ನಾವು ತಿಳಿಯದೆ ಕಡೆಗಣಿಸಿದರೂ ನಮಗೆ ಶಿಕ್ಷೆಯಾಗುವುದಿಲ್ಲ. ಆದುದರಿಂದ ಪ್ರೇಮದ ಮೂಲಕ ನಾವು ಈ ಪ್ರಪಂಚದ ಹೃದಯವನ್ನು ಪ್ರವೇಶಿಸಿದರೆ ಕವಿಶ್ರೇಷ್ಠ ಪರಮಾತ್ಮನಿಗೆ ಆನಂದವಾಗುವುದು. ಈ ವಿಚಾರವಾಗಿ ಯಾವ ಸಹಾನುಭೂತಿಯನ್ನೂ ತೋರಿಸಬಹುದೆಂಬ ಸ್ವಾತಂತ್ರ್ಯವನ್ನು ಆತನು ನಮಗಿತ್ತಿರುತ್ತಾನೆ. ಆತನ ಸೃಷ್ಟಿ ಸೌಂದರ್ಯವನ್ನು ನೋಡಿ ನಲಿಯಬಹುದು, ಇಲ್ಲದಿದ್ದರೆ ಕೈಬಿಡಬಹುದು. ಆದರೆ ದುರ್ಲಭವಾದ ಆ ಸಹೃದಯ ವಿಶೇಷವು ಬದಿಗೆ ಪ್ರಪಂಚದ ಪೂರ್ಣತೆಯನ್ನು ಕಂಡು ನಮ್ಮ ಹೃದಯವು ಕರಗುವುದಕ್ಕೆ ಮೊದಲಾದರೆ ನಮ್ಮ ಬಾಳುವೆಯು ಯಶಸ್ವಾಗುವುದು."

(ರವೀಂದ್ರನಾಥ ಟಾಗೂರ್), 'ಮೊಡರ್ನ್ ರಿವ್ಯೂ'



(ನವಾನಗರದ ರಾಣಾಜಿಯವರ ಅರಮನೆ) "ವೀರ ಬಭ್ರುವಾಹನ" ಚಲಚ್ಚಿತ್ರದೊಳಗಿನ ಒಂದು ದೃಶ್ಯ.

ಅನ್ಯಾಯಗಳ ವ್ಯಾಪಾರ.

ಜೊಹ್ನ್ ಡಿಲ್ಲಿಂಜರ್ ಎಂಬ ದರೋಡೆಗಾರನು ಅಮೇರಿಕಾ ದೇಶವನ್ನು ತನ್ನ ಅನ್ಯಾಯಗಳ ಸುಂದುಳೆಯಿಂದ ತೊಯ್ದುಬಿಟ್ಟನು. ಕೊಲೆ ದರೋಡೆಗಳು ಅಧಿಕವಾದುವು. ಈ ಅನ್ಯಾಯಗಳ ಪರಿಣಾಮವಾಗಿ ೧೫ ಬಿಲ್ಲಿಯನ್ ಡೊಲ್ಲರ್‌ಗಳಿಗಿಂತಲೂ ಹೆಚ್ಚಿನ ದ್ರವ್ಯವು ವರ್ಷಂಪ್ರತಿ ನಷ್ಟವಾಗುತ್ತದೆ. ಅನ್ಯಾಯಗಳು ಪಾತಕೀಯಿಂದ ಅಮೇರಿಕನರು ಕಂಗೆಟ್ಟಿದ್ದಾರೆ. ಭೂಗರ್ಭವಾಸಿಗಳಾಗಿರುವ ಈ ಕೊಲೆಗಾರರ ಸಂಪೂರ್ಣ ನಿರ್ಮೂಲನವನ್ನು ಅದಗಿಸಿದರ ದೇಶದ ಆರ್ಥಿಕ ದುಸ್ಥಿತಿಯು ಹೆಚ್ಚುವುದೆಂಬುದರಲ್ಲಿ ಎರಡು ಮತವಿಲ್ಲ. ಸದ್ಗುಣ ದುರ್ಗುಣಗಳ ವರ್ಧನೆಗೆ ಚಲಚ್ಚಿತ್ರಗಳು ಕಾರಣೀಭೂತವಾಗಿವೆಯೆಂದು ಅಲ್ಲಲ್ಲಿ ಕೇಳಬರುತ್ತಿದೆ. ಈ ವಿಷಯವಾಗಿ ನಾವು ಒಬ್ಬ ಪ್ರಸಿದ್ಧ ದರೋಡೆಯವನ ಭೇಟಿ ಮಾಡಿದೆವು. ಅವನು ತನ್ನ ಜೀವನದಲ್ಲಿ ಒಂದು ಮಿಲಿಯ ಡೋಲರ್‌ಗಳಿಗಿಂತ ಹೆಚ್ಚಿನ ಕಳವಿನ ಅಧಿಕಾರ ಪಡೆದವನು. ಅವನ ಸಂಕ್ಷಿಪ್ತ ಸೂಚನೆ ಹೀಗೆ:— "ಚಲಚಿತ್ರಗಳೆಂಬವು ನಮ್ಮ ದುಷ್ಕರ್ಮ ಪ್ರೇರಣೆಗೆ ಪ್ರಮುಖ ಸಾಧನ. ಅನ್ಯಾಯಗಳನ್ನು ಪ್ರಕಟಿಸುವುದಲ್ಲದೆ, ಅವುಗಳ ಶಿಫಾರಸನ್ನೂ, ಅನುಮೋದನೆಯನ್ನೂ ಈ ಚಲಚ್ಚಿತ್ರಗಳು ಮಾಡುತ್ತವೆ; ಕಳ್ಳತನ ಮಾಡುವುದು ಹೇಗೆ—ತಪ್ಪಿಸಿಕೊಳ್ಳುವುದು ಹೇಗೆಂಬುದಗೆ ಅದು ಪಾಠಕೊಡುತ್ತವೆ. ಪತ್ರಿಕಾ ಪ್ರಪಂಚಕ್ಕಿಂತಲೂ ಚಲಚ್ಚಿತ್ರ ಪ್ರಪಂಚವು ಅಧಿಕ ಪ್ರೇರಕ ವಿಷಯಗಳಾಗಿವೆ. ಅನೀತಿಯು ಹೆಚ್ಚಲು ಕಾರಣವಾದ ವಿಷಯವೊಂದು ಈ ನಾಗರಿಕತೆಯ ದಿನದಲ್ಲೂ ಇದೆಯೆಂದಾದರೆ: ಚಲಚ್ಚಿತ್ರಗಳು ತಮಗೆ ಬೇಕಾದುದನ್ನು ಸಾರ್ವಜನಿಕರಿಗೆ ತೋರುತ್ತದೆ. "ಅಂತಹ ಅನೀತಿ ಬೋಧಕ ಚಿತ್ರಗಳಿಗೆ ಜನತೆಯು ಮರುಳುಗೊಳ್ಳುತ್ತದೆ. ಜನತೆಯು ನೋಡಿದಳಿಗೆ ಫಲವನ್ನುಣ್ಣುತ್ತಿದೆ. ಆದರೂ ಕೆಲವರು, ಧಾರ್ಮಿಕ ವಿಚಾರ ಪ್ರಚಾರಕ್ಕೆ ದಾರಿಯುಂಟೆಯೋ ಎಂದು ಇಗರ್ಜಿಗಳತ್ತ ಕಡೆ ನೋಡುತ್ತಾರೆ.

'ದಿ ಕ್ರಿಶ್ಚಿಯನ್ ರಿಜಿಸ್ಟರ್'

ಬಿ. ಜಮೆಸ್ ವಿ ರಟ್ಲೆಜ್.

ಶಬ್ದಮಾಡದ ಮೋಟರ್‌ಸೈಕಲ್.

ಒಬ್ಬ ಪರ್ಶಿಯನ್ ಶೋಧಕನು ಒಂದು ಮೋಟರ್ ಸೈಕಲನ್ನು ಕಂಡುಹಿಡಿದಿರುತ್ತಾನೆ. ವಿದ್ಯುಚ್ಛಕ್ತಿಯಿಂದ ಸೈಕಲ್ ಓಡುತ್ತದೆ. ಜೋರಾಗಿ ಒಂದು ಘಂಟೆಗೆ ೧೫ ಮೈಲು ಓಡುತ್ತದೆ. ಇದರ ಭಾರವು ೮೦ ರತ್ತಲು.

ಕೊಮರ್ಸ್ ಎಂಡ್ ಇಂಡಸ್ಟ್ರಿ.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.

	ರೂ.	ಅ.	ಪೈ.
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0

ಸಿವಿಕ್ಸ್ ಮತ್ತು ನೀತಿಬೋಧೆ.

	ರೂ.	ಅ.	ಪೈ.
ಐದನೇ ದರ್ಜೆ	0	8	0
ನಾಲ್ಕನೇ ,,	0	8	0
ಮೂರನೇ ,,	0	2	6
ಎರಡನೇ ,,	0	2	0

ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.

	ರೂ.	ಅ.	ಪೈ.
ಐದನೇ ದರ್ಜೆ	0	8	0
ನಾಲ್ಕನೇ ಸಚಿತ್ರ	0	8	0

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

	ರೂ.	ಅ.	ಪೈ.
ಎರಡನೇ ದರ್ಜೆ	0	3	6
ಮೂರನೇ ,,	0	8	0
ನಾಲ್ಕನೇ ,,	0	8	0
ಐದನೇ ,,	0	4	0

ಅಜ್ಜಿ ಕಥೆಗಳು (ಸಚಿತ್ರ).

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು.
ಮೆಣಸಿನ ಕಾಳಪ್ಪ.
ಅಗಸ ಜೆ ಮುದ್ದೆ.
ಇಲಿಗಳ ಥಕ್ಕ ಥೈ.
ಅಂಗಳ ದುಗ್ಗ.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ: 1ಕ್ಕೆ 0–0–9)

ಮತ್ತು

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸಮಾಜಶಾಸ್ತ್ರ' ಸಿದ್ಧವಾಗುತ್ತಿದೆ.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

1935ರ ಡೈರಿಗಳು, ಎಲ್ಲಾ ಕೋರ್ಟು ಫಾರ್ಮುಗಳು, ಬೇಕೆಂದಾದರೆ

ಶಾರದಾ ಛಾಪಖಾನೆ, ಮಂಗಳೂರು.

[illegible]

[illegible] ಎಸ್. ಕೆ. ರಾಮಸ್ವಾಮಿ ಅಯ್ಯರ್, [illegible] ಈ ಸಂದರ್ಭದಲ್ಲಿ, ಭಾಗವಹಿಸಿ, [illegible] ಶ್ರಮವಹಿಸಿದ್ದರು.

ಸ್ತ್ರೀಯರ ಸ್ವದೇಶೀ ವಸ್ತು ಪ್ರದರ್ಶನ.

ಮುಂಬಾಯಿ ಕಾಂಗ್ರೆಸ್ಸಿನ ಸಂದರ್ಭದಲ್ಲಿ, ಅಲ್ಲಿಯ ಪುರಭವನದಲ್ಲಿ ಜರುಗಿಸಲ್ಪಟ್ಟ ಸ್ತ್ರೀಯರ ಸ್ವದೇಶೀ ವಸ್ತು ಪ್ರದರ್ಶನವು ಒಂದು ವಾರದ ತನಕ ನಡೆದು, ಕಳೆದ ತಾ. ೩ರಲ್ಲಿ ಕೊನೆಗೊಂಡಿತು. ಧಾರವಾಡ, ಕಾಥಿಯಾವಾಡ, ಪೂನಾ, ಮೊದಲಾದ ಕಡೆಗಳ ವಿಶೇಷ ವಸ್ತುಗಳು ಪ್ರದರ್ಶಿತವಾಗಿದ್ದುವು. ಮಹಾತ್ಮಾ ಗಾಂಧಿಯವರೂ, ಕಲ್ಕತ್ತೆಯ "ಮೋಡರ್ನ್ ರಿವ್ಯೂ" ಸಂಪಾದಕರಾದ ಶ್ರೀ ರಮಾನಂದ ಚಟರ್ಜಿಯವರೂ ಪ್ರದರ್ಶನಕ್ಕೆ ದಯಮಾಡಿಸಿ, ನೋಡಿ, ಆನಂದಪಟ್ಟಿರುವರು.

ಕರುಂಗುರ್ಚಿ ಕೊಲೆಯ ಪ್ರಕರಣ.

ಕರುಂಗುರ್ಚಿ ಕೊಲೆಯ ಪ್ರಕರಣದಲ್ಲಿ, ಜೀವದಾನಕ್ಕಾಗಿ ಮದ್ರಾಸು ಹೈಕೋರ್ಟಿಗೆ ವಿನಂತಿಸಿಕೊಂಡ, ಆಪಾದಿತ ರಾಮಾನುಜಮನ ಮನವಿಯು ತಿರಸ್ಕೃತವಾಯಿತು. (ಈತನು ಒಂದು ಗ್ರಾಮದಲ್ಲಿ ಚಿಕ್ಕ ಜಮೀನುದಾರ. ಸೀತಮ್ಮಾಳ್ ಎಂಬಾಕೆಯೊಡನೆ ಅಪವಿತ್ರ ಸಂಬಂಧ ಬೆಳೆಸಿ, ಆಕೆಯನ್ನು ಮದ್ರಾಸಿಗೆ ಕರೆತಂದು, ಆಭರಣಗಳನ್ನು ತೆಗೆದು, ಕೊಲೆಮಾಡಿ, ಶವವನ್ನು ಪೆಟ್ಟಿಗೆಯಲ್ಲಿ ತುಂಬಿ, ಕರುಂಗುರ್ಚಿ ರೈಲ್ವೇ ಸ್ಟೇಶನಿಗೆ 'ಪಾರ್ಸೆಲ್' ಮಾಡಿದವನು.)

ಆದರೆ, ಪುನರ್ವಿಚಾರಣೆಯನ್ನು ಸ್ವೀಕರಿಸುವ ಕುರಿತಾದ ಪರ್ಯಾಲೋಚನೆಯಾಗಲಿದೆ.

ನಾಗಪುರದ ಕಸಾಯಿಗಳ ವಿಜಯ.

ನಾಗಪುರ ಸಿವಿಲ್ ಸ್ಟೇಷನ್ ಪ್ರದೇಶದೊಳಗೆ ಆಡುಗಳನ್ನೂ ಕುರಿಗಳನ್ನೂ ಸಾಯಂಕಾಲದ ನಂತರವೇ 'ಖೂನ' ಮಾಡಬೇಕೆಂದು ಮುನಿಸಿಪಾಲಿಟಿಯು ಕಟ್ಟಾಜ್ಞೆ! ಇದನ್ನು ಕಸಾಯಿಗಳೆಲ್ಲ ವಿರೋಧಿಸಿ, ಮನವಿಮಾಡಿ, ಪುನಃ ಹಿಂದಿನಂತೆಯೇ ಬೆಳಗ್ಗೆ ಖೂನಾ ಮಾಡಬಹುದೆಂಬ ಹುಕುಮು ಪಡೆದರು. ಇದನ್ನು ನಿಷೇಧಿಸಿ ಮುನಿಸಿಪಲ್ ಅಧ್ಯಕ್ಷರೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವರು.

ಮದ್ರಾಸು ಗವರ್ನರರಿಗೆ ವಿದಾಯ ಸತ್ಕಾರ.

ಮಾನ್ಯ ಮದ್ರಾಸು ಗವರ್ನರರಾದ ಸರ್ ಜೋರ್ಜ್ ಸ್ಟೇನ್ಲಿಯವರು ಈ ತಿಂಗಳಲ್ಲಿ ತಮ್ಮ ಸ್ಥಾನದಿಂದ ನಿವೃತ್ತರಾಗುವರು. ಈ ಸಂದರ್ಭದಲ್ಲಿ ಅವರಿಗೆ ಮದ್ರಾಸಿನ ಶರೀಫರಾದ ಶ್ರೀ ಎಮ್. ಬಾಲಸುಂದರಂ ನಾಯ್ಡುರವರು ಇದೇ ತಾ. ೪ರಲ್ಲಿ ವಿದಾಯಸತ್ಕಾರದ ನ್ನಿತ್ತರು. ಅನೇಕ ಪ್ರಮುಖರು ಈ ಸತ್ಕಾರಕೂಟಕ್ಕೆ ಆಮಂತ್ರಿತರಾಗಿದ್ದರು. ಮಾನ್ಯ ಗವರ್ನರರ ನಿಷ್ಕಾಮ ಸೇವೆಯನ್ನು ಪ್ರಶಂಸಿಸಿ, ಅವರ ಕಾರ್ಯದಕ್ಷತೆ–ಸೌಮ್ಯಸ್ವಭಾವ–ದಯಾಶೀಲಾದಿಗಳನ್ನು ಬಗೆಬಗೆಯಾಗಿ ವರ್ಣಿಸಿ ಭಾಷಣಗಳಾದುವು. ಮಾನ್ಯ ಗವರ್ನರರು ಅತಿಥಿಗಳಿಗೆ ಸಂದರ್ಭೋಚಿತವಾದ ಉತ್ತರವೀಯುತ್ತ, ಈ ಪ್ರಾಂತ್ಯದ ಮತ್ತು ದೇಶದ ಸುಖಸ್ಮರಣೆಯನ್ನು ತನ್ನೊಂದಿಗೆ ಒಯ್ಯುವೆನೆಂದು ಹೇಳಿ, ಹಿಂದೀಯರ ಮೇಲಿರುವ ತನ್ನ ಪ್ರೀತಿ–ಆದರಗಳನ್ನು ವ್ಯಕ್ತಪಡಿಸಿ ಭಾಷಣಮಾಡಿದರು.

ಕೌನ್ಸಿಲಿನಲ್ಲಿಯೂ ಪ್ರಶಂಸಾಪರ ಭಾಷಣಗಳಿದ್ದುವು.

ಸಾಲಿಗರ ಮಸೂದೆಯು ಶಾಸನವಾಗಿ ಮಂಜೂರಾಯಿತು.

ಅನೇಕ ತಿಂಗಳುಗಳಿಂದ ಚರ್ಚೆಯಲ್ಲಿದ್ದ ಸಾಲಿಗರ ಮಸೂದೆ (Money Lenders Bill) ಎಂಬುದು ಇದೇ ತಾ. ೩ರಲ್ಲಿ ಮದ್ರಾಸು ನ್ಯಾಯವಿಧಾಯಕ ಸಭೆಯಲ್ಲಿ ಶಾಸನವಾಗಿ ಮಂಜೂರಾಯಿತು. ದೇಶದಲ್ಲೆಲ್ಲ ಅನೇಕರು ವಿಪರೀತವಾದ ಬಡ್ಡಿಯ ಮೇಲೆ ಸಾಲವನ್ನು ಕೊಡುವುದನ್ನು ನಿಲ್ಲಿಸುವುದಕ್ಕಾಗಿ ಕೌನ್ಸಿಲರು ಈ ಮಸೂದೆಯನ್ನು ಮುಂದಕ್ಕೆ ತಂದರು. ಶ್ರೀ ಸಿ. ವಾಸುದೇವನೆಂಬವರು ಇದನ್ನು ಮುಂದಿಡುತ್ತಾ [illegible]

[illegible] ಶ್ರೀ ಟಿ. ಎ. ರಾಮಲಿಂಗಮ್ ಚೆಟ್ಟಿ ಮತ್ತು ಶ್ರೀ ಕೆ. ಮುನಿಸ್ವಾಮಿ ನಾಯುಡುರವರ ಸಾಹಸದಿಂದಾಗಿ ಜೋನ್ ರೆಂಬವರು ಮಸೂದೆಯನ್ನು ಸ್ವೀಕರಿಸಿದರು; ನಂತರ ಎಲ್ಲರ ಅನುಮತಿಯಿಂದ ಅದು ಮಂಜೂರಾಗಿ ಶಾಸನವಾಗುವುದೆಂದಾಯಿತು. ಈ ಸಂದರ್ಭದಲ್ಲಿ ಕುಮಾರರಾಜ ಎಸ್. ಎ. ಮುತ್ತಯ್ಯ ಚೆಟ್ಟಿಯಾರರು ಕೆಲವು ಸೂಚನೆಗಳನ್ನು ಮುಂದಿಡುತ್ತಾ, ಸರಕಾರವು ಬಡ್ಡಿ ನಿರ್ದೇಶದ ಕುರಿತಾಗಿಯೂ ಶೀಘ್ರವಾಗಿ ಯೋಚಿಸಬೇಕೆಂದು ತಿಳಿಸಿದರು. ಖಾ. ಹಮೀದ್ ಖಾನ್‌ರವರು ಕೂಡಾ ಅವರ ಮತವನ್ನೊಪ್ಪಿ, ಸರಕಾರವು ಬಡ್ಡಿಯ ಸಂಬಂಧವಾದ ಮೆಂಬರರ ಸೂಚನೆಯನ್ನು ಅನುಮೋದಿಸಿ, ಸೇಕಡಾ ೬ರಂತೆ ಬಡ್ಡಿಯನ್ನಾದರೂ ಇಡಬೇಕೆಂದರು.

ಬ್ರಿಟಿಷ್ ಮುನಿಸಿಪಲ್ ಚುನಾವಣೆಗಳು. ಲೇಬರ್ ಪಕ್ಷದ ವಿಜಯ.

ಬ್ರಿಟನಿನ ಮುನಿಸಿಪಲ್ ಚುನಾವಣೆಗಳು ಕಳೆದ ವಾರ ನಡೆದುವು. ಲೇಬರ್ ಪಕ್ಷಕ್ಕೆದುರಾಗಿ, ಪ್ರಚಾರಕಾರ್ಯವು ಪತ್ರಿಕೆಗಳ ಹಾಗು ಪತ್ರಕಗಳ ಮೂಲಕ ಯಥೇಚ್ಛ ನಡೆದಿತ್ತು. ಆದರೆ ಚುನಾವಣೆಯ ದಿನ (ತಾ. ೨) ಲೇಬರ್ ಪಕ್ಷದ ಕಡೆಗೇ ಬಹ್ವಂಶವು ಒಲಿದುದು ಕಂಡುಬಂದುದನ್ನು ನೋಡಿ ಕನ್ಸರ್ವೇಟಿವರು ದಂಗುಬಡೆದಂತೆ ಮೌನವಾಗಿರುವರು.

ಇಂದಿನ ಕನ್ಸರ್ವೇಟಿವ್ ಸರಕಾರದ ಧೋರಣೆಯ ವಿಷಯಕವಾದ ಜನರ ಅನಾದರವು ಈ ಚುನಾವಣೆಗಳಲ್ಲಿ ವ್ಯಕ್ತವಾದೆಯೆನ್ನುವರು.

ಮಂಚಕುವೋ ಸರಕಾರದ ಹೊಸ ಧೋರಣೆ.

ಹೊಸ ಮಂಚುಕುವೋ ಸರಕಾರವು, ಸೀಮೆಯೆಣ್ಣೆಯ ವ್ಯಾಪಾರವನ್ನು ತನ್ನ ಸ್ವಾಧೀನವೇ ಇರಿಸುವುದೆಂದು ಪ್ರಕಟವಾಗಿದೆ. ಇದು, ಒಂಭತ್ತು ರಾಷ್ಟ್ರಗಳು ಕೂಡಿ ಮಾಡಿರುವ ಕರಾರಿನ ಉಲ್ಲಂಘನವೆಂದು ಬ್ರಿಟನ್, ಸಂಯುಕ್ತ ಅಮೇರಿಕ ಮತ್ತು ಹೊಲ್ಲೆಂಡ್ ಈ ಮೂರು ಸರಕಾರಗಳ ನಿಷೇಧಘೋಷ.

ಔಷಧಕ್ಕಾಗಿ ನೋಬೆಲ್ ಬಹುಮಾನ.

ಈ ವಿಭಾಗದ ೧೯೩೪ನೇ ಇಸವಿಯ ನೋಬೆಲ್ ಬಹುಮಾನವು ಅಮೇರಿಕದ ಮೂವರು ಡಾಕ್ಟರುಗಳಿಗೆ, ರಕ್ತದ ಮೇಲಿನ ಕೆಲವು ಸಂಶೋಧನೆಗಳ ಬಗ್ಗೆ, ಕೊಡಲಾಯಿತು. ಕಳೆದ ವರ್ಷವೂ ಈ ಬಹುಮಾನವು ಅಮೇರಿಕಕ್ಕೆ ಸಂದಿತ್ತು.

ಜಾಗತಿಕ ಸ್ಕೌಟ್ ಸಮ್ಮೇಳನ.

ಜಾಗತಿಕ ಸ್ಕೌಟ್ ಸಮ್ಮೇಳನವು ಈ ವರ್ಷ, ದಶಂಬರ ತಿಂಗಳಲ್ಲಿ, ಆಸ್ಟ್ರೇಲಿಯದ ಫ್ರಾಂಕ್‌ಸ್ಟನ್ ಎಂಬಲ್ಲಿ ಜರಗುವುದು. ಇದು ಸಮುದ್ರ ಕರಾವಳಿಯ ಒಂದು ಪ್ರದೇಶವಾಗಿದ್ದು, ಮೆಲ್ಬೊರ್ನ್ ನಗರದಿಂದ ೩೩ ಮೈಲು ದೂರದಲ್ಲಿದೆ. ೩೫೦ ಎಕ್ರೆ ಸ್ಥಳವನ್ನು ಈ ಮಹಾಸಮಾರಂಭಗಳಿಗಾಗಿ ಸಿದ್ಧಗೊಳಿಸುತ್ತಿರುವರು. ಸುಮಾರು ೧೫೦೦೦ ಸ್ಕೌಟರು ಸೇರಬಹುದೆಂದು ನಿರೀಕ್ಷಿಸಲಾಗಿದೆ. ಸ್ಕೌಟ್ ಚಳವಳದ ಜನಕರಾದ ಲೋರ್ಡ್ ಬೇಡನ್ ಪೊವೆಲ್ಲರು ಅಲ್ಲಿಗೆ ದಯಮಾಡಿಸಲಿದ್ದಾರೆ. ಸಮ್ಮೇಳನದ ಪ್ರಾರಂಭೋತ್ಸವವನ್ನು ಆಸ್ಟ್ರೇಲಿಯಾದ ಗವರ್ನರರಾದ ಸರ್ ಇಸಾಕ್ ಇಸಾಕ್ಸರವರು ನೆರವೇರಿಸುವರು. ಪಂಜಾಬ ಬೋಯ್ ಸ್ಕೌಟ್ ಮುಖ್ಯ ಕಚೇರಿಯಲ್ಲಿ ೩೭ ಮಂದಿ ಹಿಂದೀ ಸ್ಕೌಟರು ಅಲ್ಲಿಗೆ ತೆರಳಲು ಸನ್ನದ್ಧರಾಗುವ ತರಬೇತಿ ಪಡೆಯುತ್ತಿರುವರು.

ಜನಾಂಗ ಸಂಘಕ್ಕೆ ವಂತಿಗೆ.

ಜನಾಂಗ ಸಂಘಕ್ಕೆ ಸೇರಿದ ರಾಷ್ಟ್ರಗಳು ವರ್ಷಂಪ್ರತಿ ತೆರುವ ಚಂದಾವನ್ನು ಯಾರು ಎಷ್ಟು ಕಡಿಮೆ ಮಾಡಬಹುದೆಂಬ ಕುರಿತು ಚರ್ಚಿಸಲು ಪ್ಯಾರಿಸಿನಲ್ಲಿ ಸೇರಿದ ಜನಾಂಗ ಸಂಘದ ಸಮಿತಿಯು, ಒಂಭತ್ತು ರಾಷ್ಟ್ರಗಳಿಗೆ ರಿಯಾಯತಿ ತೋರಿದೆ. ಆ ಪೈಕಿ, ಇಂಡಿಯವು ಸೇಕಡಾ ಐದನ್ನು ಕಡಿಮೆ ಮಾಡಬಹುದೆಂಬ ನಿರ್ಧಾರವಾಗಿದೆಯಾಗಿ ತಿಳಿಯಬರುತ್ತದೆ.

ಸಂಕ್ಷಿಪ್ತ ವಾರ್ತೆ.

[illegible] ಶಾಖಾ ನಗರಗಳಲ್ಲೇ ಹಾಳುಬಿದ್ದು, ದುರುಪಯೋಗವಾಗುತ್ತದೆಂದು [illegible] ವಿಚಾರಕರಾದ ರೆವ. ಎಡ್ವರ್ಡ್ ತೋಂಪ್ಸನರ ಪ್ರವಾದ.

ಪ್ರಪಂಚದ ಯಾವ ಭಾಗದಲ್ಲಿಯೂ ಎಲ್ಲ ಕಡೆಗಳ ಸಮಯವನ್ನು ಸರಿಯಾಗಿ ತೋರಿಸುವ ಒಂದು ಗಡಿಯಾರವನ್ನು ಪ್ರೊಫೆಸರ ಬಿ. ಜೆ. ಎಚ್. ವಿಲ್ಲಿಸ್ ಎಂಬವರು ಕಲ್ಪಿಸಿರುವರು.

ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಬಗ್ಗೆ ಕನ್ನಡ ವಿದ್ಯಾರ್ಥಿ ಮಂಡಲವು ಒಂದು ಪರಿಪತ್ರವನ್ನು ಹೊರಡಿಸಿದೆ.

ಲೆಫ್ಟಿನೆಂಟ್ ಮಾರ್ಟಿನ್ ಲಿಂಡ್ಸೇಯವರ ನೇತೃತ್ವದಲ್ಲಿ ಉತ್ತರಧ್ರುವದ ಪ್ರವಾಸಕ್ಕೆ ತೆರಳಿದ ಆಂಗ್ಲೇಯರ ಕೂಟವು, ಈ ವರೆಗೂ ದೃಗ್ಗೋಚರವಾಗಿರದ ಸುಮಾರು ೩೫೦ ಮೈಲುಗಳಷ್ಟು ಪ್ರಾಂತವನ್ನು ಕಂಡುಹಿಡಿದು, ಮರಳಿದರು.

ಸಹಕಾರ ಸಂಘಗಳ ಕಾರ್ಯವಿಧಾನಗಳ ತರಬೇತಿ ಬಗ್ಗೆ, ಮದರಾಸಿನಲ್ಲಿ, "ಸೆಂಟ್ರಲ್ ಕೋ-ಒಪರೇಟಿವ್ ಇನ್ಸ್‌ಟಿಟ್ಯೂಟ್" ಎಂಬ ಹೆಸರಿನಿಂದ ಒಂದು ಸಂಸ್ಥೆಯನ್ನು ಹೊಸದಾಗಿ ತೆರೆದಿರುವರು. ಇಲ್ಲಿ, ಒಂದು ವರುಷದ ಅವಧಿಗೆ ತರಬೇತಿ ಕೊಡುವರು, ಹಾಗೆ ತರಬೇತಿ ಹೊಂದಿದವರಿಗೆ ಸರಕಾರದ ಸರ್ವಿಸಿನಲ್ಲಿ ಕೆಲಸ ದೊರೆಯಬಹುದು.

ಕೋಕನಾಡದ ಪಿಠಾಪುರ ಮಹಾರಾಜರ ಅನಾಥ ಬಾಲಕಾಶ್ರಮದ ರಜತೋತ್ಸವವು ಇದೇ ತಾ. ೧೩ನೇ ಮಂಗಳವಾರ ದಿನ ಅತಿ ವಿಜೃಂಭಣೆಯಿಂದ ಜರಗಲಿರುವುದು. ಈ ಸಂಬಂಧವಾದ ಸಿದ್ಧತೆಯು ನಡೆಯುತ್ತಲಿರುವುದೆಂದು ತಿಳಿದುಬರುತ್ತದೆ.

ಡಿಲ್ಲಿಯಲ್ಲಿ ಮದರಾಸಿಗಳ "ದಕ್ಷಿಣ ಭಾರತ ಸಭೆ"ಯೊಂದು ಇದ್ದು, ಕಳೆದ ವಾರ "ಪಾದುಕಾ ಪಟ್ಟಾಭಿಷೇಕ" ಎಂಬ ತಮಿಳು ನಾಟಕವನ್ನಾಡಿದರು.

ಮದರಾಸಿನ ಮೇಯರರಾಗಿ ಶ್ರೀ ಎಸ್. ಎ. ಮುತ್ತಯ್ಯ ಚೆಟ್ಟಿಯವರು ಚುನಾಯಿಸಲ್ಪಟ್ಟಿರುವರು.

ಪೂರ್ವ ಬಂಗಾಳ ಮತ್ತು ಆಸ್ಸಾಮಿನ ಬೇರೆಬೇರೆ ಕೇಂದ್ರಗಳಲ್ಲಿ ಚುನಾವಣೆಗಳ ಪ್ರಚಾರ ಕಾರ್ಯ ನಡೆಸಲು ಡಾ। ಬಿದನ್ ಚಂದ್ರ ರೋಯಿಯವರು ವಿಮಾನದಲ್ಲಿ ಸಂಚರಿಸುತ್ತಿರುವರು.

ಕೊಂಗ್ರೆಸ್ ಉಮೇದ್ವಾರರನ್ನೆ ಚುನಾಯಿಸಿರಿ ಎಂಬ ವಿನಂತಿರೂಪವಾದ ಶ್ರೀ ಭುಲಾಭಾಯಿ ದೇಸಾಯಿಯವರ ಭಾಷಣವುಳ್ಳ ಗ್ರಾಮಫೋನ್ ರಿಕಾರ್ಡು ಮದರಾಸಿನ "ಮ್ಯೂಸಿಕಲ್ ಪ್ರೊಡಕ್ಟ್ಸ್ ಲಿಮಿಟೆಡ್" ಎಂಬ ಸಂಸ್ಥೆಯವರಿಂದ ಸಿದ್ಧವಾಗಿ ಮಾರಾಟಕ್ಕೆ ಬಂದಿದೆ.

IN THE COURT OF THE DISTRICT MUNSIF OF KASARAGOD.

O. P. No. 152 of 1934.

Between—

1 Beepathumma. 2 Abdulla Vali. 3. Mammunhi 4. Mariyumma. 5 Abdulla Khader. 6 Abdulla Rahiman—minors by their next-friend 1st Petitioner—Petitioners.

and

1 Aisabi. 2 Abdulla Rahiman—Respondents.

Please take notice that the Petitioners have filed the above petition in this Court for a Succession Certificate in the name of the 1st Petitioner to collect the debts due to the deceased Patel Jainaddin Beary and the said petition stands posted to 16—11—1934. Anybody having objections to the same should appear before the Court on or before that date; otherwise the petition will be decided exparte.

Kasaragod, 7—11—1934. K. P. Anantha Rao, Advocate for Petitioners.

ನೋಟಗಳು. NOTES

ಪಂಜಾಬ, ಬಂಗಾಳ, ಮಧ್ಯಪ್ರಾಂತ್ಯಗಳಲ್ಲಿ ಜ್ಯಾರಿಗೆ ಬಂದಿರುವ "ಮನಿಲೆಂಡರ್ಸ್ ಬಿಲ್ಲು"ಗಳಂತೆ ನಮ್ಮ ಪ್ರಾಂತ್ಯಕ್ಕೂ ಒಂದು ಬಿಲ್ಲು ಬರುವಂತಾಯಿತು. ಸಂತೋಷ!

* * *

ಆದರೆ, ಹಿಂದೆ ಅಧಿಕಾಧಿಕ ಬಡ್ಡಿಯಿಂದ ಸಾಲ ಪಡೆದವರು ಇನ್ನೊಂದು ಶತಮಾನದ ತನಕ ಸಲಿಸಲಾರದಷ್ಟು ನೂರ್ಬಡ್ಡಿಯ ಮೊತ್ತದ ಭಾರವನ್ನು ಹೊತ್ತುಕೊಂಡಿರಲು,— ಈ ಹೊಸ ಮಸೂದೆಯ ಪ್ರಯೋಜನವನ್ನು ಅವರು ಪಡೆವಂತೆ ದಾರಿಯಾವುದು?

* * *

ಸ್ತ್ರೀಯರಿಂಗಿಂತ ಪುರುಷರೇ ರುಚಿಕರವಾದ ಅಡಿಗೆಯನ್ನು ಮಾಡಬಲ್ಲರೆಂದು ಮಿಸ್. ಇ. ಎಮ್. ಕೆನ್ನಡಿ ಎಂಬ ಆಂಗ್ಲಮಹಿಳೆಯ ಅಭಿಪ್ರಾಯ.

* * *

ಕೆನ್ನಡಿಯವರು ಇಂಜಿನಿಯರರು; ಪುರುಷರ ಆ ಒಂದು ಸ್ಥಾನವನ್ನು ಇವರು ಕಿತ್ತುಕೊಂಡುದಕ್ಕೆ ಅದೇ ಕಾರಣವಾಗಿರಬೇಕು.

* * *

ಹುಟ್ಟುವಾಗಲೇ 'ಆಚಾರ್ಯ'ರಾದವರು ಬೆಳೆವಾ(ದಾ)ಗ 'ಪಂಡಿತ'ರಾಗುವುದಿದೆ. ಆ ಪಂಡಿತಪದವಿಯನ್ನು ಕಾಯ್ದುಕೊಳ್ಳಬೇಕಾದರೆ ಆಗಾಗ ಭಾಷಣಗಳನ್ನು ಕೊಡಬೇಕಾಗುವುದು.

* * *

ಪಂಡಿತರು ಭಾಷಣದಲ್ಲಿಯೂ ಯಮಕವಿಲ್ಲದೆ ಮಾತಾಡುವವರಲ್ಲ." ಪ್ರಾಸಕ್ಕೆ ಭಂಗ ಬರುವುದೆಂದು ಕಂಡರೆ ಶಬ್ದವನ್ನೆ ಕಡಿದು, ತಮಗೆ ಬೇಕಾದುದಷ್ಟನ್ನೆ, ಅರ್ಥ ಕೆಡದಂತೆ ಆಡುವ ಚಮತ್ಕಾರ ಅವರಲ್ಲಿದೆ.

* * *

ಉದಾಹರಣಾರ್ಥ:—'ಸೀತಾ ರಾಮ' ದಿಂದ ಸೀತೆಯನ್ನು ಕಡಿದು, 'ರೋಮ ನಗರ'ದಿಂದ ನಗರವನ್ನೆ ಅಳಿಸಿ, ರಾಮನೆದುರಾಗಿ ರೋಮವನ್ನಿಟ್ಟು ಪ್ರಾಸಬದ್ಧವಾಗಿ ಬರೆದು ಹಾಡುವವರಿದ್ದಾರೆ: ನವಕವಿತೆಗಳ ಆರಾಧಕರೆಲ್ಲರೂ ನೋಟ ಮಾಡಿಕೊಳ್ಳಲಿ!

* * *

"ತನಗೆ ಬೇಕಾದವರನ್ನು ಹೊಗಳುವುದು ಸಹಜವಾದರೂ, ಬೇಡವಾದವರನ್ನು (?) ತೆಗಳಬಹುದೇ?" ಎಂದೊರ್ವ ಬಾಹ್ಯದಾರರು ಪ್ರಶ್ನಿಸುತ್ತಾರೆ. ಬಹುದು; ಆದರೆ, ತೆಗಳುವವರು ಹೊಗಳಿದರೆ–ಅದನ್ನು ನಂಬಿ, ಸ್ವೀಕರಿಸದಿದ್ದರಾಯಿತು.

* * *

'ಕತೆಗಾರ'ನ ಮೊದಲನೆ ಸಂಪುಟವನ್ನು ವಿಮರ್ಶಿಸುತ್ತ, 'ಮಂಗಳೂರಿನವರ ಒಂದೇ ಒಂದು ಕತೆಯೂ, ಧಾರವಾಡದ ಎರಡೇ ಕತೆಗಳೂ ಮಾತ್ರ ಇವೆ'ಯೆಂದು ಪ್ರಲಾಪಿಸಿ, 'ನೊಂದನುಡಿ'ಯೊಂದು ತಲುಪಿದ್ದು, ಅದರಲ್ಲಿ 'ನೀವು ಇದನ್ನು ಪ್ರಕಟಿಸಲು ಹೆದರುವಿರಾ?' ಎಂದು ಒಂದು ಪ್ರಶ್ನೆಯೂ ಇದೆ.

* * *

ಇಂತಹ 'ವಿಮರ್ಶೆ' ಬರೆವ ಬದಲಾಗಿ ಒಂದು ಉತ್ತಮ ಕತೆಯನ್ನು ಬರೆದರೆ ಯಾವ ಪತ್ರಿಕೆಯೂ ಪ್ರಕಟಿಸುವುದೆಂದು ಇವರಿಗೆ ಧೈರ್ಯಕೊಡುವೆವು.

* * *

ಒಬ್ಬ ಹುಡುಗನು ಒಂದು ದಿನ ಸಾಲೆಯಿಂದ ಮರಳಿದಾಗ ಆತನ ಕುತ್ತಿಗೆಯಲ್ಲಿದ್ದ ಸರಪಣಿಯು ಕಾಣೆಯಾಗಿತ್ತು. ಅದು–ಆತನ ಉಪಾಧ್ಯಾಯರೊಡನೆ ಸಿಕ್ಕಿತೆಂದು ಸುದ್ದಿ.

* * *

ಇಂಗ್ಲಾಂಡು ಗೋಲ್ಡ್ ಸ್ಟೇಂಡಾರ್ಡನ್ನು ತೊಲಗಿದಂದಿನಿಂದ ಇದು ವಿಶೇಷ ಸುದ್ದಿ. ಆದರೆ, ಈ ಐಂದ್ರಜಾಲದ ಅದ್ಭುತವನ್ನು ತೋರಿದವರಿಗೆ ಬಹುಮಾನವಿಲ್ಲ; ಕಂಡವರು ಟಿಕೇಟು ಪಡಕೊಂಡುದೂ ಇಲ್ಲವೇ ಬುದರಿಂದಾಗಿರಬೇಕು.

* * *

ಬಂಗಾರದಂತಹ ಮಕ್ಕಳಿಗೆ ಬಂಗಾರವೇಕೆ?

ಮಂಗಳೂರು.

ಇದೇ ಕಳೆದ ಸೆಪ್ಟೆಂಬರದಲ್ಲಿ, ದಕ್ಷಿಣ ಭಾರತ ಹಿಂದೀ ಪ್ರಚಾರ ಸಂಘದವರು ನಡೆಸಿದ ಹಿಂದೀ ಪರೀಕ್ಷೆಗಳಲ್ಲಿ, ದಕ್ಷಿಣ ಭಾರತದಲ್ಲೆಲ್ಲಾ ಸರ್ವಪ್ರಥಮರಾಗಿ ರಾಷ್ಟ್ರಭಾಷೆಯಲ್ಲಿ ಮಂಗಳೂರಿನ ಶ್ರೀ ತಲಚೇರಿ ರಮಾನಾಥ ಪ್ರಭುಗಳವರೂ, ಕರ್ನಾಟಕದಲ್ಲಿ ಸರ್ವಪ್ರಥಮರಾಗಿ (ಪ್ರಾಥಮಿಕ) ಮಂಗಳೂರಿನ ಕುಮಾರಿ ಸುಮಿತ್ರಾಬಾಯಿ ಮತ್ತು ದ್ವಿತೀಯ ಸ್ಥಾನದಲ್ಲಿ ಕಾಸರಗೋಡಿನ ಶ್ರೀ ಬಿ. ರಾಮರಾವ್ ಇವರೂ; ಮಧ್ಯಮದಲ್ಲಿ, ಕರ್ನಾಟಕದಿಂದ ದ್ವಿತೀಯ ಸ್ಥಾನದಲ್ಲಿ ಮಂಗಳೂರಿನ ಶ್ರೀ ಎನ್. ಸೀತಾದೇವಿಯವರೂ, ತೇರ್ಗಡೆ ಹೊಂದಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಸಭೆಯು ಇದೇ ಬರುವ ತಾ. ೧೫ನೇ ಸೋಮವಾರ ಬೆಳಗ್ಗೆ ಘಂಟೆ ೧೦ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗಿ, ಅಧ್ಯಕ್ಷರ ಚುನಾವಣೆಯೂ, ಅಂದೇ ಸಾಯಂಕಾಲ ಉಪಾಧ್ಯಕ್ಷರ ಚುನಾವಣೆಯೂ ನಡೆಯುವುವು.

ತ್ರಿಶೂಲೇಶ್ವರ ದೇವಾಲಯದ ಕೆರೆಯಲ್ಲಿ, ಕಳೆದ ರವಿವಾರ, ಒಂದು ಶಿಶುವಿನ ಶವವು ಕಾಣಸಿಕ್ಕಿದೆ.

ಇಲ್ಲಿಯ ಶ್ರೀ ಬಿ. ಕೊರಗಪ್ಪ, ಬಿ. ಎ, ಬಿ. ಎಲ್. ಇವರು ಪೊನ್ನಾನಿಯ ಡಿ। ಮುನ್ಸೀಫರಾಗಿ ನೇಮಕ ಹೊಂದಿರುವರು.

ವೆನ್‌ಲೋಕ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದ ಕೊರಗನೆಂಬ ಗಾಣಿಗ ಜಾತಿಯವನು, ಕಳೆದ ತಿಂಗಳ ತಾ. ೨೬ನೇ ರಾತ್ರಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವನಾಗಿ ತಿಳಿದುಬಂದಿದೆ.

ಇದೇ ತಾ. ೩ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:—ಮರಣ ೨೧, ಜನನ ೬೪, ಮರಣಗಳ ಪೈಕಿ ನ್ಯೂಮೋನಿಯಾ ೩, ಕ್ಷಯ ೨, ಶ್ವಾಸಕಾಸ ೨, ಆಮಶಂಕೆ ೨, ಅತಿಸಾರ ೨, ಶಿಶುಜನನ ೧, ಆತ್ಮಹತ್ಯೆ ೧, ಮತ್ತು ಇತರ ಕಾರಣಗಳಿಂದ ೯, ವರದಿಯ ವಾರದಲ್ಲಿ ನಂಬ್ರ ೫ನೇ ಬೊಕ್ಕಪಟ್ಣ ವಾರ್ಡಿನಲ್ಲಿ ಮಾತ್ರ ಒಬ್ಬನಿಗೆ ಸಿಡುಬು ತಗಲಿದೆ.

ಕೊರೋನೇಶನ್ ಕಪ್ ಬಹುಮಾನದ ಕೊನೆಯ ಕ್ರಿಕೆಟ್ ಪಂದ್ಯಾಟವು ಗವರ್ನಮೆಂಟು ಕಾಲೇಜು ಮತ್ತು ಎಚ್. ಸಿ. ಸಿ. ಇವರೊಳಗೆ ಕಳೆದ ಶನಿವಾರ ನಡೆದು, ಗವರ್ನಮೆಂಟ್ ಕಾಲೇಜಿನವರೇ ಜಯಶಾಲಿಗಳಾದರು.

ಸ್ಥಳೀಯ ಗವರ್ನಮೆಂಟ್ ಕೊಲೇಜಿನ ಕರ್ನಾಟಕ ಸಭೆಯ ವಾರ್ಷಿಕೋತ್ಸವವು ಇದೇ ಕಳೆದ ತಾ. ೪ನೇ ಶನಿವಾರ ಗವರ್ನಮೆಂಟ್ ಕೊಲೇಜಿನಲ್ಲಿ ವಿಜೃಂಭಣೆಯಿಂದ ಜರಗಿತು. ಪ್ರಾರ್ಥನೆಯಾದ ನಂತರ ಶ್ರೀಯುತ ಉಡುಪಿ ಸೀತಾರಾಮಾಚಾರ್ಯರು ಸ್ವಾಗತ ಭಾಷಣ ನಿತ್ತರು. ಅನಂತರ ಶ್ರೀ. ಶಿವರಾಮಕಾರಂತರಿಂದ ಸಭೆಯು ಸ್ವಸ್ತಿವಾಚನವಾಯಿತು. ಆ ಮೇಲೆ ಸಂಘದ ವರದಿ ವಾಚನ ನಡೆದು, ನಾಟಕಾದಿ ವಿನೋದಗಳ ಪ್ರಯೋಗವಾಯಿತು. ಶ್ರೀ ಪ. ರಮಾನಂದರಾಯರೂ ಅವರ ಧರ್ಮಪತ್ನಿಯವರೂ ಭಾಗವಹಿಸಿ, ಶ್ರೀ ಟಿ. ಪಿ. ಕೈಲಾಸಂರವರ "ಹೋಂ ರೂಲ್" ನಾಟಕವೂ, ಕುಮಾರಿ ಚಂದ್ರಭಾಗಿ ದೇವಿಯ ಮೇಘಮಯೂರ ಮತ್ತು ಮಿಠಾರಾಮಾ ನೃತ್ಯವೂ, ಶ್ರೀ ಶಿವರಾಮ ಕಾರಂತರಿಂದ ಬರೆಯಲ್ಪಟ್ಟ "ಹಿರಿಯಕ್ಕನ ಚಾಳಿ" ಎಂಬ ಏಕಾಂಕ ಪ್ರಹಸನವೂ, ಶ್ರೀ ಹೊಳ್ಳರ "ಯಕ್ಷಗಾನ-ಭಾಗವತ" ಪ್ರಹಸನವೂ, ವಿದ್ವಾನ್ ಕೆ. ಪಿ. ಕೃಷ್ಣಭಟ್ಟರವರಿಂದ "ದುರ್ಯೋಧನನ ಪ್ರಲಾಪ" ಮೊದಲಾದ ಭಾವಪೂರ್ಣ ವಾಚನವೂ ಪ್ರಶಂಸನೀಯವಾಗಿದ್ದುವು.

"ಶ್ರೀ ಕೃಷ್ಣ ಸಿನೆಮದಲ್ಲಿ ರಂಜಿತ ಫಿಲ್ಮ್ ಕಂಪೆನಿಯವರ "ವೀರ ಬಭ್ರುವಾಹನ" ಎಂಬ ಹಿಂದೀ ಮಾತಾಡುವ ಚಲಚ್ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಇದರಲ್ಲಿ ಇ. ಬಿಲ್ಲಿಮೋರಿಯಾ, ಮಾಧುರಿ, ತಾರಾ, ಖಾತೂನ್, ಘೋರಿ ಮೊದಲಾದ ನಟರು ಅಭಿನಯಿಸಿರುವರು. ತಾ. ೧೧ನೇ ರವಿವಾರದಿಂದ "ಸ್ಕ್ವಾ. ಮೇನ್" ಎಂಬ ಉತ್ಕೃಷ್ಟ ಚಲಚ್ಚಿತ್ರವು ಪ್ರದರ್ಶಿಸಲಾಗುವುದೆಂದು ಆಡಳಿತಗಾರರು ತಿಳಿಸುತ್ತಾರೆ.

ಸಮುದ್ರದಲ್ಲಿ ತುಫಾನು ಇದ್ದ ಪ್ರಯುಕ್ತ, ಕಳೆದ ವಾರ ಬೊಂಬಾಯಿಯಿಂದ ಇಲ್ಲಿಗೆ ಬರಲಿದ್ದ ಸ್ಟೀಮರುಗಳು ನಿಗದಿತ ಕಾಲದಲ್ಲಿ ಬಂದು ತಲಪಲಾಗಲಿಲ್ಲವೆಂದು ತಿಳಿದುಬರುತ್ತಿದೆ. ಕಾರವಾರದಲ್ಲಿ ಓರ್ವ ಹೆಂಗುಸು ಧೈರ್ಯಶಾಲಿ ಸಮುದ್ರದಲ್ಲಿ ಬಿದ್ದು ಕಾಣೆಯಾದಳೆಂದೂ ವದಂತಿ. ಇದು ಆತ್ಮಹತ್ಯೆಯಾಗಿರಬಹುದೆಂದೂ ಒಂದು ಊಹೆ.

"ದಿ ಕೆನರಾ ಬ್ಯಾಂಕಿಂಗ್ ಕೋಆಪರೇಶನ್ ಉಡುಪಿ ಲಿಮಿಟೆಡ್" ಇದರ ಬಂದರ ಶಾಖೆಯು ಮಿ। ಪಂಜ್ಯಾರ್ ನರಸಿಂಹ ಕಾಮತ್ ಎಂಡ್ ಬ್ರದರ್ಸರ ಭಂಡಸಾಲೆಯ ಉಪ್ಪರಿಗೆ ಮೇಲೆ ಇದೇ ತಾ. ೧೫ರಲ್ಲಿ ತೆರೆಯಲ್ಪಡುವುದು. ಇದರ ಇನ್ನೊಂದು ಶಾಖೆಯು ಇದೇ ತಾ. ೧೪ರಲ್ಲಿ ಮಡಿಕೇರಿಯಲ್ಲಿ ತೆರೆಯಲ್ಪಡುವುದು.

"ದಿ ಬೊಂಬಾಯಿ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್" ಇದರ ಈ ವರ್ಷದ ಎಂಡೌಮೆಂಟ್ ಮೊಬಲಗುಗಳ ಮೇಲೆ ರೂ. ೧೮ರ ಪ್ರಕಾರವೂ, ಮತ್ತು ಹೋಲ್ ಲೈಫ್ ಪೊಲಿಸಿಗಳ ಮೇಲೆ ರೂ. ೨೪ರಂತೆಯೂ ಬೋನಸ್ ಹಂಚಲ್ಪಡುವುದು.

"ಇದೇ ತಿಂಗಳ ತಾ. ೧೦ನೇ ಶನಿವಾರ ನಡೆಯಲಿರುವ ಎಸೆಂಬ್ಲಿ ಮೆಂಬರರ ಚುನಾವಣೆಗೆ ನೀಲಗಿರಿ, ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗೆ ಉಮೇದ್ವಾರರಾಗಿ ನಿಂತ ಜನಾಬ್ ಹಾಜೀ ಮಹಮ್ಮದ್ ಅಬ್ದುರಹಿಮಾನ್ ಸಾಹೇಬರಿಗೆ ನಿಮ್ಮ ಅಮೂಲ್ಯವಾದ ಓಟನ್ನು ದಯಮಾಡಿ ಕೊಡಬೇಕಾಗಿ ವಿನಂತಿ. ಇವರು ಸಮುದಾಯೋದ್ಧಾರವನ್ನು ಬಯಸುವವರೂ ಮತ್ತು ಸಮುದಾಯ ಚಿಂತಕರೂ ಆಗಿರುತ್ತಾರೆ" ಎಂದು ಮಿ। ಕೆ. ಮಹಮೂದ್, ಇವರು ಮುಸ್ಲಿಮರ ಪರವಾಗಿ ವಿನಂತಿಸುತ್ತಾರೆ.

ಇದೇ ತಿಂಗಳ ಕಳೆದ ತಾ. ೩ನೇ ಬುಧವಾರ ಅಪರಾಹ್ಣ ಘಂಟೆ ೪ಕ್ಕೆ ಪಾಂಡೇಶ್ವರದಲ್ಲಿರುವ ಮಂಗಳೂರು ಸಿಟಿ ಆರ್ಯ ಸಮಾಜದಲ್ಲಿ ಋಷಿ ದಯಾನಂದ ಸರಸ್ವತಿಯವರ ಬಲಿದಾನ ದಿನವನ್ನಾಚರಿಸಲಾಯಿತು. ಶ್ರೀಮಾನ್ ಬಿ. ಮೋಹನಪ್ಪ ತಿಂಗಳಾಯರು, ಲಕ್ಷ್ಮಣದೇವ ವಿದ್ಯಾರ್ಥಿ, ಬಾಲಕೃಷ್ಣ ನಾಯ್ಕ ಇವರುಗಳ ಪೌರೋಹಿತ್ಯದಲ್ಲಿ ಹವನವು ಜರಗಿತು. ನಂತರ ಮೋಹನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಬಿ. ಲಕ್ಷ್ಮಣದೇವ ವಿದ್ಯಾರ್ಥಿ, ಎ. ಬಾಲಕೃಷ್ಣ ನಾಯ್ಕ, ಶ್ರೀನಿವಾಸ ಪಂತ್, ಶ್ರೀಮತಿ ಅಂಬಾಬಾಯಿ, ಮೊದಲಾದವರು ದಯಾನಂದರ ಜೀವನ ಬಲಿದಾನ, ಮತ್ತವರ ಬೋಧೆಯ ಕುರಿತು ಭಾಷಣವಿತ್ತರು. ಅಧ್ಯಕ್ಷರ ಭಾಷಣವಾದ ಬಳಿಕ ೬ ಘಂಟೆಗೆ ಸಭೆಯು ಕೊನೆಗೊಂಡಿತು.

ಇದೇ ತಿಂಗಳ ತಾ. ೧೪ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮-೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜ ಮಂದಿರದಲ್ಲಿ ಶ್ರೀಯುತ ಎ. ಬಾಲಕೃಷ್ಣ ನಾಯ್ಕರವರು "ಆರ್ಯ ಸಂಸ್ಕೃತಿಯ ಪ್ರಾಚೀನತೆ" ಎಂಬ ಕುರಿತು ಭಾಷಣವೀಯುವರು. ಸರ್ವರಿಗೂ ಸ್ವಾಗತವಿದೆ.

"ಇದೇ ತಿಂಗಳ ತಾ. ೭-೧೧-೧೯೪೮ನೇ ಆದಿತ್ಯವಾರ ಸಾಯಂಕಾಲ ಘಂಟೆ ೫ಕ್ಕೆ ಮಂಗಳೂರಿಗೆ ರಾಟಾ। ಶಾಲೆಯ ವಸಂತ ಮಂದಿರದಲ್ಲಿ ಪ್ರಕೃತ ಮಂಗಳೂರಿಗೆ ದೇಶೀಯ ವೈದ್ಯ ಸಂಸ್ಥೆಗಳ ಪರಿಶೋಧನೆ ಕಾರ್ಯದಲ್ಲಿ ಮದ್ರಾಸಿನಿಂದ ಬಂದಿರುವ ಇನ್ಸ್‌ಪೆಕ್ಟಿಂಗ್ ಮೆಡಿಕಲ್ ಆಫೀಸರರಾದ ಶ್ರೀ ಡಾ. ಸಿ. ಕುಪ್ಪುಸ್ವಾಮಿ ಅವರ್ಗಳನ್ನು ಮಂಗಳೂರಿನ ಪ್ರಮುಖ ಆಯುರ್ವೇದಿಗಳು ಒಂದು ಅತಿಥಿ ಸತ್ಕಾರ ಕೂಟ (ಟೀಪಾರ್ಟಿ)ದಿಂದ ಬಹುಮಾನಿಸಿದರು. ಈ ಸಂದರ್ಭದಲ್ಲಿ ಮಂಗಳೂರಿನ ದೇಶೀಯ ಚಿಕಿತ್ಸಕರಲ್ಲದೆ ಮುನಿಸಿಪಲ್ ಚೆಯರ್ಮನ್ ಡಾ. ಕೆ. ವಿಠ್ಠಲಶೆಟ್ಟಿ ಮೊದಲಾದ ಪ್ರಮುಖರು ದಯಮಾಡಿಸಿದ್ದರು. ಆಯುರ್ವೇದಿಗಳ ಪರವಾಗಿ ಕವಿರಾಜ ಎಸ್. ಎಂ. ಶೆಟ್ಟರು ಅತಿಥಿಗಳನ್ನು ಅಭಿವಂದಿಸಿದ ನಂತರ ಮುಖ್ಯ ಅತಿಥಿಗಳಾದ ಇನ್ಸ್‌ಪೆಕ್ಟಿಂಗ್ ಮೆಡಿಕಲ್ ಆಫೀಸರರು, ತನ್ನನ್ನು ಈ ರೀತಿ ಗೌರವಿಸಿದುದಕ್ಕಾಗಿ ಈ ಕೂಟವನ್ನು ಜರಗಿಸಿದ ಮಹನೀಯರುಗಳನ್ನು ವಂದಿಸುತ್ತಾ, ತನ್ನ ಡಿವಿಜನಿಗೆ ಸೇರಿದ ದಕ್ಷಿಣ ವಿಭಾಗದಲ್ಲಿ ದೇಶೀಯ ವೈದ್ಯಕ್ಕೆ ಪ್ರೋತ್ಸಾಹ ಕೊಟ್ಟಿರುವ ಮುನಿಸಿಪಾಲಿಟಿಗಳ ಪೈಕಿ ಮಂಗಳೂರು ೨ನೇ ಸ್ಥಾನವನ್ನು ಪಡೆದಿರುವುದನ್ನು ನೋಡಿ ತನಗೆ ತುಂಬಾ ಸಂತೋಷವಾಯಿತೆಂದು ಹೇಳಿದರು, ಇಂಡಿಯನ್ ಮೆಡಿಕಲ್ ರಿಜಿಸ್ಟ್ರೇಶನ್ ವಿಷಯವನ್ನು ಕೂಡ ವಿವರಿಸಿದ ನಂತರ, ಸಭೆಯು ಮುಕ್ತಾಯವಾಯಿತೆಂದು" ಬಾತ್ಮೀದಾರರೊಬ್ಬರು ಬರೆಯುತ್ತಾರೆ.

ರೋಗಬಾರದಿರಲು....

ದುಷ್ಟ ರೋಗಗಳಲ್ಲಿ ಹೆಂಗಸರ ಮೋಹಕ್ಕೆ ಸಿಕ್ಕಿ ಸಾಯಲೆ ಹಚ್ಚಿಕೊಳ್ಳಬೇಡಿ!

ಆ ರೋಗ ಹತ್ತದಂತೆ ಇರಲು ನಾವು ಜರ್ಮನಿಯಿಂದ ತರಿಸಿರುವ ರಬ್ಬರಿನ ಸಾಧನವನ್ನು ಉಪಯೋಗಿಸಿ!

ಗಂಡಸರಿಗೆ ಡಜ್ಜನ್ ಬೆಲೆ 1-8-0

ಹೆಂಗಸರಿಗೆ (ಗರ್ಭನಿರೋಧಕ್ಕೆ) 2-4-0

ಆರ್ಡರಿನೊಡನೆ 4 ಅಣೆ ಸ್ಟಾಂಪು ಕಳಿಸಿರಿ.

ವಿಳಾಸ—**ಕರ್ನಾಟಕ ಏಜನ್ಸಿ,**

12, ಕೃಷ್ಣಪ್ಪ ನಾಯ್ಕ್ ಟೇಂಕ್ ಸ್ಟ್ರೀಟ್,

ಜಿ. ಟಿ. ಮದ್ರಾಸು.

ತಾಲೂಕುಗಳಿಂದ.

ಕಾರ್ಕಳ - ತಾ. ೩೦-೧೦-೪೮ರ ದಿನ ಸಾಯಂಕಾಲ ಘಂಟೆ ೬ಕ್ಕೆ ಸರಿಯಾಗಿ ಉಡುಪಿ ಶ್ರೀ ಪುತ್ತಿಗೆ ಮಠದ ಶ್ರೀ ಪಾದಂಗಳವರು ಶ್ರೀ ಶ್ರೀನಿವಾಸ ಆಶ್ರಮದ ಶ್ರೀ ರಾಮಕೃಷ್ಣ ಸೇವಾವೃಂದ ಮಂದಿರದಲ್ಲಿ "ಮನೋನಿಗ್ರಹದ ಅವಶ್ಯಕತೆ"ಯ ಕುರಿತು ಕನ್ನಡ ಭಾಷೆಯಲ್ಲಿ ಧರ್ಮೋಪದೇಶ ಮಾಡಿದರು.

ತಾ. ೩೧-೧೦-೪೮ರ ದಿನ ಸಾಯಂಕಾಲ ೫ ಘಂಟೆಗೆ ಸರಿಯಾಗಿ ಅನಂತಶಯನ ಮಂದಿರದಲ್ಲಿ ಶ್ರೀ ದುರ್ಗ ವೆಂಕಟೇಶ ಭಟ್ಟರ ಅಧ್ಯಕ್ಷತೆಯಲ್ಲಿ ಒಂದು ಸಭೆಯಾಗಿ "ಸಂಗೀತ ಸಭೆ"ಯು ಸ್ಥಾಪನೆಯಾಯಿತು. ಚಾಲ್ತಿ ವರ್ಷಕ್ಕಾಗಿ ಶ್ರೀ ಐ. ಕೆ. ಗೋವಿಂದರಾಯರು ಅಧ್ಯಕ್ಷರಾಗಿ ಕೆಲ ಸಂಗೀತ ಪ್ರೇಮಿಗಳಿಂದ ಕೂಡಿದ ಆಡಳಿತ ಮಂಡಳಿಯ ಚುನಾವಣೆಯಾಗಲಾಗಿ, ಅಧ್ಯಕ್ಷರ ಭಾಷಣೆಯೊಂದಿಗೆ ಸಭಾಕಾರ್ಯವು ಮುಗಿಯಿತು. ಈ ಸಂಗೀತ ಸಭೆಯ ಮೂಲಕ ಕಾರ್ಕಳದಲ್ಲಿ ಸಂಗೀತಕಲೆಯು ಪುನರುಜ್ಜೀವನವಾಗಲೆಂದು ಹಾರೈಕೆ.

ಇದೇ ದಿನ ರಾತ್ರಿ ಮದ್ರಾಸಿನ ಪ್ರೊವಿನ್ಸಿಯಲ್ ಕೋಪರೇಟಿವ್ ಯೂನಿಯನಿನ ಕಾರ್ಯದರ್ಶಿಗಳಾದ ಶ್ರೀ ಕೆ. ವೆಂಕಟಸುಬ್ಬಯ್ಯನವರು ವಿಕ್ಟೋರಿಯಾ ಮೆಮೋರಿಯಲ್ ಹೋಲಿನಲ್ಲಿ ಗ್ರಾಮೋದ್ಧಾರ ಮತ್ತು ಪರಸ್ಪರ ಸಹಕಾರದ ಕುರಿತು ಮಾಯಾಲಾಂದ್ರದ ಬೀಟಾನೆಯಿಂದೊಳಗೊಂಡ ಭಾಷಣವನ್ನು ಕೊಟ್ಟರು.

ದಕ್ಷಿಣಭಾರತ ಹಿಂದೀ ಪ್ರಚಾರಸಭೆಯ ರಾಷ್ಟ್ರಭಾಷಾ ಪರೀಕ್ಷೆಗೆ ಕಾರ್ಕಳ ಕೇಂದ್ರದಿಂದ ಕೂತುಕೊಂಡ ಶ್ರೀಮತಿ ವಿಜಯಾದೇವಿ ಶೆಣೈಯವರು ಉತ್ತೀರ್ಣರಾಗಿರುವರೆಂದು ತಿಳಿಸಲು ಸಂತೋಷವಾಗುತ್ತದೆ.

ಪುತ್ತೂರು — ಈ ಬಾರಿಯ ದಸರಾ ಮಹೋತ್ಸವದ ಸಂದರ್ಭದಲ್ಲಿಯೂ, ಕಳೆದ ತಾ. ೨೮ರಲ್ಲಿ ಜರಗಿದ ಪುತ್ತೂರು ರೂರಲ್ ಕ್ರೆಡಿಟ್ ಸೊಸೈಟಿಯ ರಜತೋತ್ಸವದ ಸಮಯದಲ್ಲಿಯೂ ಉಪಾಹಾರದ ಏರ್ಪಾಟನ್ನು ವಹಿಸಿ ತೃಪ್ತಿಕರವಾಗಿ ನಿರ್ವಹಿಸಿದುದಕ್ಕೆ "ಸ್ವಾಕೋಮಲ ವಿಲಾಸ, ಪುತ್ತೂರು" ಇದರ ಸಂಚಾಲಕರಾದ ಶ್ರೀ ಪದ್ಮನಾಭ ಶೆಣೈಯವರು ಸಂಬಂಧಪಟ್ಟ ಕಮಿಟಿಗಳ ಪ್ರಶಂಸೆಗೆ ಪಾತ್ರರಾದುದಲ್ಲದೆ, ದಸರಾ ಕಮಿಟಿಯಿಂದ ಒಂದು ರಜತಪದಕದ ಬಹುಮಾನವನ್ನು ಪಡೆದಿರುವರು" ಎಂದು ಒಂದು ವಾರ್ತೆ.

ಫರಂಗಿಪೇಟೆ:— ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಕಳೆದ ತಾ. ೨೭ರಲ್ಲಿ ಫರಂಗಿಪೇಟೆಯಲ್ಲಿ, ಪುದು ಬೋರ್ಡು ಮಹಮ್ಮದ್ ಶಾಲೆಯ ಹೆಡ್ ಮಾಸ್ತರ ಶ್ರೀ ಜಿ. ಎನ್. ಸುಜೀರ್, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಸಭೆಯು ಇದೇ ನವಂಬರ ತಾ. ೨೪ರಲ್ಲಿ ಫರಂಗಿಪೇಟೆಯಲ್ಲಿ ಜರಗಿಸಬೇಕಾಗಿ ನಿರ್ಣಯಿಸಲ್ಪಟ್ಟಿತು.

ಉಡುಪಿ — ಸನಾತನ ಧರ್ಮಾಭಿಮಾನಿಗಳೆಲ್ಲರೂ, ನಾಳೆ (ತಾ. ೧೦-೧೧-೪೮) ಶ್ರೀ ಸಾಮುವೇಲ್ ಅರೂನರಿಗೇ ಓಟು ಕೊಡಬೇಕಾಗಿ, ಉಡುಪಿಯ "ಸನಾತನಧರ್ಮ ವ್ಯವಸ್ಥಾಪಕ ಮಂಡಳಿ"ಯ ಆಕ್ಟಿಂಗ್ ಕಾರ್ಯದರ್ಶಿಗಳಾದ ಶ್ರೀ ಎಸ್. ಎ. ಟಿ. ಬಲ್ಲಾಳರವರು, ಸದರಿ ಮಂಡಳಿಯ ಪರವಾಗಿ ಓಟರರಲ್ಲಿ ವಿನಂತಿ ಮಾಡಿರುವರು.

ಇಲ್ಲಿಯ ಜವಸ್ಟಾನಾ ಬೋರ್ಡಿನ ಆಶ್ರಯದಲ್ಲಿ ನಡೆದ ಶಾಲೆಗಳೊಳಗಣ ಕ್ರಿಕೆಟ್ ಪಂದ್ಯಾಟಗಳಲ್ಲಿ, ಜೂನಿಯರ್ ಮತ್ತು ಸೀನಿಯರ್ ಎರಡೂ ಕಪ್ಪುಗಳು ಉಡುಪಿ ಬೋರ್ಡ್ ಹೈಸ್ಕೂಲಿಗೆ ಸಿಕ್ಕಿವೆ.

ಶ್ರೀ ಪುತ್ತಿಗೆ ಮಠದ ಶ್ರೀ ಸುಜ್ಞಾನೇಂದ್ರ ತೀರ್ಥರುಗಳವರು, ತಮ್ಮ ಗುರುವಿನ ಅನುಜ್ಞೆ ಪಡೆದು, ಕಾಶೀ ಯಾತ್ರೆಗೆ ತೆರಳಿರುವರು.

ಪಣಂಬೂರು — ತಾ. ೨-೧೧-೧೯೪೮ನೇ ಸಂಚಿಕೆಯಲ್ಲಿ ಪಣಂಬೂರು ವರ್ತಮಾನದಲ್ಲಿ ಪ್ರಕಟವಾದ 'ಹರಿಹರ ಶಾಲೆ' ಎಂಬುದನ್ನು 'ಹರಿಹರ ಸಂಸ್ಕೃತ ಶಾಲೆ' ಎಂದೂ, 'ಎಂ. ಆರ್. ಪಣಂಬೂರು ಮತ್ತು ಸಿ. ವಿ. ಐಗಳ್' ಎಂಬುದನ್ನು 'ಎಂ. ಆರ್. ಪಣಂಬೂರು ಮತ್ತು ಸಿ. ವಿ. ಅನಂತ ಐಗಳ್' ಎಂದೂ ತಿದ್ದಿ ಓದಬೇಕಾಗಿ ವಿನಂತಿ.

ಇಲ್ಲಿಯ ಹಲವು ಜನ ವಿದ್ಯಾಭಿಮಾನಿಗಳ ಸಹಕಾರದಿಂದಲೂ, ಶ್ರೀ ಶ್ಯಾ. ಎಂ. ಪದ್ಮನಾಭಯ್ಯನವರ ಅಧ್ಯಕ್ಷತೆಯಿಂದಲೂ "ನಂದನೇಶ ಶ್ರೀ ರೀಡಿಂಗ್ ರೂಮ್" ಎಂಬ ಧರ್ಮಾರ್ಥ ವಾಚನಾಲಯವು ಆರಂಭವಾಗಿದೆ.

ಮೂಲ್ಕಿ — ಸ್ಥಳೀಯ ರಿವಿನ್ಯೂ ಫೀಲ್ಡ್ ಸ್ಟಾಫುಗಾರರ ಪ್ರಥಮ ಸಂಘವು ಕಳೆದ ತಾ. ೨೧-೧೦-೪೮ನೇ ಶನಿವಾರ ಶ್ರೀ ಡಾ। ಯಂ. ರಾಮಪ್ಪ ಕಾಮತರ ಅಧ್ಯಕ್ಷತೆಯಲ್ಲಿ ಸೇರಿ, ತಮ್ಮದೊಂದು ಸಂಘವನ್ನು ಸ್ಥಾಪಿಸಿಕೊಂಡಿರುತ್ತಾರೆ.

ಹಿಂದೊಮ್ಮೆ ಪ್ರಕಟಿಸಿದಂತೆ ಇದೇ ಕಳೆದ ತಾರೀಕು ೨೩ನೇ ದಿನ, ಸಾಯಂಕಾಲ, ಇಲ್ಲಿಯ ಯೂನಿಯನ್ ಕ್ಲಬ್ಬಿನ ಸಭಾಸದನದಲ್ಲಿ ಶ್ರೀ ಬಿ. ಮೋಹನಪ್ಪ ತಿಂಗಳಾಯರು "ವಿಶ್ವಧರ್ಮ" ಎಂಬ ವಿಷಯದಲ್ಲಿ ಸುರಸವಾದ ಭಾಷಣವನ್ನು ಕೊಟ್ಟರು. ಕ್ಲಬ್ಬಿನ ಗೌರವ ಕಾರ್ಯದರ್ಶಿಯವರು ಕೆಲವೇ ಮಾತುಗಳಿಂದ ಭಾಷಣಕರ್ತರ ಪರಿಚಯವನ್ನು ಸಭಿಕರಿಗೆ ಮಾಡಿಕೊಟ್ಟರು. ಭಾಷಣಕರ್ತರು ಅನೇಕ ಆಧಾರಗಳನ್ನು ಕೊಟ್ಟು ಎತ್ತಿಕೊಂಡ ವಿಷಯದಲ್ಲಿ ಪ್ರತಿಪಾದಿಸಿ, ಅನೇಕ ಗಹನವಿಚಾರಗಳನ್ನು ಹೊರಗೆಡಹಿ ಮಾತಾಡಿದರು. ಕಡೆಗೆ ಸಂಘದ ಕಡೆಯಿಂದ ಉಪಕಾರಸ್ಮರಣೆಯ ಕಾರ್ಯಭಾಗವು ನಡೆಯಿತು.

ಇಲ್ಲಿಯ ಕಸ್ಟಮ್ಸ್ ಕಲೆಕ್ಟರ್ ಮಿ। ಬಿ. ಇ. ಮೊಂತೇರೊ ಇವರಿಗೆ ಮಂಗಳೂರಿಗೆ ವರ್ಗವಾಗಿ, ಅವರ ಸ್ಥಾನದಲ್ಲಿ ಶ್ರೀ ಬಿ. ಸಂಜೀವರಾಯರು ಬಂದಿರುವರು.

ಸ್ಥಳೀಯ ಶ್ರೀ ದುರ್ಗಾದೇವಿ ಧರ್ಮಾರ್ಥ ರಾತ್ರಿ ಶಾಲೆಯ ಕಡೆಯಿಂದ ಏರ್ಪಡಿಸಲಾದ ಸೋಡ್ತಿ ಕಮಿಟಿಯ ಕಾರ್ಯದರ್ಶಿಯವರು ಹೀಗೆ ತಿಳಿಸುತ್ತಾರೆ:—"ಈ ಸೋಡ್ತಿಯ ಟಿಕೇಟು ಪುಸ್ತಕಗಳನ್ನು ಸಂಪೂರ್ಣವಾಗಿ ಒಂದು ಯಾ ಹೆಚ್ಚು ಪುಸ್ತಕಗಳನ್ನು ಮಾರಾಟ ಮಾಡಿದವರಿಗೆ ರೂ. ೧೦೦/ ರೂ. ೫೦/ ಮತ್ತು ರೂ. ೨೫/ ಹೀಗೆ ೩ ಸ್ಪೆಶಲ್ ಇನಾಮುಗಳನ್ನು ಸೋಡ್ತಿ ತೆಗೆಯುವ ದಿನ ಸೋಡ್ತಿ ತೆಗೆದು ಕೊಡಲಾಗುವುದು"

ದೇಶಭಕ್ತ ಶ್ರೀ **ಕಾರ್ನಾಡ** ಸದಾಶಿವರಾಯರೂ ಶ್ರೀ ಎ. ಬಿ. ಶೆಟ್ಟಿ (ಎಂ. ಎಲ್. ಸಿ.) ಇದೇ ತಾ. ೬ನೇ ದಿನ ಇಲ್ಲಿಗೆ ಬಂದಿದ್ದು, ಇಲ್ಲಿಯ ಯೂನಿಯನ್ ಕ್ಲಬ್ಬಿನಲ್ಲಿ ಕೆಲವು ಮುಖಂಡರನ್ನು ಕಂಡು, ಶ್ರೀ. ಅರೂನರ ಉಮೇದ್ವಾರಿಕೆಯನ್ನು ಪುಷ್ಟೀಕರಿಸಬೇಕೆಂದು ವಿನಂತಿ ಮಾಡಿಕೊಂಡು ಸುರತ್ಕಲ್ ಅತ್ತಕಡೆ ತೆರಳಿದರು.

ಬೈಲೂರು — ಇಲ್ಲಿಂದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ ಪರೀಕ್ಷೆಯನ್ನು ಕೊಟ್ಟ ೭ ಮಂದಿಯ ಪೈಕಿ ಒಬ್ಬರು ಮಾತ್ರ ಅನುತ್ತೀರ್ಣರಾಗಿ ಶ್ರೀಮತಿ ದಮಯಂತಿ ಸೋನ್ಸ್, ಶ್ರೀಗಳಾದ ತ್ರಿವಿಕ್ರಮ ಹೆಗ್ಡೆ, ವಿ. ಡಿ. ಅಲ್ಮೇಡಾ, ಬಿ. ಕೇಶವ ಶೆಣೈ, ಇವರು ಪ್ರಥಮ ಶ್ರೇಣಿಯಲ್ಲಿಯೂ, ಶ್ರೀಮತಿ ಕಲ್ಯಾಣಿ ಮತ್ತು ಶ್ರೀಯುತ ಜಗನ್ನಾಥ ಮಾಡರು ದ್ವಿತೀಯ ಶ್ರೇಣಿಯಲ್ಲಿಯೂ ತೇರ್ಗಡೆ ಹೊಂದಿರುವರು. ಇಲ್ಲಿಯ ಹಿಂದೀ ಪ್ರೇಮಿಗಳು ಇನ್ನೂ ಅತ್ಯಧಿಕವಾದ ಉತ್ಸಾಹದಿಂದ ಹಿಂದೀ ಭಾಷಾಭ್ಯಾಸವನ್ನು ಮಾಡುವರೆಂದು ನಂಬಿಕೆ.

ಕಟಪಾಡಿ — ಕಳೆದ ಸೆಪ್ಟೆಂಬರದಲ್ಲಿ ನಡೆದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರ ಪ್ರಾಥಮಿಕ ಪರೀಕ್ಷೆಯಲ್ಲಿ ಈ ಕೆಳಗಿನವರು ಪಾಸಾಗಿರುವರೆಂದು ಹಿಂದೀ ಪ್ರಚಾರಕರಾದ ಶ್ರೀ ಕಟೀಲು ಗಣಪತಿ ಶರ್ಮ ಇವರು ತಿಳಿಸುತ್ತಾರೆ. ಪ್ರಥಮ ಕ್ಲಾಸು:—ಶ್ರೀಮತಿ ಅಂಬಾಬಾಯಿ ನಾಯಕ್, ಶ್ರೀಗಳಾದ ಟಿ. ಜನಾರ್ಧನ ಶೆಣೈ, ರಾಮಚಂದ್ರ ಭಟ್ಟ, ವೆಂಕಟ್ರಮಣ ಭಟ್ಟ, ಸದಾನಂದ ಶೆಣೈ, ಕೆ. ಜನಾರ್ಧನ ಶೆಣೈ, ಗಣಪತಿ ಶೆಟ್ಟಿ, ರಮಾನಾಥ ಶೆಣೈ, ನಾರಾಯಣ ಕಾಮತ್, ದ್ವಿತೀಯ ಕ್ಲಾಸು:—ಶ್ರೀಗಳಾದ ಲಕ್ಷ್ಮೀನಾರಾಯಣ ನಾಯಕ್, ಜನಾರ್ಧನ ನಾಯಕ್, ರಾಮ ಕಾಮತ್, ಸರ್ವೋತ್ತಮ ಶೆಟ್ಟಿ, ಕೆ. ಪಿ. ಮಲ್ಯ, ಚೆರಡಪ್ಪ ನಾಯಕ್, ಗೋಪಾಲಕೃಷ್ಣ ಶೆಟ್ಟಿ, ವೆಂಕಟದಾಸ ನಾಯಕ್, ಪುಂಡರೀಕ ಶೆಣೈ, ಸಾಲ್ವದೋರ್ ಪಿರೇರಾ, ಹರಿಕೃಷ್ಣ ಕಾಮತ್, ಜನಾರ್ಧನ ಶೆಟ್ಟಿ, ಮೂಡ್ಲ/ಿ ಕಾಮತ್.

ಕುರುಕಾಲು:—ಪ್ರಥಮ ಕ್ಲಾಸು—ಮಧ್ವರಾಯ ಸಾಮಗ, ಸಂಜೀವ ಶೆಟ್ಟಿ, ಶ್ರೀನಿವಾಸ ಭಟ್, ವೆಂಕಟರಮಣ ಭಟ್. ದ್ವಿತೀಯ ಕ್ಲಾಸು—ಶ್ರೀಗಳಾದ ಗಣಪಯ್ಯ ಶೆಟ್ಟಿ, ಸುಬ್ಬಣ್ಣ ಉಪಾಧ್ಯ, ಕಿಟ್ಟು ಶೆಟ್ಟಿ, ಕೃಷ್ಣಯ್ಯಶೆಟ್ಟಿ, ಶಿವರಾಮ ಶೆಟ್ಟಿ.

ಉದ್ಯಾವರ — ಪ್ರಥಮ ಕ್ಲಾಸು—ಶ್ರೀಗಳಾದ ರಾಮಣ್ಣ ಶೆಟ್ಟಿ, ಸಿರಿಲ್ ಡಿಸೋಜ. ದ್ವಿತೀಯ ಕ್ಲಾಸ್—ಶ್ರೀಗಳಾದ ಜಾ। ಸೋಮಯಾಜಿ, ಬಾಲಕೃಷ್ಣ ಶೆಟ್ಟಿ, ರಮಾನಾಥ ಕಾಮತ್, ಅನಂತರಾಮರಾವ್, ನಂದ್ಯಪ್ಪ ಹೆಗ್ಡೆ, ರಾಮಕೃಷ್ಣ ಉಪಾಧ್ಯ, ಅಣ್ಣಯ್ಯ ದೇವರಾವ್, ಮಿ। ಜೋನ್ ಡಿಸೋಜ, ಮಿ। ಥೋಮಸ್ ಡಿಸಿಲ್ವ, ಮಿ। ಲೂವಿಸ್ ಪಿಂಟೋ.

[illegible]

[illegible] ಯಿಂದ ಮಾತ್ರ ತೃಪ್ತಿಯುಳ್ಳವರಾಗುತ್ತೇವೆ.

(ಸಂ. ಸ್ವ.)

'ಕಾರ್ಕಳ ನಿವಾಸಿ'ಗೆ.

ಅಯ್ಯಾ ಸ್ವದೇಶಾಭಿಮಾನಿಯೇ,

"ಕಾರ್ಕಳ ನಿವಾಸಿ"ಗೆ ಮಾತ್ರ ಹೆಲ್ತ್ ಇನ್ಸ್‌ಪೆಕ್ಟರರನ್ನು ಜೊತೆಗೊಡಲು ಮನಸ್ಸಿಲ್ಲದೆ ಬೇರೆ ಶಾಲಾ ಉಪಾಧ್ಯಾಯರನ್ನು ತೆಗಳಬೇಕಿತ್ತಿಲ್ಲ. ರಾ ವೇಣುಗೋಪಾಲರಾಯರು ಉದಾರಿಗಳೆಂದೂ ಪರೋಪಕಾರಿಯೆಂದೂ ಎಲ್ಲರಿಗೂ ತಿಳಿದ ವಿಷಯವೇ!

ಹೆಲ್ತ್ ಆಫೀಸರರ ಅಪೇಕ್ಷೆ ಮೇರೆಗೆ ಎಲ್ಲಾ ಶಾಲೆಗಳಿಗೂ ಉಪಾಧ್ಯಾಯರು ಹೆಲ್ತ್ ಡಿಪಾರ್ಟಮೆಂಟಿ ನೊಡನೆ ಸಹಕರಿಸಬೇಕಾಗಿ ಜಿಲ್ಲಾ ಪ್ರೆಸಿಡೆಂಟರೂ ಸರ್ಕ್ಯುಲರನ್ನು ಕಳುಹಿದ್ದಾರೆ. ಅವಶ್ಯಕವುಳ್ಳವನಾಗಿ ಇನ್ಸ್‌ಪೆಕ್ಟರರು ಉಪಾಧ್ಯಾಯರನ್ನು ಸಹಕರಿಸಬೇಕಾಗಿ ಕೇಳಿಕೊಂಡರೇ? ಅವರು ಕೇಳದೆ ಉಪಾಧ್ಯಾಯರು ತಾವೇ ಹೋಗಿ ಬೊಕಲ ನಾಡಬೇಕೆಂದು 'ಕಾರ್ಕಳ ನಿವಾಸಿ'ಯು ಅಂದೋಣವೇ? ಅಲ್ಲಸಲ್ಲದ ಆರೋಪಣೆಗಳನ್ನು ನಿಜಸಂಗತಿ ತಿಳಿಯದೆ ಮಾಡುವುದು ಅಯೋಗ್ಯವೆಂದು ಒತ್ತಿಹೇಳಬೇಕೇ?

'ಕಾರ್ಕಳ ಪ್ರೇಮಿ.'

ಅಯ್ಯಾ 'ಸ್ವದೇಶಾಭಿಮಾನಿ'ಯೇ,

"ಒಂದು ಸಂಸಾರದ ಹಿತಕ್ಕಾಗಿ ಒಂದು ವ್ಯಕ್ತಿಯನ್ನು ಬಲಿಕೊಡಬಹುದು .." ಎಂಬ ಲೋಕೋಕ್ತಿಗನುಸಾರವಾಗಿ, ಹಲವು ಉಪಾಧ್ಯಾಯರ ಹಿತಕ್ಕಾಗಿ ಕೆಲವರ ಹಿತವನ್ನು ಬಲಿಕೊಡುವುದರಲ್ಲಿ ಏನೂ ಅನ್ಯಾಯವಿರಲಾರದೆಂದು, ಡಿಸ್ಟ್ರಿಕ್ಟ್ ಬೋರ್ಡಿನವರು ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ಹೊಸ ಸ್ಕೇಲನ್ನು ಇವರಿಗೆ ಕೊಡುವಾಗ ಹಿಂದಿನ ಸರ್ವೀಸನ್ನು ಗಣಿಸದೆ ಬಿಟ್ಟರು. ಆದರೆ ಇದು ಅನ್ಯಾಯವೆಂದು ಬೊಬ್ಬೆ ಎದ್ದಿದೆ. ಎಲ್ಲರಿಗೂ ಹಿಂದಿನ ಸರ್ವಿಸನ್ನು ಎಣಿಸಿಯೇ ಸಂಬಳ ನಿಶ್ಚಯಿಸಬೇಕೆಂದೂ 'ರಾಶಿ ಹಣ ಕಡಿಮೆ ಬಿದ್ದರೆ' ಕಟ್ ಮಾಡಬಹುದೆಂದೂ ಈ ಬೊಬ್ಬಿಡುವವರ ಸೂಚನೆ. ಇಂತಹ ಕ್ರಾಂತಿಕಾರಕ ಸೂಚನೆಯನ್ನು ಬೋರ್ಡಿನವರು ಮನ್ನಿಸುವರೇ?

ಇತಿ 'ಹಿತವಾದಿ.'

ಅಯ್ಯಾ ಪತ್ರಿಕಾಕರ್ತರೇ,

ಕಳೆದ ವಾರದಲ್ಲಿ "ಬಂಟ್ವಾಳ ಲೋಕಲ್ ಫಂಡ್ ಆಸ್ಪತ್ರೆ" ಎಂಬ ಶಿರೋನಾಮೆಯಿಂದ ನಿಮಗೆ ನಾನೊಂದು ಪತ್ರವನ್ನು ಬರೆದಿದ್ದೆನು. ಅದರ ನಂತರ ನಡೆದ ಕೆಲವು ಘಟನೆಗಳ ವಿಚಾರವು ನನ್ನ ತಿಳುವಳಿಕೆಗೆ ಬಂದಿರುತ್ತದೆ. ಆ ಸ್ತ್ರೀಯು ಕಡೆಯವರು ಜಿಲ್ಲಾ ಕಲೆಕ್ಟರರವರಿಗೂ, ಸರ್ಜನ್ ಜನರಲರಿಗೂ, ನಮ್ಮ ಜಿಲ್ಲಾ ಸರ್ಜನರಿಗೂ, ಡಿ। ಬೋ। ಪ್ರೆಸಿಡೆಂಟರಿಗೂ, ಮೆಡಿಕಲ್ ಬೋರ್ಡಿಗೂ ಅರ್ಜಿಮಾಡಿರುವರಾಗಿ ತಿಳಿದುಬರುತ್ತದೆ.

ಆದರಲ್ಲಿ, ನಮ್ಮ ಜಿಲ್ಲಾ ಸರ್ಜನರು ವಿಸೊಂದು ತನ್ನಿ ನಡೆಸದೆ, ಕೇವಲ ಬಂಟ್ವಾಳ ಆಸ್ಪತ್ರೆಯ ಡಾಕ್ಟರ ಮಹಾಶಯರ ಸ್ಟೇಟುಮೆಂಟು ಮೇರೆಗೆ—ಡಾಕ್ಟರರ ತಪ್ಪೆಂದು ಮನಸ್ಸಿಗೆ ತೋರದೋ—ಸದ್ಯಿಯವರಿಗೆ 'ವ್ಹಾರ್‌ನ್' ಮಾತ್ರ ಮಾಡಿರುವರೆಂದು ದೂರು ಇದೆ.

'ಬಂಟ್ವಾಳ ನಿವಾಸಿ.'

ಹೆಲ್ತ್ ಡಿಪಾರ್ಟ್‌ಮೆಂಟೂ ಶಿಶು ಸಪ್ತಾಹವೂ.

ಅಯ್ಯಾ ಸ್ವದೇಶಾಭಿಮಾನಿಯೆ,

ಶಿಶುಸಪ್ತಾಹಗಳನ್ನು ಅಲ್ಲಲ್ಲಿ ಜರಗಿಸಲು ಡಿಪಾರ್ಟ್‌ಮೆಂಟಿನವರು ಪ್ರೋತ್ಸಾಹಿಸುವುದು ಅವರ ಮುಖ್ಯ ಕರ್ತವ್ಯವಲ್ಲವೇ? ಹೆಲ್ತ್ ಇನ್ಸ್‌ಪೆಕ್ಟರರು ಪ್ರತೀ ಊರುಗಳಿಗೆ ಹೋಗಿ ಪ್ರಮುಖರೊಡನೆ ಮಾತನಾಡಿ ಅವರ ಸಹಾಯದಿಂದ ಕೆಲಸ ಜರಗಿಸುವ ಬದಲಿಗೆ ತಮಗೆ ಬಹಳ ಕೆಲಸವಿರುವುದೆಂಬದಾಗಿ ತೋರಿಸಿಕೊಂಡು ಹೇಳದ ಸಮಯಕ್ಕೆ ಬಾರದೆ ತಮ್ಮನ್ನು ಕಾಯುತೂತು ಕೊಳ್ಳುವಂತೆ ಮಾಡಿದರೆ ಹೇಗಾದೀತು?

ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರರ ಅಪೇಕ್ಷೆ ಮೇರೆಗೆ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರು ಸರ್ಕ್ಯುಲರಿಗೆ ಹೆಲ್ತ್ [illegible] ಸಹಕರಿಸಬೇಕಾಗಿ ಸರ್ [illegible]

[illegible] ಉಪಾಧ್ಯಾಯರುಗಳು [illegible] ಹಣ [illegible] ಕೆಲಸಗಳನ್ನು [illegible] ಹೀಗಿರುವಲ್ಲಿ ಈ ರೀತಿಯ ಉಪೇಕ್ಷೆಗೆ ಕಾರಣವೇನು? ಇವರು ಅಗಿ ಹೆಲ್ತ್ ಇನ್ಸ್‌ಪೆಕ್ಟರರ ಬಳಿಗೆ ಹೋಗಿ ಸಹಕರಿಸಬೇಕೇ?

ನಮ್ಮ ಪುತ್ತೂರಿನಲ್ಲಿ ಕೂಡ ಒಂದು ವಾರವನ್ನು ಶಿಶುಸಪ್ತಾಹವಾಗಿ ಜರಗಿಸುವರಾಗಿ ಪಡೆಂತ ಇದ್ದು. ಇದಕ್ಕಾಗಿ ಹಲವು ಮುಖಂಡರ ಮುಂದೆ ನೋಟೀಸನ್ನು ಕಳುಹಿ ಒಂದು ಸಭೆಯನ್ನು ಏರ್ಪಡಿಸಿ ತೀರ್ಮಾನಿಸಿದರಂತೆ. ಶಾಲೆಗಳು ದಸರಾ ರಜೆಗೆ ಮುಚ್ಚುವ ಮೊದಲೇ ಮಾಸ್ಟರ ಇನ್ಸ್‌ಪೆಕ್ಟರರು ಪ್ರತಿ ಶಾಲೆಗೆ ತಿಳಿಸಿದಲ್ಲಿ ಎಷ್ಟು ಪ್ರಯೋಜನವಿತ್ತು! ಶಾಲಾ ಮಕ್ಕಳೂ ಅಧ್ಯಾಪಕರೂ ಸಹಕರಿಸುವಷ್ಟು ವಿನೋದದಿಂದ ಸಪ್ತಾಹವನ್ನು ಕಳೆಯಬಹುದಿತ್ತು. ಸಪ್ತಾಹವು ಹೋಗಿ ಒಂದು ದಿನವನ್ನು ಆಚರಿಸಬೇಕೆಂದು ನಿಶ್ಚಯಿಸಿದರಂತೆ. ಕಾರಣ? ಜನರ ಸಹಕಾರವಿಲ್ಲ. ಕಾರಣ?—ಜನರಿಗೆ ಹೇಳಲೇ ಇಲ್ಲ. ಒಂದು ದಿವಸವೂ ಸಾಧ್ಯವಿಲ್ಲವೆಂದು ಒಂದು ರಾತ್ರೆಯಾಯಿತು. ಅಂತೂ ಇಂತೂ, ಶಿಶುಸಪ್ತಾಹವೆಂಬುದು ಕುಷ್ಠರೋಗ ನಿವಾರಣಾ ಸಮಿತಿಯ ನಾಟಕದಲ್ಲಿ ಪರಿಣಮಿಸಿತು. ಟಿಕೇಟುಗಳನ್ನು ಭರದಿಂದು ಎಷ್ಟೋ ದಿವಸಗಳ ಹಿಂದಿನಿಂದ ಮಾರಲು ಪ್ರಾರಂಭಿಸಿ ನಿನ್ನೆ ತಾ. ೧೯ನೇ ಶುಕ್ರವಾರ ದಿವಸ ಇನ್ಸ್‌ಪೆಕ್ಟರರ ನೇತೃತ್ವದಲ್ಲಿ ಸಹಕರಿಸುವುದಿಲ್ಲವೆಂಬ ಜನರೇ ಸಂತೋಷದಿಂದ ಟಿಕೇಟುಗಳನ್ನು ಪಡೆದು ತಮ್ಮ ಪ್ರೀತಿಯನ್ನು ಪ್ರದರ್ಶಿಸಿದರು.

ಯೋಗ್ಯ ಕಾರ್ಯಕ್ಕಾಗಿ ಹಣವನ್ನು ಗಳಿಸುವುದು ಅತ್ಯವಶ್ಯಕವು. ಆದರೆ ಜನರಿಗೆ ಬೋಧಪರವಾಗಿರುವಂತಹ ಈ ನಾಟಕವನ್ನು ಬಡವರೂ ನೋಡಿ ಆನಂದಿಸುವರೆ ಅನುಕೂಲವಾಗುವಂತೆ ಅದನ್ನು ಧರ್ಮಾರ್ಥವಾಗಿ ಆಡಿ ತೋರಿಸಿದರೆ ಸಾರ್ಥಕವಿತ್ತು. ಹಣವನ್ನು ಹೇಗೂ ಮೊದಲೇ ಶೇಖರಿಸಿದುದಾಯಿತು. ನಾಟಕವನ್ನು ಎಲ್ಲರಿಗೂ ತೋರಿಸುವ ಏರ್ಪಾಡು ಮಾಡಿದ್ದರೆ ಎಷ್ಟು ಉಪಕಾರವಿತ್ತು!

ಸುಧಾಬಿಧ್ರೆಗಾಗಿ ಕಾರ್ಕಳದಲ್ಲಿಯೂ ಮೂಡಬಿದ್ರೆಯಲ್ಲಿಯೂ ಶೇಖರಿಸಿದ ಹಣದ ಲೆಖ್ಖಾಚಾರವನ್ನು ಸಂಬಂಧಪಟ್ಟವರು ಶೀಘ್ರದಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಪ್ರಕಟಿಸಬೇಕಾಗಿ ಕೋರಿಕೆ.

ಬಿ. ವಿ. ಶೆಟ್ಟಿ.

ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಮಹಾಸಭೆ.

ತಾ. ೧೨, ೧೩—೧೦—೧೯೪೮ರಲ್ಲಿ ಪುತ್ತೂರು ಡಿವಿಜನಲ್ ಆಫೀಸರರಾದ ಮಿ। ಇ. ಯಚ್. ಅಬ್ರಹಾಮ್, ಅವರ್ಗಳ್, ಬಿ. ಎ., ಇವರ ಅಧ್ಯಕ್ಷತೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಮಹಾಸಭೆಯು ಪುತ್ತೂರಲ್ಲಿ ಜರಗಿತು. ಮಹಾರಾಜಶ್ರೀಗಳಾದ ಎ. ಬಿ. ಶೆಟ್ಟಿ, ಎಮ್. ಎಲ್. ಸಿ. ಮೊದಲಾದ ಅನೇಕ ಮಹನೀಯರೂ, ಜಿಲ್ಲೆಯ ಎಲ್ಲಾ ಸೆಂಟರುಗಳಿಂದ ಬಂದ ೧೧೨ ಮಂದಿ ಉಪಾಧ್ಯಾಯ ಪ್ರತಿನಿಧಿಗಳೂ ಮತ್ತು ಇತರ ಅನೇಕ ಉಪಾಧ್ಯಾಯರುಗಳೂ ಹಾಜರಿದ್ದರು. ಸಭೆಯಲ್ಲಿ ಕೆಳಗಿನ ನಿರ್ಣಯಗಳು ಪಾಸಾದುವು—

(೧) [illegible] ಸಂಘದ ಸಭ್ಯರು [illegible] ಯಂತೆಯೂ [illegible] (೨) [illegible] ಸಂಘದ ರೂ. ೩ ಹಾಗೆ [illegible] ಡಿಸ್ಟ್ರಿಕ್ಟ್ ಟೀಚರ್ಸ್ ಗಿಲ್ಡಿಗೆ ಸೇರುತ್ತಿರಬೇಕೆಂದೂ (೪) ಮಂಗಳೂರು ಮತ್ತು ಕುಂದಾಪುರ ತಾಲೂಕು ಸಂಘಗಳನ್ನು ಸ್ಥಾಪಿಸುವ ಬಗ್ಗೆ ರಾಗಳಾದ ಕೆ. ಸುಬ್ರಹ್ಮಣ್ಯ, ರಾಮಚಂದ್ರ ಹೆಗ್ಗಡೆ, ಗಣಪತಿ ರಾವ್ ಐಗಳ್, ಬಾಗಲೋಡಿ ಕೃಷ್ಣ ರಾವ್ ಮತ್ತು ರಾಮರಾವ್ (ಕಲ್ಯ) ಇವರನ್ನು ಮಂಗಳೂರು ತಾಲೂಕಿಗೂ, ರಾಗಳಾದ ಸುಬ್ರಾಯ ಉರಾಳ್, ನರಸಿಂಹಯ್ಯ, ಬಿ. ರಾಮರಾವ್, ಸುಬ್ರಾಯ ಕಾನುಗೋಗ ಮತ್ತು ಗಂಗಾಧರ ಐತಾಳ ಇವರನ್ನು ಕುಂದಾಪುರ ತಾಲೂಕಿಗೂ ಕಾರ್ಯನಿರ್ವಾಹಕರನ್ನಾಗಿ ಆರಿಸಲಾಯಿತು, (೫) ಮಾನ್ಯ ಡಿಸ್ಟ್ರಿಕ್ಟ್ ಬೋರ್ಡಿನವರೇ ಪ್ರತಿ ಸೆಂಟರಿನ ಒಂದು ಗ್ರಾಮದಲ್ಲಿಯಾದರೂ ಗ್ರಾಮಾಭಿವೃದ್ಧಿಯ ಕಾರ್ಯವನ್ನು ಸಾಗಿಸುವಂತೆಯೂ (೬) ಪ್ರಕೃತ ಜಾರಿಯಲ್ಲಿರುವ ಸಂಬಳದ ಸ್ಕೇಲಿನಲ್ಲಿ ಹಿಂದಿನ ಸರ್ವಿಸನ್ನು ಎಣಿಸಿ ಇಕ್ರಿಮೆಂಟ್ ಕೊಡಿಸುವಂತೆಯೂ (೭) ಪ್ರತಿ ತಿಂಗಳ ೧೦ನೆ ತಾರೀಕಿನ ಒಳಗೆ ಉಪಾಧ್ಯಾಯರಿಗೆ ಸಂಬಳವು ಕಲ್ಪುವಂತೆಯೂ, (೮) ಉಪಾಧ್ಯಾಯರ ರಿಟಾಯರ್‌ಮೆಂಟ್ ಅವಧಿಯನ್ನು ೫೫ರಿಂದ ೬೦ಕ್ಕೆ ಏರಿಸುವಂತೆಯೂ (೯) ೧೯೧೭ರಿಂದ ೧೯೪೫ರ ವರೆಗೆ ಟ್ರೈನಾದ ಲೋವರ್ ಗ್ರೇಡ್ ಉಪಾಧ್ಯಾಯರನ್ನು ಹಾಯರ್ ಗ್ರೇಡ್ ಎಂತ ಎಣಿಸುವಂತೆಯೂ (೧೦) ಹಾಯರ್ ಗ್ರೇಡ್ ಟ್ರೈನ್ಡ್ ಉಪಾಧ್ಯಾಯರು S. S. L. C. ಪರೀಕ್ಷೆಗೆ ಕೂಡಬಹುದೆಂದು ಕೊಳ್ಳುವಂತೆಯೂ (೧೧) ಡಿಸ್ಟ್ರಿಕ್ಟ್ ಬೋರ್ಡಿನ ಒಳಗಿರುವ ಹಾಯರ್ ಎಲಿಮೆಂಟರಿ ಮತ್ತು ಹೈಸ್ಕೂಲಿನ ಸೆಕೆಂಡರಿ ಗ್ರೇಡು ಉಪಾಧ್ಯಾಯರಿಗೆ ಒಂದೇ ತರದ ಸ್ಕೇಲು ಮತ್ತು ವರ್ಗಾವರ್ಗಿಯ ಕ್ರಮ ಇರುವಂತೆಯೂ (೧೧) ಕುಂದಾಪುರ ಮತ್ತು ಮಂಗಳೂರು ಉಪಾಧ್ಯಾಯರಿಗೆ ಇಕ್ರಿಮೆಂಟ್ ಕೊಡಲು ಬಾಕಿ ಇರುವುದನ್ನು ಈಗ ಸೇರಿಸಿ ಕೊಡುವಂತೆಯೂ (೧೨) ಶಾಲೆಗೆ ದಾಖಲಾದ ಮಕ್ಕಳು ಬಿಟ್ಟುಹೋದಾಗ ಹೆತ್ತವರಿಗೆ ದಂಡನೆ ವಿಧಿಸುವ ರೂಲು ಜಾರಿಗೆ ತಾರದಂತೆಯೂ ಸಂಪೂರ್ಣ ಖಡ್ಡಾಯ ಶಿಕ್ಷಣವನ್ನು ಜಾರಿಗೆ ತರುವಂತೆಯೂ (೧೪) ಉಪಾಧ್ಯಾಯರ ಪರವಾಗಿಯೇ ಡಿ। ಬೋರ್ಡಿನಲ್ಲಿ ೧ ಮೆಂಬರಿಗೆ ಸ್ಥಾನವು ಪ್ರತ್ಯೇಕಿಸಿಡುವಂತೆಯೂ (೧೫) ಅನ್‌ಟ್ರೈನ್ಡ್ ಉಪಾಧ್ಯಾಯರ ಸ್ಥಾನಗಳಲ್ಲಿ ಟ್ರೈನ್ಡ್ ಉಪಾಧ್ಯಾಯರನ್ನು ಬೋರ್ಡಿನವರು ನೇಮಿಸಬೇಕಾಗಿಯೂ, (೧೬) ಪಂಚಾಯ್ತಿ ಶಾಲೆಯ ಉಪಾಧ್ಯಾಯರಿಗೂ ಸಂಬಳದ ಸ್ಕೇಲು ಕೊಡಿಸಬೇಕಾಗಿಯೂ (೧೭) ಯೈಡೆಡ್ ಉಪಾಧ್ಯಾಯರಿಗೆ ಸೆಕೆಂಡ್ರಿ ಟ್ರೈನ್ಡು ೨೦, ಅನ್‌ಟ್ರೈನ್ಡು ೧೫, ಹಾಯರ್ ೧೫, ಅನ್‌ಟ್ರೈನ್ಡು ೧೨, ಲೋವರ್ ಟ್ರೈನ್ಡು ೧೨ರಂತೆ ಸಂಬಳ ದೊರೆಯುವ ಹಾಗೆ ಗ್ರಾಂಟು ಕೊಡಿಸುವಂತೆ (೧೮) ಯೈಡೆಡ್ ಶಾಲಾ ಉಪಾಧ್ಯಾಯರ ಶಿಕ್ಷೆ ಬಗ್ಗೆ ಅಪ್ಪಿಲು ಮಾಡುವ ಕಾನೂನು ಏರ್ಪಡಿಸಬೇಕಾಗಿ (೧೯) ಯೈಡೆಡ್ ಎಲಿಮೆಂಟರಿ ಶಾಲೆಗಳಿಗೂ ಎಕ್ವಿಪ್‌ಮೆಂಟ್, ಇನ್ಸ್‌ಟಾಲ್‌ಮೆಂಟು ಗ್ರಾಂಟು ಕೊಡಿಸುವಂತೆ (೨೦) ಸರಕಾರದವರು ಸೂಚಿಸಿದ ಹಾಯರ್ ಸ್ಕೇಲನ್ನು ಡಿ। ಬೋರ್ಡಿನವರು ಜಾರಿಗೆ ತರುವಂತೆ ಸರಕಾರವು ಡಿ. ಬೋರ್ಡಿಗೆ ಗ್ರಾಂಟು ಕೊಡಿಸುವಂತೆ (೨೧) ಬಾಲಚಂದ್ರ ಪತ್ರಿಕೆಯನ್ನು ಈ ಸಂಘವೇ ನಡೆಸುವಂತೆಯೂ ವರ್ಷಕ್ಕೆ ೧ ರೂ. ಚಂದಾ ಕಡಬೇಕಾಗಿಯೂ (೨೨) ಲೋವರ್ ಗ್ರೇಡಿನ ಮುಖ್ಯ ಮಾಸ್ಟರ್ ಸಂಬಳವನ್ನು ರೂ. ೨೦ಕ್ಕೆ ಏರಿಸಬೇಕಾಗಿಯೂ (೨೩) ಉಪಾಧ್ಯಾಯಿನಿಯರ ಟ್ರೈನಿಂಗ್ ಶಾಲೆಯಲ್ಲಿ [illegible]

ಶ್ರೀ ಕೃಷ್ಣ ಸಿನಿಮಾದಲ್ಲಿ ಪ್ರದರ್ಶಿಸಲ್ಪಡುತ್ತಿರುವ "ವೀರ ಬಭ್ರುವಾಹನ" ಚಲಚ್ಚಿತ್ರದೊಳಗಿನ ಒಂದು ದೃಶ್ಯ.

ಪುತ್ತೂರು ದಸರಾ ಮಹೋತ್ಸವ, ೧೯೪೮. ಕಲಾಪ್ರದರ್ಶನ.

ಬಹುಮಾನಪಡೆದವರ ಪಟ್ಟಿ.

ನಾಟ್ಯಕಲಾ ವಿಭಾಗ:— ಶ್ರೀ ರು ಹೋಕ್ಷ ಮುಂಜೆ, ಪುತ್ತೂರು—ಸುವರ್ಣಪದಕ; ರಾಮಣ್ಣ, ಮುಕ್ಕ—ರಜತಪದಕ; ಪಿ. ಶ್ರೀನಿವಾಸರಾವ್, ಉಡುಪಿ—ರಜತಪದಕ; ನೇಮಿರಾಜ, ಮೂಲ್ಕಿ—ಶಿಫಾರಸು ಪತ್ರ; ಡಿ. ಶ. ಸ್ವಾಮಿ, ಬೆಂಗಳೂರು—ಶಿಫಾರಸು ಪತ್ರ; ಎಸ್. ಸದಾಶಿವರಾವ್, ಪುತ್ತೂರು—ಶಿಫಾರಸು ಪತ್ರ; ವ್ಯೆ. ವೈಕುಂಠರಾವ್, ಪುತ್ತೂರು—ಶಿಫಾರಸು ಪತ್ರ.

ಕಸೂತಿ ಇತ್ಯಾದಿ:— ಕುಂದಾಪುರ ಬೋರ್ಡ್ ಹೈಯರ್ ಎಲಿಮೆಂಟರಿ ಗರ್ಲ್ಸ್ ಶಾಲೆ, ಶಿಫಾರಸುಪತ್ರ; ಬಿ. ಎಸ್. ರತ್ನಾಬಾಯಿ, ಪುತ್ತೂರು—ಶಿಫಾರಸುಪತ್ರ; ವಿ. ಬಾಬು, ವಿಟ್ಲ—ಶಿಫಾರಸುಪತ್ರ; ಎಮ್. ಪದ್ಮನಾಭನಾಯಕ್—ಶಿಫಾರಸುಪತ್ರ; ಎಮ್. ಕಾಂಭವಿಬ್ಬಾ, ಮಂಜೇಶ್ವರ—ಶಿಫಾರಸುಪತ್ರ; ಮಿಸೆಸ್ ಎಮ್. ಲೀಲಾಬ್ಬಾ, ಮಂಜೇಶ್ವರ—ಶಿಫಾರಸುಪತ್ರ; ಪದ್ಮಯ ಶೆಟ್ಟಿ, ಮೂಡಬಿದ್ರಿ—ಶಿಫಾರಸುಪತ್ರ; ರಮಾಬ್ಬಾ, ಪುತ್ತೂರು—ಶಿಫಾರಸುಪತ್ರ.

ಫೊಟೋಗ್ರಾಫ್ ವಿಭಾಗ:— ಕೆ. ಎಸ್. ಕಾರಂತ, ಬಹುಮಾನ ಕೊಡಲಾಗಲಿಲ್ಲ. ಯು. ಜಿ. ಕೃಷ್ಣಭಟ್—ಶಿಫಾರಸುಪತ್ರ.

ಉಪಾಧ್ಯಾಯ ವಿಭಾಗ:— ವಿ. ಬಾಬು, ವಿಟ್ಲ, ರಜತಪದಕ; ಬಿ. ಉಪೇಂದ್ರಭಟ್, ಬೆಳ್ತಂಗಡಿ, ಶಿಫಾರಸುಪತ್ರ; ಬಿ. ಅನಂತಯ್ಯ, ಬೆಳ್ತಂಗಡಿ, ಶಿಫಾರಸುಪತ್ರ; ಕೆ. ರುಕ್ಮಯ ಗೌಡ, ಪುತ್ತೂರು, ಶಿಫಾರಸುಪತ್ರ; ಮಿಸ್ ಜೆ. ಮಸ್ಕರೇನ್ಹಸ್, ಪುತ್ತೂರು, ಶಿಫಾರಸುಪತ್ರ.

ವಿದ್ಯಾರ್ಥಿ ವಿಭಾಗ:— ಪಾರ್ವತಿಬ್ಬಾ, ಪುತ್ತೂರು ಹುಡುಗಿಯರ ಶಾಲೆ; ದೇವಕಿಬ್ಬಾ ಕುಂಬಳೆ, ಹಾ। ಎ। ಶಾಲೆ; ಗಣೇಶಭಕ್ತ, ಕಾಸರಗೋಡು ಹೈಸ್ಕೂಲ್; ಮನೋರಮಾ, ಪುತ್ತೂರು ಹುಡುಗಿಯರ ಶಾಲೆ.

ನೆಟ್ ವರ್ಕ್: ಬಿ. ಸುಶೀಲಾಬ್ಬಾ, ಪುತ್ತೂರು ಹೈಸ್ಕೂಲು; ಬಿ. ರಂಗನಾಥರಾವ್, ಪುತ್ತೂರು ಹೈಸ್ಕೂಲ್; ಪಿ. ಮಹಾಲಿಂಗ ಶೆಟ್ಟಿ, ಪುತ್ತೂರು ಹೈ। ಎ। ಶಾಲೆ; ಜಾನಿಬ್ಬಾ, ಪುತ್ತೂರು ಹುಡುಗಿಯರ ಶಾಲೆ; ಹೊಬ್ಬಿಸ್ ಕ್ಲಾಸ್, ಪುತ್ತೂರು, ಹಾ। ಎ। ಹುಡುಗಿಯರ ಶಾಲೆ.

ಅವೆಮಿಣ್ಣಿನ ಗೊಂಬೆಗಳು: ರಾಮಕೃಷ್ಣ, ಪುತ್ತೂರು ಹುಡುಗಿಯರ ಶಾಲೆ, ಧರ್ಮಬ್ಬಾ, ಪುತ್ತೂರು ಹುಡುಗಿಯರ ಶಾಲೆ; ಗೋವಿಂದ ಕುನ್ನ್ಯಾನ, ಹಾ। ಎ। ಶಾಲೆ; ವರದರಾವ್, ಕುಂಬಳೆ, ಹಾ। ಎ। ಶಾಲೆ; ಯು. ಅನಂದ, ಉಪ್ಪಿನಂಗಡಿ ಹಾ। ಎ। ಶಾಲೆ; ಪಿ. ವೆಂಕಪ್ಪ, ಉಪ್ಪಿನಂಗಡಿ ಹಾ। ಎ। ಶಾಲೆ.

ಶೃಂಗಾರ: ಎ. ಶೀನಪ್ಪ ಶೆಟ್ಟಿ, ಬೆಳ್ಳಾರೆ; ಭೋಜ ಶೆಟ್ಟಿ, ಬೆಳ್ಳಾರೆ; ಮೋನಪ್ಪ ಗೌಡ, ಬೆಳ್ಳಾರೆ; ಹೂವಪ್ಪ ನ್ಯಾಕ, ವಿಟ್ಲ; ಕೃಷ್ಣ ಆಳ್ವ, ವಿಟ್ಲ; ಶಾರದಾಬ್ಬಾ, ವಿಟ್ಲ.

ಚಿತ್ರವಿಭಾಗ:— ಎಮ್. ರಾಧಾ ಬ್ಬಾ, ಉಡುಪಿ ಹೈಸ್ಕೂಲ್; ಎನ್. ಎಸ್. ರಾಮಕೃಷ್ಣ, ಪುತ್ತೂರು ಹೈಸ್ಕೂಲ್; ಸದಾನಂದ ಪ್ರಭು, ಪುತ್ತೂರು ಹೈಸ್ಕೂಲ್; ಬಾಲಕೃಷ್ಣ ಹೊಳ್ಳ, ಪುತ್ತೂರು ಹೈಸ್ಕೂಲ್; ಕೆ. ಸೂರ್ಯನಾರಾಯಣರಾವ್, ಉಪ್ಪಿನಂಗಡಿ; ರಘುವೀರ ನಾಯಕ್, ವಿಟ್ಲ; ಕೆ. ರಾಮರಾವ್, ಪುತ್ತೂರು ಹೈಸ್ಕೂಲ್; ಇದ್ದಿನಬ್ಬ, ಉಪ್ಪಿನಂಗಡಿ; ಪಿ. ಕೃಷ್ಣಪ್ಪ ಸುಳ್ಯ; ಮಾರ್ಶೆಲ್ ಮಿಸೆಜಸ್ ಉಪ್ಪಿನಂಗಡಿ; ಸೂರ್ಯನಾರಾಯಣ, ಉಪ್ಪಿನಂಗಡಿ; ಶಂಕರ ಕಾಮತ್, ಮೂಲ್ಕಿ ಹೈಸ್ಕೂಲ್; ಪಿ. ಎಮ್. ರಾಘವನ್, ಗವರ್ನಮೆಂಟ್ ಕೊಲೇಜ್; ಎ. ರಾಮಣ್ಣ, ಸುಳ್ಯ; ಎಮ್. ಜಿ. ಆಚಾರಿ, ಮೂಲ್ಕಿ ಹೈಸ್ಕೂಲ್.

ಚಿತ್ರಗಳು:— ಕೆ. ದಯಾನಂದಭಟ್, ಕುಂಬಳೆ; ಉಮಾಸುಂದರ, ಸುಳ್ಯ; ಯು. ಮಹಾಲಿಂಗ ಶೆಟ್ಟಿ, ಪುತ್ತೂರು; ಬಿ. ಸೀತಾಬ್ಬಾ, ಪುತ್ತೂರು ಹೈಸ್ಕೂಲ್.

ಸೂಜಿಯ ಕೆಲಸ:— ಕೃಷ್ಣಾಬ್ಬಾ, ಉಪ್ಪಿನಂಗಡಿ; ಮುತ್ತಿನಾಬ್ಬಾ, ಉಪ್ಪಿನಂಗಡಿ; ಬಾಬಿ ಪೆರೇರಾ, ಪುತ್ತೂರು ಗರ್ಲ್ಸ್ ಎಂಟ್ರ್ಯಾ ದರಿ; ಎಡ್ವಿನ್ ಸೋಜ, ಪುತ್ತೂರು; ಇಂದಿರಾ ಬ್ಬಾ, ಪುತ್ತೂರು.

ಜೊತೆಗೆ ಕ್ರೈಸ್ತರನ್ನೆ ಸೇರಿಸಿಕೊಳ್ಳುವುದರಿಂದ ಇನ್ನು ಮುಂದೆ ಎಲ್ಲಾ ಜಾತಿಯವರಿಗೂ ಸೇರುವರೆ ಎಡೆ ಇರಬೇಕಾಗಿಯೂ ವಗೈರೆ ಡಿ। ಬೋರ್ಡಿಗೂ ಸರಕಾರಕ್ಕೂ ಕಳುಹಿಸುವ ಅನೇಕ ಠರಾವುಗಳು ಪಾಸಾಗಿವೆ. ಕೆಲವು ನಿರ್ಣಯಗಳು ಕಳೆದ ವರ್ಷ ಆದವುಗಳೇ ಆದ್ದರಿಂದ ಅದರಲ್ಲಿ ಕಾಣಿಸಲಿಲ್ಲ.

ಅಧ್ಯಕ್ಷರ ಕಾಲೋಚಿತ ಭಾಷಣದ ನಂತರ ವಂದನೋಕ್ತಿಗಳಿಂದ ಸಭೆಯು ಮುಕ್ತಾಯವಾಯಿತು.

ವಿ. ಬಾಬು ಶೆಟ್ಟಿ,
ಕಾರ್ಯದರ್ಶಿ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ಸಂಖ್ಯೆ 448/'34.

ಲಕ್ಷ್ಮೀದೇವಿ ಅಮ್ಮ—ವಾದಿಳು.

ಮತ್ತು

M. ಶಂಕರ ರಾವ್ ಸಹ—ಪ್ರತಿವಾದಿರು.

ಇವರೊಳಗೆ

8ನೇ ಪ್ರತಿವಾದಿ—M. ಸದಾಶಿವ ರಾವ್, ಮೂಡಬಿದ್ರೆ ಸುಬ್ರಾಯರ ಮಗ, Africa East Colony Nairobi Town Post Box No. 319. ಎಂಬಲ್ಲಿರುವವ.

ವಾದಿಳು ಅವಳಿಗೆ ಬರಬೇಕಾದ ರಜಿಸ್ಟ್ರ ಆದವು ದಸ್ತಾವೇಜಿನ ಅಸಲು ಬಡ್ಡಿ ಬಾಬಗೆ ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 24-11-'34ಕ್ಕೆ ತನ್ನಿಗೆ ಇಟ್ಟಿರುವುದರಿಂದ 8ನೇ ಪ್ರತಿವಾದಿಗೆ ಆಕ್ಷೇಪವಿದ್ದರೆ ಆ ದಿವಸ ಕೋರ್ಟಿಗೆ ಜ್ಯಾಹೀರ್ ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗಿಯದೆ.

Kasaragod, 8-11-'34. } **C. Rama Rao,** *Vakil for Plaintiff.*

ನೋಟೀಸು.

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ಸಂಖ್ಯೆ 908/34.

ಹೆಜಮ್ಮ ಯಾನೆ ಪದ್ಮಾವತಮ್ಮ ಕೂಡಾ—ವಾದಿಳು.

1. ಹೆಜಮಾಡಿ ವೆಂಕಟ್ರಮಣ ಶ್ಯಾನುಭಾಗ, 2. ಗೋಪಾಲ ಶ್ಯಾನುಭಾಗ, 3. ರಾಘವೇಂದ್ರ ಶ್ಯಾನುಭಾಗ, 4. ಜನಾರ್ಧನ ಶ್ಯಾನುಭಾಗ, ಸುಬ್ರಾಯ ಶ್ಯಾನುಭಾಗರ ಮಕ್ಕಳು, ಮೂಲ್ಕಿ ಪೇಟೆ—ಪ್ರತಿವಾದಿರು.

ವಾದಿರು ಪ್ರತಿವಾದಿರ ಮೇಲೆ ರೂಪಾಯಿ 198—1—6ಕ್ಕೆ ಮಾಡಿದ ಸದ್ರಿ ದಾವೆಯು ತಾ. 20-11-'34ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಆಕ್ಷೇಪಯಿದ್ದರೆ ಸದ್ರಿ ಪ್ರತಿವಾದಿರು ಸದ್ರಿ ತಾರೀಕಿಗೆ ಹಗಲು 11 ಗಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಪ್ರತಿವಾದಿರ ಶಿವಾಯಿ ತೀರ್ಮಾನವಾಗುವುದು.

ಮಂಗಳೂರು, 1-11—'34. } **P. N. Bhandarkar,** *Vakil for Plff.*

ಸ್ವೀಕಾರ

ಸುಬೋಧ:—ಮಾಸಪತ್ರಿಕೆ, ಬೆಂಗಳೂರು. ವಾರ್ಷಿಕ ಚಂದಾ ರೂ. 4. ಸಂಪಾದಕರು—ಶ್ರೀ ಎಂ. ರಾಮರಾಯರು, ಸುಬೋಧದ ಹತ್ತನೇ ಸಂಪುಟದ ಪ್ರಥಮ ಸಂಚಿಕೆಯನ್ನು ಆತ್ಮಾದರದಿಂದ ಸ್ವೀಕರಿಸಿರುವೆವು. ಕರ್ನಾಟಕದ ಮಾಸಪತ್ರಿಕೆಗಳಲ್ಲಿ ಅಗ್ರಗಣ್ಯವಾಗಿ ಮೆರೆಯುತ್ತಿರುವ ಈ ಪತ್ರಿಕೆಯು ಈ ವರ್ಷ ಇನ್ನಷ್ಟು ಸುಂದರವಾಗಿ ವಿಷಯಬಾಹುಳ್ಯ ಹಾಗೂ ಪುಟಸಂಖ್ಯೆಯನ್ನು ಹೆಚ್ಚಿಸಿ ಇಮ್ಮಡಿ ಉತ್ಸಾಹದಿಂದ ಕನ್ನಡಿಗರ ಸೇವೆಗಾಗಿ ಮುಂಬರಿದಿರುವುದು ಅಭಿಮಾನಪಡತಕ್ಕ ವಿಷಯವಾಗಿದೆ. ಪತ್ರಿಕೆಯ ಅಂತರ್ಬಾಹ್ಯ ಸೌಂದರ್ಯವು ಮುದ್ರಣದೃಷ್ಟಿಯಿಂದಲೂ ಉತ್ತಮವಾಗಿದೆ. ಉದಾತ್ತ ವಿಚಾರ ಪರಿಷ್ಕೃತವಾದ ಲೇಖಗಳನ್ನೆ ಕೊಡುತ್ತ ಸುಬೋಧವು ತನ್ನದೇ ಆದ ಒಂದು ವಿಶಿಷ್ಟಸ್ಥಾನವನ್ನು ಗಳಿಸಿ ಕನ್ನಡಿಗರಿಗೆ ಮನೋರಂಜನೆಯಾಗುವಂತೆ ಮಾನಸಿಕ ಆಹಾರವನ್ನೂ ಒದಗಿಸುತ್ತಿದ್ದು, ಕನ್ನಡಿಗರ ಆದರವನ್ನು ಇನ್ನಷ್ಟು ಹೆಚ್ಚಾಗಿ ಪಡೆವ ಅರ್ಹತೆಯನ್ನು ಪ್ರಕಟಗೊಳಿಸಿರುವುದು. ಅದನ್ನು ಗುರುತಿಸಿ, ಆದರದಿಂದೆತ್ತಿ, ಗೌರವಿಸುವುದು ಕನ್ನಡಿಗರ ಕರ್ತವ್ಯ.

ಉದಯರಾಗ:—ಧಾರವಾಡದ 'ಜಯ ಕರ್ನಾಟಕ' ಗ್ರಂಥಮಾಲೆಯ ೧೭ನೇ ಪುಷ್ಪ; ಬರೆದವರು— ಶ್ರೀ ಅ. ನ. ಕೃಷ್ಣರಾಯರು, ಬೆಂಗಳೂರು. ಆಕಾರ— ಕ್ರೌನ್ 1/16; ಪುಟಸಂಖ್ಯೆ— ೧೩೪—೪.

NEW ARRIVALS.

Medicines.

Dr. Schuessler's Twelve Tissue Remedies 5 gr. bot. As. 4/-
Homoeopathy Medicines 5 gr. bot. As. 5/-
Sugar of Milk Dr. Schwabe's original bot. 1lb Rs. 2/-
Haarlem Oil—a world-renowned remedy As. 8/-per phial.
Dr. Haele's New Curative Earth—Radium Cure Rs. 4/-per lb.
Dr. Schwabe's other special remedies are always in stock
Please consult us for your requirements.

Kanarese Book a Family Guide to Biochemistry Re. 1/-
" Domestic Homoeopathy Rs. 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others.

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As. 2/6
Delightful in aroma, charming in appearance. Please try.

Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc., and stock.

Pipes and pipe fittings at cheap prices. Coir Mats and Mattings.

Steadler Pencils and Stationeries.

We are the recognised agents for STEADLER'S all stationeries and shall be glad to serve you.

Olympia Typwriter.

An up-to-date Machine in Standard and portable sizes.

For Futher particulars please write to:—

Basel Mission Book & Tract Depository,
Mangalore, S. K. or Hubli, S. M.

The Canara Public Conveyance Company, Ltd., Mangalore.

ಮದರಾಸಿನ ಚುನಾವಣೆಗಳ ಫಲಿತಾಂಶವು ಈಗಾಗಲೇ ಪ್ರಕಟವಾಗಿದ್ದು, ನಮ್ಮ ಪ್ರಾಂತ್ಯದಲ್ಲಿ ಅತಿ ಮಹತ್ವವನ್ನುಳ್ಳದ್ದಾಗಿದೆಯೆನ್ನಬೇಕು. ರೌಂಡ್‌ಟೇಬ್ಲ್ ಪರಿಷತ್ತಿಗೆ ಪ್ರತಿನಿಧಿಯಾಗಿ ತೆರಳಿದ್ದ ದಿವಾನ್ ಬಹದೂರ್ ರಾಮಸ್ವಾಮಿ ಮೊದಲಿಯಾರರನ್ನು, ಐದು ಸಾವಿರಕ್ಕಿಂತಲೂ ಹೆಚ್ಚಿನ ವೋಟುಗಳನ್ನು ಪಡೆದು ಕಾಂಗ್ರೆಸ್ ಉಮೇದ್ವಾರರಾದ ಶ್ರೀ ಸತ್ಯಮೂರ್ತಿಯವರು ಪರಾಜಯಗೊಳಿಸಿರುವರು. ಅತ್ತ, ಎಸೆಂಬ್ಲಿ ಅಧ್ಯಕ್ಷರೂ, ಒಟ್ಟಾವ ಒಪ್ಪಂದದ ಕಾರಣೀಭೂತರಲ್ಲೊಬ್ಬರೂ ಆದ ಸರ್ ಷಣ್ಮುಗಂ ಚೆಟ್ಟಿಯಾರರ ಅಪಜಯ! ಇವೆರಡೂ ಕಾಂಗ್ರೆಸ್ ವಿರೋಧಿಗಳ ಮತ್ತು ಸರಕಾರಗಳ ಅಭಿಪ್ರಾಯಗಳನ್ನು ತಿದ್ದದೆ ಇರವು. ಮೊದಲಿಯಾರರು ಜನಾಂಗ ಪ್ರತಿನಿಧಿಗಳೆಷ್ಟೊ ಅಷ್ಟೆ ಷಣ್ಮುಗಂರವರೂ ದೇಶಹಿತಚಿಂತಕರೂ ಎಂಬುದನ್ನು ಮತದಾರ ಸಮೂಹವು ಸ್ಪಷ್ಟಪಡಿಸಿದೆ. ಸಾಮಾನ್ಯ ಕಾನ್ಸಟಿಟ್ಯೂಯನ್ಸಿಗಳನ್ನಪೇಕ್ಷಿಸದೆ ಪರಿಮಿತ ಮತದಾರರಿರುವ 'ಇಂಡಿಯನ್ ಕಾಮರ್ಸ್ ಕಾನ್ಸಟಿಟ್ಯೂಯನ್ಸಿ'ಯನ್ನು ಶ್ರೀ ಷಣ್ಮುಗಂರವರು ಆರಿಸಿ,—ತನ್ನವರ್ಚಸ್ಸು, ಒಟ್ಟಾವ ಒಪ್ಪಂದದಿಂದಾದ ಹಿಂದೀ ವಾಣಿಜ್ಯ ಪ್ರಪಂಚಕ್ಕಾದ 'ಉಪಕಾರ,' ಎಸೆಂಬ್ಲಿ ಅಧ್ಯಕ್ಷನಾಗಿ ತಾನು ಒಪ್ಪಿಸಿದ ಸೇವೆ- ಇವು ತನ್ನ ಬೆಂಬಲಕ್ಕಿವೆಯೆಂಬ ಭರವಸೆಯಿಂದ ಚುನಾವಣೆಗೆ ನಿಂತು, ವೋಟರರು ಮಾತ್ರ ತೀರ ವಿರುದ್ಧಾಭಿಪ್ರಾಯವುಳ್ಳವರೆಂಬುದನ್ನು ಪ್ರತ್ಯಕ್ಷವಾಗಿ ಕಂಡರು. ರಾಷ್ಟ್ರೀಯ ಮಾನಸಿಕತೆಯಿಂದ ರಾಜಕೀಯಗಳಿಗೆ ಪ್ರವೇಶಿಸಿ, ಕಾಂಗ್ರೆಸ್ಸಿನ ಹೆಸರಲ್ಲಿ ಉಜ್ವಲರಾಗಿ ಮೆರೆದ ಷಣ್ಮುಗಂರವರು, ತನ್ನ ವಾಕ್ಪಟುತ್ವವನ್ನೂ ವ್ಯಕ್ತಿತ್ವವನ್ನೂ ಕಾಂಗ್ರೆಸ್ ನಿಂದೆಗಾಗಿಯೇ ವಿನಿಯೋಗಿಸಿ 'ಪ್ರತೀಕಾರ'ಕರಿಸಿಸಿದರು; ಎಸೆಂಬ್ಲಿ ಸ್ಥಾನವನ್ನು ಈ ಚುನಾವಣೆಯಲ್ಲಿ ಕಳಕೊಂಡರು. ಶ್ರೀ ಮೊದಲಿಯಾರರ ವಿಚಾರವಾದರೂ ಅಷ್ಟೆ.

ಮದರಾಸಿನ ಅನೇಕ ಕಾನ್ಸ್ಟಿಟ್ಯೂಯನ್ಸಿಗಳಲ್ಲಿ, ಕಾಂಗ್ರೆಸ್ ಉಮೇದ್ವಾರರಿಗೆ ಪ್ರತಿಸ್ಪರ್ಧಿಗಳಾಗಿ 'ಜಸ್ಟಿಸ್' ಪಕ್ಷದವರೇ! ಕಾಂಗ್ರೆಸ್ ವಿರೋಧಿಗಳೆಂಬ ಮಾತ್ರದಿಂದ 'ಜಸ್ಟಿಸ್' ಪಕ್ಷದವರಾದವರೂ ಇರುವರು! ಇವರು ಎಷ್ಟು ಜನಾದರಕ್ಕೆ ಪಾತ್ರರಾದವರೆಂಬುದು ಇನ್ನು ಒಂದೆರಡು ದಿನಗಳಲ್ಲಿ ಪೂರ್ಣವಾಗಿ ವ್ಯಕ್ತವಾಗುವುದು.

ನಮ್ಮ ಜಿಲ್ಲೆಯ ವಿಚಾರವಾದರೂ ಊಹನಾತೀತವಾಗಿಲ್ಲ. ಮತದಾರರು, ಕಾಂಗ್ರೆಸ್ಸಿನ ಕಡೆಗಿರುವ ತಮ್ಮ ವಿಶ್ವಾಸವನ್ನೂ ಪ್ರೀತಿಯನ್ನೂ ನಿರೀಕ್ಷಿಸಿದಷ್ಟು ವ್ಯಕ್ತಪಡಿಸಿಯೇ ಇರುವರೆಂದೆನ್ನಬಹುದು.

ಕಾಂಗ್ರೆಸ್ ಉಮೇದ್ವಾರರಿಗೆ ವೋಟು ಕೊಡುವಾಗ- ಮತದಾರರು ಜಾತಿ, ಮತ, ಅಥವಾ ವ್ಯಕ್ತಿಯನ್ನು ಲಕ್ಷಿಸಿ ಮತದಾನ ಮಾಡಲಿಲ್ಲ. ಕೇವಲ ಕಾಂಗ್ರೆಸನ್ನೆ ಗುರುತಿಸಿದರು. ಕಾಂಗ್ರೆಸ್ ಉಮೇದ್ವಾರರೂ ಸ್ವೀಯ ಗುಣಾವಳಿಗಳನ್ನು ಜನರ ಮುಂದಿಡದೆ,- ಕಾಂಗ್ರೆಸ್ಸಿನ ಧೋರಣೆ, ದೃಢನಿಶ್ಚಯ ಮತ್ತು ನಿಷ್ಕಾಮ ಸೇವೆಯ ಚಿತ್ರವನ್ನೆ ಮುಂದಿಟ್ಟು ಪ್ರಚಾರ ಕಾರ್ಯ ಮಾಡಿರುವರು. ಎಂದಿಗಿಂತಲೂ ಅತ್ಯಧಿಕವಾದ ಉತ್ಸಾಹವನ್ನೂ ಶ್ರದ್ಧೆಯನ್ನೂ ತೋರಿ, ತಮ್ಮ ಮತಗಳ ಸದುಪಯೋಗ ಮಾಡಿದ ವೋಟರರನ್ನೂ, ಅಭೂತಪೂರ್ವ ಆಸಕ್ತಿಯನ್ನು ತೋರಿ ಚುನಾವಣೆಗಳ ಯಶಸ್ಸಿಗೆ ಸಹಾಯಕರಾದ ಮಹಿಳೆಯರನ್ನೂ ಅಭಿವಂದಿಸಬೇಕಾಗಿದೆ.

ಚುನಾಯಿತ ಸದಸ್ಯರು, ಜನಾಂಗವು ತಮ್ಮ ಮೇಲಿರಿಸಿದ ಭರವಸೆ—ಗೌರವಗಳಿಗೆ ಆಘಾತವಾಗದಂತೆ ದೇಶದ ರಾಜಕೀಯ ಸಂಗ್ರಾಮದಲ್ಲಿ ನಿಷ್ಕಾಮ ಸೇವೆಯನ್ನರ್ಪಿಸುತ್ತಿರಲಿ! ಕಾಂಗ್ರೆಸ್ಸಿನ ವಿಜಯ ಭೇರಿಯು ಸರಕಾರದ ತಪ್ಪುಗ್ರಹಿಕೆಗಳನ್ನು ತಿದ್ದುವಂತಾಗಲಿ!

ಸ್ಫುಟವಿಚಾರಗಳು

"ಸೈನ್ಯದ ಮೇಲಿನ ಅಧಿಕಾರ ನಮಗೆ ಕೊಡಿ"

ಎಂದು ಮಹಾತ್ಮಾ ಗಾಂಧಿಯವರು ರೌಂಡ್ ಟೇಬಲ್ ಪರಿಷತ್ತಿನಲ್ಲಿ ಬಾಯ್ಬಿಟ್ಟು ಕೇಳಿದುದೂ, ಅದಕ್ಕೆದೊರೆತ ಉತ್ತರವೂ ಹಿಂದೀಯರ ಚಿತ್ತದಿಂದಳಿಸಿ ಹೋಗಲಾರದು. ಮೊನ್ನೆ ಹೌಸ್ ಒಫ್ ಲೋರ್ಡ್ಸ್‌ನಲ್ಲಿ ಲೋರ್ಡ್ ಸ್ಟ್ರಾಬೋಲ್ಗಿಯವರು ಪ್ರಶ್ನಿಸುತ್ತ— 'ಸೈನ್ಯದಲ್ಲಿ ಹಿಂದೀಯರನ್ನು ಹೆಚ್ಚಿಸುವ ವಿಷಯವಾಗಿ ಏನನ್ನಾದರೂ ಮಾಡಿದಿರಾ' ಎಂದು ಕೇಳಿದರು. ಉತ್ತರವಾಗಿ ಲೋರ್ಡ್ ಅರ್ವಿನರು 'ಈ ವಿಷಯವಾಗಿ ಬಹಳ ಸಾಹಸವನ್ನು ಮಾಡುತ್ತಿರುವೆವು' ಎಂದು ಮೊದಲಾಗಿ ಆಶ್ವಾಸನೆಯನ್ನಿತ್ತರು. ಅವರ ಮಾತಿನ ಭಾವಾರ್ಥವು ಇಂತಿಷ್ಟೇ ಎಂದು ಬೇರೆ ತುಲನೆಮಾಡಿ ನೋಡುವುದನವಶ್ಯ. ಹಿಂದೂಸ್ಥಾನದ ಬ್ರಿಟಿಷ ಸೈನಿಕರ ಮೇಲಿನ ಅಧಿಕಾರವನ್ನು ಹಿಂದೀಯರಿಗೆ ಎಂದೂ ಕೊಡಲಾಗುವುದಿಲ್ಲವೆಂಬುದು ಎಲ್ಲರ ಲಕ್ಷ್ಯಕ್ಕೆ ಬಂದಿದೆ. ರೌಂಡ್ ಟೇಬಲಿನ ಡಿಫೆನ್ಸ್ ಸಬ್ ಜೆಕ್ಟ್ ಕಮಿಟಿಯಲ್ಲಿ—'ಹಿಂದೀಯರನ್ನು ಹೆಚ್ಚು ಹೆಚ್ಚಾಗಿ ಸೈನ್ಯದಲ್ಲಿ ಸೇರಿಸಿಕೊಳ್ಳಬೇಕು' ಎಂದು ಚರ್ಚೆಯಾಗಿ ಕಾಗದದಲ್ಲಿ ಲಿಖಿತವಾದುದೇನೊ ಹೌದು;- ಕಾರ್ಯರೂಪವಾಗಿ ಏನು ನಡೆದಿದೆ? ಲೋರ್ಡ್ ಅರ್ವಿನರ ಆಶ್ವಾಸನೆಯು ಯುಗಾಂತರದಲ್ಲಾದರೂ ಫಲಿತವಾಗುವುದೇ?

ಎಸೆಂಬ್ಲಿ ಚುನಾವಣೆಯಲ್ಲಿ

ಇಷ್ಟರ ವರೆಗೆ ಕಾಂಗ್ರೆಸ್ ಹೊಂದಿದ ವಿಜಯವು ಕಾಂಗ್ರೆಸಿನ ವಿರೋಧಿಗಳಿಗೆ ಕಾಂಗ್ರೆಸ್ಸಿನ ಮಹಾಪ್ರತಿಭೆಯನ್ನು ಸಾರಿರುತ್ತದೆ. ಕಾಂಗ್ರೆಸ್ಸಿನ ಉಮೇದ್ವಾರರನ್ನು ಪ್ರತಿಭಟಿಸಿ ಚುನಾವಣೆಗೆ ನಿಂತ ಕೀರ್ತಿಶಾಲಿ ಮುಖಂಡರ ಅಸಹಾಯಪರತೆ, ನಿರ್ಬಲತೆಗಳು ಈ ಚುನಾವಣೆಗಳಲ್ಲಿ ಪ್ರದರ್ಶಿತವಾಗಿ ಮಹಾತ್ಮರ ಸಂದೇಶದ ವ್ಯಾಪಕತೆಯ ಅರಿವು ಈಗ ಎಲ್ಲರಿಗೂ ಉಂಟಾಗಿದೆ. ಎಸೆಂಬ್ಲಿ ಅಧ್ಯಕ್ಷರಾದ ಶ್ರೀ ಆರ್. ಕೆ. ಷಣ್ಮುಖಂ ಚೆಟ್ಟಿಯಾರರು—ವೈಸರಾಯರ ಪ್ರೇಮವಾತ್ಸಲ್ಯಕ್ಕೆ ಪಾತ್ರರಾದ ಚೆಟ್ಟಿಯಾರರು— ಈ ಚುನಾವಣೆಯಲ್ಲಿ ಅಪಜಯವನ್ನು ಹೊಂದಿದರೆಂದರೆ, ಸ್ವಾಮಿ ವೆಂಕಟಾಚಲ ಚೆಟ್ಟಿಯಾರರನ್ನು ಮಾತ್ರ ಜನತೆಯು ಎತ್ತಿ ಹಿಡಿದುದಲ್ಲ,— ಕಾಂಗ್ರೆಸ್ಸನ್ನೇ ಎತ್ತಿ ಹಿಡಿಯಿತೆಂದು ಬೋಧವಾಗುವುದು ಸರ್ವತ್ರ ಹಿಂದೂದೇಶದಲ್ಲಿ ಈ ಸಲ ಕಾಂಗ್ರೆಸ್ಸೇ ಕಲಿಯೆತ್ತಿ ನಿಂತು ಕೌನ್ಸಿಲುಗಳನ್ನು ಹೊಕ್ಕು, ದೇಶಕ್ಕೆ ಶುಭವನ್ನುಂಟುಮಾಡುವುದೆಂದು ಊಹಿಸಲಾಗಿದೆ. ವಾತಾವರಣ ಪರಿಶೀಲನೆಯನ್ನು ಮಾಡಿದ್ದಲ್ಲಿ ಈ ಊಹನೆಯು—ಅಸಮಂಜಸವೆಂದು ಕಾಣಲಾರದು. ಕಾಂಗ್ರೆಸ್ಸಿಗೆ ಜಯವಾಗಲೆಂದು ಅಂತಃಕರಣಪೂರ್ವಕವಾಗಿ ಕೋರುವೆವು.

ಅಂಚೆ ಆಫೀಸುಗಳಲ್ಲಿ ನಡೆದ ದ್ರವ್ಯಾಪಹಾರದ

ಅನೇಕ ಉದಾಹರಣೆಗಳು ಈಗೀಗ ಪದೇ ಪದೇ ಪ್ರಕಟವಾಗುತ್ತಿರುವುದು ಗೋಚರಿಸುತ್ತದೆ. ಸುಪರಿಂಟೆಂಡೆಂಟರೇ ಮೊದಲಾದ ಅಧಿಕಾರಿಗಳು ಅಂಚೆ ಆಫೀಸುಗಳ ಮೇಲ್ವಿಚಾರಣೆಯನ್ನು ಮಾಡುತ್ತಿರುವರಾದರೂ ದ್ರವ್ಯಾಪಹಾರವಾದ ವಾರ್ತೆಗಳು ದಟ್ಟವಾಗಿ ಹರಡುವುದು ಕಡಿಮೆಯಾಗಿಲ್ಲ. ಸಮಾಲೋಚಿಸಿ ನೋಡಿದಲ್ಲಿ ಅಂಚೆ ಖಾತೆಯವರನ್ನು ದಾರಿದ್ರ್ಯ ರೋಗವು ಆವರಿಸಿಕೊಂಡಿದೆಯೆಂಬುದರಲ್ಲಿ ಸಂದೇಹವಿಲ್ಲ. 'ಮದ್ರಾಸು ಜನ್ರಲ್ ಲೆಟರ್' 'ಇಂಡಿಯನ್ ಪೋಸ್ಟ್' 'ಲೇಬರ್' ಮೊದಲಾದ ಪತ್ರಿಕೆಗಳು ಅಂಚೆ ಖಾತೆಯವರ ಪರವಾಗಿ ಚಳವಳಿಸುತ್ತಿವೆ. ಪರಿಶಾ ಕಮಿಟಿಯೊಂದು ಕುಳಿತು ಆಲೋಚಿಸುತ್ತಿದೆಯಾದರೂ, ಈ ಕಮಿಟಿಯಿಂದ ಖಾತೆಗೆ ಭಾಗ್ಯವು ಬರಲಾರದೆಂಬುದು ನಿಶ್ಚಿತ ವಿಷಯ. ಅಂಚೆಯ ಪೇದೆ, ಪೋಸ್ಟ್‌ಮಾಸ್ಟರ್, ಎಕ್ಸ್ಟ್ರಾ ಡಿಪಾರ್ಟ್‌ಮೆಂಟಲ್ ಏಜೆಂಟರು, ಕರಣೀಕರುಗಳನ್ನೆಲ್ಲ ಕಠಿಣದ ಬಾಯಿಗೊಡ್ಡುವ ಬದಲಿಗೆ ಇವರ ಸಂಬಳವನ್ನು ಕೂಡಿದಷ್ಟು ಹೆಚ್ಚಿಸಿದ್ದಾದರೆ ಹೆಚ್ಚಿನ ಸಂಕಷ್ಟಗಳು ಪರಿಹಾರಗೊಳ್ಳುವುದರಲ್ಲಿ ಸಂದೇಹವಿರಲಾರದು.

ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲೀಸ್

ಇವರ ಪರಿಷತ್ತು ಒಂದನ್ನು ವೈಸರಾಯರು ಇದೇ ತಾ. ೨೬ರಲ್ಲಿ ಜರಗಿಸಲಿರುವರೆಂದೂ ಇದರಲ್ಲಿ ವೈಸರಾಯರು ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲೀಸರಿಗೆ ಹಲವು ಸಲಹೆಗಳನ್ನೀಯಲಿರುವರೆಂದೂ ಪ್ರಕಟವಾಗಿದೆ. ಪರಿಷತ್ತಿನ ಕಾರ್ಯಕಲಾಪಗಳೇನು— ಉದ್ದೇಶವೇನು ಎಂಬ ವಿಷಯಗಳು ಪ್ರಕಟವಾಗಲಿಲ್ಲವಾದರೂ, ಪೋಲೀಸು ಖಾತೆಯ ಸುಧಾರಣಾರ್ಥ ಈ ಪರಿಷತ್ತನ್ನು ಕರೆಯಲಾಗಿರುತ್ತದೆಂಬುದಕ್ಕೆ ಪ್ರತಿಪಾತಿರಲಾರದು. ಸಾರ್ವಜನಿಕರ ಸೇವಕರಾದ ಪೋಲೀಸರು ತಪ್ಪಿ ನಡೆದ ಎಷ್ಟೋ ಉದಾಹರಣೆಗಳಿರಬಹುದು; ಪೋಲೀಸರ ಖಾತೆಯಲ್ಲಿ ಅನೇಕ ಕುಂದುಕೊರತೆಗಳಿರಬಹುದು; ಅವುಗಳನ್ನೆಲ್ಲ ನಿರ್ಮೂಲಿಸುವ ಉದ್ದೇಶದಿಂದ ವೈಸರಾಯರು ಈ ಪರಿಷತ್ತನ್ನು ಕರೆದರೋ ಏನೊ ಎಂದು ನಿರೀಕ್ಷಿಸಲಾಗಿದೆ. ವೈಸರಾಯರು ಇಂತಹ ಪರಿಷತ್ತುಗಳನ್ನು ಆಗಾಗ ಕೂಡಿಸಿ, ಪೋಲೀಸ ಅಧಿಕಾರಿಗಳಿಗೆ ತಕ್ಕ ಸಲಹೆಗಳನ್ನಿತ್ತು ಸನ್ಮಾರ್ಗವನ್ನು ತೋರಿಸುವುದು ಅಗತ್ಯವೂ ಇರುತ್ತದೆ.

ಎಚ್ಚರವಿರಬೇಕಾಗಿದೆ

ಇತ್ತೀಚೆಗೆ ಇಲ್ಲಿಯ ವೆನ್‌ಲೋಕ್ ಆಸ್ಪತ್ರೆಯ ಬಾವಿಗೆ ಒಬ್ಬ ಒಳಗಿನ ರೋಗಿಯು ಹಾರಿ ಪ್ರಾಣಹತ್ಯಮಾಡಿಕೊಂಡನು. ಸುಮಾರು ೧೫ ವರ್ಷಗಳ ಹಿಂದೆಯೂ ಈ ಆಸ್ಪತ್ರೆಯ ಒಬ್ಬ ರೋಗಿಯು ಮೈದಾನಿನ ಬಳಿಯಿದ್ದ (ಈಗ ಮುಚ್ಚಲ್ಪಟ್ಟ) ಕೆರೆಗೆ ಬಿದ್ದು ಪ್ರಾಣತ್ಯಾಗ ಮಾಡಿದುದು ಸ್ಮರಣೆಯಲ್ಲಿದೆ. ಇಂತಹ ಇನ್ನೂ ಕೆಲವು ಘಟನೆಗಳು ಇರಬಹುದೋ ತಿಳಿಯದು! ಅಸಹನೀಯ ರೋಗಗಳು ಈ ರೀತಿ ಆತ್ಮಹತ್ಯೆಗೆ ಪ್ರೇರಣೆ ಕೊಡುವುವಾದರೂ ಅಧಿಕಾರಿಗಳು ಇದನ್ನು ತಡೆಯುವುದಕ್ಕಾಗಿ ಯೋಗ್ಯ ವ್ಯವಸ್ಥೆಗಳನ್ನು ಮಾಡಬಹುದು. ಆಸ್ಪತ್ರೆಯ ಬಾವಿಗೆ ಅನುಕೂಲಾನುಸಾರವಾಗಿ ಮುಚ್ಚಳವನ್ನು ಮಾಡಿಯೋ, ಇನ್ನಿತರ ವಿಧದಿಂದಲೋ ಈ ಘಟನೆಗಳನ್ನು ತಪ್ಪಿಸಬಹುದು. ಡಿ. ಎಮ್. ಓರವರಾಗಲೀ, ಇನ್ನಿತರ ಅಧಿಕಾರಿಗಳಾಗಲೀ ಈ ವಿಷಯವನ್ನು ಯೋಚಿಸುವರೇ?

ಹಿಂದೂದೇಶದ ಆರೋಗ್ಯಸ್ಥಿತಿಯು

ಅಸಂತಪ್ತಿಕರವೆಂಬ ವಿಷಯವು ಕರ್ನಲ್ ಎ. ಜೆ. ಎಚ್. ರಸೆಲ್, ಪಬ್ಲಿಕ್ ಹೆಲ್ತ್ ಕಮಿಶನರ್ ಇವರ ಇತ್ತೀಚೆಗಿನ ವರದಿಯಿಂದ ತಿಳಿದು ಬರುವುದು. ಜನನಗಳೂ ಅಧಿಕ; ಅದರೊಡನೆ ಮರಣಗಳೂ ಅಧಿಕ. ಶಿಶುಮರಣಗಳು ಸಾವಿರಕ್ಕೆ ೧೬೮.೦ ರಂತೆ ೧೯೩೨ರ ಪಟ್ಟಿಯನ್ನು ಪರಿಶೀಲಿಸಿದರೆ ಹಿಂದೂದೇಶದ ಸಾರ್ವಜನಿಕ ಆರೋಗ್ಯ ಸ್ಥಿತಿಯು ಸ್ವಲ್ಪ ಸುಧಾರಿತವಾಗಿದೆಯೆಂದು ತೋರಿದರೂ ಇದು ಪ್ರಶಂಸನೀಯವಲ್ಲವೆಂದು ಕಂಡುಕೊಳ್ಳಬಹುದು. ಹಿಂದೂದೇಶದಲ್ಲಿ ಮರಣ ಸಂಖ್ಯೆಯು ಹೆಚ್ಚುತ್ತಾ ಹೋಗುವುದಕ್ಕೆ ಜನರ ದಾರಿದ್ರ್ಯವೊಂದು ಮಹಾ ಕಾರಣವೆಂದು ಕಮಿಶನರರೇ ಒಪ್ಪುವರು; ಅದು ವಾಸ್ತವವೂ ಆಗಿದೆ. ಕಮಿಶನರರವರ ಅಭಿಪ್ರಾಯದಂತೆ 'ಒಲ್ ಇಂಡಿಯಾ ಪಬ್ಲಿಕ್ ಹೆಲ್ತ್ ಏಕ್ಟ್' ಎಂಬ ಶಾಸನವನ್ನು ರಚಿಸಿ ಜನರ ದೇಹಾರೋಗ್ಯವನ್ನು ಸಂರಕ್ಷಿಸಬೇಕೆಂದಿದೆ. ಅಂತಹ ಶಾಸನವು ಅಗತ್ಯವೂ ಇದೆ.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದನ್ನು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 1 ಮತ್ತು 1–10–0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಪ್ರಸೂತಿಕಾದಿಗಳಿಗೆ
ಚ್ಯವನಪ್ರಾಶಾವಲೇಹ.
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮಾರ್ಥವೈದ್ಯಶಾಲೆಯ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಚಿತ್ರಾಹುತಿ ಸಮೇತ
ಋಗ್ವೇದೀ ಸಂಧ್ಯಾವಂದನೆ.
(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)
ಎಂ. ನರಸಿಂಗರಾವ್, ಬಿ. ಎ., ಎಲ್. ಎಲ್
ಅವರಿಂದ ರಚಿತವಾದ
ಪ್ರತಿಪದಾರ್ಥಟೀಕಾ ವಿಧಿಸಹಿತ,
ಬೆಲೆ ಆಣೆ 8.
80, 60, 100 ಪ್ರತಿಗಳನ್ನು ಒಮ್ಮೆಲೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)
ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕಿರ್ಲೋಸ್ಕರವು



ಗುಣ–ಬಾಳಿಕೆಗಳ ಸೂಚಕವು.

ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,—ಅದರ ಖರ್ಚು ಕಡಿಮೆಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ. ಶಾಸ್ತ್ರೀಯವಾಗಿಯೂ ಪೂರ್ಣ ತೃಪ್ತಿ ಕೊಡುವಂತೆಯೂ ಅವು ರಚಿಸಲ್ಪಟ್ಟಿವೆ.

ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯದೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು.

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:—ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಚಾತುಕುಟ್ಟಿ ವೈದ್ಯರ
ವಿಶೂಚಿಕಾ ಸಂಹಾರಿ
Vishuchika Santhari
(PILCO)
ಕಾಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ. 1–0–0.

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)
ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ. ಕುಟುಂಬ ಪಾರಂಪರ್ಯದ ಈ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಜೊಟ್ಟೆಯ ಶುದ್ಧಿಗಾಗಿ ಖುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಸೈಂಟಿಫಿಕ್
ಸ್ವರ್ಣಾಭರಣಗಳು
(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:-

The Scientific Gold Bangles Co., Ltd.,
Head Office:—43, Byragimutum Street,
Post Box No. 208, Madras.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ

ಕಲ್ಲಿಕೋಟೆ ಅಶೋಕ ಆಸ್ಪತ್ರೆಯ ಚೀಫ್ ಮೆಡಿಕಲ್ ಆಫೀಸರರಾದ ಡಾ। ಪಿ. ಬಿ. ರಾಮನ್, ಎಂ. ಆರ್., ಸಿ. ಎಸ್. ಇವರು ಬರೆದಿರುವುದನ್ನು ಓದಿ ನೋಡಿ—"ನಾನು ನಿಮ್ಮ ಆಶ್ಚರ್ಯಕರವಾದ ಜೀವಾಮೃತಂ ಟಾನಿಕನ್ನು ನರಗಳಲ್ಲಿ ಉರಿತ ಇರಿತ ಹಸಿವು ಕಡಿಮೆಯಾಗಿರುವುದು, ಕೂಳವು ಕಡಿಮೆಯಾಗಿರುವುದು, ಇವು ಪ್ರಾಪ್ತವಾಗಿರುವ ಅನೇಕ ರೋಗಿಗಳಿಗೆ ಕೊಟ್ಟಿರುತ್ತೇನೆ. ಅದರ ಫಲಿತಾಂಶಗಳು ಬಹು ತೃಪ್ತಿಕರವಾಗಿದೆ. ಜೀವಾಮೃತವನ್ನು ದೇಹಶಕ್ತಿ ಕುಗ್ಗಿರುವ ಎಲ್ಲಾ ಸಂದರ್ಭಗಳಲ್ಲೂ ಸರ್ವ ಸಾಮಾನ್ಯವಾಗಿ ಉಪಯೋಗಿಸಬಹುದೆಂದು ನಾನು ಮನಃಪೂರ್ವಕವಾಗಿ ಶಿಫಾರಸು ಮಾಡುತ್ತೇನೆ"

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ
ಜೀವಾಮೃತವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)

ಆಯುರ್ವೇದಾಶ್ರಮಂ, ಪೋ. ಬಾಕ್ಸು ನಂ. ೩೮೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೨ ಚಿಕ್ಕಪೇಟೆ ಬೆಂಗಳೂರು. (ಅಂಚೆ ಹೋಟೆಲ್ ಹತ್ತಿರ)

ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No 104

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಸೇವೆ ಮತ್ತು ಅನುಕೂಲತೆಗಳನ್ನು, ಇದೇ ಮುಖ್ಯ ಉದ್ದೇಶವಾಗುಳ್ಳ ನಮ್ಮ ಸಂಸ್ಥೆಯಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್, ಬಾತ್ ಟುವಾಲುಗಳೂ ಧೋತಿ, ಸೀರೆ— ಬೈರವಾಸು— ಚಿತ್ತ— ಬೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮುಕಾಂ]

ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.

For - **A. & F. Harvey,**
Managers: Madura Mills Co, Ltd.,

An Advertisement in
'Swadeshabhimani'
Means a sure fortune to you
Ask for Contract Rates.
The Swadeshabhimani office,
Car Street, Mangalore.

---

preserve Your Wealth by BIRTH-CONTROL
ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಭರ್ಗವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:— ಪಂಡಿತ ಕೆ. ನಾರಾಯಣರಾವ್, ಆಯುರ್ವೇದ ಫಾರ್ಮಸಿ, ಕಾರ್ಕಳ, ದ. ಕ.

Branches—Kukkundoor & Kalkamba (Gurpoor) ಬ್ರಾ:—ಕುಕ್ಕುಂದೂರು, ಕೈಕಂಬ, ಗುರುಪುರ.

[N. B.—ಉತ್ತರಕ್ಕಾಗಿ ಸ್ಟಾಂಪು ಸಹಿತ ಬರೆಯಬೇಕು]

ಉಪನ್ಯಾಸಸಾಮ್ರಾಟರಾದ
ಪ್ರೇಮಚಂದಜೀಯವರು!

(ಲೇಖಕ:—ಕಟಪಾಡಿ ಶ್ರೀನಿವಾಸ ಶೆಣೈ, ಅಧ್ಯಾಪಕ ಮತ್ತು ಹಿಂದೀ ಪ್ರಚಾರಕ, ಕಾರ್ಕಳ.)

[ಹಿಂದೀ ಸಾಹಿತ್ಯದಲ್ಲಿಯದ ಕನ್ನಡಿಗರಿಗೆ ಇತ್ತೀಚೆಗೆ, ಪ್ರೇಮಚಂದಜೀಯವರ ಕಥೆಗಳು, ಕನ್ನಡಕ್ಕೆ ಕಥೆಗಳಾಗಿ ಬರುತ್ತಿವೆ. ಪ್ರೇಮಚಂದಜೀಯವರೆಂದರೆ ಯಾರೆಂದು ತಿಳಿದುಕೊಳ್ಳುವ ಕುತೂಹಲವು ಹಲವರಲ್ಲಿರಬಹುದು. ಈ ಲೇಖಕರು, ಸರಳವಾದ ನುಡಿಯಲ್ಲಿ, ಅವರ ಪರಿಚಯವನ್ನು ಮಾಡಿಕೊಡುವ ಪ್ರಯತ್ನ ಕೈಗೊಂಡಿರುವರು. ಸಂ. ಸ್ವ.]

(ಕಳೆದ ಸಂಚಿಕೆಯಿಂದ ಮುಂದುವರಿದುದು.)

ಜಿಜ್ಞಾಸುವಿನ ಪ್ರಶ್ನೆಯು ಕಿವಿ ಮೇಲೆ ಬಿತ್ತೆಂದರೆ ಸರಿ, ಸಜ್ಜನರು ಗಹಗಹಿಸಿ ನಕ್ಕು ಬಿಡುವರು. ಅವರು ಕೈಮುಗಿದು ಹೇಳುವರು:—'ಮಹಾಸ್ವಾಮಿ, ಪ್ರೇಮಚಂದನೆಂದು ಜನರು ನನ್ನನ್ನೇ ಕರೆಯುವರು.' ಆ ಮೇಲೆ ಒಳಗೆ ಬರಬೇಕೆಂದು ಅವರು ಸನ್ನೆ ಮಾಡುವರು. ಜಿಜ್ಞಾಸುವು ಚಕಿತನಾಗಿ ಬಿಡುವನು. ಅವರ ಆ ನಗೆಯಲ್ಲಿ ದೇವ-ದಾನವರಲ್ಲಿ ತೋರುವ ಯಾವ ಭಾವವೂ ಇಲ್ಲ. ಬಾಲ್ಯದ ಪಾಪರಹಿತವಾದ ನಗು ಅದು. ಅವರ ಸರಳವಾದ ಉಡುಗೆಯಂತೆ ಸರಳವಾದ ನಗು ಅದು. ಅವರಲ್ಲಿ ಯಾವುದೇ ತರದ ವಿಶೇಷತೆಯ ಆಭಾಸವು ತೋರುವುದೇ ಇಲ್ಲ. ಮಗುವಿನ ನಗುವಿನಂತಹ ಆ ನಗುವನ್ನು ಬಿಟ್ಟು ಅವರಿಂದ ಜಿಜ್ಞಾಸುವು ಮತ್ತೆ ಯಾವುದೇ ಅಸಾಮಾನ್ಯ ವಸ್ತುವನ್ನು ಪಡೆಯಲಾರನು. ಯಾರಿಂದ ಬರೆಯಲ್ಪಟ್ಟ ಕೆಲವು ಡಜನು ಮಹದ್ಗ್ರಂಥಗಳು ಅಚ್ಚಾಗಿ ಪ್ರಕಟವಾಗಿರುವುವೋ, ಯಾರ ಲೇಖನಿಯು ಪ್ರತಿ ಸಪ್ತಾಹದಲ್ಲಿಯೂ ಪ್ರತಿ ಮಾಸದಲ್ಲಿಯೂ, ಹೊಸ ಹೊಸ ಕಥೆಗಳನ್ನು ಬರೆಯುತ್ತಲಿದೆಯೋ ಅಂಥ ಪ್ರೇಮಚಂದ್ರರು ಇವರೇ ಎಂದಾಗಲೀ ಆ ಮನೆ, ಆ ಕೋಣೆ ಪ್ರೇಮಚಂದ್ರರದೇ ಎಂದಾಗಲೀ ಹೇಳಲಸಾಧ್ಯವಾಗುವುದು.

ಹೀಗೆ ಅವರನ್ನು ಕಂಡು ನಿರಾಶನಾಗಲಿಕ್ಕಿದ್ದಾಗ 'ಪ್ರೇಮಚಂದ್ರರ ನೇತ್ರಗಳ ಕಡೆಗೆ ದೃಷ್ಟಿಯನ್ನು ಬೀರಿ' ಎಂದು ನಾವು ಆ ಜಿಜ್ಞಾಸುವನ್ನು ಕೇಳುವೆವು. ಆ ಕಣ್ಣುಗಳಲ್ಲಿಯೇ ಆ ಸಾಹಿತ್ಯಸೇವೆಯ ವಿಶೇಷತೆ ಇದೆ. ಕಪ್ಪು ಕಪ್ಪಾಗಿ ದಪ್ಪವಾದ ಹುಬ್ಬುಗಳೆರಡರ ನಡುವೆ ನಲಿದಾಡುವ ಆ ಕಣ್ಣುಗಳಲ್ಲಿ ಜಿಜ್ಞಾಸುವು ಊಹಿಸಿದಂತೆ ಕ್ರೋಧವೂ ಇಲ್ಲ, ಭೀಭತ್ಸವೂ ಇಲ್ಲ. ಅವುಗಳಲ್ಲಿ ಏನಾದರೂ ತೋರುವುದಾದರೆ ಅದು ಅವರ ಅದ್ಭುತ ನಿರೀಕ್ಷಣಾ ಶಕ್ತಿ. ಕಣ್ಣುಗಳು ಚಂಚಲವಾಗಿಯೂ ಇಲ್ಲ, ಉಗ್ರವಾಗಿ ತೋರುವುದೂ ಇಲ್ಲ. ಪರಂತು, ಅವು ತೀಕ್ಷ್ಣವಾಗಿವೆ. ಎಲ್ಲಿ ತಿರುಗುತ್ತವೋ ಅಲ್ಲೇ ಸೇರಿಬಿಡುತ್ತವೆ. ತನ್ನ ಮುಂದೆ ಬಂದ ವಸ್ತುಗಳ ಯಥಾರ್ಥವಾದ ಚಿತ್ರವನ್ನು ತೆಗೆಯುವ ಕೆಮರಾದಂತೆಯೇ ಅವರ ಕಣ್ಣುಗಳು. ಪ್ರೇಮಚಂದ್ರರು ವಾಚಾಳಿಗಳಲ್ಲ. ಏನನ್ನು ಅನುಭವ ಮಾಡುವರೊ ಅದನ್ನು ಆಗಲೇ ಹೇಳಿ ಬಿಡುವ ಸ್ವಭಾವ ಅವರದಲ್ಲ. ಪ್ರೇಮಚಂದ್ರರು ಮಿತಭಾಷಿಗಳು. ಮಿತಭಾಷಿಗಳ ಹೃದಯದಲ್ಲಿ ಅಂಕಿತವಾದ ಚಿತ್ರಾವಳಿಗಳು ಅಧಿಕ ಸಮಯದ ತನಕ ಪೂರ್ಣರೂಪದಿಂದ ಸುರಕ್ಷಿತವಾಗಿದ್ದು ಬಿಡುತ್ತವೆ. ಪ್ರೇಮಚಂದ್ರರ ಕಣ್ಣುಗಳ ಅಥವಾ ಕಿವಿಗಳ ಮೂಲಕ ಅವರ ಹೃದಯದಲ್ಲಿ ಉಂಟಾದ ಭಾವನೆಗಳು ಅವರ ಮಾತುಗಳ ಮೂಲಕ ಪ್ರಕಟವಾಗುವುದಿಲ್ಲ; ಅವು ಕೈಯಲ್ಲಿ ಲೇಖನಿಯನ್ನು ಹಿಡಿಯುವ ತನಕ ಹೃದಯದಲ್ಲೇ ಬಿದ್ದುಕೊಂಡಿರುತ್ತವೆ. ಅವಶ್ಯಕತೆ ತೋರಿದಾಗ ಪ್ರೇಮಚಂದ್ರರು ಕೈಯಲ್ಲಿ ಕಾಗದ ಲೇಖನಿಗಳನ್ನು ಹಿಡಿದು ಕೂತುಕೊಳ್ಳುತ್ತಾರೆ. ಆಗಲೇ ಆ ಭಾವನೆಗಳು ಕಾಗದದ ಮೇಲೆ ಬರೆಯಲ್ಪಡುತ್ತವೆ. ಅವರ ನಿರೀಕ್ಷಣ ಶಕ್ತಿಯು ಬಹು ಪ್ರಬಲವಾದುದು. ಮಾತುಗಳ ಮೂಲಕ ವ್ಯರ್ಥವಾಗುತ್ತಿದ್ದ ಅವರ ಭಾವಸಮೂಹವು ಒಳಗೊಳಗೇ ಸುರಕ್ಷಿತವಾಗಿದ್ದು ಕೈಯಲ್ಲಿ ಲೇಖನಿಯನ್ನು ಹಿಡಿದೊಡನೆ ಶೃಂಖಲಾಬದ್ಧವಾಗಿ ಲೇಖರೂಪವಾಗಿ ಪರಿಣತವಾಗುತ್ತದೆ.

ಅವರು ಪ್ರೇಮಭಾವದ ಪ್ರಚಾರಕರೂ ಅಲ್ಲ, ಭೀಭತ್ಸಭಾವದ ಪ್ರಚಾರಕರೂ ಅಲ್ಲ. ಅವರು ಪ್ರಚಾರಕರೇ ಆಗಿರುವುದಿಲ್ಲ. ಕಂಡುದನ್ನು ಕಂಡಂತೆ ಬರೆದುಬಿಡುತ್ತಾರೆ. ಜಗತ್ತಿನಲ್ಲಿ ಭೀಭತ್ಸದ ತಾಂಡವವಾಗುತಿದ್ದರೆ ಅದರ ಚಿತ್ರವನ್ನೆಳೆಯುವರು, ಪ್ರೇಮ ಮತ್ತು ಏಕತೆಯ ಪ್ರಚಾರವಾಗುತಿದ್ದರೆ ಪ್ರೇಮಚಂದ್ರರು ಅದನ್ನೇ ಕಥಾರೂಪವಾಗಿ ಬರೆಯುವರು. ಜಗತ್ತಿನಲ್ಲಿ ವಿದ್ಯಮಾನವಾಗಿರುವ ವಸ್ತುವೇ ಅವರ ಲೇಖನಗಳಲ್ಲಿ ತೋರಿಬರುತ್ತದೆ. ಅವರು ಯಥಾರ್ಥವಾದಿ ಲೇಖಕರಾಗಿದ್ದಾರೆ. ಆದರ್ಶವಾದಿಗಳಲ್ಲ. ಸಮಸ್ಯೆಯನ್ನು ಮನಸ್ಸಿನಲ್ಲಿ ತಂದು ಅವರು ಕಥೆಯನ್ನು ಬರೆಯುವುದಿಲ್ಲ. ಅದರ ಬದಲಿಗೆ ಯಥಾರ್ಥ ಮನುಷ್ಯನ ಜೀವನದಿಂದ ಕಥಾವಸ್ತುವನ್ನು ಪಡೆಯುತ್ತಾರೆ. ಜಗತ್ತಿನಲ್ಲಿ ಯಾವ ಯಾವ ಸಮಸ್ಯೆಗಳು ಉಂಟಾಗುತ್ತವೋ, ಅವುಗಳ ಪೂರ್ತಿಯು ವರ್ತಮಾನ ಜಗತ್ತಿನಲ್ಲಿ ಹೇಗಾಗುತ್ತದೋ, ಅಥವಾ ಹಿಂದೆ ಹೇಗಾಗಿದೆಯೋ ಹಾಗೆಯೇ ಇದ್ದಕ್ಕಿದ್ದಂತೆ ಸ್ವೀಕರಿಸಿ ಬರೆದುಬಿಡುತ್ತಾರೆ. ಪ್ರೇಮಚಂದ್ರರು ಪ್ರಚಾರದ ಉದ್ದೇಶವನ್ನಿಟ್ಟುಕೊಂಡು ಕಥೆಗಳನ್ನು ಬರೆಯುತ್ತಾರೆಂದು ತಿಳಿದು, ಇಂತಿಂಥ ಕಥೆಯಲ್ಲಿ ಯಾವ ಲೋಕಸಂಗ್ರಹದ ಮಾತು ಅಥವಾ ಉಪದೇಶವಿದೆಯೆಂದು ಹುಡುಕುವ ಜನರೇ ಅವರು ಏಕತೆ ಅಥವಾ ಪ್ರೇಮಭಾವದ ಪ್ರಚಾರ ಮಾಡುವ ದೇವತೆ ಎಂದೂ ಅಥವಾ ಭೀಭತ್ಸಭಾವದ ಪ್ರಚಾರ ಮಾಡುವ ದೈತ್ಯನೆಂದೂ ತಿಳಿಯುತ್ತಾರೆ. ಆದರೆ ಸಮಾಲೋಚಕರ ಈ ಅಭಿಪ್ರಾಯವು ಸರ್ವಥಾ ಭ್ರಮಮೂಲಕವಾದುದೆಂದು, ಪ್ರೇಮಚಂದ್ರರ ವ್ಯಕ್ತಿತ್ವವನ್ನು ಕೃತಿಗಳನ್ನೂ ಅನುಶೀಲನ ಮಾಡಿದ ಬಳಿಕ ಹೇಳಬೇಕಾಗುತ್ತದೆ. ಅವರು ಉಪದೇಶಕರೂ ಪ್ರಚಾರಕರೂ ಆಗಿರುವುದಿಲ್ಲ. ಆದರೆ, ಜಗತ್ತಿನ ನಿರೀಕ್ಷಕರೂ ಚಿತ್ರಕಾರರೂ ಆಗಿದ್ದಾರೆ. ಜಗತ್ತಿನಲ್ಲಿ ನೋಡಿದುದನ್ನೇ ಬರೆಯುವರು ಅವರು. ಜಗತ್ತನ್ನು ಅವರು ಸಹಾನುಭೂತಿಯಿಂದ ನೋಡುತ್ತಲಿರುವರೆ, ದ್ವೇಷದಿಂದಲೇ ಎಂಬ ಪ್ರಶ್ನೆಯು ನಿರರ್ಥಕ. ಅವರು ಭಾರತವಾಸಿಗಳಾಗಿದ್ದಾರೆ, ದೇಶಭಕ್ತರಾಗಿದ್ದಾರೆ; ಸರಳರೂ ಸಾಧುಗಳೂ ಆಗಿದ್ದಾರೆ. ವಿವಾದ, ತರ್ಕಗಳು ಅವರಿಗೆ ರುಚಿಸುವುದಿಲ್ಲ. ಈ ಎಲ್ಲ ಮಾತುಗಳ ಪ್ರಭಾವವು ಅವರ ಲೇಖಗಳಲ್ಲಿ ಕಂಡುಬರುತ್ತದೆ; ಇದರಲ್ಲಿ ಸಂದೇಹವಿಲ್ಲ. ಆದರೆ ಹಾಗಾಗುವುದು ಅವರಿಚ್ಛೆಯಿಂದಲ್ಲ; ಹಠಾತ್ತಾಗಿ ಹಾಗಾಗುವುದು. ಚಿತ್ರಕಾರನ ವ್ಯಕ್ತಿತ್ವವು ಅವನ ಕುಂಚದಲ್ಲಿ ತೋರಿಬಾರದಿರುವುದಿಲ್ಲ. ಹಾಗೆಯೇ ಪ್ರೇಮಚಂದ್ರರ ವ್ಯಕ್ತಿತ್ವದಿಂದ ಅವರ ಸಾಹಿತ್ಯವು ಏನೇನೂ ಪ್ರಭಾವಿತವಾಗುವುದಿಲ್ಲವೆನ್ನುವುದು ತಪ್ಪಾದೀತು. ಆದರೆ ಒಂದು ಲಕ್ಷ್ಯ, ಒಂದು ಪರಿಣಾಮವನ್ನು ಮುಂದಿಟ್ಟುಕೊಂಡು ಕಥೆ ಬರೆಯುವುದಕ್ಕೂ ಜಗತ್ತಿನಲ್ಲಿ ನೋಡಿದುದನ್ನು ಯಥಾವತ್ತಾಗಿ ಚಿತ್ರಿಸುವುದಕ್ಕೂ ಬಹಳ ಭೇದವಿದೆ. ಮೊದಲನೆ ಕಾರ್ಯವು ಪ್ರಚಾರಕರದು. ಎರಡನೆಯದು ಸಾಹಿತಿಗಳದು. ಪ್ರೇಮಚಂದ್ರರು ಪ್ರಚಾರಕರಲ್ಲ, ಸಾಹಿತಿಗಳಾಗಿದ್ದಾರೆ.

ಅವರ ಕಣ್ಣುಗಳಲ್ಲಿ ಮಕ್ಕಳಲ್ಲಿ ಕಂಡುಬರುವ ಪ್ರಬಲ ನಿರೀಕ್ಷಣ ಶಕ್ತಿ ಇದೆ. ಏನನ್ನು ನೋಡುತ್ತಾರೆ, ಅದನ್ನು ನಿರ್ಲೇಪ ಬುದ್ಧಿಯಿಂದ ಬರೆದುಬಿಡುತ್ತಾರೆ. ಅದ್ದರಿಂದ ಅವರ ಕಥೆಗಳಲ್ಲಿ ಸಾಮಯಿಕ ಭಾವನೆಗಳಿವೆ. ಯಾರಿಗೆ ಭಿನ್ನ ಭಿನ್ನ ಸಮಸ್ಯೆಗಳನ್ನು ಹೊಸದಾಗಿ ಕಲ್ಪಿಸಿಕೊಂಡು ಅವುಗಳನ್ನು ಬಿಡಿಸುವ ಅಭಿರುಚಿ ಇದೆಯೋ ಅವರು ದೇಶವಿದೇಶಗಳಿಂದ ಪುರಾತನ ಇತಿಹಾಸಗಳಿಂದ ವರ್ತಮಾನ ಪರಿಸ್ಥಿತಿಯಿಂದ ಯತ್ನಪೂರ್ವಕವಾಗಿ ಕಥಾವಸ್ತುವನ್ನು ಹುಡುಕುತ್ತಿರುತ್ತಾರೆ. ಆದರೆ ಯಾರಿಗೆ ಜಗತ್ತನ್ನು ಅದರ ಯಥಾರ್ಥ ಸ್ವರೂಪದಲ್ಲಿ ಚಿತ್ರಿಸಬೇಕಾಗಿದೆಯೋ ಅವರು ನೋಡಿದ್ದನ್ನು ಬರೆದು ಬಿಡುತ್ತಾರೆ. ಪ್ರೇಮಚಂದ್ರರು ಈ ಕೋಟಿಗೆ ಸೇರಿದವರು.

ಅವರ ಕಥೆಗಳಲ್ಲಿ ಸಾಮಯಿಕತೆ ಇದೆ. ಅವರು ಬರೆದ ಕಥೆಗಳು ಯಥಾರ್ಥ ಜೀವನಕ್ಕೆ ಸಂಬಂಧಪಟ್ಟವುಗಳು. ಅವರ ಭಾಷೆಯಲ್ಲಿ ಸರಳತೆ ಇದೆ, ಸೌಂದರ್ಯವಿದೆ. ಇಲ್ಲಿಯೇ ಪ್ರೇಮಚಂದಜೀಯವರ ಸಫಲತೆಯ ರಹಸ್ಯವಿದೆ. ಪ್ರೇಮಚಂದ್ರರನ್ನು ಪ್ರಚಾರಕರೆಂದು ತಿಳಿದು ಸಮಾಲೋಚನೆ ಮಾಡುವವರಿಗೆ ಅವರ ನಿಜಸ್ವರೂಪವು ಗೊತ್ತಾಗುವುದಿಲ್ಲ. ಕಾರಣ, ಅವರು ಯಥಾರ್ಥವಾದಿಗಳಾಗಿದ್ದಾರೆ. ಆದರ್ಶವಾದಿ ಲೇಖಕನಾಗಲಿಕ್ಕೆ ಬೇಕಾದ ಅಸಾಧಾರಣ ಪ್ರತಿಭೆಯೂ ಕಲ್ಪನಾಶಕ್ತಿಯೂ ಪ್ರೇಮಚಂದ್ರರಲ್ಲಿಲ್ಲ. ಆದರೆ ಯಥಾರ್ಥವಾದಿ ಲೇಖಕರಾಗಲಿಕ್ಕೆ ಬೇಕಾದ ತೀಕ್ಷ್ಣ ದೃಷ್ಟಿಯೂ, ಗ್ರಾಹಕ ಬುದ್ಧಿಯೂ, ಓಜಸ್ವಿ ಭಾಷೆಯೂ ಪ್ರೇಮಚಂದ್ರರಲ್ಲಿ ಪುಷ್ಕಲ ಪ್ರಮಾಣದಿಂದ ದೊರೆಯುತ್ತವೆ.

ಇಂಥ ಸಾಹಿತಿಗಳ ಕೃತಿಗಳ ಅನುವಾದವು ಕರ್ನಾಟಕ ಭಾಷೆಗೆ ಅಧಿಕಾಧಿಕವಾಗಿ ಆಗುವ ಅವಶ್ಯಕತೆ ಬಹಳ ಇದೆ.

ಸಿಂಗಪುರ—ಬ್ರಿಟಿಷರ ನೌಕಾ ನಿಲ್ದಾಣ.

ಬ್ರಿಟಿಷ್ ಸಾಮ್ರಾಜ್ಯದಲ್ಲಿ ಅತಿ ಬಲಾಢ್ಯ ಹಾಗೂ ಕೇಂದ್ರ ಸ್ಥಾನದಲ್ಲಿರುವ ಜಿಬ್ರಾಲ್ಟರ್ ನೌಕಾ ನಿಲ್ದಾಣದಂತೆ ಸಿಂಗಪುರವೂ ಹೆಸರುವಾಸಿಯಾದುದು. ಪೂರ್ವ ಪ್ರದೇಶಗಳಿಂದ ಬರುವ ಶತ್ರುಗಳನ್ನೆದುರಿಸಲು ಇದುವೇ ನೌಕಾ ಕೇಂದ್ರವಾಗಿದೆ. ಇದನ್ನು ಪ್ರಥಮ ಶ್ರೇಣಿಗೆ ಸೇರಿಸಲು ೧೪ ಮಿಲ್ಲಿಯ ಪವನುಗಳನ್ನು ವ್ಯಯಿಸುವುದಾಗಿ ನಿಶ್ಚಯಿಸಿತ್ತು. ೧೧ ಮಿಲ್ಲಿಯ ಪವನು ಈಗಾಗಲೇ ವ್ಯಯವಾಗಿದೆ. ಕೆಲಸವಿನ್ನೂ ನಡೆದೇ ಇದೆ. ಸಿಂಗಪುರವು ಈಗಲೇ ಪ್ರಪಂಚದಲ್ಲಿರುವ ನೌಕಾತಳಗಳಲ್ಲಿ ಪ್ರಥಮ ಶ್ರೇಣಿಗೆ ಸಲ್ಲುವಷ್ಟು ಬಲಾಢ್ಯವೂ ಪ್ರಚಂಡವೂ ಆಗಿದೆ.

ಸಿಂಗಪುರ ನಗರದಿಂದ ೩೦ ಮೈಲುಗಳ ದೂರದಲ್ಲಿ, ರಬ್ಬರ್ ತೋಟಗಳ ನಡುವೆ, ಗೂಢವಾದ ಕೋಟೆಗಳಿರುವುವೆಂದೂ, ಅಲ್ಲಿ ಸಿಕ್ಖ ಪಹರೆಯುವರು ದಿವಾ ರಾತ್ರಿಯೆನ್ನದೆ ಕಾವಲು ಮಾಡುತ್ತಿರುವುದಾಗಿಯೂ, ಕೋಟೆಗಳ ಸುತ್ತುಮುತ್ತಲೂ ವಿದ್ಯುತ್ ಪ್ರವಾಹ ಸಂಚಾರವಿರುವ ಸರಿಗೆಗಳ ಬೇಲಿಯು ಹಾಕಲ್ಪಟ್ಟಿರುವುದೆಂದೂ ತಿಳಿದು ಬಂದಿದೆ. ಅಲ್ಲಿ, ಸಾವಿರಾರು ಚೀನಾ ಕೆಲಸಗಾರರು, ಶಸ್ತ್ರಾಸ್ತ್ರ ಸಂಗ್ರಹದ ಕಟ್ಟಡಗಳನ್ನು, ಸ್ಟೀಮರು ಡಾಕ್ಗಳನ್ನೂ ಸಿದ್ಧಪಡಿಸುತ್ತಿರುವರು.

ನೌಕಾತಳದ ಪ್ರದೇಶಕ್ಕೆ ಹೊಂದಿಯೇ ವಿಮಾನ ಸೈನ್ಯದ ನಿಲ್ದಾಣವೂ ಇದೆ. ಸಿಂಗಪುರದ ಬಳಿಯಲ್ಲಿ ಮಿಲಿಟರಿ ನಿಲ್ದಾಣಗಳೂ ಸಿದ್ಧವಾಗುತ್ತಿವೆ.

ಯುದ್ಧ ಇಲಾಖೆಯು ಏನೂ ಹೇಳುತ್ತಿರಲಿ, ನೌಕಾ ಇಲಾಖೆಯ ಅಭಿಪ್ರಾಯವೇನೂ ಇರಲಿ—ಪೌರ್ವಾತ್ಯ ಮಹಾ ಸಮರವೊಂದು ಸಂಭವಿಸುವ ಕಾಲವಿನ್ನು ದೂರವಿಲ್ಲವೆಂದು "ಸಮರ ಸಚಿವ ಮಂಡಲ"ವು ವಾಸನೆ ಕಂಡೇ ಸಿದ್ಧವಾಗಿದೆ—ಎಂದು ಮಿ. ಡಬ್ಲ್ಯು. ಎಸ್. ಯೂವರ್ ಎಂಬವರು "ಡೈಲಿ ಹೆರಾಲ್ಡ್" ಪತ್ರಿಕೆಯಲ್ಲಿ ಬರೆಯುತ್ತಿರುವರು.

ಇದು ರಾಜದ್ರೋಹವೆನಿಸುವುದೇ?

ಇಂಗ್ಲಾಂಡಿನಲ್ಲಿಯೂ ರಾಜದ್ರೋಹದ ಅಪೇಕ್ಷವೇರಲಿಡುದಾಗಿದ್ದರೆ ತಡೆಯಲು ಒಂದು ಮಸೂದೆಯುಂಟಾಗಿದ್ದು—ಮಂಜೂರಾತಿಗಾಗಿ ಇರಿಸಲ್ಪಟ್ಟಿದೆ. ಈ ಸಮಯದಲ್ಲಿ, ಬರ್ನಿಂಗ್ಹ್ಯಾಮಿನ ಬಿಶಪರು, ಇಂಡಿಯದ ವಿಷಯವನ್ನೆತ್ತಿ, ಗಡಿಪ್ರಾಂತ್ಯದ ಗುಡ್ಡಪ್ರದೇಶಗಳಲ್ಲಿನ ಬಂಡಾಯವನ್ನಡಗಿಸಲು ಮಿಲಿಟರಿಯವರು ವಿಮಾನಗಳಲ್ಲಿ ಸಾವಿರಾರು ಬೋಂಬುಗ[illegible] ಹತ್ಯಾಕಾಂಡವನ್ನು ಕೈಕೊಂಡ ವಿಷಯವನ್ನು ಚೆನ್ನಾಗಿ ಟೀಕಿಸುವರು:—

"ಒಂದು ಹುಕುವಿನಲ್ಲಿ ಅನ್ನವಿದ್ದರೆ ಮತ್ತೊಂದರಲ್ಲಿ ಹೊಟ್ಟೆಗಿಲ್ಲದೆ ಉಪವಾಸ ಬೀಳುವ ಪರ್ವತಪ್ರಾಂತ್ಯ ನಿವಾಸಿಗಳವರು! ಅವರ ಪ್ರಾಂತ್ಯದಲ್ಲಿ ಸುಗಮವಾದ ರಸ್ತೆಗಳ ನಿರ್ಮಿಸಿ, ಕೃಷಿ ಪ್ರವರ್ಧನೆಗೆ ಸಹಾಯ ಮಾಡಿ, ಅವರ ಹೊಟ್ಟೆಯನ್ನು ತಣಿಸುವ ಬದಲಾಗಿ,—ಹೊಟ್ಟೆಯುರಿ ತಾಳದೆ ಅಲ್ಲಲ್ಲಿ ಅವರು ಕೊಂಚ ಬಂಡಾಯವೆಬ್ಬಿಸಿದರೆಂದು ಮಿಲಿಟರಿಯವರು ಅವರ ಮೇಲೆ ಬೋಂಬು ಬಿಸುಡಿ ಪ್ರಳಯ ಭೈರವನ ಪಾತ್ರವಹಿಸಬಹುದೇ? ನಿಜವಾದ ಕ್ರೈಸ್ತನು ಇಂತಹ ಹಿಂಸಾಕೃತಿಗಳ ಕಡೆಗೆ ಒಲಿಯಬಹುದೇ?—ನಾನಾಡಿದ ಈ ನುಡಿಗಳು ರಾಜದ್ರೋಹಾತ್ಮಕವಾಗಿದ್ದರೆ ಸರಕಾರವು ನನ್ನ ಮೇಲೆ (ಹೊಸ ಶಾಸನವು ಮಂಜೂರಾಗುತ್ತಲೆ) ಖಟ್ಲೆ ನಡೆಸಬಹುದು. ಆದರೂ ಅಭಿಪ್ರಾಯ ಪ್ರಕಟಣೆಯದು; ಸರಕಾರವೇನೂ ಮಾಡದು!" ಎಂದು ದಿಟ್ಟತನದಿಂದ ನುಡಿದಿರುವರು ಅವರು!

ಈ ವಿಚಾರವು ಕೊಮನ್ಸ್ ಸಭೆಯಲ್ಲಿ ಬಂತು. "ಇದು ರಾಜದ್ರೋಹವಲ್ಲ; ಸರಕಾರದ ಒಂದು ಇಲಾಖೆಯ ಧೋರಣೆಯನ್ನು ಬದಲಾಯಿಸಬೇಕೆಂದು ಹೇಳುವುದರಲ್ಲಿ ತಪ್ಪಿಲ್ಲ; ಜನರಿಗೆ ತಮ್ಮ ಅಭಿಪ್ರಾಯ ಪ್ರಕಟಣೆಗೆ ಅಧಿಕಾರವಿದೆ. ಸರಕಾರದ ನೌಕರರಿಗೆ ಮಾತ್ರ ದುರ್ಬೋಧನೆ ಕೊಡದಿದ್ದರಾಯಿತು"—ಎಂಬೀ ಸಾರಾಂಶದ ಅಭಿಪ್ರಾಯವು ಕೊಮನ್ಸ್ ಸದಸ್ಯರದು!

ನೋಟೀಸು.
ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 159/'34.

1. ಬೀಪಾತುಮ್ಮ, 2. ಮಮ್ಮದೆ, 3. ಇಬ್ರಾಹಿಮ್, 4. ಅಬ್ದುಲ್ಲ ರಹಿಮಾನ್, 5. ಸುಲೇಮಾನ್, 6. ಮೂಸಾನ್, 7. ಅಬ್ಬಾಸ್, 8. ನಪೀಸಾ-ಪಮ್ಮನರು ಇವರ ಕ್ಷೇಮಚಿಂತಕ ಇವರ ಅಣ್ಣ 2ನೇ ಅರ್ಜಿದಾರ ಮಮ್ಮದೆ—ಅರ್ಜಿದಾರರು.

1ನೇ ಅರ್ಜಿದಾರಳ ಗಂಡ ವ ಬಾಕಿ ಅರ್ಜಿದಾರರ ತಂದೆಯಾಗಿದ್ದ ಕಳಂಗ್ ಕುನ್ನಿಲ್ ಮೊಯಿದೀನ್ ಕುಂಞಿ ಬ್ಯಾರಿ ಮಗ ಅಂದುಂಞಿ ಯಾನೆ ಅಬ್ದುಲ್ಲ ಬ್ಯಾರಿಗೆ ಹೋರ ಕುಳಗಳಿಂದ ಸಲ್ಲತಕ್ಕ ಐವಜನ್ನು ವಸೂಲು ಮಾಡುವರೆ ತಮಗೆ ವಾರಿಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 28-11-'34ಕ್ಕೆ ತನಿಖೆಗೆ ಇಟ್ಟಿರುವುದರಿಂದ ಆಕ್ಷೇಪವುಳ್ಳವರು ಆ ದಿವಸ ಹ್ಯಾಜರು ಮಾಡಬೇಕಾಗಿ ಈ ಮೂಲಕ ತಿಳಿಸೋಣಾಗುತ್ತದೆ.

Kasaragod, 8—11—34. P. Ahmad, Advocate for Petitioners.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ, ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂಡದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು ಈ ವರ್ಷ 1934ನೇ ಇಸವಿ ನವಂಬರ 21ನೇ ತಾರೀಕಿನಿಂದ ದಶಂಬರ 6ನೇ ತಾರೀಕಿನ ವರೆಗೆ ಜರಗುವುದು. ಅಂದರೆ ಸಂತೆಯು ಕಾರ್ತಿಕ ಪೌರ್ಣಮಿ ದಿವಸ ಪ್ರಾರಂಭವಾಗಿ ಕಾರ್ತಿಕ ಅಮವಾಸ್ಯೆಯ ದಿನ ಅಂದರೆ ಸುಬ್ರಹ್ಮಣ್ಯ ದೀಪೋತ್ಸವದ ಪರಿಯಂತರ ಜರಗುವುದು. ಸಂತೆಗೆ ತಂದ ಪ್ರತಿ ಒಂದು ಜಾನುವಾರಿನ ಮೇಲೆ ಎರಡಾಣೆ ಫೀಸು ವಸೂಲು ಮಾಡಲಾದೀತು.

ಪುತ್ತೂರು, 9-10-34. ಇ. ಎಚ್. ಎಸ್. ಅಬ್ರಹಾಂ, ರೆವಿನ್ಯೂ ಡಿವಿಜನಲ್ ಆಫೀಸರ್.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಗ್ನಾನ

(ಪ್ರಬಂಧಮಾಲೆ)

ಲೇಖಕರು:— ಶ್ರೀ ಶಿವರಾಮ ಕಾರಂತ.

ಅಧ್ಯಾಯ ೨೦

ಸಾಯುಜ್ಯ

ದೇವಭಾಷೆಯಾದ ಸಂಸ್ಕೃತದಿಂದ ಹೊರಟು ಅದರ ಮರಿಯಾಗಿಯೊ, ಮನೆಯ ಸೊಸೆಯಾಗಿಯೊ ಇರುವ ಭಾಷೆಯು ಕನ್ನಡ. ಕನ್ನಡ ಸಾಹಿತ್ಯ ಸೇವೆಯು ಮನುಷ್ಯನ ಮುಕ್ತಿಮಾರ್ಗಕ್ಕೆ ಪ್ರಥಮ ಸೋಪಾನವು. ಕಾರಣ, ಭಾಷಾ ಸೇವೆಯೇ ದೇಶಸೇವೆ. ದೇಶಸೇವೆಯೇ ಈಶಸೇವೆ. ಈಶ ಸೇವೆಯೇ ಮೋಕ್ಷಸೇವೆ. ಅದರಿಂದಾಗಿ ಯಾವಾತನು ಸಾಯುಜ್ಯವನ್ನು ಕಲಿಯುವುದಿಲ್ಲವೋ ಅವನಿಗೆ ಮುಕ್ತಿಯು ಸಿಗಲಾರದೆಂಬುದು ನಿರ್ವಿವಾದದ ಸಂಗತಿಯು. ಇತ್ತೀಚೆಗೆ ಭಾಷಾಸೇವೆಯಿಂದ ದೊರೆಯುವ ಪುಣ್ಯಲಾಭವು ಇನ್ನೂ ಅಧಿಕವಾಗಿದೆ. ಅದರ ಕಾರಣವನ್ನು ಮುಂದೆ ನೀವು ತಿಳಿದುಕೊಳ್ಳಲು ಸಾಧ್ಯವಿದೆ.

ಪ್ರಪಂಚದ ಸಾಯುಜ್ಯಗಳಲ್ಲಿ ಕನ್ನಡ ಸಾಹಿತ್ಯವು ಶ್ರೇಷ್ಠವೆನ್ನಬಹುದು. ಪ್ರಥಮ ಸ್ಥಾನವು ಸಂಸ್ಕೃತಕ್ಕೆ ಹೋಗಬೇಕಾದುದು ನ್ಯಾಯ. ಕಾರಣ—ದೇವರು ಮನೆಯಲ್ಲಿ ಮಾತನಾಡುವ ಭಾಷೆ ಅದು. ಇಂದ್ರಲೋಕದಲ್ಲಿ ಅರಮನೆಯ ಮುಸುರೆ ತಿಕ್ಕುವ ಜನರೂ ಸಹ ಸಂಸ್ಕೃತವನ್ನು ಆಡುತ್ತಾರೆ ಎಂಬುದನ್ನು ನಾವು ತಿಳಿದಿರುವುದು ಅವಶ್ಯ. ಸ್ವರ್ಗ-ನರಕಗಳೆರಡರಲ್ಲಿಯೂ ಅದೇ ಭಾಷೆಯು ವ್ಯವಹಾರಿಕವಾಗಿರುವುದರಿಂದ, ಮುಕ್ತಿಯ ಆಸೆ ಇಲ್ಲದವನು ಅದನ್ನು ಅಭ್ಯಾಸಿಸಬೇಕಾಗಿದೆ. ಒಮ್ಮೆ ಈ ಅನುಕೂಲತೆ ಇಲ್ಲದವರು ಕೊನೆಗೆ ಕನ್ನಡವನ್ನಾದರೂ ಅಭ್ಯಾಸಮಾಡಿ ಅದರ ಸಾಯುಜ್ಯ ಶರಧಿಯಲ್ಲಿ ಈಜಾಡುವುದು ಅತಿ ಅವಶ್ಯ.

ಕನ್ನಡ ಸಾಹಿತ್ಯ ಪರಿಜ್ಞಾನವನ್ನು ಪಡೆಯುವುದರಿಂದ ಏನೇನು ಪುಣ್ಯಫಲಗಳು ದೊರೆಯುವುವು ಎಂಬುದನ್ನು ಹೇಳಿ ಮುಂದೆ ಸಾಹಿತ್ಯದ ವಿಮರ್ಶೆಯನ್ನು ಮಾಡುವ. ಕನ್ನಡ ವಾಗ್ದೇವಿಯು ಈ ಭಾಷಾಮಂಡಲದ ಅಧ್ಯಕ್ಷೆಯು. ತೀರ ಪಂಡಿತರಿಗೆ ಮಾತ್ರ ಈಕೆಯು 'ಕನ್ನಡದ ನುಡಿವೆಣ್ಣು'—ಎಂಬ ಸಲಿಗೆಯ ಮಾತಿಗೂ ಒಳಗಾಗಿರುವಳು. ಇದರಿಂದ ಆಕೆಯ ಹೃದಯವು ಎಷ್ಟು ಮೃದುವಾಗಿದೆಯೆಂದು ತಿಳಿಯಬಹುದು. ಈಕೆಯು ತನ್ನ ಭಕ್ತರಿಗೆ ಆಗಾಗ ಪ್ರಸನ್ನಳಾಗಿ ತನ್ನ ವರದ ಹಸ್ತವನ್ನು ಅವರ ಪೌಂಟನ ಪೇನಿನ ಮೇಲಿರಿಸಿ ಅವರಿಂದ ಮಹಾಕಾರ್ಯಗಳನ್ನು ನಡೆಯಿಸುತ್ತಾಳೆ. ಈಕೆಯು ಸಂಸ್ಕೃತ ಸರಸ್ವತಿಯ ತೀರ ಆಪ್ತಳು. ಕನ್ನಡ ನುಡಿವೆಣ್ಣಿನ ಆರಾಧಕರು ತಾವು ಸಹ ಹೆಂಗಳೆಯರಂತೆ ವಿನಯ, ಮಾರ್ದವ, ಲಾಲಿತ್ಯಗಳಿಂದ ತುಂಬಿರದಿದ್ದರೆ ಅವರ ನುಡಿಯಲ್ಲಿ ಗಡಸುತನವು ಬಂದು ನುಡಿಯ ಸಾಧ್ವಿತ್ವವು ಅರ್ಥಾತ್ ಪಾತಿವ್ರತ್ಯವು ನಾಶವಾಗುತ್ತದೆಂದು ಮೊದಲೇ ತಿಳಿದಿರುವುದವಶ್ಯ.

ಕನ್ನಡದ ನುಡಿವೆಣ್ಣನ್ನು ಒಲಿಸಲು ತುಂಬಾ ತಪಶ್ಚರ್ಯ ಬೇಕು. ಶಮದಮಾದಿ ಗುಣಗಳನ್ನೂ ನವರಸಗಳನ್ನೂ ಪಾನಮಾಡಿದವರು ಮಾತ್ರ ಅದಕ್ಕೆ ಪಾತ್ರರು. ಈ ನುಡಿಯ ಭಂಡಾರಕ್ಕೆ ಪ್ರತಿ ವಿರುದ್ಧವಾದುದು ಮ್ಲೇಚ್ಛ ಸಾಹಿತ್ಯ. ಅದೇ ಇಂಗ್ಲಿಷು ಸಾಹಿತ್ಯ. ಇಂಗ್ಲೆಂಡು, ಅಮೇರಿಕಗಳ ಜನರು—ಬರೆದಿರುವ ಸಾವಿರಾರು ಪುಸ್ತಕಗಳನ್ನು ಅವರು ಸಾಹಿತ್ಯವೆಂದು ಕರೆದು ಪ್ರಪಂಚವನ್ನು ಬೆರಗು ಮಾಡುತ್ತಿದ್ದಾರೆ. ಅದಕ್ಕೆ ಕನ್ನಡಿಗರು ಮಂಕಾಗಬಾರದು. ಕಾರಣ—ಅವರು ನಾಸ್ತಿಕರು. ಕನ್ನಡ ಸರಸ್ವತಿಯಿದ್ದಂತೆ ಇಂಗ್ಲಿಷು ಸರಸ್ವತಿಯಿಲ್ಲ. ಹಾಗಿರಲು ಯಜಮಾನರಿಲ್ಲದ ಮನೆಯಂತೆ ಅವರ ಸಾಹಿತ್ಯವು ಕಂಪೆನಿಯ ಕೆಟಲಾಗಿನಂತೆ, ಯುಕ್ತಾಯುಕ್ತ ವಿಷಯಗಳಿಂದಲೂ, ಸ್ವೇಚ್ಛಾ ಸ್ವೈರಗಳಿಂದಲೂ, ಅವ್ಯಾಕರಣ ಪ್ರಯೋಗಗಳಿಂದಲೂ ತುಂಬಿಹೋಗಿದೆ. 'ವ್ಯಾಕರಣದಿಂದ ಮುಕ್ತಿಯಕ್ಕು' ಎಂದು ತಿಳಿದಿರುತ್ತ ಅವರು ಇಷ್ಟರಿಂದ ಸ್ವಾತಂತ್ರ್ಯ ವಹಿಸುತ್ತಿರುವುದು ಅವರ ಮೂರ್ಖತೆಗೆ ಸಾಕ್ಷಿಯೇ ಸರಿ. ಇತ್ತಿತ್ತ ಇಂಗ್ಲಿಷು ದೇಶಕ್ಕೆ ಬಲಿಯಾದ, ಹಲವು ಕನ್ನಡ ಕಂದಗಳು ಆ ಬೆಡಗಿಗೆ ಬಲಿಬಿದ್ದು, ಕನ್ನಡಿತಿಗೆ, ಇಂಗ್ಲೀಷು ಲಂಗಗಳನ್ನು ಹಾಕಲು ತೊಡಗಿದ್ದಾರೆ. ಇದರಿಂದ ಕನ್ನಡ ನುಡಿವೆಣ್ಣಿನ ಕುಂಕುಮವೇ ಅಳಿಸಿ, ಇಲ್ಲಿನ ಸಂಸ್ಕೃತಿ, ಪಾವಿತ್ರ್ಯಗಳು ನಾಶವಾಗಿ ಭಾಷಾಮಾತೆಯು ಕುಪಿತಳಾಗಿ, ದೇಶಮಾತೆಯು ಸಿಟ್ಟಿದ್ದು ಯದ್ವಾತದ್ವಾವಾಗಲು ತೊಡಗಿದೆ. ಆದುದರಿಂದ ನಿಜವಾದ ಕನ್ನಡಿಗರು ಈ ಹೊಸ ಸಾಹಿತ್ಯಭಕ್ತರನ್ನು ಪ್ಲೇಗನ್ನು ದೂರವಿರಿಸುವಂತೆ ಇರಿಸತಕ್ಕದ್ದು.

ಕನ್ನಡ ಸಾಹಿತ್ಯವೆಣ್ಣಿನ ರೂಪ, ವಯ್ಯಾರ, ಬೆಡಗುಗಳಿಗೆ ಮೋಹಿತರಾದವರ ಸಂಖ್ಯೆಯು ಅಷ್ಟಿಷ್ಟಲ್ಲ. ಹಿಂದಿನ ಕಾಲದ ವಿಜಯನಗರ ಮೊದಲಾದ ಸಾಮ್ರಾಜ್ಯಗಳಲ್ಲಿ ಸಾವಿರಾರು ಉದ್ದಾಮ ಸಾಹಿತ್ಯಸೇವಕರು ಆಗಿಹೋದರು. ಇವರಲ್ಲಿ ರನ್ನ, ಪಂಪ, ರತ್ನಾಕರ, ನಾಗವರ್ಮ—ಮೊದಲಾದವರ ಹೆಸರೇ ಸಾಕು. ಇವರು ಕಟ್ಟಿದ ಸಾಹಿತ್ಯ ಕೊತ್ತಳಗಳು ಇಡೀ ಜಗತ್ತಿನ ಸಾಹಿತ್ಯವನ್ನು ಮೀರಿಸಿ ನಿಂತಿವೆ. ಅವರು ಕಟ್ಟಿದ ಈ ಸ್ಮಾರಕಗಳನ್ನು ಈಗಿನ ನರಕವಿಗಳೇ ಕೆಡಿಸಲೆತ್ನಿಸುವುದು ತೀರ ಅಶಕ್ಯವು. ದೇವರಾಣೆಯಾಗಿ ಅವರನ್ನು ಇನ್ನುಮುಂದೆ ಕನ್ನಡದಲ್ಲಿ ಮೀರಿಸಲಾಗದು. ಈ ಮೇಲ್ಕಂಡ ಭಕ್ತರು—ವ್ಯಾಕರಣ ಪಾರಂಗತರಾಗಿದ್ದು, ನವರಸಭರಿತರಾಗಿ ಶಾಸ್ತ್ರೋಕ್ತವಾದ ಸಾಹಿತ್ಯವನ್ನು ರಚಿಸಿರುವುದರಿಂದ, ಅದನ್ನು ಓದಿದೊಡನೇ ಮೋಕ್ಷ ಸಿಗುತ್ತದೆ. ಆದರೆ ಈಗಿನ ಸಾಹಿತ್ಯವನ್ನು ಓದಿ ಮೂರು ನಾಲ್ಕು ವರುಷಗಳಾದರೂ ಯಾರಿಗೂ ಮೋಕ್ಷದಲ್ಲಿ ಸಾದಾ C ಕ್ಲಾಸು ಸ್ವರ್ಗವು ಸಹ ಸಿಕ್ಕುವಂತಿಲ್ಲ. ಇಷ್ಟನ್ನು ಹೇಳಿ ಕನ್ನಡ ನುಡಿವೆಣ್ಣಿನ ಪ್ರಶಂಸೆಯನ್ನು ನಿಲ್ಲಿಸಿ, ಆರಾಧನೆಯ ಕ್ರಮ ಹೇಳುತ್ತೇನೆ.

ಈ ಪೂಜಾವಿಧಿಯ ಶಾಸ್ತ್ರೋಕ್ತ ವಿಷಯ ಯಾರಾದರೂ ಹೇಗಾದರೂ ಮಾಡುವ ವಿಷಯವಲ್ಲ. ನವರಾತ್ರಿಯ ವಿಜಯದಶಮಿ ದಿನ, ಮುಂಜಾನೆ ಊಟಮಾಡದೆ ಸ್ನಾನಮಾಡಿ ಅನಂತರ ವಿಧಿವತ್ತಾಗಿ, ಗುರೂಪದೇಶವನ್ನು ಪಡೆದು, ಮುಂದೆ ಲೇಖನಿಯನ್ನು ಶಾಯಿಬುಡ್ಡಿಯಲ್ಲಿ ಅದ್ದಲು ಯತ್ನಿಸಬೇಕು. ನಿಜವಾದ ಸಾಹಿತ್ಯಸೇವೆಗೆ ತಾಳೆಗರಿ ಕಂಠಗಳೇ ಬೇಕಲ್ಲದೆ, ಇತರ ಸಾಮಗ್ರಿಗಳು ಅಷ್ಟು ಚೆನ್ನಾಗಿರುವುದಿಲ್ಲ. ಸಾಹಿತ್ಯ ಆರಾಧನೆಯಲ್ಲಿ ಬೇರೆ ಬೇರೆ ಭಾಗಗಳಿವೆ. ತೀರ ಪಾಮರರಿಗೆ ಪದ್ಯಸಾಹಿತ್ಯವೂ, ಹದ ಪಾಮರರಿಗೆ ಚಂಪುವೂ ಪಂಡಿತರಿಗೆ ಕಾವ್ಯಸಾಹಿತ್ಯವೂ ಯೋಗ್ಯ ಹಾದಿಗಳು. ಚಂಪು ಎಂದರೆ ನಿರಸವಾದ ಗದ್ಯಕ್ಕೆ ಸರಸವಾದ ಕವಿತೆಯನ್ನು ಸೇರಿಸಿ ರುಚಿಕಟ್ಟಾಗಿ ಮಾಡಿದ ಸಾರವು. ಅದು ನಡುನಡುವೆ ಕಬ್ಬಿನ ಗಂಟುಗಳನ್ನು ಕಟ್ಟಿ ಹೆಣೆದ ಬಾಳೆಹಣ್ಣಿನ ಮಾಲೆಯಂತಿರುವುದು. ಕವಿತಾಮಾಲೆಯು ಸುಲಿದ ಬಾಳೆಯ ಹಣ್ಣಿನ ಸರವಾದ ಗದ್ಯದಂತಿಲ್ಲ. ಅದು ಬರೀ ಕಬ್ಬಿನ ಗಂಟಿನ ಸರವು. ಚೆನ್ನಾಗಿ ಹಲ್ಲಿರುವವರು ಜಗಿದರೆ ರಸವು ಒಳಒಳಗೆ ಸುಲಿದು ಅವರಿಗೆ ಆನಂದವು ದೊರಕೀತು.

ಗದ್ಯಸಾಹಿತ್ಯವು ಪ್ರಥಮ ಸೋಪಾನ. ಎಂದರೆ ಮೆಟ್ಟಿಲನ್ನು ದಾಟಿದ ಬಳಿಕ ಚಂಪು. ಅನಂತರ ತುತ್ತತುದಿಯೇ ಪದ್ಯಸಾಹಿತ್ಯ. ಈ ಮೂರಕ್ಕೂ ವ್ಯಾಕರಣದ ಅಭ್ಯಾಸವು ಅವಶ್ಯ. ಪದ್ಯಕ್ಕೆ—ಛಂದಸ್ಸು ಎಂಬ ಬಲವಾದ ಸ್ಮೃತಿಯಿದೆ. ಈ ಸ್ಮೃತಿಯಮದಂತೆ ಕವಿತಾ ನಿರ್ಮಾಣವು ಬಲು ಕಠಿಣ. ಕೇವಲ ವರಕವಿಗಳಿಗೆ ಮಾತ್ರ ಅದು ಸಾಧ್ಯ. ಹಿಂದಿನ ಕಾಲದಲ್ಲಿ, ವರಕವಿಗಳಿಗೆ ಆಸ್ಥಾನದಲ್ಲಿ ಪ್ರತಿ ವರುಷ ಗರಮ್ ಕಾಶ್ಮೀರ ಶಾಲುಗಳನ್ನು ಕೊಡುತ್ತಿದ್ದರು.

ವ್ಯಾಕರಣವು—ಭೂತ ಭವಿಷ್ಯತ್ತುಗಳ ಪ್ರತ್ಯಯಗಳನ್ನಷ್ಟೇ ತೋರಿಸುವುದಲ್ಲ, ಅಲಂಕಾರಗಳನ್ನೂ ಸೂಚಿಸುತ್ತದೆ. ನಾನಾತರದ ಅಲಂಕಾರಗಳನ್ನೂ ಕಂಡು ಅವುಗಳಲ್ಲಿ ತನ್ನ ಕಬ್ಬದಂಗನೆಗೆ ಯಾವುದು ಒಪ್ಪುವುದೆಂದು ಸಾಯುತಿಯು ಹುಡುಕಿಕೊಡಬೇಕು. ಹೀಗೆಂದರೆ ಉಳಿದ ಅಲಂಕಾರಧನಗಳನ್ನು ಬಿಡುವುದೆಂದು ಅರ್ಥವಲ್ಲ. ಹಾಗೆ ಮಾಡಿದಲ್ಲಿ, ಒಂದೇ ರಸ, ಅಲಂಕಾರದಿಂದ ಅಜೀರ್ಣವು ಸಾಹಿತ್ಯಕ್ಕೆ ಬಂದೀತು. ಆದುದರಿಂದ ನವರಸಗಳೂ, ಶತ ಅಲಂಕಾರಗಳೂ ಕಾವ್ಯಕ್ಕೆ ತೀರ ಅವಶ್ಯ. ಇನ್ನು ಕವಿತೆ ಕಟ್ಟುವವರಿಗೆ—ಪ್ರಾಸ, ಯತಿ, ಸನ್ಯಾಸ—ಮೊದಲಾದ ವಿಚಾರಗಳೂ ತಿಳಿದಿರಬೇಕು. ಪ್ರಾಸದಿಂದ ಒಂದು ಅಕ್ಷರವನ್ನು ತಿರುತಿರುಗಿ ಕಿವಿಮೇಲೆ ಬೀಳುವಂತೆ ಮಾಡಿ, ತಂಬೂರಿ ಬಾರಿಸಿದಂತಾಗುವುದು. ಇದರಿಂದ ನುಡಿವೆಣ್ಣು ಹೆಡೆಯಾಡಿಸಲು ಅನುಕೂಲವಾಗುವುದು. ಯತಿಯೆಂದರೆ—ಪದ್ಯ ಓದಿ ಆಯಾಸವಾದರೆ ನಿಲ್ಲಬೇಕೆಂದು ಯೋಗ್ಯ ಜಾಗವನ್ನು ಅಳೆದುಕೊಡುವ ರೀತಿ. ಸನ್ಯಾಸವೆಂದರೆ ಬರೆದ ಕಾವ್ಯವು ಎಲ್ಲಿ ನಿಲ್ಲಬೇಕೆಂದು ಎಲ್ಲಿ ಕವಿಯು ವೈರಾಗ್ಯ ತಾಳಬೇಕೆಂದೂ ತೋರುವ ರೀತಿಯು.

ಉತ್ತಮ ಪದ್ಯ ಸಾಹಿತ್ಯದ ಲಕ್ಷಣ

ಇದರಲ್ಲಿ ಸೇರಿರಬೇಕಾದ ಅಲಂಕಾರ ಇತ್ಯಾದಿಗಳು.

ಆದಿಪ್ರಾಸ	8	ತೊಲೆ
ಮಧ್ಯಪ್ರಾಸ	2	,,
ಅಂತ್ಯಪ್ರಾಸ	1	,,
ಯತಿ	2	,,
ಅಲಂಕಾರ—ಶ್ಲೇಷ	16	,,
ಉಪಮಾ	10	,,
ರೂಪಕ	5	,,

ಉಳಿದುವು ಒಂದೊಂದು ತೊಲೆ ಯತಿ.

ರಸಗಳಲ್ಲಿ-	ಶೃಂಗಾರ	20	ತೊಲೆ
	ಹಾಸ್ಯ	5	,,

ಉಳಿದ ರಸಗಳು ಅರ್ಧ ತೊಲೆಯಂತೆ.

ಕಡಿಮೆಯಾಗುವ ಅಂಶವನ್ನು ಪಾದರಸದಿಂದ ಸೇರಿಸಿಕೊಳ್ಳತಕ್ಕದ್ದು.

ಇಷ್ಟನ್ನು ಒಟ್ಟುಮಾಡಿ 60 ಔನ್ಸು ವ್ಯಾಕರಣದಲ್ಲಿ 16 ಬಾರಿ ಕಾಯಿಸಿ, ಭಟ್ಟಿ ಇಳಿಸಿ, ಜೊಗಟೆಯಾಗಿ ಪದ್ಯವೆಂದು ಎಸೆಯಬೇಕು. ಮೇಲಿನ ನೊರೆಯೇ ಚಂಪು. ನಡುವಿನ ತೈಲವೇ ಶುದ್ಧ ಪದ್ಯಸಾಹಿತ್ಯವೆಂದು ತಿಳಿಯುವುದು.

ಪದ್ಯಸಾಹಿತ್ಯ ಬರೆಯುವ ಮಹಾ ಯೋಗಿಗಳೇ ಕವಿಗಳೆನಿಸುವರು. ಇವರು ತಮ್ಮ ಇಷ್ಟದ ಕಬ್ಬದಂಗನೆಯನ್ನು ಆಗಾಗ ಒಲಿಸಿಕೊಂಡು ತಮ್ಮ ಪ್ರತಿಭೆಯನ್ನು ತೋರುವರು. ಇದರಿಂದಾಗಿ ಕವಿಗಳಾಗುವವರು ತಮ್ಮ ಪದ್ಯದ ಚರಣಕ್ಕೊಂದುಬಾರಿಯಾದರೂ ಕಬ್ಬದಂಗನೆಯನ್ನು ಕೂಗುತ್ತಿರಲೇಬೇಕು. ಇಲ್ಲವಾದರೆ ಆಕೆಯು ಇವರ ಮೇಲೆ ಮುನಿದು ಓಡಿಬಿಡುವಳು. ಒಮ್ಮೆ ಕವಿಯ ಕೊರಳಿಗೆ ಅವಳು ಗಂಟುಬಿದ್ದಳೆಂದರೆ, ಕವಿಯ ಬಾಳ್ವೆಯು ಪವಿತ್ರವಾಗುವುದು. ಆಗ ಸ್ವತಹ ದೇವರೇ ಬಂದು ಅವನ ಪೇನಿನ ಶಾಯಿಯೊಳಗೆ ಹೊಕ್ಕು ನೀರಾಗಿ, ಕಾಗದದಲ್ಲಿ ಹರಡಿಕೊಳ್ಳುವನು. ಆದುದರಿಂದ ಕವಿಗಳೂ ಪ್ರಪಂಚದಲ್ಲಿ ಪೂಜಾರ್ಹರು. ಅವರಿಗೆ ಮೋಕ್ಷವು ಖಂಡಿತ. ಕವಿತಾ ಪ್ರೇಮವು ಬೆಳೆದು ಅವರು ಮೋಕ್ಷಕ್ಕೆ ಒಡಂಬಡದೆ ಹೋದರೆ, ಸ್ವರ್ಗಕ್ಕೆ ಆಗಾಗ ಹೋಗಿ ಬರಲು ಅನುಕೂಲವಿದೆ. ಅದರ ನೇಸನ್ ಪಾಸು ಅವರಿಗೆ ಸಿಗುವುದು. ಈ ರೀತಿಯ ಪಾಸು ಇಂಗ್ಲಿಷು ನುಡಿ ಬಜಾರಿಯ ಶಿಷ್ಯರಿಗೆ ಸಿಗುತ್ತಲಿಲ್ಲ! ಹಾ! ಕನ್ನಡಿಗರೆಷ್ಟು ಧನ್ಯರು!

ಕನ್ನಡ ಸಾಹಿತ್ಯದಂಗನೆಯ ಸೇವೆಗೆ ನಾಟಕವು ಒಂದು ಸಾಧನೆ. ನಾಟಕಕಾರನು ಮೊದಲಿಗೆ ಸಾಹಿತ್ಯಸರಸ್ವತಿಯನ್ನು ಒಲಿಸಬೇಕು. ಅನಂತರ ನವರಸಭರಿತವಾದ ನಾಟಕವನ್ನೇ ಬರೆಯುವೆನೆಂದೂ, ನಾಟಕದಲ್ಲಿ ಉದಾತ್ತನಲ್ಲದೆ ಚಿಲ್ಲರೆ ಮನುಷ್ಯನಿಗೆ ರಾಣಿ ಮತ್ತು ರಾಜಾ ಪಾರ್ಟುಗಳನ್ನು ಕೊಡೆನೆಂದೂ ಪ್ರತಿಜ್ಞೆ ತೆಗೆದುಕೊಂಡ ಬಳಿಕ ನುಡಿ ಪ್ರಸನ್ನತೆ ಅವನಿಗೂ ದೊರೆಯುವುದು.

ಗದ್ಯವು ತೀರ ಹೆಡ್ಡರ ಸಾಹಿತ್ಯವಾದುದರಿಂದ ನಾವು ಅದರ ವಿಚಾರ ಇಲ್ಲಿ ಹೆಚ್ಚು ಹೇಳುವ ಕಾರಣವಿಲ್ಲ. ಪದ್ಯಸಾಹಿತ್ಯವೆಂದರೆ ಎಲ್ಲವೂ ಸಾಹಿತ್ಯವಲ್ಲ. ಹಳ್ಳಿಯ ಜನರು ಕೆಲಸವಿಲ್ಲದಾಗ, ಕನ್ನಡದ ಹಳ್ಳಿಮಾತುಗಳನ್ನು ಪೋಣಿಸಿ, ಚಿಲ್ಲರೆ ಭಾವನೆಗಳನ್ನು ಹೆಣೆದು ಲಾವಣಿಗಳನ್ನು ಮಾಡುತ್ತಾರೆ. ಇದು ಎಮ್ಮೆಯ ಕೊರಳಿನ ಹಗ್ಗವೇ ಸರಿ. ಸಾಹಿತ್ಯಾಂಗನೆಗೆ ಹೂಮಾಲಿಕೆಯಾಗದು.

ಈಗ—ಎರಡು ಮಾತನ್ನು ಈಗ ಕನ್ನಡ ನಾಡಿನಲ್ಲಿ ಎಲ್ಲೆಲ್ಲೂ, ನಾಯಿಕೊಡೆಗಳಂತೆಯೂ, ಹಾತೆಗಳಂತೆಯೂ ಹಾರುತ್ತಿರುವ ರಸಋಷಿಗಳು, ಕಬ್ಬಿಗರು, ಸಾಹಿತ್ಯ ಸೇವಕರು ಇವರ ವಿಷಯ ಹೇಳುತ್ತೇನೆ. ಇವರಲ್ಲಿ ಹೆಚ್ಚಿನವರಿಗೆ ದೇವಭಾಷೆಯಾದ ಸಂಸ್ಕೃತದ ಪರಿಚಯವಿಲ್ಲ. ಸಂಸ್ಕೃತ ಮಾತೆಯ ಸೊಸೆಯಾದ, ಕನ್ನಡ ದೇವಿಯ ಅಂತರ್ಯವನ್ನು ತಿಳಿಯಲು ಅವಳ ತಾಯಿಯ ಗುಣವನ್ನು ತಿಳಿಯುವುದು ಅವಶ್ಯವಲ್ಲವೇ! ಈ ಹೊಸಬರು ಇಂಗ್ಲಿಷು ನುಡಿಗಂಡಿನ ಪುಸಲಾಯಿಸುವಿಕೆಯಿಂದ ಪ್ರೇರಿತರಾಗಿ ಯದ್ವಾತದ್ವಾ ಬರೆಯುತ್ತಿರುವರು. ಇವರ ವರ್ತನೆಯೂ ಭಂಗೀಪಾನಕವನ್ನು ಕುಡಿದವರಂತಿದೆ—ಎಂದರೆ ಮುಗಿಯಿತು.

ಇವರು, ತಾವೂ ಸಾಹಿತ್ಯಸೇವಕರು ಅನ್ನುತ್ತಾರೆ. ಇವರದು ಗೊಡ್ಡ ಸೇವೆ. ಇವರ ಬರಹದಿಂದ ಹಾಲೆಂಡಿನ ಕಾಗದ ಮಾತೆಯೂ, ಇಂಗ್ಲೆಂಡಿನ ಲೆಲಿಕೊ ಮಾತೆಯೂ, ಇಟಾಲಿಯ ಟೈಪಮೆಟಲ್ ಮಾತೆಯೂ—ಪ್ರಸನ್ನರಾಗುವರು. ಖಂಡಿತವಾದರೂ, ಕನ್ನಡ ನುಡಿವೆಣ್ಣಿನ ತೃಪ್ತಿಯು ಆಗಲಾರದು. ಇವರಲ್ಲಿ ಧ್ಯಾನವಿಲ್ಲ, ಭಕ್ತಿಯಿಲ್ಲ, ಚಾರಿತ್ರ್ಯವಿಲ್ಲ—ಎಲ್ಲಾ ಅನುಕರಣೆ. ಇವರನ್ನು ಎಂಜಲು ಭಕ್ಷಕರು ಎನ್ನುವುದೇ ಯುಕ್ತವು. ಇವರ ಸಾಹಿತ್ಯನಿರ್ಮಾಣಕ್ಕೆ ಬರೀ ಇಂಚುಪಟ್ಟಿ ಮಸಿಕುಡಿಕೆ, ಹೆಬ್ಬೆರಳುಗಳು ಸಾಕು.

ಆದರೆ ಇವರಲ್ಲಿ ಕೆಲವರು ಇಂಗ್ಲಿಷು ನುಡಿಗಂಡಿನ ಪೂಜಾವಿಧಿಯನ್ನು ಅನುಸರಿಸಿದರೂ, ಕನ್ನಡನುಡಿವೆಣ್ಣಿನ ಪೂಜೆಮಾಡುತ್ತಾರೆ. ಆದಿಪ್ರಾಸದ ತ್ರಾಸತಪ್ಪಿಸಿದರೂ ಅಂತ್ಯಪ್ರಾಸದಹಾಸ ಕೊಡುತ್ತಾರೆ. ವ್ಯಾಕರಣ ತಪ್ಪಿದರೂ, ಕಬ್ಬದಂಗನೆಯಲ್ಲಿ ಕ್ಷಮಾ ಕೇಳುತ್ತಾರೆ. ತಮ್ಮ ಭಾವವನ್ನು ವ್ಯಕ್ತಪಡಿಸಲು ತಪ್ಪಿದರೂ, ಸಾಕಷ್ಟು ಸಂಸ್ಕೃತ ಹರಳುಗಳನ್ನು ಉಪಯೋಗಿಸುತ್ತಾರೆ. ಆಗಾಗ ಋಷಿಮುನಿಗಳನ್ನೂ, ಕಬ್ಬದಂಗನೆಯನ್ನೂ ಬೇಡುತ್ತಾರೆ.

[ಸಶೇಷ].

ನೋಟೀಸು.

ಕುಂದಾಪುರ ತಾಲ್ಲೂಕು ಕಂದಾವರ ಗ್ರಾಮದ ಸಟ್ವಾಡಿ ದುಂಡಪ್ಪ ಸೆಟ್ರ ಅಳಿಯ, ವ ನನ್ನ ತಮ್ಮ ಕೃಷ್ಣಪ್ಪ ಸೆಟ್ಟಿಯು ಪಕ್ಷವಾತ ಖಾಯಿಲೆ ಯಿಂದ ಇದ್ದು ದೇಹದಲ್ಲಿ ಸೌಖ್ಯ ಇಲ್ಲದೆ ಇತ್ತಲಾಗಿ ಸುಮಾರು ಒಂದು ವರ್ಷದ ಲಾಗಾಯತು ಸ್ವಬುದ್ಧಿ ಕೂಡಾ ಇಲ್ಲದೆ ಪರಾಧೀನನಾಗಿ ಸುಮಾರು 3000 ರೂಪಾಯಿ ತೀರ್ವೆ ತೆರತಕ್ಕ ಕುಟುಂಬದ ಆಸ್ತಿಗಳ ಆಡಳಿತೆ, ವ ಜೀವನ ಸರಿಯಾಗಿ ನಡೆಸದೆ ಕುಟುಂಬದ ತುನೆಯಲ್ಲಿ ಕೂಡಾ ವಾಸ್ತವ್ಯ ಇಲ್ಲದೆ ಆಡಳಿತೆಗೆ ಸಮ್ಮಂಧಪಟ್ಟ ಆಸ್ತಿಗಳ ತೀರ್ವೆಯನ್ನು ಸರಕಾರಕ್ಕೆ ತಕ್ಕ ಕಾಲಕ್ಕೆ ಸಲ್ಲಾಸದೆ ಕುಟುಂಬದ ಸಮಷ್ಟಿ ಹಕ್ಕಾಗಿರುವ ಸುಮಾರು 5000 ರೂಪಾಯಿ ಬೆಲೆಬಾಳುವ ಚಿನ್ನಾಭರಣವನ್ನು ಮತ್ತು ವಾಸ್ತವ್ಯದ ಹೆಬ್ಬಾಗಲು ಕಟ್ಟಡ ತಯಾರಿಸುವ ಬಗ್ಗೆ ದಾಸ್ತಾನು ಮಾಡಿಟ್ಟಿರುವ, ವ ಸುಮಾರು ರೂಪಾಯಿ 2200 ಬೆಲೆ ಬಾಳುವ ಯೋಗ್ಯವಾದ ಮೋವುಗಳನ್ನು ಕೂಡಾ ನಮ್ಮ ದ್ವೇಷಿಗಳಾದ ಸದ್ರಿ ಸ್ವಸ್ತಿಕೆ ಇಲ್ಲದ ಕೃಷ್ಣಪ್ಪ ಸೆಟ್ಟಿಯು ಹೆಂಡ್ತಿ ಸಹೋದರರು ಮತ್ತು ಸದ್ರಿ ಕೃಷ್ಣಪ್ಪ ಸೆಟ್ಟಿಯು ತಂಗಿ ಮಕ್ಕಳು ವ ಅವರ ಗಂಡಂದಿರು ಕುಂದಾಪುರ ವಕೀಲ್ ವಿ. ರಾಮಣ್ಣ ಸೆಟ್ಟಿ, ಬಿ ಸೂರಪ್ಪ ಸೆಟ್ಟಿ, ಸದ್ರಿ ಸೂರಪ್ಪ ಸೆಟ್ಟಿ ಅಣ್ಣ ಮಹಾಬಲ ಸೆಟ್ಟಿ ಇವರ ದುರ್ಬೋಧನೆಗೆ ಒಳಪಟ್ಟು ಕುಟುಂಬದ ಹಕ್ಕಾಗಿರುವ ಸೊತ್ತುಗಳನ್ನು ತಮ್ಮ ಇಷ್ಟ ಇರುವ ರೀತಿ ಮಾರಾಟಮಾಡಿ ಗೌರವವುಳ್ಳ ದೊಡ್ಡ ಕುಟುಂಬಕ್ಕೆ ನಷ್ಟ ಪಡಿಸಿರುವುದಲ್ಲದೆ ಮನೆ ವಾರ್ತೆಗೆ ಸಮ್ಮಂಧ ಪಟ್ಟ ಸರ್ವ ರಿಕಾರ್ಡು ವಗೈರೆ ಲೆಕ್ಕಪತ್ರಗಳನ್ನು ವ ಚರಸೊತ್ತುಗಳನ್ನೂ ಸಹ ವಂಚಿಸಿ ಬೇರೆ ಕಡೆಗಳಿಗೆ ಒಯ್ದು ಈಗ ಕುಟುಂಬದ ಜೀವನ ನಡೆಸುವುದು ಕೈದುಮಾಡಿ ತನ್ನ ಹೆಂಡ್ತಿ ಮನೆಯಲ್ಲಿ ಖಾಲಿ ವಾಸ್ತವಿಸಿಕೊಂಡು ಕುಟುಂಬಕ್ಕೆ ಘಾತಕ ವ ನಷ್ಟಕರವಾದ ಸೃಷ್ಟನೆ ಒಳಸಂಚಿನ ರಿಕಾರ್ಡುಗಳನ್ನು ಈ ಮುಂಚೆ ಮಾಡಿದ್ದಾಗಿಯೂ, ಇನ್ನೂ ಮಾಡಲಿಕ್ಕಿರುತ್ತಾನಾಗಿಯೂ, ನಾನು ಖಂಡಿತ ತಿಳಿಯುತ್ತೇನೆ ನಮ್ಮ ಕುಟುಂಬದಲ್ಲಿ 1912ನೇ ಇಸವಿಯಲಾದ ತಹನಾಮೆ ಶರ್ತಪ್ರಕಾರ ಕುಟುಂಬದ ಎಲ್ಲಾ ಮೆಂಬರರ ಒಪ್ಪಿಗೆ ಇಲ್ಲದೆ ಕಟ ಬಕ್ಕೆ ಬಾಧಿಸುವ ರೀತಿಯಲ್ಲಿ ಸಾಲಮಾಡುವ ಸ್ವತಂತ್ರ ಸದ್ರಿ ಕೃಷ್ಣಪ್ಪ ಸೆಟ್ಟಿಗೆ ಇರುವುದಿಲ್ಲ ಹೇರಳ ಉತ್ಪತ್ತಿ ಇರುವ ನಮ್ಮ ಕುಟುಂಬಕ್ಕೆ ಸಾಲ ಮಾಡುವ ಅವಶ್ಯ ಇರುವುದಿಲ್ಲ ಸ್ವಇಚ್ಛೆ ಇಲ್ಲದೆ ಖಾಯಿಲೆಯಲ್ಲಿದ್ದ ಪರಾಧೀನನಾಗಿರುವ ಸದ್ರಿ ಕೃಷ್ಣಪ್ಪ ಸೆಟ್ಟಿ ಮಾಡಿರುವ ಯಾ ಮಾಡಲಿಕ್ಕಿರುವ ಒಳಸಂಚಿನ ರಿಕಾರ್ಡುಗಳು ನಮ್ಮ ಕುಟುಂಬಕ್ಕೆ ಬಾಧಿಸತಕ್ಕದ್ದಲ್ಲ ಆತ ಕುಟುಂಬದ ಮನೆ ಬಿಟ್ಟಂದಿನಿಂದ ಕುಟುಂಬದ ಪೋಷಣೆಯನ್ನು ಕುಟುಂಬದಲ್ಲಿ ಹಿರಿಯಳಾದ ನಾನೇ ನಡೆಸಿ ಬರುತ್ತೇನೆ ಎಂಬ ಸಂಗ್ತಿ ಈ ಮೂಲಕ ಸರ್ವ ಜನರೂ ತಿಳಿದಿರತಕ್ಕದ್ದು

ಈ ಮೂರು ಗೆರೆ ಮತ್ತು ಎಡ್ಡ ಹೆಬ್ಬೆಟ್ಟಿನ ಗುರ್ತು ಲಕ್ಷ್ಮಿ ಸೆರೆಗಾರ್ತಿ ರುಜು

ಈ ಬಗ್ಗೆ ಮಗ ಪೊಮ್ಮ ಸೇರ್ವೆಗಾರನ ಸಾಕ್ಷಿ

ತಾ 4—11 34

ಮಂಗಳೂರಿನ ಪೇಟೆಧಾರಣೆ

ಸಾಮುಗ್ರಿಗಳು	ಇಂದ	ವರೆಗೆ
	ರೂ ಆ	ರೂ ಆ
ಹೊಸ ರಾಶಿ ಅಕ್ಕಿ	3— 2	3— 4
ಹಳ್ಳು ಮುಸ್ತಿ	4— 2	4—12
ಹಳ್ಳು ಗುಡ್ಡು	4— 2	4— 8
ಹಳ್ಳು ಸುಗ್ಗಿ	3— 8	4— 2
ಊರ ಅವ್ವಲ್ ಬೆಲ್ಲಗೆ	4—12	5— 4
ರಂಗೂನು ಬಿ. ಗೋ ಗಳ್ಳಿ	5— 4	6— 4
ಎಲ್ಲೂರು ಬಿ ಮು ಗಳ್ಳಿ	4— 0	4— 0
ಗೋದಿ ಗೋಣಿ ಗಳ್ಳಿ	10— 0	12— 8
ತೊಗರಿ ಗೋಣಿ ಗಳ್ಳಿ	9— 8	10— 0
ಹುರುಳಿ ಗೋಣಿ ಗಳ್ಳಿ	7 — 0	7 10
ಕಡಲೆ ಗೋಣಿ ಗಳ್ಳಿ	7 — 0	8— 0
ತೊಗರಿಬೇಳೆ ಗೋಣಿ ಗಳ್ಳಿ	10— 0	17— 0
ಉದ್ದು ಗೋಣಿ ಗಳ್ಳಿ	8— 0	8— 2
ಹೆಸರು ಗೋಣಿ ಗಳ್ಳಿ	7— 0	7— 8
ಊರುಬೆಲ್ಲ ಖಂಡಿ ಗಳ್ಳಿ	40— 0	45— 0
ಉಪ್ಪು ಗೋಣಿ ಗಳ್ಳಿ	4—12	5— 4
ಕೊಬ್ರಿ ಖಂಡಿ ಗಳ್ಳಿ	40— 0	42— 0
ಕೊಬ್ರಿ ಹಿಂಡಿ ಖಂಡಿ ಗಳ್ಳಿ	23— 0	24— 0
ಎಳ್ಳಿಂಡಿ ಖಂಡಿ ಗಳ್ಳಿ	30— 0	33—12
ಕೊಬ್ರಿ ಎಣ್ಣೆ ಮಣ ಗಳ್ಳಿ	3— 2	4— 2
ಎಳ್ಳೆಣ್ಣೆ ಮಣ ಗಳ್ಳಿ	5— 2	5 10
ಚಿಮಣಿಎಣ್ಣೆ ಪೆಟ್ಟಿಗೆ ಗಳ್ಳಿ	6— 8	8— 0
ಮೋರಿಸ ಸಕ್ಕರೆ ಮು. ಗಳ್ಳಿ	3— 7	3— 0
ಮೆಣಸು	6 12	7 8
ಸಾಸಿವೆ ಮುಡಿ ಗಳ್ಳಿ	4— 2	5— 4
ಕಾಳುಮೆಣಸು ಖ. ಗಳ್ಳಿ	75—	100— 0
ಯೇಲಕ್ಕಿ ಮಣ ಗಳ್ಳಿ	25— 0	28— 0
ಹೊಸ ಗೇರುಬೀಜ ಮು. ಗಳ್ಳಿ	3—10	4 — 4
ಕಬ್ಬಿಣ ಖಂಡಿ ಗಳ್ಳಿ	42— 0	44— 0
ತಾಂಮ್ರತಗಡು ಮ ಗಳ್ಳಿ	9 — 8	10 0
ತಾಂಮ್ರಪಾತ್ರಗಳು ಮ ಗಳ್ಳಿ	13— 0	14— 0
ಬೀಸಿಬೆಳ್ಳಿ ಸೇರು ಗಳ್ಳಿ	14—12	15— 0
ಹಿತ್ತಾಳೆ ತಗಡು ಮ. ಗಳ್ಳಿ	9— 2	9—10
ಪವನು ಗಳ್ಳಿ	20—10	21 0
ದುಣಸೆ ಹುಳಿ ಖಂಡಿ ಗಳ್ಳಿ	30— 0	40— 0
ನೇಟಿವ್ ಕಾಫಿ ಖಂಡಿ ಗಳ್ಳಿ	180— 0	190— 0
ಫ್ಲಂಟೇರು ಕಾಫಿ ಖಂಡಿ ಗಳ್ಳಿ	280— 0	290— 0
ಹಳೆ ಅಡಿಕೆ	80 0	120— 0
ಹೊಸ ಅಡಿಕೆ	55— 0	61 — 0

ಶಾಲಿವಾಹನ ಬ್ರಾಶಕ ೧೮೫೬ನೆಯ ಭಾವ ಸಂವತ್ಸರದ ಕಾರ್ತಿಕ ಶು ೧೧ ಶನಿವಾರದಿಂದ— ಕಾರ್ತಿಕ ಬ ೨ ಶುಕ್ರವಾರದ ವರೆಗಿನ ಪಂಚಾಂಗ (೧೯೩೪ನೇಯ ನವಂಬರು)

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕಾರ್ತಿಕ	ಸೂರ್ಯ ಉ	ಸೂರ್ಯ ಅಸ್ತ	ವಿಶೇಷ
17	ಶನಿ	೧೧	೨೦॥	ಉ ಭಾದ್ರ	೩೪॥	೧	6 22	6 18	
18	ರವಿ	೧೨	೧೯॥	ರೇವತಿ	೩೩॥	೨	6 22	6 17	
19	ಸೋಮ	೧೩	೧೩॥	ಅಶ್ವಿನಿ	೩೩॥	೩	6 22	6 17	
20	ಕುಜ	೧೪	೧೨	ಭರಣಿ	೩೨	೪	6 22	6 16	
21	ಬುಧ	೧೫	೧೧।	ಕೃತ್ತಿಕ	೩೩।	೫	6 22	6 15	
22	ಗುರು	೧	೧೧॥	ರೋಹಿಣಿ	೩೩।	೬	6.22	6 14	
23	ಶುಕ್ರ	೨	೧೪॥	ಮೃಗಶಿರಾ	೪೦	೭	6.22	6.14	

NEW ARRIVALS.

Medicines.

Dr. Schuessler's Twelve Tissue Remedies 5 gr. bot. As. 4/–
Homoeopathy Medicines 5 gr. bot. As. 5/—
Sugar of Milk Dr Schwabe's original bot. 1 lb Rs. 2/-
Haarlem Oil–a world-renowned remedy As 8/–per phial
Dr Haele's New Curative Earth–Radium Cure Rs 4/–per lb.
Dr Schwabe's other special remedies are always in stock
Please consult us for your requirements

Kanarese Book a Family Guide to Biochemistry Rs 1/–
„ Domestic Homoeopathy Rs 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps Shaving sticks and Washing and Bleaching powders.

Toilet soaps to suit all tastes and prices from As 2/6
Delightful in aroma, charming in appearance Please try

Kirloskar Pumps

We are the Representatives for Kirloskar Brothers for their reliable Shallow well and Deep well Pumps Spring Cots, Spring Couches etc and stock

Pipes and pipe fittings at cheap prices Coir Mats and Mattings
Steadler Pencils and Stationeries

We are the recognised agents for STEADLER'S all stationeries and shall be glad to serve you

Olympia Typwriter.

An up to date Machine in Standard and portable sizes
For Further particulars please write to —

Basel Mission Book & Tract Depository
Mangalore S K or Hubli S M

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ

ಸುಭದ್ರವಾಗಿದೆ.

ನೂತನ! ರುಚಿಕರ! ಹಿತಕರ

ಹರಳೆಣ್ಣೆ ಮಿಶ್ರಿತವಾದ ಸಿಹಿ ಚೊಕಲೇಟು —

ಕೇಸ್ - ಫೆನ್ - ಮಿಂಟ್

ಹರಳೆಣ್ಣೆ ಆಗರ್ ಅಗರ್ ಪಿನಲ್‌ಪ್ತಾಲೀನ್ ಪೆಪ್ಪರ್‌ಮಿಂಟ್ ಮತ್ತು ಚೊಕಲೇಟು ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ ಆಬಾಲವೃದ್ಧರೆಲ್ಲರೆ ಸಕಲರಿಗೂ ಯಾವ ಕಾಲಕ್ಕೂ ಸುಖಭೇದಿಗಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟದೆ ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು ಮಲಬದ್ಧತೆ ತೋರಿದಾಗಲೆಲ್ಲ "ಕೇಸ್ ಫೆನ್ ಮಿಂಟ್"ನ್ನು ಸೇವಿಸಿರಿ ಈ ಚೊಕಲೇಟುಗಳನ್ನು ಒಂದೆರಡು ಸೇವಿಸಿದರೆ ಅನಾ...

ಈ ಹೆಸರುಗಳೇನು,– ಓದಿರುವಿರಾ?

ವಾತ—ಪರಿವಾತ ಸಂಧಿವಾತ—ಕಟಿವಾತ ಕಲಬೂದೆ ನಡುಕೋವು !!!

ಇವುಗಳಿಗೆ ಹೆದರದವರಾರು? ಇವುಗಳೆಷ್ಟು ಜನರನ್ನು ಕಾಡುತ್ತಿವೆ

ಡಾ। ಪೌಯುವರ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ ಆರ್ಧ ಶಟ್ಟು ನೀರಿನಲ್ಲಿ ನೋವು ಕಲೆದೋರಿದಾಗಲೆಲ್ಲ— ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ – ಅದು ಶೀಘ್ರ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನೂ ಪರಿಹರಿಸುವುದು

ಕೊಂಡುಕೊಂಡೇ ಅವನ್ನು ಪರೀಕ್ಷಿಸಿರಿ

'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ.

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ

ಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಚಿಗುಪ್ಸ ಹುಟ್ಟಿಸುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ ಮಕ್ಕಳು ಆನಂದದಿಂದ ಸೇವಿಸುವರು

ಬಲು ಕಡಿಮೆ ಕ್ರಯ ಎಲ್ಲೆಲ್ಲಿಯೂ ದೊರೆಯುವುದು ಅತಿ ಹೆಚ್ಚು ಫಲ!

The Paragon Products Co Ballard Estate Bombay

ದ ಕ ಜಿಲ್ಲೆಯ ಡಿಸ್ಟ್ರಿಬ್ಯೂಟರರು – **M K Prabhu**, MANJESHWAR + S KANARA

Standard Furniture Co. Ltd

KALLAI, MALABAR

The BEST HOUSE for FURNITURE.

BRANCHES —

Madras —34—35, General Patters Road Mount Road
Trichinopoly —11, Promenade Road, Cantt

ಪತ್ರಿಕಾ ಪ್ರಪಂಚ.

ವಿದ್ಯೆಯೂ ಮಾತಾಪಿತೃಗಳೂ.

ಮಕ್ಕಳ ಗಮನಕ್ಕೆ ಬರಬಾರದೆಂದು ಕೆಲವು ವಿಷಯಗಳನ್ನು ಹೆತ್ತವರು ಗುಪ್ತವಾಗಿರಿಸುವುದರಿಂದ ಮಕ್ಕಳಲ್ಲಿ ಕುತೂಹಲಸ್ವಭಾವವು ಕೆರಳಿಸಲ್ಪಡುವುದು.| ಹೆತ್ತವರಿಗೆ ಸಂಬಂಧವಾದ ಶಿಷ್ಟಸಂಪ್ರದಾಯಗಳು ತಿಳಿಯದಿರುವುದರಿಂದ ಮಕ್ಕಳೂ ಅವರಂತೆಯೇ ಆಗುವರು. ಶೌಚದ ಕಡೆಗೆ ಹೆತ್ತವರ ಗಮನವಿಲ್ಲದಿದ್ದರೆ, ಅವರ ಮಕ್ಕಳೂ ಕೊಳಕರಾಗುವರು| ಎಂಬ ವಿಷಯಗಳು ಮಾತಾಪಿತೃಗಳಿಗೆ ತಿಳಿದಿರಬೇಕು. ಮಾತಾಪಿತೃಗಳು ಮಕ್ಕಳೆದುರು ದುಷ್ಟವಾಕ್ಯಗಳನ್ನಾಡಬಾರದು. ಇದರಿಂದ ಮಕ್ಕಳ ಚಿತ್ತವೂ ದುಷ್ಟವಾಗುತ್ತದೆ. ಮಗುವನ್ನು ಕುರಿತು— "ನೀನು ಬರಿ ದಡ್ಡ; ನಿನ್ನ ತಂದೆಯಂತೆ ನೀನೂ ನಿಷ್ಪ್ರಯೋಜಕ. ನಿನಗೆ ಜ್ಞಾಪಕಶಕ್ತಿಯು ಕಡಮೆ, ಮಕ್ಕಳಿಗೆ ಏನೂ ತಿಳಿಯುವುದಿಲ್ಲ. ನೀನು ಹುಡುಗಿಯಾಗುತ್ತಿದ್ದರೆ ಒಳ್ಳೆಯದಿತ್ತು. ನೀನು ಸದಾ ಅಲಸ್ಯಗಾರ" ಎಂಬ ನುಡಿಗಳನ್ನಾಡಬಾರದು. ಅಲ್ಲದೆ "ನಿನ್ನನ್ನು ಪೋಲೀಸನಿಗೆ ಕೊಡುತ್ತೇನೆ. ನಿನ್ನನ್ನು ಭೂತವು ತಿನ್ನಲಿ! ನೀನು ಕುಲಕ್ಕೊಂದು ಕಳಂಕ; ನೀನು ಸಕ್ಕರೆ 'ಹೆಗ್ಗ' ಎಂಬ ನಿಷ್ಠುರದ ಮಾತುಗಳನ್ನಾಡಬಾರದು. ಆದರ್ಶಪರ ಶಿಕ್ಷಣದ ಪರ ಉಪಾಧ್ಯಾಯರಿಗೂ ಮಾತಾಪಿತೃಗಳಿಗೂ ಇರುವ ನಿಕಟಸಂಬಂಧ; ಶಾಲೆ ಮತ್ತು ಮನೆಗಳೊಳಗಿರುವ ಸಾಮೀಪ್ಯ; ತಾನು ದೇಶದ ಶಿಕ್ಷಕನೆಂದು ಉಪಾಧ್ಯಾಯನು ತಿಳಿದಿರಬೇಕು. ತಾವು ಮನೆಯ ಶಿಕ್ಷಕರೆಂದು ಹೆತ್ತವರು ಅರಿತಿರಬೇಕು. ಮನೆಯೆಂಬುದು ವಿಶ್ರಾಂತಿಯ ಸ್ವರ್ಗಲೋಕವಾಗಿರಬೇಕಲ್ಲದೆ ಮಕ್ಕಳಿಗೆ ಅನುಭವವನ್ನೀಯುವ ನಿಜ ಪ್ರಪಂಚದಂತಿರಬೇಕು. ಶಾಲೆಯು ಮಕ್ಕಳ ಭಾವೀಜೀವನದ ಸೊಬಗು ಮತ್ತು ವಿರಸಗಳನ್ನು ಚಿತ್ರಿಸಿ, ಮಕ್ಕಳ ಮುಂದಿರುವ ಸ್ವಪ್ನದಂತಿರಬೇಕು.

'Educational Review'.

ಗುಂಡುಸೂಜಿಗಳಿಂದ ನೋವುಗೊಳ್ಳದ ದೇಹ!

ನ್ಯೂಯಾರ್ಕಿನಲ್ಲಿ ಒಬ್ಬನಿರುವನು. ಇವನ ದೇಹದ ಯಾವ ಭಾಗಕ್ಕಾದರೂ ಸೂಜಿ, ಗುಂಡುಸೂಜಿ, ಮೊಳೆಗಳನ್ನು ಚುಚ್ಚಿದರೆ ನೋವಾಯಿತೆಂದು ಹೇಳಲಾರನು. ನೋವಾಗುವುದೇ ಇಲ್ಲವಂತೆ! ಯುನೈಟೆಡ್ ಸ್ಟೇಟ್ಸ್ ಮೆಡಿಕಲ್ಸ್ ಆಸ್ಪತ್ರೆಯಲ್ಲಿ ಡಾ। ಜೋರ್ಜ್ ವಾನ್ ನೆಸ್ ಡಿಯರ್ ಬೋರ್ನ್ ಎಂಬವರು ಇವನ ಪರೀಕ್ಷೆ ಮಾಡಿದರು. ವಿನೋದ ಉದ್ಯೋಗ ಚತುರತೆಯ ದೃಷ್ಟಿ, ಈ ಮನುಷ್ಯನ ಹೆಸರು ಪ್ರಕಟವಾಗಲಿಲ್ಲ. ಈ ಮನುಷ್ಯನು ನೋವುಗೊಳ್ಳದೆ ಇರಲು ಕಾರಣವೇನೆಂದು ಡಾಕ್ಟರರು ತರ್ಕಿಸಿ ನೋಡಿದರು. ಈ ಮನುಷ್ಯನಿಗೆ ತಲೆನೋವು ಎಂದರೇನೆಂದು ಮಾತ್ರ ಗೊತ್ತು; ದುತ್ತಾದ ನೋವಿನ ಅನುಭವವೂ ಅವನಿಗಿಲ್ಲ. ಬಾಲ್ಯದಲ್ಲಿ ಸ್ವದೇಹದ ಮೇಲೆ ತುಪಾಕಿ ಹಾರಿಸಿಕೊಂಡನು. ಕೈ ಮುರಿದುಕೊಂಡನು; ಎತ್ತರ ಸ್ಥಳದಿಂದ ಬಿದ್ದನು,— ಆದರೂ ಅವನು ನೋವುಗೊಳ್ಳದೆ ಹೆತ್ತವರನ್ನು ಆಶ್ಚರ್ಯಗೊಳಿಸಿದನು. ಈಗೀಗ ತಿಂದ ೬೦ ಪಿನ್ನುಗಳನ್ನು ಚುಚ್ಚಿಕೊಂಡರೂ ಅವನಿಗೆ ನೋವಾಗುವುದಿಲ್ಲ. ಮಾನಸಶಾಸ್ತ್ರ, ದೇಹಶಾಸ್ತ್ರಗಳ ಸೂಕ್ಷ್ಮ ಸೂತ್ರಗಳ ಪ್ರಯೋಗ ಮಾಡಿ ಪರಿಶೋಧಿಸಿದರೂ ಈ ವ್ಯಕ್ತಿಯ ದೇಹವೈಶಿಷ್ಟ್ಯದ ಕಾರಣವು ದರ್ಶಿತವಾಗಲಿಲ್ಲ. ಈ ವ್ಯಕ್ತಿಯ ಜನ್ಮಾರಭ್ಯ ಅವನ ದೇಹಸ್ಥಿತಿಯು ಹೀಗೆಯೇ ಇತ್ತೆಂದು ತಿಳಿಯಲಾಗಿದೆ.

Scientific American.

ಇಪ್ಪತ್ತು ವರ್ಷಗಳ ನಂತರ—

ಜಗತ್ತು ಮಹಾಗ್ರಹದಿಂದ, ಅಧಿಕೋಪದ ಶಸ್ತ್ರಗಳನ್ನು ಹಿಡಿಸಿಕೊಂಡಿತು. ೧೯೧೪ರಲ್ಲಿ ಒಸ್ಟ್ರಿಯನ್ ಆರ್ಚ್ ಡ್ಯೂಕನನ್ನು ಸರ್ಬಿಯಾದಲ್ಲಿ ರಾಜಕೀಯ ದೃಷ್ಟಿಯಿಂದ ಕೊಲೆಮಾಡಲಾಗಿ, ರಕ್ತವು ಎದ್ದು ನಿಂತಿತು; ಜರ್ಮನಿ ಫ್ರಾನ್ಸುಗಳು ಎಚ್ಚತ್ತವು. ಬೆಲ್ಜಿಯಮಿನ ಕಡೆಯಿಂದ ಗ್ರೇಟ್ ಬ್ರಿಟನು ಹೊರಟಿತು. ಅಂದು ಮಹಾಯುದ್ಧವಾಯಿತು. ಇನ್ನು ಸಣ್ಣ ಸಂಘಟನೆಯು ಇನ್ನು ಅವಾಂತರಕ್ಕೆಡೆಕೊಟ್ಟಿತೆಂದರೆ ಯೂರೋಪಿನ ಜೀಯ ಪರಿಸ್ಥಿತಿಯು ಅಂತ್ಯಂಟಾಗುವುದು. ಮಿ। ಚರ್ಚಿಲ್ಲರು ತನ್ನ "ದಿ ವರ್ಲ್ಡ್ ಕ್ರೈಸಿಸ್" ಎಂಬುವದರಲ್ಲಿ ಭಾವಪೂರ್ಣವಾಗಿ ಹೀಗೆ ಬರೆದಿರುವರು:—"ಪ್ರತಿಯೊಂದು ಕಾಲದ ಪ್ರತಿಯೊಂದು ಭಯಂಕರ ಘಟನಾವಳಿಗಳು ಈ ಯುದ್ಧದಲ್ಲಿ ಒಂದಾದುವು. ಸೃಷ್ಟಿಗೇ ಅಲ್ಲ! ಜನಾಂಗವೇ ಕಳ್ಳಲ್ಪಟ್ಟಿತು. ಮನುಷ್ಯನು ಮನುಷ್ಯನ ಮೇಲೆ ಮಾಡಿದ ಅತ್ಯಾಚಾರದ ಫಲಿತಾಂಶವು ಶಾಶ್ವತ ಪರಿಣಾಮವನ್ನುಂಟುಮಾಡುವಂತಾಯಿತು. ಯಾವ ರೀತಿಯ ಒಪ್ಪಂದವಾದರೂ ಸೈನ್ಯವನ್ನು ಪ್ರತಿಬಂಧಿಸಲಾರದಾಯಿತು; ಘಾಯಗೊಂಡವರು ಹೆದ್ದಾರಿಯಲ್ಲಿ ಬಿದ್ದು ಕೊಳೆತರು. ಸತ್ತವರ ಸಂಖ್ಯೆಯು ಲೆಕ್ಕಕ್ಕೆ ಸಿಗಲಿಲ್ಲ. ಹಡಗುಗಳು ಮುಳುಗಿಸಲ್ಪಟ್ಟುವು. ಈಜುವವರನ್ನು ಗುಂಡಿಟ್ಟು ಸುಡಲಾಯಿತು. ವಿಮಾನಗಳು ಜೀವ ಪಟ್ಟಣಗಳನ್ನು ನಾಶಗೊಳಿಸಿದುವು. ೧೦,೦೦೦,೦೦೦ ಪ್ರಾಣಗಳ ಆಹುತಿಯೊಡನೆ ೫೦,೦೦೦,೦೦೦,೦೦೦ ಪೌಂಡುಗಳು ಧ್ವಂಸವಾದುವು"

'The Month'.

ಆಡಿನ ಹಾಲಿನ ಉತ್ಕೃಷ್ಟತೆ.

ಬ್ರಿಟನು ಹೆಚ್ಚೆಚ್ಚು ಆಡಿನ ಹಾಲನ್ನು ಕುಡಿಯುತ್ತದೆ. ಈಗ ಅಲ್ಲಿ ವೆಚ್ಚವಾಗುತ್ತಿರುವ ಹಾಲು ೨೦,೦೦೦,೦೦೦ ಗೆಲನುಗಳು. ದನದ ಹಾಲಿಗಿಂತಲೂ ಆಡಿನ ಹಾಲು ಬೇಗನೇ ಜೀರ್ಣಸುತ್ತದೆ. ಅದರಲ್ಲಿ ಕೊಬ್ಬೂ ಬೆಣ್ಣೆಯೂ ಅಧಿಕವಾಗಿರುತ್ತವೆ. ಕ್ಷಯರೋಗದ ಜಂತುಗಳು ಅದರಲ್ಲಿರುವುದಿಲ್ಲ. ಆಡಿನ ಹಾಲನ್ನು ಸೇವಿಸುವ ಸ್ತ್ರೀಯರ ಮೈಬಣ್ಣವು ಮತ್ತಷ್ಟು ಸುಂದರಗೊಳ್ಳುತ್ತದೆ. ಆಡಿನ ಹಾಲಿನಲ್ಲಿ ಮೋರೆ, ಕೈ, ಕುತ್ತಿಗೆಗಳನು ದಿನಕ್ಕೆ ಮೂರು ಸಲ ತೊಳೆದರೆ ಮೋರೆಯ ಸೊಬಗು ಬಹುವಾಗಿ ಹೆಚ್ಚುತ್ತದೆಂದು ಸ್ತ್ರೀಯರು ಕಂಡುಹಿಡಿದಿರುವರು. ಆಡುಗಳನ್ನು ಸಾಕುವುದರಲ್ಲಿ ಹೆಚ್ಚು ವ್ಯಯವಾಗುವುದಿಲ್ಲ. ಸಣ್ಣ ಕಸ, ಕುರುಚಲು, ಜಂದುಳಿಗೆ ಆಡಿನ ಹಾಲನ್ನು ಕೊಟ್ಟು ಅವುಗಳನ್ನು ಸಾಕಬಹುದು. ಬ್ರಿಟನನ್ನೂ ಹಿಂದೂಸ್ಥಾನವನ್ನೂ ಸರಿದೂಗಿದರೆ, ಹಿಂದೂಸ್ಥಾನವು ಬಡದೇಶವೆಂಬುದು ವಿದಿತವಾಗುವುದು. ಹೀಗಿರುವುದರಿಂದಲೂ, ಬಡವರ ಧನದಂತಿರುವುದರಿಂದಲೂ ಆಡನ್ನು ಹಿಂದೀಯರು ಅಧಿಕ ಸಂಖ್ಯೆಯಲ್ಲಿ ಸಾಕಲೇಬೇಕು. ಆಯುರ್ವೇದ ಶಾಸ್ತ್ರದಸ್ಸನ್ನುಸಂತೆ—ಆಡಿನ ಹಾಲು ಕ್ಷಯರೋಗ ನಿವಾರಣೆಗೆ ಅತ್ಯುಪಕಾರಿಯೆಂದು ತಿಳಿದುಬರುವುದು. ಈ ಪುರಾತನ ಸತ್ಯವು ಈಗ ಆಡಿನ ಹಾಲಿನಲ್ಲಿರುವ ಧಾರಾಳ ಕೊಬ್ಬು, ವಿಟಮಿನ್‌ಗಳು ಮತ್ತು ಕಲ್ಸಿಯಂ ಸೋಲ್ಟ್‌ಗಳನ್ನು ಕಂಡುಹಿಡಿದ ಮೇಲೆ ಗೊತ್ತಾಗಿದೆ. ಅಗಾಧಪರಿಶೋಧನೆ ಯಾವ ಮೇಲೆ,—ಆಡಿನ ಹಾಲಿನಲ್ಲಿ ಕ್ಷಯರೋಗದ ಕ್ರಿಮಿಗಳಿಲ್ಲವೆಂದು ಖಂಡಿತ ತಿಳಿದುಬಂದಿದೆ. ಕ್ಷಯರೋಗ ಪ್ರಸಾರವು ಹೆಚ್ಚಿಗಿರುವ ಈ ಸಮಯದಲ್ಲಿ ಹಿಂದೂದೇಶದ ಬಡಬಗ್ಗರು ಆಡುಗಳನ್ನು ಸಾಕಿ ತಮಗೆ ಅಗತ್ಯವಿರುವ ಹಾಲನ್ನು ಸುಲಭದಲ್ಲಿ ಪಡೆಯಬಹುದು. ಆಡನ್ನು ದಿನಾಲೂ ಮಿಯಿಸಿ ಶುದ್ಧವಾಗಿಟ್ಟರೆ ಅದರ ಹಾಲಿನಲ್ಲಿರುವ ವಾಸನೆಯು ಹೋಗಿಬಿಡುವುದು.

'The Mayurbhanj Gazette'

ಸಕ್ಕರೆಯ ಸಿದ್ಧತೆ.

ಹಿಂದೂಸ್ಥಾನದ ವಿಧ ವಿಧ ಭೂಮಿಗನುಗುಣವಾಗಿ ಬೆಳೆಯನ್ನು ಬೆಳೆಯಿಸುವ ಹವಣಿಕೆಯೊಂದು ಕೃಷಿಕಾತಿಯವರದ್ದಾಗಿರುತ್ತದೆ. ಈಗ ಸರಕಾರವು ಕೊಟ್ಟಿರುವ ರಕ್ಷಣಾ ಯೋಜನೆಯನ್ನು ಸ್ವೀಕರಿಸಿ ಹಿಂದೂಸ್ಥಾನದ ಬೇಸಾಯಗಾರರು ತಮ್ಮ ಭೂಮಿಯಲ್ಲಿ ಕಬ್ಬನ್ನು ಬೆಳೆಯಿಸಬೇಕು. ಸಕ್ಕರೆಗಾಗಿ ಹಿಂದೂದೇಶವು ಕೋಟಿಗಟ್ಟಲೆ ರೂಪಾಯಿಗಳನ್ನು ವಿದೇಶಗಳಿಗೆ ರವಾನಿಸುತ್ತದೆ. ಸಕ್ಕರೆಯು ವಿಶಯವಾಗಿ ಬೇಸಾಯಗಾರರಿಗೆ ಅನುಭವವನ್ನೀಯಬೇಕಾದರೆ "ಇಂಡಿಯನ್ ಶುಗರ್" ಎಂಬ ಚಳವಳವು ಪ್ರಾರಂಭವಾಗಬೇಕಾಗಿದೆ. ಬಾಳೆಯ ಮರ, ಬಟಾಟೆ, ತೆಂಗಿನ ಮರ, ಹತ್ತಿಗಿಡ, ನೆಲಗಡಲೆಗಳನ್ನು ನಾವೇ ಬೆಳೆಯಿಸಬೇಕಾಗಿದೆ. ೩೦,೦೦೦,೦೦೦ ಎಕ್ರೆ ಭೂಮಿಯಲ್ಲಿ ನಾವು ಕಬ್ಬನ್ನು ತಯಾರಿಸುತ್ತೇವಾದರೂ, ವಿದೇಶೀ ಸಕ್ಕರೆಯು ಆಮದಾಗುತ್ತಲೇ ಇದೆ. ೧೮೮೫—೯೯ನೇ ವರ್ಷದ ವರೆಗೆ ಹಿಂದೂದೇಶವು ಪ್ರಪಂಚದಲ್ಲಾದ ಸಕ್ಕರೆಯ ಅರ್ಧಪಾಲಿನಷ್ಟನ್ನು ತಾನೇ ತಯಾರಿಸಿತು. ೧೯೧೭—೨೦ರಲ್ಲಿ ಅದು ಸೇಕಡಾ ೨೦ರಷ್ಟನ್ನು ಮಾತ್ರ ತಯಾರಿಸಿತು. ಇಷ್ಟು ವಿಸ್ತಾರ ಭೂಮಿಯಿದ್ದೂ, ವಿದೇಶೀ ಸಕ್ಕರೆಯನ್ನು ಕೊಳ್ಳುವುದೆಂದರೆ ನಾಚಿಗೆಯಲ್ಲವೇ? ಹಿಂದೂದೇಶದ ಸಕ್ಕರೆಯೊಡನೆ ಪ್ರತಿಸ್ಪರ್ಧಿಸುವವರು ಹೆಚ್ಚಾಗಿರುತ್ತಾರೆ. ನಾವು ಸಕ್ಕರೆಯನ್ನು ಆದಷ್ಟು ಕಡಮೆ ಖರ್ಚಿನಿಂದ ತಯಾರಿಸಬೇಕು. ಸಣ್ಣ ಸಣ್ಣ ಭೂಮಿಯಲ್ಲಿ ಕಬ್ಬಿನ ಕೃಷಿ ಮಾಡಿ ಸಕ್ಕರೆ ತಯಾರಿಸಬೇಕು.

'The Mysore Economic Journal',
ಇದರಲ್ಲಿ ಶ್ರೀ ಕೆ. ಎಸ್. ಶ್ರೀಕಂಠಯ್ಯನವರು.

ಕರ್ಣಾಟಕ ಸಾಹಿತ್ಯ ಪರಿಷತ್ತು.

೧೯ನೆಯ ವಾರ್ಷಿಕಾಧಿವೇಶನ

ಸೂಚನ ಪತ್ರ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸದಸ್ಯರಲ್ಲಿ ವಿಜ್ಞಾಪನೆ:

ಪರಿಷತ್ತಿನ ೧೯ನೆಯ ವಾರ್ಷಿಕಾಧಿವೇಶನವು ೧೯೩೪ನೆಯ ಇಸ್ವಿ ಡಿಸೆಂಬರ್ ೨೮ನೆಯ ತಾರೀಕು ಶುಕ್ರವಾರ ಬೆಳಗ್ಗೆ ೮ ಗಂಟೆಗೆ ಹೈದರಾಬಾದು ಸಂಸ್ಥಾನದಲ್ಲಿರುವ ರಾಯಚೂರಿನಲ್ಲಿ, ೨೦ನೆಯ ಸಾಹಿತ್ಯ ಸಮ್ಮೇಳನಕ್ಕಾಗಿ ಗೊತ್ತಾಗಿರುವ ಕಟ್ಟಡದಲ್ಲಿ ನಡೆಯತಕ್ಕದ್ದೆಂದು ನಿಶ್ಚಯವಾಗಿದೆ. ಪರಿಷತ್ತಿನ ನಿಬಂಧನೆಗಳನ್ನು ಕುರಿತಾಗಲಿ ಕಾರ್ಯಕ್ರಮವನ್ನು ಕುರಿತಾಗಲಿ ಸೂಚನೆಗಳನ್ನು ಕಳುಹಿಸಲಿಚ್ಛಿಸುವ ಸದಸ್ಯರು ತಮ್ಮ ಸೂಚನೆಗಳನ್ನು ೧೯೩೪ನೆಯ ಡಿಸೆಂಬರ್ ೧೦ರೊಳಗಾಗಿ ಈ ಕಾರ್ಯಾಲಯಕ್ಕೆ ತಿಳಿಸಬೇಕೆಂದು ಕೋರಿದೆ. ಪರಿಷತ್ತಿನ ಅಂಗ ಸಂಸ್ಥೆಗಳು ಅಧಿವೇಶನಕ್ಕೆ ತಾವು ಕಳುಹುವ ಪ್ರತಿನಿಧಿಗಳ ಹೆಸರು ಮೊದಲಾದ ವಿವರಗಳನ್ನು ಡಿಸೆಂಬರ್ ೧೦ರೊಳಗಾಗಿ ಈ ಕಾರ್ಯಾಲಯಕ್ಕೆ ತಿಳಿಯಪಡಿಸಬೇಕೆಂದು ಕೋರಿದೆ. ಪರಿಷತ್ತಿನ ಸದಸ್ಯರೆಲ್ಲರೂ ಅಧಿವೇಶನಕ್ಕೆ ದಯಮಾಡಿ ಬಂದು ಪರಿಷತ್ತಿನ ಕಾರ್ಯಗಳನ್ನು ನೆರವೇರಿಸಿಕೊಡಬೇಕೆಂದು ಬೇಡುತ್ತೇನೆ.

ಸಿ. ಕೆ ವೆಂಕಟರಾಮಯ್ಯ,
ಗೌರವ ಕಾರ್ಯದರ್ಶಿ.

[ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ೩೦, ೩೧ನೆಯ ನಿಬಂಧನೆಗಳನ್ನನುಸರಿಸಿ ಅಧಿವೇಶನಕ್ಕಾಗಿ ಗೊತ್ತುಮಾಡಿರುವ ಸಾಮಾನ್ಯ ಕಾರ್ಯಕ್ರಮವನ್ನು ಸಾಹಿತ್ಯ ಪರಿಷತ್ಪತ್ರಿಕೆಯ ೧೯೩೪ರ ಏಪ್ರಿಲ್ ತಿಂಗಳ (ಸಂಪುಟ ೧೯—೧) ಸಂಚಿಕೆಯ ಅನುಬಂಧದ XX ನೆಯ ಪುಟದಲ್ಲಿ ಕಾಣಬಹುದು.]

ಬೊಂಬಾಯಿ ಸ್ತ್ರೀಯರ ಮಹಾಸಭೆ. ಅಧ್ಯಕ್ಷರಾದ ಶ್ರೀಮತಿ ಜಸಾವಾಲಾರವರು (ಎದುರಲ್ಲಿ ಎಡದಿಂದ ಮೊದಲನೆ ಸ್ಥಾನದಲ್ಲಿರುವವರು)

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮುದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ.	ಅ.	ಪೈ.	ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.	ರೂ.	ಅ.	ಪೈ.
ನಾಲ್ಕನೇ ದರ್ಜೆ	0	6	0	ಐದನೇ ದರ್ಜೆ.	0	8	0
ಮೂರನೇ ,,	0	4	6	ನಾಲ್ಕನೇ ಸಚಿತ್ರ	0	8	0
ಎರಡನೇ ,,	0	4	0	ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.			
ಸಿವಿಕ್ಸ್ ಮತ್ತು ನೀತಿಬೋಧೆ.							
ಐದನೇ ದರ್ಜೆ	0	8	0	ಎರಡನೇ ದರ್ಜೆ	0	3	6
ನಾಲ್ಕನೇ ,,	0	8	0	ಮೂರನೇ ,,	0	8	0
ಮೂರನೇ ,,	0	2	6	ನಾಲ್ಕನೇ ,,	0	8	0
ಎರಡನೇ ,,	0	2	0	ಐದನೇ ,,	0	4	0

ಅಜ್ಜಿ ಕಥೆಗಳು (ಸಚಿತ್ರ).

ಮೂರು ಕರಡಿಗಳು.
ಜೇನು ಸತ್ತು ಕಾಗೆ ಬಡವಾಯಿತು
ಮೆಣಸಿನ ಕಾಳಪ್ಪ.
ಅಗಸಗಣಿ ಮುದ್ದೆ.
ಇಲಿಗಳ ಧಕ್ಕ ಧೈ.
ಅಂಗಳ ದುಗ್ಗು.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ: 1ಕ್ಕೆ 0-0-9)

ಮತ್ತು

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸಮಾಜಶಾಸ್ತ್ರ' ಸಿದ್ಧವಾಗುತ್ತಿದೆ.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೇ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

1935ರ ಡೈರಿಗಳು, ಎಲ್ಲಾ ಕೋರ್ಟು ಫಾರ್ಮುಗಳು, ಬೇಕೆಂದಾದರೆ

ಶಾರದಾ ಛಾಪಖಾನೆ, ಮಂಗಳೂರು.

ಟೀಕುಗಳು
NOTES

ಎಣಿಕೆಯಲ್ಲಿ ಚುನಾವಣೆಗಳ ಗಲಭೆ ಮುಗಿಯಿತು. ಫಲಿತಾಂಶಗಳು ಪೂರ್ಣವಾಗಿ ತಿಳಿದು ಬಂದಿಲ್ಲ.

* * *

ಒಂದು ಕೈಬೆರಳನ್ನು ಬೀಸಿ (೧) ಸಾವಿರ ವೋಟುಗಳನ್ನು 'ಅರೆಸ್ಟು' ಮಾಡಿಕೊಡಿಸುವೆನೆಂದು ಡಾಕ್ಟರರೊಬ್ಬರು ಕಾಂಗ್ರೆಸ್ ವಿರೋಧ ಪಕ್ಷದ ಒಬ್ಬ ಉಮೇದ್ವಾರರಿಗೆ ಭರವಸೆ ಕೊಟ್ಟಿದ್ದರಂತೆ. ಆದರೆ, (೧) ನೂರಾರು ಮೈಲು ದೂರದಲ್ಲಿರುವ ಅವರ ಆ ಕೈಬೆರಳು ಅಷ್ಟು ಉದ್ದವಿರಲಿಲ್ಲ. (೨) ವೋಟರರ ಕೈಗೂ ಬೆರಳುಗಳಿದ್ದುವು.

* * *

ಮತ್ತೊಂದು ಕಡೆಯಲ್ಲಿ, ಪೋಲಿಂಗ್ ಬೂತಿನಲ್ಲಿ ಕುಳಿತ 'ಏಜಂಟ'ರೊಬ್ಬರನ್ನೆ ಅರೆಸ್ಟು ಮಾಡಿದರಂತೆ—ಸಿವಿಲ್ ವಾರಂಟಿನಲ್ಲಿ! (ಈ ಅರೆಸ್ಟು ಕೈಬೆರಳುಗಳಿಂದಲೇ ನಡೆಯಿತು.)

* * *

ಒಬ್ಬ 'ಸನಾತನಿ' ಎಂದೂ ಮತ್ತೊಮ್ಮೆ 'ಕಾಂಗ್ರೆಸ್‌ವಾಲ'ನೆಂದೂ ಹೇಳಿಕೊಂಡರೆ, ಕತೆಯಲ್ಲಿನ ಬಾವಲಿಯ ಅವಸ್ಥೆ ಪ್ರಾಪ್ತವಾಗುವುದು. ಇದನ್ನು ಮತ್ತೊಂದು ಚುನಾವಣೆಯಲ್ಲಾದರೂ ಉಮೇದ್ವಾರರು ಮರೆಯಲಾಗದು.

* * *

ಬೊಂಬಾಯಿಯಲ್ಲಿ ಶ್ರೀ ಕವಾಸ್ಜಿ ಜಹಾಂಗೀರರ ಸುದೈವದಿಂದ ಚುನಾವಣೆಯಲ್ಲಿ ಸಹಾಯವಾಗಲು ಸಾವಿರ ವೋಟಾರುಕಾರುಗಳು ಸಿದ್ಧವಾಗಿವೆ. ಕಾಂಗ್ರೆಸ್ಸಿನ ಕಡೆಯಿಂದ ೫೦೦ ಮಾತ್ರ! ಆದರೆ, ವೋಟಿನ ಹಕ್ಕು ವೋಟಾರು ಮ್ಯಾಲಿಕರಿಗಿರಬಹುದು; ವೋಟಾರುಗಳಿಗೆ ಖಂಡಿತವಾಗಿಯೂ ಇಲ್ಲ!

* * *

"ಬೆಲ್ಲವಿಲ್ಲದಿದ್ದರೆ ಬೆಲ್ಲದಂತಹ ಮಾತು ಇಲ್ಲವೆ?" ಎಂಬೊಂದು ಗಾದೆ ಇದೆ. ಪ್ರತಾಪಘಡದ ಇತ್ತೀಚಿಗಿನ ಒಂದು ರಾಜಾಜ್ಞೆಯಂತೆ "ಬೆಲ್ಲದಂತಹ ಮಾತಿಲ್ಲ; ಬೆಲ್ಲ ಮಾತ್ರ" ಇದೆ.

* * *

ಇನ್ನು, ಯಾರೂ ಪ್ರತಾಪಘಡ ಸಂಸ್ಥಾನದೊಳಗೆ ಯಾವ ಬಗೆಯ ಪ್ರಾಣಿಬಲಿಯನ್ನೂ ಕೊಡಕೂಡದೆಂದೂ, ಬದಲಾಗಿ 'ಬೆಲ್ಲದ ಬಲಿ' ಕೊಡಬಹುದೆಂದೂ ರಾಜಾಜ್ಞೆ. ಇದು ಎಷ್ಟು ಜನರಿಗೆ ಸಿಹಿ ಕಾಣಬಹುದು?

* * *

ಲರ್ಕಾನಾದಲ್ಲಿ ದಕಾಯಿತರನ್ನು ಸಾರ್ವಜನಿಕ ಸ್ಥಳದಲ್ಲಿ ಗಲ್ಲಿಗೇರಿಸಿದ ವರ್ತನೆಯು ನ್ಯಾಯವಾದುದೆಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಹೋರ್ ಸಾಹೇಬರು, ಬೊಂಬಾಯಿ ಸರಕಾರದ ಬಂಟರಾಗಿ ಉತ್ತರ ಕೊಟ್ಟರು.

* * *

"ಅದರಿಂದ ಜನರಿಗೆ ಸರಕಾರದಲ್ಲಿ ಭರವಸೆಯೂ, ದರೋಡೆಯವರಿಗೆ ಸರಕಾರದ ಶಾಸನಗಳಲ್ಲಿ ಗೌರವವೂ ಉಂಟಾಗುವುದು" ಎಂದು ಹೋರರ ವಾದ!

* * *

ಅನಾಗರಿಕ ಜನರನ್ನು ತಿದ್ದಿ ಕಾಪಾಡಬೇಕಾದರೆ, ನಾಗರಿಕ ಸರಕಾರವೂ ಅನಾಗರಿಕ ವಿಧಾನಗಳನ್ನು ಕೈಕೊಳ್ಳಬೇಕಾಗುವುದು.

ರೋಗಬಾರದಿರಲು....

ಮುಖ್ಯ ರೋಗಗಳಲ್ಲಿ ಹೆಂಗಸರ ರೋಗಕ್ಕೆ ಸಿಕ್ಕಿ ಬಾಯಿರ ಹಚ್ಚಿಕೊಳ್ಳದಿರಿ!
ಆ ರೋಗ ಹತ್ತದಂತೆ ಇರಲು ಸಾಧು ಅನುಭವದಿಂದ ತಿಳಿದಿರುವ ರಕ್ಷಣೆಯ ಸಾಧನವನ್ನು ಉಪಯೋಗಿಸಿರಿ!
ಗಂಡಸರಿಗೆ ಬೆಲೆ 1-8-0
ಹೆಂಗಸರಿಗೆ (ಗರ್ಭನಿರೋಧಕ್ಕೆ) 2-4-0
ಅರ್ಜಿಯೊಡನೆ 4 ಆಣೆ ಸ್ಟ್ಯಾಂಪು ಕಳುಹಿಸಿ.
ವಿಳಾಸ—ಕರ್ನಾಟಕ ಏಜನ್ಸಿ,
82, ಕೃಷ್ಣಪ್ಪ ನಾಯ್ಕ್ ಅಗ್ರಹಾರಂ ಸ್ಟ್ರೀಟ್,
ಜಿ. ಟಿ. ಮದ್ರಾಸು.

'ಜಸ್ಟಿಸ್' ಪಕ್ಷದ ಉಮೇದ್ವಾರರ ಅಪಜಯ.

ಈ ಕುರಿತಾಗಿ, "ಎಲೆಕ್ಷನ್ ಚುನಾವಣೆಗಳೂ ಅವರ ಪಾಠಗಳೂ" ಎಂಬ ಶಿರೋನಾಮೆಯ ಕೆಳಗೆ 'ಸ್ವತಂತ್ರ' ಪತ್ರಿಕೆ ಸಂಪಾದಕರಾದ ಶ್ರೀ ಸಿ. ಆರ್. ಶ್ರೀನಿವಾಸನ್‌ರವರು ಹೀಗೆ ಬರೆಯುತ್ತಿರುವರು:—

"ಕಾಂಗ್ರೆಸ್ ಉಮೇದ್ವಾರರು, ಮತದಾರರ ಬೆಂಬಲವನ್ನು ಕಾಂಗ್ರೆಸ್ಸಿನ ಹೆಸರಿನಲ್ಲಿ ಯಾಚಿಸಿದರೇ ವಿನಾ ಸ್ವೀಯ ಗುಣಾತಿಶಯಗಳನ್ನು ಹೇಳಿಕೊಂಡು ಅಲ್ಲವೆಂಬುದು ಗಮನಾರ್ಹ ವಿಷಯ. ಇದಕ್ಕೆ ಜನತೆಯೂ ಅನುಕೂಲವಾಗಿ ಉತ್ತರ ಕೊಟ್ಟು, ಕಾಂಗ್ರೆಸನ್ನು ಗೌರವಿಸಿತು. ಈ ಪ್ರಾಂತ್ಯದಲ್ಲಿ ಅಧಿಕಾರಸಂಪನ್ನ ಪಕ್ಷವೆಂದರೆ 'ಜಸ್ಟಿಸ್ ಪಕ್ಷ'. ಇದು ಕಾಂಗ್ರೆಸ್ಸಿಗೆ ಬದ್ಧ ವಿರೋಧಿಯಾಗಿ, ತನ್ನ ಉಮೇದ್ವಾರರನ್ನು ಕಳುಹಿಸಿತು. ಈ ಪ್ರಾಂತ್ಯದಲ್ಲಿ ಹೆಚ್ಚಿಗೆ ಮುನಿಸಿಪಾಲಿಟಿಗಳೂ ಡಿಸ್ಟ್ರಿಕ್ಟ್ ಬೋರ್ಡುಗಳೂ ಜಸ್ಟಿಸ್ ಪಕ್ಷದವರ ವ್ಯಕ್ತಿಗಳ ನೇತೃತ್ವದಲ್ಲಿವೆ. ಹೀಗಾದರೂ, ಅವರು ತಮ್ಮವರೇ ಆದವರನ್ನು ಚಿಕ್ಕ ಚುನಾವಣೆಗೆ ನಿಲ್ಲಿಸದೆ, ಕಾಂಗ್ರೆಸನ್ನು ವಿರೋಧಿಸುವವರು ಇರುವವರೋ ಅವರನ್ನೇ ತಮ್ಮ ಉಮೇದ್ವಾರರೆಂದು ಘೋಷಿಸಿದರು. ಹಿತ್ತಾಳ ಒಪ್ಪಂದವನ್ನೊಪ್ಪಿದವನೂ ಮುರಿದವನೂ 'ಜಸ್ಟಿಸ' ಪಕ್ಷದ ಉಮೇದ್ವಾರನು! ಶಾರದಾ ಮಸೂದೆಯನ್ನು ಸ್ವಾಗತಿಸಿದವನಾಗಲಿ ವಿರೋಧಿಸಿದವನಾಗಲಿ—ಯಾರೂ ಸರಿಯೆ, ಜಸ್ಟಿಸ್‌ನ ಉಮೇದ್ವಾರನಾದನು! ಈ ಜಸ್ಟಿಸ್ ಪಕ್ಷದ ಧೋರಣೆಯೇನೆಂಬುದು ಸ್ವಯಂವ್ಯಕ್ತ. ಕಾಂಗ್ರೆಸ್ಸಿನ ಎದುರಾಳಿಗಳೆಲ್ಲ ಇವರ ಪ್ರತಿನಿಧಿಗಳೆನಿಸಿದರು."

(ಶ್ರೀ ರಾಮಸ್ವಾಮಿ ಮೊದಲಿಯಾರರೂ ಷಣ್ಮುಗಂ ಚೆಟ್ಟಿಯವರೂ ಜಸ್ಟಿಸ್ ಪಕ್ಷದ ಉಮೇದ್ವಾರರು.)

ಬಂದು ಇದೆ. ತರಾಚಿಯವರಿಗೆ, ಇದು ಸಾಧಾರಣ ಅರು ತಿಂಗಳುಗಳಿಗೆ ಸಾಕಾಗುವುದು.

ಸಾಹಿತ್ಯದ ನೋಬೆಲ್ ಬಹುಮಾನ.

ಸಾಹಿತ್ಯಕ್ಕಾಗಿರುವ ಈ ವರ್ಷದ ನೋಬೆಲ್ ಬಹುಮಾನವು, ಇಟೇಲಿಯ ನಾಟಕಕಾರರಾದ ಲುಯಿಜಿ ಪಿರಾಂಡೆಲ್ಲೊ ಎಂಬವರಿಗೆ ಸಂದಿತು. ಪಿರಾಂಡೆಲ್ಲೊ ರವರು ಯುರೋಪಿನಲ್ಲಿ ಖ್ಯಾತಿಹೊಂದಿದ ನಾಟಕಕಾರರೂ ಕಾದಂಬರಿಕಾರರೂ ಆಗಿರುವರು. ಇವರ ವಯಸ್ಸು ೬೭.

ಮದ್ರಾಸು—ಕಲ್ಕತ್ತಾ ಟೆಲಿಫೋನು.

ಮದರಾಸು ಮತ್ತು ಕಲ್ಕತ್ತೆಗಳೊಳಗೆ ಟೆಲಿಫೋನ್ ಸಂಬಂಧವನ್ನೇರ್ಪಡಿಸುವ ಆಲೋಚನೆಯಾಗಿದ್ದು, ಎಸೆಂಬ್ಲಿಯ ಆರ್ಥಿಕ ಸಮಿತಿಯು ಈ ವಿಷಯವಾಗಿ ವಿಚಾರಣೆ ನಡೆಸುತ್ತಿದೆ.

ನೌಕಾಪರಿಷತ್ತಿನ ಪರಿಸ್ಥಿತಿ.

ಲಂಡನಿನಲ್ಲಿ ಸೇರಿದ ನೌಕಾಪರಿಷತ್ತಿನಲ್ಲಿ, ತೃಪ್ತಿಕರವಾದ ನಿರ್ಧಾರಗಳುವುದೂ ಆಗದೆ ಪರಿಷತ್ತಿನ ಕಾರ್ಯವು ಅರ್ಧದಲ್ಲೆ ತಡೆಯಲ್ಪಟ್ಟಿದೆ. ಜಪಾನಿನ ಕೆಲವೊಂದು ಸೂಚನೆಗಳು ಬ್ರಿಟಿಷರಿಗೆ ಒಪ್ಪಿಗೆಯಾಗಿಲ್ಲ.

ರಾಜಕುಮಾರರಿಗೆ ಸನ್ಯಾಸ.

ನಮ್ಮ ಸಾರ್ವಭೌಮರವರ ಕುವರರ ಪ್ರಿನ್ಸ್ ಜೋರ್ಜರವರನ್ನು "ಡ್ಯೂಕ್" ಪದವಿಯಿಂದ ಭೂಷಿಸಿರುವರು.

ಸಂಸ್ಥಾನಿಕ ನೌಕರಿಗಳಿಗೆ ಸರಕಾರದ ಸಮ್ಮತಿಯಿಲ್ಲ.

ರಾಜ್ಯದ ಹೆಸರಲ್ಲಿ ಪ್ರಬಂಧ ನೌಕರಿಯ ಅಪೇಕ್ಷೆಯೊಂದನ್ನು ಕೈಕೊಳ್ಳಬೇಕೆಂದು ಕೊಡುಸ್ತ್ಯಕ್ಷದಂಬಂದ ಸೂಚನೆಗಳಿಗೆ, ಅಂತಹ ನೌಕರಿಗಳು ಸಾಮ್ರಾಜ್ಯದ ವಾಣಿಜ್ಯದೃಷ್ಟಿಯಿಂದ ಹಿತಕರವಲ್ಲವೆಂದೂ, ಅವುಗಳಿಂದ ಹಾನಿಯೇ ಹೆಚ್ಚೆಂದೂ ತಿಳಿಸಲಾಗಿದೆ.

ಫ್ರೆಂಚ್ ಪ್ರಧಾನರ ರಾಜೀನಾಮೆ.

ಫ್ರೆಂಚ್ ಪ್ರಧಾನರಾದ ಡೌಮರ್ಗ್ ಸಾಹೇಬರು ತಮ್ಮ ಕೆಲವು ರಾಜಕೀಯ ಸುಧಾರಣೆಗಳ ಆಲೋಚನೆಗಳು ಮಂತ್ರಿಮಂಡಲಕ್ಕೆ ಒಪ್ಪದ ಕಾರಣ ರಾಜಿನಾಮೆ ಕೊಟ್ಟಿರುವರು. ಪಬ್ಲಿಕ್ ವರ್ಕ್ಸ್ ಮಂತ್ರಿಗಳಾಗಿದ್ದ ಫ್ಲಾಂಡಿನ್ ಸಾಹೇಬರು ಆ ಸ್ಥಾನವನ್ನು ಸ್ವೀಕರಿಸಲೊಪ್ಪಿರುವರು.

ಬೊಂಬಾಯಿಯಲ್ಲಿ ನಿಷೇಧ ಸಭೆ.

ಬೊಂಬಾಯಿಯಲ್ಲಿ ಸಾರ್ವಜನಿಕ ಸಭೆ ಸೇರಿ, ಸರಕಾರದವರು ಕೂಲಿಗಾರ ಸಂಘಗಳನ್ನು ಬೇಕಾದರೆ ನಿಷೇಧಿಸಬೇಕೆಂದು ಸಾರಿದುದನ್ನು ನಿಷೇಧಿಸಿ ಠರಾವಾಗಿದೆ. ಸ್ವತಂತ್ರವಾದ ಸಂಘಗಳನ್ನು ರಚಿಸಬೇಕೆಂದೂ ಭಾಷಣಕಾರರ ಬೋಧನೆ.

ಅಮೇರಿಕದ ಚುನಾವಣೆಗಳು.

ಸಂಯುಕ್ತ ಅಮೇರಿಕದ ಸಂಸ್ಥಾನಗಳಿಗೆ ಗವರ್ನರುಗಳ ಚುನಾವಣೆಯೂ, ಸಿನೇಟಿಗೆ ಮತ್ತು ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರುಗಳ ಚುನಾವಣೆಯೂ ನಡೆಯುತ್ತಲಿದ್ದು, ಡೆಮೊಕ್ರೆಟಿಕ್ ಪಕ್ಷವೇ ಬಹ್ವಂಶ ಚುನಾಯಿಸಿ ಬಂದಿದೆ.



ಶ್ರೀ ಬಿ. ಗೋಪಾಲಕೃಷ್ಣ ರಾವ್, ಐ. ಸಿ. ಎಸ್. ಇವರನ್ನು ಸಂಯುಕ್ತ ಪ್ರಾಂತ್ಯಕ್ಕೂ

ಶ್ರೀ ಪಾಂಗಾಳ ರಮಾನಾಥ ನಾಯ್ಕ, ಐ. ಸಿ. ಎಸ್. ಇವರನ್ನು ಬೊಂಬಾಯಿ ಪ್ರಾಂತ್ಯಕ್ಕೂ

ಸಬ್ ಕಲೆಕ್ಟರರಾಗಿ ನೇಮಿಸಿರುವರು.

ಸ್ತ್ರೀಯರ ವೋಟುಗಳು.

ಈ ಬಾರಿಯ ಚುನಾವಣೆಗಳಲ್ಲಿ, ಮದರಾಸು ನಗರದ ೯೧೩೪ ಸ್ತ್ರೀಮತದಾರರಲ್ಲಿ ಸುಮಾರು ೭೦೫೦ ಮಹಿಳೆಯರೂ, ಮತವಿತ್ತು ಚುನಾವಣೆಯಲ್ಲಿ ಭಾಗವಹಿಸುವಷ್ಟು ಉತ್ಸಾಹವನ್ನು ತೋರಿರುವರು. ಎಸೆಂಬ್ಲಿ ಚುನಾವಣೆಗಳ ಇತಿಹಾಸದಲ್ಲಿ ಈ ಬಾರಿಯ ಮತದಾನದ ಸಂಖ್ಯೆಯು ಅತ್ಯಧಿಕವೆಂದು ದಾಖಲೆಯಾಗಿದೆ.

ಬಳ್ಳಾರಿಯಲ್ಲಿ ಕ್ಷಾಮ!

ಬಳ್ಳಾರಿ ಜಿಲ್ಲೆಯ ಕೆಲವು ಕಡೆಗಳಲ್ಲಿ ಕ್ಷಾಮವು ತಲೆದೋರಿರುವುದರಿಂದ, ಮುಂದಕ್ಕೆ ಉಂಟಾಗಬಹುದಾದ ಕಷ್ಟನಿವಾರಣೆಯನ್ನು ಮಾಡುವುದಕ್ಕಾಗಿ ರಿಲೀಫ್ ಕಮಿಟಿಯೊಂದನ್ನು ರಚಿಸಿ, ಸರಕಾರವೂ ಉದಾರಿಗಳೂ ಕ್ಷಾಮನಿವಾರಣೆ ಬಗ್ಗೆ ಆದಷ್ಟು ಸಹಾಯವನ್ನು ಕೋರಿರುವರು.

ಕರಾಚಿಗೆ ಉಪ್ಪಿನ ಆಮದು.

ನೂತನವಾಗಿ ಕ್ವಾರಿಗೆ ಬಂದ; ಉಪ್ಪಿನ ಮೇಲೆ ವಿಧಿಸಿದ ತೆರಿಗೆಯನ್ನು ತಪ್ಪಿಸಿಕೊಳ್ಳಲು, ಕರಾಚಿಯಲ್ಲಿ, ಇದೇ ಡಿಸೆಂಬರ ೩೧, ಗಳಿಗೆ ೧೫,೦೦೦ ಟನ್ ಉಪ್ಪು

ಪೋಲಿಸ್ ಆಫೀಸರರನ್ನು ಬಂಧಿಸಿದರು.

ರಂಗೂನ್ ನಗರದ ಡಾಲ್‌ಹೌಸಿ ರಸ್ತೆಯಲ್ಲಿ ನಾಲ್ವರು ಚೀನಿಯರು, ಲೈಸನ್ಸ್ ಇಲ್ಲದೆ ಮದ್ಯವನ್ನು ಮಾರಾಟ ಮಾಡುತ್ತಿರುವುದನ್ನು ಪತ್ತೆಮಾಡುವರೆಂದು ಕೇಳಿ ಇನ್ಸ್‌ಪೆಕ್ಟರ್ ಬ್ಲೇಕ ಎಂಬವರು ಪೋಲಿಸ್ ಸಹಾಯ ಪಡೆದು ಹೋದಾಗ, ಚೀನಿಯರು ಅವರನ್ನು ಒಂದು ಕೊಠಡಿಯಲ್ಲಿ ಬಂಧಿಸಿದರೆಂದೂ, ಸ್ಟೇಶನಿನಿಂದ ಹೆಚ್ಚಿನ ಪೋಲಿಸ್ ಸಹಾಯವು ಬಂದೊಡನೆ ಅವರ ಬಿಡುಗಡೆಯಾಯಿತೆಂದೂ ವಾರ್ತೆ ಬಂದಿದೆ.

ಅಥ್ಲೋನ್ ಶ್ರೀಮಂತರು ಹಿಂದೂದೇಶಕ್ಕೆ ಬರಲಿರುವರು.

ಅರ್ಲ್ ಆಫ್ ಅಥ್ಲೋನ್‌ರವರು ಸಪತ್ನೀಕರಾಗಿ ಬರುವ ಡಿಸಂಬರ ತಿಂಗಳಲ್ಲಿ ಹಿಂದೂದೇಶಕ್ಕೆ ಬರಲಿರುವರೆಂದು ಪ್ರಕಟವಾಗಿದೆ. ಇವರ ಆಗಮನಕ್ಕೆ ರಾಜಕೀಯ ಸಂಬಂಧವನ್ನೇನೂ ಕಲ್ಪಿಸಲಾಗಿಲ್ಲ. (ವಿಲ್ಲಿಂಗ್ಡನ್ ಪ್ರಭುಗಳ ನಂತರ ಇವರೇ ನಮ್ಮ ವೈಸರಾಯರಾಗಿ ನೇಮಿಸಲ್ಪಡಬಹುದೆಂಬ ವಾರ್ತೆ ಹರಡಿತ್ತು.)

ದಕ್ಷಿಣ ದೇಶದಲ್ಲಿ ನಿಗ್ರೋಗಳು

ದಕ್ಷಿಣ ದೇಶದಲ್ಲಿ ನಿಗ್ರೋಗಳಿಗೆ ವೋಟು ಕೊಡುವ ಹಕ್ಕು ಅತ್ಯಪೂರ್ವ. ಪ್ರಜಾಸತ್ತೆಗಳಲ್ಲಿಯೂ ಅವರಿಗೆ ವೋಟಿನ ಅಧಿಕಾರವಿರುವುದಿಲ್ಲ. ಅವರಿಗೆ ಬಾಧಕ ಕಟ್ಟುವಂತಹ ಸುಲಭವೂ ಕಠಿಣವೂ ಆದ ಶಾಸನಗಳನ್ನು ಮುಂದೆ ತರುತ್ತಾರೆ. ಯಾವನಾದರೂ ನಿಗ್ರೋ ವೋಟು ಕೊಡುವ ಸ್ಥಾನಕ್ಕೆ ಇಳಿದಿದ್ದರೆ ಅವನ ಗತಿಯೇ ವಿಷಮವಾಗುವುದು. ಪರಿಣಾಮವಾಗಿ, ಅಂತಹ ಸ್ಥಳಕ್ಕೆ ಅವನು ಹೋಗುವುದೇ ಇಲ್ಲ. ಅದಕ್ಕೆ ಸಮೀಪದ ಇತರ ಸಂಸ್ಥಾನಗಳಲ್ಲಿ ಈ ಸಂಬಂಧವಾದ ಶಾಸನಗಳು ಮತ್ತಷ್ಟು ತೀಕ್ಷ್ಣವಾಗಿವೆ. ಟೆಕ್ಸಾಸ್ ಗಳಲ್ಲಿ ಖಾಸಗಿ ಕ್ಲಬ್‌ಗಳಿಗೆ ನಿಗ್ರೋಗಳು ಬರಕೂಡದೆಂದು ಕಟ್ಟುಪಾಡಿದೆ. ಕೋರ್ಟು ಕಚೇರಿಗಳಲ್ಲಿಯೂ ಈ ಅಸ್ಪೃಶ್ಯತೆಯ ವಾಸನೆಯು ವಿಶಾಲವಾಗಿ ವ್ಯಾಪ್ತವಾಗಿದೆ. ಈ ಕಟ್ಟಳೆಯನ್ನು ಅಲ್ಲಿಯ ಯುನೈಟೆಡ್ ಸ್ಟೇಟ್ಸ್ ಸುಪ್ರೀಂ ಕೋರ್ಟು ಒಪ್ಪುವುದಿಲ್ಲ. ಪೂರ್ವದ ಆಚಾರ ವಿಚಾರಗಳನ್ನು ಪರಿಶೀಲಿಸುವಾಗ ನಿಗ್ರೋಗಳಿಗೆ ಶುಭಕರವಾಗುವ ಕಾನೂನುಗಳು ಹೊರಗಾಗಬಹುದೆಂದು ಊಹಿಸಲ್ಪಟ್ಟಿದೆ. ಆದರೆ ಚರಿತ್ರೆಯನ್ನವಲೋಕಿಸುವಾಗ ಈ ಊಹನೆಯು ಎಲ್ಲಿಯ ವರೆಗೆ ಕಾರ್ಯಕಾರಿಯಾಗುವುದೆಂದು ತಿಳಿಯಲಸದಳ.

ದಿ ನ್ಯೂ ರಿಪಬ್ಲಿಕ್—ಮಿ. ಎಚ್. ಎನ್. ಬ್ರೈಲ್ಸ್‌ಫೋರ್ಡ್.

ಮಂಗಳೂರು.

"ಮಂಗಳೂರು ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತಿ ಉತ್ಸವವು ೧೯೪೫ನೇ ಇಸವಿ ಡಿಸೆಂಬರ ತಾ. ೧೫ನೇ ಶನಿವಾರ ಸಾಯಂಕಾಲ ಘಂಟೆ ೫ಕ್ಕೆ ಜರಗುವುದು. ಹಳೇ ವಿದ್ಯಾರ್ಥಿಗಳೆಲ್ಲರೂ ಈ ಉತ್ಸವದಲ್ಲಿ ಸಹಭಾಗಿಗಳಾಗಿ ಎಲ್ಲಾ ವಿಧದಲ್ಲಿಯೂ ಸಹಕರಿಸಬೇಕಾಗಿ ವಿನಂತಿ" ಎಂದು ಸದರಿ ಶಾಲಾ ಹೆಡ್ ಮಾಸ್ತರರು ಬರೆಯುತ್ತಾರೆ.

ಇದೇ ತಾ. ೨೫ನೇ ಆದಿತ್ಯವಾರ ಇಲ್ಲಿಯ ಗವರ್ನಮೆಂಟ್ ಕಾಲೇಜಿನ ವಾರ್ಷಿಕೋತ್ಸವವು ಡಾ। ಜೇಮ್ಸ್ ಎಚ್. ಕಜಿನ್ಸ್ ಎಂ. ಎ. ಡಿ. ಲಿಟ್ ಇವರ ಅಧ್ಯಕ್ಷತೆಯಲ್ಲಿ ಜರಗುವುದು. ನಿವೃತ್ತ ಜಿಲ್ಲಾ ಮತ್ತು ಸೆಶ್ಶನ್ಸ್ ಜಡ್ಜರಾದ ಶ್ರೀ। ಎಂ. ನರಸಿಂಗರಾವ್ ಬಿ.ಎ., ಎಂ.ಎ., ರವರು ಸ್ವಸ್ತಿವಾಚನೆವನ್ನು ಮಾಡುವರು. ಎಲ್ಲಾ ಹಳೇ ವಿದ್ಯಾರ್ಥಿಗಳನ್ನು ಆಮಂತ್ರಿಸಲಾಗಿದೆ ಎಂದು ಉತ್ಸವ ಕಮಿಟಿಯ ಅಧ್ಯಕ್ಷರು ತಿಳಿಸುತ್ತಾರೆ.

ಇದೇ ಬರುವ ತಾ. ೧೮ನೇ ಆದಿತ್ಯವಾರ ಪ್ರಾತಃಕಾಲ ಘಂಟೆ ೮-೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯಸಮಾಜದ ಮಂದಿರದಲ್ಲಿ "ವರ್ಣಾಶ್ರಮ ಧರ್ಮ"ದ ಕುರಿತು ಕನ್ನಡದಲ್ಲಿ ಭಾಷಣಗಳಾಗುವುವು. ಸರ್ವರಿಗೂ ಸ್ವಾಗತವಿದೆ.

ಇದೇ ತಾ. ೧೨ನೇ ಸೋಮವಾರ ದಿನ ೫ ಘಂಟೆಗೆ ದಿ ಕೆನರಾ ಬೇಂಕಿಂಗ್ ಕೊರ್ಪರೇಶನ್ ಉಡುಪಿ, ಲಿಮಿಟೆಡ್ ಇದರ ಒಂದು ಶಾಖೆಯು ಬಂದರದಲ್ಲಿನ ಸೆಂಟ್ರಲ್ ಬಿಲ್ಡಿಂಗಿನ ಹೊಸ ಮಾಳಿಗೆಯಲ್ಲಿ ಇಂಪೀರಿಯಲ್ ಬೇಂಕಿನ ಏಜಂಟರಾಗಿರುವ ಮಿ। ಇ. ಎಲ್. ನೊರೊನ್ಹಾರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶ್ರೀ। ಬಿ. ವೈಕುಂಠ ಬಾಳಿಗರು ಮಾನ್ಯ ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟು, ಬೇಂಕಿನ ಬೆಳವಣಿಗೆಯ ಕುರಿತು ಮಾತನಾಡಿದರು. ಇಂಪೀರಿಯಲ್ ಬೇಂಕಿನ ಮಾಜಿ ಏಜಂಟರಾದ ರಾವ್‌ಬಹದ್ದೂರ್ ಯು. ಅನಂತರಾಯರು ತನ್ನ ಸಾರಭೂತವಾದ ಭಾಷಣದಲ್ಲಿ ಬೇಂಕಿನ ಪ್ರವರ್ಧನೆಯ ವಿಷಯಕವಾಗಿ ಸಲಹೆಗಳನ್ನಿತ್ತರು. ತದನಂತರ ಅಧ್ಯಕ್ಷರು ತನ್ನ ಅಮೂಲ್ಯ ಸೂಚನೆಗಳನ್ನು ಕೊಟ್ಟು, ಈ ಬೇಂಕಿನ ಬೆಳವಣಿಗೆಯನ್ನು ಹಾರೈಸಿ ಭಾಷಣವನ್ನು ಮುಗಿಸಿದರು. ನೆರೆದಿದ್ದ ಸುಮಾರು ೫೦೦ ಮಂದಿ ಸದಸ್ಯರಿಗೆ ಫಲಾಹಾರಾದಿಗಳಾದ ಮೇಲೆ ಸಭಾಂತ್ಯವಾಯಿತು."

ಮಂಗಳೂರು ಕೋ-ಒಪರೇಟಿವ್ ಟೌನ್‌ಬೇಂಕಿನ ೧೯೪೪-೪೫ನೇ ವರ್ಷದ ಮಹಾಸಭೆಯು ತಾರೀಕು ೨೫-೧೧-೪೫ನೇ ಆದಿತ್ಯವಾರ ಶ್ಯಾಮ ಗಂಟೆ ೪ಕ್ಕೆ ಬೇಂಕಿನ ಆಫೀಸಿನಲ್ಲಿ ಕೂಡುವುದು.

ಎಸೆಂಬ್ಲಿ ಚುನಾವಣೆ ಸಂಬಂಧವಾದ ವೋಟಿನ ದಿನವು (ತಾ. ೧೦-೧೧-೪೫) ಅತ್ಯಪೂರ್ವ ಉತ್ಸಾಹದಿಂದಲೂ ಯಾವುದೊಂದೂ ಗಲಭೆಯಿಲ್ಲದೆಯೂ ಕಳೆಯಿತು. ಕೊಂಗ್ರೆಸ್ ಉಮೇದ್ವಾರರಾದ ಮಿ। ಅರೂನರ ಕಡೆಯಿಂದ ಹಲವು ಕೊಂಗ್ರೆಸ್ ಕೆಲಸಗಾರರು ಕಾರ್ಯಭಾರವನ್ನು ವಹಿಸಿಕೊಂಡು, ಮುತುವರ್ಜಿಯಿಂದ ನಿರ್ವಹಿಸಿರುವಂತೆ ಕಂಡುಬಂದಿದೆ. ವೋಟುಗಳನ್ನು ಈ ದಿನ ಕಲ್ಲಿಕೋಟೆಯಲ್ಲಿ ಎಣಿಕೆ ಮಾಡಲಾಗುವುದು. ದಕ್ಷಿಣ ಕನ್ನಡ ಮಲಬಾರು ಮತ್ತು ನೀಲಗಿರಿ ಕೊನ್ಸ್‌ಟಿಟ್ಯುಯನ್ಸಿಯಲ್ಲಿ ಒಟ್ಟು ೩೩೯೧೪ ವೋಟುಗಳಿವೆ. ಹೆಚ್ಚಿನವು ಕೊಂಗ್ರೆಸ್ ಉಮೇದ್ವಾರರಾದ ಮಿ। ಅರೂನರವರಿಗೆ ಸಂದಿರಬಹುದೆಂಬ ಊಹೆಯಿದೆ. ಮಂಗಳೂರು ನಗರದಲ್ಲಿ ದಾಖಲಾದ ವೋಟುಗಳ ಅಂದಾಜು ಅಂಕೆಸಂಖ್ಯೆಗಳನ್ನು ಈ ಕೆಳಗೆ ಕೊಡಲಾಗಿದೆ:—

ವಾರ್ಡ್.	ಒಟ್ಟು ವೋಟು.	ದಾಖಲಾದುವು.
ಕೊಡಿಯಾಲಬೈಲ್	೨೦೨	೧೨೨
ಬೋಳೂರು	೯೯	೬೬
ಗೋರಿಕಟ್ಟೆ	೯೭	೬೬
ಸೆಂಟ್ರಲ್	೨೦೦	೧೨೪
ಮಾರ್ಕೆಟು	೧೪೦	೧೦೩
ಕೋರ್ಟು	೫೯೪	೧೦೮
ಕೆಂಟೋನ್ಮೆಂಟ್	೧೦೧	೫೯
ಪೋರ್ಟು	೬೦	೪೫
ಜಪ್ಪು	೬೬	೫೮

ಮಂಗಳೂರು ತಾಲೂಕಿನ ೧೪೪೦ ವೋಟುಗಳಲ್ಲಿ ಸುಮಾರು ೧೬೫೯ ವೋಟುಗಳು ದಾಖಲಾಗಿವೆ. ಹೆಚ್ಚಿನವು ಕೊಂಗ್ರೆಸ್ ಉಮೇದ್ವಾರರಿಗೆ ಸಂದಿರಬಹುದೆಂದು ಊಹೆಯಿದೆ.

ಇದೇ ತಾ. ೧೯ನೇ ದಿನ ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ "ಶಾಲಾ ಸಂಸ್ಥಾಪಕರ" ದಿನಾಚರಣೆಯು ಡಾ। ಪಿ. ರಾಮರಾಯರ ಬಿ.ಎ., ಎಂ.ಬಿ.ಬಿ.ಎಸ್. ರವರ ಅಧ್ಯಕ್ಷತೆಯಲ್ಲಿ ಜರಗುವುದು. ಆ ದಿನ ಸಂಜೆ ೬-೩೦ಕ್ಕೆ ಶಾಲಾಮಂದಿರದಲ್ಲಿ ಸಾರ್ವಜನಿಕ ಸಭೆಯೂ ಜರಗುವುದು.

ಮಂಗಳೂರಿನ ಶ್ರೀ। ಎಮ್. ಈಶ್ವರ ಶೆಟ್ಟಿ ಎಂಬ ತರುಣರಿಗೆ, "ಮ್ಯಾಗಜೈನ್" ಪತ್ರಿಕೆಯವರೇರ್ಪಡಿಸಿದ ಒಂದು ಆಂಗ್ಲ ಪ್ರಬಂಧದಲ್ಲಿ ರೂ. ೨೫ರ ಪ್ರಥಮ ಬಹುಮಾನವು ದೊರೆತಿದೆ ಎಂದು ಬಾತ್ಮಿದಾರರೊಬ್ಬರು ಬರೆಯುತ್ತಾರೆ.

"ಶ್ರೀ ವಿಠಲ ಭಜನಾಮಂಡಲಿ"ಯವರು ಇಲ್ಲಿಯ ಶ್ರೀ ವಿಠೋಬ ದೇವಾಲಯದಲ್ಲಿ ನಡೆಸುವ ಭಜನೀ ಸಪ್ತಾಹವು ಕಳೆದ ರವಿವಾರ ಪ್ರಾತಃಕಾಲ ಆರಂಭವಾಗಿದ್ದು, ಇದೇ ತಾ. ೧೮ನೇ ರವಿವಾರ ಬೆಳಗ್ಗೆ ಮಂಗಲಾಚರಣೆಯಾಗುವುದು.

ಇದೇ ತಾ. ೧೦ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:— ಮರಣ ೧೪; ಜನನ ೩೨; ಮರಣಗಳ ಪೈಕಿ ಸಿಡುಬು ೧, ವಿಷಮಜ್ವರ ೧, ನ್ಯುಮೋನಿಯಾ ೩, ಕ್ಷಯ ೨, ಇತರ ಶ್ವಾಸಕೋಶ ಸಂಬಂಧವಾದುದು ೧, ಮತ್ತು ಇತರ ಕಾರಣಗಳಿಂದ ೫, ಒಂದು ವರ್ಷದೊಳಗಿನ ಶಿಶುಗಳ ಮರಣ ೪, ಸಿಡುಬು ಮೂವರಿಗೆ ತಗಲಿದೆ.

"ಶ್ರೀ ಕೃಷ್ಣ ಸಿನೆಮದಲ್ಲಿ ಈ ದಿನದಿಂದ "ಈಸ್ಟ್ ಒಫ್ ಬೊರ್ನಿಯೊ" ಎಂಬ ಯೂನಿವರ್ಸಲ್ ಕಂಪೆನಿಯವರ ಸುಪ್ರಸಿದ್ಧ ಚಿತ್ರಪ್ರದರ್ಶನವು ಆರಂಭಿಸಲ್ಪಡುವುದು. "ಟ್ರೇಡರ್ ಹೊರ್ನ್" ನಂತಹ ಉತ್ಕೃಷ್ಟ ಚಿತ್ರಗಳ ಶ್ರೇಣಿಯಲ್ಲಿ ಮೆರೆವ ಚಿತ್ರ ಇದು. ಇದರ ನಂತರ "ಎಂಸ್ಕೈಲ್ ಮಿಸ್ಟರಿ" ಚಿತ್ರವನ್ನು ತೋರಿಸಲಾಗುವುದು" ಎಂದು ಆಡಳಿತಗಾರರು ತಿಳಿಸುತ್ತಾರೆ.

ಮಹಾ ಯುದ್ಧವು ಕೊನೆಗೊಂಡು ಶಾಂತಿಸ್ಥಾಪನೆಯಾದ "ಆರ್ಮಿಸ್ಟೀಸ್" ದಿನಾಚರಣೆಯು ವರ್ಷಂಪ್ರತಿಯಂತೆ ಇದೇ ಕಳೆದ ತಾ. ೧೧ನೇ ಆದಿತ್ಯವಾರ ದಿನ, ಪೂರ್ವಾಹ್ನ ಘಂಟೆ ೧೧ಕ್ಕೆ ಆಚರಿಸಲ್ಪಟ್ಟಿತು. ಸಾರ್ವಜನಿಕ ಮೈದಾನಿನಲ್ಲಿ ಸರಕಾರೀ ಉಚ್ಚಾಧಿಕಾರಿಗಳೂ ಇನ್ನನೇಕರೂ ನೆರೆದು, ಯೂನಿಯನ್ ಧ್ವಜವಂದನೆ, ಪ್ರಾರ್ಥನೆ, ಎರಡು ನಿಮಿಷಗಳ ಮೌನ, ತೋಪುಹಾರಿಸುವುದು ಇವೆಲ್ಲ ಯಥಾಕ್ರಮವಾಗಿ ಜರಗಿದುವು.

"ಪಂಜಾಬ ಕೇಸರಿ ಲಾಲಾ ಲಜಪತ್ ರೈಯವರ ದಿವಂಗತರಾಗಿ ನಾಳೆಗೆ ೧೭ ವರ್ಷಗಳು ಪೂರ್ಣವಾಗುವುವು. ಅವರ ಪವಿತ್ರ ಪುಣ್ಯತಿಥಿಯು ನಾಳೆ ದೇಶದ ಸಮಸ್ತ ನಗರಗಳಲ್ಲಿಯೂ ಆಚರಿಸಲ್ಪಡುವುದು. ಶಿಕ್ಷಣ ಪ್ರಸಾರಕ್ಕಾಗಿಯೂ, ಪತಿತೋದ್ಧಾರಕ್ಕಾಗಿಯೂ ಮಾತೃಭೂಮಿಯ ಬಂಧವಿಮೋಚನೆಗಾಗಿಯೂ ಆಜೀವ ನಿಸ್ವಾರ್ಥದಿಂದ ದುಡಿದು ಮಡಿದ ಆ ವೀರನ ಸ್ಮರಣೆಯನ್ನು ಮಾಡುವಾಗ ಆ ಆದರ್ಶನವನ್ನು ನಮ್ಮ ಮುಂದಿಟ್ಟುಕೊಂಡು ಕ್ರಿಯಾಪೂರ್ವಕವಾಗಿ ಸಾಧಿಸುವುದೇ ಅವರ ಸ್ಮಾರಕವನ್ನು ನಾವು ಗೌರವಿಸಿದಂತಾಗುವುದು" ಎಂದು ಬಾತ್ಮಿದಾರರೊಬ್ಬರು ಬರೆಯುವರು.

"ನಮ್ಮ ಸಮಾಜದ ಗಣನೀಯ ಮುಖಂಡರೂ ಅನೇಕ ವರ್ಷಗಳಿಂದ ಮುನಿಸಿಪಲ್ ಕೌನ್ಸಿಲರೂ ಆಗಿರುವ ರಾವ್‌ಬಹದ್ದೂರ್ ಶ್ರೀ। ಎಸ್. ಎನ್. ಸುವರ್ಣ ಬಿ.ಎ., ಬಿ.ಎಲ್., ಇವರು ಈ ಬಾರಿ ನಮ್ಮ ನಗರಸಭೆಯ ಉಪಾಧ್ಯಕ್ಷರಾಗಿ ಬಹುಮತದಿಂದ ಆರಿಸಲ್ಪಟ್ಟಿರುವರು. ಈ ಸ್ಥಾನದ ಗೌರವವು ಇವರಿಗೆ ಸಂದಿರುವುದಕ್ಕಾಗಿ ನಾವು ಇವರನ್ನು ಅಭಿವಂದಿಸುತ್ತೇವೆ" ಎಂದು ಬಿಲ್ಲವ ಸಮಾಜದ ಪರವಾಗಿ ಶ್ರೀ। ಎ. ಮಂಜುನಾಥ ಶಾಲಿವಾಹನರು ಬರೆಯುತ್ತಾರೆ.

ಶ್ರೀಮತಿ ಕಮಲಾದೇವಿಯವರು, ಮುಂಬಾಯಿ ಕೊಂಗ್ರೆಸ್ಸಿಗೆ ತೆರಳಿದವರು, ಮಂಗಳೂರಿಗೆ ಇದೇ ಕಳೆದ ಸೋಮವಾರ ಹಿಂದಿರುಗಿ ಬಂದಿರುವರು.

ಋಷಿ ದಯಾನಂದ ಸರಸ್ವತಿಯವರ ಬಲಿದಾನೋತ್ಸವವು ಸನ್ಯಾಸಿಗುಡ್ಡೆಯಲ್ಲಿರುವ ಆರ್ಯಸಮಾಜ ಮಂದಿರದಲ್ಲಿಯೂ ಬಹು ಯೋಗ್ಯವಾಗಿ, ಇದೇ ಕಳೆದ ತಾ. ೬ನೇ ಸಾಯಂಕಾಲ ಆಚರಿಸಲ್ಪಟ್ಟಿತು. ರಾ। ಇ. ಸುಬ್ಬಕೃಷ್ಣಯ್ಯಾನವರು ಅಗ್ರಾಸನವನ್ನು ವಹಿಸಿದ್ದರು.

ಮಂಗಳೂರು ಮುನಿಸಿಪಲ್ ಚೇರ್ಮನರ ಚುನಾವಣೆಯು ಇದೇ ಕಳೆದ ಸೋಮವಾರ ಪೂರ್ವಾಹ್ನ

ತಾಲೂಕುಗಳಿಂದ.

ಮೂಲ್ಕಿ— ಮುಂಬಾಯಿಯಲ್ಲಾದ ರಾಷ್ಟ್ರ ಸಭಾಧಿವೇಶನದಲ್ಲೂ, ಅಖಿಲ ಭಾರತ ಕೊಂಗ್ರೆಸ್ ಕಮಿಟಿಯಲ್ಲೂ, ಕಾರ್ಯಕಾರಿ ಮಂಡಳಿಯಲ್ಲೂ ಉಜ್ವಲ ಕಾರ್ಯಕಲಾಪಗಳನ್ನೆಸಗಿದ ಬೆಂಗಳೂರಿನ ಶ್ರೀ। ಕೆ. ಉಪೇಂದ್ರ ಪೈಯವರು ಮೊನ್ನೆ ಮೂಲ್ಕಿಗೆ ಬಂದಿದ್ದು ಕೊಂಗ್ರೆಸ್ ಉಮೇದ್ವಾರರ ಪರವಾಗಿ ಬಹಳ ಶ್ರಮಪಟ್ಟು ಕೆಲಸ ಮಾಡಿದರು. ಇವರು ಮೈಸೂರು ಪ್ರಾಂತ್ಯದ ಕೊಂಗ್ರೆಸ್ ಚಟುವಟಿಕೆಗಳನ್ನು ಮುನ್ನಡೆಸುವುದಕ್ಕಾಗಿ ಬೇಗನೇ ಬೆಂಗಳೂರಿಗೆ ಹಿಂತಿರುಗಲಿರುವರೆಂದು ಮೂಲ್ಕಿಯ ಬಾತ್ಮಿದಾರರಿಂದ ತಿಳಿದುಬಂದಿದೆ.

ಕಾರ್ಕಳ— ತಾ. ೨೧-೧೦-೪೫ರ ದಿನ ಸಾಯಂಕಾಲ ಅನಂತಶಯನ ಮಂದಿರದಲ್ಲಿ ಶ್ರೀ। ದುಗ್ಗಣ್ಣ ವೆಂಕಟೇಶ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಸ್ಥಾಪನೆಯಾದ ಸಂಗೀತ ಸಭೆಗೆ ಚಾಲತಿ ವರ್ಷಕ್ಕಾಗಿ ಶ್ರೀ। ಬಿ. ಕೆ. ರಾಘವೇಂದ್ರರಾಯರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. (ಕಳೆದ ಸಂಚಿಕೆಯಲ್ಲಿ ಇವರ ಹೆಸರು ತಪ್ಪಿಬಿದ್ದಿತ್ತು.)

ಪಡುಪೆರಾರು— ಇಲ್ಲಿಯ ಕತ್ತಲಸಾರು ವಿಷ್ಣುಮೂರ್ತಿ ದೇವಸ್ಥಾನದ ಪರವಾಗಿ ಡಿಸೆಂಬರ ೩೦ನೇ ದಿನ ೧೦೦೦ ರೂಪಾಯಿಗಳ ಒಂದು ಅಧಿಕೃತ ಸೋಡ್ತಿಯು ಎತ್ತಲ್ಪಡುವುದು. ಇದರಲ್ಲಿ ೧೦೦ರಿಂದ ೪ ರೂಪಾಯಿಗಳ ವರೆಗಿನ ೫೦ ಬಹುಮಾನಗಳಿರುವುವು. ಟಿಕೇಟಿನ ದರ ಒಂದೇ ೪ ಆಣೆ. ಸರ್ವರೂ ಪ್ರೋತ್ಸಾಹಿಸಬೇಕಾಗಿ ವ್ಯವಸ್ಥಾಪಕರು ತಿಳಿಸುತ್ತಾರೆ.

ಬಾಳೆಪುಣಿ— ಎಂದಿನಂತೆ ಈ ವರುಷವೂ ತಾ: ೫-೧೧-೪೫ರಲ್ಲಿ ಸ್ಥಳೀಯ ಮಸಜೀದಿಯಲ್ಲಿ ಶೇಖ್ ಅಬ್ದುಲ್ ಖಾದರ್ ಜೀಲಾನೀ ಔಲಿಯವರ ಸ್ಮಾರಕ ಸಮಾರಂಭವು ಮುಸ್ಲಿಮ್ ಮಹಾ ಸಭಿಕರ ಸಮ್ಮುಖದಲ್ಲಿ ಎಂದಿಗಿಂತಲೂ ಬಹು ವಿಜೃಂಭಣೆಯಿಂದ ಜರಗಿತು.

ವಿಟ್ಲ—ಇಲ್ಲಿಯ ಮಲಯ ಜಾತಿಯ ಓರ್ವ ಬೇಸಾಯಗಾರನು ತೀರಿ ಹೋಗಲು ಆತನ ವೃದ್ಧೆಯಾದ ತಾಯಿಯು ಪುತ್ರಶೋಕವನ್ನು ತಾಳಲಾರದೆ, ಆಗಲೇ ಬಾವಿಗೆ ದುಮುಕಿ, ಆತ್ಮಹತ್ಯೆ ಮಾಡಿಕೊಂಡಳು.

ಕಸ್ಬಾನ— ತಾ. ೧೦-೧೧-೪೫ರಲ್ಲಿ ಕಸ್ಬಾನ ಕೇಂದ್ರದ ಉಪಾಧ್ಯಾಯರ ಮಾಸಿಕ ಸಭೆಯು ಮ. ರಾ. ರಾ. ವೆಂಕಟರಮಣರವರ ಅಧ್ಯಕ್ಷತೆಯಲ್ಲಿ ಜರಗಿತು.

೯-೩೦ಕ್ಕೆ ಡಿವಿಜನಲ್ ಆಫೀಸರರಾದ ಶ್ರೀ। ಇನ್ನಯ್ಯ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಚುನಾಯಿತ ಸದಸ್ಯರೆಲ್ಲ ಪ್ರಮಾಣವಾಕ್ಯ (Oath of allegiance) ಗಳಾದ ನಂತರ, ಚೆಯರ್ಮ್ಯಾನರ ಸ್ಥಾನಕ್ಕೆ ಚುನಾವಣೆ ನಡೆಯಿತು. ಉಮೇದ್ವಾರರಿಬ್ಬರು—ಮಿ। ಎಮ್. ಎಸ್. ಶ್ರೇಷ್ಠರು ಮತ್ತು ಡಾ। ವಿಟ್ಠಲಶೆಟ್ಟರವರು. ಮಿ। ಶ್ರೇಷ್ಠರ ಉಮೇದ್ವಾರಿಕೆಯನ್ನು ರಾವ್‌ಬಹದ್ದೂರ್ ಎಸ್. ಎನ್. ಸುವರ್ಣರು ಸಮರ್ಥಿಸಿ, ಶ್ರೀ। ಬಿ. ವೆಂಕಟರಾಯ ಬಾಳಿಗರವರು ಅನುಮೋದಿಸಿದರು. ಡಾ। ಶೆಟ್ಟರ ಉಮೇದ್ವಾರಿಕೆಯನ್ನು ಶ್ರೀ। ಕೆ. ಆರ್. ಕಾರಂತರವರು ಸಮರ್ಥಿಸಿ, ಶ್ರೀ। ಎಮ್. ಮಾಧವರಾಯರು ಅನುಮೋದಿಸಿದರು. ವೋಟು ತೆಗೆಯಲಾದಲ್ಲಿ—ಡಾ। ವಿಠ್ಠಲಶೆಟ್ಟರೇ ೧೬ ವೋಟು ದೊರೆತು ಚುನಾಯಿಸಲ್ಪಟ್ಟರು. (ಮಿ। ಶ್ರೇಷ್ಠರಿಗೆ ದೊರೆತ ವೋಟುಗಳು ೧೨).

ಉಪಾಧ್ಯಕ್ಷರ ಚುನಾವಣೆಯು ಅಂದೇ ಸಾಯಂಕಾಲ ನಡೆಯಿತು. ರಾವ್‌ಬಹದ್ದೂರ್ ಎಸ್. ಎನ್. ಸುವರ್ಣರವರೂ, ಮಿ। ಎಲ್. ಸಿ. ಪಾಯ್ಸರವರೂ ಉಮೇದ್ವಾರರು, ಶ್ರೀ। ಸುವರ್ಣರಿಗೆ ೧೯ ವೋಟುಗಳೂ, ಪಾಯ್ಸರವರಿಗೆ ೧೦ ವೋಟುಗಳೂ ದೊರೆತು, ಶ್ರೀ। ಸುವರ್ಣರವರೇ ಚುನಾಯಿತರಾಗಿ ಬಂದಿರುವರು.

ಎಸೆಂಬ್ಲಿ ಚುನಾವಣೆಯ ಫಲಿತಾಂಶ.

	ಪೋಲಾದದ್ದು	ಅರೂನರಿಗೆ
ಮಂಗಳೂರು	೧೬೫೮,	೧೫೨೪
ಕಾಸರಗೋಡು	೫೧೬	೪೮೪
ಉಡುಪಿ	೪೭೯	೪೦೪
ಕಾರ್ಕಳ	೬೬೮	೩೦೦
ಕುಂದಾಪುರ	೬೦೭	೬೭೫

ಪುತ್ತೂರು ತಾಲೂಕಿನಲ್ಲೂ ಹೆಚ್ಚಿನಾಂಶವು ಅರೂನರಿಗೆ ದೊರೆತಿದೆ.

ಹಿರಿಯಡ್ಕ— ತಾ. ೬-೧೧-೧೯೪೫ರಲ್ಲಿ ಅಪರಾಹ್ನ ಘಂಟೆ ೩ಕ್ಕೆ ಮಂಗಳೂರು ಸಿಟಿ ಆರ್ಯಸಮಾಜದ ಹಿರಿಯಡ್ಕ ಶಾಖೆಯವರು ಇಲ್ಲಿಯ ಬೋರ್ಡು ಎ। ಶಾಲೆಯಲ್ಲಿ ಶ್ರೀ। ಮಂಜಯ್ಯ ಕಮ್ಮಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಋಷಿ ದಯಾನಂದರ ಆತ್ಮ ಬಲಿದಾನೋತ್ಸವವನ್ನು ಆಚರಿಸಿದರು. ಊರ ಮತ್ತು ಪರಊರ ಮಹನೀಯರು ಕುಂಟಾ ನೆರೆದಿದ್ದರು. ಮಾನ್ಯ ಅಧ್ಯಕ್ಷರ ಸ್ವಾಗತವಾದನಂತರ, ಪ್ರಾರ್ಥನೆಯಾಗಿ, ಮಾನ್ಯ ಮಲ್ಪೆಯ ಶಂಕರನಾರಾಯಣ ಸಾಮಗರು, ಪಿ. ಕೆ. ಅನಂತಯ್ಯ ಹೆಡ್‌ಮಾಸ್ತರ್, ಯು. ಗೋಪಾಲದಾಸ್ ಇವರು ಋಷಿ ದಯಾನಂದರ ಜೀವನ ಚರಿತ್ರೆಯನ್ನೂ ಮತ್ತು ಆರ್ಯಸಮಾಜದಿಂದ ದೇಶಕ್ಕೆ ಉಂಟಾಗುವ ಪ್ರಯೋಜನವನ್ನು ಕುರಿತು ಸ್ವಾರಸ್ಯವಾದ ಭಾಷಣವಿತ್ತರು. ಮಾನ್ಯ ಸಭಾಧ್ಯಕ್ಷರು ಸ್ಥಳೀಯ ಸಮಾಜದ ಉನ್ನತಿಗಾಗಿ ಸರ್ವರ ತನುಮನಧನಗಳಿಂದ ಸಹಾಯಮಾಡಬೇಕಾಗಿ ವಿನಂತಿಸಿ ಭಾಷಣಮಾಡಿದ ಮೇಲೆ, ಯಕ್ಷಗಾನ ಕಾಲಕ್ಷೇಪವಾಗಿ, ಧನ್ಯವಾದ ಸಮರ್ಪಣೆಯ ನಂತರ ಅಂದಿನ ಸಮಾರಂಭವು ಕೊನೆಗೊಂಡಿತು.

ಜೊಯಿಂಟ್ ಕಮಿಟಿ ವರದಿ.

ಹಿಂದೂದೇಶದ ಭಾವೀ ಸುಧಾರಣೆಗಳ ಮೇಲಿನ ಜೊಯಿಂಟ್ ಸಿಲೆಕ್ಟ್ ಕಮಿಟಿಯ ವಿಮರ್ಶಾತ್ಮಕ ವರದಿಯು ಪುಸ್ತಕ ರೂಪದಲ್ಲಿ ಅಚ್ಚಾಗಿದ್ದು, ಅದರ ೩೦ ಸಾವಿರ ಪ್ರತಿಗಳು ಹಿಂದೂದೇಶಕ್ಕೆ ಬಂದು ತಲಪಿವೆ. ಇದೇ ತಾ. ೨೨ರಲ್ಲಿ ವರದಿಯು ಪ್ರಕಟವಾಗುವುದು.

ಕೆಥೋಲಿಕರ ಮಹಾ ಪರಿಷತ್ತು.

ಕೆಥೋಲಿಕರ ಕೊಂಗ್ರೆಸ್ ಅಧಿವೇಶನವು ಮೆಲ್ಬೋರ್ನ್ (ಆಸ್ಟ್ರೇಲಿಯ)ದಲ್ಲಿ ಇದೇ ಬರುವ ಡಿಸೆಂಬರ ತಾ. ೨ರಲ್ಲಿ ಜರಗುವುದು. ಪೋಪ್ ಮಹಾ ಸ್ವಾಮಿಯವರು ಪ್ರತಿನಿಧಿಗಳನ್ನು ಕಳುಹಿಸಿಕೊಟ್ಟಿರುವರು.

ಗ್ರಾಮ ಕೈಗಾರಿಕೆಯ ಸಂಘ.
ಮಹಾತ್ಮರ ಪ್ರಕಟಣೆ.

ಮಹಾತ್ಮಾಜಿಯವರು ಹೀಗೆ ಪ್ರಕಟಿಸಿದ್ದಾರೆ:—

ರಚನೆಯಲ್ಲಿರುವ ಅಖಿಲಭಾರತ ಗ್ರಾಮಕೈಗಾರಿಕೆಯ ಸಂಘಕ್ಕಾಗಿ ದಿಲ್ಲಿಯ ಮಿಲ್ಲಿಯಾಧಿಪತಿಯೊಬ್ಬರು ೨೦ ಲಕ್ಷ ರೂಪಾಯಿಗಳನ್ನು ನನ್ನ ಸ್ವಾಧೀನ ಕೊಡುವರೆಂದು ವ. ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ನಾನು ಕಂಡಿರುವೆನು. ಆ ಸಂತಹದ ಸುಳ್ಳು ಪ್ರಕಟಣೆಯು ನಿಶ್ಚಯ ಈ ಸಂಘಕ್ಕಾಗಿ ಅಪ್ಪದಾನವನ್ನು ಕೇಂದ್ರವನ್ನಾಗಿ ಅರಿಸಿರುವೆನೆಂಬುದಾಗಿ ತಿಳಿಸುತ್ತದೆ. ಈ ವಿಷಯ ಶುದ್ಧಿಗಳೂ ನಿರಾಧಾರವಾದುದು. ನನ್ನ ಎಲ್ಲಾ ಆಚರಣೆಗಳ ಕುರಿತಾದ ವಾರ್ತೆಗಳಿಗೆ ನನ್ನ ಸಹಿ ಇಲ್ಲದಿದ್ದರೆ ಅಂತಹ ವಾರ್ತೆಗಳು ವಿಶ್ವಸನೀಯವೆಂದು ನಂಬಲಾಗದು. ನನಗೆ ೨೦ಗಳಿಗೆ ೨೫೦೦ ರೂಪಾಯಿ ಕೊಡುವೆನೆಂದು ಒಬ್ಬರು ವಾಗ್ದಾನವಿತ್ತುದು ಖರೆ. ಅಲ್ಲದೆ ರೂಪಾಯಿ ೫೦೦ ಮುಂಗಡವಾಗಿ ದೊರೆತಿದೆ.

ನಮ್ಮ ಸಂಘಕ್ಕೆ ಆರ್ಥಿಕ ಸಹಾಯವು ಅತ್ಯಗತ್ಯವಾದರೂ, ಅದಕ್ಕಿಂತ ಹೆಚ್ಚು ಕೆಲಸಗಾರರ ಅಗತ್ಯವೂ ಇದೆ. ಜನರ ಸಹಾಯವು ದೊರೆತರೆ ಧನ ಸಹಾಯವು ಸಿಗುವುದು. ಆದುದರಿಂದ ಈ ಸಂಘದಲ್ಲಿ ಕೆಲಸ ಮಾಡಬಿಚ್ಛಿಸುವವರು ತಮ್ಮ ಹೆಸರುಗಳನ್ನು ಕಳುಹಿಸಿ ಕೊಡಬೇಕೆಂದು ಆಶೆ ಮಾಡುವೆನು.

(೨ನೇ ಪುಟದಿಂದ ಮುಂದುವರಿಸಿದುದು)

ಗ್ರೇಡು ತಪ್ಪಿಲ ಬಗ್ಗೆ ಮದ್ರಾಸಿಗೆ ಹೋಗಿವೆ. ಸರ್ವಿಸ್ ಸರ್ಟಿಫಿಕೇಟುಗಳು ತಪ್ಪೀಲಿ ಆಗಿ ಬರುವವರೊಳಗೆ ಅಂಥವರನ್ನು ಲವರ್ ಗ್ರೇಡು ಎಂದು ಎಣಿಸಿ ಖಾಯಂ ಸಂಬಳವನ್ನು ಕತ್ತರಿಸಿ ಡಿವಿಷನ್ನಾಗಿ ಮಾರ್ಪಡಿಸಿದರಿಂದ ಪ್ರಯತ್ನಪಟ್ಟು ಹಾಯರ್ ಗ್ರೇಡು ಆದರೂ ಸಂಬಳದ ಮಟ್ಟಿಗೆ ಥಟ್ಟನೆ ಮೇಲಿಂದ ಕೆಳಗೆ ಬಿದ್ದಂತಾಯಿತು. ರೂಪಾಯಿ ೨೦ಕ್ಕೆ ಮಿಕ್ಕಿ ಖಾಯಂ ಸಂಬಳವಿದ್ದು ಹಾಯರ್ ಗ್ರೇಡಾಗಿ ತಪ್ಪೀಲು ಹೊಂದಿದ ಯಾ ಈಗ ತಾನೆ ಹೊಂದಲಿಕ್ಕಿರುವ ಉಪಾಧ್ಯಾಯರು ಕೆಲವು ವರ್ಷಗಳ ಹಿಂದಿನಿಂದಲೇ ಈಗಿನ ಸ್ಕೇಲಿನ ಪ್ರಕಾರ ಹಾಯರ್ ಗ್ರೇಡಿನಲ್ಲಿರುವುದರಿಂದ ಅಂಥವರ ಸಂಬಳವನ್ನು ಹಾಗೆಯೇ ಖಾಯಂ ಆಗಿ ಇಟ್ಟು, ಡಿ। ಬೋರ್ಡಿನ ಈಗಿನ ರೂಲಿನ ಪ್ರಕಾರ ಪ್ಯಾರಿಟಿಗೆ ತಂದು ನಿಲ್ಲಿಸಿ ಅಲ್ಲಿಂದಲೇ ಮುಂದೆ ಇನ್ಕ್ರಿಮೆಂಟು ಕೊಡುವಂತೆ ಸಂಬಂಧಪಟ್ಟ ಉಪಾಧ್ಯಾಯರು ಡಿ। ಬೋರ್ಡಿಗೆ ಅರಿಕೆಯಿಂದ ಮನವಿ ಮಾಡಿಕೊಳ್ಳುವರು.

ಎ. ಬಾಬು ಶೆಟ್ಟಿ,
ಕಾರ್ಯದರ್ಶಿ.

[illegible] (ಸಂ. ಸ್ವ.)

ದಕ್ಷಿಣ ಕನ್ನಡ ಜಿಲ್ಲಾ ಹಿಂದೀ ಪ್ರಚಾರ ಸಂಘ, ಮಂಗಳೂರು.

ಅಯ್ಯಾ,

ಈ ಸಂಘದ ಕಾರ್ಯದರ್ಶಿಗಳಾದ ಶ್ರೀಯುತ ಪಿ. ಎನ್. ಬಿಜೂರರವರು ಕಳೆದ ಮೇ ತಿಂಗಳಲ್ಲಿ ಕಾರ್ಕಳಕ್ಕೆ ಬಂದು ತಮ್ಮ ಸಂಘದ ಒಂದು ಶಾಖೆಯನ್ನು ಸ್ಥಾಪಿಸಿ ಹಿಂದೀ ಪ್ರಚಾರಕ್ಕಾಗಿ ಮೊದಲಿದ್ದಕ್ಕಿಂತಲೂ ಉತ್ತಮ ವ್ಯವಸ್ಥೆ (?) ಮಾಡಿಯೂ, ಸ್ಥಳೀಯ ವಕೀಲರು, ಉಪಾಧ್ಯಾಯರು ಮೊದಲಾದ ಕೆಲವು ಸದ್ಗೃಹಸ್ಥರುಗಳನ್ನೂ ಸದಸ್ಯರನ್ನಾಗಿ ಮಾಡಿಯೂ ವರ್ಗಣಿಯನ್ನು ವಸೂಲಿಮಾಡಿ ಹೋದರು. ಆ ಮೇಲೆ ಸದರಿ ಸಂಘದ ಕಡೆಯಿಂದ ಎಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದರೂ, ಎಲ್ಲಾ ಖರ್ಚನ್ನು ತಾವೇ ಸಹಿಸಿ ಶ್ರೀಯುತ ಕೇಶವ ರಾಮಚಂದ್ರ ಶೆಣೈಯವರು ಒಂದು ಹಿಂದೀ ರಾತ್ರಿ ಶಾಲೆಯನ್ನು ನಡೆಸಿದರು. ಆದರೆ ಅದು ಪ್ರೋತ್ಸಾಹದ ಅಭಾವದಿಂದ ಜೀವನ್ಮೃತಾವಸ್ಥೆಯಲ್ಲಿ ಬಿದ್ದಿದ್ದು ಈಗ ಇಲ್ಲಿ ಸಂಘದ ಕಡೆಯಿಂದ ಯಾವ ಕೆಲಸವೂ ನಡೆಯುತ್ತಿಲ್ಲ. ಸ್ತ್ರೀಯರಿಗಾಗಿ ಶ್ರೀಮತಿ ಲೀಲಾದೇವಿ ಭವಾನಿಶಂಕರರವರು ಒಂದು ಹಿಂದೀ ವರ್ಗವನ್ನು ಉತ್ತಮರೀತಿಯಿಂದ ನಡೆಸುತ್ತಿರುವರಾದರೂ ಅದನ್ನು ಅವರು ಸಂಘದ ಕಡೆಯಿಂದ ನಡೆಸದೆ ಮೊದಲಿನಂತೆ ಸ್ವತಂತ್ರವಾಗಿಯೇ ನಡೆಸುತ್ತಿದ್ದಾರೆ. ಸಂಘದ ಶಾಖೆಯು ಇಲ್ಲಿ ಸ್ಥಾಪನೆಯಾದ ಮೊದಲುಗೊಂಡು ಪ್ರಕಟಿತ ಅಪ್ರಕಟಿತ ಹಲವು ಕಾರಣಗಳಿಂದ ಹಿಂದೀ ಪ್ರಚಾರ ಮಾಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವೆನಾದರೂ, ಕಳೆದ ಮೂರು ವರುಷಗಳಿಂದ ಕಾರ್ಕಳ ಬೈಲೂರುಗಳಲ್ಲಿ ಹಿಂದೀ ಪ್ರಚಾರಕರನ್ನು ನನ್ನ ಮಿತ್ರರುಗಳ ಸಹಾಯದಿಂದ ನಾನೇ ಮಾಡುತ್ತ ಬಂದಕಾರಣದಿಂದ ಹಿಂದೀ ಪ್ರಚಾರ ಚಳವಳಿಯೊಡನೆ ಹಾರ್ದಿಕ ಸಹಾನುಭೂತಿಯನ್ನು ತೋರಿಸುತ್ತಿರುವ ಕೆಲವು ಸಜ್ಜನರು ಸಂಘದ ಕಡೆಯಿಂದ ಇಲ್ಲಿ ನಡೆಯುವ ಪ್ರಚಾರಕಾರ್ಯವನ್ನು ಕುರಿತು ನನ್ನೊಡನೆ ಕೇಳುತ್ತಿರುತ್ತಾರೆ. ಇವರ ಸಂದೇಹ ನಿವೃತ್ತಿಯನ್ನು ಸಂಘದ ಕಾರ್ಯದರ್ಶಿಗಳಾದ ಶ್ರೀಯುತ ಬಿಜೂರರವರೇ ಅಧಿಕಾರವಾಣಿಯಿಂದ ಮಾಡಲಿಕ್ಕೆ ಸಮರ್ಥರಾಗಿದ್ದಾರೆ. ಪ್ರಶ್ನೆಯು ಸಾರ್ವಜನಿಕವಾದ್ದರಿಂದ ಪತ್ರಿಕೆಗಳಿಗೆ ಬರೆಯಬೇಕಾಯಿತು. ಶ್ರೀಯುತ ಬಿಜೂರರವರು ಅನ್ಯಥಾ ಭಾವಿಸಿಕೊಳ್ಳದೆ ಕಾರ್ಕಳದಲ್ಲಿ ಅವರು ವಸೂಲುಮಾಡಿದ ಹಣದ ವಿವರವಾದ ತಪಸೀಲು ಅದರ ವಿನಿಯೋಗಕ್ರಮ ಕಾರ್ಕಳದಲ್ಲಿ ಸಂಘದ ಕಡೆಯಿಂದ ಈವರೆಗಾದ ಕಾರ್ಯಗಳು, ಇನ್ನು ಮುಂದಿನ ಕಾರ್ಯಕ್ರಮ, ಡಿಸೆಂಬರ [illegible]ರಿಂದ [illegible]ರ ವರೆಗೆ ಹಿಂದೀ ಪ್ರಚಾರ ಸಪ್ತಾಹವನ್ನು ಆಚರಿಸುವುದರಲ್ಲಿ ಸಂಘವು ಕಾರ್ಕಳಕ್ಕೆ ಮಾಡುವ ಸಹಕಾರ–ಸಹಾಯ, ಮೊದಲಾದ ಪ್ರಶ್ನೆಗಳಿಗೆ ಯೋಗ್ಯವಾದ ಉತ್ತರಗಳನ್ನು ಪತ್ರಿಕೆಗಳಲ್ಲಿಯೇ ಪ್ರಕಟಿಸಿ ಅನಾವಶ್ಯಕವಾಗಿ ಹರಡಬಹುದಾದ ಮಿಥ್ಯಾಪವಾದಗಳನ್ನು ದೂರ ಮಾಡುವದರೊಂದಿಗೆ ಅವರು ತಮ್ಮ ಶಕ್ತಿಸಾಮರ್ಥ್ಯಗಳನ್ನೆಲ್ಲ ಉಪಯೋಗಿಸಿ ಕಾರ್ಕಳದಲ್ಲಿ ಹಿಂದೀ ಪ್ರಚಾರವು (ಈಗ ಏನೂ ಇಲ್ಲವಾಗಿದ್ದರೂ) ಮೊದಲಿಗಿಂತಲೂ ನೂರು ಪಾಲು ಹೆಚ್ಚಿನ ಉತ್ಸಾಹದಿಂದ ನಡೆಯುವಂತೆ ಸಾಧಿಸುವರೆಂದು ನಂಬುವ

ತಮ್ಮ ಕೃಪಾಭಿಲಾಷಿ

ಕಟಪಾಡಿ ಶ್ರೀನಿವಾಸ ಶೆಣೈ, ಕಾರ್ಕಳ.

ಸೆಕೆಂಡರಿ ಶಾಲಾ ಪಂಡಿತರ ಪುಣ್ಯ.

ಅಯ್ಯಾ ಸ್ವದೇಶಾಭಿಮಾನಿಯೆ

ನಮ್ಮ ಜಿಲ್ಲಾ ಬೋರ್ಡಿಗೆ ೬ ಶಾಲೆಗಳಿವೆ. ಪ್ರತಿ ಶಾಲೆಯಲ್ಲಿಯೂ ಒಟ್ಟೊಬ್ಬ ಕನ್ನಡ ಪಂಡಿತರು ಇರುವರು. ಅವರು ವಿದ್ವಾನ್ ಪರೀಕ್ಷೆ ಪಾಸಾಗಬೇಕೆಂದು ಈಗಿನ ಕಾಯಿದೆ. ಇದ್ದರೂ ಸರಿಯಾಗಿ ಬೇಕಾದ ಪರೀಕ್ಷೆ ಕೊಟ್ಟವರು ಒಬ್ಬರೊ ಇಬ್ಬರೋ ಮಾತ್ರ ಇರುವರು. ಉಳಿದವರು ಎಲ್ಲರೂ ಏನೂ ಪರೀಕ್ಷೆ ಕೊಡದವರು. ಅವರು ಅಷ್ಟಾಗಿಯೂ ನನ್ನ ಅಭಿಪ್ರಾಯ [illegible] Qualification [illegible] ಉಪಾಧ್ಯಾಯರಿಗೆ ಸಿಗಬಹುದಾದರೋ ತಿಳಿಯದು. ನಮ್ಮ ಜಿಲ್ಲಾ ಬೋರ್ಡು ಪ್ರೆಸಿಡೆಂಟರು ಪಂಡಿತರಿಗೆ ರೂ. ೪೫/೫೦ ಕೊಟ್ಟು ಸೆಕೆಂಡರಿ ಗ್ರೇಡಿನವರಿಗೆ ರೂ. [illegible] ಕೊಡುವುದು ಎಂಥಾ ಅನ್ಯಾಯವಲ್ಲವೇ? ಈ ರೀತಿಯಲ್ಲಿ ಸೆಕೆಂಡರಿ ಗ್ರೇಡಿನವರಿಗಿಂತಲೂ ಪಂಡಿತರಿಗೆ ಉಚ್ಚಸ್ಥಾನವನ್ನು ಕೊಡುವಂತೆ ಮಾ. ಡಿ. ಪ್ರೆ. ರ ಕಾರ್ಯವು ಯಾವುದೆಂದು ತಿಳಿಯದು. ಹೀಗೆ ಪಂಡಿತರಿಗೆ ಪ್ರಾಶಸ್ತ್ಯವನ್ನು ಹೆಚ್ಚಿಸಲು ಪ್ರಯತ್ನಿಸಿದ ಮಹಾಶಯರಿಗೆ ಪಂಡಿತರೆಲ್ಲರೂ ಧನ್ಯವಾದಗಳನ್ನು ಅರ್ಪಿಸಿ ಅವರಿಗೆ ಜೀವಂತ ಕೃತಜ್ಞರಾಗಿರಬಹುದು.

'ನಿಷ್ಪಕ್ಷಪಾತಿ'

ಕಾರ್ಕಳದ 'ಪ್ರೇಮಿ'ಗೆ 'ನಿವಾಸಿ'ಯ ಪ್ರತ್ಯುತ್ತರ.

"ಕಾರ್ಕಳ ಪ್ರೇಮಿ"ಯು ಕಾರ್ಕಳದ ಮೇಲಿನ ಪ್ರೇಮವನ್ನು ತನ್ನ ಕೃತಿಯಿಂದ ತೋರಿಸದೆ ಸ್ಥಳೀಯ ಉಪಾಧ್ಯಾಯವೃಂದವನ್ನು ಭ್ರಮಜಾಲದಲ್ಲಿ ಸಿಕ್ಕಿಸುವ ಲೇಖನವೃತ್ತಿಯಿಂದ ತೋರಿಸಹೊರಟುದುದು ಅತ್ಯಂತ ಖೇದವನ್ನುಂಟುಮಾಡುತ್ತದೆ.

ಇಲ್ಲಿಯ ಈ ವರ್ಷದ ಶಿಶು ಸಪ್ತಾಹದಲ್ಲಿ ಸ್ಥಳೀಯ ಶಾಲೆಗಳ ಉಪಾಧ್ಯಾಯ-ವಿದ್ಯಾರ್ಥಿಗಳ ಇರಬೇಕಾದಷ್ಟು ಸಹಕಾರವು ಇದ್ದಿಲ್ಲವೆಂಬ ನನ್ನ ಮಾತನ್ನೇ ಪ್ರೇಮಿಗಳು ತಿಳಿದೋ ತಿಳಿಯದೆಯೋ ಪುಷ್ಟೀಕರಿಸಿ ತಮ್ಮ ಕಾಲ ಮೇಲೆಯೇ ಕೊಡಲಿ ಹೊಡಕೊಂಡು ಪ್ರಮಾದವನ್ನೇ ಮಾಡಿದರು. ಸಪ್ತಾಹ ಸಮಿತಿಯಲ್ಲಿ ಪರಿಶ್ರಮಪಟ್ಟು ದುಡಿದು, ಸಪ್ತಾಹಕ್ಕೆ ಅಲ್ಪಸ್ವಲ್ಪ ಶ್ರೇಯಸ್ಸನ್ನಾದರೂ ತಂದುಕೊಟ್ಟವರು ಹೆಲ್ತ ಇನ್ಸಪೆಕ್ಟರರೇ ಎಂದು ನನಗೆ ತೋರಿದಾಗ ಅವರಿಗೆ ಧನ್ಯವಾದವನ್ನೂ ಕೃತಜ್ಞತೆಯನ್ನೂ ಸಮರ್ಪಿಸಿದರೆ ಅದೆಂದೂ ಅನುಚಿತವಾಗುವುದಿಲ್ಲ. ಹಾಗಿದ್ದರೂ ಪ್ರೇಮಿಗೇಕೆ ಇಷ್ಟು ಉರಿ? ವ್ಯಂಗ್ಯದಿಂದ ದೂಷಣೆಮಾಡುವುದು ಅವರ ಅನ್ವರ್ಥನಾಮಕ್ಕೆ ಶೋಭಿಸುವದೇ? ಹೇಗೆಂದಿಗೂ ಅವರು ತಮ್ಮ ಕ್ಷುದ್ರ ಮನೋವೃತ್ತಿಯನ್ನು ಹೊರಗೆ ತೋರಿಸಬಾರದು.

ಕಾರ್ಕಳದ ಎಲ್ಲಾ ಶಾಲೆಗಳ ಉಪಾಧ್ಯಾಯ ವಿದ್ಯಾರ್ಥಿಗಳ ಸಹಕಾರವು ತಕ್ಕಷ್ಟು ದೊರೆಯದೆ ಇದ್ದದಕ್ಕೆ ಉಪಾಧ್ಯಾಯರನ್ನೇನೂ ನಾನು ದೂಷಿತ ಮಾಡದೆ ಅತ್ಯಂತಾವಶ್ಯಕವಾದ ಅಂಥ ಸಹಕಾರವು ಇನ್ನು ಮುಂದಿನ ಸಪ್ತಾಹಗಳಲ್ಲಾದರೂ ದೊರಕುವಂತೆ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡಬೇಕೆಂದು ನನ್ನ ಇತರ ಸೂಚನೆಗಳೊಂದಿಗೆ ಇದೂ ಒಂದು ಸೂಚನೆಯನ್ನೂ ಆ ಸಪ್ತಾಹ ಸಮಿತಿಗನೇ ಕೊಟ್ಟಿರುವುದು ನನ್ನ ಲೇಖನದಿಂದ ಸ್ಪಷ್ಟವಾಗುತ್ತಿರುವಾಗ ಪ್ರೇಮಿಗಳು ಮಾತ್ರ ಅಂಧಪ್ರೇಮಕ್ಕೆ ಒಳಗಾದ ವಿಕಲ್ಪಬುದ್ಧಿಯಿಂದ "ಉಪಾಧ್ಯಾಯರು ಹೆಲ್ತ ಇನ್ಸ್‌ಪೆಕ್ಟರ ಚಾಕರಿಮಾಡಬೇಕೆಂದು ನಿವಾಸಿಗಳ (ನನ್ನ) ಅಂಬೋಣ" ಎಂಬಂತೆ ಅರ್ಥಮಾಡಲಿಕ್ಕೆ ಹೊರಟಿದ್ದು ಪ್ರೇಮಿಗಳ ತಿಳಿಗೇಡಿತನವಲ್ಲದೆ ಮತ್ತೇನು? ಎಲ್ಲ ಸಂಗತಿಗಳನ್ನು ತಿಳಕೊಂಡು ಉತ್ಸವದ ಪ್ರಾಯಶಃ ಎಲ್ಲ ಕಾರ್ಯಕ್ರಮಗಳನ್ನು ನನ್ನ ಕಣ್ಣುಗಳಿಂದಲೇ ಕಂಡು, ಅವಶ್ಯಕವೆಂದು ತಂದಲ್ಲಿ ತಕ್ಕಷ್ಟು ವಿಚಾರಮಾಡಿಯೇ ಬರೆದ ನನ್ನ ಪತ್ರದಲ್ಲಿ ಯಾವ ಹೊಗಳಿಕೆ ತೆಗಳಿಕೆಗಳಾಗಲೀ ದೂಷಣ ಭೂಷಣಗಳಾಗಲೀ ಇಲ್ಲದೆ ಸಪ್ತಾಹ ಸಮಿತಿಗೆ ಕೆಲವು ಸೂಚನೆಗಳು ಮಾತ್ರ ಇರುವುವೆಂದು ಮನಸಿಟ್ಟು ಓದಿದವರಿಗೆ ಸ್ಪಷ್ಟವಾಗುತ್ತಿರುವಾಗ, 'ಕಾರ್ಕಳದ ಪ್ರೇಮಿ'ಗಳು ಮಾತ್ರ ಪರೋಪದೇಶ ಪಾಂಡಿತ್ಯದ ಮೂಲಕ ಕಾರ್ಕಳದ ಮೇಲಿನ ಪ್ರೇಮವನ್ನು ತೋರಿಸಲಿಕ್ಕೆ ಹೊರಟು ನಗೆಗೀಡಾಗಬೇಕಿತ್ತೇ? ಇನ್ನಾದರೂ ಇಂಥ ಪ್ರಸಂಗಗಳು ಬಂದೊದಗಿದಾಗ, ಲೇಖನಗಳಿಗೆ ಒಂದು ಉತ್ತರ ಬರೆಯಬೇಕಾದಲ್ಲಿ, ಕಣ್ಣ ಮುಂದಿರುವ ಲೇಖನಗಳನ್ನು ಒಂದೇ ಸಲ ಏನೋ ಏನೋ ಓದಿ ಮುಗಿಸದೆ, ಚೆನ್ನಾಗಿ ಅರ್ಥವಾಗುವ ವರೆಗೂ ಓದುತ್ತ ಇದ್ದು, ಅಗತ್ಯವಿದ್ದರೆ ತಿಳಿದವರೊಡನೆ ಕೇಳಿಯೂ ಅದರ ಮೇಲೆ ತಮ್ಮ ಲೇಖನಿಯನ್ನೆತ್ತಬೇಕೆಂದು 'ಕಾರ್ಕಳದ ಪ್ರೇಮಿ'ಗೆ ನನ್ನ ಪ್ರೇಮಪೂರ್ವಕವಾದ ವಿನಂತಿ ಇರುತ್ತದೆ.

ಇತಿ ಕಾರ್ಕಳ ನಿವಾಸಿ,

'ವೆಂಕಟಾಚಲಪತಿ.'

[illegible] ಕುರಿತಾದ ವಾಕ್ಯದಲ್ಲಿ ಅಕ್ಷರ ತಪ್ಪು ಬಂದು, 'ಸಾಯ್ಬ'ನ ಕಲಮಿನಲ್ಲಿಯೂ ನೋಟುಗಳಲ್ಲಿಯೂ ಟೀಕೆಯು ಪ್ರಕಟವಾದುದು ಅನ್ಯಾಯವಾಯಿತೆಂದು ನೊಂದು, ತಾನು 'ಸ್ವದೇಶಾಭಿಮಾನಿ' ಎಂದು ಉಚ್ಚರಿಸುವಾಗ ಪ್ರಮಾದವಶಾತ್ 'ಸ್ವ' ಎಂಬುದನ್ನುಚ್ಚರಿಸಲು ತಪ್ಪಿದೆನೆಂಬಭಿಪ್ರಾಯವುಳ್ಳ ಒಂದು ಪತ್ರವನ್ನು ನಮಗೆ ಬರೆದು, ಹಾಗೆ ಟೀಕೆ ಮಾಡಿದುದರ ಕಾರಣವನ್ನು ಪ್ರಕಟಿಸಬೇಕಾಗಿ ವಿನಂತಿಸಿಕೊಂಡಿದ್ದಾರೆ. ಜಿಲ್ಲೆಯೊಳಗೂ ಹೊರಗೂ ಕಳೆದ ೨೫ ವರ್ಷಗಳಿಂದ ಸುಪರಿಚಿತವಾಗಿರುವ ಒಂದು ಪತ್ರಿಕೆಯ ಹೆಸರನ್ನು ಉಚ್ಚರಿಸುವಾಗ ಪ್ರಮಾದವಶಾತ್ ಒಂದು ಶಬ್ದವು ಬಿಟ್ಟುಹೋಯಿತೆಂಬುದನ್ನು—ಹಾಗೆ ಹೇಳುವ ಮೊದಲೇ ನಮ್ಮ ಪ್ರತಿನಿಧಿಯಾಗಲಿ 'ಸಾಯ್ಬ'ನಾಗಲಿ ಊಹಿಸುವುದು ಅಸಾಧ್ಯವಿತ್ತೆಂಬುದನ್ನೂ, 'ಸಾಯ್ಬ'ನ ಕಲಮಿನಲ್ಲಿ ಶ್ರೀ ಆಚಾರ್ಯರ ವಿಷಯವಾಗಿ ವೃಥಾನಿಂದೆಯೇನೂ ಇರದೆ ಕೇವಲ ಅವರಾಡಿದ ಮಾತಿನ ಮೇಲೆ ನ್ಯಾಯವಾದ ಟೀಕೆಯುಂಟೆಂಬುದನ್ನೂ, 'ನೋಟು'ಗಳಲ್ಲಿ ಬರೆದಿರುವುದು ಯಾವುದಾದರೂ ಒಂದೇ ವಿಶಿಷ್ಟ ವ್ಯಕ್ತಿಯನ್ನು ಉದ್ದೇಶಿಸಿ ಇಲ್ಲವೆಂದೂ ಸವಿನಯದಿಂದ ಸೂಚಿಸುವೆವು.

ಸಂ. ಸ್ವ.

ಶ್ರೀ ರಾ. ಕೃ. ಪ್ರಭುಗಳ ಉತ್ತರದ ಕುರಿತು

ತಾ. ೩–೧೧–೧೯೩೩ನೇ ಸ್ವದೇಶಾಭಿಮಾನಿಯಲ್ಲಿ ಪ್ರಕಟವಾದ, "ಗೌಡ ಸಾರಸ್ವತ ಸಭಾ" ಮುಂಬಯಿ ಇದರ ವಿಷಯಕವಾದ ಶ್ರೀ ರಾ. ಕೃ. ಪ್ರಭುಗಳ ಉತ್ತರವನ್ನು ಮನನ ಮಾಡಿ, — ಆ ಸಭೆಯ ಕುರಿತಾದ ಬಾತ್ಮಿಯನ್ನು ಮೊದಲಾಗಿ ಪ್ರಕಟಿಸಿದ ಮಹನೀಯರು ಈ ರೀತಿ ಬರೆಯುತ್ತಾರೆ — "ಧನಸಂಗ್ರಹ ಮಂಡಳಿಯು ಸಂಸ್ಥೆಯ ಹೆಸರನ್ನು ಪ್ರಕಟಿಸದೆ ಅವರು ಕೊಟ್ಟಿರುವ ರಶೀದಿಗಳಲ್ಲಿ ನಿಧಿಯ ಹೆಸರು ಮಾತ್ರ ನಮೂದಿಸಿದರಿಂದಲೂ, ಎರಡು ಸಂಸ್ಥೆಗಳೂ ಒಂದೇ ಸಮಾಜದ ಮುಖಂಡರಿಂದ ಕರೆಯಲ್ಪಟ್ಟುದರಿಂದಲೂ ಸದರಿ ಸಂಸ್ಥೆಯಿಂದಲೇ ಕರೆಯೋಣಾದ ನಿಧಿಯೆಂದು ಎಲ್ಲರಿಗೂ ತಪ್ಪು ಅಭಿಪ್ರಾಯ ಉಂಟಾಗಲು ಕಾರಣವಾಯಿತು. ನಾನು ಬಾತ್ಮಿಯನ್ನು ಅನೇಕರ ಸಲಹೆ–ಸೂಚನೆಗಳನ್ನು ಪಡೆದು ಬರೆದಿರುವೆನು. ತಪ್ಪಾಭಿಪ್ರಾಯವುಂಟಾದುದಕ್ಕೆ ತುಂಬಾ ಬೇಸರಪಡುವೆನು. ನನ್ನ ಬಾತ್ಮಿಯು "ಗೌಡಸಾರಸ್ವತ ಸಭಾ ಮುಂಬಯಿ" ಇದರ ಪರವಾಗಿರದೆ ಇಲ್ಲಿ ಬಂದಿರುವ ಧನಸಂಗ್ರಹ ಮಂಡಲಿಯ ಪರವಾಗಿರುತ್ತದೆಯೆಂದು ಎಲ್ಲಾ ವಾಚಕರೂ ತಿಳಿಯತಕ್ಕದ್ದು. ಶ್ರೀ ರಾ. ಕೃ. ಪ್ರಭುಗಳವರ ಉತ್ತರವು ಎಲ್ಲರ ತಪ್ಪುಗ್ರಹಿಕೆಗಳನ್ನು ತೆಗೆದು ಸದಭಿಪ್ರಾಯವನ್ನು ಹುಟ್ಟಿಸುವುದರಿಂದ ತುಂಬ ಸಂತೋಷಪಡುವೆನು."

ಮೂಲ್ಕಿ ಗೌಡಸಾರಸ್ವತ ಬ್ರಾಹ್ಮಣ ಬಡ ವಿದ್ಯಾರ್ಥಿ ಸಹಾಯಕ ಫಂಡು.

ಇದರ ಬಾಬ್ತು ತಾರೀಕು ೬–೧೧–೩೩ನೇ ದೀಪಾವಳಿ ಹಬ್ಬದ ಸಮಯ ಸದ್ರಿ ಫಂಡಿಗೆ ಧನ ಸಹಾಯ ಮಾಡಿದ ಮಹನೀಯರುಗಳ ಹೆಸರುಗಳು —

ರೂಪಾಯಿ ೧೧ರಂತೆ—ಮೂಲ್ಕಿ ಶ್ರೀ ವೆಂಕಟ್ರಮಣ ದೇವಸ್ಥಾನ ಶ್ರೀಗಳವರ ತೀರ್ಥದ ಪದ್ಮನಾಭ ವಾಮನ ಭಟ್ಟ ಪಂಡು ಭಟ್ಟ, ಶ್ರೀ ರಾಧಾಕಾಂತ ಪ್ರೆಸ್ಸ್ ಉದಿಯಾವರ ವಿಟ್ಟಪ್ಪ ಶೆಣೈ, ಎಸ್ ಮುಕುಂದ ಕುಡ್ವ ವೈಕುಂಠ ಕೃಷ್ಣ ಪ್ರಭು ಮಂಡ್ಯಾರು ನರಸಿಂಹ ಕಾಮತ್ ಎಂಡ್ ಬ್ರದರ್, ಪಡೀರಬೆಟ್ಟು ಶ್ರೀಧರ ಕೇಶಗಿರಿ ಕಾಮತ್, ವಿ ನರಸಿಂಹ ಕಾಮತ್, ರೆವೆನ್ಯು ಇನ್ಸ್‌ಪೆಕ್ಟರ್ ಎಸ್ ನರಸಿಂಹ ಪೈ, ಡಾಕ್ಟರ್ ರಾಯಪ್ಪ ಕಾಮತ್ ಎಂಡ್ ಬ್ರದರ್ಸ್, ಮೂಲ್ಕಿ ಅಣ್ಣಪ್ಪ ಅಚ್ಯುತ ಶೆಣೈ ಎಂಡ್ ಬ್ರದರ್ಸ್.

[illegible]ರಂತೆ — ಶ್ರೀಗಳವರ ಟಿ. ನರಸಿಂಹ ಭಟ್, ಕೆ ರಾಮ ಹೆಗ್ಡೆ ಎಂಡ್ ಬ್ರದರ್, ಗಣಪತಿ ವೈಕುಂಠ ಕಾಮತ್, ಹೆಡ್ ಪೋಸ್ಟ ಮಾಸ್ಟರ್ ಪಿ. ಕೃಷ್ಣ ಬಾಳಿಗ, ಯು. ಕೃಷ್ಣ ರಾವ್ ಎಂಡ್ ಬ್ರದರ್ಸ್, ಪಿ. ಪರ್ಪಪ್ಪ ಕಾಮತ್ ಎಂಡ್ ಸನ್ಸ್, ಬಂಗ್ಲೆ ಸೀತಾರಾಮ ಕಾಮತ್, ಎಮ್. ರಾಘವೇಂದ್ರ ನರಸಿಂಹ ಕುಡ್ವ ಎಂಡ್ ಬ್ರದರ್ಸ್, ಎಚ್. ಅಣ್ಣಪ್ಪ ಶ್ರೀನಿವಾಸ [illegible] ಎಂಡ್ ಕೊ., ಕೃಷ್ಣ ಪದ್ಮನಾಭ ಕಾಮತ್, ಎಮ್. ರಘುನಾಥ ಕಾಮತ್, ಮಾಸ್ಟರ ಪಿ. ಶ್ರೀಧರ ಕಾಮತ್.

[illegible] ಪಂಡು ಪ್ರಭು, [illegible] ಗಣಪತಿ ಪ್ರಭು, ಸಂಜೀವ ಪ್ರಭು, [illegible] ಪ್ರಭು, [illegible] ಕೃಷ್ಣರಾಯ ಕಾಮತ್, [illegible] ಸಂಜೀವ ರಾವ್, [illegible] ಭಟ್ಟ, [illegible], ಉಪೇಂದ್ರ ರಾವ್, [illegible] ಶ್ರೀನಿವಾಸ [illegible] ಯು ಕೃಷ್ಣರಾಯ ಶೆಣೈ, ಬೋಳಪ್ಪ ಭಂಡಾರಿ, ಎಸ್. ಜನಾರ್ಧನ ಸುಬ್ರಾಯ ಶೆಣೈ, [illegible] ನರಸಿಂಹ ಕಾಮತ್, ಕೆ. ರಾಮರಾವ್ ಎಂಡ್ ಕೊ., ಮುಂಡ್ಕೂರು ಸುಂದರ ರಾವ್, ಕೋಟೆಕೇರಿ ಮಂಜುನಾಥ ಕಾಮತ್, ಪಂಚಮಹಲ್ ಶ್ರೀನಿವಾಸ ಪ್ರಭು, ಪಯ್ಯಾರಂಕ ಸುಬ್ರಾಯ ಶೆಣೈ, ಮಾಸ್ಟರ ಕೆ. ಗೋಪಾಲಕೃಷ್ಣ ರಾವ್, ಯು. ವಾಮನ ಶೆಣೈ, ಯು. ದೇವರಾಯ ಶೆಣೈ, ವಾಸುದೇವ ಗಣೇಶ ಕಾಮತ್, ಮೇಗಿನಪೇಟೆ ರಂಗಪ್ಪ ಕಾಮತ್, ಹರಿಸುಬ್ರಾಯ ಕಾಮತ್, ವಿ ಪದ್ಮನಾಭ ಕಾಮತ್ ಎಂಡ್ ಬ್ರದರ್ಸ್, ಕುಲ್ಯಾಡಿ ನರಸಿಂಹ ಪೈ, ಉದಿಯಾವರ ಪುಂಡ್ಲೀಕ ಪುರುಷೋತ್ತಮ ಶೆಣೈ, ಪಂಡಿತ ಕೇಶವ ಕಾಮತ್, ಕೆ. ಉಪೇಂದ್ರ ಪೈ ಬಿ. ಎ., ವಿ. ಗೋವರ್ಧನ ಕಾಮತ್, ಬೋಳ ನಾರಾಯಣ ರಾವ್, ಎಸ್. ವಿ. ಡಿ ಮಲ್ಯ, ಎಮ್ ಬಾಬು ರಾವ್, ಮನಸ್ಸರ ಎಮ್ ಸಾಂತಪ್ಪಯ್ಯ, ಎಮ್. ಪರ್ಪಪ್ಪ ಕುಡ್ವ, ಕುಲ್ಯಾಡಿ ಸುಬ್ರಾಯ ಪೈ ಎಂಡ್ ಸನ್ಸ್, ಎಸ್. ಲಕ್ಷ್ಮಣ ಪ್ರಭು ಪದ್ಮನಾಭ ಕಾಮತ್, ಗೇರುಕಟ್ಟೆ ನರಸಿಂಹ ಪೈ, ಎಮ್ ರಾಮರಾವ್ ಕಾಮತ್, ವಿ ಸುಂದರ ಕೃಷ್ಣ ಕಾಮತ್, ಟಿ ನಾರಾಯಣ ಶೆಣೈ.

ನಾಲ್ಕಾಣೆಗಿಂತ ಕಡಿಮೆಯಾಗಿ ಧನಸಹಾಯ ಮಾಡಿದವರಿಂದ ಒಟ್ಟು ಜಮೆಯಾದದ್ದು ರೂ. [illegible]. ಮೇಲೆ ತೋರುವ ಸಂಸ್ಥೆಗೆ ಈ ರೀತಿ ಸಹಾಯ ಮಾಡಿದ ಮಹನೀಯರಿಗೆಲ್ಲಾ ನಾವು ಕೃತಜ್ಞರಾಗಿರುವೆವು.

U. Rama Shenoy,
Hon Secretary,
G. S B P Fund, Moolky

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡ್ ಸ್ಕೂಲು ಉಪಾಧ್ಯಾಯರ ಅವಗಾಹನೆ ಬಗ್ಗೆ

ನಮ್ಮ ಮಾನ್ಯ ಡಿ. ಬೋರ್ಡಿನವರು ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ಸಂಬಳದ ಸ್ಕೇಲನ್ನು ಈಗೀಗ ತಂದಿರುವರಷ್ಟೆ. ಉಪಾಧ್ಯಾಯರ ಗ್ರೇಡಿಗೆ ಅನುಸರಿಸಿ ಗ್ರೇಡಿನ ಮಿನಿಮಮ್ ಸಂಬಳಕ್ಕಿಂತಲೂ ಮೊದಲೇ ಜಾಸ್ತಿಯಾಗಿ ಖಾಯಂ ಸಂಬಳ ಹೊಂದುತ್ತಿರುವವರ ಸಂಗತಿಯಲ್ಲಿ ಕೂಡ ಅವರ ಸಂಬಳವನ್ನು ಗ್ರೇಡಿನ ಮಿನಿಮಮ್ ಸಂಬಳಕ್ಕೆ ತಂದು ಇಳಿಸಿ ಹೆಚ್ಚು ಇರುವ ಸಂಬಳವನ್ನು ಎಲ್ಲೋವೆನ್ಸಾಗಿ ಮಾರ್ಪಡಿಸಿರುತ್ತಾರೆ. ಸ್ವಾಭಿಮಾನದಿಂದ ಇದು ಒಂದು ದೊಡ್ಡ ಸಹಾಯವೇ ಎಂದು ಎಣಿಸುವುದಾದರೂ ಅಂಥಾ ಉಪಾಧ್ಯಾಯರ ಮಟ್ಟಿಗೆ ಡಿಗ್ರೇಡು ಮಾಡಿದಂತಾಗುವುದು. ಎಲ್ಲೋವೆನ್ಸು ಎಂಬುದು ಚೆಕ್ಕಿನ ಕಳೆಯ ಮೇಲಿನ ದೀಪ, ಸರಕಾರದ ವರ. ಅದನ್ನು ಒಪ್ಪಿಕೊಳ್ಳಲೂ ಬಹುದು, ತಿರಸ್ಕರಿಸಲೂಬಹುದು. ಅದು ಮಾತ್ರ ನೋಡಲಿಕ್ಕೆ ಮಾತ್ರವಲ್ಲ ದೊಡ್ಡ ಸಂಸಾರ ಪೋಷಣೆಯ ಅವಶ್ಯ ಸಂದರ್ಭದಲ್ಲಿ ಡಿ ಬೋರ್ಡಿನವರೇ ಕತ್ತರಿಸಲೂ ಬಹುದು. ಆದುದರಿಂದ ಎಲ್ಲೋವೆನ್ಸು ಎಂಬುದು ಸ್ಥಿರವಾದುದಲ್ಲ. ಸ್ಕೇಲು ಈಗೀಗ ಬಂದುದರಿಂದ ಹೆಚ್ಚಿನ ಮಂದಿ ಉಪಾಧ್ಯಾಯರಿಗೆ ಪ್ರಯೋಜನವಿದೆ ಎಂಬುದು ಸರಿ. ಆದರೆ ಹೆಚ್ಚು ಸರ್ವೀಸು ಆಗಿ ಸಂಸಾರ ಭಾರವು ಹೆಚ್ಚು ಇರುವ ಮುದಿ ಉಪಾಧ್ಯಾಯರ ಮಟ್ಟಿಗೆ ತುಂಬಾ ದೋಷವಾಗಿಯೇ ಪರಿಣಮಿಸಿಯದೆ. ಈ ಉಪಾಧ್ಯಾಯರು ೬–೧೦ ವರ್ಷಗಳ ಒಳಗೆ ಸಹಜವಾಗಿಯೇ ಬೋರ್ಡಿನಿಂದ ಕಳಚಿ ಹೋಗಲಿರುವವರು (ಇವರು) ೮–೧೦ ವರ್ಷಗಳಿಂದಲೂ ೨೫ ರೂ. ಖಾಯಂ ಸಂಬಳ ಹೊಂದುತ್ತಿರುವ ಲವರ್ ಗ್ರೇಡಿನ ಉಪಾಧ್ಯಾಯನಿಗೆ ಈಗಿನ ಸ್ಕೇಲು ಪ್ರಕಾರ ೨೦ ರೂ.ಗೂ ಇಳಿಸಲ್ಪಟ್ಟು ತಂದು ಇಳಿಸಿದಂತಾಯಿತು, ಸರ್ವೀಸು ಆದ ಹಾಗೆ ಮೇಲೇರುವುದು ಬಿಟ್ಟು ಕೆಳಗೆ ಇಳಿದಂತಾಯಿತು. ಈ ವಿಷಯದಲ್ಲಿ ಸಂಬಂಧಪಟ್ಟ ಉಪಾಧ್ಯಾಯರು ಡಿ ಬೋರ್ಡಿಗೆ ಪ್ರತ್ಯಪ್ರತ್ಯೇಕ ಮನವಿ ಮಾಡಿಕೊಳ್ಳುವುದು.

G. O. No. 1581/4—9—33ನೇ ಮುಖಾಂತ VIIIನೇ ಸ್ಟಾಂಡರ್ಡ್ ಸರ್ಟಿಫಿಕೇಟು ಹೊಂದಿದ ಕೆಲವು ಮಂದಿ ಉಪಾಧ್ಯಾಯರಿಗೆ ಹಾಯರ್ ಗ್ರೇಡಿಗೆ ಸೇರಿಸಿಕೊಳ್ಳಲು ಅವಕಾಶವಿಸಿದರೂ ದಯವಿಟ್ಟು ಸರಕಾರವು ಪುನರಾಲೋಚಿಸಿ ಸದ್ರಿ ಅವಕಾಶವನ್ನು ಹಿಂತೆಗೆದದ್ದರಿಂದ ಬಾಕಿ ಉಳಿದ ಕೆಲವರ ಸರ್ಟಿಫಿಕೇಟುಗಳು

(೧೧ನೇ ಪುಟಕ್ಕೆ ಮುಂದುವರಿಸಿದೆ)

The Canara Bank Ltd., Kasaragod.

ದಿ. ಕೆನರಾ ಬ್ಯಾಂಕ್ ಲಿಮಿಟೆಡ್, ಕಾಸರಗೋಡು.

Notice.

ಈ ಕೆಳಗೆ ಹೆಸರು ಕಾಣಿಸಿದವರು ಸದರಿ ಬ್ಯಾಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಮೊಬಲಗುಗಳನ್ನಾಗಲಿ, ಅವುಗಳ ಮೇಲಣ ಬಡ್ಡಿಯನ್ನಾಗಲಿ ವಾಯಿದೆಗೆ ಕೊಡದೆ ಇರುವುದರಿಂದ, ಬ್ಯಾಂಕಿಗೆ ಸಲ್ಲತಕ್ಕ ಅಸಲು ಬಡ್ಡಿ, ನೋಟೀಸು ಖರ್ಚು ಇತ್ಯಾದಿ ವಸೂಲು ಬಗ್ಗೆ ಸದರಿಯವರು ಅಡವಿಟ್ಟ ನಗಗಳು ಇದೇ 1934ನೇ ಇಸವಿ ದಶಂಬರ ತಾ 7ನೇ ಶುಕ್ರವಾರ ದಿವಸ ಮಧ್ಯಾಹ್ನ 1 ಘಂಟೆಗೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವವು

ಕ್ರ ನಂಬ್ರ 1 ಲೋನ್ ನಂಬ್ರ 1368/33 ಹೆಸರು Subraya Bhat, S/o Perumunda Mahalinga Bhat, Hotel Keeper, Kasaragod ಅಸ್ಲು ರೂ 45

ಕ್ರ ನಂಬ್ರ 2 ಲೋನ್ ನಂಬ್ರ 2234/33 ಹೆಸರು Krishna Holla, S/o Subraya Holla, Coffee Hotel Keeper, Kasaragod. ಅಸ್ಲು ರೂ 85

ಕ್ರ ನಂಬ್ರ 3 ಲೋನ್ ನಂಬ್ರ 2299/33 ಹೆಸರು Kunhiraman, N/o Ayikot Ambu, Goldsmith, Nileshwar, ಅಸ್ಲು ರೂ 80

ಕ್ರ ನಂಬ್ರ 4 ಲೋನ್ ನಂಬ್ರ 2300/33 ಹೆಸರು Kunhiraman N/o Ayikot Ambu Goldsmith, Nileshwar ಅಸ್ಲು ರೂ 70

Office of the Bank Kasaragod 10 11 1934 — K M Nayak, *Agent*

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ — ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು— ಓದಿರಿ ಇದನ್ನು—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜಿನಸ್ ಡ್ರಗ್ಸ್ ಒಫ್ ಇಂಡಿಯಾ" ಇದರ ಪುಟ 59ನ್ನು ನೋಡಿ)

ವನಸ್ಪತಿ ತೈಲವಲ್ಲ — ಮೀನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಿಲ್ ಕ್ರಶ್ಶಿಂಗ್ ಇಂಡಸ್ಟ್ರಿ ಕಮಿಟಿ"ಯ ತೃತೀಯ ಸಭೆಯಲ್ಲಿ, ಪ್ರಕೃತ ಪರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟನ್ನು ಹಚ್ಚಿಸಿ, ಪರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ" ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು'—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ಮೀನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನು ತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

ಕವಿರವೀಂದ್ರ:— 'ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ **ಡಾ॥ ಅನ್ನಿಬಿಸೆಂಟರು** ತಮ್ಮ "ನ್ಯೂ ಇಂಡಿಯಾ' ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ॥ ಅನ್ಸಾರಿಯವರು — ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು — "ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ.'

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ — ಇವುಗಳನ್ನು ಉಪಯೋಗಿಸಿರಿ.

ಸೋಲ್ ಏಜಂಟರು:

ನಾದಿರ ಷಾ, ಪ್ರಿಂಟರ್ ಎಂಡ್ ಕೋ., 16 (ಬ್ರೋಡ್ವೆ, ಮದರಾಸು.

ಹೆಡ್ ಆಫೀಸು: ಬೊಂಬಾಯಿ ಇತರ ಶಾಖೆಗಳು ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ:—ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಒಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೊಡ್ರೆಜರವರಿಗೆ ಸಂಬಂಧವಿಲ್ಲ

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter —

Modern Hindu Hotel,
CALICUT, 17—6—1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ
ಮಂಗಳೂರಿನಿಂದ — ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು — ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ. ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

The Bombay Life Assurance Co., Ltd.

1908

1933 Valuation Results just out.

DISCLOSES BETTER RESULTS.

BONUS DECLARED

Year	Whole Life	Endowment	
1930	20	15	Per Thousand Per Year.
1933	23	18	

PROGRESS SHOWS POPULARITY.

There it pays you to take up a policy now in this Co.
and receive "Our best service."

Policy-holders kindly note:—

Bonus Certificates are in preparation and will be posted early next month.

Kochikar Brothers, Madras Branch Secretaries.

UDIPI—MADRAS—CALICUT—BANGALORE BOMBAY—MANGALORE.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸಂಸ್ಥಾಪನೆ 1908.)

1933ನೇ ಲೆಕ್ಕಾಚಾರಗಳ ಫಲಿತಾಂಶಗಳು ಈಗಾಗಲೇ ಪ್ರಕಟವಾಗಿದ್ದು, ಅತ್ಯುತ್ತಮ ಕಾರ್ಯವೃತ್ತಾಂತದ ವರದಿಯನ್ನು ತೋರುವುವು.

ಸಾರಲಾದ ಬೋನಸ್

ವರ್ಷ.	ಇಡೀ ಜೀವಮಾನ.	ಉಂಬಳಿ ಯಾನೆ ಎಂಡೌಮೆಂಟ್.	
1930	20	15	ಪ್ರತಿ ಸಾವಿರಕ್ಕೆ ವರುಷಕ್ಕೆ
1933	23	18	

ಪ್ರಗತಿಯು ಜನಾದರದ ದ್ಯೋತಕವಾಗಿದೆ ಈ ಪ್ರಗತಿಪರವಾದ ಕಂಪೆನಿಯಲ್ಲಿಯೇ ವಿಮೆಯಿಳಿಸಿ, ನಮ್ಮ ಅತ್ಯುತ್ತಮ ವಿಮಾ ಸೇವೆಯನ್ನು ಪಡೆಯುವುದರಿಂದ ನಿಮಗೆ ಆದಾಯವಿದೆ

ಪೊಲಿಸಿದಾರರು ದಯಮಾಡಿ ಗಮನಿಸಿರಿ.

ಬೋನಸ್ ಸರ್ಟಿಫಿಕೇಟುಗಳು (ಪತ್ರಗಳು) ಸಿದ್ಧವಾಗುತಿದ್ದು, ಬರುವ ತಿಂಗಳಲ್ಲಿ ಅಂಚೆ ಮೂಲಕ ಕಳುಹಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದರಾಸು ಶಾಖಾ ಕಾರ್ಯದರ್ಶಿಗಳು.

ಉಡುಪಿ-ಮದರಾಸು-ಕಲ್ಲಿಕೋಟೆ-ಬೆಂಗಳೂರು-ಬೊಂಬಾಯಿ ಮತ್ತು ಮಂಗಳೂರು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ - (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡಶಾಲೆಯಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.
ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ಮೊದಲ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ಸನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯ ಬಿಡೆಯನ್ನೇರಿರಿ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನಿಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ದಾಸಲು ವಿನಹ ಕಳುಹಿಸಲ್ಪಡುವ ನಮ್ಮ ಕಾಮಶಾಸ್ತ್ರವನ್ನೋದಿರಿ.
Agents:—Shah Company, MANGALORE
„ Pearl & Sons, MANGALORE.
Atank Nigrah Pharmacy,
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಪ್ರ.

BUY ADVERTISED GOODS

A Recurring Pleasure — *To Smoke them*

Mangalore Darbar Beedies

REGISTERED



TRADE MARK

Regd. Trade Mark.

Thousands enjoy them daily all over India.
When buying see our Trade Mark!

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!
ಯಾವ ಕೊಟಡಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುದಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.
ಇವರಿಂದ ತಯಾರಿಸಲ್ಪಟ್ಟವುಗಳು.

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ಸ ಸಾರ್ಸಪರಿಲ್ಲಾ.
ಕೆಟ್ಟ ರಕ್ತಕ್ಕೆ ಪರಮೌಷಧ,
೪೦ ವರ್ಷದ ಅನುಭವ,
ಉಪಯೋಗಿಸುದವರೇ ಹೇಳಿದ್ದಾರೆ.
ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.
ಡಾಕ್ಟರ್ ಗೌತಮ ರಾವ್ ಕೇಶವ
ಅಂ.ಜ್. ಸನ್ಸ್, ಠಾಕೂರದ್ವಾರ, ಮುಂಬಾಯಿ ೨.
ಶ್ಯಾನ್ಸ್ ಕಾಂಪನಿ, ಮಂಗಳೂರು.
[ಸತ್ಯಶ್ಯಾಮ ಅಂಗ್ಲಿಷ್ ಔಷಧ ಪುಸ್ತಕವುಳ್ಳ]

The Bombay Life Assurance Co., Ltd.

ESTABLISHED 1908

1933 Valuation Results just out.

DISCLOSES BETTER RESULTS.

BONUS DECLARED

YEAR	WHOLE LIFE.	ENDOWMENT	
1930	20	15	Per Thousand Per Year.
1933	23	18	

PROGRESS SHOWS POPULARITY.

There it pays you to take up a policy now in this Co
and receive "Our best service."

Policy-holders kindly note:—

Bonus Certificates are in preparation and will be posted early next month.

Kochikar Brothers, Madras Branch Secretaries.

UDIPI—MADRAS CALICUT BANGALORE BOMBAY-MANGALORE.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸಂಸ್ಥಾಪನೆ 1908.)

1933ನೇ ಲೆಕ್ಕಾಚಾರಗಳ ಫಲಿತಾಂಶಗಳು ಈಗಾಗಲೇ ಪ್ರಕಟವಾಗಿದ್ದು, ಅತ್ಯುತ್ತಮ ಕಾರ್ಯವೃತ್ತಾಂತದ ವರದಿಯನ್ನು ತೋರುವುವು.

ಸಾರಲಾದ ಬೋನಸ್

ವರ್ಷ.	ಇಡೀ ಜೀವಮಾನ.	ಉಂಬಳಿ ಯಾನೆ ಎಂಡೌಮೆಂಟ್.	
1930	20	15	ಪ್ರತಿ ಸಾವಿರಕ್ಕೆ ವರುಷಕ್ಕೆ
1933	23	18	

ಪ್ರಗತಿಯು ಜನಾದರದ ದ್ಯೋತಕವಾಗಿದ ಈ ಪ್ರಗತಿಪರವಾದ ಕಂಪೆನಿ
ಯಲ್ಲಿಯೇ ವಿಮೆಯಿಳಿಸಿ, ನಮ್ಮ ಅತ್ಯುತ್ತಮ ವಿಮಾ ಸೇವೆಯನ್ನು ಪಡೆಯು
ವುದರಿಂದ ನಿಮಗೆ ಆದಾಯವಿದೆ

ಪೋಲಿಸಿದಾರರು ದಯಮಾಡಿ ಗಮನಿಸಿರಿ.

ಬೋನಸ್ ಸರ್ಟಿಫಿಕೇಟುಗಳು (ಪತ್ರಗಳು) ಸಿದ್ಧವಾಗುತಿದ್ದು, ಬರುವ ತಿಂಗಳಲ್ಲಿ ಅಂಚೆ ಮೂಲಕ ಕಳುಹಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದರಾಸು ಶಾಖಾ ಕಾರ್ಯದರ್ಶಿಗಳು.

ಉಡುಪಿ-ಮದರಾಸು-ಕಲ್ಲಿಕೋಟೆ-ಬೆಂಗಳೂರು-ಬೊಂಬಾಯಿ ಮತ್ತು ಮಂಗಳೂರು.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

- ಮೃದ್ವಿಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
- ಮಹಾಮದನ ಕಾಮೇಶ್ವರೀ ಲೇಹ್ಯ–(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
- ಹಿಮಸಾಗರ ತೈಲ–(ನಿದ್ರಾನಾಶಕ್ಕೆ ಅತೀ ಉಪಯುಕ್ತ)
- ಮಹಾಮಾಷ ತೈಲ–(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
- ಗರ್ಭಪಾಲ - (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
- ಗುಡ ಪಿಪ್ಪಲಿ–(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.
ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೆಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:—ನನ್ ಬ್ರೆಂಡ್ ಕೊಡೆಯ ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!

ಸುಪ್ರಸಿದ್ಧ **ಆತಂಕನಿಗ್ರಹ ಮಾತ್ರೆ**ಗಳನ್ನು ಉಪಯೋಗಿಸಲಿಕ್ಕೆ.

ಜೀವನದ ಜಯಶೀಲತೆಯ ಏಣಿಯನ್ನೇರಿ, ದೇಶದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.

ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.

ಆರೋಗ್ಯಕ್ಕೆ ಕವಚವು

32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1

ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ

ಕಾಮಶಾಸ್ತ್ರವನ್ನೋದಿರಿ.

Agents:—Shah Company, MANGALORE
,, Pearl & Sons, MANGALORE.

Atank Nigrah Pharmacy,
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

A Recurring Pleasure *To Smoke them*

REGISTERED



TRADE MARK

Mangalore Darbar Beedies

Thousands enjoy them daily all over India.

When buying see our Trade Mark!

Regd. Trade Mark.

ಮಂಗಳೂರು ದರ್ಬಾರ್ ಬೀಡಿಗಳು

ಅವುಗಳನ್ನು ಸೇದುವುದೆಂದರೆ ಆನಂದ!

ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುವುವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.

ಇವರಿಂದ ತಯಾರಿಸಲ್ಪಟ್ಟವುಗಳು.

ಡಾಕ್ಟರ ವಾಮನ ಗೋಪಾಳರವರ

ಐಓಡಾಯಿಡ್ಡ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೪೫ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳಿದ್ದಾರೆ.

ಡಾ॥ ಗೌತಮ ರಾವ್ ಕೇಶವರವರ ಫೋಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.

ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಯಿ ೪.
ಸ್ಮಿತ್ ಅಂಡ್ ಕಂಪೆನಿ, ಮಂಗಳೂರು.
[ಕಸ್ತೂರಿಬಾಯಿ ಆಸ್ಪತ್ರೆ - ಎದುರು ಮಾರ್ಗದಲ್ಲಿ.]

ವಿವಿಧ ವಿಷಯ.

ಆರೋಗ್ಯ [illegible]

[illegible] ... ಹೊಟ್ಟೆ ಎಲ್ಲಿಂದ ಬರುತ್ತದೆ?— [illegible] ಕಾರಣ. [illegible] ಆಹಾರ ಶಿಕ್ಷಣದ ವಿಷಯದಲ್ಲಿ ಯೋಗ್ಯ ಶಿಕ್ಷಣ [illegible] ಆರೋಗ್ಯವೆಲ್ಲ [illegible] ಆರೋಗ್ಯಶಾಸ್ತ್ರದಲ್ಲಿ [illegible] ಶಕ್ತಿಯುಗಳಿಗೂ ದುಡಿಸುತ್ತಿರುವರು."

ಲಂಡನ್ ಮೃಗಾಲಯದಲ್ಲಿ—

—ಆಹಾರದ ಬೆಲೆಯ ನೋಡಿದಿರಾ? ವರ್ಷ ಒಂದಕ್ಕೆ ಕುದುರೆ ಮಾಂಸ ೧೯೪ ಟನ್, ಹುಲ್ಲು ೨೭೫ ಟನ್; ಮೀನು ೪೬ ಟನ್; ಬಾಳೆಹಣ್ಣು ೧೫೪,೦೦೦; ಬಿಸ್ಕಿಟ್ ೨೦ ಟನ್; ಕಿತ್ತ ೩೦,೦೦೦; ನೊಣ ೪೬೧ ರಾಶ್ಲು; ಹುಳಗಳು ೩೮೫ ರಾಶ್ಲು!

ಹಾವುಗಳ ಓಟದ ವೇಗವೆಷ್ಟು?

ಹೆಬ್ಬಾವುಗಳು ತಾಸಿಗೆ ಅರ್ಧ ಮೈಲಿನಿಂದ ಮೊದಲಾಗಿ ೪ ಮೈಲುಗಳ ತನಕ ಮಾತ್ರ ಓಡಬಲ್ಲವಂತೆ. ಉಷ್ಣ ಪ್ರದೇಶಗಳಲ್ಲಿನ ಕೆಲವು ಹಾವುಗಳು ಮತ್ತಷ್ಟು ವೇಗವಾಗಿ ಓಡಬಲ್ಲವು. ಆದರೆ, ತಾಸಿಗೆ ೮ ಅಥವಾ ಹತ್ತು ಮೈಲುಗಳಿಗಿಂತ ವೇಗವಾಗಿ ಓಡಲಾರವು. ಇದು ಡಾ. ಡಬ್ಲ್ಯು. ಮೊಸಾನರ್ ಎಂಬವರ ಶೋಧವಾಗಿದೆ.

ಜ್ವರವು 'ಪ್ರತಿಭೆ'ಗೆ ಕಾರಣವಾಯಿತು.

ಬುಡಾಪೆಸ್ಟಿನ ಆರು ವಯಸ್ಸಿನ ಬಾಲಕನೊಬ್ಬನಿಗೆ ಜ್ವರಬಂದು ಆಸ್ಪತ್ರೆಗೊಯ್ದರು. ಕೆಲಕಾಲ ಚಿಕಿತ್ಸೆ ನಡೆದು, ಗುಣಹೊಂದಿದನು. ಜ್ವರವು ಪೂರ್ಣ ಬಿಟ್ಟು ಹೋಗುವಾಗ, ಹುಡುಗನು ಅನೇಕ ಕಷ್ಟಸಾಧ್ಯ ಲೆಕ್ಕಗಳನ್ನು ಮನಸ್ಸಿನಲ್ಲಿ ಗುಣಿಸಿ ಹೇಳುವ ಶಕ್ತಿಯನ್ನು ಪಡೆದಂತೆ ತೋರಿತು. ಅವನೇನೂ ಶಾಲೆಗೆ ಹೋದವನಲ್ಲ. ಈ ಗಣಿತಜ್ಞನನ್ನು ಕಂಡು ಜನರೆಲ್ಲ ಬೆರಗಾಗಿರುವರು.

ಟೆಲಿಫೋನ್ ಸಂಭಾಷಣೆಯ ದಾಖಲೆಗಳು.

ಟೆಲಿಫೋನಿನಲ್ಲಿ ಸಂಭಾಷಿಸಿದ ವೆಚ್ಚಗಳ ಕೆಲಕೆಲವು ಅದ್ಭುತ ದಾಖಲೆಗಳು ಈಗೀಗ ಪ್ರಕಟವಾಗಿವೆ. ಅಮೇರಿಕದ ವ್ಯಾಪಾರಿಯೊಬ್ಬನು ಲಂಡನಿಗೆ ಬಂದಾಗ, ನ್ಯೂಯಾರ್ಕಿನಲ್ಲಿರುವ ತನ್ನ ಪಾಲುಗಾರರೊಡನೆ ಎರಡು ತಾಸುಗಳ ತನಕ ಮಾತಾಡಿದನು; ಅದಕ್ಕೆ ತಗಲಿದ ವೆಚ್ಚ ೬೦೦ ಪವನು! ಆದರೆ, ಇದರಿಂದ ಅವನು ಸುಮಾರು ೧ ಲಕ್ಷ ಪವನನ್ನು ವ್ಯಾಪಾರದಲ್ಲಿ ಉಳಿಸಿದನೆಂದು ಹೇಳಲಾಗಿದೆ. ಇತ್ತೀಚೆಗೆ ಮತ್ತೊಬ್ಬ ಅಮೇರಿಕನನು ಲಂಡನಿನ ಸೆವೊಯ್ ಹೊಟೇಲಿನಲ್ಲಿ ಉಳಕೊಂಡಿದ್ದಾಗ ಕೆಲವೇ ದಿನಗಳಲ್ಲಿ ೫೦೦ ಪವನುಗಳ ವೆಚ್ಚ ತಗಲುವಷ್ಟು ಟೆಲಿಫೋನ್ ಸಂಭಾಷಣೆಯನ್ನು ಸಾಗಿಸಿದನು. ಸ್ಕಾಟ್ಲೆಂಡಿನಿಂದೊಬ್ಬನು ಓಹಿಯೋ ಸಂಸ್ಥಾನದ ಕ್ಲೀವ್ಲೆಂಡಿನ ತನ್ನ ಮಿತ್ರನೊಡನೆ ೪೮ ನಿಮಿಷ ಮಾತಾಡಿದುದರ ವೆಚ್ಚ ೭೫ ಪವನು.

ಜರ್ಮನಿಯ ರಸ್ತೆಗಳು.

ರೋಮನ್ ನಗರದ ಪ್ರಾಚೀನ ಕಾಲದ ರಸ್ತೆಗಳಂತೆ, ಜರ್ಮನಿಯಲ್ಲಿ, ಶಾಶ್ವತವಾಗಿ ಬಾಳುವಂಥ ರಸ್ತೆಗಳನ್ನು ರಚಿಸಲು ಯತ್ನಗಳಾಗುತ್ತಿವೆ. ಕಳೆದ ವರ್ಷ ಮೂರುವರೆ ಲಕ್ಷ ಜನರು ರಸ್ತೆಗಳ ಕಾಮಗಾರಿಗೆ ನಿಯೋಜಿಸಲ್ಪಟ್ಟಿದ್ದರು. ಈ ವರ್ಷ ಈ ಸಂಖ್ಯೆಯನ್ನು ೮ ಲಕ್ಷಕ್ಕೆ ಹೆಚ್ಚಿಸುವರು.

ಒಂದು ವಿಚಿತ್ರ ಪ್ರವಾದ!

ಬುಖಾರೆಸ್ಟ್ ಬಳಿಯ ಒಂದು ಹಳ್ಳಿಯಲ್ಲಿ, ತರುಣಿಯೊಬ್ಬಳು ೮ ತಿಂಗಳ ಕಾಲ ನಿದ್ದೆ ಹೋದಳಂತೆ. ಐದನೇ ತಿಂಗಳಲ್ಲಿ ಎಚ್ಚರವಾದಾಗ, ಪ್ರವಾದಕ್ಕಾರಂಭ! ತಾನು ನಿದ್ದೆಯಲ್ಲಿ ನಾನಾ ಬಗೆಯಲ್ಲಿ ದೇವವಾಣಿಯನ್ನು ಕೇಳಿದಂತೆ ಹೇಳುವಳು. ಜನರೆಲ್ಲ ಅಲ್ಲಿಗೆ ಗುಂಪುಗಟ್ಟಿ ಹೋಗಿ, ಅವಳ ಹೇಳುವುದನ್ನು ಸಯ-ಭಯಭಕ್ತಿಗಳಿಂದ ಕೇಳುತ್ತಾರೆ. ಇನ್ನು ಕೆಲಕಾಲದಲ್ಲಿ [illegible] ಅಗ್ನಿಯ ಮಳೆಗರೆವುದೆಂದು ಹೇಳುತ್ತಿರುವಳು.

ಪ್ರಚಲಿತ ಸಮಾಚಾರ.

ಬ್ರಿಟಿಷ್ [illegible]

[illegible] ಬ್ರಿಟಿಷ್ ಆರೋಗ್ಯ [illegible] ಸಹಾಯವನ್ನು ಕೂಡಲೇ ಒದಗಿಸುವಂತೆ, ದಾದಿಯರನ್ನೂ ಸೂಲಗಿತ್ತಿಯರನ್ನೂ ಕಳುಹಿಸುವಂತೆ, ಬಡವರಾದರೆ ಅವರಿಗೆ ಹಾಲನ್ನೂ ಒದಗಿಸುವಂತೆ, ಅವಶ್ಯವಿದ್ದಲ್ಲಿ ವೈದ್ಯಕೀಯ ಸಹಾಯವನ್ನು ವಿಮಾನದಲ್ಲಿಯೂ ಕಳುಹಿಸುವಂತೆ ಮಂತ್ರಿಗಳು ಸ್ಥಳೀಯ ಅಧಿಕಾರಿಗಳಿಗೆ ಸರ್ಕ್ಯುಲರನ್ನು ಕಳುಹಿರುವರು. ಹಿಂದೂದೇಶದಲ್ಲಿ?

ಅವನು ಪೂರ್ಣ 'ಜಂಟಲ್ ಮೇನ್'!

ಮೆಕ್ಸಿಕೋ ದೇಶದ ಒಂದು ಊರಲ್ಲಿದ್ದಾನೆ. ಪೂರ್ಣವಾಗಿಯೂ 'ಧನಪುರುಷ'ನಂತೆ!—ಒಬ್ಬ ವಧೂವರ್ಧನ ವೇಯರಿಗೆ ಹೀಗೆ ಪತ್ರ ಬರೆದಿರುವನು:—

"ನಾನು ಪೂರ್ಣವಾಗಿಯೂ ಜಂಟ್ಲ್ ಮೇನ್; ಕಾಫಿ ಬಣ್ಣದ ಕಣ್ಣುಗಳು; ಬಿಳಿ ಹೆಂಗುಸೊಬ್ಬಳು ಬೇಕು; ನನಗೆ ಒಳ್ಳೆ ಶಿಕ್ಷಣವಿದೆ. ಇನ್ನೂರು ವರ್ಷಗಳ ಹಿಂದಣವರೆಗೆ ನನ್ನ ಹಿರಿಯರ ವಂಶಾವಳಿಯ ಧನಿಕರ ಚರಿತ್ರೆಯನ್ನು ಹೇಳಬಲ್ಲೆ", ವೇಯರಿಂದ ಉತ್ತರವಿತ್ತು:— "ನೀವು ಪೂರ್ಣ ಜಂಟ್ಲ್ ಮೇನ್ ಆದರೂ ಆಯಿತು, ನಿಮಗೆ ಒಪ್ಪುವ ಭಾರ್ಯೆ ಇಲ್ಲಿ ರಲಾರಳು!"

ಪ್ರಾಣಿಬಲಿಯು ನಿಷೇಧಿಸಲ್ಪಟ್ಟಿತು!

ಪ್ರತಾಪಗಢದ ರಾಜಾಜ್ಞೆ ಹೊರಟಿದೆ—ಇನ್ನು ಮುಂದೆ ಆ ಸಂಸ್ಥಾನದಲ್ಲಿ ಯಾವ ಬಗೆಯ ಪ್ರಾಣಿಬಲಿಯೂ ನಡೆಯಕೂಡದು. ಅಶೋಕನ ಆಜ್ಞೆಗಳ ನೆನಪನ್ನು ಜನರಿಗೆ ಮಾಡಿ ಕೊಡುತ್ತ, ರಾಜರ ಫರ್ಮಾನು—ಪ್ರಾಣಿಬಲಿಯ ನಿರರ್ಥಕತೆ, ದೋಷಗಳನ್ನು ವಿವರಿಸಿ ಪ್ರಾಣಬಲಿಯ ಬದಲಾಗಿ, ಅಷ್ಟೇ ಬೆಲೆಬಾಳುವ ಬೆಲ್ಲವನ್ನು ಅರ್ಪಿಸುವಂತೆ ಸೂಚನೆ ಕೊಡುತ್ತಿದೆ.

೯೦ ಮಿಲ್ಲಿಯ ವೋಟರರು!

ರಷ್ಯದ ಸೋವಿಯಟ್ಟುಗಳ ಚುನಾವಣೆಯ ಕಾಲ ಸಮೀಪಿಸುತ್ತಿದೆ. ಗ್ರಾಮ—ನಗರ ಮತ್ತು ಪ್ರಾಂತ್ಯ ಈ ಬಗೆಯಾಗಿ ಬೇರೆ ಬೇರೆ ಪ್ರತಿನಿಧಿಗಳ ಚುನಾವಣೆ ನಡೆಯಲಿದೆ. ೧೮ ವಯಸ್ಸಿಗೆ ಮಿಕ್ಕಿದ ಸ್ತ್ರೀಪುರುಷರೆಲ್ಲರಿಗೂ ಮತದಾನದ ಅಧಿಕಾರವಿದೆ. ಹೀಗಾಗಿ ೯೦ ಮಿಲ್ಲಿಯ ವೋಟುಗಳಾಗುವುವು. ಪ್ರಪಂಚದ ಚುನಾವಣೆಗಳ ಇತಿಹಾಸದಲ್ಲಿ ಇದುವೇ ಪ್ರಚಂಡವೆನಿಸುವುದು.

ಬೇಕಾಯಿದೇಶೀರ ಸಂಘಗಳು!

"ಇಂಡಿಯನ್ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಆಕ್ಟಿನ ೧೬ನೇ ಪ್ರಕರಣದ ಅನ್ವಯ, ಬೊಂಬಾಯಿಯ ಈ ಕೆಳಗಿನ ಐದು ಸಂಘಗಳು, ಆ ಪ್ರಾಂತ್ಯದಲ್ಲಿ ಬೇಕಾಯಿದೆಶೀರವೆಂದು ಸಾರಲ್ಪಟ್ಟಿವೆ.

(೧) ಯಂಗ್ ವರ್ಕರ್ಸ್ ಲೀಗ್, (೨) ಲಾಲ್ ಬಾವಟಾ ಗಿರಣಿ ಕಾಮಗಾರ್ ಯೂನಿಯನ್, (೩) ಕಾಮಗಾರ್ ವಾಙ್ಮಯ ಪ್ರಸಾರಕ ಮಂಡಲ (೪) ಮಾರ್ಕ್ಸಿಸ್ಟ್ ಲೀಗ್, (೫) ಮಿಲ್ ಮಜ್ದೂರ್ ಯೂನಿಯನ್ (ಅಹಮ್ಮದಾಬಾದ್) ಮತ್ತು ಇವುಗಳ ಶಾಖೆಗಳು ಸಹಿತ.

ಸಾರ್ವಭೌಮರ ಆಳ್ವಿಕೆ!—

—ಚಲಚ್ಚಿತ್ರವಾಗಿ ಸಿದ್ಧವಾಗುವುದು. 'ಪ್ಲಾನ್' ಬರೆದವರು ಚರ್ಚಿಲ್ ಚತುರ! ಸಾರ್ವಭೌಮರ ೨೫ ವರ್ಷಗಳ ಆಳ್ವಿಕೆಯಲ್ಲೇನೆಲ್ಲ ನಡೆಯಿತು? ಸಿಂಹಾಸನಾರೋಹಣಾನಂತರದ ರಾಜಕೀಯ ವಿದ್ಯಮಾನಗಳು, ಬಜೆಟ್ ಚಳವಳಿ, ಆಕಾಶವಿಮಾನಗಳ ಪ್ರಗತಿ, ಸ್ತ್ರೀಯರ ಪ್ರಗತಿಯ ಕ್ರಮ—ಇದು ಆ ಚಲಚ್ಚಿತ್ರದ ಪೂರ್ವಾರ್ಧ; ಮಹಾಯುದ್ಧವೂ ಉತ್ತರಾರ್ಧದ ಮುಖ್ಯಾಂಶ; ಬರುವ ಮೇ ತಿಂಗಳಲ್ಲಿ ಜರಗಲಿರುವ ರಜತೋತ್ಸವವು ಉಪಸಂಹಾರ. ಫಿಲ್ಮಿನಲ್ಲಿ ೯ ರೀಲುಗಳು; ಒಂದೂವರೆ ಘಂಟೆಯ ಕಾಲ ಪ್ರದರ್ಶಿಸಲ್ಪಡುವುದು.

ನಾಗರಿಕ ಸ್ವಾತಂತ್ರ್ಯ ಸಮ್ಮೇಳನವು—

—[illegible]

[illegible] ಪ್ರತಿನಿಧಿಗಳಾದ [illegible] ಸಂಘದ ಕಾರ್ಯದರ್ಶಿಗಳಾದ ಮಿ. ಎಚ್. ಡಬ್ಲ್ಯು. ಹೋಗ್ ರವರ ನೇತೃತ್ವದಲ್ಲಿ ಹೊರಟಿರುವರು. ಇವರಿಗೆ ದಿಲ್ಲಿಯಲ್ಲಿ ವೈಸರಾಯರ ಧರ್ಮಪತ್ನಿಯವರು ಭೇಟಿಕೊಟ್ಟರು. ವೈಸರಾಯರು ಸಂಚಾರದಲ್ಲಿರುವ ಪ್ರಯುಕ್ತ, ಅವರ ಸಂದೇಶವನ್ನು ಪ್ರೈವೇಟ್ ಸೆಕ್ರೆಟರಿಯವರು ಕೊಟ್ಟರು.

ಹಿಂದೂದೇಶದ ಸಂದರ್ಶನಕ್ಕಾಗಿ—

—ಇಟೇಲಿಯವರಲ್ಲಿ ಇತ್ತೀಚೆಗೆ ವಿಶೇಷ ಆತುರವು ಹುಟ್ಟಿದಂತೆ ತೋರುತ್ತಿದೆ. ಇದೇ ನವಂಬರ ತಿಂಗಳಿಂದ ಫೆಬ್ರವರಿಯೊಳಗೆ ಆರು ಸ್ಟೀಮರುಗಳು ಹೊರಡಲಿವೆ. ಸುಮಾರು ೪೫೦೦ ಮಂದಿ ಬರಬಹುದೆಂಬ ನಿರೀಕ್ಷೆಯಿದೆ. ಇಂಗ್ಲಾಂಡಿನಿಂದಲೂ ಜನರು ಹೊರಡಹತ್ತಿದ್ದಾರೆ. ಇಲ್ಲಿಯ ರೈಲ್ವೆ ಕಂಪೆನಿಗಳಿಗೆ ಕೊಂಚ ಆದಾಯವಿರಬೇಕು.

ಹೊಲಿವುಡ್ ನಗರದ ವಿಮಾ ಕಂಪೆನಿಗಳಿಗೆ—

—ಭಾಗ್ಯೋದಯವಾಗಿದೆ. ಇತ್ತೀಚೆಗೆ ಅನೇಕ ಪ್ರಸಿದ್ಧ ತಾರೆಗಳು ಅಸ್ತಮಾನವಾಗಲು, ವಿಮಾಕಂಪೆನಿಗಳು ಲಕ್ಷಗಟ್ಟಲೆ ಹಣವನ್ನು ಬಾಧ್ಯಸ್ತರ ಮೊಬಲಗಿನ ರೂಪದಲ್ಲಿ ಸಲ್ಲಿಸಬೇಕಾಯಿತು. ಇದರಿಂದ ನಷ್ಟದ ಬದಲಾಗಿ ಲಾಭವಾಗತೊಡಗಿದೆ; ಸಿನೆಮಾ ನಕ್ಷತ್ರಗಳೆಲ್ಲ ಅಧಿಕಾಧಿಕ ಮೊಬಲಗಿಗೆ ವಿಮೆಮಾಡಿಸಲಾರಂಭಿಸಿವೆ. ಗ್ರೇಸ್ ಮೂರೆಯೊಬ್ಬಳೇ ೩೦ ಸಾವಿರ ಪವನಿಗೆ 'ಇನ್ಸೂರ್' ಮಾಡಿಸಿದಳಂತೆ.

ಚುಟ್ಟಿಗೂ ಒಂದು ಸ್ಥಾನಕೊಡಿ!

ಹೀಗೆಂದು ಚುಟ್ಟಾ ಕಂಪೆನಿಯವರ ನಿವೇದನವು! ಸಿನೆಮಾಗಳಲ್ಲಿ ಸಿಗರೇಟುಗಳನ್ನು ಧನಪುರುಷರ ಪ್ರೀತಿಯ ಧೂಮ್ರಪಾನವಾಗಿ ಪ್ರದರ್ಶಿಸುವರು; ಚುಟ್ಟಾ ಸೇದುವವರೆಲ್ಲ ಕಳ್ಳರಾಗಿಯೋ ಧೂರ್ತರಾಗಿಯೋ ತೋರಿಸಲ್ಪಟ್ಟಿದ್ದಾರೆ. 'ಧನಪುರುಷರ ಪಾತ್ರಗಳ ಬಾಯಲ್ಲಿಯೂ ಚುಟ್ಟಕೊಡಿರಿ!' ಎಂದು ಅವರ ವಿನಂತಿ.

ಇಟೇಲಿಯ ಆರ್ಥಿಕ ಪರಿಸ್ಥಿತಿ!

ಇಟೇಲಿಯ ಆರ್ಥಿಕ ಸುಧಾರಣೆಯು ತೃಪ್ತಿಕರವಾಗಿ ಸಾಗಿದೆಯೆಂದು, ಅಲ್ಲಿಯ ಅಧ್ಯಕ್ಷರು ಅಭಿಪ್ರಾಯಪಡುವರು. ಅರಿವೆ ವ್ಯಾಪಾರವೂ, ಮೀನು ಮಾಂಸಗಳ ವ್ಯಾಪಾರವೂ ಸೇಕಡಾ ೫೦ರಷ್ಟು ಸುಧಾರಿಸಿದಂತೆ ವರದಿಯಿದೆ. ಕಾರ್ಖಾನೆಗಳಲ್ಲಿ ಕೂಲಿಗಾರರ ಕೆಲಸದ ಅವಧಿಯನ್ನು ೧೨ ಘಂಟೆಗಳಿಂದ ೮ ಘಂಟೆಗಳಿಗೆ ಇಳಿಸಿರುವರು. ಇದರಿಂದ ಮಜೂರರು ಉತ್ಕೃಷ್ಟ ಸೇವೆಯನ್ನು ಅರ್ಪಿಸುತ್ತಿರುವುದು ಅವಲಕ್ಷ್ಯದ ವಿಷಯ. ಸಾರ್ವಜನಿಕ ಕಾಮಗಾರಿಗಳ ಯೋಜನೆಗಳೂ ಹೆಚ್ಚಿನವಾಗಿದ್ದು, ನಿರುದ್ಯೋಗವು ಬಹುಮಟ್ಟಿಗೆ ಕಡಿಮೆಯಾಗಿದೆ. ವ್ಯಾಪಾರದಲ್ಲಿ ಇಟೇಲಿಯು ಈಗ ಸಾಧಿಸುತ್ತಿರುವ ಪ್ರಗತಿಯೆಂದರೆ ದಪ್ಪ ವಿಚಾರ. ಈ ವಿಭಾಗದಲ್ಲಿ ಇಟೇಲಿಯು ಹೆಚ್ಚಿಗೆ ಕೃತಕೃತ್ಯವಾದುದಿಲ್ಲ. ಕಾರಣ, ಇತರ ಜನಾಂಗಗಳೂ ಸುಂಕದ ಗೋಡೆಗಳನ್ನು ಕಟ್ಟಿ, ತಂತಮ್ಮ ರಾಜ್ಯಗಳ ಕೈಗಾರಿಕೆಗಳ ಅಬಾಧಿತ ಬೆಳವಣಿಗೆಗೆ ಯತ್ನಿಸುತ್ತಿವೆ.

ಹಿಟ್ಲರರ ಗರ್ಜನೆ.
'ಜರ್ಮನಿಯೊಳಗೇ ಶತ್ರುಗಳಿರುವರು!'

ಇಂದಿನ ಜರ್ಮನಿಯ ಸರ್ವಾಧಿಕಾರಿ ಹಿಟ್ಲರರು, ೧೯೨೩ರಲ್ಲಿ ಅಧಿಕಾರಕ್ಕಾಗಿ ತೀವ್ರ ಹೋರಾಟವನ್ನಾರಂಭಿಸಿದಂದಿನಿಂದ ಮಡಿದ ೨೪೫ ನಾಝಿಗಳ ಸ್ಮರಣಾರ್ಥವಾದ ದಿನವೆಂದು—ಇದೇ ತಾ. ೯ರಲ್ಲಿ ಜರ್ಮನಿಯಲ್ಲೆಲ್ಲ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಇರಿಸಿದ್ದರು. ಮ್ಯೂನಿಚ್ ನಗರದಲ್ಲಿ ೧೫೦೦೦ ಸೈನಿಕರ ಕವಾಯತುಗಳಿದ್ದುವು. ಹರ್ ಹಿಟ್ಲರರು ಅವರನ್ನು ಕುರಿತು, ಈ ಕೆಳಗಿನಂತೆ ಸಿಂಹನಾದವನ್ನು ಮಾಡಿರುವರು:—"ಇಂದು ಜರ್ಮನಿಯೊಳಗೇ ನಾವು ಪ್ರತಿಯೊಂದು ವಿಧದ ಶತ್ರುಗಳಿಂದ ಆವರಿತರಾಗಿರುವೆವು. ಆದರೆ, ನಿಮ್ಮ ದೃಢನಿಶ್ಚಯದಿಂದ ನಾವು ಅವರನ್ನು ಮುರಿಯುವೆ!"

ಶಾಲಾಬಾಲಕಪತ್ರಿಕೆಯವರ [illegible] ನಾಳೆ (ತಾ. ೧೬—೧೧—೩೪) ಆಚರಿಸಲ್ಪಡುವುದು.

ತುಂಡು ಸುದ್ದಿ.

[illegible] 'ಅರ್ಲ್ ಆಫ್ [illegible]' [illegible] ಕರಣ ಮಾಡಲಾಗಿದೆ.

[illegible] ಸಂಸ್ಥಾನದಲ್ಲಿ ತಯಾರಿಸಲ್ಪಡುತ್ತಿರುವ ಬೆಂಕಿಕಡ್ಡಿಗಳನ್ನು ಬರೋಡಾ ಸಂಸ್ಥಾನದ [illegible] ರಾಜ್ಯದೊಳಗೆ ಬಾರದಂತೆ ಪ್ರತಿಬಂಧವಿರಿಸಿದೆ.

೩೬ ಟನ್ ಭಾರವನ್ನು ಹೊತ್ತುಕೊಂಡು, ತಾಸಿಗೆ ೧೮೪ ಮೈಲುಗಳ ವೇಗದಲ್ಲಿ ಹಾರುವ ವಾಯುವಿಮಾನವನ್ನು ಫ್ರೆಂಚರು ತಯಾರಿಸುತ್ತಿರುವರು. ಅದರಲ್ಲಿ ೩೦ ಪ್ರಯಾಣಿಕರಿಗೆ ಸ್ಥಳಾವಕಾಶವಿರುವುದು.

ಅಖಿಲಭಾರತ ಶಿಕ್ಷಣಪರಿಷತ್ತು ಇದೇ ತಾ. ೨೬ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ವೈಸ್ ಛಾನ್ಸಲರಾದ ಬಾಬೂ ಶ್ಯಾಮಪ್ರಸಾದ ಮುಕರ್ಜಿಯವರ ಅಧ್ಯಕ್ಷತೆಯಲ್ಲಿ, ದಿಲ್ಲಿಯಲ್ಲಿ ಜರಗುವುದು.

ತೃಪ್ತಿಯಿಲ್ಲದ ಸಂದೇಹಾಸ್ಪದ ರೀತಿಯಲ್ಲಿ ಸುಳಿಯುತ್ತಿದ್ದ ಸುಮಾರು ನಾಲ್ಕು ಮಂದಿಯನ್ನು, ದೀಪಾವಳಿ ಹಬ್ಬದ ಸಮಯದಲ್ಲಿ ಮುಂಬಯಿಯ ಪೋಲೀಸರು ದಸ್ತಗಿರಿ ಮಾಡಿರುವರು.

ದಿಲ್ಲಿಯಲ್ಲಿ, ವೈಸರಾಯರ ಭವನದೆದುರಲ್ಲಿ ತಿರುಗುತ್ತಿದ್ದ ಬಂಗಾಳೀ ಯುವಕನೊಬ್ಬನನ್ನು ದಸ್ತಗಿರಿಮಾಡಿ, ಮುನಿಸಿಪಲ್ ಕಮಿಶನರಾದ ಶ್ರೀ ಮುಖರ್ಜಿಯವರ ಹೊಣೆಯಲ್ಲಿ ಬಿಡುಗಡೆಮಾಡಿದರು.

ಹದಿನೈದು ಲಕ್ಷ ರೂಪಾಯಿಗಳ ವೆಚ್ಚದಿಂದ, ೫೦೦ ಹಾಸಿಗೆಗಳಿರುವ ಒಂದು ಆಸ್ಪತ್ರೆಯನ್ನು, ಸಿಲೋನಿನ ಕ್ಯಾಂಡಿನಗರದಲ್ಲಿ ಕಟ್ಟಿಸುವರು.

ಪಂಡಿತ ಜವಾಹರಲಾಲರನ್ನು ಯಾವ ಶರ್ತಗಳಿಗೂ ಒಳಪಡಿಸದೆ ಬಿಡುಗಡೆ ಮಾಡುವುದು ದೇಶಹಿತ ದೃಷ್ಟಿಯಿಂದ ಹಿತಕರವೆಂದು ಶ್ರೀ ಸಿ. ಎಫ್. ಎಂಡ್ರ್ಯೂಸ್, ಮಿ. ಜಿ. ಪಿ. ಗೂಚ್ ಮತ್ತು ಮಿ. ಎಚ್. ಡಬ್ಲ್ಯು. ನೆವಿನ್ಸನ್, ಇವರ ಸಹಿಯಿರುವ ವಿನಂತಿಪತ್ರವು ಇಂಗ್ಲೆಂಡಿನ "ಮೆಂಚೆಸ್ಟರ್ ಗಾರ್ಡಿಯನ್" ಪತ್ರಿಕೆಯಲ್ಲಿ ಪ್ರಕಟವಾಗಿದೆ.

ಬ್ರಿಟಿಷ್ ಶಿಲ್ಪಿಗಳ ಸಂಸ್ಥೆಯು ಹೊಸ ಕಟ್ಟಡವು ಒಂದೂವರೆ ಲಕ್ಷ ಪವನು ವ್ಯಯ ಮಾಡಿ ಲಂಡನ್ನಿನಲ್ಲಿ ರಚಿಸಲ್ಪಟ್ಟಿದ್ದನ್ನು, ನಮ್ಮ ಸಾರ್ವಭೌಮರು ತೆರೆದರು.

ಬ್ರಿಟಿಷ್ ಇಂಡಿಯದ ರೈಲ್ವೆಯಲ್ಲಿ ಈ ವರ್ಷ ಆದಾಯವು ಹೆಚ್ಚಿದಂತೆ ಕಂಡುಬರುತ್ತಿದೆ.

ಹಿಂದೂದೇಶದ ಸರ್ವೀಸುಗಳಲ್ಲಿ ಬ್ರಿಟಿಷರ ಪಾಲ್ಗೆಯು ಸೇಕಡಾ ೬೦ಕ್ಕಿಂತ ಕಡಿಮೆ ಇರಬಾರದೆಂದು ಡಚೆಸ್ ಆಫ್ ಅಥೊಲ್ ಎಂಬ ಶ್ರೀಮಂತೆಯ ಭಾಷಣ, "ಇಂಡಿಯಾ ಡಿಫೆನ್ಸ್ ಲೀಗ್" ಎಂಬ [illegible] ಸಭೆಯಲ್ಲಿ!

'ಬಡವರ ಬಂಧು' ಮಾಸಪತ್ರಿಕೆಯ ಸಂಬಂಧವಾದ ಕಾರ್ಯಾರ್ಥ ಮುಂಬಯಿಗೆ ಬಂದಿದ್ದ ಅದರ ಉಪಸಂಪಾದಕರನ್ನು ಇದೇ ತಾ. ೬ ೧೧—೩೪ನೇ ಸಂಜೆ ಘಂಟೆ ೪ಕ್ಕೆ ಮುಂಬಯಿಯ 'ಕರ್ನಾಟಕ ಫ್ರೆಂಡ್ಸ್ ಯೂನಿಯನ್'ನವರು ಡಾ| ರಾ| ರಾ| ಕೆ. ಬಿ. ರಾಮರಾಯರ ಅಧ್ಯಕ್ಷತೆಯಲ್ಲಿ ನೂರ್ ಮಹಾಲಿನಲ್ಲಿ ಸಭೆ ಜರಗಿಸಿ ಫಲಾಹಾರಾದಿ ಸತ್ಕಾರಗಳಿಂದ ಉಪಚರಿಸಿದರು. ಶ್ರೀಯುತರುಗಳಾದ ಎಮ್. ಈಶ್ವರ, ಯಸ್. ಕೆ. ಬಂಗೇರ, ಗೋಪಾಲ ಕೃಷ್ಣನ್ ಮೊದಲಾದವರು ಅತಿಥಿಗಳ ಕುರಿತು ಪ್ರಶಂಸಾ ಭಾಷಣ ಮಾಡಿದ ತರುವಾಯ ಶ್ರೀ ಬಿ. ನರ್ಸಪ್ಪನವರು ಸ್ವವಿಷಯವಾಗಿಯೂ ಸಂಸ್ಥೆಯ ಉದ್ಧಾರ ವಿಷಯವಾಗಿಯೂ ಮಾತನಾಡಿದ ಬಳಿಕ ಅಧ್ಯಕ್ಷರ ವಿಷಯಗರ್ಭಿತ ಭಾಷಣವಾಗಿ ಸಭೆಯಂತ್ಯವಾಯಿತು.

ಬಿಹಾರ್ ಪುನರ್ನಿರ್ಮಾಣ ಕಾರ್ಯದಲ್ಲಿ ಸಹಕಾರಿಯಾಗಲು ಡಾ| [illegible] ಪಾಟ್ನಕ್ಕೆ ಬಂದು ತಲಪಿರುವರು.

ನೇಪಾಲದ ಪುನರ್ರಚನಾ ಕಾರ್ಯವು ಈಗಾಗಲೇ ಸೇಕಡಾ ೭೫ರಷ್ಟು ಪೂರೈಸಿದಂತಾಯಿತೆಂದು ತಿಳಿದು ಬರುತ್ತಿದೆ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar

For terms and other particulars please apply to—

The Divisional Manager
The South Indian General Assurance Co. Ltd.
64, III Cross Road Srirampur Extn Malleswaram Post, BANGALORE
OR
The Managing Agents,
The S I G. A Co Ltd
55, Poonamallee High Road, Kilpauk MADRAS.

Shiromani Narayanacharya,
Chowkhamba, Benares City

ಶಾಸ್ತ್ರಗಳೇ ಪೂರ್ವಿಕರು ಅರೋಗ್ಯರೇ, ಅಥವಾ ಈಗಿನವರೇ? ರಾಮುಬ್ಬಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಹಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಕ್ಕಿ ಪ್ರಮಾಣದ ಕಂಠಿಸರ 1ಕ್ಕೆ ಅಣೆ 10ರಿಂದ ರೂ 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ 3ರಿಂದ ರೂ 50ರ ವರೆಗೆ. ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಅಣೆ 4ರಿಂದ ರೂಪಾಯಿ 10 ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ 2ರಿಂದ 30ರ ವರೆಗೆ 12 13–14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷಿ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕೆಟಲೋಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ಪಿಕ್ಚರ್ ಪಟ 1 ಕಾಶೀ ನಕ್ಷೆ 1 ಕೆಟಲಾಗ ಸಹಿತ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬೆನಾರಸ್ (ಕಾಶಿ)

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ ಅರುಚಿ ಅಗ್ನಿಮಾಂದ್ಯ ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು ನಿರೋಗಿಗಳೂ ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು

ಬಾಟ್ಲಿ 1ರ ರೂ 2–0–0 ಬಾಟ್ಲಿ 3ರ ರೂ 5–12–0.

ಮೇಹ ಕುಠಾರ:—ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಿಂದ ಧಾತು ಹೋಗುವುದು ಮೂತ್ರ ಆಗಾಗ ಒಂದು ಕಡಿಯಲ್ಲಿ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರರೋಗದ ರೋಗಗಳಿಗೆ ಸಿದ್ಧೌಷಧ

ಡಬ್ಬಿ 1ಕ್ಕೆ ರೂ 2–8–0 ಡಬ್ಬಿ 3ರ ರೂ 7–0–0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಇದು ಬಾಣಂತಿಯರಿಗೆ ಅತ್ಯುತ್ತಮ ಹಿತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ ಅಗ್ನಿಮಾಂದ್ಯ, ಅರುಚಿ, ನಂಜಿನ ಜ್ವರ, ರಕ್ತಹೀನತೆ ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು ಬಾಣಂತಿಯರು ಪುಷ್ಟಿಹೊಂದಿ ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು

ಬಾಟ್ಲಿ 1ಕ್ಕೆ ರೂ 1–8–0 ಬಾಟ್ಲಿ 2ರ ರೂ. 3–0–0

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ಪರಿವಾರ ದೊಡ್ಡದಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ನಡೆಯುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುಖವಾಗುವುದಿಲ್ಲ ಕೂಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ದಾಕ್ಟರ ಬಿ ಎ ವೈದ್ಯ, ಎಲ್ ಸಿ ಪಿ ಎಸ್ ಕೊಡಮಾಡಿರುವ ಕಾಣೇ—ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೧–೦–೦ ವಿ ಪಿ ಅಣೆ ೮.

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C

"ಮಿತಸಂತತಿ"—ಮಿತಸಂತತಿ ಎಂದು ಹಲುಬಿದರೆ ಫಲವಿಲ್ಲ,

ಪ್ರೊರೆಸ್ ಕೇಪ್ ಪೆಸರಿ

ವೆಂಬ ಈ ಅಮೂಲ್ಯ ಚೀಲವನ್ನುಪಯೋಗಿಸುವುದರಿಂದ 'ಮಿತಸಂತತಿ'ಯು ಸೂಕ್ತವು ಪರಿಪಾಲಿಸಲ್ಪಡುವುದು ಈ ಚೀಲದ ಉಪಯೋಗವನ್ನು ಪ್ರಸಿದ್ಧ ವೈದ್ಯರೂ ಡಾ। ಮೇರಿಸ್ಟೋಪರೂ ಪರೀಕ್ಷಿಸಿ ಜಗತ್ತಿಗೆ ಶಿಫಾರಸು ಮಾಡಿರುವರು

1 ಅಣೆ ಅಂಚೆ ಚೀಟು ರವಾನಿಸಿದರೆ ಕೆಟಲಾಗ ಕಳುಹಿಸುತ್ತೇವೆ

ಪ್ರೊರೆಸ್ ಚಿನೊಸೊಲ್ ಸೊಲ್ಯುಬ್ಲ್ Prorace Chinosal Solubles)

ಎಂಬ ದನ್ನು ಇದರೊಡನೆ ಉಪಯೋಗಿಸಿ ಇದು ದ್ರಾವಕದಂತಿದೆ

ಪ್ರೊರೆಸ್ ಎಂಬ ಹೆಸರ ಕೈದು ಸರ್ವೋತ್ಕೃಷ್ಟ ಇದರ ಕ್ರಯ ಒಂದು ಟೆಸ್ಸಿಗೆ ರೂ 2–0–0 (ಹನ್ನೆರಡು ಬಾಟ್ಲಿಗಳಿದೆ)

ಮುಖ್ಯ ಪ್ರವರ್ತಕರು.—The Pioneer Book Depot,
378 87a Esplanade Road, Madras

ಮಂಗಳೂರ ಏಜಂಟರು.—
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ಮಂಗಳೂರು

ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ

ತಯಾರಿಸುತವರು:— ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—
ಕುಂತಳ ಕೌಮುದಿ ತೈಲ,
ವೆಂಕಟೇಶ್ ಅಕ್ಷತ್ತಿ ಏಜಂಟ, ಮಂಗಳೂರು



ಸ್ಕಿಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶರಿಗೂ ಜನಕೋಟಿಗೂ ಇದುವೇ ರಾಜಮದ್ದು

ಮಲೇರಿಯ, ಇನ್‌ಫ್ಲುಯಂಜಾ ಮತ್ತು ಜ್ವರಗಳನ್ನು ಗುಣಪಡಿಸುತ್ತದೆ

ಮೆಡನ್ ಸನ್ಸ್ ಎಂಡ್ ಕೋ.,
ಬೊಂಬಾಯಿ, 2

MADON SONS & CO
PHARMACEUTICAL CHEMISTS, BOMBAY

[illegible]

[illegible] ಯವನ್ನು [illegible] ವರು ರೀತಿಯ [illegible] ನನ್ನ ಹೃದಯ [illegible] ಬೇರೊಂದ ವಿಚಾರ [illegible] ನನ್ನ ಕರ್ತವ್ಯ. ಆದರೆ [illegible] ಎಂದರೆ ಹೃದಯದಲ್ಲಾದರೂ [illegible] ಭಾವನೆಯು ಅಂಕುರಿಸುತ್ತದೆಂದು ನಾನು [illegible] ಯುಳ್ಳವನಿದ್ದೇನೆ. ಅವರು ಅದನ್ನು ಹೇಳಲು ಅಂಜುವರು. ಇದೇಕೋ ನನಗೆ ತಿಳಿಯಲಾಗದು. [illegible] ನನ್ನ ಮಾತನ್ನು ಈ ಲೇಖನವನ್ನು ಆದಿಯಿಂದ ಅಂತ್ಯದ ವರೆಗೆ ಓದುವಾಗ, ವಿಚಾರಿಸುವಾಗ ಎಚ್ಚರ ಧರಿಸಬೇಕು.

ನಾನು ಧರ್ಮದ, ಪವಿತ್ರತೆಯ ಮುಂದಿನ ಮುಂತಾದ ಅವತಾರಿಯಲ್ಲ. 'ಸ್ವಯಂ ತೀರ್ಣ ಪರಾನ್ ತಾರಯತಿ' ಎಂಬ ನ್ಯಾಯ. ತಾನೂ ಕೆಟ್ಟು ಅನ್ಯರನ್ನು ಕೆಡಿಸುವುದೇ ಸಹಶಿಕ್ಷಣದ ದುಷ್ಪರಿಣಾಮವೆಂದು ನನಗನ್ನಿಸುತ್ತಿರುವ ಕಾರಣ ಈ ಲೇಖನವನ್ನು ಬರೆಯಲು ಉಪಕ್ರಮಿಸಿರುವೆ.

ಸಹಶಿಕ್ಷಣವೆಂದರೆ ಹೆಣ್ಣು ಗಂಡು ಸಹಿತ ಒಂದೆಡೆಯಲ್ಲಿ ವಿದ್ಯಾಭ್ಯಾಸ ಮಾಡುವುದೆಂದು ನನ್ನ ಅರ್ಥ. ಹೆಣ್ಣು ಗಂಡು ಎಂಬುದು ವ್ಯಾಕರಣ, ಸಾಹಿತ್ಯ, ದೇಹಶಾಸ್ತ್ರ, ಮಾನಸಿಕ, ಶಾಸ್ತ್ರ ಮೊದಲಾದ ಶಾಸ್ತ್ರಕಲಾಪಾರಂಗತರ ದೃಷ್ಟಿಯಿಂದಲೂ ಬೇರೆ ಗುಣದವುದೆಂದು ಅನೇಕ ಪ್ರಾಜ್ಞರ ಮಾತು. ಹೆಣ್ಣಿಗೂ ಗಂಡಿಗೂ ಪರಸ್ಪರ ಅನೇಕ ವಿರುದ್ಧಭೇದಗಳು ಇವೆ ಎಂಬುದು ಹುಟ್ಟಿನ ಶೋಧನೆ ಮಾಡಿದರೆ ತಿಳಿಯುತ್ತದೆ. ಸೃಷ್ಟಿಕರ್ತನ ಉದ್ದೇಶವು ಬೇರಾಗಿರುವಾಗ ನಾವು, ಎಂದರೆ ಪಾಶ್ಚಾತ್ಯ ಶಿಕ್ಷಣ ಪಡೆದ ನವಸುಧಾರಕರು ಈ ಸೃಷ್ಟಿ ನಿಯಮಕ್ಕೆ ವಿರುದ್ಧವಾಗಿ ವರ್ತಿಸುವುದು ರಾಷ್ಟ್ರದ ನಾಶಕ್ಕೆ, ಧರ್ಮದ ಅಧಃಪತನಕ್ಕೆ ಪ್ರಧಾನ ಕಾರಣವೆಂದು ಒತ್ತಿ ಬರೆಯುವೆ.

ನಾನು ಹಳ್ಳಿಯ ಅಧ್ಯಾಪಕನಾಗಿದ್ದ ದಿನಗಳಲ್ಲಿ ಪ್ರಾಥಮಿಕ ಶಾಲೆಗಳ ಮಟ್ಟಿಗೆ ಸಹಶಿಕ್ಷಣವನ್ನು ಸಮರ್ಥಿಸುವ ಮಾತನ್ನು ಆಡಿರುವೆ. ಆದರೆ ನನ್ನ ವಿಚಾರಕ್ಕೆ ತದನಂತರ ಬಂದ ಮರ್ಮಭೇದಕ ವಿಚಾರಗಳು ಪ್ರಾಥಮಿಕ ಶಾಲೆಗಳೂ ಹುಡುಗಿಯರಿಗೆ ಹುಡುಗರಿಂದ ಬೇರೆ ಇರುವುದು ಪ್ರಶಸ್ತವೆಂದು ಅನ್ನಿಸಹತ್ತಿ ಹಿಂದಿನ ಅಭಿಪ್ರಾಯವನ್ನು ತಿದ್ದಿಕೊಳ್ಳಬೇಕಾಯಿತು. ಕೆಲವು ಕಡೆಗಳಲ್ಲಿ ಹುಡುಗರ ಶಾಲೆಯಲ್ಲಿ ಕಲಿಯುತ್ತಿರುವ ಕಲಿಸುತ್ತಿರುವ ಹುಡುಗಿಯರ ಮೇಲೆ ಮಾಡಿರುವ ಅತ್ಯಾಚಾರಗಳು ನನ್ನ ತಿಳಿವಿಗೆ ಬಂದಂದಿನಿಂದ ವಿದ್ಯಾ ಇಲಾಖೆಯ ಡೈರೆಕ್ಟರರಿಗೆ ಪ್ಯಾರಿಗೆ ತರ [illegible] ಬಂದು ಹೋಗುವೆ.

[illegible] ಅಭ್ಯಾಸಾರ್ಥ [illegible]

ಸ್ತ್ರೀಯರು ಯಾವ ಪ್ರಕಾರ ನಡೆವರೋ ಅಂತೆ ಲೋಕವು ಅನುಸರಿಸುವುದೆಂದು ಗೀತಾಚಾರ್ಯ ಶ್ರೀ ಕೃಷ್ಣನು ಹೇಳಿದ ಕಾಲವು ಕಳೆಯಿತು. ಅಂತೆ ಆಚಾರವನ್ನು ಗ್ರಾಹ್ಯ ಮಾಡಿಸುವ ಆಚಾರ್ಯರು ವಿದ್ಯಾಸಂಸ್ಥೆಗಳಲ್ಲಿ ಎಷ್ಟು ಜನರಿದ್ದಾರೆ? ಸತ್ಯಶೋಧಕ ಮಹಾತ್ಮಾ ಗಾಂಧಿಯವರ ಸಬರ್ಮತಿ ಆಶ್ರಮದಲ್ಲಿ ನಡೆದ ವಿಚಾರವು ಮಲಿನವಾಗದಲಿಕ್ಕಿಲ್ಲ. ದೃಷ್ಟಿಗೆ ಗೋಚರವಾಗದುದೊಂದು. ಅಂಥ ಸಂಸ್ಥೆಗಳಲ್ಲಿ ಗೋಪ್ಯ ಪಾಪವು ಎಷ್ಟೋ? ನೀಲಸಾಗರಿಯಂತೆ ವೇಷ ತೊಡುವವರು ಕಡಿಮೆಯೆ?

ಸ್ತ್ರೀಯ ಚರ್ಮ ದೇಹದ ಬೆಳವಣಿಗೆ, ಮಾನಸಿಕ ವೃದ್ಧಿ ಮೊದಲಾದುವು ಪುರುಷನಿಂದ ಭಿನ್ನವಾಗಿವೆ. ಸ್ತ್ರೀಯು ಸಂಪೂರ್ಣ ಮಾತೆಯಾಗಲು ಜನ್ಮ ತಾಳಿದವಳು. ತನ್ನ ಕರ್ತವ್ಯವನ್ನು ಬಿಟ್ಟು, ಗಂಡುಭೀರುಗಳಾಗುವುದು ಆಧುನಿಕ ಸಹಶಿಕ್ಷಣದ ಪರಿಣಾಮ. ಈಗಿನ ಶಿಕ್ಷಣ ಪರಿಣಾಮವಾಗಿ ಪೂಜ್ಯಮಾತೆಯ ಸ್ಥಾನದಿಂದ ಉರುಳಿ ಪತಿತರಾಗುವುದೇ ಸ್ತ್ರೀಯರಿಗೆ ಪ್ರಿಯವಾಗಬೇಕೆ? ಹುಡುಗಿಯು ಸಾಧಾರಣ ೧೩, ೧೪, ೧೫, ವರ್ಷಕ್ಕೆ ಪುಷ್ಪವತಿಯಾಗುವಳು. ಇಂಥ ಪ್ರೌಢೆಯು ತಾರುಣ್ಯದಿಂದ ತುಂಬಿ ತುಳುಕುತ್ತಿರುವ ಯುವಕರೊಡನೆ ಒಂದೇ ಸಂಸ್ಥೆಯಲ್ಲಿ ಪಠಿಸುವ ದಿನಗಳಲ್ಲಿ ಪ್ರಣಯ ನಾಟಕದ ಪಾತ್ರವರ್ಗವನ್ನು ವಹಿಸುವುದು ಆಶ್ಚರ್ಯವೆ? ನೀತಿಧರ್ಮದ ವಾತಾವರಣವಿಲ್ಲದ ಇಂಥ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಧರ್ಮ ಉಪಾಧ್ಯಾಯರಿಗೆಂದು ಹೇಳಲು ನಿದರ್ಶನಗಳಿಲ್ಲವೆ? ವಿದ್ಯಾರ್ಥಿನಿಯರನ್ನು ದಾರಿ ಹಿಡಿಸಿದ ಉಪಾಧ್ಯಾಯ ಮಹಾಶಯರ ಸಂಚಯ ಕೆಲವರಿಗಾದರೂ ಇರಬಹುದು. ಪ್ರೌಢರಾಗಿ ಯುವಕರಿಂದ ಸುತ್ತಲೂ ಸುತ್ತುವರಿಸಲ್ಪಟ್ಟ ಯುವತಿಯರನ್ನು ಸ್ವಾಭಾವಿಕವಾದ Sex urge ತಾರುಣ್ಯದ ಓಜನ್ನು ತಡೆದು ಧರ್ಮ ಮಾರ್ಗದಲ್ಲಿ ನಡೆವಂತೆ ಆಚಾರವನ್ನು ಬೋಧಿಸಿ ಅದರಂತೆ ತಾನು ನಡೆವ ಅಧ್ಯಾಪಕರು ಸಹಶಿಕ್ಷಣದ ಪ್ರವರ್ತಕರಾಗಿರುವರೆಂದು ನಾನು ನಂಬುವುದಿಲ್ಲ. ಆದಾಗಿದ್ದರೆ ಬ್ರಹ್ಮಚರ್ಯ ಪ್ರತಿಷ್ಠಾಪನಾಚಾರ್ಯರಾದ ಶ್ರೀ ದಯಾನಂದ ಸರಸ್ವತಿಗಳು ಸ್ತ್ರೀಯರಿಗೆ ಪುರುಷರಿಂದ ಬೇರೆಯಾದ ವಿದ್ಯಾಸಂಸ್ಥೆಗಳನ್ನು ನಿರ್ಮಿಸಬೇಕೆಂದು ಘಂಟಾಘೋಷವಾಗಿ ಹೇಳಿದ್ದಾರೆ. ಈ ಕಾರಣ ಸಮಾಜ ಸುಧಾರಕರಲ್ಲಿ ಅಗ್ರಗಣ್ಯರೆನಿಸಿಕೊಂಡ ಶ್ರೀ ಸ್ವಾಮಿ ಶ್ರದ್ಧಾನಂದರು ಹುಡುಗರಿಗಾಗಿ ಸ್ಥಾಪಿಸಿರುವ [illegible] ಬೇರೆ ಬೇರೆ ಕಡೆಗಳಲ್ಲಿ ಕನ್ಯಾ ಮಹಾ ವಿದ್ಯಾಲಯಗಳು ಸ್ಥಾಪಿಸಲ್ಪಟ್ಟಿವೆ.

ಈಗಿನ ವಿಚಾರ ಏನು ಹೇಳಲಿ! ಯುವಕರಿಗೆ ವಿದ್ಯಾಭ್ಯಾಸದಲ್ಲಿ ಏಕಾಗ್ರತೆ ಬರುವಂತೆ ಪುಷ್ಪಗಳ ಉನ್ಮಾದ ಪ್ರದರ್ಶನವಾಗುತ್ತಿದೆ. ಸಾಧಾರಣವಾಗಿ ಎಲ್ಲಾ ವಿದ್ಯಾ ಸಂಸ್ಥೆಗಳು, ಹಣ ಗಳಿಸುವ ಒಂದೇ ದೃಷ್ಟಿಯಿಂದ ಸಹಶಿಕ್ಷಣದ ಸಾಧಕವನ್ನು ತೋರಿಸುತ್ತಿವೆ. ಸ್ತ್ರೀಯರಿಗೆ ಪ್ರತ್ಯೇಕ ಸಂಸ್ಥೆಗಳನ್ನು ನಡೆಯಿಸಲು ಹಣ ಹೆಚ್ಚಿಗೆ ವೆಚ್ಚವೆಂದು. ಆರ್ಥಿಕ ಮಂತ್ರಿಯು ಸಾರಬಹುದು. ಅನಾಚಾರ ಅತ್ಯಾಚಾರಕ್ಕೆ ಪ್ರಣಯ ಗೀತೆಗಳಿಗೆ ತವರುಮನೆ ಮಾಡುವ ಇಂಥ ಸಂಸ್ಥೆಗಳಿರುವುದಕ್ಕಿಂತಲೂ ಅನಾಗರಿಕರಾಗಿರುವುದು ಮೇಲೆಂದು ನನಗನ್ನಿಸುತ್ತಿದೆ. ಹೆತ್ತ ಜನನಿ ಜನಕರು ತಮ್ಮ ಹಸುಗೂಸುಗಳನ್ನು ಈ ತೆರನಾಗಿ ವಿಷಯದಲ್ಲಿ ವ್ಯಾಮೋಹವನ್ನು Sex urgeನ್ನು ಮೇಳೆಯಿಸುವಂತೆ ವಾತಾವರಣವನ್ನು ಕಲ್ಪಿಸುವ ಸಂಸ್ಥೆಗಳಿಗೆ ಎಂತು ಕಳುಹಿಸಲು ಮನಬರುವುದೋ! ಹೆತ್ತ ತಾಯಿಗೆ ತನ್ನ ಮಗಳು ತನ್ನಂತೆ ಆದರ್ಶಮಾತೆಯಾಗಬೇಕೆಂಬ ಕಾಂಕ್ಷೆ ಇರದಾಯಿತೆ? ಈ ತೆರನಾದ ಶಿಕ್ಷಣವನ್ನಿತ್ತು ತನ್ನ ಮಗಳು ಗಂಡುಭೀರು ಆಗುವುದು ಹೆತ್ತ ಅಪ್ಪೆಗೆ ಒಪ್ಪಿಗೆಯೆ? ಆರ್ಥಿಕ ಸ್ವಾತಂತ್ರ್ಯವಂತೆ. ಧರ್ಮಕ್ಕೆ ತಿಲಾಂಜಲಿ ಕೊಟ್ಟ ಆರ್ಥಿಕ ಸ್ವಾತಂತ್ರ್ಯಕ್ಕೆ ಧಿಕ್ಕಾರವಿರಲಿ!

ಮಿಸ್ ಮೇಯೋ ರಾಜ್ಯವಾದ ಅಮೇರಿಕ, ಇಂಗ್ಲೆಂಡು, ಹೋಲೆಂಡು ಇತ್ಯಾದಿ ನವನಾಗರಿಕ ರಾಜ್ಯಗಳ ಶಿಕ್ಷಣಾಲಯಗಳಲ್ಲಿ ನಡೆವ ಅತ್ಯಾಚಾರವನ್ನು ನಮ್ಮವರು ತಿಳಿದು ಇನ್ನಾದರೂ ಸಹಶಿಕ್ಷಣದ ಬಾಧಕವನ್ನು ಅರಿತು ತಿದ್ದಿಕೊಳ್ಳಬಾರದೆ? ಆರ್ಥಿಕ ಸಾಧಕವನ್ನು ಮಾತ್ರ ಗುರಿಯಾಗಿಟ್ಟು ನಮ್ಮ ಜನಾಂಗವನ್ನು ಹಾಳುಮಾಡುವ ಯತ್ನವೆ?

Let him or her cast the first stone who is himself or herself safe!

'The first item' says Judge Lindsey, in the testimony of these high school students is that of all the youths who go to parties, attend dances and ride together in automobiles,' more than 90 per cent, indulge in hugging and kissing......Some girls insist in this kind of thing from boys they go with, and are as aggressive in a subtle way in their search for such thrills as are the boys themselves' ... 'At least fifty per cent of those who begin with hugging and kissing do not restrict themselves to that, but go further and indulge in other sex liberties which by all the conventions are outrageously improper.'

'For instance, out of 495 girls of high scool age—though not all of them where in high schools—who admitted to me that they had sex experiences with boys, only about 25 became pregnant. Hundreds, for instance resort to the abortionist. I dont guess this, I know it.'

ಬೇಕಾಗಿದೆ.

ಆರು ಯಾ ಏಳು ಸ್ತ್ರೀ ವಿದ್ಯಾರ್ಥಿನಿಯರಿಗೆ ಖಾಸಗಿಯಿಂದ ಶಿಕ್ಷಣ ಕೊಡಲು ಮೆಟ್ರಿಕ್ ಯಾ 8ನೇ ತರಗತಿ ವರೆಗೆ ಕಲಿತ ಸಂಗೀತ ಮತ್ತು ಕಸೂತಿ ವಗೈರೆ ಅಭ್ಯಾಸವುಳ್ಳ ಬ್ರಾಹ್ಮಣ ಯಾ ಗೌಡ ಸಾರಸ್ವತ—ಸಾರಸ್ವತ ಹಿಂದೂ ಸಮಾಜದ ಯೋಗ್ಯ ಸ್ಥಿತಿಯ ಉಪಾಧ್ಯಾಯಿನಿಯು ಬೇಕಾಗಿದೆ. ಮಾಹಿತಿ ಬಗ್ಗೆ ಯಾ ಹೆಚ್ಚಿನ ವಿವರದ ಬಗ್ಗೆ ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳಬಹುದು.

Address—

M. Sheshagiri Rao,
Menaje, ZAMINDAR, Choondapur,
Post Shankernarayana.
ಅಥವಾ.
A. Krishnaraya Kodgi,
Amavasebail, Dt. Board Member,
Post Shankernarayana.

ಪ್ರಥಮ ಬಹುಮಾನ ರೂ. 4000

ಬಹುಮಾನಗಳು 600. ರೂ. 11,000.
ಟಿಕೇಟು 1 ಕ್ಕೆ 0—8—0 ಮಾತ್ರ.

ಕುಕ್ಕುಂದೂರು ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ಸಹಾಯಾರ್ಥವಾಗಿ ಸೋಡ್ತಿ.

ಸೋಡ್ತಿ ತೆಗೆಯುವ ತಾ. 16-2-'35.

ಸುಸಂದರ್ಭವನ್ನು ಕಳಕೊಳ್ಳಬೇಡಿರಿ. ಅದೃಷ್ಟ ಪರೀಕ್ಷೆಗೆ ಒಳ್ಳೆ ಸಮಯ; ಸದುದ್ದೇಶಕ್ಕೆ ಸಹಾಯಮಾಡಿ ಪುಣ್ಯ ಭಾಗಿಗಳಾಗಿರಿ.

ಉತ್ತಮ ಬಗಳಾದ ಏಜಂಟರಿಗೆ ಧಾರಾಳ ಕಮಿಶನ್ ಕೊಡುವುದು.

ವಿಶೇಷ ಮಾಹಿತಿಗೆ ಈ ವಿಳಾಸಕ್ಕೆ ಬರೆಯಿರಿ:

ಗೌರವ ಕಾರ್ಯದರ್ಶಿ,
ದಿ ಗ್ರೇಂಡ್ ರೇಫಲ್ ಆಫೀಸು,
ಕಾರ್ಕಳ, ದ. ಕ.

The Popular Insurance Company, Ltd.

Head Office:—MANGALORE, S. India,

The Pioneer Life Office of the West Coast.

Wanted influential District agents in Unrepresentedareas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Company can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rau, who has developed in him a great deal of life Insurance sense..........

[illegible]

[illegible] ಕಾರ್ಯಗಳಲ್ಲಿ, ಹಣಕಟ್ಟ [illegible] ಪ್ರೆಸ್ [illegible] ಎಂಬ ಧರನಿರ್ಣಯಾಧಿಕಾರಿಯು [illegible].

[illegible] ಕಾರ್ಯವೆಲ್ಲವೂ ಹೊಸ ಬಗೆಯದಾಗಿಯೇ ಇರುವುದು. ಸಾಮ್ರಾಜ್ಯದೊಳಗಿನ ವಾಣಿಜ್ಯ ರಥಕ್ಕೆ ಇವನೇ ಸಾರಥಿ ಎಂಬಂತಿರುವನು. ದರಗಳನ್ನು ಇವನೇ ಕ್ರಮಪಡಿಸುವನು. ವ್ಯಾಪಾರಿಗಳು, ಆಹಾರ ಸಾಮಗ್ರಿಗಳನ್ನಾಗಲಿ ಬಟ್ಟೆಬರೆಗಳನ್ನಾಗಲಿ,—ಮುಂದೆ ಬಳಿ ಧಾರಣೆಗಳು ಬರಬಹುದೆಂಬ ನಿರೀಕ್ಷೆಯಿಂದ ಕೂಡಿಡದಂತೆ ಇವನು ಜಾಗರೂಕತೆ ವಹಿಸುವನು. ಸಾಮ್ರಾಜ್ಯದೊಳಗಿನ ಕೈಗಾರಿಕಾ ಸಂಸ್ಥೆಗಳು ತಾವೇ ಧಾರಣೆಗಳನ್ನು ಸೃಷ್ಟಿಸದಂತೆ ಯಾ ಏರಿಸದಂತೆ ಅಥವಾ ಇಳಿಸದಂತೆ ಇವನು ಎಚ್ಚರ ವಹಿಸಬೇಕಾಗಿದೆ.

"ನಿಮ್ಮ ಬಟ್ಟೆಬರೆಗಳನ್ನು, ಹರಿದು ಚೂರಾಗುವ ತನಕ ಉಟ್ಟುಕೊಳ್ಳಿರಿ. ನಾವು ಬಡವರು; ಹೆಚ್ಚು ಹೆಚ್ಚಾಗಿ ಕೊಂಡುಕೊಳ್ಳಲಾರೆವು—ಎಂಬುದನ್ನು ಸ್ಮರಿಸಿರಿ" ಎಂದು ಜರ್ಮನ್ ಪ್ರಜೆಗಳಿಗೆ ಈತನ ಉಪದೇಶ.

ರಿಸರ್ವ್ ಬ್ಯಾಂಕ್ ಆಯೋಜನೆ.

ಇಂಡಿಯಕ್ಕೊಂದು ರಿಸರ್ವ್ ಬ್ಯಾಂಕನ್ನು ಸ್ಥಾಪಿಸಬೇಕೆಂಬ ಆಯೋಜನೆಯಾಗಿದೆಯಷ್ಟೆ. ಅದಿನ್ನು ಬರುವ ಏಪ್ರಿಲ್ ತಿಂಗಳಲ್ಲಿ ಕೆಲಸಕ್ಕೆ ತೊಡಗಲಾಗುವುದೆಂದು ತಿಳಿದುಬರುತ್ತದೆ. ಹಣಕಾಸುಗಳ ವಿಚಾರವನ್ನೆಲ್ಲಾ ಈ ಬ್ಯಾಂಕು ನೋಡಿಕೊಳ್ಳುವುದು. ಇನ್ನು ಕರೆನ್ಸಿ ನೋಟುಗಳೆಲ್ಲ, ಈ ಬ್ಯಾಂಕಿನ ಗವರ್ನರರಾದ ಸರ್ ಓಸ್ಬೋರ್ನ್ ಸ್ಮಿತ್ತರವರ ಸಹಿಯಿಂದಲೇ ಹೊರಡುತ್ತವೆ. ಈ ನೋಟು ಹೊರಡಿಸುವ ಇಲಾಖೆಯು ಆ ಬ್ಯಾಂಕಿನಲ್ಲಿ ಪ್ರತ್ಯೇಕವಾಗಿ ತೆರೆಯಲಾಗುವುದು.

ಇಂಪೀರಿಯಲ್ ಬ್ಯಾಂಕಿನಿಂದಲೂ, ಇತರ ಕರೆನ್ಸಿ ಆಫೀಸುಗಳಿಂದಲೂ ಕೆಲವರನ್ನು ಈ ಬ್ಯಾಂಕಿನಲ್ಲಿ ನೇಮಿಸಲಾಗುವುದು. ಸರ್ ಜೇಮ್ಸ್ ಗ್ರಿಗ್ಗರವರು ಫೈನಾನ್ಸ್ ಮೆಂಬರರಾಗಿಯೂ ಮಿ॥ ಜೆ. ಬಿ. ಟೈಲರವರು ಡಿಪ್ಯುಟಿ ಗವರ್ನರರಾಗಿಯೂ ನೇಮಕ ಹೊಂದಿರುವರು.

ಬ್ಯಾಂಕಿನ ಶೇರುಗಳು, ಸಾರ್ವಜನಿಕರಿಗಾಗಿಯೂ, ಬರುವ ಜುಲೈ ತಿಂಗಳಿಂದ ಚಂದಾ ಅರ್ಪಿಸಲು ಇರಿಸಲಾಗುವುವಾಗಿ ತಿಳಿದು ಬಂದಿದೆ

ಎಸೆಂಬ್ಲಿ ಚುನಾವಣೆಗಳು.

ಫಲಿತಾಂಶ ಪ್ರಕಟಣೆಯ ತಾರೀಕುಗಳು.

ಗಂಜಾಮ್-ವಿಶಾಖಪಟ್ಟಣ ಕೊನ್ಸ್ಟಿಟ್ಯುಯನ್ಸಿ—೪೮,೫೦೦ ವೋಟುಗಳು; ತಾ. ೧೪—೧೧—೩೪.

ಗೋದಾವರಿ ಕೃಷ್ಣಾ:—೬೧,೭೫೩ ವೋಟುಗಳು; ತಾ. ೧೯—೧೧—೩೪.

ಗುಂಟೂರು—ನೆಲ್ಲೂರು:—೫೫,೩೯೯ ವೋಟುಗಳು; ತಾ. ೧೭—೧೧—೩೪.

ಸಂಯೋಜಿತ ಜಿಲ್ಲೆಗಳು ಮತ್ತು ಚಿತ್ತೂರು:—೫೫,೦೦೦ ವೋಟುಗಳು; ತಾ. ೧೯—೧೧—೩೪.

ಕೊಯಮುತ್ತೂರು—ಸೇಲಂ:—೫೫,೪೨೦ ವೋಟುಗಳು; ತಾ. ೨೧—೧೧—೩೪.

ದಕ್ಷಿಣ ಆರ್ಕಾಡು—ಚೆಂಗಲ್ಪಟ್ಟು—೧೯,೮೮೭ ವೋಟುಗಳು; ತಾ. ೧೭—೧೧—೩೪.

ತಂಜಾವೂರು-ತ್ರಿಚಿನಾಪಳ್ಳಿ-೨೬,೫೯೧ ವೋಟುಗಳು; ತಾ. ೧೭ ಅಥವಾ ೧೭-೧೧-೩೪.

ಮಧುರಾ-ರಾಮ್ನಾಡ್-ತಿನ್ನವೆಲ್ಲಿ-೩೭,೩೫೩ ವೋಟುಗಳು; ತಾ. [illegible]—೧೧—೩೪.

ಪಶ್ಚಿಮ ಕರಾವಳಿ ನೀಲಗಿರಿ:-[illegible] ವೋಟುಗಳು; ತಾ. ೧೭-೧೧-೩೪.

ಮುಹಮ್ಮದೀಯ ಕೊನ್ಸ್ಟಿಟ್ಯುಯನ್ಸಿಗಳು.

ಉತ್ತರ ಮದರಾಸು:-[illegible] ವೋಟುಗಳು; ತಾ. ೨೧—೧೧—೩೪.

ದಕ್ಷಿಣ ಮದರಾಸು:-[illegible] ವೋಟುಗಳು; ತಾ. ೧೯—೧೧—೩೪.

ಪಶ್ಚಿಮ ಕರಾವಳಿ ಮತ್ತು ನೀಲಗಿರಿ:-[illegible] ವೋಟುಗಳು; ತಾ. [illegible].

(ಗಾನೇ ಪುಟದಿಂದ ಮುಂದುವರಿದುದು)

ಎಸೆಂಬ್ಲಿ ಅಧ್ಯಕ್ಷರು ಸ್ವಕ್ಷೇತ್ರದಲ್ಲಿ ಸೋತರು.

ಇಂಡಿಯನ್ ಕೊಮರ್ಸ್ ಕೊನ್ಸ್ಟಿಟ್ಯುಯನ್ಸಿಯಿಂದ ಕೊಂಗ್ರೆಸ್ ಪರವಾಗಿ ಉಮೇದ್ವಾರರಾಗಿದ್ದ ಶ್ರೀ॥ ಸಾಮಿ ವೆಂಕಟಾಚಲಂ ಚೆಟ್ಟಿಯಾರರು, ಎಸೆಂಬ್ಲಿ ಅಧ್ಯಕ್ಷರಾಗಿರುವ ಮಾನ್ಯ ಸರ್ ಆರ್. ಕೆ. ಷಣ್ಮುಗಂ ಚೆಟ್ಟಿಯಾರರಿಗಿದುರಾಗಿ ಬಹುಮತವನ್ನು ಪಡೆದು, ಚುನಾಯಿತ ಬಂದಿರುವರು.

ವೋಟುಗಳ ವಿವರ

ಶ್ರೀ॥ ಸಾಮಿ ವೆಂಕಟಾಚಲಂ ಚೆಟ್ಟಿ [illegible]

ಸರ್ ಆರ್. ಕೆ. ಷಣ್ಮುಗಂ ಚೆಟ್ಟಿ [illegible]

ಈ ಫಲಿತಾಂಶವು ಅಪರಾಹ್ನ ಘಂಟೆ [illegible] ಕ್ಕೆ ಸರಿಯಾಗಿ ಪ್ರಕಟವಾಯಿತು. ವಿಜಯಶೀಲರಾದ ಶ್ರೀ॥ ವೆಂಕಟಾಚಲಂರವರನ್ನು, ನೆರೆದ ಜನಸ್ತೋಮವು ಅಭಿವಂದಿಸಿ, ಸಂತೋಷಾತಿರೇಕದಿಂದ, ಸಿಂಗರಿಸಲ್ಪಟ್ಟ ಮೋಟಾರಿಗೆ ಎತ್ತಿಕೊಂಡೇ ಒಯ್ದು ಕುಳ್ಳಿರಿಸಿದರು. ಚೆಟ್ಟಿಯವರು ಜನರಿಗೆ ವಂದನೆಗಳನ್ನರ್ಪಿಸಿ, ಈ ವಿಜಯವನ್ನು ತಾನು ಕೊಂಗ್ರೆಸ್ಸಿನ ಹೆಸರಿಗೆ ಗೌರವದಿಂದ ಕಾಣುವೆನೆಂದು ನುಡಿದು, ತನ್ನ ಹೊಸ ಹೊಣೆಯ ಕಾರ್ಯಭಾರವನ್ನೂ ಚೆನ್ನಾಗಿ ಬಲ್ಲೆ, ತಾನು ಜನರ ಆದರ-ವಿಶ್ವಾಸಗಳನ್ನು ಪಡೆದು ದೇಶ ಸೇವಾಕಾರ್ಯದಲ್ಲಿ ನಿರತನಾಗುವೆನೆಂದು ತಿಳಿಸಿ, ಸ್ವಗೃಹಾಭಿಮುಖವಾಗಿ ತೆರಳಿದರು.

ನಿವೃತ್ತಿಹೊಂದಿದ್ದು, ಸೀಮೆಗೆ ತೆರಳುವ ಮದರಾಸು ಗವರ್ನರ ಸರ್ ಜೋರ್ಜ್ ಸ್ಟೇನ್ಲಿಯವರನ್ನು ಮದರಾಸಿನ ಬಾಲಭಟರು ಸತ್ಕರಿಸಿದಾಗ ತೆಗೆಯಲ್ಪಟ್ಟ ಛಾಯಚಿತ್ರ.

೧೯೩೪ ಬೋನಸ್‌ನ ವರ್ಷ

ನೇಶನಲ್ ಇಂಡಿಯನ್ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್ 12 ಮಿಶನ್‌ರೋ ಕಲ್ಕತ್ತ.

ಚೆಯರ್‌ಮೆನ್
ಸರ್ ಆರ್. ಎನ್. ಮುಖರ್ಜಿ, ಕೆ. ಸಿ. ಐ. ಇ. ಕೆ. ಸಿ. ವಿ. ಓ.

ಮೆನೇಜಿಂಗ್ ಏಜಂಟ್ಸ್
ಮಾರ್ಟಿನ್ ಎಂಡ್ ಕೊ.

೩೧—೧೨—೩೪ಕ್ಕೆ ನಡೆದು ಬಂದಿರುವ ಮತ್ತು ೩೧—೧೨—೩೪ರ ಒಳಗೆ ಪಡೆದ ಪೊಲಿಸಿಗಳು ಪ್ರಕೃತದ ೧೯೩೪ಕ್ಕೆ ಅಂತ್ಯವಾಗುವ ಪಂಚವಾರ್ಷಿಕ ಲಾಭದಲ್ಲಿ ಭಾಗವಹಿಸಲು ಹಕ್ಕುಳ್ಳವುಗಳಾಗಿವೆ.

ಯೋಗ್ಯ ಶರ್ತಗಳ ಮೇಲೆ ಏಜಂಟರು ಬೇಕಾಗಿದ್ದಾರೆ.

ವಿವರಗಳಿಗಾಗಿ ಬರೆಯಿರಿ:—

ಬಿ. ವಿ. ಎಸ್. ಪ್ರಭು, ಏಜಂಟ್,
ಶ್ರೀಕೃಷ್ಣ ನೊವೆಲ್ಟಿ ಹೌಸ್, ಮಾರ್ಕೆಟ್ ರೋಡ್, ಮಂಗಳೂರು.

ಟಿ. ವಿ. ರಾಘವಯ್ಯ, ಮದ್ರಾಸು ಬ್ರಾಂಚ್ ಮತ್ತು ಆಶ್ರಿತ ಸಂಸ್ಥಾನಗಳಿಗೆ ಸೆಕ್ರೆಟರಿ,
ಟಿ. ವಿ. ನಂಬ್ರ [illegible], ಮದ್ರಾಸು

The Canara Banking Corporation Udipi, Ltd.

Head office—UDIPI, S. K. (Incorporated in British India) ESTD. 1906.

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

Authorised Capital Rs. 3,50,000/— Subscribed & Paid up Rs. 2,25,000 Reserve & other Funds—2,60,953—7—8

ಇದರ ಒಂದು ಶಾಖೆಯು ಇದೇ ತಿಂಗಳ ತಾ. 12ನೇ ಸೋಮವಾರ ದಿನ ಮಂಗಳೂರು ಬಂದರದಲ್ಲಿ

(ಪಂಚಮ್ಹಾಲ್ ಬಿಲ್ಡಿಂಗಿನ ಮಾಳಿಗೆಯಲ್ಲಿ) ತೆರೆಯೋಣಾಗಿಯದೆ.

ಇದರ ಇನ್ನೊಂದು ಶಾಖೆಯು ಇದೇ ವಾರದಲ್ಲಿ ಮಡಿಕೇರಿಯಲ್ಲಿ ತೆರೆಯೋಣಾಗುವುದು.

Office of the Corporation,
Udipi, S. K. 18—11—1934.

M. Shrinivas Prabhu,
Ag. Manager.

(Regd)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸಧಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತದೆ.

ರಿಂಗ್‌ವರ್ಮ್ ಮುಲಾಮು:—ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ, ಮದರಾಸು ಮತ್ತು ಬೊಂಬಾಯಿ

ಧಿ ಬೊಂಬೇ ಲೈಫ್ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೋಲಿಸಿದಾರರಿಗೂ "ಸಿಲ್ವರ್ ಜ್ಯುಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರಿಮಿಯಮ್ಮಿನಲ್ಲಿ ಶೇಕಡಾ 2½ ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೋಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರಿಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೋಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಬಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದೆ.

ವಿ. ಸೂ:—ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮುದ್ರಾಸ್ ಬ್ರೇಂಚ್ ಸೆಕ್ರೆಟರಿಯುವರು.

ಆಫೀಸುಗಳು:—(1), ಪೋಸ್ಟ್ ಬೋಕ್ಸ್ ನಂಬ್ರ 337, ಆರ್ಮೇನಿಯನ್ ಸ್ಟ್ರೀಟ್, ಮುದ್ರಾಸ್; (2) ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ; (3) ಮಂಗಳೂರು, ದಕ್ಷಿಣ ಕನ್ನಡ; (4) ಉಡುಪಿ, ದಕ್ಷಿಣ ಕನ್ನಡ; (5) ಇಸ್ಮಾಯಿಲ್ ಬಿಲ್ಡಿಂಗ್, ಲೋಹರ್ ಚಾಲ್, ಬೊಂಬಾಯಿ, ನಂಬ್ರ 2; (6) ದಿಲ್ಲಿ ಕೋಟೆ

Karnataka Chemical and Pharmaceutical Works, Ltd., Udipi. (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ತಾ. 10-10-1934ರಲ್ಲಿ ನಮ್ಮ ಡಿಸ್ಪೆನ್ಸಿಂಗ್ ಇಲಾಖೆಯನ್ನು ತೆರೆದಂದಿನಿಂದ ನಮ್ಮ ಗಿರಾಕಿಗಳು ತಮ್ಮ ಕಾಹಿಲೆಗಳನ್ನು ನಮ್ಮ ಡಾಕ್ಟರರಿಂದ ಧರ್ಮಾರ್ಥವಾಗಿ ಪರೀಕ್ಷಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಡವರಿಗೆ ಧರ್ಮಾರ್ಥವಾಗಿ ಔಷಧವನ್ನು ಕೊಡುವ ಏರ್ಪಾಡೂ ಮಾಡಿರುತ್ತದೆ. ಈಗ ಪರವೂರಿನವರಿಗೂ ಇದರ ಪ್ರಯೋಜನ ಸಿಕ್ಕುವಂತೆ ಪತ್ರ ಮುಖಾಂತರವೂ ಔಷಧಗಳನ್ನು ಸೂಚಿಸುವ ಏರ್ಪಾಡನ್ನು ಮಾಡಿರುತ್ತೇವೆ.

ದ್ರಾಕ್ಷಾಸವ (ಉಲ್ಲಾಸ ಉಂಟುಮಾಡುವುದಕ್ಕೆ)
ಪ್ರಸೂತಿ ಸಂಜೀವನ (ಬಾಣಂತಿಯರಿಗೆ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ)
ನಿಯೋವಿಗರ್ (ನಿತ್ರಾಣಕ್ಕೆ)
ಗ್ರ್ಯಾಪ್ ಲಿಕ್ವಿಡ್ (ಮಕ್ಕಳ ಆರೋಗ್ಯಕ್ಕೆ)

ಚ್ಯವನಪ್ರಾಶ (ಕ್ಷಯಕ್ಷೀಣಾದಿಗಳಿಗೆ)
ಬ್ರಹ್ಮಿ ತೈಲ (ಮೆದುಳಿನ ಕೆಲಸಗಾರರಿಗೆ)
ಕ್ಷೀರಬಲಾ (ಪಕ್ಷವಾತಕ್ಕೆ)
ಕಾಫ್ಲೋಜೆಸ್ಟಿನ್ (ಕಫ, ಬಾವು ಇತ್ಯಾದಿಗೆ)
ಯುಟೆರೀನಾ (ಮುಟ್ಟುಶೂಲೆ ಇತ್ಯಾದಿಗೆ)

ಮೆನೆಜಿಂಗ್ ಡಿರೆಕ್ಟರ್—ವೆಂಕಟ್ರಾಯ ಅಜ್ಜಕ್ಕ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ಏಜಂಟ್ಸ್— ವ್ಯಾಪಾರದ ಡಿಪೋ:—(1) [illegible] 45 [illegible] ಸ್ಟ್ರೀಟ್, [illegible] ನಂ. 2
(2) 1/70 [illegible] ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ., ಮಂಗಳೂರು.

Edited, Printed & Published By L. S. Kamath at the [illegible] Press, Car Street, Mangalore.

... of your ...
Consult
"Sharada Press
Mangalore"

ಸ್ವದೇಶಾಭಿಮಾನಿ

SWADESHABHIMANI

"LIFE ASSURANCE
IS
NO EXPENSE
BUT
AN INVESTMENT"
Safeguard yourself & your family TODAY
Buy a policy in the BOMBAY LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೮. ಮಂಗಳೂರು ತಾ. ೨೩ನೇ ಶುಕ್ರವಾರ ನವಂಬರ ೧೯೩೪. (23-11-'34) ಸಂಚಿಕೆ ೪೬.

ಶ್ವೇತಪತ್ರದ ವರದಿಯ ಪ್ರತಿಗಳು!

ಶ್ವೇತಪತ್ರದ ವರದಿಯ ಇಪ್ಪತ್ತು ಸಾವಿರ ಪ್ರತಿಗಳು ಹಿಂದೂದೇಶಕ್ಕೆ ಬಂದು ತಲಪಿದುವು. ಈಗಾಗಲೇ ಪ್ರಕಟವಾಗಿರಬಹುದು.

ವರದಿಯಲ್ಲಿನ ಶಿಫಾರಸುಗಳೇನಿರಬಹುದೆಂಬ ವಿಷಯವಾಗಿ ಲಂಡನ್ ಪತ್ರಿಕೆಗಳಲ್ಲಿ ನಾನಾ ಬಗೆಯ ಊಹಾಪೋಹೆಗಳ ಸುದ್ದಿಗಳು ಪ್ರಕಟವಾಗುತ್ತಲೇ ಇವೆ, ಒಂದು ಮಾತೃಭೂಮಿಕ್ಕೆ ಸರಿಹೋಗದೆ ಯಾವುದನ್ನೂ ನಂಬದಂತಾಗಿದೆ. ಸಮ್ಮಿಳಿತ ರಾಜ್ಯಭಾರ ಪದ್ಧತಿಯು ಸುಗಮವಾಗಿ ಕಾರ್ಯರೂಪಕ್ಕೆ ಹಚ್ಚಲ್ಪಡಬಹುದೆಂಬ ಭರವಸೆ ತೋರುವ ಶಿಫಾರಸುಗಳು ವರದಿಯಲ್ಲಿವೆಯಾಗಿ 'ಮೋರ್ನಿಂಗ್ ಪೋಸ್ಟ್' ಪತ್ರಿಕೆಯ ಪ್ರವಾದ.

ಶ್ರೀ ಕೆ. ನಾಗೇಶ್ವರರಾವ್ ಪಂತಲು.

ಗೋದಾವರಿ-ಕೃಷ್ಣಾ ಜಿಲ್ಲೆಗಳ ಕೊನ್ಸ್‌ಟಿಟ್ಯೂಯನ್ಸಿಯಿಂದ, ಕೊಂಗ್ರೆಸ್ ಪರವಾಗಿ ಎಸೆಂಬ್ಲಿಗೆ ಚುನಾವಣೆ ಹೊಂದಿರುವರು.

ಡೆಲ್ಲಿಯ ಜವಾಬ್ದಾರೀ ಅಧಿಕಾರಿಗಳಿಂದ ತಿಳಿದುದೇ ಇಂಡಿಯಾ ಸರಕಾರವು ಈ ವರದಿಯ ಸಲಹೆಗಳ ವಿಷಯವಾಗಿ ಅತೃಪ್ತಿ ಹೊಂದಿದೆಯೆಂದು, ಅದೇ ಪತ್ರಿಕೆಯ ಬೊಂಬ್ಯಾ ಬಾತ್ಮೀದಾರನು ನುಡಿಯುವನು.

ಅತ್ತ ಇಂಗ್ಲಾಂಡಿನಲ್ಲಿ ಕನ್ಸರ್ವೇಟಿವರ ಎರಡು ಪಕ್ಷಗಳೂ, ಆ ಶ್ವೇತಪತ್ರದ ಚೂರಿನ ಮೇಲೆ ಕಾದಾಡಲು ಸನ್ನಾಹ ಮಾಡುತ್ತಿವೆ. ಇದರಿಂದ ಇಂಡಿಯವನ್ನು ಬದುಕಿಸುವ ಫಲವನ್ನೇನೂ ನಾವು ನಿರೀಕ್ಷಿಸಬೇಕಾಗಿಲ್ಲ. ಮುಂದಿನ ಪಾರ್ಲಿಮೆಂಟ್ ಚುನಾವಣೆಗಳ ಸನ್ನಾಹಕ್ಕೆ ಇಂತಹ ಕಲಹಗಳು ಈಗ ಆಗಬೇಕಾದುದು ಅವಶ್ಯವಿದೆ.

ನರನನ್ನು ಸಿಂಹನೆಂದು ತಿಳಿದು ಗುಂಡಿಟ್ಟು ಕೊಂದರು!

ಆಫ್ರಿಕದಲ್ಲಿ ವಿಷಾದಾಂತ ನಾಟಕ.

ಮೆಲ್ಬೋರ್ನಿನ ಶ್ರೀಮಂತ ಬೇಸಾಯಗಾರನೊಬ್ಬನ ಪುತ್ರ ಜೇಕ್ ಯಂಗರ್ ಎಂಬಾತನು, ಆಫ್ರಿಕದ ಅಡವಿಯಲ್ಲಿ 'ಶಾಟಿಗದಕ'ನ ಕೈಗೆ ಬಲಿಯಾದನು. ಆತನ ಭಾವ ಪೋರೆಸ್ಟರ್ ಎಂಬಾತನು ಯಂಗನೊಂದಿಗೆ ಸಿಂಹದ

ಶ್ರೀ ಭುಲಾಭಾಯಿ ದೇಸಾಯಿಯವರು.

ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಪರವಾಗಿ, ಅಧ್ಯಕ್ಷರಾದ ಡಾ। ಅನ್ಸಾರಿಯವರು ವಿಲಾಯತಿ ಪ್ರವಾಸದಲ್ಲಿರುವಾಗಲೂ, ಅನಂತರವೂ ಚುನಾವಣಾ ಸಂಬಂಧದ ಪ್ರಚಾರಕಾರ್ಯವನ್ನು ದಕ್ಷತೆಯಿಂದ ನಡೆಸಿ, ಚುನಾವಣೆಗಳಲ್ಲಿ ಕೊಂಗ್ರೆಸ್ಸಿನ ಸಾರ್ವತ್ರಿಕ ವಿಜಯಕ್ಕೆ ಬಹುಮಟ್ಟಿಗೆ ಕಾರಣೀಭೂತರಾದವರು.

ಬೇಟೆಗಾಗಿ ಬಂದು ಒಂದು ಸಿಂಹವನ್ನು ಜಖಂಗೊಳಿಸಿದ್ದನು. ಅದನ್ನು ಹಿಂಬಾಲಿಸಿ ಬರುತ್ತ ಒಂದು ಪೊದೆಯೊಳಗೆ ಶಬ್ದವಾಗಲು-ಸಿಂಹವಿರಬೇಕೆಂದು ಬಂದೂಕು ಹಾರಿಸಿದನು. ಆದರೆ, ನೋಡಲಾಗಿ—ಏನನಾಹುತ!—ಯಂಗರನು ಮಡಿದು ಬಿದ್ದಿದ್ದನು!

ಮೃತನ ದೇಹವನ್ನು, ಆತನ ಪತ್ನಿ ಮತ್ತು ಶಿಶುವಿರುವಲ್ಲಿಗೆ, ನೈರೋಬಿಗೆ, ಒಯ್ದುರುವರು.

ಪಂಡಿತ ಜವಾಹರಲಾಲರ ಬಂಧನ.

'ಅವಿರಾಮವಾದ ಚಳವಳವು ಅಗತ್ಯವಿದೆ.'

ಸಂಯುಕ್ತ ಪ್ರಾಂತ್ಯದ ಕೊಂಗ್ರೆಸ್ ಧುರೀಣರಾದ ಮಿ। ಶಾಫಿ ಅಹಮ್ಮದ್ ಕಿಧ್ವಾಯಿಯವರು, ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಡಾ। ಅನ್ಸಾರಿಯವರಿಗೆ ಈ ಅಭಿಪ್ರಾಯ ಬರುವಂತೆ ಪತ್ರ ಬರೆದಿರುವರು:- ಎಸೆಂಬ್ಲಿಯಲ್ಲಿ ಯಾವ ಧೋರಣೆಯನ್ನು ಕೈಕೊಳ್ಳಬೇಕೆಂದು ನಿಷ್ಕರ್ಷಿಸುವಾಗ, ಪಂಡಿತ ಜವಾಹರಲಾಲರ ಬಂಧನ ನಿಮಿತ್ತಕವಾಗಿ ನಿಷೇಧ ರೂಪವಾದ ಚಳವಳವನ್ನು ಯಾವ ಬಗೆಯಾಗಿ ಮಾಡಬಹುದೆಂಬುದನ್ನು ಪರ್ಯಾಲೋಚಿಸಿ ನಿರ್ಧರಿಸಬೇಕಾಗಿದೆ. ಕೊಂಗ್ರೆಸ್ ಪಕ್ಷದ ಭಾವನೆಗಳು ಜವಾಹರಲಾಲರ ಬಂಧನದಿಂದ ಹೇಗೆ ನೊಂದುಕೊಂಡಿವೆಯೆಂಬುದನ್ನು

ಮೌಲಾನಾ ಶೌಕತಾಲಿಯವರು.

'ಪಟ್ಟಣಗಳ' ಮಹಮ್ಮದೀಯ ಕೊನ್ಸ್‌ಟಿಟ್ಯೂಯನ್ಸಿಯಿಂದ ಎಸೆಂಬ್ಲಿಗೆ ಚುನಾವಣೆ ಹೊಂದಿರುವರು. (೧೯ನೇ ಪುಟವನ್ನು ನೋಡುವುದು.)

ಪ್ರಕಟಪಡಿಸಬೇಕು. ವೈಸರಾಯರು ಸೆಂಟ್ರಲ್ ಲೆಜಿಸ್ಲೇಚರಿನಲ್ಲಿ ಭಾಷಣ ಕೊಡುವಾಗಲೇ ವ್ಯಕ್ತವಾಗಬೇಕು. ಇದನ್ನು ಕೊಂಗ್ರೆಸ್ ಪಕ್ಷದ ಸದಸ್ಯರಾಗಲಿ ಇತರ ಮುಖಂಡರಾಗಲಿ ಮಾಡಬಹುದಾಗಿದೆ.

ಕಲ್ಕತ್ತೆಯಲ್ಲಿ ಬೋಂಬ್ ಸ್ಫೋಟನ!

ಬಾಲಕರಿಗೆ ಜಖಂ!

ಕಲ್ಕತ್ತಾ ನಗರದ ಉತ್ತರಗಡಿಯಲ್ಲಿ ಇದೇ ಕಳೆದ ಸೋಮವಾರ ಒಂದು ಬೋಂಬು ಸಿಡಿದು, ಇಬ್ಬರು ಬಾಲಕರು ಅತೀವವಾದ ಜಖಂ ಹೊಂದಿರುವರು. ಇಬ್ಬರನ್ನೂ ಮೆಡಿಕಲ್ ಕೋಲೇಜ್ ಆಸ್ಪತ್ರೆಗೊಯ್ಯಲಾಗಿದೆ.

ಆ ಹುಡುಗರಿಬ್ಬರೂ ಒಂದು ಕಸದ ಡಬ್ಬಿಯ ಬಳಿ ಇದ್ದಲಿನ ತುಂಡುಗಳನ್ನು ಹೆಕ್ಕುತಿದ್ದಾಗ, ಇದ್ದಲಿನ ಕೆಳಗಿದ್ದ ಒಂದು ಬೋಂಬು ಆಕಸ್ಮಿಕವಾಗಿ ಸ್ಫೋಟನಗೊಂಡಿತು. ಒಬ್ಬ ಹುಡುಗನ ಬಲಗೈಯು ಕಡಿದು, ಸಿಡಿದು ಹೋಯಿತು! ಮತ್ತೊಬ್ಬನಿಗೆ ತಲೆ ಮತ್ತು ಎದೆಯ ಮೇಲೆ ಅನೇಕ ಜಖಂಗಳುಂಟಾಗಿವೆ. ಇವರಿಬ್ಬರ ಮರಣವಾಗ್ಮೂಲಗಳನ್ನೂ ನಡೆಯಲಾಗಿದೆ. ಬೋಂಬಿನ ತುಂಡುಗಳನ್ನು ಪರೀಕ್ಷೆಗೆ ಕಳುಹಿರುವರು.

ಪೋಲೀಸರು, ಆಸುಪಾಸಿನ ಕೆಲವು ಮನೆಗಳಲ್ಲಿ ಜಡ್ತಿ ನಡೆಸಿದರು. ಆದರೆ ಸಂದೇಹಾಸ್ಪದವಾದುದೇನೂ ದೊರೆಯಲಿಲ್ಲ.



ಶ್ರೀ ವಿ. ವಿ. ಗಿರಿಯವರು.

ವಿಶಾಖಪಟ್ಟಣದಿಂದ ಎಸೆಂಬ್ಲಿಗೆ ಚುನಾವಣೆ ಹೊಂದಿದ ಕೊಂಗ್ರೆಸ್ ಉಮೇದ್ವಾರರು

ಸಿಡಿಲಿನ ಅನಾಹುತ!

ಅರುವತ್ತೊಂದು ಮರಣಗಳು!

ದಕ್ಷಿಣಾಫ್ರಿಕದ ಕ್ಲಾರ್ಕ್ಸ್‌ಬರಿ ಎಂಬಲ್ಲಿ, ಇದೇ ಕಳೆದ ತಾ. ೧೭ನೇ ದಿನ ಸಿಡಿಲು ಬಡೆದು, ಅರುವತ್ತೊಂದು ಮಂದಿ ಮೂಲನಿವಾಸಿಗಳು ತಕ್ಷಣವೇ ಮಡಿದು ಬಿದ್ದರು. ಬೇರೆ ಮೂವರು ನಿಶ್ಚೇಷ್ಟಿತರಾಗಿ ಬಿದ್ದವರು, ಈಗ ಚಿಕಿತ್ಸೆ ಹೊಂದುತಿದ್ದಾರೆ.

[illegible]

× × × × ×

ಆದರೆ ನಮ್ಮ ದೈನ್ಯಾಯಾಯು [illegible] ಹಿಂದೂ ದೇಶದ ದೈನ್ಯಾಯಾಯುಗಳಿಗೆ ಸೇರುವಂತಾದುದೇ ಕಡೆ— [illegible] ಈ ಪತ್ರಗಳ ನೆನಪೇ ಇಲ್ಲ [illegible] ಯಾರು ಬಲ್ಲ? "ಹಿಂದೀಯರಿಗೆ ಸ್ವಾತಂತ್ರ್ಯವನ್ನು ಅಗತ್ಯವಾಗಿ [illegible]" ಎಂದು ಪ್ರಧಾನ ಮಂತ್ರಿಯರಿಗೆ [illegible] ಪತ್ರ [illegible] ನಮ್ಮ ಇಂಗ್ಲೆಂಡ್ ... [illegible] ಎನ್ನುವ ದಿಲ್ಲ ನೋಡಿ! ಗವರ್ನರ ಪದವಿಗೇರಿ ದೈನ್ಯಾಯಾಯ ಪದವಿಯು ದೊಡ್ಡದೂ ಸುಖಕರವೂ ಎಂದು ಸಾಯ್ಬ [illegible] (ಅದನ್ನೂ ಇದ್ದಾಗ) ಅನುಭವವಿಷಯನ್ನು. ಆದರೂ [illegible] ಬದಲಾಗಲಿಲ್ಲ ನೋಡಿ! ಜನ ಬದಲಾಗಲಿಲ್ಲ — ದಾನ ಮಾತ್ರ ಬದಲಾಗಿದೆ, ಇದೇನು, ಧನದ ಬಲವೋ ದಿನದ ಮಹಿಮೆಯೋ ನಾಕರಿಯೋ! ಇಂಗ್ಲೆಂಡಿನವರು ಪತ್ರ ಬರೆದು [illegible] ವರ್ಷಗಳು ಕಳೆದುವು. ಆದರೂ ಹಿಂದೀಯರಿಗೆ ಯಾವ 'ಉದಾರ ದಾನ'ವೂ ದೊರೆಯಲಿಲ್ಲ. ಬದಲಿಗೆ [illegible] ನಷ್ಟವಾಗುತ್ತಿದೆ. [illegible] ಈ ದಾನ ಅಥವಾ ಧನ!

× × × × ×

ಗಾಂಧೀಪಕ್ಷದವರಾಗಲೀ, ಕಾಂಗ್ರೆಸ್ಸಿನವರಾಗಲೀ, ಅಥವಾ ಸಾಯ್ಬರಾಗಲೀ ಸ್ವಾತಂತ್ರ್ಯವನ್ನು ಕೇಳಿದರೆ ನಮ್ಮ ಇಂಗ್ಲೆಂಡಿನ ಮುತ್ಸದ್ದಿಗಳು ಏನನ್ನೂ ಕೊಡಲೊಲ್ಲರು [illegible] ನೋಡಿ! ಆದರೆ ಅವರ [illegible] ನಮ್ಮ ಇಂಗ್ಲೆಂಡಿನವರೇ—ಯೌವನಸ್ಥರಾಗಿದ್ದಾಗ ಬರೆದ ಪತ್ರಗಳೂ ಅವರಿಗೆ ಯಥಾರ್ಥ ಅರ್ಥವನ್ನು ಕೊಡಲಾರದೆ ಹೋದುವೇ? ಆಶ್ಚರ್ಯವಯ್ಯಾ ಈ ಜನರ ಪ್ರೇಮ!

× × × × ×



ಯಾವ ಆಟದಲ್ಲಾಗಲೀ, ಯಾವ ಕೆಲಸದಲ್ಲಾಗಲೀ, ದಿನಂಪ್ರತಿಯೂ ಅರ್ಜಿತೆಯೂ ಶಕ್ತಿಯೂ ಜಯಕ್ಕೆ ಅಗತ್ಯ. ಅದಕ್ಕಾಗಿಯೇ ಪ್ರಪಂಚದ ಆಟಗಾರರು,—ಕೈ, ಮೆದುಳುಗಳಿಂದ ಕೆಲಸ ಮಾಡುವವರು ದಿನನಿತ್ಯವೂ ಓವಲ್ಟಿನ್ನನ್ನು ಸೇವಿಸುವರು.

ಈ ದೇಶದಲ್ಲಿ ಓವಲ್ಟಿನ್ ಅಗತ್ಯ. ಏಕೆಂದರೆ, ಈ ದಿನಗಳ ಕಷ್ಟ ಜೀವನದೊಡನೆ ನಾವು ನಮ್ಮ ಹವಾಗುಣದ ತಾಪವನ್ನು ಸಹಿಸುವಷ್ಟು ಚೈತನ್ಯಶಾಲಿಗಳಾಗಬೇಕು.

ಓವಲ್ಟಿನ್‌ನಲ್ಲಿರುವ ಉತ್ಕೃಷ್ಟ ಪೋಷಣವು ಆರೋಗ್ಯ, ಶಕ್ತಿ ಮತ್ತು ಬಲಕ್ಕೆ ಬೇಕಾದ ಸಾರವನ್ನು ಒದಗಿಸಿಕೊಡುತ್ತದೆ. ಇದನ್ನು ಸದಾ ಸೇವಿಸುತ್ತಾ ಇದ್ದರೆ ಮಾನಸಿಕ ಮತ್ತು ದೈಹಿಕ ಶಕ್ತಿಯು ಬರುತ್ತದೆ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ

ಏಜಂಟ್—ಜೇಮ್ಸ್ ರೈಟ್, ೪೬ಎ, ರಿಪನ್ ಸ್ಟ್ರೀಟ್ ಕಲ್ಕತ್ತ, ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/318

ಹಿಂದೀಯರ ಮೇಲೆ ಇಷ್ಟು ಮಮತೆಯುಳ್ಳ ಇಂಗ್ಲೆಂಡಿನವರು ಸಿಂಹಾಸನವೇರಿದೊಡನೆ ಹಿಂದೀಯರ ಪ್ರತಿನಿಧಿಯೆಂದೆನಿಸಿದ ಗಾಂಧಿಯೊಡನೆ ಮಾತನಾಡುವುದಕ್ಕೂ ನಮ್ಮ ತನಕ ಬಂದವರನ್ನೆಲ್ಲ ಗೂಡಿನೊಳಗೆ ಹಾಕಿ ಸಲಹುದುದೇಕೋ ತಿಳಿಯಲಾರೆವಲ್ಲ! "ಎಲೊ ಮುದುಕ, ನಿನಗೇನು ಬೇಕು?" ಎಂದು ಗಾಂಧಿಯ ಹಲ್ಲಿಲ್ಲದ ಮುಖದೊಡನೆ ಒಂದು ಪ್ರಶ್ನೆಯನ್ನಾದರೂ ಕೇಳಬಹುದಿತ್ತಲ್ಲ! ಇದೇನೋ, ಶಾಸ್ತ್ರ ಮತ್ತು ಗಾದೆ ಗಾದೆ— (ನಮ್ಮ ಅಜ್ಜಪ್ಪ ಹೇಳಿದ್ದು) ನೆನಪಿಗೆ ಬರುತ್ತದೆ! ಬುಧರಾಗಲಿ ಇಂಗ್ಲೆಂಡಿನವರಿಗೆ!

× × × × ×

ಹಿಂದೀಯರಿಗೆ ಸ್ವಾತಂತ್ರ್ಯ ದಾನ ಮಾಡುತ್ತೇವೆಂಬ ಮಾತಿನಷ್ಟು ದೊಡ್ಡ ಸುಳ್ಳು ಈ ಭೂಲೋಕದ ಯಾವ ಭಾಗದ ಯಾವ ಅರಣ್ಯದಲ್ಲೂ ಹುಡುಕಿದರೂ ಸಿಗಲಿಕ್ಕಿಲ್ಲ ನೋಡಿ! ಇಂಗ್ಲೆಂಡಿನ ರಾಜಕುಮಾರ ಪಟುಗಳೆಲ್ಲ ಸದ್ಗಾರಕರವಸರಾಗಿದ್ದಾಗ ಯಾರಾದರೂ ಅವರ ಹೆಬ್ಬೆಟ್ಟು ಗುರುತುಗಳನ್ನು ತರಾರಿಗೆ ತಿಳಿಯದಂತೆ ತೆಗೆದುಕೊಳ್ಳಬೇಕು! ವಿನಹಾ ಅವರು ಎಚ್ಚತ್ತಿದ್ದ ದಿನ ಕೊಡುವರೆಂಬ ಮಾತು ತೀರಾ ಸುಳ್ಳು! ಹಾಗೆಂದಾಗ ಪ್ರಿಯ ಇಂಗ್ಲೆಂಡಿನವರೇ, ನಿಮ್ಮ ಎರಡು ಪತ್ರಗಳಿಗೂ ಲ್ಲಾಯ್ಡ್ ಜಾರ್ಜರ ಬದಲು ಸಾಯ್ಬನ ಉತ್ತರ ಹೀಗೆ— "ಹಿಂದೀಯರು ಸ್ವಾತಂತ್ರ್ಯಕ್ಕೆ ಅನರ್ಹರು. ನಿಮ್ಮ ಪತ್ರಗಳನ್ನು ಫೈಲ್‌ನಲ್ಲಿ ಹಾಕಲಾಗಿದೆ. ಅವುಗಳಿಗೆ ಗೆದ್ದಲು ಹಿಡಿಯದಂತೆ ಈ ಫೈಲನ್ನು ಕಪಾಟಿನಲ್ಲಿ ಇಡಲಾಗಿದೆ. ಅದರ ಮಟ್ಟಿಗೆ ತಮಗೆ ಚಿಂತೆ ಬೇಡಾ. ನಿಮ್ಮ ಸಂಬಳವನ್ನು ಮಾತ್ರ ತಪ್ಪದೆ ಕಳುಹಿಸುವೆವು. ಪಡೆದು ಶಾಂತರಾಗಿರಬೇಕಾಗಿ ವಿನಂತಿ". ಇಂತಿ

'ಸಾಯ್ಬ'

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಕೇಂದ್ರವನ್ನು ಮಂಗಳೂರಿನಲ್ಲಿಯೇ ಇಳಿದು, ಕ್ರಮವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಹೊಂದಿ ದೇಶಸೇವೆಯನ್ನು ನಡೆಸುತ್ತಿರುವ ಮದ್ರಾಸ್ ಸಂಸ್ಥಾನದ ದೇಶೀಯ ಜಾಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ಕೊಟ್ಟ ಮೂಲಧನ: ರೂ. 330,900. ಕ್ಷೇಮನಿಧಿಗಳು: ರೂ. 444,647. ಠೇವಣಾತಿಗಳು: ರೂ. 57,67,040.

ಆಫೀಸುಗಳು—ಮಂಗಳೂರು, ಮುಂಬಾಯಿ, ಅಲಪ್ಪಿ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, [illegible], [illegible], ಕುಂದಾಪುರ, ಗಂಗೊಳ್ಳಿ ಮತ್ತು ಬಂಟವಾಳ.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

ಸ್ಫುಟವಿಚಾರಗಳು

ಹಿಂದೂದೇಶಕ್ಕೂ ಆಗಬಾರದೇಕೆ?

ಬ್ರಿಟಿಷ್ ಮುತ್ಸದ್ದಿಗಳು ಬ್ರಿಟಿಷರ ಸೌಕರ್ಯವನ್ನು ಚಿಂತಿಸುವುದರಲ್ಲಿ ಎಂದೆಂದೂ ಹೆಸರು ಹೊಂದಿರುವರೇ. ಅಲ್ಲೀಗ ಬೆಟ್ಟಿಂಗ್

ದೇಶದ ಶಾಂತಿಗಾಗಿ ಅವಿರಾಮವಾಗಿ ಭಾಷಣಗಳನ್ನೂ ಸಂಚಾರಗಳನ್ನೂ ಮಾಡುತ್ತ ದಣಿದ ಇವರು. ಈ ಬಾರಿ ಎಸೆಂಬ್ಲಿಗೆ ಸಪ್ತಸಗರದ ಕೊನ್ಸ್ಟಿಟ್ಯುಯನ್ಸಿಯಿಂದ ಆರಿಸಬಂದುದು,—ಎಸೆಂಬ್ಲಿಯ ಅಧಿವೇಶನಗಳಿಗೆ ಕಳೆಯೇರಿಸದಿರದು. ಅವರ ಗಭೀರವಾಣಿಯು ಎಸೆಂಬ್ಲಿ ಗೃಹದಲ್ಲಿ, ಸಪ್ತಲೋಕಗಳಿಗೂ ಕೇಳಿಸುವಂತೆ ಧ್ವನಿಸುವುದನ್ನೂ ನಿರೀಕ್ಷಿಸುವ ನಾವು, ಕೊಂಗ್ರೆಸ್ ಪಕ್ಷವು ಎಸೆಂಬ್ಲಿಯಲ್ಲಿ, ದೇಶಹಿತ ...ಟಗಳಿಗಾಗಿ ಯತ್ನಿಸುವಾಗ ...ಯವರ ಆ ವಾಣಿಯು ಇದಕ್ಕೆ ...ಕೀ ಧ್ವನಿಸುತ್ತಿರಲೆಂದು ಆಸೆ ...ರೆ, ಮೌಲಾನರ 'ಸ್ವತಂತ್ರ ...ವುದೇ?

ಭಾಷಣ ಪಾತ್ರವು—

...ದೆಯೆಂದು ನೆನಸಿದವರನೇ ...ವರಿಗೆ ಉತ್ತರವನ್ನು ಪತ್ರೋ...ಡದಲ್ಲಿ, ಕೆಳಗಿದೆ ಇರದಾ...ಸು ಪ್ರಾಂತ್ಯದಲ್ಲಿ ಜಸ್ಟೀಸ್ ...ಮುರಿದು ಹೋದಾಗ ...ಮೌನಂ ಸಮ್ಮತಿಲಕ್ಷಣಂ' ಎಂದು ...ಬಿಗಿ ಹಿಡಿಯದೆ—ಅಧಿಕಾರ ... ಪಕ್ಷವು ಒಮ್ಮೊಮ್ಮೆ ಅಪ...ದಿದೆ, ಹೊಸಬರು ಮುಂದೆ ...ಸ್ಥಾನದಲ್ಲಿರುವವರ ಕಾರ್ಯ...ಗಳನ್ನು ಹುಡುಕಿ ತೆಗೆದು ...ತಿಗೆ ಉಪಯೋಗಿಸುವರು ...ಯೂ ಇದೇ ಕತೆ' ಎಂಬೀ ...ಸ್ಟೀಸ್ ಪಕ್ಷದ ಸೋಲನ್ನೆ ...ಜನರು ಅಭಿಪ್ರಾಯ ಮಾಡಿ ...ವಾದದಲ್ಲೊಂದು ಸರ್ವ ...ಆಡಿರುವರು

...ಸ್ಸಿಗೆ ಸಹಸ್ರನಾಮ!

...ಕ್ಷವು ಹಿಮ್ಮೆಟ್ಟುವಂತಾಯಿ...ಸುವನ್ನು ಜಯವೆನಿಸುವಷ್ಟು ...ಆಡಿದ ಪತ್ರೋೀರವರು ...ವನ್ನುದ್ಧಾರ ಮಾಡದೆ ಬಿಡ...ಸ್ಸು ಹಿಂದೆ ಮಾಡಿದುದು ...ಮಾಡಲಿರುವುದೆಲ್ಲ ಕನಸು—...ಟೀಕೆ ಶ್ವೇತಪತ್ರವನ್ನು, ...ಗ್ಯ ಯೋಜನೆಯ ಅಭಾವ ...ದೂರಕ್ಕೆ ತಳ್ಳುವುದು ಮುತ್ತ ...ಅವರ ಉಪದೇಶ ಹಿಂದೆ ...ಕೊಂಗ್ರೆಸ್ಸಿನ ಮುಂದಿನ ...ಹಾಯ ಮಾಡಿದ ಜನರು, ...ವಿಜಯ ಸಾರಲ್ಪಟ್ಟಾಗಲೂ ...ಡಿದ ಪತ್ರೋೀರವರ ಭಾಷಣ ...'ನಸು' ಎಂದು ತಿಳಕೊಳ್ಳ

...ಗ್ಲೂ ಕಳುಹಿಸುವರೇಕೆ?

...ನಲ್ಲಿ ೪೦ ಮಿಲ್ಲಿಯ ಪ್ರಜೆ ...ಜಡ್ಜರು ಮಾತ್ರ ಇರುವ 'ಜಸ್ಟಿಸು'ಗಳನ್ನು ಪಡೆಯು...ರ್ಗ ಬರುವಂತೆ ಲೋರ್ಡ್ ...ಆಡಿ ತೋರಿಸಿರುವಾಗ,—...ಟ್ಟಿಗೆ ಶುದ್ಧ ಆಂಗ್ಲೇಯ...ನ್ ಜಸ್ಟಿಸರಾಗಿ ಕಳುಹಿದ ...ಲ್ಲೀದ ವಿಸ್ಮಯ ಪಡುವಂತಾ...ಗಿದೆ. ಅಲ್ಲಿಗೆ ಒಡೆಯರಾದವರು ಇಲ್ಲಿಗೆ ಬೇಕಾಗುವರೆಂದು ಅವರನ್ನಿತ್ತ ಕಳುಹುವಾಗ—ಅಲ್ಲಿಗೆ ಬೇಕಾದವರನ್ನು ಇಲ್ಲಿಗೆ ಬೇಡವಾದರೂ ಕಳುಹುವಂತಹ ನಿಸ್ವಾರ್ಥತೆಯೇಕೆ? ನಮ್ಮ ದಯಾಳು ಸರಕಾರಕ್ಕೆ ಹಿಂದೀಯರೊಳಗೇ ಯೋಗ್ಯರಾರಾದರೂ ಆ ಸ್ಥಾನ (ಚೀಫ್ ಜಸ್ಟಿಸ್)ಕ್ಕೆ ಸಿಗಲೊಲ್ಲರೇ? ಹಿಂದೂದೇಶಕ್ಕೇಕೆ ಈ ಅನೆಗತ್ಯವಾದ ವ್ಯಯ?

ಕಂಕನಾಡಿ ಬೈದೆರ್ಕಳ ಗರಡಿಯ ಬಡವಿದ್ಯಾರ್ಥಿ ಸಹಾಯಕ ಫಂಡು,

ಕಂಕನಾಡಿ—ಮಂಗಳೂರು.

ವಿಜ್ಞಾಪನೆ.

ಜಾತಿ ಪರಜಾತಿಯ ವಿದ್ಯಾಭಿಮಾನಿಗಳೇ,

ಬಿಲ್ಲವ ಸಮಾಜದಲ್ಲಿ ಸುಮಾರು 2½ ಲಕ್ಷ ಜನಸಂಖ್ಯೆ ಇದ್ದು, ಈ ವಿಷಯದಲ್ಲಿ ಅದು ದ. ಕ. ಜಿಲ್ಲೆಯಲ್ಲಿ ಎಲ್ಲಾ ಮತಗಳಿಗಿಂತಲೂ ಪ್ರಮುಖವಾಗಿದ್ದು, ವಿದ್ಯೆಯಲ್ಲಿ ಮಾತ್ರ ತೀರಾ ಹಿಂದಿರುವುದು ಸರ್ವವಿದಿತವಿದೆ. ಸಮಾಜದ ದಾರಿದ್ರ್ಯವು ನಾಶವಾಗಬೇಕಾದರೆ ಅದರಲ್ಲಿನ ಜನರು ವಿದ್ಯಾವಂತರಾಗಬೇಕು; ಆ ವಿದ್ಯೆಗೆ ಧನಬಲ ಜನಬಲಗಳ ಸಹಕಾರವು ಬೇಕು; ಆದರೆ ನಮ್ಮವರು ಈ ವಿದ್ಯೆ ಮತ್ತು ದ್ರವ್ಯಗಳಲ್ಲಿ ತೀರಾ ಬಡವರಿರುವರು.

ಇಂತಹ ವಿದ್ಯೆಯ ಬಡತನವನ್ನು ಹೋಗಲಾಡಿಸಬೇಕೆಂಬ ಸದುದ್ದೇಶದಿಂದ ನಾವು ಬಿಲ್ಲವ ಸಮಾಜಕ್ಕೆ ಭೂಷಣಪ್ರಾಯವಾಗಿರುವ ಕಂಕನಾಡಿ ಬೈದೆರ್ಕಳ ಗರಡಿಯಲ್ಲಿ ಒಂದು ಶಾಲೆಯನ್ನು ಕಟ್ಟಿಸಬೇಕೆಂದು ಬಗೆದು ಸಾಧಿಸುತ್ತಿರುವೆವು. ವಿದ್ಯಾಭಿಮಾನಿಗಳನೇಕರು ತಮ್ಮ ನೆರವನ್ನು ಈ ಕೆಳಗೆ ಕಾಣಿಸಿರುವಂತೆ ನೀಡಿರುತ್ತಾರೆ. ಇತರರೂ ನಮಗೆ ಉದಾರ ಮನಸ್ಸಿನಿಂದ ಸಹಾಯವನ್ನೀಯಬೇಕಾಗಿ ಪ್ರಾರ್ಥಿಸುವೆನು.

ಮುಂಬಾಯಿಯವರು.

(ಪ್ರತಿಯೊಂದು ಹೆಸರಿನ ಆದಿಯಲ್ಲಿ ಶ್ರೀಯುತ ಎಂದು ಕೂಡಿಸಿ ಓದಿಕೊಳ್ಳುವುದು)

	ವಾಗ್ದಾನ. ರೂ.	ಆ.	ಜಮೆ. ರೂ.	ಆ.		ವಾಗ್ದಾನ. ರೂ.	ಆ.	ಜಮೆ. ರೂ.	ಆ.
ಡಾ। ಸರಸ್ವತೀ ಬಾಯಿ	500	0			ಕೆ ಎಸ್ ಅಂಚನ್	5	0		
ಎಸ್ ರಾಘವೇಂದ್ರ, ಗೋಕುಲ್ ಲಿಮಿಟೆಡ್	100	0	25	0	ಬಿ ಎಮ್ ಅಮೀನ್	5	0		
					ಬಿ ಪರಮೇಶ್ವರ	5	0	5	0
ಎಮ್. ರಮಾನಾಥ	50	0	25	0	ಕೆ ರಾಮುಲಾಲ್	5	0		
ಎಮ್. ಸುನಂದ, (ಶ್ರೀಮತಿ ಗಂಗಾಬಾಯಿಯವರ ಸ್ಮರಣಾರ್ಥ)	25	0	25	0	ಎಮ್ ವಿ ರಾವ್	8	0		
					ಎಮ್ ಬೊಗ್ರ	3	0		
ಎಸ್. ರಾಧಾ ಬಾಯಿ	25	0	25	0	ಕೇಶ ಅಪ್ಪಯ್ಯ	3	0		
ಕೆ. ತಲವಾರ್	25	0	25	0	ವಿ ಎಸ್. ಕ್ಯಾದಿನಿಯಾ	8	0		
ಎ. ಪಿ ಕಿರೋಡಿಯನ್	15	0	15	0	ಎಸ್ ಡಿ ಅಮೀನ್	8	0		
ಬಿ. ಎಲ್. ಕರ್ಕೇರ	10	0			ಕೆ ರಾಮ ರಾವ್	2	0	2	0
ಯು. ಎಸ್. ಬಂಗೇರ	10	0			ಪಲ್ಯಾರ್ ಅಪ್ಪು ಪೂಜಾರಿ	2	0		
ಪುತ್ತೂರು ಕೊರಗಪ್ಪ	10	0			ವೈ ಎಮ್ ಕುಕಿಯನ್	2	0		
ಎಮ್. ಅಪ್ಪಣ್ಣ	10	0			ಕೆ. ವಿ ಸುವರ್ಣ ಎಂಡ್ ಬ್ರದರ್ಸ್	2	0		
ಬಿ ಪಿ. ಕೊಳೊರ್ಕಾರ್	10	0	5	0	ಕಾನ್ನಾಡು ರುಕ್ಕ	2	0		
ಟಿ. ಪಿಜನ	5	0	5	0	ಎಮ್ ವಿ ನಾಥ	2	0	2	0
ಪೆರ್ಮುದೆ ದಾಸಪ್ಪ ಬಂಗೇರ	5	0	5	0	ಪಿ ಡಿ ಅಂಚನ್	2	0		
ಮಂಜುನಾಥ ಬಿ. ಅಮೀನ್	5	0	5	0	ಬೆಮ್ಮಣ್ಣ, ಎಸ್. ಕಿರೋಡಿಯನ್	1	8		
ಎಮ್. ಆರ್. ಚಂದರ್	5	0			ಪಿ ಎ ಸಾಲಿಯಾನ್	1	8		
ಎಸ್. ಡಿ ಚೆನ್ನಯ್ಯ	5	0			ಮುಂಡ್ಕೂರು ಮುತ್ತ ಸುವರ್ಣ	1	4		
ಎಮ್. ಪಿ ಸನಿಲ್, ಬ್ರದರ್ಸ್	5	0			ಎಸ್. ಸಂಕಪ್ಪ	1	0		
ಈಶ್ವರ ಎ. ಸಾಲಿಯಾನ್	5	0	5	0	ಆರ್ ಎಸ್. ಕುಂದರ್	1	0		

...ಕಳೆದ ಐದು ವರ್ಷಗಳಿಂದಲೂ ಪ್ರಾಂತ್ಯದ ಸಂಪದಭ್ಯುದಯಕ್ಕೆ 'ಸಾಧಕವಾದ' ಯಾವ ಯೋಜನೆಯನ್ನು ಕೈಗೊಂಡಿದೆ?—ಎಂಬ ಪ್ರಶ್ನೆ ಇನ್ನೂ ಕೇಳಬರುತ್ತಿದೆ. ಇತ್ತಲಾಗೆ ಮಂಜೂರಾದ ಲ್ಯಾಂಡ್ ಮೊರ್ಗೇಜ್ ಬ್ಯಾಂಕ್ ಯೋಜನೆಯೂ, ಸಾಲಿಗರ ಮಸೂದೆಯೂ ಹೊರತು ಬೇರೆ ಫಲದಾಯಕವಾದುದಾವುದೂ ತೋರಬಾರದೆನ್ನಬೇಕು. ಮೆಟ್ಟೂರು ಅಣೆಕಟ್ಟು ಇವರ ಕಾಲದಲ್ಲಿ ಪೂರ್ಣಗೊಂಡಿತಾದರೂ,

...ತಮ್ಮ ನಾನಾ ಜವಾಬ್ದಾರಿ ಹುದ್ದೆಗಳಿಂದಲೂ ಪಡೆದ ಪರಿಪಾಕದಿಂದ ಎರ್ಸ್ಕಿನ್ ಪ್ರಭುಗಳು ಜನಾಭಿಪ್ರಾಯಕ್ಕೆ ಪ್ರತಿಕೂಲರಾಗದೆ ನಡಕೊಳ್ಳುವರೆಂದು ಜನತೆಯ ಆಶಯ. ರಾಜ್ಯಾಂಗ ರಚನಾ ಕಾರ್ಯದಲ್ಲೀಗ ಕೊಂಗ್ರೆಸ್ಸು ಸರಕಾರದೊಡನೆ ಸಹಕರಿಸಲು ಹಿಂಜರಿಯದೆಂಬುದರಿಂದ ಲೋರ್ಡ್ ಎರ್ಸ್ಕಿನರವರ ಕಾರ್ಯಪಥವು ಸುಗಮವಾದೀತೆಂದು ಆಶಿಸಬಹುದಾಗಿದೆ.

ಮೇಲಿಯೇ ಸರ್ ಪಟ್ಟಾನಿಯವರು ಅವಲಂಬಿಸಿದ್ದು, ಅವರ ಸಹಾಯದಿಂದಲೇ, ರೈತರನ್ನು ಋಣಮುಕ್ತರನ್ನಾಗಿ ಮಾಡುವಲ್ಲಿ ಯಶಸ್ವಿಯಾದರು. ಆದರೆ, ನಮ್ಮ ಸಿಮ್ಲ ಬೆಟ್ಟಕ್ಕೆ ಈ ವಾರ್ತೆಯು ರುಚಿಕರವೆನಿಸೀತೆ?

ಮೌ। ಶೌಕತಾಲಿಯವರ ವಿಜಯವು

—ಕೊಂಗ್ರೆಸ್ ವಿಜಯದಂತೆ, ಮತ್ತೊಂದು ಬಗೆಯಲ್ಲಿ ಸ್ವಾರಸ್ಯವನ್ನುಳ್ಳದಾಗಿದೆಯೆನ್ನಬೇಕು. ಮುಸ್ಲಿಮರಿಗಾಗಿ, ಅಂತೇ ಹಿಂದೂ

	ರೂ. ಅ. ವಾಗ್ದಾನ.	ರೂ. ಅ. ಜಮೆ.		ರೂ. ಅ. ವಾಗ್ದಾನ.	ರೂ. ಅ. ಜಮೆ.
ತಿಮ್ಮಪ್ಪ ಕೋಟ್ಯಾನ್	1 0		ಎಮ್. ಕುಪ್ಪಯ್ಯ	1 0	
ಜಿ. ಎಚ್. ಸುವರ್ಣ	1 0		ಕೆ. ಜಾರಪ್ಪ	1 0	
ಎಸ್. ರಾಮು ಸಾಲಿಯಾನ್	1 0		ಜಿ. ಸಿ. ಕುಕಿಯನ್	1 0	
ನಾಗಪ್ಪ ಕೋಟಿಯಾನ್	1 0		ಪಿ. ಪೂವಪ್ಪ	1 0	
Friend of the Poor	1 0		ಜಿ. ಎಲ್. ಕೋಟ್ಯನ್	1 0	
ಸುವರ್ಣ ಪಿ. ಕ್ರಿಸ್ಟಲ್	1 0		ಬೆಮ್ಮರ್ಣ ನಾರ್ಣ	1 0	
ಎಮ್. ಎಸ್. ಕರ್ಕೇರ	1 0		ಎ. ದಾಮೋದರ	1 0	1 0
ಡಿ. ಜಿ. ಕೋಟಿಯಾನ್	1 0		ಎಮ್. ಸಂಕಪ್ಪ	0 8	

ಮಂಗಳೂರಿನವರು:

ಸಾಹುಕಾರ್ ಎಚ್. ಕೊರಗಪ್ಪ	500 0		ಆರ್. ಲಕ್ಷ್ಮೀನಾರಾಯಣಭಟ್	15 0	
ಕಂಕನಾಡಿ ಗರಡಿಯ ಭಂಡಾರದಿಂದ	200 0	200 0	ಬಿ. ತುಕ್ಕಪ್ಪ	10 0	
ಅತ್ತಾವರ ವೆಂಕಪ್ಪ ಪೂಜಾರಿ	100 0	50 0	"ಎ. ಎಲ್. ಸಿ."	10 0	10 0
ಯು. ಕೃಷ್ಣಪ್ಪ	100 0		ಬಿ. ಪಿ. ಕರ್ಕೇರ	16 0	
ಸೇಸು ಪೂಜಾರಿ	100 0	100 0	ಪದವು ಜಾಮು ಬೆಳ್ಚಡ	5 0	
ಕಂಟ್ರಾಕ್ಟರ್ ದೂಮಪ್ಪ ವೈಲಿ	100 0	50 0	ಅತ್ತಾವರ ಮಂಜಪ್ಪನವರು	5 0	5 0
ಗುದ್ದ ಮೇಸ್ತ್ರಿಯವರು ಕಂಟ್ರಾಕ್ಟರ್	25 0		ಕಂಕನಾಡಿ ಗುರುವಪ್ಪ ಮೇಸ್ತ್ರಿ	2 0	
ಬಿ. ರಾಮಪ್ಪ, ಜಯರಾಮ್ ಹಂಚು ಕಾರ್ಖಾನೆ	25 0	25 0	ಕಂಕನಾಡಿ ಸೋಮಪ್ಪ	1 0	1 0

ಕಟ್ಟಡಕ್ಕಾಗಿ ಧರ್ಮಾರ್ಥ ಮರಗಳನ್ನು ಕೊಟ್ಟವರು:

ಮಂಗಳೂರಿನವರು.	ಬೆಲೆ.	ಮಂಗಳೂರಿನವರು.	ಬೆಲೆ.
ಎನ್. ಸಿ. ಸುವರ್ಣ ಎಂಡ್ ಸನ್ಸ್	13—0—0	ಎನ್. ಜಿ. ಸುವರ್ಣ ಎಂಡ್ ಸನ್ಸ್	6—8—0
ಕೆ. ಮಾಧವ	6—8—0	ಮಂಜೇಶ್ವರ ಜ್ಯೆರ ಮೇಸ್ತ್ರಿ	8—0—0
ಕೆ. ಪಿ. ಕರ್ವನ್ ಎಂಡ್ ಕುಂಞಕಣ್ಣನ್	6—8—0	ಶಿರ್ತಾಡಿ ಕಣ್ಣ ಮೇಸ್ತ್ರಿ	8—0—0
ಎಸ್. ಕಣ್ಣನ್	6—8—0	ಆರ್. ಸರವು	6—0—0
ಎಮ್. ಮಹಮ್ಮದ್ ಸಾಹೇಬ್ ಎಂಡ್ ಬಿ. ಶೇಕ್ ಇಬ್ರಾಹಿಮ್ ಸಾಹೇಬ್	8—4—0	ಕಂಕನಾಡಿ ಕಾಂತು	6—0—0

ಶೀಘ್ರದಲ್ಲೆ ಗರಡಿಯ ಜಾತ್ರೆಯು ಸನ್ನಿಹಿತವಾಗಲಿದೆಯಾದುದರಿಂದ ಧರ್ಮಾಭಿಮಾನಿಗಳು ತಮ್ಮ ವಂತಿಗೆಯ ಮೊತ್ತವನ್ನು ಆದಷ್ಟು ಬೇಗ ಕರುಣಿಸಿ ನಮ್ಮ ಕಟ್ಟಡದ ಕಾರ್ಯವು ಜಾತ್ರೆಯೊಳಗೆ ಅಂತ್ಯವಾಗುವಂತೆ ಸಹಕರಿಸಿ ಪುಣ್ಯಭಾಗಿಗಳಾಗಬೇಕಾಗಿ ಕೋರಲಾಗಿದೆ. (ಮುಂದಿನ ಹೆಸರುಗಳೂ ನೋಟೀಸು ರೂಪದಲ್ಲಿ ಪ್ರಕಟಿಸಲ್ಪಡುವುವು.)

ವ. ಕಾಂತಪ್ಪ.

ಶಾರದಾ ಛಾಪಖಾನೆ, ರಥಬೀದಿ, ಮಂಗಳೂರು.

ಜಟ್ಟು ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶಿಯ ಜ್ವಾಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ಶಿಕ್ತ ಮೂಲಧನ: ರೂ. 330,900. ಕ್ಷೇಮನಿಧಿಗಳು: ರೂ. 444,647. ಠೇವಣಾತಿಗಳು: ರೂ. 57,67,040.

ಆಫೀಸುಗಳು—ಮಂಗಳೂರು, ಮುಂಬಾಯಿ, ಅಲಪ್ಪೆ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ ಮತ್ತು ಬಂಟವಾಳ.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

ಅನುಕ್ರಮಣಿಕೆ

ಶ್ರೀ [illegible] ಪತ್ರಿಕೆಗಳು	೧
[illegible]	
ಗವರ್ನರುಗಳ ಆಗಮನ ನಿರ್ಗಮನಗಳು	[illegible]
ಸ್ಫುಟವಿಚಾರಗಳು	[illegible]
[illegible]	೧[illegible]
[illegible] ಸಂಗ್ರಹ	೧೦
[illegible]	೧[illegible]
[illegible]	೧[illegible]
[illegible]	[illegible]
[illegible]	೧೧
[illegible] ವೃದ್ಧರಾಗಿರುವ ಸ್ವರ್ಗ!	[illegible]
[illegible] ಕೊಂಗ್ರೆಸ್ [illegible]	೧[illegible]
[illegible]	[illegible]

ಸ್ವದೇಶಾಭಿಮಾನಿ

ತಾ. ೨೩ನೇ ಶುಕ್ರವಾರ ನವಂಬರ '೩೪

ಗವರ್ನರುಗಳ ಆಗಮನ–ನಿರ್ಗಮನಗಳು.

ಕಳೆದ ಐದು ವರ್ಷಗಳಿಂದ ನಮ್ಮ ಪ್ರಾಂತ್ಯಾಧಿಪತಿಗಳಾಗಿದ್ದ ಮಾನ್ಯ ಸರ್ ಜೋರ್ಜ್ ಸ್ಟೇನ್ಲಿಯವರು ಇದೇ ತಾ. ೧೫ರಲ್ಲಿ ನಿವೃತ್ತರಾಗಿ ಸ್ವದೇಶಕ್ಕೆ ಹೊರಟರು. ಅಂದೇ, ಅವರ ಸ್ಥಾನದಲ್ಲಿ, ಮಾನ್ಯ ಎರ್ಸ್ಕಿನ್ ಪ್ರಭುಗಳು ಆರೂಢರಾಗಿ, ಕಾರ್ಯ ನಿರ್ವಹಣದ ಸೂತ್ರಗಳನ್ನು ಹಿಡಿದರು.

ಅಧಿಕಾರಿ ವರ್ಗದವರ ಪ್ರೀತಿಗೂ ಪ್ರಜೆಗಳ ಗೌರವಕ್ಕೂ ಪಾತ್ರರಾಗಿ, ಪ್ರಜಾವರ್ಗದ ಅಭ್ಯುದಯಾಕಾಂಕ್ಷೆಯಿಂದ ನಿಷ್ಪಕ್ಷಪಾತವಾಗಿಯೂ ಸರ್ವಸಮ್ಮತವಾಗುವಂತೆಯೂ ಕಾರ್ಯರಥವನ್ನು ನಡೆಯಿಸಲು ಸತತ ಯತ್ನಗಳನ್ನು ಕೈಕೊಂಡಿದ್ದ ಸರ್ ಜೋರ್ಜ್ ಸ್ಟೇನ್ಲಿಯವರ ಆ ಐದು ವರ್ಷಗಳ ಆಡಳಿತದ ಕಡೆಗೆ ಕೊಂಚ ದೃಷ್ಟಿಯನ್ನು ಹೊರಳಿಸುವುದು ಅಪ್ರಸ್ತುತವೆನಿಸಲಾರದು. ಇವರ ಕಾರ್ಯನಿರ್ವಾಹದ ಪ್ರಥಮ ವರುಷವೇ, ಇತಿಹಾಸದಲ್ಲಿ ಕಂಡೂ ಕೇಳದ ಆರ್ಥಿಕ ಮುಗ್ಗಟ್ಟು ಪ್ರಪಂಚವನ್ನೆಲ್ಲ ಪ್ರಸರಿಸಿದಂತೆ ನಮ್ಮ ಪ್ರಾಂತ್ಯವನ್ನೂ [illegible]ದದಾಯಿತು. ಇದರ ಆಘಾತವು ಮೊದಲಾಗಿ ರೈತ ಜನಾಂಗದ ಮೇಲೆಯೇ ಆಯಿತೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಅಂದಿನಿಂದ ಇಂದಿಗೂ ರೈತರು ಅದರಿಂದ ಚೇತರಿಸಿಕೊಳ್ಳುವ ಬದಲಾಗಿ ಇನ್ನೂ ಅವನತಿ ಪಥದಲ್ಲಿ ಇಳಿಯುತ್ತಿರುವರೆಂದೇ ಹೇಳಬೇಕಾಗಿದೆ. ಇಂಗ್ಲಾಂಡಿನ ವರ್ಗದಾರ ಶ್ರೀಮಂತರಲ್ಲೊಬ್ಬರಾದ ಸರ್ ಜೋರ್ಜ್ ಸ್ಟೇನ್ಲಿಯವರು ರೈತರ ಸಂಕಷ್ಟಗಳನ್ನು ಚೆನ್ನಾಗಿ ತಿಳಿಯಬಲ್ಲವರಾಗಿದ್ದು, ಕೃಷಿ ಪ್ರಧಾನವಾದ ನಮ್ಮ ಪ್ರಾಂತ್ಯದ ರೈತರ ಸಂಕಷ್ಟ ನಿವಾರಣೆಗೆ ಅವರು ಪರಿಣಾಮಕಾರಿಯಾದ ಯಾವ ಚಿಕಿತ್ಸೆಯನ್ನೂ ಮಾಡುವ ಯತ್ನದಲ್ಲಿ ಯಶಸ್ವಿಯಾಗಲಿಲ್ಲವೆನ್ನಬೇಕಾಗಿದೆ. ಮದರಾಸು ಸರಕಾರವು ಕಳೆದ ಐದು ವರ್ಷಗಳಿಂದಲೂ ಪ್ರಾಂತ್ಯದ ಸಂಪದಭ್ಯುದಯಕ್ಕೆ ಸಾಧಕವಾದ ಯಾವ ಯೋಜನೆಯನ್ನು ಕೈಗೊಂಡಿದೆ?–ಎಂಬ ಪ್ರಶ್ನೆ ಇನ್ನೂ ಕೇಳಿಬರುತ್ತಿದೆ. ಇತ್ತಲಾಗೆ ಮಂಜೂರಾದ ಲ್ಯಾಂಡ್ ಮೋರ್ಗೇಜ್ ಬ್ಯಾಂಕ್ ಯೋಜನೆಯೂ, ಸಾಲಿಗರ ಮುಸ್ಸೋದೆಯೂ ಹೊರತು ಶೀಘ್ರ ಫಲದಾಯಕವಾದುದಾವುದೂ ತೋರಿಬಾರದೆನ್ನಬೇಕು. ಮೆಟ್ಟೂರು ಅಣೆಕಟ್ಟು ಇವರ ಕಾಲದಲ್ಲಿ ಪೂರ್ಣಗೊಂಡಿತಾದರೂ, ಕಾಗುವಲ್ಲಿ ಯಶಸ್ವಿಯಾಗುವ ಹಾಗೆ ಜಮೀನುಗಳಿಗೆ ಅದರ ಉಪಯೋಗವನ್ನು ರೈತರು ಸಾಮಾನ್ಯ ದರಗಳಲ್ಲಿ ಮಾಡಿಕೊಳ್ಳುವ ಕಾಲವಿನ್ನೂ ಸಮೀಪದಲ್ಲಿದ್ದಂತೆ ಕಂಡುಬರುತ್ತಿಲ್ಲ. ಪ್ರಾಂತಿಕ ಬಜೇಟನ್ನು ಸರಿದೂಗಿಸ[illegible] ಸರಕಾರವು ರೈತರಿಗೆ ಕೊಡಬೇಕಾದಷ್ಟು ರಿಯಾಯಿತಿಯನ್ನು ಕೊಡದಾಯಿತು. ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ರೈತರು ಮುಂದಾಲೋಚನೆಯಿಲ್ಲದೆ ವರ್ತಿಸಿದ ಫಲವೇ ಈಗಳಿನ ಅವರ ದುಃಸ್ಥಿತಿಯಾಗಿದೆಯೆಂಬ–ಅಧಿಕಾರಿಗಳ ಅಭಿಪ್ರಾಯವನ್ನೆ ಸರ್ ಜೋರ್ಜ್ ಸ್ಟೇನ್ಲಿಯವರು ಅನುಮೋದಿಸುವ ಕಡೆಗೆ ಒಲಿದುದು ಕೊಂಚ ಆಶ್ಚರ್ಯಕರವೆನ್ನಬೇಕು. ಅದರಲ್ಲಿ ಸತ್ಯವಿಲ್ಲದಿಲ್ಲ. ಪರಂತು, ಪ್ರಜಾಪಾಲಕ ಸರಕಾರವು ತಪ್ಪುಗಳನ್ನು ಬೆರಳಿಟ್ಟು ತೋರಿಸುವಾಗ ಚಿಕಿತ್ಸೆಗಾಗಿಯೂ ಶಕ್ಯವಿದ್ದಷ್ಟು ಯತ್ನಿಸಬೇಕಾದುದು ಧರ್ಮ. ಶಾಸನ ನಿರೋಧ ಚಳವಳವೂ ಅದರಲ್ಲಿ ರೈತರು ಪ್ರತ್ಯಕ್ಷವಾಗಿಯಾಗಲಿ ಅಪರೋಕ್ಷವಾಗಿಯಾಗಲಿ ವಹಿಸಿದ ಭಾಗವೂ ಸರಕಾರದ ಪ್ರೀತಿಯನ್ನವರು (ಕೃಷೀವಲರು) ಬಹುಮಟ್ಟಿಗೆ ಕಳೆದುಕೊಳ್ಳುವಂತೆ ಮಾಡಿತೆನ್ನಬಾರದೇಕೆ?

ಇನ್ನು, ಕೌನ್ಸಿಲಿನ ಅವಧಿಯನ್ನು ಅನಪೇಕ್ಷಿತವಾದರೂ ಬೆಳೆಸಿದುದು ಕಾರ್ಯ ನಿರ್ವಹಣದ ಪಾವಿತ್ರ್ಯವನ್ನು ಹೆಚ್ಚಿಸಲು ಯಾವ ಬಗೆಯಿಂದ ಸಹಕಾರಿಯಾಯಿತೋ ನಮಗೆ ತಿಳಿಯದು. ಪಂಗಡಗಳೊಳಗಿನ ಒಗ್ಗಟ್ಟು ಮತ್ತು ಶಿಷ್ಟಾಚಾರದ ಅಭಾವವನ್ನೂ ನಮ್ಮ ಮಾನ್ಯ ಮಾಜಿ ಗವರ್ನರರು ಮನಗಂಡಿರುವರಾದರೆ ಅದೂ–ಕೌನ್ಸಿಲ್ ಅವಧಿಯನ್ನು ಹೆಚ್ಚಿಸಿದುದರಿಂದ ಮತ್ತಷ್ಟು ಹೆಚ್ಚೀ ಅವಕಾಶ ಗೊಟ್ಟಿತೆಂದು ಬೆದರಬೇಕಾಗಿದೆ. ಮಂತ್ರೀ ಮಂಡಲದ ವಿಷಯವಾಗಿಯೂ ನಾವು 'ವಿಶೇಷ'ವೆಂದು ಹೊಗಳುವ ವಿಷಯವಾವುದೆಂದು ಸೂಚನೆಯಾಗುವುದಿಲ್ಲ. ಹೇಗಿದ್ದರೂ, ಪ್ರಾಮಾಣಿಕತೆಯಿಂದಲೂ ಆಸಕ್ತಿಯಿಂದಲೂ ಕಾರ್ಯನಿರ್ವಹಣವನ್ನು ಮುಂದೊತ್ತಲು ಸತತ ಯತ್ನಿಸಿದ ಸರ್ ಜೋರ್ಜ್ ಸ್ಟೇನ್ಲಿಯವರ ಶುದ್ಧ ಹೃದಯ, ದಯಾಪೂರ್ಣ ವಾಣಿ, ಚಿತ್ತಾಕರ್ಷಕ ವ್ಯಕ್ತಿತ್ವ ಇವುಗಳನ್ನು ಮರೆಯಬಾರದು. ಪ್ರಜೆಗಳ ಸಾಮಾಜಿಕ–ನೈತಿಕ–ಸಾಂಪತ್ತಿಕ ಅಭಿವೃದ್ಧಿಗಳನ್ನು ತ್ರಿಕರಣಪೂರ್ವಕವಾಗಿ ಚಿಂತಿಸುತ್ತಿದ್ದ ಇವರಿಗೆ ಅವುಗಳನ್ನು ಯಶಸ್ವಿಯಾಗಿ ಮುಂದೊತ್ತುವ ಸಕಲ ಸಾಧನಗಳೂ ಅನುಕೂಲವಾಗಿರಲಿಲ್ಲವೆಂಬುದೇ ದುಃಖದ ವಿಷಯವಾಗಿದೆ. ಜನಪ್ರೀತರಾಗಿರುವ ಈ ಮಹನೀಯರು, ಮದರಾಸು ಪ್ರಾಂತ್ಯದ ಗವರ್ನರರಾಗಿಯೂ ಕೆಲಕಾಲ ವೈಸರಾಯರಾಗಿಯೂ ಇಲ್ಲಿ ಪಡೆದ ಅನುಭವವನ್ನು, ಇಂಗ್ಲಾಂಡಿನಲ್ಲಿ ತಮ್ಮ ವಿರಾಮಕಾಲದಲ್ಲಿ ಹಿಂದೂದೇಶದ ಅಭ್ಯುದಯ ಚಿಂತನೆಯಿಂದ ಸದುಪಯೋಗಪಡಿಸಲೆಂದು ಹಾರೈಸುವೆವು.

ಹೊಸ ಗವರ್ನರರಾಗಿ ಬಂದಿರುವ ಲೋರ್ಡ್ ಎರ್ಸ್ಕಿನರಿಗೆ ಸುಸ್ವಾಗತವನ್ನು ಬಯಸುತ್ತ ನಮ್ಮ ಪ್ರಾಂತ್ಯವು, ಅವರಿಂದ ಮಹತ್ವದ ಮಾರ್ಪಾಟುಗಳನ್ನು ನಿರೀಕ್ಷಿಸುತ್ತಿದೆ. ಶ್ವೇತಪತ್ರದೊಳಗಿನ ಸುಧಾರಣೆಗಳನ್ನು ಜ್ಯಾರಿಗೆ ತರುವ ಕಾರ್ಯಭಾರವು ಈ ಹೊಸ ಗವರ್ನರರ ಪಾಲಿಗೆ ಬರುವುದಾಗಿದೆ. ಗವರ್ನರುಗಳ ಜವಾಬ್ದಾರಿಯು ಇದರೊಂದಿಗೆ ಮತ್ತಷ್ಟು ಹೆಚ್ಚುವುದು. ಅದನ್ನು ಹೇಗೆ ನಿರ್ವಹಿಸಬೇಕೆಂದು ಚೆನ್ನಾಗಿ ವೈಟ್ ಹೋಲಿನಿಂದ ಹಿಂದಣ ತಮ್ಮ ನಾನಾ ಜವಾಬ್ದಾರಿ ಹುದ್ದೆಗಳಿಂದಲೂ ಪಡೆದ ಪರಿಪಾಕದಿಂದ ಎರ್ಸ್ಕಿನ್ ಪ್ರಭುಗಳು ಜನಾಭಿಪ್ರಾಯಕ್ಕೆ ಪ್ರತಿಕೂಲರಾಗದೆ ನಡೆಕೊಳ್ಳುವರೆಂದು ಜನತೆಯ ಆಶಯ. ರಾಜ್ಯಾಂಗ ರಚನಾ ಕಾರ್ಯದಲ್ಲಿಳಿದ ಕೊಂಗ್ರೆಸ್ಸು ಸರಕಾರದೊಡನೆ ಸಹಕರಿಸಲು ಹಿಂಜರಿಯದೆಂಬುದರಿಂದ ಲೋರ್ಡ್ ಎರ್ಸ್ಕಿನರವರ ಕಾರ್ಯಪಥವು ಸುಗಮವಾದೀತೆಂದು ಆಶಿಸಬಹುದಾಗಿದೆ.

ಸ್ಫುಟವಿಚಾರಗಳು

ಹಿಂದೂದೇಶಕ್ಕೂ ಆಗಬಾರದೇಕೆ?

ಬ್ರಿಟಿಷ್ ಮುತ್ಸದ್ದಿಗಳು ಬ್ರಿಟಿಷರ ಸೌಕರ್ಯವನ್ನು ಚಿಂತಿಸುವುದರಲ್ಲಿ ಎಂದೆಂದೂ ಹೆಸರು ಹೊಂದಿರುವರೇ. ಅಲ್ಲೀಗ 'ಬೆಟ್ಟಿಂಗ್ ಬಿಲ್' ಎಂಬ ಒಂದು ಹೊಸ ಮಸೂದೆಯು ವಿದೇಶೀಯರು ಸೋದ್ವಿಯ ಹೆಸರಲ್ಲಿ ಸೂರೆ ಮಾಡುವ ಧನದ ಬೆಟ್ಟವನ್ನು ತಡೆಯಲೋಸುಗಲೆಂದೇ ಸಿದ್ಧವಾಗಿ, ಜ್ಯಾರಿಗೆ ಬಂದುದಾಯಿತು. ಇದಕ್ಕಾಗಿ ಬ್ರಿಟಿಷ್ ಮಂತ್ರಿಮಂಡಲವನ್ನು ಕೊಂಡಾಡಲೇಬೇಕು. ಪರಂತು, ಇಂಡಿಯದ ವಿಚಾರವೇನು? ಇಲ್ಲಿ, ವಿದೇಶೀಯರು 'ಸೋದ್ವಿ'ಯೆಂದೋ ಕುದುರೆ ಜೂಜೆಂದೋ ಮಾಡುವ ಹಾವಳಿ ಎಷ್ಟೆಂದು ನಮ್ಮ ಸರಕಾರಕ್ಕೆ ಚೆನ್ನಾಗಿ ತಿಳಿದಿದೆ. ಆದರೆ, ನಮಗೇಕೆ ಸಂರಕ್ಷಣೆಯಿಲ್ಲವೆಂಬ ಪ್ರಶ್ನೆ ಏಳುವುದಾಯಿತು. ಬ್ರಿಟಿಷ್ ಪ್ರಜೆಗಳು ಅಂತಹ ರಕ್ಷಣೆಗೆ ಅರ್ಹರಾದರೆ ಹಿಂದೀಯರೇಕಾಗಬಾರದು?–ಎಂಬ ಕೂಗು ಎದ್ದಿದೆ.

ಜರ್ಮನಿ-ಜಾಪಾನುಗಳೊಳಗಣ ನಂಟು–

–ಏತಕ್ಕೆ? ಇದರ ಮರ್ಮವೇನು?–ಎಂಬುದನ್ನು ತಿಳಿಯಲಾರದೆ ಹಲವರು ನಾನಾ ಬಗೆಯ ಸಂದೇಹಕ್ಕೊಳಗಾಗಿರುವರು. ಜರ್ಮನಿಯು ಆಕಾಶ ಸೈನ್ಯವನ್ನು ಬಲಪಡಿಸಿ ಸಮರೋದ್ಯುಕ್ತ ರಾಷ್ಟ್ರಗಳನ್ನು ಅಗಣ್ಯಭಾವದಿಂದ ನೋಡುತ್ತಿದೆಯಾದರೆ, ಜಪಾನು ಜಲಾಂತರ್ಗಾಮಿ ನಾವೆಗಳನ್ನು ಬಲಪಡಿಸಿ ತನ್ನ ಸಿದ್ಧತೆಯನ್ನೂ ಸಾರಿದೆ. ಆಕಾಶಪಾತಾಳಗಳೆರಡಕ್ಕೂ ಇವೆರಡು ರಾಷ್ಟ್ರಗಳು ಸಂಕಲೆ ಹಾಕಿದುದಲ್ಲದೆ, ಇತ್ತೀಚೆ ಒಂದು ವಿಚಿತ್ರ ಕರಾರನ್ನೂ ಮಾಡಿಕೊಂಡವಲ್ಲ! ಇವೆರಡರ ನಂಟು ದೃಢವಾದರೆ ಇವುಗಳೇನು ಮಾಡುವುವು, ಏನನ್ನು ಮಾಡಲಿರವು ಎಂಬುದನ್ನು ಹೇಳಲಾಗದು. ಮತ್ತು,–ಇವೆರಡೂ ರಾಷ್ಟ್ರಗಳು ಜನಾಂಗ ಸಂಘದ ಬಂಧನವನ್ನು ಕಡಿದುಕೊಂಡುದರಲ್ಲಿಯೂ ಏನಾದರೂ ಮರ್ಮವಿರಬಹುದೇ? ಈ ವಿಚಿತ್ರ ನಂಟಿಗೆ ಪ್ರಪಂಚದ ಉಳಿದ ರಾಷ್ಟ್ರಗಳು ಹೇಗೆ ಉತ್ತರ ಕೊಡುವುವೋ ನೋಡಬೇಕಾಗಿದೆ.

ರೈತರನ್ನು ಸಾಲಿಗರ ದವಡೆಯಿಂದ ತಪ್ಪಿಸಲು–

–ಭಾವನಗರವು ಪ್ರಯೋಗಿಸಿದ ಕಾರ್ಯ ವಿಧಾನವು ಯಶಸ್ವಿಯಾದ ವಾರ್ತೆಯನ್ನು ನಾವು ಕೇಳುತಿದ್ದೇವೆ. ಸರ್ ಪಿ. ಪಟ್ಟಾಣಿಯವರು ಆ ಯೋಜನೆಯನ್ನು ಮಾಡುವಾಗ ಹಿಂದೀಯೇತರರಾರನ್ನೂ ಮಂತ್ರಾಲೋಚನೆಗಾಗಲಿ, ಸಹಕಾರಕ್ಕಾಗಲಿ ಕರೆಯಲಿಲ್ಲ. ಇದರಿಂದ ಹಣವುಳಿಯಿತು; ಸ್ವಂತ ಮಿದುಳನ್ನು ಸದುಪಯೋಗಮಾಡಿದಂತಾಯಿತು. ಮುಖ್ಯವಾಗಿ ಕಾರ್ಯವೂ ಸುಗಮವಾಗಿ ಕೈಗೂಡಿತು. ಅವರನ್ನೇನಾದರೂ,–ಬ್ರಿಟಿಷ್ ಇಂಡಿಯದಲ್ಲಾದ ಬ್ಯಾಂಕಿಂಗ್ ವಿಚಾರಣೆಯಂತೆ–ವಿಚಾರಿಸಿದ್ದಲ್ಲಿ–'ಬಹು ಅಪಾಯಕರ! ಈಗ ವಿಹಿತವಲ್ಲ!'ವೆಂಬ ಉಪದೇಶವನ್ನು ಪಡೆಯಬೇಕಾಗಿದ್ದಿತೇನೋ ಯಾರುಬಲ್ಲರು! ಸ್ಥಳೀಯ ಪ್ರಾಜ್ಞರ ಮೇಲೆಯೇ ಸರ್ ಪಟ್ಟಾಣಿಯವರು ಅವಲಂಬಿಸಿದ್ದು ಅವರ ಸಹಾಯದಿಂದಲೇ, ರೈತರನ್ನು ಋಣಮುಕ್ತರನ್ನಾಗಿ ಮಾಡುವಲ್ಲಿ ಯಶಸ್ವಿಯಾದರು. ಆದರೆ, ನಮ್ಮ ನಿಮ್ಮ ಬೆಟ್ಟಕ್ಕೆ ಈ ವಾರ್ತೆಯು ರುಚಿಕರವೆನಿಸೀತೆ?

ಮೌ। ಶೌಕತಾಲಿಯವರ ವಿಜಯವು

–ಕೊಂಗ್ರೆಸ್ ವಿಜಯದಂತೆ, ಮತ್ತೊಂದು ಬಗೆಯಲ್ಲಿ ಸ್ವಾರಸ್ಯವನ್ನುಳ್ಳದಾಗಿದೆಯೆನ್ನಬೇಕು. ಮುಸ್ಲಿಮರಿಗಾಗಿ, ಅಂತೇ ಹಿಂದೂದೇಶದ ಶಾಂತಿಗಾಗಿ ಅವಿರಾಮವಾಗಿ ಭಾಷಣಗಳನ್ನೂ ಸಂಚಾರಗಳನ್ನೂ ಮಾಡುತ್ತ ದಣಿದ ಇವರು ಈ ಬಾರಿ ಎಸೆಂಬ್ಲಿಗೆ ಸಪ್ತನಗರದ ಕೊನ್ಸ್ಟಿಟ್ಯೂಯನ್ಸಿಯಿಂದ ಆರಿಸಿಬಂದುದು,–ಎಸೆಂಬ್ಲಿಯ ಅಧಿವೇಶನಗಳಿಗೆ ಕಳೆಯೇರಿಸದಿರದು. ಅವರ ಗಭೀರವಾಣಿಯು ಎಸೆಂಬ್ಲಿ ಗೃಹದಲ್ಲಿ, ಸಪ್ತಲೋಕಗಳಿಗೂ ಕೇಳಿಸುವಂತೆ ಧ್ವನಿಸುವುದನ್ನೂ ನಿರೀಕ್ಷಿಸುವ ನಾವು, ಕೊಂಗ್ರೆಸ್ ಪಕ್ಷವು ಎಸೆಂಬ್ಲಿಯಲ್ಲಿ, ದೇಶಹಿತಕರವಾದ ಮಾರ್ಪಾಟುಗಳಿಗಾಗಿ ಯತ್ನಿಸುವಾಗ ಮೌ। ಶೌಕತಾಲಿಯವರ ಆ ವಾಣಿಯು ಇದಕ್ಕೆ ಸಹಕಾರಿಯಾಗಿಯೇ ಧ್ವನಿಸುತ್ತಿರಲೆಂದು ಆಸೆಪಡುವೆವು. ಆದರೆ, ಮೌಲಾನರ 'ಸ್ವತಂತ್ರ ವಾಣಿ'ಗಿದು ಒಪ್ಪುವುದೇ?

ಪತ್ರೋರವರ ಭಾಷಣ ಪಾತ್ರವು–

–ಬರಿದಾಗಿದೆಯೆಂದು ನೆನಸಿದವರನೇಕರು. ಆದರೆ, ಅವರಿಗೆ ಉತ್ತರವನ್ನು ಪತ್ರೋರವರು, ಬೆಜವಾಡದಲ್ಲಿ, ಕೊಡದೆ ಇರದಾದರು. ಮದರಾಸು ಪ್ರಾಂತ್ಯದಲ್ಲಿ ಜಸ್ಟೀಸ್ ಪಕ್ಷದ ಮೂಗು ಮುರಿದು ಹೋದಾಗ ಪತ್ರೋರವರು 'ಮೌನಂಪಡಿತಲಕ್ಷಣಂ' ಎಂದು ನಾಲಗೆಯನ್ನು ಬಿಗಿ ಹಿಡಿಯದೆ–'ಅಧಿಕಾರದಲ್ಲಿರುವ ಒಂದು ಪಕ್ಷವು ಒಮ್ಮೊಮ್ಮೆ ಅಪಜಯ ಹೊಂದುವುದಿದೆ; ಹೊಸಬರು ಮುಂದೆ ಬಂದು, ಅಧಿಕಾರಸ್ಥಾನದಲ್ಲಿರುವವರ ಕಾರ್ಯದಲ್ಲಿನ ಹುಳುಕುಗಳನ್ನು ಹುಡುಕಿ ತೆಗೆದು ಸ್ವೀಯ ಜಾಹೀರಾತಿಗೆ ಉಪಯೋಗಿಸುವರು. ಇಂಗ್ಲಾಂಡಿನಲ್ಲಿಯೂ ಇದೇ ಕತೆ' ಎಂಬೀ ರೀತಿಯಾಗಿ, ಜಸ್ಟೀಸ್ ಪಕ್ಷದ ಸೋಲನ್ನೆ ಹೊಗಳಿದರೆಂದು ಜನರು ಅಭಿಪ್ರಾಯ ಮಾಡಿಕೊಳ್ಳುವಂತೆ ಬೆಜವಾಡದಲ್ಲೊಂದು ಸಾರ್ವಜನಿಕ ಸಭೆಯಲ್ಲಿ ಆಡಿರುವರು.

ಪುನಃ ಕೊಂಗ್ರೆಸ್ಸಿಗೆ ಸಹಸ್ರನಾಮ!

ಜಸ್ಟಿಸ್ ಪಕ್ಷವು ಹಿಮ್ಮೆಟ್ಟುವಂತಾಯಿತಾದರೂ–ಅಪಜಯವನ್ನೆ ಜಯವೆನಿಸುವಷ್ಟು ಚಾತುರ್ಯದಿಂದ ಆಡಿದ ಪತ್ರೋರವರು ಕೊಂಗ್ರೆಸ್ಸಿನ ಕುಲವನ್ನುದ್ಧಾರ ಮಾಡದೆ ಬಿಡಲಿಲ್ಲ. ಕೊಂಗ್ರೆಸ್ಸು ಹಿಂದೆ ಮಾಡಿದುದು ಅನರ್ಥ, ಮುಂದೆ ಮಾಡಲಿರುವುದೆಲ್ಲ ಕನಸು–ಎಂದೇ ಅವರ ಟೀಕೆ. ಶ್ವೇತಪತ್ರವನ್ನು, ಮತ್ತೊಂದು ಯೋಗ್ಯ ಯೋಜನೆಯ ಅಭಾವದಲ್ಲಿ ಬೇಡವೆಂದು ದೂರಕ್ಕೆ ತಳ್ಳುವುದು ಮುತ್ಸದ್ದಿತನವಲ್ಲವೆಂದು ಅವರ ಉಪದೇಶ. ಹಿಂದೆ ಅನರ್ಥ ಮಾಡಿದ ಕೊಂಗ್ರೆಸ್ಸಿನ ಮುಂದಿನ 'ಕನಸಿ'ಗಾಗಿ ಸಹಾಯ ಮಾಡಿದ ಜನರು, ಜಸ್ಟೀಸ್ ಪಕ್ಷದ ಅಪಜಯ ಸಾರಲ್ಪಟ್ಟಾಗಲೂ ಕನಸಿನಲ್ಲಿದ್ದಂತೆ ಆಡಿದ ಪತ್ರೋರವರ ಭಾಷಣವನ್ನು 'ಇದು ಕನಸು!' ಎಂದು ತಿಳಕೊಳ್ಳಲಿಚ್ಛಿಸದಿರರು.

ಬೇಕಾದವರನ್ನೂ ಕಳುಹಿಸುವರೇಕೆ?

ಇಂಗ್ಲಾಂಡಿನಲ್ಲಿ ೪೦ ಮಿಲ್ಲಿಯ ಪ್ರಜೆಗಳಿಗೆ ಮೂವತ್ತು ಜಡ್ಜರು ಮಾತ್ರ ಇರುವರೆಂದೂ, ಅಲ್ಲಿ 'ಜಸ್ಟಿಸು'ಗಳನ್ನು ಪಡೆಯುವುದೇ ಕಷ್ಟವೆಂಬರ್ಥ ಬರುವಂತೆ ಲೋರ್ಡ್ ಸಾಂಕೀಯವರು ಆಡಿ ತೋರಿಸಿರುವಾಗ,–ಕಲ್ಕತ್ತಾ ಹೈಕೋರ್ಟಿಗೆ ಶುದ್ಧ ಆಂಗ್ಲೇಯರೊಬ್ಬರನ್ನೆ ಚೀಫ್ ಜಸ್ಟಿಸರಾಗಿ ಕಳುಹಿದರೆಂಬ ವಾರ್ತೆಯೆನ್ನೋದಿ ವಿಸ್ಮಯ ಪಡುವಂತಾಗಿದೆ. ಅಲ್ಲಿಗೆ ಬೇಡವಾದವರು ಇಲ್ಲಿಗೆ ಬೇಕಾಗುವರೆಂದು ಅವರನ್ನಿತ್ತ ಕಳುಹುವಾಗ–ಅಲ್ಲಿಗೆ ಬೇಕಾದವರನ್ನು ಇಲ್ಲಿಗೆ ಬೇಡವಾದರೂ ಕಳುಹುವಂತಹ ನಿಸ್ವಾರ್ಥತೆಯೇಕೆ? ನಮ್ಮ ದಯಾಳು ಸರಕಾರಕ್ಕೆ ಹಿಂದೀಯರೊಳಗೇ ಯೋಗ್ಯರಾರಾದರೂ ಆ ಸ್ಥಾನ (ಚೀಫ್ ಜಸ್ಟಿಸ್)ಕ್ಕೆ ಸಿಗಲೊಲ್ಲರೇ? ಹಿಂದೂದೇಶಕ್ಕೇಕೆ ಈ ಅನಗತ್ಯವಾದ ವ್ಯಯ?

ಲೋಧ್ರ

ಸುಪ್ರಸಿದ್ಧವಾದ ಬಂಗಾಳಿ ಔಷಧ,
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ, ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1-10-0

ಕೇಸರಿ ಕುಟೀರಂ
ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಚ್ಯವನಪ್ರಾಶಾವಲೇಹ.
[illegible]
ದಶಮೂಲಾರಿಷ್ಟ
(ಕಸ್ತೂರಿ ಮಿಶ್ರಿತ)
ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮಾರ್ಥ ವೈದ್ಯಶಾಲೆ, ಡೊಂಗರಕೇರಿ ರಸ್ತೆ, ಮಂಗಳೂರು

ಋಗ್ವೇದೀ ಸಂಧ್ಯಾವಂದನೆ.
ಎಂ. ನರಸಿಂಗರಾವ್, ಬಿ. ಎ., ಎಲ್. ಟಿ.
ಬೆಲೆ ಆಣೆ 3.
30, 60, 100 ಪ್ರತಿಗಳನ್ನು ಒಮ್ಮೆಲೆ ಕೊಳ್ಳುವವರಿಗೆ ಡಿಸ್ಕೌಂಟು
ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕಿರ್ಲೋಸ್ಕರವು

ಗುಣ-ಬಾಳಿಕೆಗಳ ಸೂಚಕವು.



ಕಿರ್ಲೋಸ್ಕರ ನೆಲಗಡಲೆ ಸುಲಿಯುವ ಯಂತ್ರಗಳನ್ನು ಪ್ರತಿಷ್ಠಿಸುವುದರಿಂದ,—ಅದರ ಖರ್ಚು ಕಡಿಮೆ ಯಾದರೂ ಅತ್ಯಧಿಕ ಕೆಲಸವು ಪೂರೈಸಲ್ಪಡುವುದೆಂಬ ಭರವಸೆಯಿದೆ. ಶಾಸ್ತ್ರೀಯವಾಗಿಯೂ ಪೂರ್ಣ ತೃಪ್ತಿ ಕೊಡುವಂತೆಯೂ ಅವು ರಚಿಸಲ್ಪಟ್ಟಿವೆ.

ಕೈಯಿಂದ ಚಲಿಸುವಂತಹದೂ ವಿದ್ಯುಚ್ಛಕ್ತಿಯಿಂದ ಚಲಿಸುವಂತಹದೂ ಎರಡೂ ಬಗೆಯಿದೆ.

ಸಚಿತ್ರ ಕೆಟಲಾಗು, ಅಪೇಕ್ಷಿಸಿದ್ದಲ್ಲಿ ಕಳುಹಲಾಗುವುದು

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:—ಮೆಸರ್ಸ್ ಪೆರ್ರಿ ಎಂಡ್ ಕೊ, ಲಿಮಿಟೆಡ್,
ಮೌಂಟ್ ರೋಡ್, ಮದ್ರಾಸ್.

ಜಾತಕುಟ್ಟಿ ವೈದ್ಯರ
ವಿಶೂಚಿಕಾ ಸಂಹಾರಿ
Vishuchika Samhari
(PILCO)
[illegible]
ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)
[illegible]
8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2-8-0.
ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಸೈಂಟಿಫಿಕ್
ಸ್ವರ್ಣಾಭರಣಗಳು
ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.
ಪತ್ರವ್ಯವಹಾರವನ್ನು ಇಂಗ್ಲೀಷಿನಲ್ಲೇ ಮಾಡಬೇಕು.



ಹೊಸ ಕೆಟಲಾಗು ಧರ್ಮಾರ್ಥ.
ವಿಳಾಸ:—
TheScientificGold Bangles Co., Ltd.,
Head Office:-48, Byragimatam Street,
Post Box No. 208, Madras.

ನಮ್ಮ ಸಲಹೆಯೇ ಪ್ರಾಧಾನ್ಯವಾದದ್ದೆಂದು ತಿಳಿಯಬೇಡಿ.

[illegible]

ಜೀವಾಮೃತವು

ನರಗಳಿಗೆ ಶಕ್ತಿ ಕೊಡುತ್ತದೆ. ವೀರ್ಯ ವೃದ್ಧಿಮಾಡುತ್ತದೆ. ಹಸಿವು ಹೆಚ್ಚಿಸುತ್ತದೆ. ರಕ್ತ ವೃದ್ಧಿಮಾಡುತ್ತದೆ.

ಪಂಡಿತ
ಡಿ. ಗೋಪಾಲಾಚಾರ್ಲುರವರ
ಜೀ ವಾ ಮೃ ತ ವು

ಎಲ್ಲಾ ಔಷಧ ಮಾರುವವರಲ್ಲೂ, ಸ್ಟೋರುಗಳಲ್ಲೂ ದೊರೆಯುತ್ತದೆ. (ಸಂಪೂರ್ಣ ವಿವರಗಳಿಗೆ ಇವತ್ತೇ ಬರೆಯಿರಿ)
ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೨೦೭, ಮದ್ರಾಸು.
ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, [illegible] ಪೇಟೆ ಬೆಂಗಳೂರು.
ದಕ್ಷಿಣ ಕನ್ನಡದ ಏಜಂಟರು:— ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.
P. No. 104

---

77 Years!



Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai
Sawkar Mahal,
Car Street, MANGALORE.

An Advertisement in
'Swadeshabhimani'
Means a sure fortune to you
Ask for Contract Rates.
The Swadeshabhimani office,
Car Street, Mangalore.

Preserve Your Wealth by BIRTH CONTROL.
ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾಪಿಡಿ.
ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು.
ಬೇಕಾದಲ್ಲಿ ಪುನಃ ಗರ್ಭವಾಗುವಂತೆ ಔಷಧವಿದೆ.
ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು.
ಆರೋಗ್ಯಕ್ಕೆ ಹಾನಿಯಿಲ್ಲ.
ವಿಳಾಸ:— ಪಂಡಿತ ಕೆ. ನಾರಾಯಣರಾವ್, [illegible]
Branches—Kukkundoor & Kajkamba (Gurpoor) [illegible]
N. B.—[illegible]

ವಂಚಕರು ವೈದ್ಯರಾಗಿರುವ ಸ್ವರ್ಗ!

ಬ್ರಿಟನಿನಲ್ಲಿ ಸುಖಜೀವನ ನಡೆಸಿಕೊಂಡಿರುವ ಮೋಸಗಾರರ ಸೋಜಿಗದ ಚರಿತ್ರೆ

ಇಂಗ್ಲಾಂಡಿನಲ್ಲಿ ವೈದ್ಯಕೀಯ ವೃತ್ತಿಯು ಯಾವ ರೀತಿಯಲ್ಲಿ ಸಾಗುತ್ತಿದೆಯೆಂಬುದರ ವಿಚಾರಣಾ ಕಾರ್ಯವನ್ನು ಲಂಡನಿನ ಪ್ರಸಿದ್ಧ ಪತ್ತೇದಾರಿ ಸಂಸ್ಥೆಯಾದ "ಸ್ಕಾಟ್ಲೆಂಡ್ ಯಾರ್ಡ್"ನವರು ಕೈಕೊಂಡು, ಈಗಲೀಗ ಕೆಲ ಕೆಲವು ಸೋಜಿಗಕರವಾದ ರಹಸ್ಯಗಳನ್ನು ಹೊರಗೆಡಹಿರುವರು. ಅವುಗಳಿಂದ ಕೆಲವನ್ನು ಮಾತ್ರ ಇಲ್ಲಿ ಹೆಕ್ಕಿ ಕೊಡಲಾಗಿದೆ.

ಡಾಕ್ಟರ್ ಬಿ. ಎ. ಪಿ. ಮೆಕ್‌ಕೊನೆ—ಇವನೊಬ್ಬ 'ಡಾಕ್ಟರ!' ವರ್ಷಗಟ್ಟಲೆಯಿಂದ ರಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಶನರನೆಂಬ ಸೋಗಿನಿಂದಿದ್ದವನು. ಲಂಡನ್, ಮ್ಯಾಂಚೆಸ್ಟರ್ ಗ್ಲಾಸ್ಗೋ, ಫೋಕ್‌ಸ್ಟೋನ್, ರಿಕ್ಮನ್ಸ್ ವರ್ತ್, ಶೆಫೀಲ್ಡ್ ಇವಿಷ್ಟು ನಗರಗಳಲ್ಲಿ ನಿರಾತಂಕವಾಗಿ ವೈದ್ಯವೃತ್ತಿಯನ್ನು ಸಾಗಿಸಿರುವನು. ಒಂದೊಂದು ಊರಲ್ಲಿ ಇವನಿಗೆ ಒಂದೊಂದು ಹೆಸರು. ಪೋಲೀಸರು ಪತ್ತೆ ಮಾಡದಿದ್ದರೆ ಇವನಿನ್ನು ಅಲ್ಪಾವಧಿಯಲ್ಲಿ ಇಂಗ್ಲಾಂಡಿನ ನಗರಗಳನ್ನೆಲ್ಲ ಸುತ್ತಾಡಿ ಸರ್ವಾಂತರ್ಯಾಮಿಯೂ ಸಹಸ್ರ- ನಾಮಿಯೂ ಆಗುತಿದ್ದನೇನೋ!

ಲಂಡನ್ ನಗರದ ಟೊಟನ್‌ಹೇಮ್ ಪ್ರದೇಶದಲ್ಲಿದ್ದಾಗ, ಅಲ್ಲಿಯ ಅನೇಕ ಪ್ರಸಿದ್ಧ ವೈದ್ಯರನ್ನೀತನು, ರೋಗಿಗಳ ಚಿಕಿತ್ಸೆಯಲ್ಲಿ ತನಗೆ ಸಹಾಯವಾಗಲು ಕರತಂದಿರುವನು. ಅವರಾದರೂ ಈ ಮೋಸಗಾರ ಡಾಕ್ಟರನ ಅಜ್ಞಾನವನ್ನು ಕಂಡುಹಿಡಿಯದೆ ಹೋದರೆಂಬುದು ಆಶ್ಚರ್ಯಕರ! ಆ ಟೊಟನ್‌ಹ್ಯಾಮ್ ಪ್ರದೇಶದಲ್ಲಿ ಈತನ ಆರೈಕೆಯಲ್ಲಿ ಒಬ್ಬ ರೋಗಿಯಾದರೂ, ಅಜಾಗರೂಕತೆಯಿಂದ ಕೈಲಾಸವನ್ನು ಕಂಡಿರಬೇಕೆಂಬ ಬಗೆಗೆ ಪತ್ತೇದಾರರೊಡನೆ ರುಜುವಾತಿದೆಯಂತೆ.

ಈ ಮಹಾನುಭಾವನ ಲಂಡನ್ ಸರ್ಜರಿಯು ಎಲ್ಲ ಬಗೆಯ ಔಷಧ ಮತ್ತು ದ್ರಾವಕಗಳಿಂದ ಪರಿಪೂರ್ಣವಾಗಿದೆ. ಮೆಡಿಕಲ್ ರಜಿಸ್ಟರಿನಲ್ಲಿ ಹೆಸರು ದಾಖಲಾಗಿಲ್ಲದಾತನಿಗೆ ಈ ಬಗೆಯಾಗಿ ವಿಷಪದಾರ್ಥಗಳು ಕೂಡ ಹೇಗೆ ದೊರೆತುವು ಎಂಬುದು ಅತ್ಯಂತ ಸೋಜಿಗವು; ಅಹುದು. ಪರಂತು, ಮೋಸ ಮತ್ತು ಕುತಂತ್ರಗಳನ್ನು ಬಲ್ಲವರಿಗೆ ಅದು ಸಾಧ್ಯವಿಲ್ಲದಿದ್ದೀತೇ? ಈ ಡಾಕ್ಟರರು ಕೊಡುವ ಪ್ರಿಸ್ಕ್ರಿಪ್ಶನುಗಳಾದರೂ ಅಂತಹವೆಂದರೆ—!

ಈ ಡಾಕ್ಟರ್‌ಮಹಾನುಭಾವನ ಬಳಿಗೆ ಬದ್ದನರಲ್ಲಿ ವೃದ್ಧೆ ಹೆಂಗುಸೊಬ್ಬಳಿರುವಳು. ಈಕೆಗೆ ಅನೇಕ ಕಾಲದಿಂದ ತೀವ್ರವಾದ ಆಂತರಿಕ ಬೇನೆಗಳಿದ್ದುವು. ಡಾಕ್ಟರ್ ಮೆಕ್‌ಕೊನೇಯು ಚಾಣಾಕ್ಷ ವೈದ್ಯನೆಂದು ನಂಬಿ ಆತನಲ್ಲಿಗೆ ಹೋದಳು. ಡಾಕ್ಟರನು ಆಕೆಯನ್ನು ಚೆನ್ನಾಗಿ ಪರೀಕ್ಷಿಸಿದನು. "ನಿನಗೆ ವಿಶೇಷ ರೋಗ!" ಎಂದನು. ಕೂಡಲೇ ರೋಗ ಮುಲಗುವಂತೆ ಸಲಹೆ ಕೊಟ್ಟನು. ನಿಜವಾಗಿ ಆಕೆಗೆ ಯಾವ ವ್ಯಾಧಿಯೂ ಇರಲಿಲ್ಲ. ಆಕೆ ಪಾಪ,—ದುಃಖಕ್ಕೊಳಗಾದಳು. ಎರಡು ತಿಂಗಳ ತನಕ ಆಕೆ ಈ ಡಾಕ್ಟರನ ಆರೈಕೆಯಲ್ಲಿದ್ದಳು. ಅಷ್ಟು ಅವಧಿಯೂ ರೋಗ ಹೆಚ್ಚುತ್ತಲೇ ಹೋಯಿತು. ಕೊನೆಗೆ, ಆಕೆಯ ಮಗನು, ಆಕೆಯನ್ನು ಮತ್ತೋರ್ವ ಡಾಕ್ಟರನಲ್ಲಿಗೆ ಒಯ್ದಾಗ, ಮೈಯಲ್ಲಿ ವಿಷಪದಾರ್ಥಗಳೇ ಸೇರಹೋದಂತೆ ತಿಳಿದು ಬಂತು. ಔಷಧಿಗಳ ಪ್ರಭಾವ!

ಎಂತಹ ಡಾಕ್ಟರ! ಔಷಧ ಕೊಡುವುದಷ್ಟೇ ಅಲ್ಲ—ಇತರ ಡಾಕ್ಟರರಂತೆ ತಾನೂ "ಮರಣಸಂಬಂಧವಾದ ಸರ್ಟಿಫಿಕೇಟು" (death certificates) ಕೊಟ್ಟಿದ್ದನಂತೆ—ಈ ಮೆಕ್‌ಕೊನೇ! ಅಂತಹ ಸರ್ಟಿಫಿಕೇಟು ಕೊಡಲ್ಪಟ್ಟ ಕಡೆಗಳಲ್ಲಿನ ಶವಗಳ ವಿಷಯಕವಾದ ವಿಚಾರಣೆಯು ಈಗ, ಪುನಃ ನಡೆಯಲೇಬೇಕಾಗಿದೆಯೆಂದು ಪೋಲೀಸರು ಅಭಿಪ್ರಾಯಪಡುತ್ತಿರುವರು.

ಇನ್ನೊಬ್ಬ ಮಹಾಶಯ—ಡಾಕ್ಟರ್ ಡಬ್ಲ್ಯು. ಎಚ್. ಬ್ರೆಡ್ನರ್. ಈತನು, 'ಡಾಕ್ಟರ'ನೆಂಬ ಹೆಸರನ್ನು ಹಚ್ಚಿಕೊಂಡು 'ಪ್ರಾಕ್ಟೀಸ್' ಆರಂಭಿಸಿ, ಲಂಡನ್ ಸೆಶನ್ಸ್ ಕೋರ್ಟಿನವರಿಂದ ಕಾರಾಗೃಹಕ್ಕೆ ಕಳುಹಲ್ಪಟ್ಟನು. ಆಧುನಿಕ ವೈದ್ಯಕೀಯ ಸಾಹಿತ್ಯಗಳನ್ನೆಲ್ಲ ಸಂಗ್ರಹಿಸಿ, ಅತ್ಯುತ್ತಮವಾದ 'ಸರ್ಜರಿ'ಯನ್ನು ತೆರೆದು, ಮಜೂರ ಪ್ರದೇಶದಲ್ಲಿ, ಬಡವರಿಗೆ ಚಿಕಿತ್ಸೆ ನಡೆಸಿ, ಈತನು ಚೆನ್ನಾಗಿ ಹಣಸಂಪಾದನೆ ಮಾಡಿದಾತನು. ಒಂದಾನೊಂದು ಸಂದರ್ಭದಲ್ಲೀತನು, ಓರ್ವ ಹುಡುಗಿಯ ಮೇಲೆ ಅತ್ಯಾಚಾರಕ್ಕೆಳಸಿದನೆಂದು ಆಕೆಯ ತಾಯಿಯಿಂದ ಅಪಾದನೆಗೊಳಪಟ್ಟು, ವಿಚಾರಣೆಗೊಪ್ಪಿಸಲ್ಪಟ್ಟನು. ವಿಚಾರಣೆ ನಡೆಸಿದ ಜಡ್ಜರು ಈತನ ಪೂರ್ವ ವೃತ್ತಾಂತವನ್ನು ಕೇಳಿ ಆಶ್ಚರ್ಯಗೊಂಡರು. ಈತನಿಗೆ ಹಿಂದೆ ಅನೇಕ ಬಾರಿ ಶಿಕ್ಷೆಯಾಗಿತ್ತು. ಅಮೇರಿಕದಿಂದ ಗಡೀಪಾರು ಮಾಡಲ್ಪಟ್ಟಿದ್ದನು. ಇಂಥವನೂ 'ಡಾಕ್ಟರ'ನೆಂಬ ವೇಷವನ್ನು ಧರಿಸಿ, ಪೆಟ್ರಿಕ್ ಕೆಲ್ಲಿ ಎಂಬ ತನ್ನ ನಿಜನಾಮವನ್ನು ಮರೆಸಿ, ಇಂಗ್ಲಾಂಡಿನಲ್ಲಿ ನಿರಾತಂಕವಾಗಿ ತನ್ನ ಮೋಸದ ವೃತ್ತಿಯನ್ನು ಮುಂದೊತ್ತಿಕೊಂಡಿದ್ದನೆಂದರೆ ...!

ಈ ಎರಡನೆಯ ಮಹಾನುಭಾವನಿಗಿಂತ ಪ್ರಸಿದ್ಧನು ಮತ್ತೊಬ್ಬನಿರುವನು. ವಿಲ್ಲಿಯಮ್ಸ್ ಎಂದು ಆತನ ಹೆಸರು. ಮೆಡಿಕಲ್ ವಿದ್ಯಾರ್ಥಿಯಾಗಿದ್ದನು. ಪರೀಕ್ಷೆಯಲ್ಲಿ ಉತ್ತೀರ್ಣನಾದವನಲ್ಲ. ಮೆರಿಲೆಬೋನ್ ಎಂಬಲ್ಲಿ ಒಂದು ಮನೆಯನ್ನು ಕೊಂಡುಕೊಂಡು, ಅಲ್ಲಿ ತನ್ನ 'ಪ್ರಾಕ್ಟೀಸ'ನ್ನು ಆರಂಭಿಸಿದನು. ಕೆಲ ಕಾಲದಲ್ಲಿ ಈತನಿಗೆ ಒಳ್ಳೆಯ ಸಂಪಾದನೆಯಾಗಹತ್ತಿತು. ಆ ಮನೆಯಲ್ಲಿ ಹಿಂದೆ ಒಬ್ಬ ರಜಿಸ್ಟರ್ಡ್ ಡಾಕ್ಟರನು ವಾಸಿಸಿದ್ದನೆಂಬುದು ಈ ಮೋಸಗಾರನಿಗೆ ಸಹಾಯಕವಾಯಿತು. ಇವನ 'ಡಿಗ್ರಿ'ಯನ್ನು ನೋಡಿದಿರಾ?—M. D. (Cambridge) M. R. C. S., L. R. C. B., ಮತ್ತು D. P. H.

ಅಪಾದನೆಗಳು ಬರುವವರೆಗೆ, ಹಲವು ತಿಂಗಳು, ಆತನು ನಿರ್ಬಾಧಿತನಾಗಿ ರೋಗಿಗಳನ್ನು ಪರೀಕ್ಷಿಸಿ, ತನ್ನ ಮನಸ್ಸಿಗೆ ಒಳ್ಳೆಯವೆಂದು ಕಂಡ ಔಷಧಗಳನ್ನು ಕೊಡುತ್ತ ಬಂದನು. ಒಂದು ಹೊಟೇಲಿನವರಿಗೆದುರಾಗಿ, ಓರ್ವ ಹೆಂಗುಸಿಗೆ ತಿಂಡಿಯಲ್ಲಿ ವಿಷ ಬೆರತಿತ್ತೆಂಬ ಬಗ್ಗೆ ಕೋರ್ಟಿನಲ್ಲಿ ಆಕೆಯ ಪರವಾಗಿ ಸಾಕ್ಷ್ಯ ಹೇಳುವಷ್ಟು ದಿಟ್ಟತನವನ್ನೂ ತೋರಿದನು. ಅಪಾದನೆಗಳು ಬಂದಾಗಲೂ, ತಾನು ರಜಿಸ್ಟರ್ಡ್ ಡಾಕ್ಟರನೆಂದೂ, ಸೌತ್‌ವೇಲ್ಸ್ ಎಂಬಲ್ಲಿ ಕೂಡ 'ಪ್ರಾಕ್ಟೀಸು' ನಡೆಸುತಿದ್ದೆನೆಂದೂ ಹಸಿಹಸಿ ಸುಳ್ಳು ಹೇಳಲು ಹಿಂಜರಿಯಲಿಲ್ಲ! ಆಗ ಈತನ ಬಂಧವಿಮೋಚನೆಯಾಯಿತು. ಪರಂತು, ಮುಂದೆ ಕೆಲಕಾಲದಲ್ಲಿ, ಅನಧಿಕೃತ ವಿಷಗಳನ್ನು ಸಂಗ್ರಹಿಸಿಟ್ಟಿದ್ದನೆಂಬ ಅಪಾದನೆಗೊಳಗಾಗುವಂತಾಯಿತು.

ನಾಲ್ಕನೆಯವನು ಮತ್ತಷ್ಟು ನಿಪುಣ!—ಈತನು ತಾನು 'ರಜಿಸ್ಟರ್' ಆದವನೆಂಬ ಮೋಸವನ್ನು ಬ್ರಿಸ್ಟೊಲಿನ ಆಸ್ಪತ್ರೆಯಲ್ಲೂ ಯಶಸ್ವಿಯಾಗಿ ನಡೆಸಿದನು. ಬ್ರಿಸ್ಟೊಲ್ ಆಸ್ಪತ್ರೆಯಲ್ಲಿ ಸ್ವಲ್ಪ ಕಾಲದವರೆಗೆ 'ಸರ್ಜನ'ನಾಗಿದ್ದನು.

ಫ್ರೆಡರಿಕ್ ಹೋಲನೆಂಬವ ಅತ್ಯಂತ ಚದುರ! ಇವನು ಚಿಕ್ಕಂದಿನಿಂದಲೇ ಮಹಾ ಘಟಿಂಗನಂತೆ. ತನ್ನ 'ಪರಿಷತ್ತ' ಮುದ್ರೆಯಿಂದ ಅನೇಕ ಸ್ಟೀಮರುಗಳ ಮೇಲೆ ಹರಿಸ್ಸಿದು ವರ್ಷಗಳ ತನಕ ಡಾಕ್ಟರನಾಗಿ ಕೆಲಸ ಮಾಡಿದಾತನು! ಎಲ್ಲ ಬಗೆಯ ಜನರಿಗೆ, ಎಲ್ಲ ರೋಗಗಳಿಗೆ ಔಷಧ ಕೊಟ್ಟಿರುವನೀತ! ಮರಣದ ಸರ್ಟಿಫಿಕೇಟುಗಳನ್ನೂ ಕೊಟ್ಟಿರುವನು. 'ಜನರಲ್ ಮೆಡಿಕಲ್ ಕೌನ್ಸಿಲ'ನಿಂದ ಕೂಡ ಶಿಫಾರಸು ಪತ್ರಗಳನ್ನು ಪಡೆದವನಂತೆ! ಒಬ್ಬ ಪ್ರಖ್ಯಾತ ಡಾಕ್ಟರನ ಹೆಸರನ್ನೀತನು ಧರಿಸಿ, ಜೈಲಿನಿಂದ ಕೆಲವೇ ದಿನಗಳ ಹಿಂದೆ ಹೊರಬಂದವನಾದರೂ,—ಅಲ್ಪಾವಧಿಯಲ್ಲೇ ಪ್ರಖ್ಯಾತನಾದನು.

ಇನ್ನೊಬ್ಬನು ಫ್ರಾನ್ಸಿಸ್‌ನೆಂಬವನು. ಸ್ಪೈನ್ಸಿ ಎಂಬಲ್ಲೀತನು ಪ್ರಾಕ್ಟೀಸ್ ಮಾಡಿರುವನು. ಲಂಡನ್ ನಗರಕ್ಕೆ ಬಂದು, ಅಲ್ಲಿ ವೆಸ್ಟ್ ಎಂಡ್ ಎಂಬ ಶ್ರೀಮಂತ ಜನರಾವಾಸವಿರುವ ಪ್ರದೇಶದಲ್ಲಿ 'ಸರ್ಜರಿ'ಯನ್ನಿಟ್ಟು, ತುಂಬ ಹಣ ಸಂಪಾದನೆ ಮಾಡಿರುವನು. ಇವನನ್ನು ಬಂಧಿಸಿ, ಶಿಕ್ಷೆ ವಿಧಿಸಿರುವರು.

ಹಿಂದೀಯರ ಸ್ವಾತಂತ್ರ್ಯ!

ಲೋರ್ಡ್ ವಿಲ್ಲಿಂಗ್ಡನ್ನರು ಯುದ್ಧಕಾಲದಲ್ಲಿ ಲ್ಲೊಯ್ಡ್ ಜೋರ್ಜರಿಗೆ ಬರೆದ ಪತ್ರಗಳ ಪ್ರಕಟಣೆ!

ಮಹಾ ಯುದ್ಧವು ೧೯೧೪ರಲ್ಲಿ ಪ್ರಾರಂಭವಾಯಿತು. ಆಗ ಪ್ರಧಾನ ಮಂತ್ರಿಗಳಾಗಿ ಲ್ಲೊಯ್ಡ್ ಜೋರ್ಜ ಇದ್ದರು. ಅದೇ ಸಮಯದಲ್ಲಿ ಮುಂಬಯಿಯ ಗವರ್ನರರಾಗಿ ಈಗಿನ ವೈಸರ್ರಾಯರಾದ ಲೋರ್ಡ್ ವಿಲ್ಲಿಂಗ್ಡನ್ನರಿದ್ದರು. ಹಿಂದೀಯರು ಮಹಾ ಯುದ್ಧದಲ್ಲಿ ತೋರಿದ ಪಂಚಪ್ರಾಣವನ್ನು ಕಂಡು ಗವರ್ನರರಾಗಿದ್ದ ವಿಲ್ಲಿಂಗ್ಡನ್ನರು ಪ್ರಧಾನ ಮಂತ್ರಿಯವರಿಗೆ ಎರಡು ಪತ್ರಗಳನ್ನು ಬರೆದಿದ್ದರು. ಅವುಗಳೀಗ ಲ್ಲೊಯ್ಡ್ ಜೋರ್ಜರು ತನ್ನ ಆತ್ಮ ಚರಿತ್ರೆಯ ನಾಲ್ಕನೇ ಸಂಪುಟವಾಗಿ ಇತ್ತೀಚೆಗೆ ಪ್ರಕಟಿಸಿದ ಗ್ರಂಥದಲ್ಲಿ ಪ್ರಕಟಗೊಂಡಿವೆ. ಅಂದು ಗವರ್ನರರಾಗಿದ್ದ ಲೋರ್ಡ್ ವಿಲ್ಲಿಂಗ್ಡನ್ನರ ನೈಜ ಹೃದಯವು ಹೇಗಿತ್ತು ಎಂದು ಈ ಪತ್ರಗಳಿಂದ ಪ್ರಕಟವಾಗುವುದು. ಆ ಎರಡು ಪತ್ರಗಳನ್ನು ಕನ್ನಡಿಸಿಕೊಡಲಾಗಿದೆ.

೩೧—೧೨—೧೯೧೬.

"ನನ್ನ ಪ್ರಿಯ ಲ್ಲೊಯ್ಡ್ ಜೋರ್ಜರಿಗೆ,

ನಿಮ್ಮ ಹಲವು ಕೆಲಸಗಳೊಡನೆ, ಕಳೆದ ಮೂರು ವರ್ಷಗಳಿಂದಲೂ ಇಲ್ಲಿದ್ದು, ನಮ್ಮ ಸರಕಾರದ ಆರ್ಥಿಕ ಮತ್ತು ಆಡಳಿತ ವಿಚಾರಗಳಲ್ಲಿ ಆಗತ್ಯವಾಗಿ ವಿಶಾಲವೂ ಉದಾರವೂ ಆದ ಶಾಸನಗಳನ್ನು ಮುಂದಿಡಬೇಕೆಂದು ಮನಗಂಡವನಾದ ನನ್ನ ಈ ಪತ್ರಕ್ಕೆ ನಿಮ್ಮ ಲಕ್ಷ್ಯವನ್ನು ಕೊಡುವಿರಾ ಎಂದು ಕೋರುತ್ತೇನೆ. ನಾನು ವಿವರಕ್ಕೆ ಕೈಯಿಕ್ಕುವುದಿಲ್ಲ. ಆದರೂ ಈ ಕುರಿತಾಗಿ ನಮ್ಮ ಹಲವು ಧುರೀಣರಿಗೆ ಪತ್ರ ಬರೆದರೂ ಉತ್ತರವಾಗಲೀ, ಪ್ರೋತ್ಸಾಹವಾಗಲೀ ದೊರೆಯಲಿಲ್ಲವೆಂಬುದನ್ನು ಪ್ರಾರಂಭದಲ್ಲೇ ಹೇಳಿ ಮುಂದರಿಯುವೆನು. ಇಲ್ಲಿಯ ಸ್ಥಿತಿಗೆ ಏನಗತ್ಯವೆಂದರೆ—ಧೈರ್ಯ ಮತ್ತು ಸುಸಂದರ್ಭಗಳನ್ನು ಸದುಪಯೋಗಿಸಿಕೊಳ್ಳುವ ಇಚ್ಛೆ. ಈ ವಿಷಯವನ್ನು ಯಾರಾದರೊಬ್ಬ ಧುರೀಣನು ಯುದ್ಧದ ನಂತರ ಎತ್ತಿಕೊಂಡರೆ ಹಿಂದೂಸ್ಥಾನವು ನಮ್ಮ ಸಾಮ್ರಾಜ್ಯದ ವಿನಮ್ರ ಮತ್ತು ಪ್ರಯೋಜನಕಾರಿ ಅಂಗವಾಗುವುದೆಂಬುದರಲ್ಲಿ ನನಗೆ ಸಂದೇಹವಿರುವುದಿಲ್ಲ. ಹಿಂದೀಯರ ಅಭಿಪ್ರಾಯವೇನೆಂದರೆ—"ನೀವು ಇಂಗ್ಲಿಷರು, ನಮ್ಮನ್ನು ವಿದ್ಯಾವಂತರನ್ನಾಗಿ ಮಾಡಿದಿರಿ. ನಮ್ಮನ್ನು ನಾವು ರಕ್ಷಿಸಿಕೊಳ್ಳುವ ಬುದ್ಧಿಯನ್ನು ನಮಗೆ ಕಲಿಸಿರುವಿರಿ. ನಿಮಗೆ ನಮ್ಮ ಅಗತ್ಯವಿರುವಾಗ ನಮ್ಮನ್ನು "ಉನ್ನತ ಸಾಮ್ರಾಜ್ಯದ ನಾಗರಿಕ ಜನಾಂಗ"ವೆಂದು ಕರೆಯುತ್ತೀರಿ. ಆದರೆ ಕಾರ್ಯತಃ ಬಂದಿತೆಂದರೆ ನೀವು ನಮಗೆ ಬರಿಯ ರಿಯಾಯಿತಿಗಳನ್ನಲ್ಲದೆ ಬೇರಾವುದನ್ನೂ ಕೊಡುವುದಿಲ್ಲ. ನಮಗೆ ನನ್ನ ದೇಶದ ಮೇಲೆ ಪ್ರೇಮವಿದೆ; ಅದನ್ನು ತೋರುವುದಕ್ಕಾಗಿ ನೀವು ನಮಗೆ ನಿಜವಾದ ಸಂದರ್ಭವನ್ನೊದಗಿಸಿ ಕೊಡಬೇಕು." ಆಂಗ್ಲೇಯನು ಹೀಗೆ ಉತ್ತರವೀಯುತ್ತಾನೆ:—"ಇದಕ್ಕಿಂತ ಹೆಚ್ಚಿನದ್ದನ್ನು ಪಡೆಯಲು ನೀವು ಸಿದ್ಧರಾಗಿಲ್ಲ. ನಮಗೆ ನಮ್ಮ ಆಡಳಿತದಲ್ಲಿ ಕ್ರಿಯಾಶಕ್ತಿ ಬೇಕು. ನೀವು ಇನ್ನೂ ಹೆಚ್ಚಿನ ಗುಣಶಾಲಿಗಳೂ, ನಂಬಿಗಸ್ಥರೂ ಆಗದೆ ನೀವು ನಮಗೆ ನಮ್ಮ ಆಡಳಿತ ಕೆಲಸದಲ್ಲಿ ಸಹಾಯವನ್ನೀಯಲು ಸಮರ್ಥರಾಗಲಾರಿರಿ." ಕಲಿಯಲು ಒಂದು ಸಂದರ್ಭವನ್ನೊದಗಿಸಿ ಕೊಡಲಾರದ ವಿನಹ ಹಿಂದೀಯನು ಏನನ್ನೂ ಕಲಿಯಬಾರದೆಂದು ಆಂಗ್ಲೇಯನು ಮಾತ್ರ ತಿಳಿಯುವುದಿಲ್ಲ.

ಹಿಂದೀಯನ ಪ್ರಗತಿಯೆಂದರೆ—ಇಲ್ಲಿ ಕ್ರಮಶಃ ಇಂಡಿಯನ್ ಸಿವಿಲ್ ಸರ್ವಿಸಿನ ನಾಶವೆಂಬುದೇನೋ ಖರೆ. ಆದರೆ ಹಿಂದೀಯರಿಗೆ ನಿಜವಾದ ಒಂದು ಸಂದರ್ಭವನ್ನು ಒದಗಿಸಿಕೊಟ್ಟರೆ ಅವರ ಪ್ರಗತಿಯು ನಿರುಪಾಯಕವಾದುದು. ಯುದ್ಧವು ಮುಗಿದನಂತರ ಈ ಮಹಾ ದೇಶವನ್ನು ಗಮನದಲ್ಲಿಟ್ಟುಕೊಳ್ಳಿರೆಂಬ ಭಾವನೆಯಿಂದ ನಾನೀ ನನ್ನ ಭಾವನೆಯ ಪ್ರದರ್ಶನವನ್ನು ಕೊಟ್ಟಿರುವೆನು. ಯುದ್ಧದಲ್ಲಿ ಹಿಂದೂದೇಶವು ತನ್ನ ಪಾತ್ರವನ್ನು ಯಶಸ್ವಿಯಾಗಿ ಅಭಿನಯಿಸಿರುತ್ತದೆ. ಅದಕ್ಕಾಗಿ ಹಿಂದೂಸ್ಥಾನವು ಏನನ್ನೂ ಕೇಳುವುದಿಲ್ಲವಾದರೂ ಅದಕ್ಕೆ ಉದಾರರಕ್ಷಣೆಯನ್ನು ನಾವು ನೀಡಲರ್ಹವಿದೆಯೆಂದು ನನ್ನ ಮತವಿರುತ್ತದೆ. ಸಂದರ್ಭವೇನೋ ನಮಗೆ ಅನುಲಕ್ಷ್ಯವಾದುದು. ಇದರ ಪ್ರಯೋಗವನ್ನು ಮಾಡಿಕೊಂಡರೆ ಸಾಮ್ರಾಜ್ಯಾಂತರ್ಗತವಾದ ಐಕ್ಯದಲ್ಲಿ ಹಿಂದೂದೇಶವು ಉಳಿಯುವುದು. ಎಲ್ಲವೂ ಸಾಮ್ರಾಜ್ಯಾಧಿಪತಿಗಳಿಂದಾಗಬೇಕಾಗಿದೆ.

ನಾವು ದುಃಸ್ಥಿತಿಯಲ್ಲಿರುವೆವೆಂದು ಹೇಳಬಹುದು. ನಮಗೆ ವಿಜಯವು ಬೇಕಾಗಿದೆ. ಬಂಗಾಳವನ್ನು ಪ್ರತ್ಯೇಕಿಸಿಟ್ಟರೆ ಹಿಂದೂಸ್ಥಾನವು ಧೀರವಾಗುವುದು. ನಿಮ್ಮ ಸಾಹಸದಲ್ಲಿ ಜಯವಿರಲಿ; ಪರಿಣಾಮವು ಶತ್ರುವಿನ ನಾಶದಲ್ಲಾಗಲೆಂದು ಹಾರೈಸುವೆನು."

ನಿಮ್ಮ ಹಿತೈಷಿ,

ವಿಲ್ಲಿಂಗ್ಡನ್.

ಮುಂಬಯಿ, ೩೧—೧೨—೧೯೧೬.

ನನ್ನ ಪ್ರಿಯ ಲ್ಲೊಯ್ಡ್ ಜೋರ್ಜರವರಿಗೆ,

ತಾವು ಪ್ರಧಾನ ಮಂತ್ರಿಗಳಾಗಿ ಬ್ರಿಟಿಷ ರಾಜಕಾರಣ ಪಟುಗಳಲ್ಲಿ ಅತ್ಯುನ್ನತವೂ, ಜವಾಬ್ದಾರಿಯನ್ನುಳ್ಳದೂ ಆದ ಈ ಪದವಿಯನ್ನು ವಹಿಸಿಕೊಂಡಿರುವುದಕ್ಕಾಗಿ ತಮ್ಮನ್ನು ಅಭಿನಂದಿಸಿ ಕೆಲವು ಪಂಕ್ತಿಗಳನ್ನು ಬರೆಯುವೆನು. ನಮ್ಮ ಕಾರ್ಯ ಸಾಧನೆಯು ಪತಕ್ಕೆ ಮುಂದರಿಯುವುದಿಲ್ಲವೆಂದೂ, ಜರ್ಮನರು ಮಾತ್ರ ತಮ್ಮ ಉದ್ದೇಶಗಳನ್ನು ಪೂರೈಸುತ್ತಾ ಮುಂದರಿಯುವುದೂ ಕಂಡುಬಂದು ನಮಗಿಲ್ಲಿ ಆಶ್ಚರ್ಯವಾಗುತ್ತಿದೆ. ಜರ್ಮನರಲ್ಲಿ ಬಲಾತ್ಕಾರ ದೃಢತೆಗಳಿವೆ. ನಮಗೆ ಮುಂದರಿಯಬೇಕೆಂದಿದೆ. ನಮ್ಮ ಪ್ರಗತಿಯು ಜರ್ಮನರಿಗೆ ನಮ್ಮ ನೀತಿಯನ್ನು ತಿಳಿಸುವಂತಾಗಬೇಕು. ನಮ್ಮ ನಡತೆಯು ವೈರಿಯನ್ನು ನಮ್ಮ ಸುತ್ತಲು ಮುತ್ತಲು ಬಿಡುವಂತಿರಬಾರದು. ನಮ್ಮ ಉದ್ದೇಶವನ್ನು ನೆರವೇರಿಸಲು ಆತಂಕವಾಗಬಾರದು. ಒಟ್ಟಿನ ಮೇಲೆ ಹಿಂದೂಸ್ಥಾನದ ಸ್ಥಿತಿಯು ನೆಮ್ಮದಿಯಿಂದಿದೆಯೆಂದು ನೀವು ತಿಳಿದಿರಬಹುದು. ಆದರೂ ತುರ್ಕಿ ದೇಶವನ್ನು ಸಮಾಧಾನಿಸುವ ತನಕ ಮಹಮ್ಮದೀಯರ ಅಶಾಂತಿಯು ಮುಂದರಿಯುವುದು. ಇದು ನಿಜವಾಗಿಯೂ ನಮಗೆ ಸುಸಂದರ್ಭ. ಮಹತ್ವದ ಶಿಖರ ಸಂಬಂಧವಾದ ಆ ಸಮಸ್ಯೆಯನ್ನು ಬಗೆಹರಿಸಲು ಸರಕಾರವು ಹೂಡಿದ ಯೋಜನೆಯಿಂದ ನನಗೇನೂ ಸಂತೋಷವಿಲ್ಲ. ಆ ವಿಷಯವು ಇಲ್ಲಿ ಮಾವರ ಮನನೋಯಿಸಿರುತ್ತದೆ.

(ಆಳಿದ ಭಾಗಕ್ಕೆ ಮುಂದುವರಿಯುವುದು.)

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY

The Canara Public Conveyance Co., Ltd.

MANGALORE.

ಗ್ಲಾನ

(ಪ್ರಬಂಧಮಾಲೆ)

ಲೇಖಕರು [illegible]

ಅಧ್ಯಾಯ ೨೦

ಕಳೆದ ಸಂಚಿಕೆಯಿಂದ ಮುಂದುವರಿದುದು

ಶಾಯಿಕ್ಕೆ

ಈಗಿನ ಕವಿಗಳನ್ನಾದರೂ ಅಲಕ್ಷಿಸಬಹುದು ಗದ್ಯ ಬರಹಗಾರರನ್ನಲ್ಲ—ಇವರು ಸಹ ಈಗಣ ಕವಿಗಳಂತೆ ರಗಳೆಯಲ್ಲೇ ಎಲ್ಲಾ ವಿಷಯ ಬರೆಯುತ್ತಾರೆ ಹಿಂದಿನ ಕಾಲದಲ್ಲಿ ಕೆಲಸಕ್ಕೆ ಬಾರದ ಅಡುಗೂಲಜ್ಜಿಗಳು ಮಾಡುವ ಕಥೆಗಾರಿಕೆಯು ಇವರ ಜೀವಾಳ. ಇದರಿಂದ ಸಾಹಿತ್ಯದೇವಿಗೆ ಎಷ್ಟು ಸಿಟ್ಟು ಬರಲಿಕ್ಕಿಲ್ಲ! ಇನ್ನು—ನಾಟಕವನ್ನು ಇವರು ಬರೆಯತೊಡಗಿರುವದೆಂದರೆ ಎಲ್ಲರಿಗೂ ಆಶ್ಚರ್ಯವಾಗಬಹುದು. ತಮ್ಮ ಕೃತಿಗಳಿಗೆ ಅವರು ನಾಟಕವೆಂದು ಬರೆದು ಕರೆದು—ನಾಟಕವನ್ನೇ ಅವಮಾನಿಸಿದ್ದಾರೆ ಇಂಥವರಿಗಾಗಿ ಸ್ವರ್ಗವಾಸಿ ಗೀರ್ವಾಣ ಸರಸ್ವತಿಯು, ಈಗಿನ ನರಕದಲ್ಲಿನ ಬ್ಲಾಕುಗಳ ಬದಿಯಲ್ಲಿ ಭಾರೀ ಒಂದು ಕೆರೆಯನ್ನು ತೋಡಿಸುತ್ತಿದ್ದಾಳೆ ಈ ಹೊಂಡದಲ್ಲಿ ತುಂಬ 'ಸ್ನ್ಯಾನ್' ಶಾಯಿಯನ್ನು (ಶ್ಯಾನದ ಕಡ್ಡವು) ಅದರಲ್ಲಿ ಈ ಸಾಹಿತ್ಯ ಸೇವಕರನ್ನು ತಳ್ಳಿ ಮೇಲೆ ಬಂದರೆ, ವಾಟರ್ ಮೇನ್ ಪೆನ್ಸಿನಿಂದ ಅವರ ತಲೆಯ ಮೇಲೆ ಲಾಠಿಚಾರ್ಜು ಮಾಡಬೇಕೆಂದು ನಿರ್ಣಯಿಸಿರುವಳು ಅವರು ತಮ್ಮ ಘೋರ ಅಪರಾಧಕ್ಕಾಗಿ ಕ್ಷಮೆ ಕೇಳುವ ತನಕ ಈ ಶಾಯಿಕುಂಡದಲ್ಲಿ ಅನ್ನ ನೀರಿಲ್ಲದೆ ಕಳೆಯಬೇಕು ಅವರು ಅಲ್ಲಿ ಒಮ್ಮೆಗೇ ಸಾಯದಂತೆ—ಆಗಾಗ ಅವರ ಕಿವಿಯ ಬಗ್ಗೆ ಡಬಲ್ ಕ್ರೌನ್ 40 ಪೌಂಡಿನ ಎಂಟೀಕ್ ಕಾಗದವನ್ನು ಅವರ ಕಡೆಗೆ ಎಸೆಯುವ ಏರ್ಪಾಡೂ ಇದೆ

ಸಾಹಿತ್ಯ ಘಾತುಕರಿಗೆ ಈ ರೀತಿಯ ದಂಡನೆಯಿರಲು, ಶಾಡಾಸೇವಕರಿಗೆ ಎಂತಹ ಅಮೋಘವಾದ ಸ್ವರ್ಗವಿದೆಯೆಂದು ನೀವು ಊಹಿಸಿರಿ

ಎಲ್ಲರೂ ಕನ್ನಡ ನುಡಿವೆಣ್ಣಿನ ಸೇವೆಮಾಡಿ ಅವಳ ಆಶೀರ್ವಾದವನ್ನು ಗಳಿಸಿ ಮುಕ್ತಿಯ ಹೆಬ್ಬಾಗಿಲಿನಲ್ಲಿ ಬೇಗ ಬೇಗ ಕಾಲಿಡಬಾರದೇ? ಮುಂದೆ ಅಲ್ಲಿ ಸ್ಥಳ ಭರತಿಯಾದರೆ ನೀವೇನು ಮಾಡುವಿರಿ? ಸಿಂಗನ್ನಡಂ ಗೆಲ್ಗೆ

ಅಧ್ಯಾಯ ೨೧

ವರ್ತಮಾನ ಪತ್ರಗಳು

ಇವುಗಳ ವಿಚಾರ ನಿಮಗೆ ತಿಳಿಯದ್ದೂ ಇಲ್ಲ, ತಿಳಿದುದೂ ಇಲ್ಲ—ಅಂಥ ವಿಚಿತ್ರ ವಸ್ತುಗಳು ಇವುಗಳು ಸರ್ವಾಂತರ್ಯಾಮಿಗಳು ಇವುಗಳ ಬಾತಮಿದಾರರು ಇಲ್ಲದ ಸ್ಥಳವಿಲ್ಲ, ಇವುಗಳ ಕರಡು ಕಾಗದಗಳನ್ನು ಕಾಣದ ಸ್ಥಳವಿಲ್ಲ ಇವುಗಳಲ್ಲಿ ಪ್ರಕಟವಾಗದ ವಿಷಯವೂ ಇಲ್ಲ ಹೆಸರಿಗೇನೋ ವರ್ತಮಾನ ಪತ್ರವೆನ್ನುತ್ತೇವೆ—ಇದರ ವರ್ಚಸ್ಸು ಭೂತಕಾಲಕ್ಕೂ, ಭವಿಷ್ಯಕ್ಕೂ ಮೀರಿದುದು ಅನ್ನುವುದಾದರೆ ಇದನ್ನು ತ್ರೈತ (ಭವಿಷ್ಯತ್ತಿನ) ಪತ್ರವೆಂದರೆ—ಸತ್ಯದ ಸರಹದ್ದಿಗೆ ಕನಿಷ್ಠ ಶತಯೋಜನ ಸಮೀಪವಾದರೂ ಬಂದಂತಾಗುವುದು

ಹೊರಗಿನ ನೋಟಕ್ಕೆ ವರ್ತಮಾನ ಪತ್ರವು ಒಂದು ರೀತಿಯಾಗಿದ್ದರೆ, ಅದರ ಅಂತರಂಗವು ಇನ್ನೊಂದು ರೀತಿ, ಅಭಿಪ್ರಾಯವು ಮತ್ತೊಂದು ರೀತಿ, ಪರಿಣಾಮವು ಮಗದೊಂದು ರೀತಿ, ಸಾಮಾನ್ಯ ನೋಟಕ್ಕೆ ಅದು ಒಬ್ಬೊಬ್ಬರ ಪಾಲಿಗೆ ಒಂದೊಂದು ರೀತಿಯಾಗಿ ಕಾಣುವುದು ಓದುಗನ ಪಾಲಿಗೆ—ಅದು ಜೀವನದ ಪಂಚಾಂಗ, ನೋಟಕ್ಕೆ ಅದು ಕೆಟ್ಟಲಾಗುಗಳ ಸರಮಾಲೆ ಅದರ ಮೇಲಿನ ಮಮತೆಯೂ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿಯೆ ಇದೆ.

40—ಪುಟದ ವಾರ್ತಾಪತ್ರ ಒಂದಿದ್ದರೆ (ಅದಕ್ಕೆ ಕಡಿಮೆ ಇರಲಾರದು) ಅದರಲ್ಲಿ ಹೆಚ್ಚಿನ ಭಾಗ (ಎಲ್ಲಾ ಇನ್ನೂ ಅಲ್ಲ) ವು ಈ ಕೆಟೆಲಾಗಿನ ಮಾಲೆಯು ಮುಸುಡಿಗೆ ಸವರಿದೊಡನೆಯೆ ಮುಪ್ಪನ್ನು ಓಡಿಸುವ ಮುಲಾಮು, ವಿ. ಪಿ. ಕೊಂಡೊಡನೆಯೇ ಮೋಹವನ್ನು ಧ್ವಂಸಿಸುವ (ಇತರ ಎಲ್ಲಾ ಅಂದರೆ ಈ ತನಕ ಹುಟ್ಟಿದ ಮತ್ತು ಹುಟ್ಟಲಿರುವ ರೋಗಗಳನ್ನು ಪರಿಹರಿಸುವ ರಾಮಬಾಣ. ಅನಂತರ ವಾಪಾಸಿ[illegible] ಜವಸರದ ವರೆಗೆ, ಕೌಪೀನದಿಂದ ತೊಡಗಿ [illegible] ಯದ ತನಕ, ಹೆಂಡತಿಯಿಂದ ತೊಡಗಿ ಖಾಲಿ ಪ್ರಣಯದ ತನಕ—ವಿಕ್ರಯಕ್ಕೆ ಸಿಗುವ ಒಡವೆಗಳ ಪಟ್ಟಿಯೂ ಅದರಲ್ಲಿದೆ ಇನ್ನು ಸುಧಾಮನನ್ನು ಕುಬೇರನನ್ನಾಗಿಯೂ, ಕುಬೇರನನ್ನು ಬೇರಿಲ್ಲದವನಾಗಿಯೂ ಮಾಡುವ ಕಂಪೆನಿಗಳು. ಕೆಲವು ಕಂಪೆನಿಯವರು, ಪಾಲಿಗೆ ಅರ್ಜಿ ಹಾಕಿದೊಡನೆಯೇ—ಐದು 'ವರುಷಗಳ ಡಿವಿಡೆಂಡನ್ನು ಮುಂಚಿತವಾಗಿ ಹಂಚುತ್ತಾರೆ ಇಂಥ ಕುಬೇರಾಲಯಗಳ ಮಾಹಿತಿ ಇಷ್ಟು ಸಿಗುವುದು ಈ ಅಮೂಲ್ಯ ಸರಮಾಲೆಯೇ ಪತ್ರಿಕೆಯ ಜೀವಾಳ (ಅಳವಾದ ಜೀವವೇ ಜೀವಾಳ) ಇವುಗಳನ್ನು ಆ 40 ಪುಟಗಳಲ್ಲಿ, ಯುಕ್ತವಾಗಿ ಹರಡಿದ ನಂತರ, ಉಳಿದ ಜಾಗಗಳು ಬರಿದಾಗಿ ಕಾಣದಂತೆ—ಇತರ ಬರಹ, ಅಕ್ಷರ, ಚಿತ್ರ, ವಿಚಿತ್ರಗಳನ್ನು ತುಂಬಿಸಬೇಕಾಗುವುದು

ಪತ್ರಿಕೆಯನ್ನು ಓದುವ ಜನರನ್ನು ಎರಡು ವರ್ಗವಾಗಿ ಮಾಡಬಹುದಾದರೆ, ಮುಖ್ಯಾಂಶವನ್ನು ಓದುವವರು ಒಂದನೆ ವರ್ಗದವರೆಂದೂ, ಎಡೆಯಲ್ಲಿ ತುಂಬಿಸಿದ ವಿಷಯಗಳನ್ನು ಓದುವವರು ಎರಡನೆಯ ಪಂಗಡದವರೆಂದೂ ತಿಳಿಯುವುದು ಇವರನ್ನು ಮೀರಿಸುವ ಮೂರನೆಯ ಪಂಗಡವಿದೆ ಇವರೆಂದರೆ ಪತ್ರಿಕೆಗಳ ತಲೆಯ (?) ಮೇಲೆ ಇರತಕ್ಕ ಅವಲಕ್ಕಿ ನಂಬರುಗಳನ್ನು ಹೆಕ್ಕಿ ಅದೃಷ್ಟ ತೂಗುವ ವರ್ತಮಾನ ಪತ್ರದ ಜಾತಕಿಗಳು

ಇಷ್ಟೆಲ್ಲ ಹೊರಗಿನ ಚಿತ್ರವೆಂದೆನು ಒಳಗಿನ ಚಿತ್ರ ಬೇರೆಯಿದೆ ವರ್ತಮಾನ ಪತ್ರವೆಂದರೆ ಸುಮ್ಮನೆ ಆಗುವುದಲ್ಲ ಒಂದು ಯಶಸ್ವಿ ಪತ್ರದ ನಿರ್ಮಾಣಕ್ಕೆ—ಸಾವಿರಾರು ವರುಷಗಳ ತಪಸ್ಸು ಬೇಕು ಅದು ಸಾಧ್ಯವಿಲ್ಲದ ದರಿಂದ ಸಾವಿರಾರು ಜನರಾದರೂ ಒಂದೆರಡು ವರುಷ ತಪಿಸಬೇಕು ವರ್ತಮಾನ ಪತ್ರದ ಅಂತರಂಗವನ್ನು ಸೀಳಿದರೆ ಕಾಣುವ ಮುಖ್ಯ ವ್ಯವಸ್ಥೆಗಳಿವು

೧ ಪತ್ರದ ಮ್ಯಾಲಕನು
೨ ಸಂಪಾದಕನು
೩ ಪ್ರಕಟಣೆ ಕೊಡುವವರು
೪ ಸುದ್ದಿಗಾರರು (ಇತರ ಅನಾವಶ್ಯಕ ಲೇಖಕರು ಸಹ)
೫ ಉಳಿದವರು—ಇವರಲ್ಲಿ ಹಣ ಕೊಟ್ಟೂ ಕೊಡದೆಯೂ ಓದುವ ಜನರು ಸಹ ಸೇರುವರು

ಪತ್ರದ ಮ್ಯಾಲಕನು

ಯಾವಾಗಲೂ ದೇಶದ ಉದ್ಧಾರಕ್ಕೇನೆ ಹೊರಟ ಅಸಾಮಿಯಿರಬೇಕು ಅವನ ಹಣವು, ಸಾವಿರಲಕ್ಷ ಪವನುಗಳಲ್ಲಿರದೆ, ಅದರ ಲಘುತಮ ಸಾಮಾನ್ಯ ಅಪವರ್ತ್ಯದಲ್ಲಿ ಇರಬೇಕು ಆತನು ಸದಾ ಅಂತರಾಷ್ಟ್ರೀಯ ಭಾಷೆಯಲ್ಲಿ ದೇಶೀಯ ಅರಸನನ್ನು ಕೊಂದು, ವಿದೇಶೀಯ ಯುದ್ಧೋಪಕರಣ ತಯಾರಿಸುವವರಿಗೋ ಒಟ್ಟೆ ಒಸ್ಕಿಟು ತಯಾರಿಸುವವರಿಗೋ ಅಥೀಮು ವ್ಯಾಪಾರಿಗಳಿಗೋ ಸಹಾಯಕನಾಗಿರಬೇಕು. ತನಗಿಂತ ಭಿನ್ನ ಅಭಿಪ್ರಾಯವುಳ್ಳ ಪತ್ರಿಕೆಗಳ ಯಜಮಾನರನ್ನು ಕೊಳ್ಳಲ ಶಕ್ತಿಯುಳ್ಳದವನೂ, ಕನಿಷ್ಠ ಬಾಡಿಗೆ ಕೊಳ್ಳಲು ಆಗದವನೂ ಈ ಕೆಲಸಕ್ಕೆ ನಾಲಾಯಖನು

ಸಂಪಾದಕನು

ಈತನು ಪತ್ರಿಕೆಯ ಧೋರಣೆಗೆ (?) ಜವಾಬುದಾರನು ಅಂದರೆ ಪತ್ರಿಕೆಯಲ್ಲಿ ಬರುವ ಸಂಗತಿಗಳಿಗೆ ಅವನು ಜವಾಬುದಾರನು ಇವುಗಳಲ್ಲಿ ಅವನ ಜವಾಬುದಾರಿಯು—ವರ್ತಮಾನ, ಬಾತಮಿ, ಲೇಖನ, ಚಿತ್ರ, ಹಾಸ್ಯ, ಜಾಹೀರಾತುಗಳಿಗೆ ಮಾತ್ರ ಅನ್ವಯಿಸುವುದಿಲ್ಲ ಈತನು ತನ್ನ ಲೇಖನಿಯನ್ನು—ಅಥವಾ ಉಪಸಂಪಾದಕರ ಲೇಖನಿಯನ್ನು ಹಿಡಿಯುವ ಮೊದಲು ಆತ್ಮಸಾಕ್ಷಿಯೆಂಬ ಅನಾವಶ್ಯಕದ ಹೊರೆಯನ್ನು ಮ್ಯಾಲಕನಿಗೆ ಒಪ್ಪಿಸಬೇಕು

ಅನಂತರ ದೇಶದ ಹಿತಕ್ಕಾಗಿ—ವರ್ತಮಾನ, ಅಗ್ರಲೇಖ ಮೊದಲಾದುವನ್ನು ತಯಾರಿಸಲು ಅವನು ಕುಳಿತಿರಬೇಕು ಕೆಲಸವನ್ನು ಮಾಡುವಾಗ ಅವನು ಜನತೆಯ ದೃಷ್ಟಿಯನ್ನು ಇರಿಸಿಕೊಳ್ಳಬೇಕು ಜನತೆಯ ದೃಷ್ಟಿಯೆಂದರೆ ಮನುಷ್ಯ ಜೀವಿಗಳೆಂಬವರು (ತನ್ನನ್ನು ಬಿಟ್ಟು) ಏನೇನೂ ಮಿದುಳಿಲ್ಲದ ಒಡವೆಗಳು, ಅವರಿಗೆ ಮಿದುಳನ್ನು ಒದಗಿಸುವ ವಿಶ್ವಕರ್ಮನು ನಾನು ಎಂದು. ಆ ದೃಷ್ಟಿಯಿಂದ ಅವರ ಆರೋಗ್ಯಕ್ಕೆ ಅನುಕೂಲವಾದಷ್ಟೆ ಡಿಗ್ರಿ ಉಷ್ಣದ ವಿಷಯಗಳನ್ನು ಒದಗಿಸಿ ಕೊಡಬೇಕು.

ಪ್ರಕಟಣೆ ಕೊಡುವವರು

ಇವರು ವರ್ತಮಾನ ಪತ್ರಿಕೆಗಳ ಪಾಲಿಗೆ ದೀಪಾವಳಿಗೆ ಬಂದ ನವ ಜಾಮಾತನೆಂದು ತಿಳಿಯಬೇಕು. ಭಾವಿ ಅಳಿಯನೆಂದು ತಿಳಿದರೆ ಇನ್ನೂ ಲೇಸು.

ಸುದ್ದಿಗಾರರು

ಇವರು ವರ್ತಮಾನ ಪತ್ರದ ನಾರದರು ಇವರ ಮುಖ್ಯ ಕೆಲಸವೆಂದರೆ—ತಮ್ಮ ಶಾರ್ಟುಹೇಂಡ್ ಲೇಖನಿಯನ್ನೂ ದೂರದರ್ಶಿ ಕೆಮರಾವನ್ನೂ ಹಿಡಿದು ಸಂಚರಿಸುವುದು

ದೇಶದಲ್ಲಿ ಹೆಗ್ಗಣ ಇತ್ಯಾದಿಗಳನ್ನು ಹೆರುವ ತಾಯಂದಿರು ಇವರ ದೃಷ್ಟಿಪಥದಿಂದ ದೂರಾಗಬಾರದು

ಪ್ರಸಿದ್ಧ ಪುರುಷರ ಚುಂಬನ, ಪ್ರಣಯ ವಿಚ್ಛೇದಗಳ ವಿಚಾರವು ಅವು ನಡೆಯುವ 24 ತಾಸುಗಳ ಮುಂಚಿತವಾಗಿಯಾದರೂ ಸಚಿತ್ರವಾಗಿ ಪ್ರಕಟವಾಗುವಂತೆ ನೋಡಿಕೊಳ್ಳುವುದು

ಪ್ರಸಿದ್ಧರ ಅಂದರೆ—ಅಧಿಕಾರ ಮತ್ತು ಶ್ರೀಮಂತಿಕೆಯಿರುವ ಯಾವತ್ತು ಗಣ್ಯರ ಹುಟ್ಟು, ಬಾಳು, ಸಾವುಗಳನ್ನು, ಕನಿಷ್ಠ 1500 ಬಾರಿ ವಿಶಾಲೀಕರಿಸುವ ಮೈಕ್ರೊಸ್ಕೋಪಿನಿಂದ ಕಂಡು ತಿಳಿಸುವುದು

ಇವು ಸಾಕಷ್ಟು ಸಿಗದಲ್ಲಿ ಉಳಿದ ವಿಷಯಗಳನ್ನು ಸೇರಿಸಲು ಆಕ್ಷೇಪವಿಲ್ಲ

ಉಳಿದ ವಿಷಯಗಳೆಂದರೆ—ಮೇಲಿನ ವಿಷಯಗಳನ್ನು ಆಧರಿಸಿ ಬರೆದ ಚಿತ್ರಗಳು, ಕಥೆ, ಪ್ರಬಂಧ ಇತ್ಯಾದಿ ವಿಷಯಗಳು ಅವಿಲ್ಲದ ಮೇಲೆ ಇನ್ನೇನನ್ನೂ ಸೇರಿಸಬಹುದು. ಈ ಜವಾಬುದಾರಿಯು ಪತ್ರಿಕೆಯ ಉಪಸಂಪಾದಕರ ಕಂಪೋಜಿಟರ ಕೈಯಲ್ಲಿದೆ

ಈ ಮಹಾಕಾರ್ಯಕ್ರಮಗಳು ನಡೆಯಲು ಕಾಸು ಕೊಟ್ಟು ಸಹಾಯಮಾಡುವವನು ಓದುಗನೆಂತಲೂ, ಉಳಿದವರನ್ನು ಪೋಷಕರೆಂದೂ ತಿಳಿದರೆ ಸಾಕು.

ಇಷ್ಟು ಪತ್ರಿಕೆಗಳ ಅಂತರಂಗ, ಬಹಿರಂಗದ ವಿಚಾರ ಅದರ ಜೀವನಕ್ರಮದ ವಿಷಯ ಎರಡು (X X) ಮಾತುಗಳು ಈಗ ಇಲ್ಲಿ—'ದುಮಾರಾಂಗ ನೆಂಬ ಒಬ್ಬ ಪ್ರಸಿದ್ಧ ಪ್ರಜಾಸತ್ತೆಯ ಅಧ್ಯಕ್ಷನು ಮೋಟಾರಿನಲ್ಲಿ ಒಬ್ಬಾಕೆಯೊಡನೆ ಆರ್ಮ್‌ಮೆಂಟ್ಸ್ ಸಭೆಯಿಂದ ಮರಳುತ್ತಿರುವನೆಂದು ತಿಳಿಯಿರಿ ಅವನ ಹಿಂದೆ ಮುಂದೆ ಎರಡೆರಡು ಸುದ್ದಿಗಾರರ ಕಾರುಗಳಿವೆ ಇವ[illegible] ಕಥೆಗಳ, ಚಿತ್ರಗಳನ್ನು ಅವರು ಗಳಿಸುವರು ಈಗ ಒಂದು ಅಪಘಡವಾಗಿ ಇವರು ಸಾಯುವರು ಈ ವಾರ್ತೆಯನ್ನೂ ಫೋಟೋವನ್ನೂ ವಾಯರ್‌ಲೆಸ್ ಮೂಲಕ, ಟೆಲಿವಿಜನ್ ಮೂಲಕ ಅವರ ತಮ್ಮ ಸ್ವದೇಶವಾದ—ಅಮೇರಿಕಕ್ಕೆ ತಿಳಿಸುತ್ತಾರೆ ಈ ಘಟನೆಯಾದುದು ತಾ 19ರ ಮಧ್ಯಾಹ್ನ 8 ಘಂಟೆಗೆ ವಾರ್ತೆಯು 8 ಘಂಟೆಗೆ 1¼ ಮಿನಿಟಿಗೆ ಅಮೇರಿಕದ 'ಡೇಲಿ ಹೆರಲ್ಡ್' ಎಂಬ ಪತ್ರಿಕೆಯ ಆಫೀಸಿಗೆ ಮುಟ್ಟುವುದು ಅದು ಆ ಕ್ಷಣವೇ ಮುದ್ರಣ ಯಂತ್ರದಿಂದ ಮುದ್ರಿತ ಹೊರಬೀಳುತ್ತಿರುವ ಪತ್ರಿಕೆಗೆ ಅಂಟಿಕೊಳ್ಳುವುದು 8 ಘಂಟೆ 2¼ ಮಿನಿಟಿನಷ್ಟಕ್ಕೆ ಆ ಪತ್ರಿಕೆಯ ಪ್ರತಿಗಳ ವಿಮಾನದಿಂದ ಕೆನಡಾವನ್ನು ಸೇರಿಯಾಯಿತು ಅಲ್ಲಿ ತಾ 17ರ ಪತ್ರಿಕೆಯಲ್ಲಿ ಅದರ ಸವಿಸ್ತಾರ, ಸಚಿತ್ರ ವರ್ಣನೆಯನ್ನು ಕಾಣಬಹುದು ತಾ 19ರ ಸಂಜೆಯೊಳಗೆ "ಡೇಲಿ ಹೆರಲ್ಡ್" ಪತ್ರಿಕೆಯಲ್ಲಿ ಬಂದ ದುಮಾರಾಂಗನ ಸಾವಿನ ಫೋಟೋಗಳ ಸಲುವಾಗಿ—3,776 376,528,000,000 ಪ್ರತಿಗಳು ಖರ್ಚಾಗಿ ಹೋಗಿರುವುವು

ಇಂಥ ಚುರುಕಿದ್ದರೆ ಅದು ವರ್ತಮಾನ ಪತ್ರವೆನಿಸುವುದು ಇಷ್ಟು ತ್ರಾಣವಿಲ್ಲದೆ ಹೋದರೆ ಅದು 'ವೀಕ್ಲಿ' ಯಾಗುವುದು ಕಡಿಮೆ ತರಗತಿಯವುಗಳನ್ನು ಮಾಸ, ~~ಷಣ್ಮಾಸ, ನವಮಾಸ, ವರ್ಷ, ದಶವರ್ಷ—ಪತ್ರಿಕೆಗಳು—~~ ಎಂದು ಕರೆಯಬಹುದು

[illegible]

ವಿಳಾಸ—ಕರ್ನಾಟಕ ...

ಮಂಗಳೂರಿನ ಪೇಟೆಧಾರಣೆ.

ಅಕ್ಕಿ—ಅಕ್ಕಿಯ ಬೆಲೆಯು ಹೆಚ್ಚಿಗೆ ಏರಿದಂತೆ ಕಂಡುಬರುವದಿಲ್ಲ. ಕಳೆದ ವಾರದ ಬೆಲೆಗೂ ಈ ವಾರದ ಬೆಲೆಗೂ ಸ್ವಲ್ಪ ವ್ಯತ್ಯಾಸವಿರುತ್ತದಾದರೂ, ಇಂತಹ ಕಾರತಮ್ಯವು ಪೇಟೆಯಲ್ಲೇ ಇದೆಯೆಂದು ಹೇಳಬಹುದು. ಊರ ಅಕ್ಕಿಯ ಬೆಲೆಯು ಇನ್ನೂ ಕಡಿಮೆಯಾಗಬಹುದೆಂದು ಊಹನೆಯಿದೆ.

ಕಾಫಿ—ಕಾಫಿಯ ಬೆಲೆಯು ಯಾವ ರೀತಿಯಿಂದಲೂ ಪ್ರೋತ್ಸಾಹಕರವಾಗಿಲ್ಲ. ಕಳೆದ ವರ್ಷ ಈ ಸಮಯದಲ್ಲಿ ಕಾಫಿಯ ಬೆಲೆಯು ಹತ್ತಿಪ್ಪತ್ತು ರೂಪಾಯಿಗಳಷ್ಟು ಹೆಚ್ಚೇ ಇದ್ದಿತೆನ್ನಬಹುದು.

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ ಆ	ರೂ ಆ
ಹೊಸ ರಾಶಿ ಅಕ್ಕಿ	3— 2	3— 4
ಹಳ್ತು ಮಸ್ಕತಿ	4— 2	4—12
ಹಳ್ತು ಗುಡ್ಡ	4— 2	4— 4
ಹಳ್ತು ಸುಗ್ಗಿ	3— 8	4— 2
ಊರ ಅವ್ವಲ್ ಬೆಳ್ತಿಗೆ	4—12	5— 4
ರಂಗೂನು ಬೆ ಗೋ ಗೆ	5— 4	6— 4
ಎಲ್ಲೂರು ಬೆ ಮು. ಗೆ	4— 0	4— 0
ಗೋಧಿ ಗೋಣಿ ಗೆ	10— 0	12— 8
ತೊಗರಿ ಗೋಣಿ ಗೆ	9— 8	10— 0
ಹುರುಳಿ ಗೋಣಿ ಗೆ	7— 0	7— 4
ಕಡಲೆ ಗೋಣಿ ಗೆ	7— 0	10— 8
ಕೊಗಂಬೇಳೆ ಗೋಣಿ ಗೆ	10— 0	17— 0
ಉದ್ದು ಗೋಣಿ ಗೆ	8— 0	8— 2
ಹೆಸರು ಗೋಣಿ ಗೆ	7— 0	7— 8
ಊರುಬೆಲ್ಲ ಖಂಡಿ ಗೆ	37— 0	37— 8
ಉಪ್ಪು ಗೋಣಿ ಗೆ	4—12	5— 4
ಕೊಬ್ರಿ ಖಂಡಿ ಗೆ	41— 0	43— 0
ಕೊಬ್ರಿ ಹಿಂಡಿ ಖಂಡಿ ಗೆ	22— 0	23— 0
ಎಳ್ಳಿಂಡಿ ಖಂಡಿ ಗೆ	30— 0	35—12
ಕೊಬ್ರಿ ಎಣ್ಣೆ ಮಣ ಗೆ	3— 2	4— 2
ಎಳ್ಳೆಣ್ಣೆ ಮಣ ಗೆ	5— 3	5—10
ಚಿಮಿಣಿಎಣ್ಣೆ ಪೆಟ್ಟಿಗೆ ಗೆ	5— 7	5—7
ಮೋರಿಸ ಸಕ್ಕರೆ ಮು. ಗೆ	3— 7	3— 8
ಮೆಣಸು	5—12	7— 0
ಸಾಸಿವೆ ಮುಡಿ ಗೆ	4—12	5— 4
ಕಾಳುಮೆಣಸು ಖ. ಗೆ	165— 0	170 0
ಯೇಲಕ್ಕಿ ಮಣ ಗೆ	24— 0	26— 0
ಗೇರುಬೀಜ ಮು. ಗೆ	3—14	4— 2
ಕಚ್ಚಿಲು ಖಂಡಿ ಗೆ	42— 0	44— 0
ತಾಂಬ್ರತಗಡು ಮ. ಗೆ	9— 8	10—0
ತಾಂಬ್ರಪಾತ್ರಗಳು ಮ. ಗೆ	12— 8	14— 0
ಚೀನಬೆಳ್ಳಿ ಸೇರು ಗೆ	14—12	15— 0
ಹಿತ್ತಾಳೆ ತಗಡು ಮ. ಗೆ	9— 2	9—10
ಪವನು ಗೆ	20—10	21— 0
ಹುಣಿಸೆ ಹುಳಿ ಖಂಡಿ ಗೆ	30— 0	40— 0
ನೇಟಿವ್ ಕಾಫಿ ಖಂಡಿ ಗೆ	170— 0	185— 0
ಫ್ಲಾಂಟರ ಕಾಫಿ ಖಂಡಿ ಗೆ	280— 0	290— 0
ಹಳೆ ಅಡಿಕೆ	85 — 0	115— 0
ಹೊಸ ಅಡಿಕೆ	55— 0	61 — 0

ಶಾಲಿವಾಹನ ಬ। ಶಕೆ ೧೮೫೬ನೆಯ ಭಾವ ಸಂವತ್ಸರದ ಕಾರ್ತಿಕ ಬ। ೩ ಶನಿವಾರದಿಂದ— ಕಾರ್ತಿಕ ಬ। ೯ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ನವಂಬರು

ತಾರೀಕು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	[illegible]	ಸೂರ್ಯ ಉ	ಸೂರ್ಯ ಅಸ್ತ	[illegible]
24	ಶನಿ	೩	[illegible]	ಆರ್ದ್ರಾ	[illegible]	[illegible]	6 22	6 18	
25	ರವಿ	೪	[illegible]	ಪುನರ್ವಸು	[illegible]	[illegible]	6.22	6.17	
26	ಸೋಮ	೫	[illegible]	ಪುಷ್ಯ	[illegible]	[illegible]	6.22	6 17	
27	ಕುಜ	೬	[illegible]	ಆಶ್ಲೇಷ	[illegible]	[illegible]	6 22	6 16	
28	ಬುಧ	೭	[illegible]	ಆಶ್ಲೇಷ	[illegible]	[illegible]	6 22	6.15	
29	ಗುರು	೮	[illegible]	ಮಘ	[illegible]	[illegible]	6 22	6.14	
30	ಶುಕ್ರ	೯	[illegible]	ಪುಬ್ಬ	[illegible]	[illegible]	6.22	6.14	

[illegible]

ಊರು ... ಸಂಗೀತ ಮತ್ತು ... ವಗೈರೆ ಅಭ್ಯಾಸವುಳ್ಳ ಬ್ರಾಹ್ಮಣ ... ಸಾರಸ್ವತ ... ಸಮಾಜದ ಯೋಗ್ಯ ಸ್ತ್ರೀಯು ಉಪಾಧ್ಯಾಯಿನಿಯು ಬೇಕಾಗಿದೆ. ಸಂಬಳ ಬಗ್ಗೆ ಯಾ ಹೆಚ್ಚಿನ ವಿವರದ ಬಗ್ಗೆ ಈ ಕೆಳಗಿನ ವಿಳಾಸದಾರರಿಗೆ ಬರೆದುಕೊಳ್ಳಬಹುದು.

Address—

M. Sheshagiri Rao,
Monaje, ZAMINDAR, Coondapur,
Post Shankernarayana.

ಅಥವಾ

A. Krishnaraya Kodgi,
Amavasebail, Dt. Board Member,
Post Shankernarayana.

ಪ್ರಥಮ ಬಹುಮಾನ
ರೂ 4000

ಬಹುಮಾನಗಳು 600. ರೂ. 11,000.
ಟಿಕೇಟು 1ಕ್ಕೆ 0—8—0 ಮಾತ್ರ.
ಕುಕ್ಕುಂದೂರು ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ಸಹಾಯಾರ್ಥವಾಗಿ ಸೋಡ್ತಿ
ಸೋಡ್ತಿ ತೆಗೆಯುವ ತಾ 16-2-'35.
ಸುಸಂದರ್ಭವನ್ನು ಕಳಕೊಳ್ಳಬೇಡಿರಿ ಅದೃಷ್ಟ ಪರೀಕ್ಷೆಗೆ ಒಳ್ಳೆ ಸಮಯ, ಸದುದ್ದೇಶಕ್ಕೆ ಸಹಾಯಮಾಡಿ ಪುಣ್ಯ ಭಾಗಿಗಳಾಗಿರಿ.
ಉತ್ಸಾಹಿಗಳಾದ ಏಜಂಟರಿಗೆ ಧಾರಾಳ ಕಮಿಶನ್ ಇದೆ
ವಿಶೇಷ ಮಾಹಿತಿಗೆ ಈ ವಿಳಾಸಕ್ಕೆ ಬರೆಯಿರಿ —
ಗೌರವ ಕಾರ್ಯದರ್ಶಿ,
ದಿ ಗ್ರೇಂಡ್ ರೇಫಲ್ ಆಫೀಸು,
ಕಾರ್ಕಳ, ದ ಕ.

NEW ARRIVALS.

Medicines.

Dr. Schuessler's Twelve Tissue Remedies 5 gr. bot. As. 4/-
Homoeopathy Medicines 5 gr. bot. As. 5/-
Sugar of Milk Dr. Schwabe's original bot. 1lb Rs. 2/-
Haarlem Oil—a world-renowned remedy As. 8/- per phial.
Dr. Haale's New Curative Earth—Radium Cure Rs. 4/- per lb.
Dr. Schwabe's other special remedies are always in stock.
Please consult us for your requirements.
Kanarese Book & Family Guide to Biochemistry Re. 1/-
" " Domestic Homoeopathy Rs 1-4/-
If you own these two Books you will be able to pick up treatment and administer Tissue & Homoeopathy Medicines successfully without consulting others.

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As 2/6
Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow-well and Deep-well Pumps, Spring Cots, Spring Couches etc, and stock
Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up-to date Machine in Standard and portable sizes
For Futher particulars please write to —

Basel Mission Book & Tract Depository,
Mangalore, S K or Hubli, S M.

ನಿಮ್ಮ ಆರೋಗ್ಯವು ಈ ಚಿಕ್ಕ ಗುಳಿಗೆಗಳಲ್ಲಿ
ಸುಭದ್ರವಾಗಿದೆ

ನೂತನ! ರುಚಿಕರ! ಹಿತಕರ

ಹರಳೆಣ್ಣೆ ಮಿಶ್ರಿತವಾದ ಸಿಹಿ ಚೊಕಲೇಟು—

ಕೇಸ್ - ಫೆನ್ - ಮಿಂಟ್

ಹರಳೆಣ್ಣೆ ಅಗರ್ ಅಗರ್ ಫಿನಲ್‌ಫ್ತಾಲೀನ್ ಪೆಪ್ಪರ್‌ಮಿಂಟ್ ಮತ್ತು ಚೊಕಲೇಟು ಇವುಗಳನ್ನು ಸೇರಿಸಿ ಸೇವಿಸಲು ಹಿತಕರವಾಗುವಂತೆಯೂ ಆಬಾಲವೃದ್ಧರೆಲ್ಲರಿಗೂ ಯಾವ ಕಾಲಕ್ಕೂ ಸುಖಭೇದಿಗಾಗಿ ಅನುಕೂಲವಾಗುವಂತೆ ಇದು ತಯಾರಿಸಲ್ಪಟ್ಟಿದೆ. ಮಲಬದ್ಧತೆಯು ಹಲವು ಭಯಂಕರ ರೋಗಗಳನ್ನು ತರಬಲ್ಲುದು. ಮಲಬದ್ಧತೆ ತೋರಿದಾಗಲೆಲ್ಲ "ಕೇಸ್ ಫೆನ್ ಮಿಂಟ್"ನ್ನು ಸೇವಿಸಿರಿ. ಈ ಚೊಕಲೇಟುಗಳನ್ನು ಒಂದೆರಡು ಸೇವಿಸಿದರೆ ಅನಾ...

ಈ ಹೆಸರುಗಳೇನು,—ಓದಿರುವಿರಾ?
ವಾತ—ಪರಿವಾತ—ಸಂಧಿವಾತ—ಕಟಿವಾತ ತಲೆಶೂಲೆ—ನಡುನೋವು
ಇವುಗಳಿಗೆ ಹೆದರದವರಾರು? ಇವುಗಳಿಷ್ಟು ಜನರನ್ನು ಕಾಡುತ್ತಿವೆ

ಡಾ। ಫೌಯವರ ಕೆಚೆಟ್ಸ್

ಸೇವನೆಗೆ ಕಷ್ಟವಿಲ್ಲ ಅರ್ಧ ಕಪ್ಪು ನೀರಿನಲ್ಲಿ ನೋವು ತಲೆದೋರಿದಾಗಲೆಲ್ಲ—ಈ ಕೆಚೆಟುಗಳನ್ನು ಹಾಕಿ ಸೇವಿಸಿದರೆ – ಅದು ಹೇಗೆ ಗುಣಕಾರಿಯಾಗಿ ಕಾರ್ಯಾರಂಭ ಮಾಡುವುದೆಂಬುದನ್ನು ಆಗಲೇ ಅನುಭವ ಮಾಡುವಿರಿ

ಕೆಲವೇ ನಿಮಿಷಗಳಲ್ಲಿ ಖಂಡಿತ ಗುಣಲಾಭ!

ನರಗಳ ದೌರ್ಬಲ್ಯ ಸಂಬಂಧವಾದ ಉಪದ್ರಗಳನ್ನೂ ಪರಿಹರಿಸುವುದು

ಕೊಂಡುಕೊಂಡೇ ಅವನ್ನು ಪರೀಕ್ಷಿಸಿರಿ

'ಕೆಚೆಟು'ಗಳು ನಿರಪಾಯವಾಗಿ, ಭರವಸೆಯಿಂದ ಸೇವಿಸಲ್ಪಡಲು ಯೋಗ್ಯವಾಗಿವೆ

ಸಂದೇಹವಿಲ್ಲದೆ ಇಂದೇ ಅವುಗಳ ಗುಣಪರೀಕ್ಷೆ ನಡೆಯಲಿ.

ಯಾಸವಾದ ಸುಖಭೇದಿ! ಕರುಳುಗಳ ವಿಕಾರವಿಲ್ಲ! ಜಿಗುಪ್ಸೆ ಹುಟ್ಟಿಸುವುದಿಲ್ಲ! ಹೊಟ್ಟೆಯೊಳಗೆ ಯಾವ ವೇದನೆಯೂ ಇಲ್ಲ ಮಕ್ಕಳು ಆನಂದದಿಂದ ಸೇವಿಸುವರು
ಬಲು ಕಡಿಮೆ ಕ್ರಯ! ಎಲ್ಲೆಲ್ಲಿಯೂ ದೊರೆಯುವುದು ಅತಿ ಹೆಚ್ಚು ಫಲ!

The Paragon Products Co. Ballard Estate Bombay

ದ ಕ ಜಿಲ್ಲೆಯ ಡಿಸ್ಟ್ರಿಬ್ಯೂಟರರು — **M. K Prabhu,** MANJESHWAR + S KANRA

Standard Furniture Co. Ltd

KALLAI, MALABAR

The BEST HOUSE for FURNITURE.

BRANCHES.—

Madras:—34—35, General Patters Road, Mount Road

Trichinopoly:—11, Promenade Road, Cantt

ಪತ್ರಿಕಾ ಪ್ರಪಂಚ.

ನೂತನ ಆದರ್ಶ

[illegible] ಈ ವಿಷಯವಾಗಿ [illegible] ನೂತನ ಆದರ್ಶವನ್ನು [illegible] ಸಾಮಾಜಿಕ ಜನತೆಯು [illegible] ಮನಶ್ಶಾಸ್ತ್ರವಂತಹ ಪ್ರತ್ಯೇಕತೆಯನ್ನುಂಟುಮಾಡಿದೆ. ಜನತೆಯು ರಾಜಕೀಯ ಸಾಮಾಜಿಕ ಮತ್ತು ಧಾರ್ಮಿಕ ಮಾನಸಿಕತೆಗಳು ಸಂಪೂರ್ಣ ಪರಿವರ್ತನವಾದ ಯುಗವಿದು. ಜಗತ್ತಿನ ಇತಿಹಾಸದಲ್ಲಿ ಇಂತಹ ಆದರ್ಶಪರತೆಯು ಜನತೆಯಲ್ಲಿ ಮೂಡಿದ್ದುದು ಕಂಡುಬರಲಾರದು. ಪೂರ್ವಕಾಲದಲ್ಲಿ ಜನರು ತಾವು ಅದೃಷ್ಟದ ಬಲೆಯೊಳಗಿರುವವರೆಂದು ಭಾವಿಸಿ ತಣ್ಣಗಿದ್ದರು. ಆದರೆ, ಈಗ ಜನತೆಯು ಅದೃಷ್ಟವನ್ನು ಜಯಿಸಿ ಮುಂದೆ ಸಾಗುವ ದೃಢತೆಯನ್ನು ಹೊಂದಿರುತ್ತದೆ. ಮೊದಲಿನ ದಿನಗಳಲ್ಲಿ ಜನರು, ಸಾಮಾಜಿಕ ಪರಿಸ್ಥಿತಿಗಳು ತಾವಾಗಿ ಮುಂದೆಂದು ಸನ್ನಿಹಿತವಾಗುವುದನ್ನು ನಿರೀಕ್ಷಿಸುತಿದ್ದರು. ಧೈರ್ಯ ಸಾಹಸಗಳ ಕಾಲವು ಅದಾಗಿರಲಿಲ್ಲ. ಕಾರ್ಯರೂಪ ದಲ್ಲಿ ಮುಂದಿಡುವ ಯುಗ ಅದಾಗಿರಲಿಲ್ಲ. ಆದರೆ ಆಧುನಿಕ ಜನತೆಯು ಅಂತಹ ಪರಿವರ್ತನೆಯನ್ನು ನಿರೀಕ್ಷಿಸಿ ಕುಳಿತುಕೊಳ್ಳುವಷ್ಟು ಸಹನೆಯುಳ್ಳದಾಗಿಲ್ಲ. ಅದನ್ನು ಜಯಿಸಿ ತನ್ನ ಭಾವೀ ಜೀವನದ ರೂಪಕತೆಯನ್ನು ಮಾಡುವುದು ಅದರ ದೃಢ ಮನಸ್ಸಾಗಿರುತ್ತದೆ. ಈಗಿನ ಜನಾಂಗಕ್ಕೆ ಬೇಕಾಗಿರುವುದು ಸುಖಮಯವಾದ ಸಾಮಾಜಿಕ ವಾತಾವರಣ,—ಸಮಾಜ ಇದು ರಚಿಸಲ್ಪಟ್ಟರೆ, ಪೂರ್ವದ ಸಾಹಸರಹಿತ ಜೀವನೋಪಾಯಗಳು ತಾವಾಗಿ ಮಾಯವಾಗುವುವು. ಇದರಿಂದ ಲೋಕ ಕಲ್ಯಾಣವಾಗುವುದು. ನೂತನ ಸೃಷ್ಟಿಯುಗಬೇಕಾದರೆ ನೂತನ ಸಮಾಜದ ಕಲ್ಪನೆಯಾಗಬೇಕು.

"The Young Men of India Burma and Ceylon"

ಮುಂದಿನ ಯುದ್ಧದಲ್ಲಿ ಇಂಗ್ಲೆಂಡಿನ ಸ್ಥಾನ

ಮುಂದಕ್ಕೆ ಯುದ್ಧವು ಆಕಸ್ಮಿಕವಾಗಿ ಪ್ರಾರಂಭವಾಯಿತೆಂದರೆ ಇಂಗ್ಲೆಂಡಿನ ಸ್ಥಾನವಾವುದು? ಈ ಪ್ರಶ್ನೆಗೆ ಉತ್ತರವನ್ನೀಯಬೇಕೆಂದಾದರೆ ಮೊದಲು ಆ ಕಾಲದಲ್ಲಿ ದೇಶವನ್ನಾಳುವವರಾರೆಂದು ತಿಳಿದುಕೊಳ್ಳಬೇಕಾಗಿದೆ. ಈಗಿನ ಕನ್ಸರ್ವೇಟಿವ್ ಪಕ್ಷೀಯರು ಯುರೋಪಿನಲ್ಲಿ ಮತ್ತೊಂದು ಬಲಿಷ್ಠ ರಾಷ್ಟ್ರವು ತಲೆಯೆತ್ತದಂತೆ ಸಣ್ಣ ಸಣ್ಣ ರಾಷ್ಟ್ರಗಳ ಬೆಂಬಲವಾಗಿ ನಿಲ್ಲುವರು. ಫ್ರಾನ್ಸಿನ ಮೇಲೆ ಬೀಳುವುದಕ್ಕಾಗಿ ಜರ್ಮನಿಯು ಸಾಕಷ್ಟು ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಿಕೊಂಡು ತ್ರಿಕೋಣದ ಇಟಲಿಯು ತನ್ನ ಸನ್ನಾಹವನ್ನು ಮಾಡಿಯೇ ಮಾಡುವುದು. ಯವರೋಪಿಯ ರಾಜಕೀಯ ಪರಿಸ್ಥಿತಿಯ ಕೂಲಂಕಷ ಪರಿಚಯವಿರುವ ರೊಬರ್ಟ್ ಡೆಲ್ ಎಂಬವರು ಬರೆಯುವುದಿದು—"ನಾನು ಕಳೆದ ಮಾರ್ಚ ತಿಂಗಳಲ್ಲಿ ಇಟಲಿಯಲ್ಲಿದ್ದಾಗ ದೇಶವು ಸುಸೂತ್ರವಾಗಿ ಯುದ್ಧಸನ್ನಾಹದಲ್ಲಿದೆಯೆಂದು ನನಗೆ ಭಾಸವಾಗಿ ನಾನು ಅಲ್ಲಿಂದ ಹೊರಟೆನು. ಆದರೆ ಜರ್ಮನಿಯು ಸಿದ್ಧವಿರದೆ ಮುಸಲೋನಿಯವರಿಗೆ ಯುದ್ಧವು ಆಗಕೂಡದಿರುವುದಿಲ್ಲ. ಆದರೂ ಅವರಿಗೆ ಮಿತ್ರತೆಯೊಂದು ಆಗತ್ಯವಿದೆ. ಇದಕ್ಕಾಗಿ ಅವರು ಪ್ರತಿಕೂಲಗಳ ಒಪ್ಪಂದವನ್ನು ಮಾಡಿದರು.

ಜರ್ಮನಿಯಲ್ಲಿ ಖಾಸಗಿಯಿಂದ ಶಸ್ತ್ರಸಿದ್ಧತೆಯನ್ನು ಮಾಡಬಹುದೆಂಬ ರೂಢಿಯಿದೆ—ಕಾರಣವಾಗಿ—ದೇಶದ ಶಸ್ತ್ರ ತಯಾರಿಸುವ ಕಂಪನಿಗಳಿಗೆ ಬಿಡುವೇ ಇಲ್ಲ. ಕ್ರುಪ್ ಕಂಪೆನಿಯು ಧುರೀಣತೆಯನ್ನು ವಹಿಸಲು ಬಿಡಬಾರದೆಂದು ಸೊಡಾ ಮತ್ತು ಕೆಮಿಕಲ್‌ನಲ್ಲಿ ರಾತ್ರಿ ಹಗಲು ಕೆಲಸಮಾಡಿ ಶಸ್ತ್ರಗಳನ್ನು ತಯಾರಿಸುತ್ತಿರುವರು.

'The Living Age'.

ಮಕ್ಕಳ ದಂತಗಳು.

ಡಾ। ಆರ್ ಅಹಮ್ಮದರು ಬರೆಯುವುದೇನೆಂದರೆ—ಮಕ್ಕಳ ಹಾಲುಹಲ್ಲುಗಳು ಉದುರಿ ಹೊಸ ಹಲ್ಲುಗಳು ಹುಟ್ಟುತ್ತವೆಂಬ ಅದೊಂದು ವಿಷಯದ ಮೇಲೆ ಅವಲಂಬಿಸಿಕೊಂಡು ಹೆತ್ತವರು ತಮ್ಮ ಮಕ್ಕಳ ಹಾಲುಹಲ್ಲುಗಳನ್ನು ಅಲಕ್ಷಿಸುತ್ತಾರೆ. ಆದರೆ ನಾನು ಖಚಿತವಾಗಿ ಹೇಳುವುದಾದರೆ,—ಹಾಲುಹಲ್ಲುಗಳು ಹೊಸ ಹಲ್ಲುಗಳಷ್ಟೇ ಪ್ರಾಮುಖ್ಯತೆಯನ್ನುಳ್ಳುದಾಗಿವೆ. ಈ ನಿರೂಪಣೆಗಾಗಿ (೧) ೬ ವರ್ಷ ಪ್ರಾಯದಿಂದ ೧೨ ವರ್ಷಗಳ ವರೆಗಿನ ಪ್ರಾಯದ ವರೆಗೆ ಮಕ್ಕಳು ತಿನ್ನುವ ಆಹಾರವನ್ನು ಅಗಿಯಲು ಸಹಾಯವಾಗುವುದಕ್ಕಾಗಿ ಮಕ್ಕಳಿಗೆ ಹಾಲುಹಲ್ಲುಗಳು ಬರುವುವು. ಉದರವನ್ನು ಸ್ವಚ್ಛತೆಯಲ್ಲಿರಿಸುವುದೇ ಈ ಹಲ್ಲುಗಳ ಪ್ರಾಮುಖ್ಯ ಕೆಲಸ, ಆದರೆ, ಕೆಲವರು ಮಕ್ಕಳ ಈ ಹಲ್ಲುಗಳನ್ನು ದುರ್ಲಕ್ಷಿಸಿ ಅವರ ದೇಹಾರೋಗ್ಯವನ್ನು ಕೆಡಿಸುತ್ತಾರೆ. (೨) ನಿಮ್ಮ ಮಕ್ಕಳು ಮರಿಗಳು ವಿಷಭರಿತ ಆಹಾರವನ್ನು ತಿನ್ನಬೇಕೆಂದು ನಿಮ್ಮ ಆಶಯವಿದೆಯೇ? ಇಲ್ಲ! ಹಾಗೆ ಆಶಿಸಲಿಕ್ಕಿಲ್ಲ. ಅಂತಹ ಭಾವನೆಯು ನಿಮ್ಮನ್ನು ಭಯಾಸ್ಪದರನ್ನಾಗಿ ಮಾಡುತ್ತದೆ.

ಆದರೂ, ಸಾವಿರಾರು ಮಕ್ಕಳು ದಿನಂಪ್ರತಿ ಇದೇ ರೀತಿಯ ವಿಷಭರಿತ ಆಹಾರವನ್ನು ಭುಂಜಿಸುತ್ತಿರುವರು 'ಹೇಗೆ' ಎಂಬ ಪ್ರಶ್ನೆಯುದ್ಭವಿಸಬಹುದು. ಹೊಟ್ಟೆಗೆ ಹೋಗುವ ಎಲ್ಲಾ ಆಹಾರವನ್ನು ತಮ್ಮ ದಂತಗಳ ವಿಷದಿಂದ ಮಿಶ್ರ ಮಾಡಿ ನುಂಗುತ್ತವೆ. ವಿಷಯವು ಬಹು ಸಣ್ಣದು (೩) ನಿಮ್ಮ ಮಗುವಿನ ಈ ಅಸಹಾಯಪರಿಸ್ಥಿತಿಯನ್ನು ನಿವಾರಿಸಲು ನೀವೇನು ಮಾಡುತ್ತಿರುವಿರಿ? ಈ ಅನಾಹುತಕ್ಕೆ ಮಗುವು ಬಲಿಯಾಗುವುದನ್ನು ನಿರೀಕ್ಷಿಸುವಿರೋ? ಅಥವಾ ಅದನ್ನು ದಂತವೈದ್ಯರಲ್ಲಿಗೆ ಕರೆದೊಯ್ದು ಅದನ್ನು ರಕ್ಷಿಸುವಿರೋ? (೪) ಶಾಶ್ವತ ಹಲ್ಲುಗಳು ಅಗತ್ಯವೆಂದು ಎಲ್ಲರೂ ತಿಳಿದಿರುವರು. ಶಾಶ್ವತ ಹಲ್ಲುಗಳು ಶುದ್ಧವಾಗಿ ದೇಹಾರೋಗ್ಯವು ನೆಟ್ಟಗಿರಬೇಕೆಂದಾದರೆ ಹಾಲುಹಲ್ಲುಗಳನ್ನು ಜಾಗ್ರತೆಯಿಂದಿಡಿರಿ. ಅವುಗಳು ಬೇಗನೆ ಉದುರಿಹೋದ ಪರಿಣಾಮವಾಗಿ ಡೊಂಕಾದ ಶಾಶ್ವತ ಹಲ್ಲುಗಳು ಬೆಳೆಯುವುದನ್ನು ನೀವು ಕಂಡಿಲ್ಲವೇ? ಸಣ್ಣ ಹಲ್ಲುಗಳು ದೊಡ್ಡ ಹಲ್ಲುಗಳ ಸೌಂದರ್ಯ ಬೆಳವಣಿಗೆಗೆ ಸಹಕಾರಿಯಾಗುತ್ತವೆ. ಮೋರೆಯ ಸೌಂದರ್ಯವು ಹಲ್ಲುಗಳ ಆಕಾರದಲ್ಲೇ ಇದೆಯೆಂಬುದು ತಿಳಿದಿರಲಿ. (೫) ಯಾವ ಹೆತ್ತವರಿಗೂ ತಮ್ಮ ಮಕ್ಕಳು ಕುರೂಪಿಗಳಾಗಿರುವುದು ಸುಖಕರವಾಗಿಲ್ಲ. ಆದುದರಿಂದ ನಿಮ್ಮ ಮಕ್ಕಳ ಹಲ್ಲುಗಳ ರಕ್ಷಣೆಯನ್ನು ಇಂದಿನಿಂದಲೇ ಮಾಡಿರಿ!

"The Teacher's Journal

ಸ್ತ್ರೀಯರ ಸ್ಥಾನ.

ಮನೆಯೆಂಬುದು ಸ್ತ್ರೀಯರ ಪ್ರಾಮುಖ್ಯ ಜೀವನ ಕೇಂದ್ರವೆಂಬುದನ್ನು ಯಾರೂ ಅಲ್ಲಗಳೆಯಲಾರರು. ನ್ಯಾಯವಿಧಾಯಕ ಸಭೆಗಳಲ್ಲಿ ಚರ್ಚಾಸ್ಪದ ವಿಷಯಗಳೆಲ್ಲವೂ ಗೃಹಗಳಿಗೆ ಸಂಬಂಧಿಸಿದವುಗಳೇ ಆಗಿವೆ. ನ್ಯಾಯವಿಧಾಯಕ ಸಭೆಗಳಲ್ಲಿ ಚರ್ಚೆಗೆ ಬೀಳುವ ವಿಷಯಗಳೇನೆಂದು ಒಮ್ಮೆ ಯೋಚಿಸೋಣ. ಮಕ್ಕಳ ವಿದ್ಯಾಭ್ಯಾಸ—ಇದು ಸ್ತ್ರೀಯರ ಕರ್ತವ್ಯಗಳಲ್ಲೊಂದು. ಮಕ್ಕಳ ಸಂರಕ್ಷಣೆ—ಇದೂ ಸ್ತ್ರೀಯರ ಕೆಲಸವೇ! ಸೂಲಗಿತ್ತಿಯವರಿಗೆ ಸಂಬಂಧವಾದ ಎಲ್ಲಾ ಕೆಲಸಗಳು ಇವು ಕೂಡಾ ಗೃಹಕ್ಕೆ ಸಂಬಂಧವನ್ನುಳ್ಳವುಗಳು. ಗೃಹಚರ್ಯೆಗಳು ಇವುಗಳೂ ಸ್ತ್ರೀಯರದ್ದೇ. ಆರೋಗ್ಯ ವಿಷಯಗಳು—ಇವುಗಳು ಮನೆಯೊಡತಿತಕ್ಕೆ ಸಮೀಪವರ್ತಿಯಾಗಿವೆ. ಅರ್ಥಶಾಸ್ತ್ರ, ಹಿಂದೂಸ್ಥಾನದ ಕಾರ್ಖಾನೆಗಳಲ್ಲಿ ಸರ್ವತ್ರ ಸ್ತ್ರೀಯರಿರುವುದರಿಂದ ಈ ವಿಚಾರವು ಸ್ತ್ರೀಯರನ್ನು ಬಿಟ್ಟು ಇಲ್ಲ. ಅಯುದ್ಧವು ಪಟ್ಟ—ಸ್ತ್ರೀಯರು ತರಿಗೆ ತೆರುತ್ತಾರೆ. ಯುದ್ಧ—ಕಳೆದ ಮಹಾಯುದ್ಧದಲ್ಲಿ ವಿದಿತವಾದಂತೆ ಸ್ತ್ರೀಯರು ಮಕ್ಕಳನ್ನು ಹೆತ್ತು, ಸಾಕಿ ಸಲಹಿ ಅವರನ್ನು ಯುದ್ಧಕ್ಕೆ ಕಳುಹಿಸುತ್ತಾರೆ. ಹೀಗೆ ಪ್ರತಿಯೊಂದು ವಿಷಯಕ್ಕೂ ಸ್ತ್ರೀಯರ ಸಹಾಯಸಹಕಾರಗಳಿಲ್ಲದೆ ಸಾಗದು. ರಾಜಕೀಯ ವಿಚಾರವನ್ನು ಒಂದು ಆವರಣದೊಳಗಿಟ್ಟು "ಇದು ಸ್ತ್ರೀಯರ ಕೆಲಸವಲ್ಲ" ಎಂದು ಹೇಳುವುದೂ ಸಾಧ್ಯವಲ್ಲ. ಪುರುಷವರ್ಗಕ್ಕೆ ಸಂಬಂಧಿಸಿರುವ ವಿಚಾರಗಳನ್ನು ನ್ಯಾಯವಿಧಾಯಕ ಸಭೆಗಳಲ್ಲಿ ತರ್ಕಿಸಲು ಅಸಾಧ್ಯ. ಸ್ತ್ರೀಪುರುಷರು ಒಟ್ಟಾಗಿ ಕೆಲಸಮಾಡಬೇಕು. ಇಬ್ಬರ ಉದ್ದೇಶವೂ ಲೋಕೋದ್ಧಾರಕ್ಕಾಗಿರಬೇಕು.

"ಸ್ತ್ರೀಧರ್ಮ",

ತನ್ನಷ್ಟಕ್ಕೆ 'ಗುಣಹೊಂದುವ' ರಬ್ಬರ್.

ಇದೊಂದು ತರದ ವಿಚಿತ್ರ ರಬ್ಬರನ್ನು ಅಮೇರಿಕದಲ್ಲಿ ಕಂಡುಹಿಡಿದಿದ್ದಾರೆ. ಇದರಿಂದ ಮಾಡಿದ ಯಾವತ್ತೂ ಸೈಕಲ್, ಮೋಟಾರು ಟೈಯರುಗಳು ತಮ್ಮ ಸಂಚರಣಾವಸ್ಥೆಯಲ್ಲಿ ಗಾಯಹೊಂದಿದರೆ, ಈ ರಬ್ಬರಿನ ಗುಣದಿಂದಾಗಿ, ಗಾಯಗಳು ತಮ್ಮಷ್ಟಕ್ಕೆ ಮುಚ್ಚಿಕೊಳ್ಳುವುವು. ಇದಕ್ಕೆ ಕಾರಣ,—ಇದೊಂದು ತರದ 'ಗಮ್ ರಬ್ಬರ್' (Gum Rubber) ಆಗಿರುತ್ತದೆ. ಇದರ ಒಳಗೆ ವಾಯುವು ಸೇರಿಕೊಂಡಿದೆ. ಆದಕಾರಣ, ಕೆಲ್ಲಸಿ ಒಂದು ಟಾಯರು ಅಥವಾ ಟ್ಯೂಬ್ ಗಾಯಪಟ್ಟಲ್ಲಿ, ಇದರೊಳಗಿನ ಈ ವಾಯುವು ಹೊರಗೆ ಸರಿಯುವ ಸಮಯದಲ್ಲಿ ಈ ಗಮ್ ರಬ್ಬರ್ ಆ ಗಾಯದಲ್ಲಿ ಪ್ರಸರಿಸಿ ಅದನ್ನು ಮುಚ್ಚಿಬಿಡುತ್ತದೆ. ಇಂಥಾ ರಬ್ಬರ್ ತುಂಬಾ ಟಾಯರುಗಳಿಗೆ ಉಪಯೋಗಿಸಿದ್ದಾರೆಂದು ನಾವು ಕೇಳುತ್ತೇವೆ. ಇನ್ನುಮುಂದಕ್ಕೆ ಹಾದಿಯಲ್ಲಿ ಮೋಟಾರುಗಳು ಪಂಕ್ಚರು ಆಗಿ ನಿಲ್ಲುವುದು ಕಡಿಮೆಯಾಗುವುದು.

'The Hindu'.

ಅಮೇರಿಕದಲ್ಲಿ ಗ್ರಂಥಾಲಯಗಳು

ಸಂಯುಕ್ತ ಸಂಸ್ಥಾನದಲ್ಲಿ ಒಂದೊಂದರಲ್ಲಿ ೩೦೦೦ ಪ್ರತಿಗಳಿರುವ ೩೮೦೦ ಗ್ರಂಥಾಲಯಗಳಿವೆ, ಅವುಗಳ ಒಟ್ಟು ಗ್ರಂಥಗಳು ಸುಮಾರು ೧೬೩,೦೦೦,೦೦೦ ೧೯೨೩ರಿಂದ ೧೯೨೯ರೊಳಗೆ ೨೩ ೦೦೦ ೦೦೦ ಗ್ರಂಥಗಳು ಹೆಚ್ಚಿದುವು. ೧೯೩೧ರಲ್ಲಿ ದೇಶದಲ್ಲೆಲ್ಲ ಗ್ರಂಥಾಲಯ ಚಳವಳವು ಸಾಗಿತು. ಜನರ ವಾಚನಾಭಿರುಚಿಯು ಹೆಚ್ಚಿದ ನಿದರ್ಶನವು ಪ್ರತ್ಯಕ್ಷವಾಗಿದೆ. ೧೯೩೦ರ ಮಾರ್ಚ ತಿಂಗಳಲ್ಲಿ ದೇಶದಲ್ಲೆಲ್ಲ ಗ್ರಂಥಾಲಯಗಳ ಪರಿಷತ್ತುಗಳು ನೆರೆದುಬಂದುವು. ದೇಶದ ೮೮ ಕೊಲೇಜುಗಳಲ್ಲಿನ ಗ್ರಂಥಾಲಯಗಳಿಗಾಗಿ ಕಾರ್ನೆಗಿ ಕೋರ್ಪರೇಶನಿನವರು ೯೩೦,೦೦೦ ಶಿಲ್ಲಿಂಗುಗಳನ್ನು ಕೊಟ್ಟರು. ಈ ಚಳವಳದ ಪರಿಣಾಮವು ವಿದ್ಯಾರ್ಥಿಗಳಲ್ಲಿ ಆಗಿ ಅಲ್ಲಿ ವಾಚನಾಭಿರುಚಿಯು ಸರ್ವವ್ಯಾಪಿಯಾಗಿದೆ.

India and the World'

ಮತಗಳೆಲ್ಲ ಹಿತಕರವೋ?

ಒಂದು ಮತವು ಇನ್ನೊಂದು ಮತಕ್ಕಿಂತ ಉತ್ತಮ ಅಥವಾ ಎಲ್ಲಾ ಮತಗಳೂ ತಮ್ಮ ಒಂದೇ ಒಂದಾದ ಉದ್ದೇಶವನ್ನು ಪೂರೈಸಲು ಇವೆಯೆಂದೂ ಸಾಮಾನ್ಯವಾಗಿ ಹೇಳುವುದಿದೆ. ಹಾಗೆ ಹೇಳುವುದೆಂದರೆ ನಿರೂಪಿಸಲಾರದುದನ್ನು ನುಡಿದಂತೆ. ಈ ಸತ್ಯತೆಯನ್ನು ತಿಳಿಸುವುದಕ್ಕಾಗಿ ಯಾರೂ ಯತ್ನಿಸಿಲ್ಲ. ತನ್ನ ಮತದಲ್ಲಿ ಸಂತುಷ್ಟಿಯಿಲ್ಲನೆಂದು ಹೇಳುವ ವಾದಿಯೂ ಇರುತ್ತದೆ. ಹಾಗೂ ಮತವು ಒಂದಕ್ಕಿಂತ ಇನ್ನೊಂದುತ್ತಮವೆಂದು ಖಚಿತಪಡಿಸದಂತಾಗುವುದಿಲ್ಲ.

ಅದರ ಬದಲಿಗೆ ಒಂದು ಮತವು ಇನ್ನೊಂದರಂತೆಯೇ ಉತ್ತಮವಾದುದು ಉತ್ಕೃಷ್ಟವಾದುದು ಎಂದು ಹೇಳುವುದಾದರೆ ಈ ಮಾತಿನ ಸತ್ಯಾರ್ಥವನ್ನು ಸ್ವೀಕರಿಸಿಬಿಡಬಹುದು. ಆದರೆ ಇಲ್ಲಿಯೂ ಮಾಡಕ್ಕೆಡೆಯಿದೆ. ದೇವರನ್ನು ಮೆಚ್ಚಿಸುವುದಕ್ಕಾಗಿ ಪ್ರಾಣಿಬಲಿಯನ್ನು ಕೊಡುವ ಧರ್ಮವು ಉತ್ತಮವೋ? ಅರ್ಥವು ಬೇರೆಯೇ ಇದೆ. ಉತ್ತಮ ಮತವೆಂದರೆ ನಮ್ಮನ್ನು ದೇವರ ದರ್ಶನಪಾತ್ರರನ್ನಾಗಿ ಮಾಡುವಂತಹದು. ಅಥವಾ ದೇವರು ನಮ್ಮನ್ನು ಕ್ಷಮಿಸಿ ನಡೆಸಿಕೊಳ್ಳಲು ಪ್ರೇರಕವಾದ ಮತವೇ ಹಿತಕರವಾದ ಮತ.

'The Light of the East

ಶಾಲೆಯಲ್ಲಿ ಆಟ

ಜೀವನತತ್ತ್ವವಿಜ್ಞಾನ ದೃಷ್ಟಿಯಿಂದವಲೋಕಿಸಿದರೆ ಶಿಕ್ಷಣವೆಂದರೆ ಕಲಿಯಲು ಉಲ್ಲಾಸವಿರುವಾಗ ಕಲಿಯುವ ಪಾಠ. ವ್ಯಹಿಕ ಚಟುವಟಿಕೆಗಳಲ್ಲಿಯೇ ಚಿತ್ತವನ್ನಿಟ್ಟಿರುವುದು ಮಕ್ಕಳ ಬುದ್ಧಿ. ಬಾಲ್ಯವೆಂದರೆ ಆಟದ ಸಮಯ. ಆದುದರಿಂದ ಸ್ವಾಭಾವಿಕವಾಗಿ ಬಾಲ್ಯದ ದಿನಗಳಲ್ಲಿ ಅರ್ಧವನ್ನಾದರೂ ಆಟದಲ್ಲಿ ಕಳೆಯುವಂತೆ ಶಿಕ್ಷಕರು ನೋಡಿಕೊಳ್ಳಬೇಕಾಗಿದೆ. ದೇಹದ ಚಟುವಟಿಕೆಯನ್ನಿಟ್ಟಿಸುವ ವೇಳೆಯಲ್ಲಿ ಮಕ್ಕಳಿಗೆ ಅದನ್ನೊದಗಿಸಿಕೊಡುವುದು ಪ್ರಸಕ್ತವಲ್ಲವೇ? ಹಿಗ್ಗಿರುವಾಗ ಶಾಲೆಗಳಲ್ಲಿನ ಪಠ್ಯಕ್ರಮದಲ್ಲಿ ಒಂದು ಘಂಟೆಯ ಆಟದ ವೇಳೆಯನ್ನು ಪ್ರತ್ಯೇಕಿಸಿಟ್ಟರಾಗದೇ? ಸರ್ವಸಾಧಾರಣವಾಗಿ, ಆಟಗಳಲ್ಲಿ ಮುನ್ನರನ್ನಾಗಿ ಮಾಡುವಂತೇರ್ಪಡಿಸಲು ನಮಗೆ ಎರಡು ಉಪಾಯಗಳಿವೆ. ಒಂದು ಘಂಟೆಯನ್ನು ಪಾಠಪಟ್ಟಿಯಲ್ಲೇ ಸೇರಿಸಿ ಅದನ್ನು ಆಟದ ಸಮಯವನ್ನಾಗಿ ಇಡಬಹುದು, ಅಥವಾ ಒಂದು ಪ್ರತ್ಯೇಕ ಕಾಪಸನ್ನೇ /ಅದಕ್ಕಾಗಿ ಕೂಡಿಸಬಹುದು. ಇದಕ್ಕಿಂತ ಸುಲಭ ಉಪಾಯವಿರುವುದು ಸಂದೇಹಾಸ್ಪದವಾದುದು.

ಶಾಲಾ ಪಾಠಪಟ್ಟಿಯ ತಾಸುಗಳಿಂದ ಒಂದು ತಾಸನ್ನು ತೆಗೆದು ಬಾಲಕರ ಆಟಗಳಿಗೆಂದು ವಿನಿಯೋಗಿಸುವುದಕ್ಕೆ ನನಗೇನೂ ಆಕ್ಷೇಪವಿರಲಾರದು. ಕಾರಣ,—ಅವರಿಗೆ ಹಿತಕರವೆಂದಿರುವುದದಕ್ಕೆ [illegible] ಹೆಚ್ಚಿನ ಸಮಯದ ವರೆಗೆ ನಾವವರನ್ನು ಶಾಲೆಯೊಳಗೆ ಬಚ್ಚಿಡುತ್ತೇವೆ. ಅವರಿಗೆ ಇಷ್ಟವಿಲ್ಲದ ಪಾಠಗಳನ್ನು ಕಲಿಸುತ್ತಿದ್ದು—ಬಚ್ಚಿಟ್ಟು ನಾವವರನ್ನು ಅಸಮರ್ಥರನ್ನಾಗಿ ಮಾಡುತ್ತೇವೆ. ಅವರಿಗೆ ಬೇಡವಾದುದನ್ನು ಬಲಾತ್ಕರಿಸಿ ಕಲಿಸುತ್ತೇವೆ. ಅವರಿಗೆ ಅವರ ಭಾವೀ ಜೀವನದಲ್ಲಿ ಸಾನ್ನಿಧ್ಯವನ್ನೀಯಲಾರದ ಪಾಠಗಳನ್ನು ನಾವವರಿಗೆ ಕಲಿಸುತ್ತಿದ್ದೇವೆ. ನಾವು ಹೀಗೆ ಮಾಡುವುದರಿಂದ, ಅವರಿಗೆ ಹಿತಕ್ಕಿಂತಲೂ ಅಹಿತವನ್ನೇ ಹೆಚ್ಚಾಗಿ ಬಯಸಿದಂತಾಗುತ್ತದೆ. ಅದರ ಪುಸ್ತಕಗಳನ್ನು ಕಂಡು ಬೆದರುವಂತಹ ಮಾನಸಿಕತೆಯನ್ನು ಅವರಲ್ಲಿ ನಾವು ಉತ್ಪನ್ನಗೊಳಿಸುತ್ತೇವೆ. ಶಾಲೆಯಲ್ಲಿ ಆಟದ ಸಮಯವು ಹೆಚ್ಚಾಗಿದ್ದರೆ ಬಾಲಕರಿಗೂ ಶಿಕ್ಷಕರಿಗೂ ಇರುವ ಸಂಪರ್ಕವು ಪರಿಪಾಕವಾಗುವುದು, ಅವರನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಮಾಡುವುದು.

'The Field" Madras.

ಕಲೆಯೂ ಆಧುನಿಕ ಹಿಂದೂದೇಶವೂ.

ಕಲೆಯ ಭಾಷೆಯು ಮಾನುಷ್ಯವರ್ಗದ ಭಾಷೆಯು ಲಲಿತಕಲಾವಿಜ್ಞಾನದ ಪ್ರಗತಿಗೂ ಪ್ರಚಾರಕ್ಕೂ ನಮ್ಮಲ್ಲಿ ಸ್ವಲ್ಪ ಸಾಹಸವೂ ಕಲಾಜ್ಞಾನವೂ ಇದ್ದರೆ ಸಾಕು. ಕಲೆಗೆ ವಿಮರ್ಶೆಯ ಬೇಕಾಗಿಲ್ಲ. ಕಲೆಯು ತನ್ನಷ್ಟಕ್ಕೆ ತಾನು ಪರಿಪೂರ್ಣವಿದೆ. ಕಲೆಯು ಜ್ಯೋತಿಯನ್ನು ಹೊರಗೆ ತರುತ್ತದೆ, ಪ್ರಕಾಶವನ್ನು ಬೀರುತ್ತದೆ, ಸುಖ, ಆನಂದಗಳನ್ನುಂಟುಮಾಡುತ್ತದೆ. ಅದನ್ನರಿಯಲು ಸಮರ್ಥರಾದವರಿಗೆ ಅದು ಪರಮಾನಂದವನ್ನೀಯುತ್ತದೆ.

ಕಲೆಯೊಡನೆ ಬೆರತು ಅದರ ಅರ್ಥ ನೋಡಿದರೆ ನೂತನ ಭಾವನೆಗಳನ್ನುತ್ಪನ್ನಗೊಳಿಸುತ್ತದೆ. ಎಲ್ಲಿ ಸೌಂದರ್ಯವು ಕಾಣಸಿಗುವುದಿಲ್ಲವೋ ಅಲ್ಲಿ ಕಲೆಯು ಭಾವಪ್ರಕಾಶನಕ್ಕೆಡೆಕೊಡುತ್ತದೆ. ಸಾಮಾನ್ಯ ದೃಷ್ಟಿಗೆ ಕಾಣದ ರೂಪದ ಮೋಹಕತೆಯನ್ನದು ಎತ್ತಿ ಎತ್ತಿ ತೋರಿಸುತ್ತದೆ. ಲಲಿತಕಲಾಜ್ಞಾನವೆಂದರೆ ಮಾತೆಯ ಪ್ರೇಮದಂತೆ, ಅದು ಅನಂತ, ಅಗಾಧ, ಮೌನ, ಬಲಶಾಲಿ ನಿರ್ದಿಷ್ಟ ಮತ್ತು ನಿಸ್ವಾರ್ಥವಾಗಿದೆ. ಕಂಟಕ್ ಸಾಹಿತ್ಯದಲ್ಲಿಯೂ ಈ ಕಲೆಯು ಗೋಚರವಾಗುತ್ತದೆ. ಅದು ಸಿರಿಯ ಗರ್ಭದಲ್ಲಿಲ್ಲ. ದಾರಿದ್ರ್ಯದಿಂದಾವೃತವಾಗಿರುವ ಗುಡಿಸಲಲ್ಲಿಯೂ ಅದು ಕಾಣಲು ಸಿಗುವುದು. ಲಲಿತಕಲೆಯನ್ನು ಸರ್ವತೋಮುಖವಾಗಿ ಪ್ರಸಾರ ಮಾಡುವುದಕ್ಕಾಗಿ ರಚನಾಬದ್ಧ ಕಂಕಣಬದ್ಧ ಸಂಸ್ಥೆ ಇರಬೇಕು. ರಾಷ್ಟ್ರದ ಅತ್ಮವನ್ನು ತಾಳುಗೆಡದ ವಿನಾಶಕಲೆಯನ್ನು ಅಲಕ್ಷಿಸಲೂ ಧಿಕ್ಕರಿಸಲೂ ಬಾರದು. ಗೃಹಗಳಲ್ಲಿ ಶಾಲೆಗಳಲ್ಲಿ ದೇವಾಲಯಗಳಲ್ಲಿ ಚಿಕಿತ್ಸಾಲಯಗಳಲ್ಲಿ ವಿನೋದಕೂಟಗಳಲ್ಲಿ ಭಜನಾಮಂದಿರಗಳಲ್ಲಿ ಅದಕ್ಕೆ ಸ್ಥಾನವಿರಬೇಕು. ಕಾರಣ, ಅದು ಅಂತರಾತ್ಮನ ವಾಣಿಯಾಗಿರುತ್ತದೆ. ಈ ವಾಣಿಯನ್ನು ಮರೆಯುವುದೆಂದರೆ, ಸ್ವಾತಂತ್ರ್ಯವನ್ನು ಮರೆತಂತೆ. ಪ್ರಸ್ತುತಸಾಹಿತ್ಯವು ನಿಸ್ಪ್ರಯೋಜಕವೆಂದು ತಿಳಿದುಬಂದಿರುವ ವೇಳೆಯಲ್ಲಾದರೂ ಈ ಜ್ಞಾನದ ಕಡೆಗೆ ಜನತೆಯ ಲಕ್ಷ್ಯವು ಹರಿಯಬೇಕಾಗಿದೆ. ಜನತೆಗೆ ಕಲಾಜ್ಞಾನದ ಅರ್ಥವು ನಿಲುಕದಲ್ಲಾಗಬೇಕಾಗಿದೆ.

Prabuddha Bharatha

ಕಿರಿಯರ ಪ್ರಪಂಚ, ಉಡುಪಿ

ಇದರ ಸಹಾಯಾರ್ಥವಾಗಿ ತಾ ೧೧—೧೧—'೩೪ ರಲ್ಲಿ ಶ್ರೀ ಶೇಷಪ್ಪನವರ "ಸೌತ್ ಕೆನರಾ ಫಿಸಿಕಲ್ ಕಲ್ಚರ್ ಇನ್ಸ್ಟಿಟ್ಯೂಟ್"ನ ಸರ್ಕಸ್ ಪ್ರದರ್ಶನವು ಮುಂಬಾಯಿಯ ಸರ್ ಕಮ್ಮಿ ಜಹಾಂಗೀರ ಹೋಲಿನಲ್ಲಿ, ಡಾ। ಬಿ ವಿ ದೇಶಮುಖ ಎಮ್ ಡಿ ಲಂಡನ್, ಎಫ್ ಆರ್ ಸಿ ಎಸ್ ಇಂಗ್ಲೆಂಡ್ ಇವರ ಅಧ್ಯಕ್ಷತೆಯಲ್ಲಿ ಜಯಶೀಲವಾಗಿ ನಡೆಯಿತು. ಪ್ರದರ್ಶನದ ನಡುವೆ ಶ್ರೀ। ಹೆಬ್ಬಾರ್ ಬಿ ಎ ಯವರು, ಅಧ್ಯಕ್ಷರ ಪರಿಚಯ ಭಾಷಣವಿತ್ತೊಡನೆ 'ಕಿರಿಯರ ಪ್ರಪಂಚ'ದ ಕಾರ್ಯದರ್ಶಿಗಳು ತಮ್ಮ ಪ್ರಪಂಚ'ದ ಉದ್ದೇಶ ಉದ್ದೇಶಸಾಧನೆಯಲ್ಲೊದಗುವ [illegible] ಪ್ರೊಫೆಸರ್ ಶೇಷಪ್ಪನವರ ಅಮೂಲ್ಯವಾದ ಧರ್ಮಸಹಾಯ, ಮುಂಬಾಯಿಯ ಕನ್ನಡಿಗರು ಕೊಟ್ಟ ಪ್ರೋತ್ಸಾಹದ ಕುರಿತು ಚುಟುಕಾಗಿ ಮಾತನಾಡಿದರು. ಅಧ್ಯಕ್ಷರು ಕನ್ನಡ ಸಾಹಿತ್ಯಾಭಿವೃದ್ಧಿಗಿರುವ ತೊಡಕು, ಕನ್ನಡ ಸಾಹಿತ್ಯ ಸೇವೆ ಮಾಡುತ್ತಿರುವ 'ಕಿರಿಯರ ಪ್ರಪಂಚ'ಕ್ಕೆ ಕನ್ನಡಿಗರು ಪ್ರೋತ್ಸಾಹವನ್ನೀಯುವ ಆವಶ್ಯಕತೆಗಳ ಕುರಿತು ಭಾಷಣವಿತ್ತರು. ಕೊನೆಯಲ್ಲಿ ಇಂದಿನ ಪ್ರದರ್ಶನದ ಸೂತ್ರಧಾರಿ ಪ್ರೋತ್ಸಾಹಕರಾದ ಶ್ರೀ। ಎಮ್. ಎಸ್. ಹೆಗ್ಡೆಯರು, ಎಸೆಂಬ್ಲಿ ಮಹಾಸಭೆಯ ಗಲಾಟೆಯ ಮಧ್ಯದಲ್ಲಾದರೂ ದಯೆಮಾಡಿಸಿದ ಅಧ್ಯಕ್ಷರಿಗೂ, ಪ್ರೊ। ಶೇಷಪ್ಪ ಮತ್ತು ಅವರ ಶಿಷ್ಯವೃಂದಕ್ಕೂ ನೆರವಾದ ಇತ್ತರರಿಗೂ ವಂದನೆಯನ್ನರ್ಪಿಸಿದರು.

[illegible]

[illegible] ಎಂದು [illegible]

ಜರ್ಮನಿಯಲ್ಲಿ ಆಹಾರ ಸಾಮಗ್ರಿಗಳ ಬೆಲೆಯ ಮೇಲೆ ನಿರ್ಬಂಧ.

ಈ ವರ್ಷ ಚಳಿಗಾಲದಲ್ಲಿ ಆಹಾರಸಾಮಗ್ರಿಗಳ ಬೆಲೆಯು ಹೆಚ್ಚಾಗಿ, ಜನರು ಕಷ್ಟಕ್ಕೀಡಾಗದಂತೆ ಜರ್ಮನ್ ಸರಕಾರವು ಒಂದು ಯೋಜನೆಯನ್ನು ಹೂಡಿದೆ. ಡಾ॥ ಗೊರ್ಡೆಲರ ಎಂಬವರನ್ನು ಆಹಾರ ಸಾಮಗ್ರಿಗಳ ಸೂಪರ್‌ವೈಜರನ್ನಾಗಿ ಮಾಡಿ ಅವುಗಳ ಕ್ರಯವನ್ನು ನಿರ್ಬಂಧದಲ್ಲಿ ಹಿಡಲಾಗಿದೆ. ಗೋಧಿ ಮತ್ತು ಧಾನ್ಯಬೆಳೆಗಳ ಕುರಿತಾಗಿ ಸರಕಾರವು ಅನುಭವ ಹೊಂದುತ್ತಿದೆ.

ದಾಂಪತಿಗಳ ಕೊಲೆಮಾಡಿದ ಪುತ್ರಿ.

ಫ್ರಾನ್ಸಿನಲ್ಲಿ ಇತ್ತೀಚೆಗೆ ರೋಮಾಂಚನಗೊಳಿಸುವ ಒಂದು ವಿಚಾರಣೆಯು ಕೋರ್ಟಿನಲ್ಲಾಯಿತು. ವೈಯೊಲೆಟ್ ನೋಜೀಯರ್ ಎಂಬ ಹದಿನೆಂಟು ವರ್ಷ ಪ್ರಾಯದ ಹುಡುಗಿಯು ತನ್ನ ತಂದೆಯ ಆಹಾರಕ್ಕೆ ವಿಷವಿಕ್ಕಿ ಆತನನ್ನು ಕೊಂದಳು. ತಾಯಿಯ ಅನ್ನಕ್ಕೂ ವಿಷವನ್ನು ಬೆರಸಿದ್ದಳು. ಅದರ ಒಂದು ಮುಷ್ಟಿ ಅನ್ನದನ್ನು ತಿಂದ ತಾಯಿಯು ಸ್ಮೃತಿತಪ್ಪಿ ಬಿದ್ದಳು, ಆಸ್ಪತ್ರೆಗೆ ಒಯ್ಯಲಾಯಿತು; ತನ್ನ ತಾಯ್ತಂದೆಗಳ ಕೊಲೆಯ ಯತ್ನವು ಇವಳಿಂದ ಅನೇಕ ಸಲ ನಡೆದಿದೆಯೆಂದು ಇವಳು ಒಪ್ಪಿರುವಳು. ಈ ತರುಣಿಯು ರಾತ್ರಿ ಸಂಚಾರಿಣಿಯಾಗಿದ್ದಳು; ಹಗಲಲ್ಲಿ ಶಾಲ್ವ ಸುಗುಣ!

'ಸಾರ್'ನ ಕುರಿತು ಜರ್ಮನಿಯ ಆಶ್ವಾಸನೆ.

ಸಾರ್ ದೇಶವನ್ನು ಮುತ್ತಿಗೆ ಹಾಕುವ ಭಯವಿರುವುದಿಲ್ಲವೆಂದು ಬ್ರಿಟನಿಗೆ ಜರ್ಮನ ಸರಕಾರವು ಆಶ್ವಾಸನೆಯನ್ನಿತ್ತಿದೆ. ಚುನಾವಣೆಯ ಕಾಲದಲ್ಲಿ ಸಾರ್‌ನ್ನು ಬಿಟ್ಟು ೨೫ ಮೈಲು ದೂರವೇ ಇರಬೇಕೆಂದು ಸ್ಟೋರ್ಮ್ ಟ್ರೂಪರರಿಗೂ ನಾಜಿ ಬ್ಲೇಕ್ ಗಾರ್ಡರರಿಗೂ ಆಜ್ಞಾಪಿಸಿದೆ.

ಆಸ್ಟ್ರೇಲಿಯಾ ಧುರೀಣರ ಮನವರಿಕೆ.

ಆಸ್ಟ್ರೇಲಿಯದ ಪ್ರಾತಿನಿಧಿಕರಲ್ಲೊಬ್ಬರಾದ ರೈಟ್ ಆನರೆಬಲ್ ಸ್ಟೆನ್ಲಿ ಬ್ರೂಸ್‌ರವರು ನವಂಬರ ತಾ. ೭ನೇ ದಿನ ನ್ಯೂಕ್ಯಾಸಲ್-ಓನ್-ಟ್ರೆಂಟ್ ಎಂಬಲ್ಲಿ ಭಾಷಣಮಾಡುತ್ತ ಹಿಂದುಸ್ಥಾನದ ಕುರಿತಾಗಿ—"ಸ್ವಾತಂತ್ರ್ಯ ವಿಷಯಕವಾಗಿ ಬ್ರಿಟನು ಬೇರೆ ದೇಶಗಳಿಗೆ ಹೇಗೆ ಮಾಡಿತೋ, ಹಾಗೆ ಹಿಂದೂದೇಶಕ್ಕೂ ಮಾಡಬೇಕಾಗಿದೆ. ಹಿಂದೂಸ್ಥಾನದವರ ಆಶಯಗಳನ್ನು ಬ್ರಿಟನು ಲಕ್ಷಿಸಬೇಕಾಗಿದೆ" ಎಂದರು.

ಬ್ರಿಟಿಶ ಮುನಿಸಿಪಲ್ ಚುನಾವಣೆಯಲ್ಲಿ ಲೇಬರ್ ಪಕ್ಷದವರ ಜಯ!

ಇಂಗ್ಲೆಂಡಿನಲ್ಲಿ ಮೊನ್ನೆ ನಡೆದ ಮುನಿಸಿಪಲ್ ಚುನಾವಣೆಯಲ್ಲಿ ಲೇಬರ್ ಪಕ್ಷದವರು ಅಧಿಕಸಂಖ್ಯೆಯಲ್ಲಿ ವೋಟುಗಳನ್ನು ಪಡೆದಿರುವರು. ಫಲಿತಾಂಶಗಳ ಘೋಷಣೆಯಾಗಿ ಲೇಬರ್ ಪಕ್ಷದವರಿಗೆ ೬೬೦ ಸ್ಥಾನಗಳು ದೊರೆತು, ೨೫ ಸ್ಥಾನಗಳು ನಷ್ಟವಾಗಿವೆಯೆಂದು ಗೊತ್ತಾಗಿದೆ. ಕನ್ಸರ್ವೇಟಿವರು ೬೬೪ ಸ್ಥಾನಗಳನ್ನು ಕಳೆದುಕೊಂಡು ೪೧ ಸ್ಥಾನಗಳನ್ನು ಪಡೆದಿರುವರು. ಈಗ ಲೇಬರ್ ಪಕ್ಷದವರು ಲಂಡನಿನ ೨೮ ಪೇಟೆಗಳಲ್ಲಿ ೧೫ ಪೇಟೆಗಳ ಅಧಿಕಾರ ಹೊಂದಿರುವರು. ಸ್ಕಾಟ್ಲೆಂಡಿನಲ್ಲಿ ೪೧ ಪೇಟೆಗಳು [illegible] ಇತರ ಸ್ಥಾನಗಳಲ್ಲೂ ಲೇಬರ್ ಪಕ್ಷದವರೇ ಮುಂದಾಗಿರುವರು.

[illegible]

ಗೆ [illegible] ಹೊಸ ಸರಕಾರದ ಉದ್ದೇಶವಿರುತ್ತದೆ. ಅಧಿಕ [illegible] ಗಳನ್ನು [illegible] ಒಂದು ಸಮಿತಿಯನ್ನೇರ್ಪಡಿಸಲಾಗಿದೆ.

ಜರ್ಮನಿಯ ಶಸ್ತ್ರಾಸ್ತ್ರ ಸಂಗ್ರಹ.

ಜರ್ಮನಿಯು ಶಸ್ತ್ರಾಸ್ತ್ರಗಳನ್ನು ಕೂಡಿಸುತ್ತಲೇ ಇದ್ದು, ೧೯೧೪ರ ಸ್ಥಿತಿಯಲ್ಲಿ—ಯುದ್ಧಕ್ಕೆ ಮುಂಚಿತವಾಗಿ ಇದ್ದುದಕ್ಕಿಂತ ಇಂದು ಶಕ್ತಿಯುತವಾಗಿದೆಯೆಂದು ವಿವರಿಸುತ್ತ ಫ್ರಾನ್ಸಿನ ಬಜೆಟು—"ಫ್ರಾನ್ಸಿಗೂ ಶಸ್ತ್ರ ಸಂಗ್ರಹಕ್ಕೆ ೫೬೮ ಮಿಲ್ಲಿಯ ಫ್ರಾಂಕು ಈ ವರ್ಷ ಅಗತ್ಯ"ವೆನ್ನುತ್ತಿದೆ. ಜರ್ಮನಿಯು ಇನ್ನು ಕೆಲವೇ ದಿನಗಳಲ್ಲಿ ೫೦ ಮಿಲ್ಲಿಯ ಕಾಲಾಳುಗಳನ್ನು ಕೂಡಿಸುವಷ್ಟಕ್ಕೆ ಮುಂದುವರಿದಿದೆಯಂತೆ, ೩೫೦೦ ವೈಮಾನಿಕರು ಅಲ್ಲೀಗ ಇರುವರು.

ಶ್ರೀಕೃಷ್ಣ ಸಿನೆಮದಲ್ಲಿ

ಸದ್ಯದಲ್ಲೆ

ಪ್ರದರ್ಶಿಸಲ್ಪಡಲಿರುವ

'ಎಡ್ಯುಕೇಟೆಡ್ ವೈಫ್'

ಎಂಬ

ಚಿತ್ರದೊಳಗಿಂದ.

ಫಿಲಿಫ್ಯಾನ್ ದ್ವೀಪಗಳಲ್ಲಿ ಭಯಂಕರ ಸುಂಟರಗಾಳಿ!

ಫಿಲಿಪ್ಪಾಯನ್ಸ್ ದ್ವೀಪಗಳಲ್ಲಿ ಅಭೂತಪೂರ್ವವಾದ ಸುಂಟರಗಾಳಿಯು ಬೀಸಿ, ಸುಮಾರು ೩೦೦ ಜನರ ಮರಣಕ್ಕೆ ಕಾರಣವಾಗುತ್ತದಾಯಿತು. ಎರಡು ವಾರಗಳಿಂದಿತ್ತ ಅಲ್ಲಿ ಜಲಪ್ರಳಯವಾದುದರಿಂದ ಅನಾಹುತಗಳಾಗಹತ್ತಿವೆ. ನೆರೆಗಳಿಂದ ಅನೇಕ ಗ್ರಾಮಗಳು ನಿರ್ನಾಮವಾಗಿವೆ. "ರೆಡ್‌ಕ್ರಾಸ್" ಸೊಸೈಟಿಯವರು ನಿರಾಶ್ರಿತರಿಗೆ ಸಹಾಯ ಸಲ್ಲಿಸುವುದಕ್ಕಾಗಿ ಸ್ವಯಂಸೇವಕರನ್ನು ಕಳ್ಳ [illegible].

ನಾಮಕ್ಕಲ್ ಬಸ್ ಅಪಘಾತದ ದುಃಖ ವಾರ್ತೆ.

ನಾಮಕ್ಕಲ್ ಮತ್ತು ಮೋಹನೂರ್ ಎಂಬೀ ಊರುಗಳ ನಡುವೆ ಓಡಾಡುತ್ತಿದ್ದ ಒಂದು ಬಸ್ಸು, ನಾಮಕ್ಕಲದಿಂದ ಆರು ಮೈಲು ದೂರದಲ್ಲಿ,—ಎದುರಾಗಿ ಬರುವ ಎತ್ತಿನ ಗಾಡಿಗಳನ್ನು ತಪ್ಪಿಸಲೆಂದು ರಸ್ತೆಯ ಬದಿಗೆ ತಿರುಗಿಸಲ್ಪಡಲು, ಕ್ರಮತಪ್ಪಿ ದೊಡ್ಡ ಹೊಂಡಕ್ಕೆ ಬಿದ್ದು ನುಚ್ಚುನೂರಾಯಿತು. ಪ್ರಯಾಣಿಕರಲ್ಲಿ ಒಬ್ಬನು ಅಗಲೇ ಅಲ್ಲೇ ಮೃತಪಟ್ಟನು. ಹದಿಮೂರು ಮಂದಿಗೆ ಪೆಟ್ಟು! ಅವರನ್ನು ಆಸ್ಪತ್ರೆಗೆ ಸಾಗಿಸಿರುವರು. ಬಸ್ಸು ಮರುಸೃಷ್ಟಿಸಲಾಗದಷ್ಟು ನುಚ್ಚುನೂರಾಗಿದೆ!

[illegible] ಸ್ಥಾನ ಮಾಡಿದನು!

[illegible] ಎಂಬಲ್ಲಿಯ [illegible] ಗುಂಡಿಟ್ಟು ಕೊಂದು, ತಾನು ಅದೇ [illegible] ಎದೆಗೆ ಹಾರಿಸಿಕೊಂಡು ಮಡಿದನು. ಪೋಲೀಸರು [illegible] ಗಳನ್ನು ವಶಪಡಿಸಿಕೊಂಡಿದ್ದಾರೆ.

ಲಾಹೋರಿನಲ್ಲಿ ಭೂಕಂಪ!

ತಾ. ೧೮ರಲ್ಲಿ ಲಾಹೋರಿನಲ್ಲಿ ಭೂಕಂಪವಾಯಿತು. ಸುಮಾರಾಗಿ ಆಯದ ಪ್ರತಿಮೆಯ ಶಿಖರವು ಬಿರುಕು ಬಿಟ್ಟಿದೆಯಂತೆ. ಲಾಹೋರ್ ನಗರದ ಆಸುಪಾಸಿನಲ್ಲಿಯೂ ಕಂಪನವಾಗಿದೆ. ಜನರು ಭಯಭೀತಿಯಿಂದ ಮನೆಗಳನ್ನು ಬಿಟ್ಟು ಮೈದಾನು ಪ್ರದೇಶಕ್ಕೆ ಓಡಿಹೋದರೂ—ಬೇರಾವ ಅನಾಹುತಗಳೂ ನಡೆಯಲಿಲ್ಲ.

ಬಂಧಿಯು ಆತ್ಮಹತ್ಯೆ ಮಾಡಿಕೊಂಡನು!

ಊಗಾಂ ಎಂಬಲ್ಲಿಂದ ಒಂದು ವಿಶೇಷ ವಾರ್ತೆ ಬಂದಿದೆ:—ಟಿನ್ನಪ್ಪಯ್ಯನೆಂಬವನು ಕೊಲೆಯ ಅಪಾದನೆಗೊಳಗಿನ ಚೆಂಪಿಯನ್ ರಿಲೀಫ್‌ನಲ್ಲಿದ್ದನು. ಸರಕಾರವು ಭದ್ರತೆ ಕೇಳಿತು. ಅವನದನ್ನು ಕೊಡಲಾರದಾದನು. ತಾ. ೧೬ರಲ್ಲಿ ಮಾಡಿಗೂ ಕೊರಳಿಗೂ ವಸ್ತ್ರಕಟ್ಟಿ ನೇಣಾಡಿ ಪ್ರಾಣತ್ಯಾಗ ಮಾಡಿಯೇ ಕೊಂಡನು! ಸ್ಪೆಶಲ್ ಮೆಜಿಸ್ಟ್ರೇಟರು ಬಂದು ತನಿಖಿ ಮಾಡಿ, ನಿಜವನ್ನರಿತು, ಶವವನ್ನು ಪರೀಕ್ಷೆಗಾಗಿ ಆಸ್ಪತ್ರೆಗೆ ಕಳುಹಿಸಿದರು.

ಜಬ್ಬಲ್ಪುರ ಮುನಿಸಿಪಾಲಿಟಿಯಲ್ಲಿ ಗಲಭೆ

ಜಬ್ಬಲ್ಪುರ ಮುನಿಸಿಪಾಲಿಟಿಯ ಕಾರ್ಯದರ್ಶಿಯನ್ನು ಅಧ್ಯಕ್ಷರು ಕೆಲಸದಿಂದ ತೆಗೆದುಹಾಕಿರಲು, ಸರಕಾರದವರು ಅವರನ್ನು ಪುನಃ ನೇಮಿಸಿದರು. ಆದರೆ, ಅಧ್ಯಕ್ಷರು ಅವರನ್ನು ತೆಗೆದುಕೊಳ್ಳಲೊಪ್ಪಲಿಲ್ಲ. ಕಾರ್ಯದರ್ಶಿಗಳು, ಮುನಿಸಿಪಲ್ ಆಫೀಸಿನ ಬೀಗ ಒಡೆದು ಒಳಗೆ ಪ್ರವೇಶಿಸಿದರು. ನಿತ್ಯವೂ ಅಧ್ಯಕ್ಷರು ಬೀಗಹಾಕಿಸುವುದೂ, ಕಾರ್ಯದರ್ಶಿಗಳು ಒಡೆಸುವುದೂ ಇದೇ ಕತೆ ನಡೆಯಿತು. ಕೊನೆಗೆ ಸರಕಾರವು ಅಧ್ಯಕ್ಷರನ್ನ ಪದಚ್ಯುತರನ್ನಾಗಿ ಮಾಡಿ ಡೆಪ್ಯುಟಿ ಕಮಿಶನರಿಗೆ ಮುನಿಸಿಪಾಲಿಟಿಯ ಚಾರ್ಜ ವಹಿಸಿಕೊಟ್ಟಿದೆ. ನಗರದಲ್ಲಿ ಸರಕಾರದ ವರ್ತನೆಗಾಗಿ ನಿಷೇಧಿಸಿ ಹರತಾಳ! ಬೇರೆ ಕೆಲವು ಸದಸ್ಯರೂ ರಾಜಿನಾಮೆ ಕೊಟ್ಟಿರುವರು.

ಮಕ್ಕಳ ಕಳವು!! ಆಗ್ರದಲ್ಲಿ ಕ್ಷೋಭೆ.

ಮಕ್ಕಳ ಕಳವು! ಈ ಘಟನೆಯಿಂದ ಆಗ್ರಾ ಜಿಲ್ಲೆಯ ಫಿರೋಜಾಬಾದ ಎಂಬಲ್ಲಿಯ ನಿವಾಸಿಗಳಲ್ಲಿ ಕ್ಷೋಭೆಯಿದ್ದಿದೆ. ದರೋಡೆಕಾರರು ಸಶಸ್ತ್ರರಾಗಿ ಬಂದು ಎರಡು ಮಕ್ಕಳನ್ನೆತ್ತಿ ಕೊಂಡುಹೋಗಿರುವರು. ಕೆಲವು ಸಾವಿರ ರೂಪಾಯಿಗಳನ್ನು ಕೊಡದೆ ಮಕ್ಕಳನ್ನು ಮರಳಿ ಕೊಡುವುದಿಲ್ಲವಾಗಿ ತಿಳಿಸಿರುತ್ತಾರೆ. ಪತ್ತೆಯ ಯತ್ನವೆಲ್ಲ ಈ ವರೆಗೆ ನಿಷ್ಫಲವಾಗಿದೆ.

ಚುನಾವಣೆಯ ವಾರ್ತೆಗಳು.

[illegible] ಕಾಂಗ್ರೆಸ್ (ಕಾಂಗ್ರೆಸ್ [illegible]) [illegible]

ಕೊಯಮುತ್ತೂರು, ಸೇಲಂ, ಉತ್ತರ ಆರ್ಕಾಡು ಕೊನ್ಸ್‌ಟಿಟ್ಯೂಯನ್ಸಿ— ಶ್ರೀ [illegible] (ಕಾಂಗ್ರೆಸ್) [illegible]; ಶ್ರೀ ಪಿ. ವರದರಾಜುಲು ನಾಯ್ಡು [illegible].

ಗುಂಟೂರು, ನೆಲ್ಲೂರು ಕೊನ್ಸ್‌ಟಿಟ್ಯೂಯನ್ಸಿ— ಶ್ರೀ ಎನ್. ಜಿ. ರಂಗ (ಕಾಂಗ್ರೆಸ್) [illegible]; ಶ್ರೀ ರಾಮಯ್ಯ ಚೌಧರಿ [illegible].

ಸಂಯೋಜಿತ ಜಿಲ್ಲೆಗಳು ಮತ್ತು ಚಿತ್ತೂರು— ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ (ಕಾಂಗ್ರೆಸ್) [illegible]; ಶ್ರೀ ಟಿ. ಎನ್. ರಾಮಕೃಷ್ಣ ರೆಡ್ಡಿ [illegible].

ಗಂಜಾಮ್, ವಿಶಾಖಪಟ್ಟಣ ಕೊನ್ಸ್‌ಟಿಟ್ಯೂಯನ್ಸಿ— ಶ್ರೀ ವಿ. ವಿ. ಗಿರಿ (ಕಾಂಗ್ರೆಸ್) [illegible]; ಶ್ರೀ ಸೀತಾರಾಮ ರಾಜು [illegible].

ದಿಲ್ಲಿ ಕೊನ್ಸ್‌ಟಿಟ್ಯೂಯನ್ಸಿ.

ಮಿ॥ ಆಸಾಫ್ ಆಲಿ (ಕಾಂಗ್ರೆಸ್) [illegible]; ರಾ॥ ಸಾಹೇಬ್ ನಾನಕ್‌ಚಂದ್ [illegible].

ಪಾಟ್ನಾ ಕೊನ್ಸ್‌ಟಿಟ್ಯೂಯನ್ಸಿ.

ಶ್ರೀ ಅನುಗ್ರಹ ನಾರಾಯಣ ಸಿಂಹ (ಕಾಂಗ್ರೆಸ್) [illegible]; ಶ್ರೀ ಜಗತ್ ನಾರಾಯಣಲಾಲ (ರಾಷ್ಟ್ರೀಯ) [illegible]. ಶ್ರೀ ಜಗತ್ ನಾರಾಯಣಲಾಲರು ಬೇಕಾದಷ್ಟು ವೋಟುಗಳನ್ನು ಪಡೆದಿರದ ಕಾರಣ, ತಾವು ಠೇವಣಿಯಾಗಿ ಕೊಡಬೇಕಾಗಿದ್ದ ಹಣವನ್ನು ಕಳಕೊಂಡರು.

ಬರದ್ವಾನ್ ಡಿವಿಜನ್.

ಶ್ರೀ ಬಿ. ಎನ್. ಶಶಿಮಲ್—(ರಾಷ್ಟ್ರೀಯ) [illegible]; ಶ್ರೀ ಎಸ್. ಎನ್. ದಾಸ್—(ಕಾಂಗ್ರೆಸ್) [illegible]; ಶ್ರೀ ಎ. ಎನ್. ದತ್—(ಹಿಂದೂಸಭಾ) [illegible]. ಲಕ್ನೋ, ದರ್ಭಾಂಗ, ಅಲ್ಲಹಾಬಾದ್ ಈ ಕೊನ್ಸ್‌ಟಿಟ್ಯೂಯನ್ಸಿಗಳಲ್ಲೂ ಕಾಂಗ್ರೆಸ್ ಪಕ್ಷವೇ ವಿಜಯ ಹೊಂದಿತು.

ಡಾ॥ ಮೂಂಜೆಯವರ ಅಪಜಯ.

ನಾಗಪುರ ಕೊನ್ಸ್‌ಟಿಟ್ಯೂಯನ್ಸಿನಿಂದ ಡಾ॥ ಮುಂಜೆಯವರಿಗೆದುರಾಗಿ ನಿಂತ ಕಾಂಗ್ರೆಸ್ ಉಮೇದ್ವಾರ ಶ್ರೀ ಎಮ್. ವಿ. ಅಭ್ಯಂಕರರು ಜಯವನ್ನು ಹೊಂದಿರುವರು.

ಸಂಕ್ಷೇಪ ವಾರ್ತೆ

ಶ್ರೀ ಪ್ರತಾಪ ದಯಾಳುದಾಸ ಎಂಬವರು ಜವಾನಿನಲ್ಲಿ, ಗಾಂಧಿಜಿಯವರ ಹರಿಜನ ನಿಧಿಗಾಗಿ ರೂ. ೪೦ ಸಾವಿರವನ್ನು ಸಂಗ್ರಹಿಸಿರುವರೆಂದೂ, ಅದನ್ನು ಗಾಂಧಿಜಿಯವರಿಗೆ ಕಳುಹಿಕೊಡುವರೆಂದೂ ಪ್ರಕಟವಾಗಿದೆ.

ವಿಯೆನ್ನದ ಒಂದು ಕ್ಷಯರೋಗ ಚಿಕಿತ್ಸಾಲಯದಲ್ಲಿ ಶ್ರೀ ಸುಭಾಷ್ಚಂದ್ರಬೋಸರವರಿಗೆ ಶಸ್ತ್ರಕ್ರಿಯೆ ನಡೆಯಲಿದೆ. ಈ ಶಸ್ತ್ರಕ್ರಿಯೆಯು ಪೂರ್ಣ ಗುಣವನ್ನು ತರುವುದೆಂಬ ಆಶ್ವಾಸನೆ ಕೊಡಲಾಗಿದೆ.

ಗ್ರೀಸ್ ದೇಶದ ಮಾಜಿ ಅರಸರಾದ ಜೋರ್ಜರವರು ಬರುವ ಜನವರಿ ತಿಂಗಳಲ್ಲಿ ಮೈಸೂರಿಗೆ ದಯಮಾಡಿಸಲಿರುವರೆಂದು ತಿಳಿದುಬರುತ್ತದೆ.

ಇಂಡಿಯಾ ಸರಕಾರದ ಲಾ ಮೆಂಬರರಾದ ಸರ್ ನೃಪೇಂದ್ರನಾಥ ಸರಕಾರರವರು ಹೊಸ ಲೆಜಿಸ್ಲೇಟಿವ್ ಎಸೆಂಬ್ಲಿಯ ನಾಯಕರಾಗುವರಾಗಿ "ಯುನೈಟೆಡ್" ವಾರ್ತಾದಾಯಕರು ತಿಳಿಸುತ್ತಾರೆ.

ಗಡಿನಾಡಿನ ಕಲಾ ಕೈಗಾರಿಕೆಗಳ ಪ್ರದರ್ಶನವನ್ನು ಪೇಶಾವರದಲ್ಲಿ, ಇದೇ ಬರುವ ದಶಂಬರ ತಾ. ೧೦ರಿಂದ ಜರಗಿಸಲು ಯತ್ನಗಳಾಗುತ್ತಿವೆ.

ಅಫಘಾನ ಸರಕಾರವು, ನೀರಾವರಿ ಕಾಮಗಾರಿಗಳ ಬಗ್ಗೆ ಇಟೇಲಿಯ ಇಂಜನಿಯರರೊಬ್ಬರನ್ನು ಕರೆಸಿದೆ.

ಕೆಲಸದ ಅವಧಿಯನ್ನು ಮತ್ತಷ್ಟು ಕಡಿಮೆಮಾಡುವ ಶುಭಚಿಹ್ನೆಯನ್ನು ಕಂಡು, ಬ್ರಿಟಿಷ್ ಮಜೂರರು ತೃಪ್ತರಾಗಿರುವರು.

ಶಾರೀಕ್ ಮೌಲ್ಯ ನಿರ್ಣಯದ ಬಗ್ಗೆ, ಡಾ॥ ವಿಠಲರವರು ಮುಂಬಾಯಿಗೆ ಬಂದಿಳಿದಿರುವರು.

ಗುರು ನಾನಕರವರ ಜನ್ಮದಿನೋತ್ಸವವು, ಪಂಜಾಬಿನಲ್ಲಿಯೂ ಮತ್ತಿತರ ಅನೇಕ ನಗರಗಳಲ್ಲಿಯೂ ಇದೇ ಕಳೆದ ತಾ. ೧೫ರಲ್ಲಿ ಆಚರಿಸಲ್ಪಟ್ಟಿತು.

ಮಂಗಳೂರು

[illegible] ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಶ್ರೀ ಶ್ರೀಧರ ಶೆಣೈರವರಿಗಿಂತ ಕಾಂಗ್ರೆಸ್ ಉಮೇದ್ವಾರ ಶ್ರೀ ಸಾಮ್ಯುವೆಲ್ ಆರೂಜರು ೧೧,೯೧೧ ವೋಟು ಗಳನ್ನು ಪಡೆದು ಚುನಾವಣೆ ಹೊಂದಿರುವರು ಶ್ರೀಧರ ಶೆಣೈರವರಿಗೆ ೧೧೯೦ ವೋಟುಗಳು ಮಾತ್ರ ದೊರೆತವು.

ನಮ್ಮ ಜಿಲ್ಲೆಯ ಅಫಿಶಿಯೇಟಿಂಗ್ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾದ ಶ್ರೀ ಎಸ್. ಟಿ. ಶ್ರೀನಿವಾಸಾಚಾರ್ಯರು ಹಂಗಾಮಿಯಾಗಿ ಕರ್ನೂಲಿನ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜರಾಗಿ ವರ್ಗಾಯಿಸಲ್ಪಟ್ಟಿರುವರು. ಮಿ ಪಿ.ಸಿ. ಅಬ್ದುಲ್ ಕಾದರ್ ರವರು ಇಲ್ಲಿಯ ಡಿಸ್ಟ್ರಿಕ್ಟ್ ಜಡ್ಜರಾಗಿ ಚಾರ್ಜ್ ವಹಿಸಿರುವರು.

ಕೆನರಾ ಹೈಸ್ಕೂಲಿನ ಸ್ಥಾಪಕರಾದ ದಿವಂಗತ ಅಮ್ಮೆಂಬಳ ಸುಬ್ರಾಯಪೈಗಳವರ ಜನ್ಮದಿನೋತ್ಸವವು "ಸ್ಥಾಪಕರ ದಿನ"ವೆಂಬ ಹೆಸರಿನಲ್ಲಿ ಕೆನರಾ ಹೈಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದವರ ನೇತೃತ್ವದಲ್ಲಿ ಇದೇ ಕಳೆದ ತಾ. ೧೯ನೇ ಸೋಮವಾರ ಆಚರಿಸಲ್ಪಟ್ಟಿತು. ಬೆಳಿಗ್ಗೆ ಘಂಟೆ ೭ಕ್ಕೆ ವಿವಿಧ ಆಟಗಳು, ಪೂರ್ವಾಹ್ನ ಘಂಟೆ ೧೦ಕ್ಕೆ ಹೈಸ್ಕೂಲು ವಿದ್ಯಾರ್ಥಿಗಳ ಸಭೆ ಮತ್ತು ಮಿಠಾಯಿ ಹಂಚೋಣ, ಅಪರಾಹ್ನ ೪ಕ್ಕೆ ಹಳೆ ಹೊಸ ವಿದ್ಯಾರ್ಥಿಗಳು ಕೂಡಿ ಆಟಗಳು, ೫-೩೦ಕ್ಕೆ ಸಾರ್ವಜನಿಕ ಸಭೆ ೬-೩೦ಕ್ಕೆ ನಾಟಕಾದಿ ವಿನೋದಗಳು ಮತ್ತು ರಾತ್ರಿ ೮-೩೦ಕ್ಕೆ ಹಳೇ ವಿದ್ಯಾರ್ಥಿ ಸಂಘದ ಸದಸ್ಯರ ಭೋಜನ- ಈ ಕಾರ್ಯಕ್ರಮವಿತ್ತು

ಇದೇ ಕಳೆದ ಸಪ್ಟಂಬರ ತಿಂಗಳ ತಾ. ೯ಕ್ಕೆ ಜರಗಿದ ಹಿಂದೀ ಪರೀಕ್ಷೆಗೆ ಮಂಗಳೂರ ಕೇಂದ್ರದಿಂದ ಪ್ರಾಥಮಿಕಕ್ಕೆ ಕುಳಿತ ೬೭ ಮಂದಿಯಲ್ಲಿ ೪೭ ಮಂದಿಯೂ ಮಾಧ್ಯಮಿಕಕ್ಕೆ ಕುಳಿತ ೪೧ ಮಂದಿಯಲ್ಲಿ ೩೦ ಮಂದಿಯೂ, ರಾಷ್ಟ್ರಭಾಷೆಗೆ ಕುಳಿತ ೨೭ ಮಂದಿಯಲ್ಲಿ ೧೩ ಮಂದಿಯೂ ಉತ್ತೀರ್ಣರಾಗಿರುವರು. ಮೂರು ಪರೀಕ್ಷೆಗಳಲ್ಲಿ ಹೆಚ್ಚಾಗಿ ದ್ವಿತೀಯ ಶ್ರೇಣಿಯಲ್ಲಿಯೇ ಉತ್ತೀರ್ಣರಾದವರು ಪರೀಕ್ಷೆಗೆ ಕುಳಿತವರ ಒಟ್ಟು ಸಂಖ್ಯೆ ೧೩೫ ಇವರಲ್ಲಿ ೯೧ ಮಂದಿ ಪಾಸಾಗಿರುವರು

ಇದೇ ತಿಂಗಳ ಬರುವ ತಾ ೨೩ನೇ ಆದಿತ್ಯವಾರ ಅಪರಾಹ್ನ ಘಂಟೆ ೫-೩೦ಕ್ಕೆ ಪಾಂಡೇಶ್ವರದಲ್ಲಿರುವ ಸಿಟಿ ಆರ್ಯ ಸಮಾಜ ಮಂದಿರದಲ್ಲಿ ಶ್ರೀಮತಿ ಅಂಬಾಬಾಯಿಯವರು 'ಆರ್ಯ ಸಮಾಜದ ಕಾರ್ಯಕ್ಷೇತ್ರ' ವನ್ನು ಕುರಿತು ಭಾಷಣಮಾಡುವರು ಸರ್ವರೂ ಹಾಜರಿರಬೇಕಾಗಿ ವಿನಂತಿ.

ಇದೇ ೨೭-೧೦-೫೨ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ —ಮರಣಗಳು ೨೩, ಜನನ ೩೪ ಮರಣಗಳ ಪೈಕಿ ವಿಷಮಜ್ವರ ೧ ವಾತ ಸಂಬಂಧವಾದ ಜ್ವರ ೧, ನ್ಯುಮೋನಿಯಾ ೧ ಕ್ಷಯ ೫, ಅಮಶಂಕೆ ೧, ಅತಿಸಾರ ೧ ಶಿಶುಜನನ ೧ ಆತ್ಮಹತ್ಯೆ ೧ ಮತ್ತು ಇತರ ಕಾರಣಗಳಿಂದ ೧೦ ಒಂದು ವರ್ಷದೊಳಗಿನ ಶಿಶುಮರಣ ೯ ಈ ವಾರಕ್ಕೆ ಸಿಡುಬಿನ ರೋಗಗಳಿಲ್ಲ ಯಾರಿಗೂ ಸಿಡುಬು ತಗಲಿದುದೂ ಇಲ್ಲ. ೬ ತಿಂಗಳ ಹಿಂದೆ ಸಿಡುಬು ಉಲ್ಬಣವಾದಂದಿನಿಂದ ಸಿಡುಬಿಲ್ಲದ ವಾರವು ಇದೇ ಮೊದಲನೆಯದು.

ಶ್ರೀ ಕೃಷ್ಣ ಸಿನೆಮಾದಲ್ಲಿ ನಾಳೆಯಿಂದ "ಮರ್ಡರ್ ಇನ್ ಥ್ರೀ" ಎಂಬ ಪೆರಮೌಂಟ್ ಕಂಪೆನಿಯವರ ಚಿತ್ರವು ಪ್ರದರ್ಶಿಸಲ್ಪಡುವುದು ಸಂಶಯಾತ್ಮನಾದ ಮ್ಯಾಗಿಸ್ಟ್ರೇಟ್‌ನೊಬ್ಬನು ನಡೆಸುವ ಭೀಷಣ ಕೊಲೆಗಳೇ ಇದರ ಕಥಾವಸ್ತು ಇದಾದ ನಂತರ "ಲಿಟ್ಲ್ ಡೆವಿಲ್ಸ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದಾಗಿ ಆಡಳಿತಗಾರರು ತಿಳಿಸುತ್ತಾರೆ.

ನಮ್ಮ ಜಿಲ್ಲಾ ಮೆಡಿಕಲ್ ಎಸೋಸಿಯೇಶನಿನ ಒಂದು ಸಭೆಯು ಈ ದಿನ ಸಾಯಂಕಾಲ ಘಂಟೆ ೫-೩೦ಕ್ಕೆ ಕಂಕನಾಡಿಯಲ್ಲಿರುವ ಫಾದರ್ ಮುಲ್ಲರರ ಆಸ್ಪತ್ರೆಯಲ್ಲಿ ಜರಗುವುದು ಡಾ! ಎ. ಎಫ್. ಕೊಯಿಲೋ ಎಮ್. ಬಿ., ಬಿ. ಎಸ್., ಇವರ ಭಾಷಣವಿದೆ ಸಭೆಗೆ ವೈದ್ಯರೆಲ್ಲರಿಗೆ ಸುಸ್ವಾಗತ

ಕಳೆದ ರವಿವಾರ ಹಳೆ ಕೋರ್ಟ ರಸ್ತೆಯಲ್ಲಿರುವ ಶ್ರೀ ವೆಂಕಟ್ರಮಣ ದೇವಾಲಯದ ಕೆರೆಗೆ ಬಿದ್ದು ಸುಮಾರು ೧೦ ವಯಸ್ಸಿನ ಬಾಲಕನೊಬ್ಬನು ಮೃತಪಟ್ಟಿರುವನು. ಹುಡುಗನು ಗೌಡಸಾರಸ್ವತ ವೃಂದಕ್ಕೆ ಸೇರಿದವನು ಬೆಳಿಗ್ಗೆ ನೀರಿನ ಆಳವು ತಿಳಿದಿಲ್ಲದೆ ಕೆರೆಗೆ ಹಾರಿದನೆಂದೂಹಿಸಲಾಗಿದೆ ಶವವು ಸಾಯಂಕಾಲ ದೊರೆಯಿತೆಂದು ತಿಳಿಯುತ್ತದೆ

ಇದೇ ಬರುವ ತಾ. ೨೩ನೇ ಶನಿವಾರ ಸಾಯಂಕಾಲ ಘಂಟೆ ೫ಕ್ಕೆ ಸಾರ್ವಜನಿಕ ವ್ಯಾಯಾಮಶಾಲೆಯಲ್ಲಿ, ಮಂಗಳೂರು ತಾಲೂಕು ಸಮಿತಿಯವರ ನೇತೃತ್ವದಲ್ಲಿ ಮಾಸಿಕ ಧ್ವಜ ವಂದನೆ ನಡೆಯುವುದು. ಶ್ರೀ ಸಾಮ್ಯುವೆಲ್ ಆರೂಜರು ಧ್ವಜಾರೋಹಣ ಸಮಾರಂಭವನ್ನು ಜರಗಿಸುವರು. ಶ್ರೀ ಕಾರ್ನಾಡು ಸದಾಶಿವ ರಾವ್, ಮಂಗಳೂರಿಗೆ ಬಂದಿರುವ ಶ್ರೀಮತಿ ಕಮಲಾದೇವಿ ಮೊದಲಾದವರ ಭಾಷಣಗಳೂ ಇವೆ.

ಮಂಗಳೂರು ಮುನಿಸಿಪಾಲಿಟಿಯ ಸಾಮಾನ್ಯ ಸಭೆಯೊಂದು ಇದೇ ತಾ. ೨೪ನೇ ಸೋಮವಾರ ಸಾಯಂಕಾಲ ಘಂಟೆ ೫ಕ್ಕೆ ಮುನಿಸಿಪಲ್ ಆಫೀಸಿನಲ್ಲಿ ಜರಗುವುದು

ಶ್ರೀ ಗೋಕರ್ಣನಾಥ ಕ್ಷೇತ್ರದ ಬ್ರಹ್ಮ ಶ್ರೀ ನಾರಾಯಣ ವಿದ್ಯಾರ್ಥಿ ಭವನದಲ್ಲಿ ಸಾಧಾರಣ ಒಂದೂವರೆ ತಿಂಗಳಿಂದ ಶ್ರೀ ಅಡ್ಯಾರ್ ಸುಬ್ರಾಯ ಆಚಾರಿಯವರಿಂದ ಅರ್ಥ ವಿವರಣ ಮತ್ತು ಶ್ರೀ ಮಾಡಾವು ಬಲನೋಂದರ ವಾಚನದಿಂದ ರಾಮಾಯಣ ಕಾಲಕ್ಷೇಪವು ಅಸಂಖ್ಯ ಜನರ ಕೂಡುವಿಕೆಯಿಂದ ನಡೆಯುತ್ತಿದೆ

ಮುಂಬಾಯಿಯ ವಿದ್ಯಾದಾಯಿನೀ ಸಂಘದವರು ಶ್ರೀ ಶಿವಭಕ್ತಿಯೋಗ ಸಂಘವನ್ನು ಅಧಿಕರಿಸಿ ರೂಪಾಯಿ ೧೫೦ರ ಒಂದು ಬಹುಮಾನವನ್ನು ಎಸ್ ಎಸ್ ಎಲ್ ಸಿಯಲ್ಲಿರುವ ಸಮಾಜದ ವಿದ್ಯಾರ್ಥಿಗಾಗಲೀ ವಿದ್ಯಾರ್ಥಿನಿಗಾಗಲೀ ಕೊಡಬಹುದೆಂದು ಸೂಚಿಸಿದಂತೆ ಇದಕ್ಕೆ ಯೋಗ್ಯಳಾದ ಗವರ್ನಮೆಂಟ್ ಕಾಲೇಜಿನ ವಿದ್ಯಾರ್ಥಿನಿ ಕುಮಾರಿ ಕಮಲಾಬಾಯಿಯವರಿಗೆ ತಾ. ೧೬ನೇ ಆದಿತ್ಯವಾರ ರಾಮಾಯಣ ಕಾಲಕ್ಷೇಪಕ್ಕಾಗಿ ನೆರೆದಿದ್ದ ಸಭಿಕರೆದುರು ಕೊಟ್ಟು ಮುಂಬಾಯಿಯವರ ಸಹಕಾರವನ್ನು ಪ್ರಶಂಸಿಸಿದರು

ಇಂಜಿನಿಯರಿಂಗ್ ಇಲಾಖೆಯ ಎಕ್ಸಿಕ್ಯೂಟಿವ್ ಇಂಜಿನಿಯರ ತಲೆಬುಗಳಲ್ಲಾದ ಕಛೇರಿಯ ನಿಶೇಧಾರ್ಥ, ಶ್ರೀ ಸುಬ್ರಹ್ಮಣ್ಯ ಭಟ್ಟ ಎಮ್ ಎಲ್ ಸಿಯವರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿ ಕಛೇರಿಗಾಗಿ ನಿಷೇಧವನ್ನು ಸೂಚಿಸಿ ಠರಾವಾಗಿದೆ

ನಮ್ಮ ತಾಲೂಕಿನ ತಹಶೀಲ್ದಾರರಾಗಿ ಇಲ್ಲಿಯ ಜೆ ಎಸ್ ಸುವರ್ಣರವರು ಚಾರ್ಜು ವಹಿಸಿಕೊಂಡಿರುವರು

ಮಂಗಳೂರು ರೇಂಜಿನ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ ಕೊಗ್ಗನವರಿಗೆ ಪುತ್ತೂರು ರೇಂಜಿಗೂ ಪುತ್ತೂರಿನ ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಪದ್ಮನಾಭಯ್ಯನವರಿಗೆ ಮಂಗಳೂರಿಗೂ ವರ್ಗವಾಗಿದೆ

ಕದಿರೆ ರಸ್ತೆಯಲ್ಲಿ ಕಟ್ಟಿಸಲ್ಪಟ್ಟಿರುವ "ರಾಷ್ಟ್ರಬಂಧು"ವ ಮುದ್ರಣಾಲಯದ ಆರಂಭೋತ್ಸವವು ಇದೇ ತಾ ೨೩ನೇ ರವಿವಾರ ಸಾಯಂಕಾಲ ಘಂಟೆ ೪ಕ್ಕೆ ನಮ್ಮ ಮುನಿಸಿಪಲ್ ಚೆಯರ್ಮ್ಯಾನರಾದ ಡಾ! ಪಿ. ಕೆ ಶೆಟ್ಟಿಯವರಿಂದ ನೆರವೇರಿಸಲಾಗುವುದು ನಿವೃತ್ತ ಡಿಸ್ಟ್ರಿಕ್ಟ್ ಜಡ್ಜ ಶ್ರೀ ರಾವ್ ಬಹದೂರ್ ಬಿ ವೆಂಕಟ್ರಾಯರವರು ಅಧ್ಯಕ್ಷತನವನ್ನು ವಹಿಸುವರು.

ಎಸೆಂಬ್ಲಿ ವೋಟಿನ ದಿನ ಕಾಂಗ್ರೆಸ್ ಕಡೆಯಿಂದ ವೋಟರರನ್ನೊಯ್ಯುತ್ತಿದ್ದ Mys 4639 ನಂಬ್ರದ ಮೋಟಾರು ಕಾರನ್ನು ಇಲ್ಲಿಯ ಪೋಲೀಸರು ತಡೆದು, ಪರ್ಮಿಟು ಇಲ್ಲವೆಂದು ಕಾಂಗ್ರೆಸ್ ಕೆಲಸಗಾರರಾದ ಶ್ರೀ ಬಿ ಕೆ ಭಂಡಾರಿಗಳ ಮೇಲೂ ಮೋಟಾರು ಡ್ರೈವರನ ಮೇಲೂ ಚಾರ್ಜು ಮಾಡಿರುವರಾಗಿ ತಿಳಿದು ಬರುತ್ತದೆ ಇವರ ವಿಚಾರಣೆಯು ಈ ದಿನ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ ನಡೆಯುವುದು

ಧರ್ಮಸ್ಥಳ ಲಕ್ಷದೀಪೋತ್ಸವಕ್ಕೆ ಹೊರಡಿರಿ!

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ತಾ. ೨೦ರಿಂದ ೬ರ ವರೆಗೆ ಜರಗಲಿಕ್ಕಿರುವ ಲಕ್ಷದೀಪೋತ್ಸವದ ಸಂಬಂಧವಾಗಿ ಯಾತ್ರಿಕರಿಗೆ ಅನುಕೂಲವಾಗುವಂತೆ ದಿ ಕೆಂದ್ರಾಂಡ್ ಬುಕ್ಕಿಂಗ ಏಜನ್ಸಿಯವರು, ನಮ್ಮ ಜಿಲ್ಲೆಯ ಯಾವ ಸ್ಟೇಶನಿನಿಂದಲಾದರೂ ಬೆಳಿಗ್ಗೆ ಹೊರಟಲ್ಲಿ ಮಧ್ಯಾಹ್ನ ಯಾ ಸಾಯಂಕಾಲದೊಳಗಾಗಿ ಶ್ರೀ ಕ್ಷೇತ್ರವನ್ನು ತಲುಪಿಸುವ ಬಸ್ಸು ಸರ್ವಿಸುಗಳ ವ್ಯವಸ್ಥೆ ಮಾಡಿರುತ್ತಾರೆ. ಅಲ್ಲದೆ ಉತ್ಸವದಲ್ಲಿ ಉಳಕೊಳ್ಳಲು ಬೇಕಾದ ಸೌಕರ್ಯಗಳೂ ಇರುತ್ತವೆ ಅನಾಯಾಸದಿಂದ ಅಲ್ಪ ಸಮಯದೊಳಗಾಗಿ ಅತೀ ಮಹತ್ವದ ಈ ಯಾತ್ರೆಯನ್ನು ಮಾಡುವರೆ ಯಾತ್ರಿಕ ಮಹಾಶಯರು ಈ ಸುಸಂದರ್ಭವನ್ನು ಗಮನಿಸಬೇಕಾಗಿ ಸಂಬಂಧಪಟ್ಟವರು ತಿಳಿಸುತ್ತಾರೆ (ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಬಂದುದು)

ತಾಲೂಕುಗಳಿಂದ.

ಬೆಳ್ತಂಗಡಿ—[illegible] ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಜಿಲ್ಲಾ ಬೋರ್ಡ್ ಪ್ರೆಸಿಡೆಂಟರೂ ಎಮ್. ಎಲ್ ಸಿ ಗಳೂ ಆದ ಶ್ರೀಯುತ ಎ ಬಿ ಶೆಟ್ಟಿರವರ ಅಧ್ಯಕ್ಷತೆಯಲ್ಲಿ ಬರುವ ಡಿಸೆಂಬರ ತಿಂಗಳ ತಾರೀಕು ೩ನೇ ಸೋಮವಾರ ಅಪರಾಹ್ನ ಘಂಟೆ ೩ಕ್ಕೆ ಜರಗುವುದು. ಕೊನೆಯಲ್ಲಿ ಭಕ್ತಿಯಿಂದಲೂ, ಸಾಮಾಜಿಕ ಸುಧಾರಣ ತತ್ವಗಳಿಂದಲೂ ಒಳಗೊಂಡ "ಲೀಲಾ ವಿಷ್ಣುಲ" ಎಂಬ ನೂತನ ನಾಟಕವು ಅಭಿನಯಿಸಲ್ಪಡುವುದು ವಿದ್ಯಾಪ್ರೇಮಿಗಳೆಲ್ಲಾ ಅಂದಿನ ಸಮಾರಂಭದಲ್ಲಿ ಭಾಗವಹಿಸಬೇಕಾಗಿ ಶಾಲೆಯ ಮುಖ್ಯ ಅಧ್ಯಾಪಕರಾದ ಕೆ. ವೆಂಕಟ್ರಾಯ ಪೈಗಳು ವಿನಂತಿಮಾಡಿಕೊಳ್ಳುತ್ತಾರೆ.

ಇಲ್ಲಿಯ ಸಹ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವಾರ್ಷಿಕ ಲಕ್ಷದೀಪೋತ್ಸವವು ಇದೇ ಕಾರ್ತಿಕ ಬ! ೧೨ ಯು (ತಾ. ೩ ೧೨—೧೯೫೨)ನೇ ಚಂದ್ರವಾರ ರಾತ್ರಿ ಜರಗುವುದು. ಆಸ್ತಿಕ ಮಹಾಶಯರೆಲ್ಲರೂ ಬಂದು ಸದರಿ ಸಮಾರಂಭದಲ್ಲಿ ಭಾಗವಹಿಸಬೇಕಾಗಿ ದೇವಸ್ಥಾನದ ಕಮಿಟಿಯವರ ವಿನಂತಿ.

ಫರಂಗಿಪೇಟೆ:—ಶ್ರೀ ರಾಮಾ ಹಾ ಎ. ಶಾಲೆಯ ಬಳಿ ತಾ ೧೬—೧೧—೫೨ನೇ ರವಿವಾರ ಸಾಯಂಕಾಲ ಘಂಟೆ ೪ ೪೫ಕ್ಕೆ ಮಾರ್ಗದಲ್ಲಿ ಓಡಾಡುತ್ತಿದ್ದ ಸುಮಾರು ೫ ವರ್ಷ ಪ್ರಾಯದ ಇದಿನಬ್ಬ ಎಂಬ ಮಗುವಿನ ಮೇಲೆ ನಂಬ್ರ ೫೧೩ನೇ ಓ ಬಿ ಬಸ್ಸು ಹಾದುಹೋಗಿ ಮಗು ತಕ್ಷಣವೇ ಮೃತವಾಯಿತು ಪೋಲಿಸ್ ತನಿಖೆಯು ನಡೆದಿದೆ

ಮಧ್ಯಾಹ್ನ ಮತ್ತು ಸಾಯಂಕಾಲ ಶಾಲಾ ಮಕ್ಕಳು ಮನೆಗೆ ಹೋಗುವ ಸಮಯ ಇಂಥ ಅಪಘಾತಗಳಿಗೆ ಹೆಚ್ಚಿನ ಆಸ್ಪದವಿರುತ್ತದೆ ಆದ್ದರಿಂದ ಶಾಲಾ ಪಕಾರದಲ್ಲಿ ಬಸ್ಸುಗಳ ವೇಗವನ್ನು ಓಡಿಸುವವರು ಕಡಮೆ ಮಾಡುವದಲ್ಲದೆ ಶಾಲಾ ಪಕಾರದ ಇಕ್ಕಡೆಗಳಲ್ಲಿಯೂ School zone ಎಂಬ ನಿಶಾನಿಯನ್ನು ಮಾನ್ಯ ಡಿ ಬೋರ್ಡಿನವರು ಹಾಕಿಸಿದ್ದಲ್ಲಿ ಇಂಥ ಅಪಘಾತಗಳಿಗೆ ತಡೆಹಾಕಿದಂತೆ ಆಗುವುದು.

ಕಾರ್ಕಳ – ಇದೇ ಕಳೆದ ತಾ ೧೦ ಮತ್ತು ೧೧ರಲ್ಲಿ ಕಾರ್ಕಳ ಶ್ರೀ ಪದ್ಮಸಾಲಿ ಶೆಟ್ಟಿಗಾರ ವೈಶ್ಯ ಸಮಾಜ ಸೇವಾ ಯುವಕ ಸಂಘದ ದ್ವಿತೀಯ ವಾರ್ಷಿಕ ಮಹಾ ಸಭೆಯು ಯಶಸ್ವಿಯಾಗಿ ಕೊನೆಗೊಂಡಿತು. ಗತ ವರ್ಷದ ಲೆಕ್ಕಪತ್ರಗಳನ್ನು ಪರಿಶೋಧಿಸಿ, ಹೊಸ ವರ್ಷದ ಬಗ್ಗೆ ನಿಬಂಧನೆಗಳಲ್ಲಿ ಅಗತ್ಯವಿರುವ ಕೆಲವು ತಿದ್ದುಪಾಟುಗಳನ್ನು ಮಾಡಲಾಯಿತು ಗತವರ್ಷದ ಕಾರ್ಯನಿರ್ವಾಹಕ ಸಮಿತಿಯೇ (೧ ಕೆ ಮುತ್ತಯ್ಯ ಶೆಟ್ಟಿಗಾರ್ ಅಧ್ಯಕ್ಷ ೨ ರಾ ಕೆ ರಾಮ ಶೆಟ್ಟಿಗಾರ್ ಕೋಶಾಧ್ಯಕ್ಷ ೩ ಶ್ರೀ ಬ್ರಹ್ಮಾನಂದ ಮತ್ತು ಕೆ ಟಿ ಬಂಗ ಶೆಟ್ಟಿಗಾರ್ ಜೊತೆಕಾರ್ಯದರ್ಶಿಯರು ೪ ಶ್ರೀ ಸುಂದರ ಶೆಟ್ಟಿಗಾರ ಪುಸ್ತಕ ಭಂಡಾರಿಕ) ಈ ವರ್ಷವೂ ಚುನಾಯಿತರಾಗಿರುವರು

ಧರ್ಮವೀರ ಶ್ರೀಮದ್ದಯಾನಂದ ಸರಸ್ವತಿ ಮತ್ತು ರಾಷ್ಟ್ರವೀರ ಲಾಲಾಜಿಯವರ ಪುಣ್ಯ ದಿನಾಚರಣೆಗಳನ್ನು ಆಯಾ ದಿನಗಳಲ್ಲಿ ರಾ. ಬ್ರಹ್ಮಾನಂದರಿಂದ ಸಂಘದ ನೇತೃತ್ವದಲ್ಲಿ ಆಚರಿಸಲಾಯಿತು

ಸೇವಾಸಂಘದ ದ್ವಿತೀಯ ವಾರ್ಷಿಕ ವರ್ಧಂತ್ಯುತ್ಸವವನ್ನು ಬರುವ ದಶಂಬರ ತಾ ೩ರಲ್ಲಿ ಜರಗಿಸುವುದಾಗಿ ನಿಶ್ಚಯಿಸಿರುತ್ತದೆ ಯಾವತ್ತು ಕಾರ್ಯಕ್ರಮಗಳು ಸದ್ಯದಲ್ಲೇ ಪ್ರಕಟಿಸಲ್ಪಡುವುವು

ಶ್ರೀ ಸುಬ್ರಹ್ಮಣ್ಯಕ್ಕೆ ಷಷ್ಠಿ ಮಹೋತ್ಸವಕ್ಕಾಗಿ ಹೋಗುವವರಿಗೆ ಸೀದಾ ಟಿಕೇಟುಗಳು ಕೊಡಲ್ಪಟ್ಟು ಪ್ರಯಾಣದ ಸೌಕರ್ಯಗಳೇರ್ಪಡಿಸಿ ಕೊಡಲಾಗುವುದು

ಕಿನ್ನಿಗೋಳಿ—ಆದ್ಯಾರು:—ಇಲ್ಲಿಯ ಶ್ರೀ ಮಹಾಲಿಂಗೇಶ್ವರ ಕೃಪಾಪೋಷಿತ ಸಂಘದ ಈ ವರ್ಷದ ಗ್ರಾಮ ಸಂಕೀರ್ತನೆಯ ಮೆರವಣಿಗೆಯು ಇದೇ ತಾ ೨೩ನೇ ಆದಿತ್ಯವಾರ ಪ್ರಾರಂಭವಾಗಿ ತಾ ೧ನೇ ಶನಿವಾರದ ವರೆಗೆ ಸಂಚರಿಸಿ ತಾ. ೨ನೇ ದಿನ ಸಭಾ ಸಂಘದ ಆಫೀಸಿನಲ್ಲಿ ಸಾಯಂ ಘಂಟೆ ೪ಕ್ಕೆ ಭಜನಮಂಗಲವನ್ನು ನೆರವೇರಿಸುವುದೆಂದೂ, ಭಜಕವೃಂದವು ಸಹಕರಿಸಬೇಕೆಂದೂ ಸಭಾ ಸಂಘದ ಅಧ್ಯಕ್ಷರೂ ಕಾರ್ಯದರ್ಶಿಯವರೂ ಅಪೇಕ್ಷಿಸುತ್ತಾರೆ.

ಸೋಮೇಶ್ವರ— [illegible] ಕೋಟೆಗೆ ಸೇರಿದ ಯುವಕರು ಇಲ್ಲಿಯ ಕಂಬಳವು ಇದೇ ಕಾರ್ತಿಕ ಮಾಸದ ೧೫ಕ್ಕೆ ಸಲ್ಲುವ (ಸೋಮವಾರ, ತಾ. ೩—೧೨—೫೨ಕ್ಕೆ) ಜರಗುವುದು ಗೆದ್ದವರಿಗೆ ಯೋಗ್ಯತೆಯಂತೆ ಸ್ವರ್ಣ ಹಾಗೂ ರಜತ ಪದಕಗಳ ಬಹುಮಾನಗಳಿವೆ

ಸುಳ್ಯ—ಪುತ್ತೂರು ತಾಲೂಕಿನ ಮಕ್ಕಳ ಕೂಟವು ಈ ವರ್ಷ ಇದೇ ಬರುವ ದಶಂಬರ ತಾ. ೧೪ರಿಂದ ೨೪ರ ತನಕ ಸುಳ್ಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿಸುವುದೆಂದು ನಿಶ್ಚಯಿಸಲಾಗಿದೆ, ಮೈಸೂರಿನ ಶ್ರೀ ಟಿ. ಪಿ. ಕೈಲಾಸಂ, ಶ್ರೀ ಡಿ. ವಿ. ರಾಜರತ್ನಂ ಇವರೇ ಮೊದಲಾದ ಮಹನೀಯರು ದಯಮಾಡಿಸಲಿರುವರು.

ಗೌಡ ವಿದ್ಯಾವರ್ಧಕ ಸಂಘದ ಮಹಾಸಭೆಯು ಬರುವ ತಿಂಗಳ ತಾ. ೧೬ಕ್ಕೆ ನಡೆಯುವುದು.

ಕಡಬ—ಇಲ್ಲಿ ಇದೇ ತಿಂಗಳ ತಾ. ೧೩ನೇ ಮಂಗಳವಾರ 'ಆರೋಗ್ಯ ಮತ್ತು ಶಿಶುಸಪ್ತಾಹದ ದಿನವು ಆಚರಿಸಲ್ಪಟ್ಟಿತು ಬೆಳಿಗ್ಗೆ ನಗರ ಭಜನೆಯಾದಿ ಶಿಶು ಪ್ರದರ್ಶನವು ಜರಗಿತು ಪ್ರದರ್ಶನಕ್ಕೆ ಐದಿನ್ನೂರು ಮಕ್ಕಳೂ ತರಲ್ಪಟ್ಟಿದ್ದುವು ಮಕ್ಕಳಿಗೆ ಹಾಲು ಬಿಸ್ಕುಟು ಕೊಟ್ಟಿದ್ದಲ್ಲದೆ ಉತ್ತಮವಾದ ಮಕ್ಕಳಿಗೆ ಇನಾಮು ಸಹ ಹಂಚಲಾಯಿತು ಆ ಮೇಲೆ ಡಾ! ಪಿ.ಸ. ಯನ್ ಅಲೇಕಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಆರೋಗ್ಯ ಸಂಬಂಧವಾದ ಭಾಷಣಗಳಾಗಿ ಸಭೆ ಚದರಿತು.

ಸ್ಥಳೀಕ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ಬಾಲ ಭಜನಾ ಮಂಡಳಿಯ ವರ್ಧಂತಿಯು ಶ್ರೀಮಾನ್ ಕೆ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಶುಕ್ರವಾರ ಜರಗಿತು ವರದಿ ವಾಚನ ಹಿತಚಿಂತಕರ ಭಾಷಣ, ಅಧ್ಯಕ್ಷರ ಭಾಷಣಗಳಾದ ಮೇಲೆ ಈ ಸಂದರ್ಭಕ್ಕಾಗಿ ರಚಿಸಿದ ಮಂಟಪದ ಮುಂದೆ ಮಕ್ಕಳ ಭಜನೆಯೂ ದೀಪೋತ್ಸವವೂ ನಡೆಯಿತು ಊರ ಮಹನೀಯರನೇಕರು ಭಜನೆಯಲ್ಲಿ ಭಾಗವಹಿಸಿದ್ದರು ಬಾಲಕರಿಗೂ ನೆರೆದ ಇತರರಿಗೂ ಪಾನಕ ಕಜ್ಜಾಯಾದಿಗಳು ಹಂಚಲ್ಪಟ್ಟವು ಸುಮಾರು ರಾತ್ರಿ ೧೦ ಘಂಟೆಗೆ ಸಮಾರಂಭವು ಕೊನೆಗೊಂಡಿತು.

ಮೂಡಬಿದ್ರಿ — ಇಲ್ಲಿಯ ತ್ರಿಭುವನ ತಿಲಕ ಚೂಡಾಮಣಿ ಜೈನಮಂದಿರದಲ್ಲಿ (ಸಾವಿರ ಕಂಭದ ಬಸದಿ) ವರ್ಷಂಪ್ರತಿ ನಡೆಯುವ ದೀಪೋತ್ಸವವು ಇದೇ ಬರುವ ಕಾರ್ತಿಕ ಬ! ೬ ಯು ಬುಧವಾರ ತಾರೀಕು ೨೬—೧೧—೫೨ನೇ ರಾತ್ರಿ ಘಂಟೆ ೭ಕ್ಕೆ ಜರಗಲಿರುವುದು

ಈ ಸೆಂಟರಿನ ಉಪಾಧ್ಯಾಯರ ಸಂಘದ ಮಾಸಿಕ ಸಭೆಯು ಇದೇ ತಾ ೧೬ನೇ ರವಿವಾರ ಅಪರಾಹ್ನ ೩ ಘಂಟೆಗೆ ದಿಗಂಬರ ಜೈನ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಸದರಿ ಶಾಲಾ ಮುಖ್ಯೋಪಾಧ್ಯಾಯರಾದ ಪಂಡಿತ ದೇವರಾಜಯ್ಯರ ಅಧ್ಯಕ್ಷತೆಯಲ್ಲಿ ಜರಗಿತು ಮೇಲಿನ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ "ಎಡಲ್ಟ ಶ್ರೀ ನ್ಯಾಟ್‌ಸ್ಕೂಲಿನ ವರ್ಧಂತಿಯು ಬರುವ ದಶಂಬರ ತಾ ೧ಕ್ಕೆ ನಿಶ್ಚಯಿಸಿದೆ, ಸಂಘದ ಸಭೆಯು ದಶಂಬರ ತಾ ೧ಕ್ಕೆ ಜರಗುವುದು ವ ಕ್ಟ್ರ ಸಪ್ತಾಹ ದಶಂಬರ ತಾ ೧೩ರಿಂದ ೨೦ರ ವರೆಗೆ ನಡೆಯುವುದು

ಪಣಂಬೂರು — ಪಣಂಬೂರು "ಬಿ. ಹೊಲಿಗೆ ಕೆಫೆ"ನಲ್ಲಿ ಬಹುಮಾನ ಸಿಕ್ಕಿದವರು ಇದೇ ತಿಂಗಳ ತಾ ೩೦ರ ಒಳಗೆ ಬಹುಮಾನದ ಟಿಕೇಟುಗಳನ್ನು ಸಭಾ ಆಫೀಸಿಗೆ ಕಳುಹಿಸಿ ಕೊಟ್ಟು ಹಣ ಪಡಕೊಳ್ಳತಕ್ಕದ್ದು ಆ ತಾರೀಕಿನ ನಂತರ ಹಣ ದೊರೆಯಲಾರದು ಎಂದು ಸಭಾ ಕಮಿಟಿಯ ಕಾರ್ಯದರ್ಶಿಯವರು ತಿಳಿಸುತ್ತಾರೆ

ಉಡುಪಿ — ಈ ತಾಲೂಕಿನ ಬೋರ್ಡ್ ಎಲಿಮೆಂಟರಿ ಶಾಲಾಧ್ಯಾಪಕರ ಸಂಘದ ಮಹಾಸಭೆಯು ತಾ ೨೩ ೧೧ ೧೯೫೨ನೇ ರವಿವಾರ ಅಪರಾಹ್ನ ಘಂಟೆ ೧ಕ್ಕೆ ಇಲ್ಲಿಯ ಮ್ಯಾನೇಜ್ ಬೋರ್ಡ್ ಶಾಲೆಯಲ್ಲಿ ಡಾ! ಪಿ. ಜಿ ಆಚಾರ್ಯರವರ ಅಧ್ಯಕ್ಷತೆಯಲ್ಲಿ ಜರಗುವುದು ಸಭಾ ಕಾರ್ಯಗಳು ಸುಸೂತ್ರವಾಗಿ ಜರಗುವಂತೆ ಅಧ್ಯಾಪಕ ಬಂಧುಗಳೆಲ್ಲರೂ ಸಹಕರಿಸಬೇಕಾಗಿ ಜಿಲ್ಲಾ ಕಾರ್ಯದರ್ಶಿಯವರ ವಿನಂತಿ.

ಇಲ್ಲಿಗೆ ಮುನಿಸಿಪಾಲಿಟಿಯಾಗಬೇಕೆಂಬ ಸೂಚನೆಯನ್ನು ಸದ್ಯಕ್ಕೆ ನಿರ್ಧರಿಸಿ ಕಾರ್ಯರೂಪಕ್ಕೆ ತಪ್ಪಬಾರದೆಂದೂ, ಈ ಪ್ರಶ್ನೆಯನ್ನು ಮುಂದುವರಿಸಬೇಕೆಂದೂ ಸರಕಾರಕ್ಕೆ ವಿನಂತಿಸಿಕೊಳ್ಳುವರೆ ಇಲ್ಲಿಯ ಪುರನಿವಾಸಿಗಳ ಒಂದು ಸಭೆಯು ಸದ್ಯದಲ್ಲೇ ಜರಗಲಿರುವುದಾಗಿ ವದಂತಿ.

ಸ್ಥಳೀಯ ಕೋ-ಒಪರೇಟಿವ್ ಟೌನ್ ಬ್ಯಾಂಕಿನ ವರ್ಷಾವಧಿ ಮಹಾಸಭೆಯು ಇದೇ ಬರುವ ತಾರೀಕು ೩೫—೧೧—೫೨ನೇ ರವಿವಾರ ಅಪರಾಹ್ನ ಘಂಟೆ ೬-೩೦ಕ್ಕೆ ಜರಗುವುದು.

[illegible]

ಉಡುಪಿಯ ಹಿಂದೀ ಕ್ಲಾಸುಗಳು.

[illegible] ತಿಂಗಳ ಹಿಂದೆ ಇಲ್ಲಿ ಹಿಂದೀ ಕ್ಲಾಸುಗಳು [illegible] ಕೆಲವು ಮಹಾಶಯರು ಕಳೆದ ಬಾರಿಯ ಪರೀಕ್ಷೆಯಲ್ಲಿ ಭಾಗವಹಿಸಿದ್ದರು. ಪರೀಕ್ಷೆಯ ಫಲಿತಾಂಶಗಳು ಪ್ರಕಟವಾಗಿ ಇಂದಿಗೆ ೩ ವಾರಗಳಾಗುತ್ತ ಬಂದರೂ, ಮುಂದಿನ ಫೆಬ್ರುವರಿ ತಿಂಗಳ ಪರೀಕ್ಷೆಗೆ ತರಬೇತು ಮಾಡಲು ಕ್ಲಾಸುಗಳು ಇದು ವರೆಗೂ ಏರ್ಪಟ್ಟಂತೆ ಕಾಣುತ್ತಿರುವುದಿಲ್ಲ. ಇದಕ್ಕೆ ಕಾರಣ ವೇನಿರಬಹುದೋ!

ಇದೇ ಕಳೆದ ಎಪ್ರಿಲ್ ತಿಂಗಳಲ್ಲಿ 'ದಕ್ಷಿಣ ಕನ್ನಡ ಹಿಂದೀ ಪ್ರಚಾರ ಸಂಘ' ಮಂಗಳೂರು, ಇದರ ಮಂತ್ರಿಗಳಾದ ಶ್ರೀ. ಬಿ. ಎಸ್. ಬಿಜೂರರವರು ಇಲ್ಲಿಗೆ ಬಿಜಯಿಸಿದ್ದು, ಪ್ರಚಾರ ಕಾರ್ಯವನ್ನು ಜರಗಿಸುವೆವೆಂದು ಭರವಸೆಯಿತ್ತು, ಸ್ಥಳೀಯ ಮಹನೀಯರಿಂದ ಚಂದಾ ವಸೂಲು ಮಾಡಿ ಮಂಗಳೂರಿಗೆ ಹಿಂದಿರುಗಿ ಪಯಣ ಬೆಳಸಿದರು. ಆಗ ಎತ್ತಲ್ಪಟ್ಟ ಚಂದಾಹಣವು ಹೇಗೆ ವಿನಿಯೋಗವಾಯಿತು? ಇಲ್ಲಿಯ ಕ್ಲಾಸುಗಳಿಗೆ ಏನಾದರೂ ಸಹಾಯವು ದೊರಕಿದ್ದಿತೆ? ಈ ಸಲದ ಕ್ಲಾಸುಗಳನ್ನು ತೆರೆಯುವರೆ ಈ ಮಹನೀಯರು ಎಷ್ಟು ಮಟ್ಟಿನ ಉತ್ಸಾಹ ತೋರಿಸುತ್ತಿರುವರೆಂದೂ ಸಂಘದ ಪರವಾಗಿ ಅವರು ತಿಳಿಸುವರೇನು?

ಈಗ ಅನೇಕ ಉತ್ಸಾಹೀ ತರುಣರೂ, ಕಳೆದ ಸಲ ಉತ್ತೀರ್ಣರಾದವರೂ, ಹಿಂದೀ ಕಲಿಯಲು ಆತುರವುಳ್ಳವರಾಗಿದ್ದಾರೆ. ಅವರಿಗೆ ಸಂಘದವರು ಯಾವ ತರಧ ಸೌಕರ್ಯವನ್ನೊದಗಿಸುವವರಿದ್ದಾರೆ ಎಂದು ಪ್ರಶ್ನೆ! ಕ್ಲಾಸುಗಳನ್ನು ಆರಂಭಿಸುವುದಕ್ಕೆ ವಿಲಂಬವಾದರೆ ಫೆಬ್ರುವರಿ ಪರೀಕ್ಷೆಗೆ ಕುಳಿತುಕೊಳ್ಳಲು ಸಮಯವು ಸಾಲದೆ ಹೋಗಬಹುದು. ಶ್ರೀ. ಬಿಜೂರರವರು ಇನ್ನಾದರೂ ಉಡುಪಿಯನ್ನು ಸಂಪೂರ್ಣ ಮರೆಯಬಿಡದೆ, ಇತ್ತ ಒಂದು ಸಲ ಬಿಜಯಂಗೈದು ಇಲ್ಲಿಯ ಕ್ಲಾಸುಗಳ ಸಂಘಟನೆಯನ್ನು ಮಾಡಿದ್ದರೆ ಜನತೆಗೆ ತುಂಬಾ ಉಪಕಾರವಾಗುತ್ತಿತ್ತು. ಮಾತ್ರವಲ್ಲ, ಹಿಂದಿನ ಸಲ ಎತ್ತಿದ ಚಂದಾಹಣದ ವಿಷಯದಲ್ಲಿ ಜನತೆಯಲ್ಲಿರುವ ಜಿಜ್ಞಾಸೆಯನ್ನು ದೂರಮಾಡಲು ಪ್ರಯತ್ನಿಸುವರೇ?

ಉಡುಪಿ,
೧೭-೧೧-೩೪. 'ಹಿಂದೀ ಪ್ರೇಮಿ'

"ದಕ್ಷಿಣ ಕನ್ನಡ ಹಿಂದೀಪ್ರಚಾರ ಸಂಘ" ಮಂಗಳೂರು.

ಮೇಲಿನ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಬಿಜೂರರ ಸಂಬಂಧವಾಗಿ ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈರ ಒಂದು ಲೇಖನವು ಪ್ರಕಟವಾಗಿದೆ. ಇಲ್ಲಿ ಕಾರ್ಕಳದಲ್ಲಿ, ಶ್ರೀ ಬಿಜೂರರು ಸದರಿ ಸಂಸ್ಥೆಯ ಶಾಖೆಯನ್ನು ಸ್ಥಾಪಿಸಿ, ನನ್ನನ್ನು ಅದರ ಕಾರ್ಯದರ್ಶಿಯಾಗಿ ನೇಮಿಸಿದ್ದರು. ನಾನು ಇಲ್ಲಿ ಎಲಿಮೆಂಟರಿ ಶಾಲೆಯಲ್ಲಿ ಒಂದು ತಿಂಗಳ ವರೆಗೆ ದಿನಂಪ್ರತಿ ಹಿಂದೀಕ್ಲಾಸನ್ನು ನಡಿಸಿ ಆಮೇಲೆ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾದ್ದರಿಂದ ಶನಿವಾರ ಮತ್ತು ರವಿವಾರ ಈ ರೀತಿ ಸ್ವಲ್ಪ ಸಮಯ ನಡೆಸಿರುತ್ತೇನೆ. ಕಡೆಗೆ ತಕ್ಕ ಪ್ರೋತ್ಸಾಹವೂ ವಿದ್ಯಾರ್ಥಿಗಳೂ ಸಿಕ್ಕದಿದ್ದದ್ದರಿಂದ ಈಗ ಸಂಪೂರ್ಣ ನಿಂತಿದೆ. ಆದರೂ ಪತ್ರಿಕೆ, ಪುಸ್ತಕ ನೋದಲಾದುವುಗಳಿಂದ ಈಗಲೂ ನಾನು ಅಲ್ಪ ಸ್ವಲ್ಪ ಹಿಂದೀ ಪ್ರಚಾರವನ್ನು ನಡೆಸುತ್ತಿದ್ದೇನೆ. ಶ್ರೀ ಬಿಜೂರರು ಇಲ್ಲಿಂದ ಪಂತಿಗೆ ಒಟ್ಟುಮಾಡಿ ನೂರು ಯಾ ಸಾವಿರ ರೂಪಾಯಿಗಳ ಗಂಟುಕಟ್ಟಿಕೊಂಡು ಮಂಗಳೂರಿಗೆ ತೆಗೆದುಕೊಂಡು ಹೋಗಿರುವುದಿಲ್ಲ. ಹೆಚ್ಚೆಂದರೆ ೮ ಯಾ ೧೦ ರೂಪಾಯಿಗಳಾಗಬಹುದು. ಅಲ್ಲದೆ, ಅವರು ಶ್ರೀ ಲಕ್ಷ್ಮಣದೇವ ವಿದ್ಯಾರ್ಥಿಯವರನ್ನು ಇಲ್ಲಿ ಪ್ರಚಾರಕ್ಕಾಗಿ ಕಳುಹಿಸಿದ್ದರು. ೮ ಸಮಯದಲ್ಲಿಯೂ [illegible] ಬಗ್ಗೆ ಸಗ್ಗೆರೆ [illegible] [illegible] ಅವರು ಹಿಂತಿರುಗಿ ಹೋಗಬೇ

[illegible]

ಶ್ರೀ [illegible],
ಹಿಂದೀ ಪ್ರಚಾರಕ, ಕಾರ್ಕಳ.

ಬೋರ್ಡ ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ಸಂಬಳ.

ಇದೇ ತಿಂಗಳ ೫ ನೇ "ಸ್ವದೇಶಾಭಿಮಾನಿ"ಯಲ್ಲಿ "ಹಿತವಾದಿ"ಯು ಬೋರ್ಡ ಎಲಿಮೆಂಟರಿ ಶಾಲಾ ಉಪಾಧ್ಯಾಯರಿಗೆ ಹೊಸ ಸ್ಕೇಲನ್ನು ಜ್ಯಾರಿಗೆ ತರುವಾಗ ಹಿಂದಿನ ಸರ್ವಿಸನ್ನು ಎಣಿಸಬೇಕೆಂಬ ಸೂಚನೆಯು "ಕ್ರಾಂತಿಕಾರಕ"ವೆಂದು ಅಭಿಪ್ರಾಯಪಟ್ಟಿದ್ದಾರೆ. ಈ ಸೂಚನೆಯಲ್ಲಿ ಕ್ರಾಂತಿಕಾರಕವಾದುದೇನಿದೆಯೆಂದು ನನಗೆ ತಿಳಿಯುವುದಿಲ್ಲ. ಬೇರೆ-ಬೇರೆ ತಾಲೂಕು ಬೋರ್ಡುಗಳಲ್ಲಿ ಬೇರೆ ಬೇರೆ ಸ್ಕೇಲುಗಳು ಜ್ಯಾರಿಯಲ್ಲಿದ್ದುವು. ಕೆಲವು ತಾಲೂಕುಬೋರ್ಡುಗಳಲ್ಲಂತೂ ಒಬ್ಬೊಬ್ಬ ಉಪಾಧ್ಯಾಯನಿಗೆ ಒಂದೊಂದು ಸ್ಕೇಲು ಇದ್ದಿತೆಂದು ಕೇಳಬಹುದು. ಈ ಅವ್ಯವಸ್ಥೆಯನ್ನು ಹೋಗಲಾಡಿಸಲು ಸರಕಾರದವರು ಎರಡು ಸ್ಕೇಲುಗಳನ್ನು ಸೂಚಿಸಿ ಅವುಗಳಲ್ಲೊಂದನ್ನು ಅಂಗೀಕರಿಸಬೇಕೆಂದು ತಿಳಿಸಿದರು. ಹೀಗೆ ಸೂಚಿಸುವಾಗ್ಯೆ ಈ ಹೊಸ ಸ್ಕೇಲು ಇನ್ನು ಮುಂದೆ ಸೇರುವ ಉಪಾಧ್ಯಾಯರಿಗೆ ಮಾತ್ರ ಅನ್ವಯಿಸಬೇಕೆಂದು ಸರಕಾರದವರು ಹೇಳಿಲ್ಲ. ಈಗ ಇರುವವರಿಗೂ ಇದು ಅನ್ವಯಿಸುತ್ತದೆ. ಹೀಗಿರುವಾಗ್ಗೆ ಅವರ ಹಿಂದಿನ ಸರ್ವಿಸನ್ನು ಗಣಿಸದೆ ಈಗಿರುವ ಸಂಬಳವನ್ನೇ ಹೊಸ ಸ್ಕೇಲಿನಲ್ಲಿ ಮುಂವರಿಸಿದರೆ ತಾಲೂಕುಬೋರ್ಡುಗಳ ಕಾಲದಲ್ಲಿದ್ದ ಅವ್ಯವಸ್ಥೆಯನ್ನು ನಿವಾರಿಸಬೇಕೆಂಬ ಸರಕಾರದವರ ಆಶಯವು ನೆರವೇರಿದಂತಾಗುವುದಿಲ್ಲ. ಉಡುಪಿ, ಕಾರ್ಕಳ ತಾಲೂಕುಗಳಲ್ಲಿ ೧೫ ಯಾ ೨೦ ವರ್ಷ ಸರ್ವಿಸಾದ ಹಾಯರ್‌ಗ್ರೇಡ್ ಉಪಾಧ್ಯಾಯರಿಗೆ ಕೂಡ (ಮಿನಿಮಮ್) ರೂ. ೨೦ ಸಂಬಳ ಸಲ್ಲುತ್ತಿದೆ. ಆದರೆ ಕುಂದಾಪುರ ತಾಲೂಕಿನಲ್ಲಿ ಬರೇ ಎಂಟು ವರ್ಷ ಸರ್ವಿಸಾದ ಹಯರ್‌ಗ್ರೇಡ್ ಉಪಾಧ್ಯಾಯನಿಗೆ (ಮಕ್ಸಿಮಮ್) ರೂ. ೩೦ ಸಿಗುತ್ತಿದೆ. ಇದೇ ರೀತಿ ಇನ್ನೂ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಹೇಗೆ ಒಂದೇ ಬೋರ್ಡಿನ ಕೈಕೆಳಗಿರುವ ಉಪಾಧ್ಯಾಯರೊಳಗೆ ಭಿನ್ನಭೇದವನ್ನು ಮಾಡುವುದು ಯಾವ ನ್ಯಾಯ? ಈಗ ಮೇಲಿನ ಉದಾಹರಣೆಯಲ್ಲಿ ಉಡುಪಿಯ ಹಯರ್ ಗ್ರೇಡನ್ನು ಕುಂದಾಪುರ ತಾಲೂಕಿಗೆ ವರ್ಗಾಯಿಸಿದರೆ ಯಾರು ಹೆಡ್ಮಾಸ್ತರರಾಗಬೇಕು? ತನಗಿಂತ ಬಹಳ ಕಡಿಮೆ ಸರ್ವಿಸಿದ್ದರೂ ಮಕ್ಸಿಮಮ್ ಸಂಬಳತಿನ್ನುತ್ತಿರುವವನೊಟ್ಟಿಗೆ ಇವನು ಮಿನಿಮಮ್ ಪಡೆಯುತ್ತಾ ಎಷ್ಟು ಶ್ರದ್ಧೆಯಿಂದ ಕೆಲಸ ಮಾಡ್ಯಾನು? ಆದ್ದರಿಂದ ಹಿಂದಿನ ಸರ್ವಿಸನ್ನೆಣಿಸದೆ ಯಾವುದೂ ಒಂದು ಸ್ಕೀಮು ತಕ್ಕೆ ಬರುವಂತಿಲ್ಲ. ಸರಕಾರದವರ ಧೋರಣೆಯೂ ಅಂತೆಯೇ ಇದೆ. ತಾಲೂಕುಬೋರ್ಡು ಸ್ಕೂಲುಗಳನ್ನು ಡಿಸ್ಟ್ರಿಕ್ಟ್‌ಬೋರ್ಡಿಗೆ ತೆಗೆದುಕೊಳ್ಳುವಾಗ ಅವರ ಸರ್ವಿಸನ್ನೆಣಿಸಿಯೇ ಸಂಬಳವನ್ನು ನಿಶ್ಚಯಿಸಿದ್ದು. ಅದರಂತೆಯೇ ಈ ವಿಷಯದಲ್ಲಿಯೂ ಸರಕಾರದವರು ಜಿಸೋರ್ಡಿನವರ ಯೋಜನೆಗೆ ಕಣ್ಣುಮುಚ್ಚಿ ಸಹಿ ಹಾಕದೆ ನ್ಯಾಯವನ್ನು ಮಾಡುವರಾಗಿ ನಂಬಿರುತ್ತೇನೆ.

ಇತಿ
'ಸತ್ಯವಾದಿ'

ಸರ್ಕಲಾರು.

ಎಲ್ಲಾ ಪಂಚಾಯತ ಬೋರ್ಡು ಪ್ರೆಸಿಡೆಂಟರಿಗೆ—

ಮದ್ರಾಸು ಲೋಕಲ್‌ಬೋರ್ಡು ಆಕ್ಟಿಗೆ ಸಂಬಂಧಿಸಿದ ೫ನೇ ಶೆಡ್ಯೂಲಿನ ೧೧ (೨) ಮತ್ತು (೪)ನೇ ರೂಲುಗಳ ಪ್ರಕಾರ ಪ್ರತಿ ಪಂಚಾಯತವು ಅದರ ಸಭೆ ಜರಗಿದ ೩ ದಿವಸಗಳೊಳಗೆ ಸಭೆಯ ಪ್ರೊಸೀಡಿಂಗ್ಸಿನ ಒಂದು ಪ್ರತಿಯನ್ನು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಿಗೂ, ಇನ್ನೊಂದು ಪ್ರತಿಯನ್ನು ಕಲೆಕ್ಟರ್ ದೊರೆಗಳಿಗೂ ಕಳುಹಿಸಬೇಕೆಂತ ಆಜ್ಞಾಪಿಸಿರುತ್ತದಷ್ಟೆ. ಪ್ರಕೃತ ಕೆಲವು ಪಂಚಾಯತಗಳು ೩ ಯಾ ೪ ಪ್ರತಿಗಳನ್ನು ತಯಾರಿಸಿ ಸದರಿ ಉದ್ಯೋಗಸ್ಥರಲ್ಲದೆ ಕೆಲವರು ಜಿಲ್ಲಾ ಪಂಚಾಯತ ಆಫೀಸರರಿಗೂ ಲೋಕಲ್ ಬೋರ್ಡು ಇನ್ಸ್‌ಪೆಕ್ಟರರಿಗೂ ಕೂಡಾ ಕಳುಹಿಸುತ್ತಿದ್ದಾರೆ. ಆದರೆ ಮೇಲೆ ಹೇಳಿದ ಪ್ರಕಾರದಂತೆ ೮ ಪ್ರತಿಗಳನ್ನು ತಯಾರಿಸುವುದು ಮತ್ತು ಅವುಗಳನ್ನು ಪಂಚಾಯತು ಆಫೀಸರರಿಗಾಗಲೀ ಲೋಕಲ್ ಬೋರ್ಡು ಇನ್ಸ್‌ಪೆಕ್ಟರರಿಗಾಗಲೀ ಕಳುಹಿಸುವುದು ಅನಾವಶ್ಯಕವಾಗಿದೆ. [illegible] (ಡಿಸೆಂಬರ) ಕಳುಹಿಸಬೇಕು.

ಬೇರೆ ಅಧಿಕಾರಿಗಳಿಗೆ ಅಗತ್ಯವಿದ್ದರೆ ಅದರ ಬಗ್ಗೆ ಕಳುಹಿಸತಕ್ಕ ಸರ್ಕಲರುಗಳ ಉತ್ತರವನ್ನು ಪ್ರತ್ಯೇಕವಾಗದಲ್ಲಿ ಬರೆದು, ಸದರಿ ಪ್ರೊಸೀಡಿಂಗ್ಸಿನ ನಕಲಿನ ಜೊತೆಯಲ್ಲಿಯೇ ಇಡುವುದು ಅವಶ್ಯಕವಾಗಿದ್ದು ಇದೆ. ಹಾಗೆ ಕಳುಹಿಸದೆ ಹೋದಬಂದರೆ ಬೇರೆ ಆಫೀಸರರಿಗೆ ಆ ವಿಷಯದಲ್ಲಿ ಇಲ್ಲಿಂದ ಬರೆಕೊಳ್ಳುವರೆ ಸಾಧ್ಯವಿಲ್ಲದ ಅಂಥ ಸನ್ನಿವೇಶವು ಸಿಕ್ಕದಂತಾಗುವುದು.

ಈ ಆಫೀಸು ಪುತ್ತೂರಿನಲ್ಲಿ ನಂಬ್ರ ೧೪೮ನೇ ಪುತ್ತೂರು ರೂರಲ್ ಕ್ರೆಡಿಟ್ ಸಂಘದ ಕಟ್ಟಡದಲ್ಲಿ ಸಾಮಾನ್ಯವಾಗಿ ಸಾಯಂಕಾಲ ೫ರಿಂದ ೭೮ ವರೆಗೆ ತೆರೆದಿರಿಸಲಾಗುವುದು.

ಪುತ್ತೂರು,
29-10-34

M. Shiva Rau,
ಪ್ರೆಸಿಡೆಂಟ್ ಡೆಲಿಗೇಟ್ (ಪಂಚ್ಯಾತುಗಳು) ಡಿಸ್ಟ್ರಿಕ್ಟ್ ಬೋರ್ಡ ದ. ಕ.

ಮಡಿಕೇರಿ.

(ನಮ್ಮ ಸ್ಪೆಶಲ್ ಬಾತ್ಮಿದಾರರಿಂದ)

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ (ಉಡುಪಿ) ಲಿಮಿಟೆಡ್, ಇದರ ಶಾಖೆಯೊಂದು ಇದೇ ತಾ. ೧೬ನೇ ಶುಕ್ರವಾರ ಸಂಜೆ ೬ ಘಂಟೆಗೆ ಇಲ್ಲಿಯ ಚೌಕಿನ ಸಮೀಪದ ಮಿ। ಗಿಡ್ಡಶೇಟರ ಹೊಸ ಕಟ್ಟಡದಲ್ಲಿ ಅತಿ ವಿಜೃಂಭಣೆಯಿಂದ ತೆರೆಯಲ್ಪಟ್ಟಿತು. ಕೊಡಗಿನ ಕಮೀಶನರರಾದ ಮಾ। ರಾ। ದಿವಾನ್ ಬಹದ್ದೂರ್ ಕೆ ಚೆಂಗಪ್ಪ, ಬಿ.ಎ., ರವರ ಅಧ್ಯಕ್ಷತೆಯಲ್ಲಿ ಈ ಸಂಬಂಧವಾದ ಸಭೆಯು ಮಡಿಕೇರಿ ಸೆಂಟ್ರಲ್ ಹ್ಯಾಸ್ಕೂಲಿನಲ್ಲಿ ಜರಗಿತು, ಹೆಚ್ಚು ಕಡಮೆ ೫೦೦ ಮಂದಿ ಗೃಹಸ್ಥರು ನೆರೆದಿದ್ದರು. ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರೂ, ಡಿ. ಎಸ್. ಪಿ. ಇವರೂ, ಇನ್ನೂ ಅನೇಕ ಅಧಿಕಾರಿಗಳೂ, ಪ್ಲೇಂಟರರೂ, ವಕೀಲರೂ, ಜಮೀನ್ದಾರರೂ, ಸಾಹುಕಾರರೂ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಅಧ್ಯಕ್ಷರನ್ನು ಆರಿಸಿದ ನಂತರ, ಬೇಂಕಿನ ಅಧ್ಯಕ್ಷರಾದ ಶ್ರೀ ಎಚ್. ಕೇಶವ ಪೈ, ಬಿ ಎ ಬಿ. ಎಲ್. ಇವರು ಬೇಂಕಿನ ಪ್ರಗತಿ, ಉದ್ದೇಶ, ಸಾರ್ವಜನಿಕ ಸೇವಾತತ್ಪರತೆಗಳನ್ನೆತ್ತಿ ಕೊಡಗರೆಲ್ಲರೂ ತಮ್ಮ ಸಾಹಸದಲ್ಲಿ ಕೊಡುಗೈ ಕೊಟ್ಟು ನಡೆದರೆ ಈ ಬೇಂಕು ಇಂತಹ ನೂರಾರು ಶಾಖೆಗಳನ್ನು ತೆರೆಯಲು ಸಮರ್ಥವಾಗುವುದೆಂದು ಆಶ್ವಾಸನೆಯಿತ್ತು, ಅಧ್ಯಕ್ಷರ ಮತ್ತು ಸಭಿಕರ ಸಹಕಾರಕ್ಕಾಗಿ ಅಭಿವಂದನೆಗಳನ್ನು ಸೂಚಿಸಿ ಕುಳಿತರು.

ನಂತರ ಇಲ್ಲಿಯ ಪ್ರಸಿದ್ಧ ಸರಕಾರೀ ವಕೀಲರಾದ ಶ್ರೀ ವೆಂಕಪ್ಪಯ್ಯನವರು ಭಾಷಣ ಮಾಡುತ್ತ—ಬೇಂಕುಗಳ ಕರ್ತವ್ಯ, ಕೊಡಗಿಗೆ ಸುಸಜ್ಜಿತ ಬೇಂಕಿನ ಅವಶ್ಯಕತೆ, ರೈತಾಪಿಜನರಿಗೆ ಅದರಿಂದಾಗುವ ಮಹತ್ತ್ವಯೋಜನಗಳೇ ಮೊದಲಾದ ವಿಷಯಗಳನ್ನೆತ್ತಿ ಸರಸಭಾಷಣ ಮಾಡಿದರು. ಅವರು ತನ್ನ ಭಾವಭರಿತವೂ ಮಧುರವೂ ಆದ ಶೈಲಿಯಿಂದ ತನ್ನ ಆಭಾರವನ್ನು ಸೂಚಿಸಿ ಈ ಬೇಂಕಿನ ಶೀಘ್ರ ಪ್ರಗತಿಯು ಲಕ್ಷ್ಯಣೀಯವೆಂದರು. ಬೇಂಕುಗಳ ಸಾರ್ವಜನಿಕ ಕರ್ತವ್ಯ, ಅವುಗಳು ಲಕ್ಷಿಸಬೇಕಾದ ಕೃಷೀವಲರ ಸಂರಕ್ಷಣೆ ಮೊದಲಾದ ವಿಷಯಗಳನ್ನೆತ್ತಿ ಅಧ್ಯಕ್ಷರು ನುಡಿದು, ಬೇಂಕಿನ ವ್ಯವಹಾರ ಕ್ಷೇತ್ರವು ಇನ್ನಷ್ಟು ವಿಶಾಲವಾಗಲೆಂದೂ, ಈ ಬೇಂಕಿನ ಉದ್ದೇಶಗಳೆಲ್ಲ ಉದಾತ್ತವೂ ಉದಾರವೂ ಇರಲೆಂದೂ ಇದಕ್ಕೆ ತಾನು ಶ್ರೇಯಸ್ಸನ್ನು ಬಯಸುವೆನೆಂದೂ ಹೇಳಿ ಕುಳಿತರು. ಅಂದಿನ ಸಭೆಯು ಮುಕ್ತಾಯವಾಯಿತು.

ಮರುದಿನ ತಾ. ೧೭ನೇ ದಿನ ಈ ಬೇಂಕಿನ ಪತ್ರಾರಂಭೋತ್ಸವದ ಸಂಬಂಧವಾದ ಟೀಪಾರ್ಟಿಯು ಸೆಂಟ್ರಲ್ ಹ್ಯಾಸ್ಕೂಲಿನಲ್ಲಿ ಸುಮಾರು ೩೫೦ ಜನರ ಕೂಡುವಿಕೆಯಿಂದ ಅತ್ಯುತ್ಸಾಹದಿಂದ ಜರಗಿತು. ಬೇಂಕಿನ ಡೈರೆಕ್ಟರರಾದ ಶ್ರೀ ವೈಕುಂಠಬಾಳಿಗರು ಸಭಿಕರನ್ನೂ, ಪ್ರಾಮುಖ್ಯವಾಗಿ ತಮ್ಮೊಡನೆ ಸಹಕರಿಸಿದ ಶ್ರೀ ಚೆಂಗಪ್ಪನವರನ್ನೂ ಅಭಿವಂದಿಸಿದರು.

ಸಭೆಗೆ ಬೇಕಾದ ಕಾಫಿ, ಚಾ, ತಿಂಡಿತಿನಸುಗಳನ್ನು ಮಂಗಳೂರಿನ ತಾಜಾ ಮಹಾಲ್ ಹೋಟೇಲಿನವರು ಅವರವರಿಗೆ ಬೇಕಾದ ರೀತಿಯಿಂದ ಶುದ್ಧವೂ, ರುಚಿಯೂ ಆದ ರೀತಿಯಿಂದ ಒದಗಿಸಿ ತಕ್ಕ ಕೆಲಸಗಾರರ ಮೂಲಕ ಅನುಕೂಲಿಸಿಕೊಟ್ಟು ಸಭೆಯ ಪ್ರಶಂಸೆಗೆ ಪಾತ್ರರಾದರು.

ನೋಟುಗಳು.
NOTES

ಮಂಗಳೂರಿನ ಶ್ರೀ ವೆಂಕಟ್ರಮಣ ದೇವಾಲಯದ ಕೆರೆಗೊಂದು ಯೋಗ್ಯ ಹೆಸರಿಲ್ಲ; "ಕೆರೆ"ಯೆಂದೇ ಕರೆಯಲಾಗುತ್ತದೆ. ಆದುದರಿಂದಲೋ ಏನೋ, ಕಳೆದ ರವಿವಾರ ಚಿಕ್ಕ ಹುಡುಗನೊಬ್ಬನು ಕೆರೆಗೆ ಇದರಲ್ಲಿ ಬಿದ್ದವನು, ಶ್ವಾಸರಹಿತನಾಗಿ ಸಾಯಂಕಾಲ ಎದ್ದನು! ಹಿಂದೊವೆಯೂ ಹೀಗಾಗಿತ್ತೆನ್ನುವರು.

• • •

ಕೆರೆಗಳಿಗೆ ಕಾವಲಿರಿಸುವುದು ವಾಡಿಕೆ. ಆದರೆ, ಈ ಕೆರೆಗೆ ಮಾತ್ರ ಅದೇನೂ ಇಲ್ಲವಾಗಿರಬಹುದು. ಸುಖ ಸ್ನಾನ ಮಾಡಿ ಜೀವಸಹಿತ ಮನೆಗೆ ಮುಟ್ಟಬೇಕಾದರೆ ಕಾವಲು ಮಾತ್ರವಲ್ಲ—ಚಿಕ್ಕ ಹುಡುಗರಾರೂ ಸ್ನಾನ ಮಾಡದಂತೆ ನಿರ್ಬಂಧವಿರಿಸುವ ಕ್ರಮವನ್ನು ವಹಿಸುವವರಿರುವರೇ?

• • •

"ಅನಾರೋಗ್ಯವೇ ನಾನಾ ತಕ್ಸೀರುಗಳಿಗೆ ಕಾರಣ!" ಎಂದು ಸರ್ ವಿಲ್ಲಿಯಮ್ ಅರ್ಬತ್‌ನೋಟ್ ಸಾಹೇಬರ ಒಂದು ಭಾಷಣ! ಜೈಲುಗಳೇ ಚಿಕಿತ್ಸಾಲಯಗಳೆಂಬ ವಿಷಯದಲ್ಲಿ ಸಂದೇಹವೇ?

• • •

ಅನಾರೋಗ್ಯವು ಹೆಚ್ಚಿರುವ ದೇಶವಾವುದು? ಹೆಲ್ತ್ ಇಲಾಖೆಯು ಉತ್ತರ ಕೊಡಬೇಕು.

• • •

'ಸಪ್ತನಗರ'ದ ಕೊನ್ಸ್‌ಟಿಟ್ಯೂಯನ್ಸಿಯಿಂದ ದೊಡ್ಡಣ್ಣ ಶೆಟ್ಟಿಶಾಲಿಯವರು ಚುನಾವಣೆ ಹೊಂದಿದರು—ಎಸೆಂಬ್ಲಿಗೆ! ಸಪ್ತ ಲೋಕಗಳೂ ಕಿವಿತೆರೆದು ಇರಲಿ!

• • •

ರಥಬೀದಿ, ಬ್ರಾಹ್ಮಣ ಕೇರಿ ಮೊದಲಾದ ಕಡೆಗಳಲ್ಲಿನ ಚರಂಡಿಗಳಲ್ಲಿ ಸಂಜೆ ಕಟ್ಟೆಯಿಂದ ಸಾಯಂಕಾಲದ ನಂತರ ಹರಡುತ್ತಿರುವ ದುರ್ವಾಸನೆಯು ಆ ಕಡೆಗಳಲ್ಲಿನ ನಿವಾಸಿಗಳಿಗೆ ಎಷ್ಟು ಸಹನೆಯಾಗುತ್ತದೋ ತಿಳಿದಿಲ್ಲ. ಆದರೆ, ಹಾದಿಹೋಕರಿಗೆ ಖಂಡಿತವಾಗಿ ಇದು ಒಂದು ಮಹಾ ಸಂಕಟವಾಗಿದೆ. ಈ ವಾರ್ಡಿನ ಕೌನ್ಸಿಲರರು ಯಾವ, ಎಲ್ಲಿರುವರು?

• • •

ಧೂಳಿಯ ಸಂಕಟವೂ ಹೆಚ್ಚಿದೆ. ದುರ್ವಾಸನೆಯೊಂದಿಗೆ ಆ ಕೆಟ್ಟ ಧೂಳಿಯೂ ಸೇರಿ ಊರಲ್ಲೆಲ್ಲ ಹರಡಿ, ಹೊಸ ಕೌನ್ಸಿಲಿನ ಗುಣಗಾನವನ್ನು ಮಾಡುತ್ತಿದೆ. ಇದನ್ನು, ನಗರದೊಳಗೆ ಯಾರೂ, ಎಲ್ಲಿ ಕುಳಿತರೂ, ಕೇಳುತ್ತಿರಬಹುದು.

• • •

ಮುನಿಸಿಪಾಲಿಟಿಯವರ ವೋಟಿನ ಗೌಜಿಯು ಮುಗಿದಿದ್ದರೆ ಅವರು ಕೇರಿಗೆ ಒಂದು 'ಸರ್ಪ್ರೈಜ್ ವಿಜಿಟ್' ಕೊಟ್ಟು ಚರಂಡಿಗಳಲ್ಲಿ ನಿಂತಿರುವ ಕೊಳಕು ನೀರಿನ ಸರೋವರವನ್ನು ಬತ್ತಿಸಲೆಂದು ದೇವರೊಡನೆ ಮೊರೆ!

• • •

ಜಸ್ಟಿಸ್ ಪಕ್ಷದ ಅಪಜಯವನ್ನು ಅಪಮಾನವಲ್ಲವೆಂದು ಪಾತ್ರೋರವರು ನಮಗೆ ತಿಳಿಸುತ್ತಾರೆ. ಅಧಿಕಾರದಲ್ಲಿರುವವರು ಒಮ್ಮೊಮ್ಮೆ ಕೆಳಗಿಳಿಯಬೇಕಾದುದೇನೂ ವಿಚಿತ್ರವೆಲ್ಲವೆಂದೂ ಹೇಳುವರು. ಈ ಮಾತು ಯಾರಿಗೆ?

• • •

ನೌಕಾ ಪರಿಷತ್ತಿಗೂ 'ಮರಣದ ಬೀಗ!' "ಬೀಗ"ವು ಜಾಪಾನ್ ಕೈಗಾರಿಕೆಯಂತೆ. ಬ್ರಿಟಿಷರಿಗೊಪ್ಪಿಗೆಯಿಲ್ಲ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 434/1933.
R. I. A. No. 426/1934.
R. E. P. No. 1083/1934.

ಸರಸ್ವತಿ ಅಮ್ಮ ವಗೈರೆ ವಾದಿಗಳು, ಅರ್ಜಿದಾರರು.

ಮತ್ತು

ಕೂಸಪ್ಪಯ್ಯ ವಗೈರಾ— ಪ್ರತಿವಾದಿರು, ರಿಸ್ಪಾಂಡೆಂಟರು

1ನೇ ರಿಸ್ಪೊಂಡೆಂಟ ಕೂಸಪ್ಪಯ್ಯ— ಶಾಸ್ತ್ರೀವಯ್ಯನ ಮಗ ಕುಂಜತ್ತೂರು ಗ್ರಾಮದಲ್ಲಿರುವವ

ಮೇಲ್ಕಂಡ ವ್ಯಾಜ್ಯದ ಡಿಕ್ರಿಯಿಂದ ಕೋರುವ ಅಡವಿನ ಆಸ್ತಿ ಏಲಮಿನ ಬಗ್ಗೆ, ಅರ್ಜಿದಾರಳು ದಾಕ್ಲು ಮಾಡಿದ ಏಲಂ ಇಸ್ತಿಹಾರು ಮಂಜೂರಾತಿ ಕುರಿತು ಸದರಿ ಅಮಲ್ ಜ್ಯಾರಿಯನ್ನು ತಾ 6—12—1934ರಲ್ಲಿ ತನ್ನಗೆ ಇಟ್ಟಿದೆ 1ನೇ ರಿಸ್ಪೊಂಡೆಂಟನ ಆಕ್ಷೇಪಣೆ ಇದ್ದರೆ ಸದರಿ ತಾರೀಕಿನ ಒಳಗೆ ದಾಕ್ಲು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸೋಣಾಗುತ್ತದೆ

ಕಾಸರಗೋಡು 17-1-1934 } **C. Rama Rao,** *Vakil for Petitioner*

ಮೇಲೆ ಕಾಣಿಸಿದ ಅಮಲಜ್ಯಾರಿಯಲ್ಲಿ ಎದ್ರಿಯು ಬಾಬ್ತು ಸ್ಥಿರ ಆಸ್ತಿಯನ್ನು ಏಲಮಿಗೆ ಅಪೇಕ್ಷಿಸಿ ಅರ್ಜಿದಾರನು ಹಾಜರುಪಡಿಸಿದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೂ ಮತ್ತು ಅರ್ಜಿದಾರನು ಏಲಮಿಗೆ ನಿಲ್ಲುವ ಬಗ್ಗೆ ಕೊಟ್ಟ R. E. A 756/34ನೇ ಅರ್ಜಿಯನ್ನು ತನ್ನಿಯ ಬಗ್ಗೂ ಸಹಾ ತಾರೀಕು 29-11-34ಕ್ಕೆ ಮೇಲೆ ಕಾಣಿಸಿದ ಕೋರ್ಟಿನಲ್ಲಿ ಇಟ್ಟಿರುತ್ತದೆ ಈ ಕುರಿತು ಆಕ್ಷೇಪಗಳು ಇದ್ದರೆ ಎದ್ರಿಯು ಸದ್ರಿ ತಾರೀಕಿನಲ್ಲಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದು

ಕುಂದಾಪುರ 19-11-34 } **G. Sanjiva Rao,** B. A., LL. B. *Pleader for the Petitioner*

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಮೃತ ಕೆಂಚಿ ಸುಬ್ಬಣ್ಣನ ಸೊತ್ತಿನ ಬಾಬಿನಲ್ಲಿ

O. P. No. 106/1934

ಎಲ್ಲಮ್ಮ ಮತ್ತು 5 ಜನರು— ಅರ್ಜಿದಾರರು

1ನೇ ಅರ್ಜಿದಾರಳ ಮಗ ಇತ್ತಲಾಗೆ ಮೃತಪಟ್ಟ ಕಾರ್ಕಳ ತಾಲೂಕ, ಕಲ್ಯ ಮುಂಡ್ಕೂರು ಗ್ರಾಮದ ಕೆಂಚಿ ಸುಬ್ಬಣ್ಣನಿಗೆ ದಿ ಒರಿಯಂಟಲ್ ಗವರ್ನಮೆಂಟ್ ಸೆಕ್ಯುರಿಟಿ ಲೈಫ್ ಎಶ್ಯುರೆನ್ಸ್ ಕಂಪನಿ ಲಿಮಿಟೆಡ್, ಇದರಿಂದ ನಂಬ್ರ 828848ನೇ ಪೋಲಿಸಿ ಪ್ರಕಾರ ಬಹಾ ರೂ 995/—ನ್ನು ಪಡೆಯುವ ಹಾಗೆ 1ನೇ ಅರ್ಜಿದಾರಳ ಬಗ್ಗೆ 3ನೇ ಅರ್ಜಿದಾರ ಕೃಷ್ಣಯ್ಯನ ಹೆಸರಲ್ಲಿ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಾಣಿಸಿದ ಅರ್ಜಿಯನ್ನು ದಾಖಲು ಮಾಡಿರುತ್ತಾರೆ ಆ ರೀತಿ ವಾರೀಸು ಸರ್ಟಿಫಿಕೇಟು ಕೊಡುವಲ್ಲಿ ಯಾರಿಗಾದರೂ ಆಕ್ಷೇಪವಿದ್ದರೆ, ಅಂಥಾ ಆಕ್ಷೇಪಗಳನ್ನು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 12-12-1934ನೇ ದಿವಸ ಪೂರ್ವಾರ್ಹ್ನ ಘಂಟೆ 11ಕ್ಕೆ ಜ್ಯಾಹೀರು ಮಾಡಿಕೊಳ್ಳದಿದ್ದಲ್ಲಿ ಆ ರೀತಿ ಸರ್ಟಿಫಿಕೇಟು ಕೊಡಲಾದೀತೆಂದು ಇದಕ್ಕೆ ಸಂಬಂಧಪಟ್ಟ ಸಮಸ್ತ ಜನರಿಗೆ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿದೆ

ಕಾರ್ಕಳ 17-11-34 } **Kabettu Venkappa Hegde**
ಅರ್ಜಿದಾರರ ಕಡೆ ವಕೀಲ್

ಈ ದಿನ ಅತ್ಯುತ್ತಮವಾದ ದಂತ ಮಂಜನವೊಂದನ್ನು ಯತ್ನಿಸಿರಿ

ಬಾಬೂಲಿನ ಸತ್ವವನ್ನೊಳಗೊಂಡಿದೆ



ಮನೆಗೆ ತೆರಳುವಾಗ ದಾರಿಯಲ್ಲಿ ಮೊದಲಾಗಿ ಕಾಣುವ ಯಾವ ಕೆಮಿಸ್ಟ್ ಶಾಪಿಗಾದರೂ ತೆರಳಿ "ಕೊಪ್ರನ್" ದಂತ ಮಂಜನ (ಟೂತ್ ಪೇಸ್ಟ್)ವನ್ನು ಕೇಳಿರಿ ಅಂದೇ ಸಾಯಂಕಾಲ ಅದನ್ನುಪಯೋಗಿಸಲಾರಂಭಿಸಿರಿ ಆಂದರೆ ನೀವು ದಂತ ಆರೋಗ್ಯ ಲಾಭದ ಪಥದಲ್ಲಿ ಪದಾರ್ಪಣ ಮಾಡಿದಂತೆ!

"ಕೊಪ್ರನ್" ದಂತಮಂಜನವು ಕ್ರಿಮಿನಾಶಕರವಾದ ಶೌಚಪಡಿಸುವ ನರಗಳನ್ನು ಬಲಪಡಿಸುವ ವಸಡುಗಳನ್ನು ದೃಢಗೊಳಿಸುವ ಮತ್ತು ಹಲ್ಲುಗಳನ್ನು ಚೆನ್ನಾಗಿ ಶುಭ್ರ ತೊಳೆದು ಹೊಳೆಯಿಸುವ ಔಷಧ ಜಿನಸುಗಳನ್ನೊಳಗೊಂಡಿದೆ ಅದರಿಂದ ನಿಮ್ಮ ಹಲ್ಲುಗಳನ್ನು ತೊಳೆದಾದನಂತರ ಉಂಟಾದ ಶೌಚದ ಉಲ್ಲಾಸದ ಅನುಭವದಿಂದ ನೀವು ಅದನ್ನು ಮನಗಾಣುವಿರಿ

ಅಮೇರಿಕ ಮತ್ತು ಇತರ ವಿದೇಶ ಪ್ರಾಂತ್ಯಗಳಲ್ಲಿ ವಿಕ್ರಯವಾಗುತ್ತಿರುವ ಒಂದೇ ದಂತಮಂಜನವೆಂದರೆ "ಕೊಪ್ರನ್" ಒಂದೇ, ಡಾ ಕೊಲಟ್ಟೂರ್ ಎವರ್ ಎಸ್ ಸಿ ಪಿ ಎಚ್ ಡಿ ಮತ್ತು ಡಾ ದೇಸಾಯಿ ಬಿ ಡಿ ಎಸ್ ಇವರು ಅತಿ ಪರಿಣಾಮಕಾರಿಯಾದ ದಂತಮಂಜನವೊಂದನ್ನು ತಯಾರಿಸುವಲ್ಲಿ ಯಶಸ್ವಿಯಾಗಿರುವರೆಂಬುದಕ್ಕೆ ದೇಶ ವಿದೇಶಗಳಲ್ಲಿನ ಈ ದಂತಮಂಜನದ ಯಶಸ್ಸೇ ಧಾರಾಳವಾದ ಶಾಶ್ವತವಾದ ರುಜುವಾತು.

ಹಲ್ಲುಗಳನ್ನು ಶುಚಿಪಡಿಸುವ ಆನಂದವನ್ನು ಇದನ್ನುಪಯೋಗಿಸಿಯೇ ಅನುಭವಿಸಿರಿ

ಕೊಪ್ರನ್ ದಂತ ಮಂಜನ (ಪೇಸ್ಟ್)

ದೊಡ್ಡ ಮತ್ತು ಮಾಧ್ಯಮ (ಲಾರ್ಜ್ ಮಿಡಿಯಮ್) ಈ ಎರಡು ಸೈಜುಗಳಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

R. E. P. No. 367/1934
O. S. 582/1926

ನಾಗಪ್ಪ ಬೆಳಿಯಾ—ಅಮಲ್ ಜ್ಯಾರಿ ಅರ್ಜಿದಾರ

ಮತ್ತು

ಸುಬ್ಬಣ್ಣ ಬೆಳಿಯಾ- ಎದ್ರಿ

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel
Calicut, 17—6—1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did

Yours faithfully,

(Sd) **A. V. Ramaswami.**

The same service is offered to all We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್, ಚಿಕ್ಕಮಗಳೂರು

ಮುಂಬಾಯಿಯಿಂದ - ಮಂಗಳೂರಿಗೆ
ಮಂಗಳೂರಿನಿಂದ - ಮುಂಬಾಯಿಗೆ

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ — ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಮಿತವ್ಯಯದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

[illegible]

...ಚುನಾವಣೆಗಳಾದರೂ ... ಕಾಂಗ್ರೆಸ್ಸಿನವರೇ ಮುಂದಾಗುವರೇ? ... ಅಥವಾ ... ಆಗುವುದೇ! ... ಸದಸ್ಯರು ... ಎಸೆಂಬ್ಲಿಯಲ್ಲಿ ... ಎಂಬ ... ಪ್ರಶ್ನೆಗಳೆದ್ದಿರುವುದು ಗೋಚರಿಸುತ್ತದೆ. ... ಮತ್ತು ... ಗಳಲ್ಲಾದ ಕಾಂಗ್ರೆಸ್ಸಿನ ಜಯವನ್ನು ... ಈ ಎಲ್ಲಾ ಊಹನೆಗಳು ನಿಜವಾಗುವ ಸಂದರ್ಭವು ಇರುವುದೆಂದು ತೋರಿಬರಬಹುದು! ಆದರೂ ಪರಿಪೂರ್ಣ ಪಂಚಾಮೃತ ತೋರಿ ಬರದ ವಿನಹಾ ಈ ಪ್ರಶ್ನೆಗಳಿಗುತ್ತರವನ್ನು ಕೊಡಲು ಸಾಧ್ಯವಿಲ್ಲ. ಆದರೆ ಸ್ವರಾಜ್ಯ ಪಾರ್ಟಿಯು ಅದೊಂದು ಕಾಲದಲ್ಲಿದ್ದಷ್ಟು ಬಲಾಢ್ಯ ಸ್ಥಿತಿಯಿಂದ ಮುಂದಕ್ಕೆ ಕಾಂಗ್ರೆಸ್ಸು ಕೂಡ ಎಸೆಂಬ್ಲಿಯಲ್ಲಿರುವುದೆಂಬುದನ್ನು ತಿಳಿಸುವರೆ ನಮಗಾರೂ ಬೇಕಾಗಿಲ್ಲ. ಏಕೆ, ಅದಕ್ಕಿಂತಲೂ ಬಲಿಷ್ಟವಾಗಲೂ ಬಹುದು. ಕಾಂಗ್ರೆಸ್ಸು ನ್ಯಾಯವಿಧಾಯಕ ಸಭೆಯಲ್ಲೇನು ಮಾಡಲಿದೆಯೆಂದು ತಿಳಿಯುವ ಮೊದಲು, ಕಾಂಗ್ರೆಸ್ಸು ಎಸೆಂಬ್ಲಿಗೆ ಏಕೆ ಪ್ರವೇಶಿಸಿತೆಂಬುದನ್ನು ತಿಳಿಯಬೇಕಾಗಿದೆ.

ಕಾಂಗ್ರೆಸ್ಸು ಎಸೆಂಬ್ಲಿಯನ್ನೇಕೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರವೇಶಿಸಿತು? ಮೊಂಟ್‌ಫೋರ್ಡ್ ಸುಧಾರಣೆಯು ಪ್ರಚಾರಕ್ಕೆ ಬಂದು ನಾಲ್ಕು ಚುನಾವಣೆಗಳಾದರೂ, ಆ ನಾಲ್ಕನ್ನೂ ಕಾಂಗ್ರೆಸ್ಸು ಬಹಿಷ್ಕರಿಸಿತು. ಈ ಸುಧಾರಣೆಯ ಐದನೇ ಚುನಾವಣೆಯ ಸಮಯ—ಬಹುಶಃ ಈ ಕೊನೆಯ ಚುನಾವಣೆಯ ವೇಳೆ—ಮಾತ್ರ ಕಾಂಗ್ರೆಸ್ಸು ಎಚ್ಚೆತ್ತು ಕೌನ್ಸಿಲ್ ಪ್ರವೇಶಕ್ಕಾಗಿ ನಿರ್ಧರಿಸಿತು. ಮೊದಮೊದಲು ಈ ಪ್ರವೇಶದ ಪ್ರಸ್ತಾವವನ್ನೆತ್ತಿದವರು ನಿರಾಶರಾದರು. ಆದರೆ ಈಗ ಮಾತ್ರ ಕೌನ್ಸಿಲಿಗೆ ಕಾಂಗ್ರೆಸ್ಸು ಒಂದೇ ಉಸಿರಿನಿಂದ ಸೇರಿತೆಂದರೆ—ಸಮಸ್ಯೆಯು ವಿಚಾರಾರ್ಹವಾದುದು. ಸತ್ಯಾನ್ವೇಷಿಗೆ ವಿಷಯವು ಅಗಾಧವಲ್ಲವೆಂದು ತಿಳಿದು ಬರದಿರದು. ಸತ್ಯವು ಕಳೆದ ನಾಲ್ಕು ನ್ಯಾಯವಿಧಾಯಕ ಫಲಿತಾಂಶದಲ್ಲೇ ಅಡಕವಾಗಿದೆ. ಕಾಂಗ್ರೆಸ್ಸು ಬಹಿಷ್ಕರಿಸಿದ ಪ್ರಥಮ ಕಾಂಗ್ರೆಸ್ಸಿನಲ್ಲಿ ಮಿತವಾದಿಗಳ ಸಂಖ್ಯೆಯು ಹೆಚ್ಚಾಗಿ, ಅದು ಅವರಿಂದಲೇ ಅಧಿಕರಿಸಲ್ಪಟ್ಟಿತು. ಅವರವರ ಉದ್ದೇಶ ಸಾಧನೆಗಳೆದ್ದುವಾದರೂ ಅವರು ರಾಷ್ಟ್ರಭಕ್ತಿಯಲ್ಲಿ ಕಡಿಮೆಯವರಾಗಲಿಲ್ಲ. ಮೇಲಾಗಿ, ಸರಕಾರವೂ ಕೂಡಾ ಅವರನ್ನು ಪ್ರೋತ್ಸಾಹಿಸಿ ಸತ್ಪಥದಲ್ಲಿ ನಡೆವಂತೆ ಮಾಡುವುದಕ್ಕೆ ವಿಶಾಲ ಭಾವಪ್ರದರ್ಶನದಲ್ಲೇ ಆಸಕ್ತವಾಗಿದ್ದಿತು. ಮೊದಲಿನ ಈ ಸಭೆಯು ಬಣ್ಣಗೆಟ್ಟು ಹೋಗಿದ್ದರೂ ಅದು ನಿಂದಾಸ್ಪದವಾಗಿದ್ದಿಲ್ಲ. ಎರಡು ಮೂರನೇ ಚುನಾವಣೆಗಳಲ್ಲಿ ಸ್ವರಾಜಿಸ್ಟರಿಂದು

[illegible] ... ಆಗಿ, ಇದರಿಂದ ಮುಂದೂ ... ಆಗಲಿಲ್ಲ. ಅದರ ಮೇಲೆ ಸಾವಿರಾರು ರಾಜಕೀಯ ಕೆಲಸಗಳನ್ನು ಮುಂದರಿಸಲಿಲ್ಲ ಯಾಗುವ ಅನೇಕ ಶಾಸನಗಳೂ, ಠರಾವುಗಳೂ ಹೊರಬಿದ್ದು, ಅವರ ಕೃತಿಯಿಂದಾಯಿತು. ಇದನ್ನು ಕಂಡು ಪಂಡಿತ ನೆಹರೂರವರು ಅಂತರ್ಯದ ಕೆಲಸವನ್ನು ಮರಿತು ಬಾಹ್ಯ ಕೆಲಸವನ್ನಾರಂಭಿಸಿ, ಜನತೆಯನ್ನು ಮೋಹಿಸುವಂತಾದರು. ಅವರು ಈ ಸಭಾರಂಗವನ್ನು ಅಲಕ್ಷಿಸಿದ ಪರಿಣಾಮವೇನಾಯಿತು? ನಾಲ್ಕನೇ ಎಸೆಂಬ್ಲಿಯಲ್ಲಿ ನಿಸ್ವಾರ್ಥದಿಂದ ದೂರವಾಗಿದ್ದ ಅನೇಕರು ಎಸೆಂಬ್ಲಿಯೊಳಗಾದರು. ಹೀಗಾಗಿ ಬಳಗಿದ್ದ ಕೆಲವರಿಗೂ ಕೂಡಾ ಸಮರ್ಪಕ ಕೆಲಸವನ್ನಾರಂಭಿಸಲಾಗದ ಸಂಕಷ್ಟ ಪರಿಸ್ಥಿತಿಯೊದಗಿತು. ಕಾಂಗ್ರೆಸ್ಸಿನ ಪ್ರಕೃತದ ಕೌನ್ಸಿಲ್ ಪ್ರವೇಶದ ನಿರ್ಧಾರವು ಚಿರಕಾಲ ಉಳಿಯುವುದೋ ಏನೆಂದು ಯಾರೂ ಹೇಳಲಾರರಾದರೂ ಯಾವ ಕಾಲದಲ್ಲಾದರೂ ಹಿಂದೂಸ್ಥಾನದ ಒಂದು ಸಾವಿರ ಕಾಂಗ್ರೆಸ್ ಪಕ್ಷೀಯರು ನ್ಯಾಯವಿಧಾಯಕ ಸಭೆಯನ್ನು ಮುತ್ತಲು ಎಂದೂ ಕಷ್ಟವಾಗದೆಂದು ಮಹಾತ್ಮಾಜೀಯವರು ಹೇಳುವುದನ್ನು ಕೇಳಿದರೆ ಧೈರ್ಯವುಂಟಾಗುವುದು.

ಕಾಂಗ್ರೆಸ್ಸು ಕೌನ್ಸಿಲನ್ನೇಕೆ ಪ್ರವೇಶಿಸಿತು? ನೂತನ ಯೋಜನೆಯೇನೂ ಅದಕ್ಕೆ ಹೊಳೆಯಿತೆ? ಇಲ್ಲ.—ಇನ್ನು ಮುಂದಕ್ಕಾಗಲಿರುವ ಅಘಾತವನ್ನು ತಡೆಯುವುದಕ್ಕಾಗಿ. ಅಸಾಧ್ಯವೆನಿಸಿದುದಕ್ಕೆ ಅದು ಕೈಯಿಕ್ಕಲಿಲ್ಲ. ಅದು ಚುನಾವಣೆಯ ಒಂದು ಕ್ರಮವನ್ನು ಪ್ರಕಟಿಸಿ ಎರಡು ವಿಷಯಗಳ ಮೇಲೆ ಬಲವನ್ನು ಹಾಕಿತು. ಶ್ವೇತಪತ್ರ ನಿರಾಕರಣೆ;(೨) ಸ್ವತಂತ್ರ ನ್ಯಾಯವಿಧಾಯಕ ಸಭಾರಚನೆ. ಇವೆರಡು ವಿಷಯಗಳಲ್ಲದೆ ಬೇರಾವ ವಿಧಾಯಕ ಕಾರ್ಯಗಳ ಮೇಲೂ ಅದರ ಲಕ್ಷ್ಯವಿಲ್ಲ. ಅದು ದೇಶದ ರಕ್ಷಣೆಗಾಗಿ,—ದೇಶಹಿತದೃಷ್ಟಿಯಿಂದ ಅಲ್ಲಿರುವುದು. ದೇಶಕ್ಕೆ ಹಿತಕರವಲ್ಲದ ಶಾಸನಗಳಾಗಲು ಅದು ಬಿಡಲಾರದು. ಆಗಿರುವವುಗಳನ್ನು ರದ್ದುಗೊಳಿಸಲೆತ್ನಿಸುವುದು.

ಸಾರ್ವಜನಿಕರ ಕೇಳಿಕೆಗಳಷ್ಟಿದು ಮುಂದುವುದು. ಇದನ್ನು ಸರಕಾರವೂ ಅಲಕ್ಷಿಸಲಾರದು.

(ಜನೇ ಪುಟದಿಂದ ಮುಂದುವರಿದುದು.)

ಈ ವಿಷಯವಾಗಿ ಅಶಾಂತಿಯು ಇನ್ನೂ ಮುಂದರಿಯುವುದು. ಇದರಿಂದ ನಮಗೆ ಪ್ರಯೋಜನವಾಗಲಾರದು. ಈ ದೇಶದ ಭಾವೀ ಪರಿಸ್ಥಿಗೆ ಹೆಚ್ಚಿನ ಸಮಯವನ್ನು ವ್ಯಯ ಮಾಡಲು ನಿಮಗೆ ಅಸಾಧ್ಯವೆಂದು ನನಗೆ ತಿಳಿದಿರುತ್ತದೆ. ಆದರೂ ನಾನು ಕೆಲವು ತಿಂಗಳುಗಳ ಹಿಂದೆ ಬರೆದಿದ್ದ ಪತ್ರವು ತಲಸಿರಬಹುದು.

[illegible] ... ಸರಕಾರವನ್ನೆತ್ತಿ ... ಇಲ್ಲದೆ ... ಒಂದೂದೇಶದ ರೀತಿಯನ್ನು ... ಉದ್ಧಾರ ದಾನ ಮಾಡಲೂ ಇದು ಸುಸಂದರ್ಭವಾಗಿರುತ್ತದೆ. ಹೀಗೆ ಮಾಡುವುದರಲ್ಲಿ ನಾವು ಸ್ವಲ್ಪ ಸಂಕಟವನ್ನು ಸಹಿಸಬೇಕಾಗುತ್ತದೆ. ಆದರೂ ಅದನ್ನು ಅನುಭವಿಸಬೇಕಾಗಿದೆ. ಪರಿಣಾಮವು ನಿಜವಾಗಿಯೂ ನೆಟ್ಟಗಾಗುವುದು. ಹೀಗೆ ಅನಗತ್ಯವಾಗಿ ಬರೆದುದಕ್ಕಾಗಿ ಕ್ಷಮಿಸಿರಿ, ಆದರೂ ತಮ್ಮನ್ನು ಅಭಿನಂದಿಸುವುದಕ್ಕಾಗಿಯೂ, ಧುರೀಣರೆಲ್ಲ ಭೇದಭಾವವನ್ನು ಮರೆತು ತಮಗೆ ಸಹಕಾರವನ್ನೀಯಲೆಂದು ಹಾರೈಸುವುದಕ್ಕಾಗಿಯೂ ಈ ಪತ್ರವನ್ನು ಬರೆದಿರುವೆನು.

ವಿಲ್ಲಿಂಗ್ಡನ್.

ನೋಟೀಸು.

ಕಾರ್ಕಳ ಡಿ. ಮುನ್ಸೀಫ್ ಕೋರ್ಟಿನಲ್ಲಿ.

O. P. 107/34.

ಅನಂತಯ್ಯ ಬಾರಿ ಸಹಾ—ಅರ್ಜಿದಾರರು

1ನೇ ಅರ್ಜಿದಾರನ ತಮ್ಮ 2ನೇ ಅರ್ಜಿದಾರನ ಅಣ್ಣ ಶಿದ್ದಪ್ಪ ಬಾರಿಯು ಮೃತಪಟ್ಟಿರುವುದರಿಂದ ಅವರಿಗೆ (ಕಾರ್ಕಳ ತಾಲೂಕು ವಾಲ್ಪಾಡಿ ಗ್ರಾಮದ) ಬೊಮ್ಮಣ್ಣ ಪೂಜಾರಿ ಎಂಬವನು ತಾ. 7-9-1931ರಲ್ಲು) ಬರೆಸಿ ಕೊಟ್ಟ ದಿವಾಂಡು ನೋಟಿನ ಅಸಲು ಬಡ್ಡಿ ಹಣ ವಸೂಲಿಗೆ ಅರ್ಜಿದಾರರ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕಾಗಿ ಮಾಡಿದ ಅರ್ಜಿಯು ತಾ. 20-12-'34ಕ್ಕೆ ಇಟ್ಟಿರುವುದರಿಂದ ಆಕ್ಷೇಪಿಸುವವರು ಆ ದಿನ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಆಕ್ಷೇಪಿಸಬಹುದು.

ಕಾರ್ಕಳ, 20-11-'34.

P. Ramachandra Rau.
ಅರ್ಜಿದಾರರ ಕಡೆ ವಕೀಲ್.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಸ್ಮಾಲ್ ಕೊಸ್ ನಂಬ್ರ 248/1934

ಶ್ರೀನಿವಾಸ ಭಟ್ಟ-ವಾದಿ

ಮತ್ತು

ರಾಮಚಂದ್ರ ಭಟ್ಟ ನರಸಿಂಹ ಭಟ್ಟ ಮಗ—ಕಾರ್ಕಳ ತಾಲೂಕು ಕಡಂದಲೆ ಗ್ರಾಮಸ್ತ—ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿ ರಾಮಚಂದ್ರ ಭಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಮೇಲ್ಕಂಡ ವ್ಯವಹರಣೆಯಲ್ಲಿ ವಾದಿಯು ತನ್ನ ಒಳಗೆ ಮೂಲಗೇಣಿ ಹಕ್ಕಿನಿಂದ ನೀವು ಅನುಭವಿಸಿ ಬರುವ ಕಾರ್ಕಳ ತಾಲೂಕು ನಂದಳಿಕೆ ಗ್ರಾಮದ ಪಟ್ಟಾ ನಂಬ್ರ 1ನೇ ಸರ್ವೆ ನಂಬ್ರ ... [illegible] ... ಮತ್ತು ... ಬಾಬ್ತು ... ಮೂಲಗೇಣಿ ... ಮಾಡಿಕೊಳ್ಳುವರೆ ದಾಖಲು ಮಾಡಿದ ಸಾಕ್ಷಿಗೆ ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ನೀವು ಸ್ವತಹ ಯಾ ವಕೀಲರ ಮುಖಾಂತರ ಇದೇ 1934ನೇ ಇಸವಿ ನವೆಂಬರ ತಿಂಗಳ ತಾರೀಖು 26ನೇ ಸೋಮವಾರ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ತಿಳಿಸಬಹುದು. ಸದ್ರಿ ದಿವಸ ಸದ್ರಿ ಕೋರ್ಟಿನಲ್ಲಿ ಹಾಜರಾಗುವರೆ ತಪ್ಪಿದಲ್ಲಿ ಸದ್ರಿ ನಂಬ್ರದ ತನ್ನಿಯು ನಿಮ್ಮ ಗೈರು ಹಾಜರಿಯಲ್ಲಿ ತೀರ್ಪು ನೀಡಲು ಮಾಡೋಣಾದೀತೆಂತ ತಿಳಿದಿರತಕ್ಕದ್ದು.

Karkala, 16-11-34.

K. Sadasiva Bhat,
Advocate,
Counsel for Plaintiff.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. S. No. 127/1933.

R. E. P. No. 1002/1934.

R. E. A. No. 731/1934.

ನರಸಿಂಹ ಗಡಿಯಾರ—ವಾದಿ ಅರ್ಜಿದಾರ

ಮತ್ತು

ಶ್ರೀನಿವಾಸ ರಾವ್—ಗೋಪಾಲಕೃಷ್ಣಯ್ಯನವರ ಮಗ—ಉಡುಪಿ ತಾಲೂಕು ನಡ್ಸಾಲ್ ಗ್ರಾಮದ ಬೇಂಗ್ರೆ ಎಂಬಲ್ಲಿರುವವ—ಪ್ರತಿವಾದಿ ಎದ್ರಿ.

ಇವರೊಳಗೆ

ಸದ್ರಿ ಡಿಕ್ರಿಯ ಮೇಲೆ ಅರ್ಜಿದಾರನು ಮೇಲಿನ ಅಮ್ಲಜ್ಯಾರಿಯನ್ನು ದಾಖಲ್ಲು ಮಾಡಿ ಡಿಕ್ರಿಯಿಂದ ತೋರುವ ಪ್ರತಿವಾದಿಯು ಬಾಬ್ತು ಸ್ಥಿರಾಸ್ತಿಯನ್ನು ಏಲಮಿಗೆ ಅಪೇಕ್ಷಿಸಿ ಇಸ್ತಿಹಾರು ದಾಖಲ್ಲು ಮಾಡಿರುತ್ತಾನೆ. ಮತ್ತು ಏಲಂ ಸಮಯದಲ್ಲಿ ಬಿಡ್ ಮಾಡುವರೆ ಮತ್ತು ಹಾಗೆ ಬಿಡ್ ಮಾಡಿದ ಐವೇಜು ವೈಸಲೆ ಹಣದಲ್ಲಿ ಮುಜ್ರೆ ಮಾಡುವಂತೆ ಪರ್ಮಿಶನ್ ಕೊಡ ಕೇಳಿ ಸಹ ಅರ್ಜಿ ದಾಖಲ್ಲು ಮಾಡಿರುತ್ತಾನೆ. ಸದ್ರಿ ಅಮ್ಲಜ್ಯಾರಿಯಲ್ಲಿ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವರೆ ಮತ್ತು ಸದ್ರಿ ಬಿಡ್ ಅರ್ಜಿಯ ಕುರಿತು ಎದ್ರಿಗೆ ನೋಟೀಸಿನ ಬಗ್ಗೆ ಸಹಾ ತಾ. 8-12-1934ಕ್ಕೆ ಸದ್ರಿ ಕೋರ್ಟಿನಲ್ಲಿ ಇಡಲ್ಪಟ್ಟಿದೆ. ಸದ್ರಿ ದಿವಸ ಎದ್ರಿಯು ಕೋರ್ಟಿಗೆ 11 ಘಂಟೆಗೆ ಸ್ವತಹಾ ಅಥವಾ ವಕೀಲರ ಮುಖಾಂತರ ಹಾಜರಾಗಿ ಆಕ್ಷೇಪಣೆ ಏನಾದರೂ ಇದ್ದರೆ ಜ್ಯಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಎದ್ರಿಯನ್ನು ಗೈರ್ವಾ ಮಾಡಿ ಸದ್ರಿ ವ್ಯವಹರಣೆಯು ಮುಂದರಿಸಲ್ಪಡುವುದು ಎಂದು ಕೋರ್ಟು ಹುಕುಂಪ್ರಕಾರ ಎದ್ರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

ಕಾರ್ಕಳ, 16-11-'34.

ಯಂ. ಯಸ್. ಅಧಿಕಾರಿ,
ಅರ್ಜಿದಾರನ ಕಡೆ ವಕೀಲ್.

The Popular Insurance Company, Ltd.

Head Office:—MANGALORE, S. India,

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Company can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rau, who has developed in him a great deal of life Insurance sense.........

ನಾಯಕ್ ಬ್ರದರ್ಸರ
ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃದ್ವೀಕಾಸವ (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದನಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.
ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ
ಮಲಬಾರು ಸೋಪ್

ಮಲಬಾರು ಸೆಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.
ಪ್ರೊಪ್ರೈಟರ್:— ಸನ್ ಬೆಂಡ್ ಕೂಡಿಯ ಪ್ರಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.
ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯು ಏನೆಂದು ನೋಡಿರಿ. ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ
ಕಾಮಶಾಸ್ತ್ರವನ್ನೋದಿರಿ.
Agents:—Shah Company, Mangalore.
„ Pearl & Sons, Mangalore.
Atank Nigrah Pharmacy,
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ಸಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

A Recurring Pleasure *To Smoke them*

REGISTERED



TRADE MARK

Mangalore Darbar Beedies

Thousands enjoy them daily all over India.
When buying see our Trade Mark!

Regd. Trade Mark.

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!
ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ವಹಿಸುವ ಬೀಡಿಗಳಿರುತ್ತವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.
ಇವರಿಂದ ತಯಾರಿಸಲ್ಪಟ್ಟವುಗಳು.

ಡಾಕ್ಟರ ವಾಮನ ಗೋಪಾಳರವರ

ಅಪಿಡಾಯಿದ್ದ ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪಂಮೌಷಧ,
೪೫ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳಿದ್ದಾರೆ.
ಡಾ॥ ಗೌತಮ ರಾವ್ ಕೇಶವರವರ
ಫೋಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.
ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಯಿ ೪.
ಸ್ಟಾಕಿಸ್ಟ: ಪೈ ಕಂಪೆನಿ, ಮಂಗಳೂರು.
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.]

[illegible]

ಪ್ರಚಲಿತ ಸಮಾಚಾರ.

ತುಂಡು ಸುದ್ದಿ.

[illegible]

[illegible] ಹೋಗಿ, [illegible] ಒಂದು [illegible] ಅವರ [illegible] ಮಾಡುವಂತೆ [illegible] ತಂದಿದ್ದರೆಂದೂ, [illegible] ಗಿರಬೇಕೆಂದೂ ಊಹಿಸಲಾಗಿದೆ.

ವಿಷವಿದ್ದರೇನಾಯಿತು?–

"ನಾವೂ ಅಸಂಖ್ಯಾತಕ್ಕವನ್ನು ಕಂಡಿದೆ!—ಗೋಹಟಿಯ ಬಳಿ, ಬಾರ್ ಪೇಟಾ ಎಂಬಲ್ಲಿ, ಓರ್ವ ಸಾಧುವಿನ ಗೋರಿಯ ಮೇಲೆ ಅನೇಕ ಹುಳುವಿದ್ದು ಯಾವ ಪ್ರಾಣಿಗಳಿಂದಲೂ ಅಲ್ಲಿಂದ ಕದಲುವುದಿಲ್ಲ. ಅದನ್ನು ನೋಡಬಂದ ಜನರು ಕೈನೀಡಿದರೆ, ಮುಟ್ಟಿದರೆ, ಕೆಣಕಿದರೆ— ಕಚ್ಚುವುದಿಲ್ಲ. ಇದೊಂದು ಮಹಾ ಅದ್ಭುತವಾಗಿದೆ. ಮೃತ ಸಾಧುವಿನ ಮಹಿಮೆಯೆನ್ನುವರು ಜನರು. ಆ ಸಾಧುವು ಕೆಲವೇ ಕಾಲದ ಹಿಂದೆ, ೯೦ನೇ ವಯಸ್ಸಿನಲ್ಲಿ ಕಾಲವಾಗಿದ್ದನು. ಅವನು ಮಹಾ ಮಹಿಮನಾಗಿದ್ದನೆಂದೂ, ಹಿಂದೂದೇಶದಲ್ಲಿನ ಯಾತ್ರಾ ಸ್ಥಳಗಳನ್ನೆಲ್ಲ ಸಂಚರಿಸಿ, ಏಳು ವರ್ಷಗಳ ಹಿಂದೆ ಬಾರ್‌ಪೇಟಾದಲ್ಲೊಂದು ಆಶ್ರಮವನ್ನು ಕಟ್ಟಿಕೊಂಡು ಇದ್ದವನು. ತನ್ನ ಮರಣದ ದಿನವನ್ನು ಅವನು ಸ್ಪಷ್ಟವಾಗಿ ತಿಳಿಸಿದ್ದನಂತೆ!

ಪ್ರಪಂಚಕ್ಕೇ ಹಿರಿಯ ಅಜ್ಜ!

ಟರ್ಕಿಯ ಝಾರೋ ಆಗನ ನಂತರ ಈಗ ನಾವು ಜಾರ್ಜಿಯದ ಅರ್ಟಿಮುಲಾಜಿಯಾಶ್ವಿಲ್ಲಿ ಎಂಬಾತನೊಬ್ಬನ ಹೆಸರನ್ನು ಕೇಳುತ್ತಿದ್ದೇವೆ—ಪ್ರಪಂಚದ ಅಜ್ಜನೆಂದು! ಈತನ ವಯಸ್ಸೀಗ ೧೫೦. ಈತನ ಜೀವಮಾನದಲ್ಲಿ ನಡೆದುದನ್ನು ಬರೆದುಕೊಳ್ಳಲು ಮಾಸ್ಕೋ ನಗರದಿಂದ ಐತಿಹಾಸಿಕ ವಿದ್ವನ್ಮಂಡಲಿಯ ಪ್ರತಿನಿಧಿಗಳು ಹೊರಟಿರುವರು. ೧೮೦೧ರಲ್ಲಿ ಜಾರ್ಜಿಯಕ್ಕೆ ರಷ್ಯದ ಸೈನಿಕರು ದಾಳಿಯಿಟ್ಟುದನ್ನೀತನು ಚೆನ್ನಾಗಿ ಬಲ್ಲನು. ಈ ಅಜ್ಜನ ಹಿರೇ ಮಗನ ಪ್ರಾಯ ೮೦ ವರ್ಷ ಮಾತ್ರ.

ಇನ್‌ಫ್ಲುಯಂಜಾ ರೋಗಾಣುಗಳು!

ಇವನ್ನೀಗ, ಇಲಿಗಳ "ಸಹಾಯ"ದಿಂದ ಪರಿಶೋಧಿಸಿ ಈ ರೋಗದ ನಿರ್ಮೂಲನಕ್ಕೆ ಔಷಧಿಯನ್ನು ಕಂಡುಕೊಳ್ಳುವ ಯತ್ನಗಳು ಬ್ರಿಟಿಷ್ ಡಾಕ್ಟರರಿಂದ ನಡೆಯುತ್ತಿವೆ. ಇನ್‌ಫ್ಲುಯಂಜಾ ರೋಗದೀಡಿತ ಇಲಿಗಳಲ್ಲಿ ಸೇರಿದರೆ, ಮನುಷ್ಯರಂತೆ ಇಲಿಗಳೂ ಆ ರೋಗಕ್ಕೆ ತುತ್ತಾಗುವುವು. ಇಲಿಗಳನ್ನೀಗ, ಈ ರೋಗಕ್ಕೆ ಯೋಗ್ಯ ಚಿಕಿತ್ಸೆಯನ್ನು ಕಂಡುಹಿಡಿವ ಸಲುವಾಗಿ ಉಪಯೋಗಿಸುವರು.

ಸೂರ್ಯರಶ್ಮಿಯಿಂದ ವಿದ್ಯುಚ್ಛಕ್ತಿ!

ಅದು ಕೇವಲ ವೈಜ್ಞಾನಿಕರ ಕನಸುಮಾತ್ರವಾಗಿತ್ತು ಈಗ ಫಲಕ್ಕೆ ಬರುವಂತಿದೆ. ಅಮೇರಿಕದಲ್ಲಿ ಆ ವಿಷಯಕವಾದ ಶೋಧಗಳನ್ನು ಪ್ರೊಫೆಸರ್ ಫಿಂಕ್ ಎಂಬವರು (ಕೊಲಂಬಿಯಾ ವಿಶ್ವವಿದ್ಯಾಲಯದವರು) ನಡೆಸಿದ್ದು,—ಸೂರ್ಯರಶ್ಮಿಯಿಂದ ದೊರೆಯುವ ಶಕ್ತಿಯನ್ನಿಲ್ಲಿ ಈಗ ಯಂತ್ರಗಳನ್ನು ಚಲಾಯಿಸಲು ಉಪಯೋಗಿಸುವಂತೆ ಬರುವುದೆಂಬ ತಮ್ಮ ಭರವಸೆಯನ್ನು ಪ್ರಕಟಿಸಿರುವರು.

ಒಂದು ಬೆಕ್ಕಿನ ಚರಿತ್ರವು—

—ಅದ್ಭುತಕರವೆಂದು [illegible] ಪ್ರಕಟವಾಗಿದೆ. ಅದು, ೧೬ ಅಡಿಗಳಷ್ಟು ಎತ್ತರ ಪ್ರಾಸಾದದಿಂದ ಕೆಲಹದಿ ದೂರದ ಮತ್ತೊಂದು ಪ್ರಾಸಾದಕ್ಕೆ ನೆಗೆವಾಗ ತಪ್ಪಿ ೧೬೦ ಅಡಿ ಕೆಳಗಿನ ಸಿಮೆಂಟ್ ನೆಲಕ್ಕೆ ಬಿತ್ತು. ಅಲ್ಲಿಂದೆದ್ದು, ಸ್ವಲ್ಪ ದೂರ ಹೋಗಿ ಸುಖನಿದ್ರೆ ಮಾಡಿತು. ಕೆಲ ನಿಮಿಷಗಳ ನಂತರ ಅಲ್ಲಿಂದೆದ್ದು ತನಗೆ ಬೇಕಾದ ಮತ್ತೊಂದು ಪ್ರಾಸಾದಕ್ಕೆ [illegible] ಹೋಯಿತು! ಬೆಕ್ಕುಗಳು ನೆಲಕ್ಕೆ ಬೀಳುವಾಗ ಕಾಲ ಮೇಲಾಗಿ ಬೀಳುವುದಿಲ್ಲ ತಾನೆ!

ಇದೊ ಒಂದು ಆಶ್ಚರ್ಯವೇ!

ಸಿಪ್ರಸ್ ದ್ವೀಪದ ಸಂತೆಯಲ್ಲಿ, ವಧುಗಳು ಕ್ರಯಕ್ಕೆ ದೊರೆವುವಂತೆ. ೨೦ರಿಂದ ೧೦೦ ಪವನುಗಳ ಬೆಲೆಗೆ

[illegible]

[illegible] ಪ್ರಯೋಗ [illegible] ತನ್ನ [illegible] ಕಾಲಿಡುತ್ತಿದ್ದವು. [illegible] ಇನ್ನು [illegible] ನೋಡುತ್ತಿರುವೆ. ಸಾವಿರ ಪ್ರಯೋಗಮಾಡುವುದಾದರೆ ಅಲ್ಲಿ Iನೇ ತರಗತಿ [illegible] III ನೇ ತರಗತಿಗೆ ರೂ ೧೨ ಮಾತ್ರ.

ಈ ಅದ್ಭುತವೇನು?

ಅಮೇರಿಕದ ಒಂದು ನಗರದಲ್ಲಿ, ೧ ಸಾವಿರ ರಾತ್ತಲ ಭಾರದ ಯಂತ್ರ ಮತ್ತು ೫೦೦ ರಾತ್ತಲ ಭಾರದ ಮರದ ತುಂಡು ಸಹಿತ ಒಂದು ಮರದ ಕಾರ್ಖಾನೆಯು ಒಂದು ದಿನ ರಾತ್ರಿ ಕಾಣೆಯಾಗಿದೆ. ಅಲ್ಲಿ ಭೂಕಂಪವೇನೂ ಆಗಿಲ್ಲ. ಇದರ ರಹಸ್ಯವನ್ನು ಪೋಲೀಸರು ಭೇದಿಸುವ ಯತ್ನದಲ್ಲಿರುವರು.

ಕನಸು ನಿಜವಾಗುವುದುಂಟು.

ಹಾಗೆಂದು ನಾವು ಆಗಾಗ್ಗೆ ಕೇಳುತ್ತಿದ್ದೇವೆ. ವಿಶೇಷವಾಗಿ ಪೂರ್ವಕಾಲದಲ್ಲಿ ದೇವತೆಗಳ ಮೂರ್ತಿಗಳು ಕಾಡಿನಲ್ಲೋ ಗುಡ್ಡದಲ್ಲೋ ಸಿಗುವ ಮೊದಲು ಪವಿತ್ರರಿಗೆ ಸ್ವಪ್ನಗಳಾಗುತ್ತಿದ್ದುವಂತೆ. ಅಂತಹದೇ ಸ್ವಪ್ನ ಕತೆಯೊಂದು ಮುಂಬಾಪುರಂ ಎಂಬ ಹಳ್ಳಿಯಿಂದ ಕೇಳಿಬರುತ್ತಿದೆ. ಆ ಹಳ್ಳಿ ನಿವಾಸಿಯೊಬ್ಬನಿಗೆ ದೇವೀ ಭಗವತಿಯು ಸ್ವಪ್ನದಲ್ಲಿ ಪ್ರತ್ಯಕ್ಷಳಾಗಿ, ಒಂದು ದೇವಾಲಯವು ಮಣ್ಣಿನಲ್ಲಿ ಹೂತಿರುವಂತೆ ತಿಳಿಸಿ, ಸ್ಥಳವನ್ನು ತೋರಿಸಿಕೊಟ್ಟಳಂತೆ. ಈತನ ಕನಸನ್ನು ನಂಬಿ ಜನರು ಆ ಸ್ಥಳದಲ್ಲಿ ಅಗೆದಾಗ, ಮೂರು ಮೂರ್ತಿಗಳಿರುವ ಒಂದು ಶಿವಾಲಯವು ದೊರೆತಿದೆ!

ಒಂದು ಸಾವಿರ ಟನ್ ತೆಂಗಿನೆಣ್ಣೆಯು–

—ಹೊಸ ಸ್ಟೀಮರು ದರಗಳಿಂದಾಗುವ ನಷ್ಟವನ್ನು ತಪ್ಪಿಸಲು, ಇದೇ ತಾ ೧೫ರಲ್ಲಿ, ಕೊಲೊಂಬೊದಿಂದ ಕಲ್ಕತ್ತೆಗೆ ಹೊರಟಿತು. ಹಿಂದೆಂದೂ ಒಂದೇ ಸ್ಟೀಮರಿನಲ್ಲಿ ಒಮ್ಮೆಗೇ ಇಷ್ಟು ಎಣ್ಣೆ ರಫ್ತಾದುದಿಲ್ಲ. ಈ ದಿನ ಮಧ್ಯರಾತ್ರಿಯಿಂದ ಟನ್ನಿಗೆ ರೂ [illegible] ಇರಂತಿದ್ದ ದರವು ರೂ [illegible] ಕ್ಕೆ ಹೆಚ್ಚಿಸಲಾಗುತ್ತಿದೆ.

ಮುಂಬಾಯಿಯ ಕೊಂಗ್ರೆಸ್ ಪಕ್ಷವು

ಚುನಾವಣೆಗಳಲ್ಲಿ ವಿಶೇಷ ಆಸಕ್ತಿಯಿಂದ ಭಾಗವಹಿಸುತ್ತಿದೆ. ಬರುವ ಮುಂಬಾಯಿ ನಗರಸಭೆಯ ಚುನಾವಣೆಗಳಲ್ಲೂ ಕೊಂಗ್ರೆಸ್ ಉಮೇದ್ವಾರರನ್ನು ಕಳುಹಬೇಕೆಂದು ಅಲ್ಲಿ ಆಲೋಚನೆಯಾಗುತ್ತಿದೆ. ಚುನಾವಣೆಗಳು ಜನವರಿ ತಿಂಗಳಲ್ಲಿ ನಡೆವುವು. ಸ್ಥಾನಗಳು ಒಟ್ಟು ೧೧೨. ಅವುಗಳಲ್ಲಿ ೭೬ ಸ್ಥಾನಗಳು ಚುನಾವಣೆಯಿಂದ ತುಂಬಲ್ಪಡುವಂತವು. ಕೊಂಗ್ರೆಸ್ ವಾಲರೇ ಮೇಯರ್‌ನ್ ಪದವಿಗೂ ಆರಿಸಿ ಬರಬಹುದಾದ ಸಂಭವವಿದೆಯೆಂದೂ ಸುದ್ದಿ. ಈ ಸಂಬಂಧವಾಗಿ ಶ್ರೀ ಕೆ. ಎಫ್. ನರಿಮನ್ನರ ಹೆಸರು ಸೂಚಿತವಾಗಿದೆ.

ಮನುಷ್ಯನು ಮೃಗವಾಗುವನು!

ಹಣವು ಏನನ್ನು ಮಾಡಬಲ್ಲುದು ಎಂಬುದರ ಒಂದು ವ್ಯಂಗ್ಯಚಿತ್ರವು ಈ ಕೆಳಗಿನ ಕತೆಯಿಂದ ತಿಳಿದುಬರುವುದು. ರೂಹ್ರ್ ಪ್ರಾಂತ್ಯದ ಒಬ್ಬ ಸರ್ಕಸ್ ಮನೇಜರನು, ತನ್ನ ಸಹಾಯಕ ಹುಡುಗನೊಬ್ಬನನ್ನು ಮೃಗದ ಗೂಡಿನಲ್ಲಿಟ್ಟು ಒಂದೂರಿಂದ ಮತ್ತೊಂದಕ್ಕೆ ಒಯ್ಯುತ್ತಿದ್ದನು. ಆ ಗೂಡಿನ ಹೊರಗೆ 'ಮೃಗ' ಎಂದು ಚೀಟು ಹಚ್ಚಲಾಗಿತ್ತು [illegible] ಒಂದು ಹಲ್ಲೆ ಕಾಫಿಯನ್ನೂ ಕೆಲವು ಬಿಸ್ಕೀಟುಗಳನ್ನೂ ಹಾಕಿಡುತ್ತಿದ್ದನು. ಹೀಗೆ ಆರು ಸಲ ಪ್ರಯಾಣ ಮಾಡಿದ್ದಾನೆ. ಏಳನೇ ಬಾರಿ ಕಂಡುಹಿಡಿಯಲ್ಪಟ್ಟನು. ಎಲ್ಲವೂ 'ಹಣಕ್ಕಾಗಿ'—(ಅಂದರೆ ಹಣವನ್ನು ಉಳಿಸಲಿಕ್ಕಾಗಿ).

ಅವುಗಳ ಬೆಲೆ, ಅವರ ತಾಯ್ತಂದೆಗಳು ತುರ್ಕಿಯವರೆಂತೆ ಪಲೆಸ್ತೀನದ ಅರಬರೆಯರೇ ಹೆಚ್ಚಾಗಿ ಇವರನ್ನು ಕೊಂಡುಕೊಳ್ಳುವರಂತೆ. ವಧುಗಳ ಸಂತೆ ಇರುವ ಮಟಗಳಲ್ಲಿ ಇರುವ ಊರುಗಳೆಲ್ಲೆಲ್ಲ, ಸಿಪ್ರಸ್ ದ್ವೀಪದ [illegible]?

ಪೋಲೀಸ್ ವೇಷಧಾರಿ ಕಳ್ಳರು—

[illegible] ಅಂಕವು ಶಿಕ್ಷೆಯ [illegible] ನಾಟಕವನ್ನು ಪ್ರದರ್ಶಿಸಿದರು. [illegible] ಎಂದು [illegible] ಮನೆಯನ್ನು ಹಾರಾಡುವರು ಕೊಳ್ಳೆಗಾಗಿ [illegible], ಆ ರಾತ್ರಿ ಅಲ್ಲಿಗೆ ಪೋಲೀಸರ ವೇಷದಲ್ಲಿ ಹೋಗಿ ಬಾಗಿಲನ್ನು ತೆರೆದರು. ಪೋಲೀಸರೆಂಬ ಭರವಸೆಯಿಂದ ಅವನು ಬಾಗಿಲ ತೆರೆದನು. ಕೂಡಲೇ ಅವನನ್ನು ಬಂಧಿಸಿ, ಮನೆಯನ್ನು ಪ್ರವೇಶಿಸಿ, ಬೀಗ ಹಾಕಿ, ಕೈಗೆ ಸಿಕ್ಕಿದುದನ್ನೆಲ್ಲ ದೋಚಿಕೊಂಡು ಪರಾರಿಯಾದರು.

ಗಾಂಧಿಜಿಯವರ ಹರಿಜನ ಚಳವಳವು–

ಏಕಕ್ಕೆ ಎಂಬ ವಿಷಯವನ್ನು, ಇ. ಎ. ಡೇವಿಡ್ ಎಂಬವರೊಬ್ಬರು ಚೆನ್ನಾಗಿ ಬಲ್ಲರು. ಅದು ಕ್ರೈಸ್ತ ಮಿಶ್ಯನುಗಳ ನಿರ್ಮೂಲನಕ್ಕಾಗಿ ಇದೆಯಂತೆ! 'ನಮಗೆ ಹಿಂದೂಧರ್ಮವೊಂದನ್ನು ಬಿಟ್ಟು ಮತ್ತಾವ ಧರ್ಮವೂ ಬೇಡ—ಈ ಭಾರತ ವರ್ಷದಲ್ಲಿ!' ಎಂದು ಗಾಂಧಿಜಿಯವರೊಮ್ಮೆ ಅಂದುದನ್ನು ಸ್ಮರಿಸಿ, ದಿಗಿಲುಗೊಂಡು, ಈ ಮಿ। ಡೇವಿಡರು ಕಾನ್ಪುರದಲ್ಲಿ ಸೇರಿದ ಸಂಯುಕ್ತ ಪ್ರಾಂತಿಕ ಕ್ರೈಸ್ತ ಪರಿಷತ್ತಿನ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ನುಡಿದಿರುವರು.

'ಗುಡ್ ಮೋರ್ನಿಂಗ್' ಸ್ವೀಕಾರಕ್ಕೂ ಯೋಗ್ಯರಲ್ಲ!

ಯಾರು?—ಜವಾಹರಲಾಲರು! ಅವರೀಗ ಅಲ್ಮೋರ ಜೈಲಿನಲ್ಲಿರುವರಷ್ಟೆ. ಅವರನ್ನು ಕಾಣಲು ನೈನಿತಾಲ ಸೈಂಟ್ ಜೋಸೆಫ್ ಕಾಲೇಜಿನ ಪ್ರೊಫೆಸರರಾದ ಆಂಗ್ಲೇಯ ಮಹಾನುಭಾವರೊಬ್ಬರು ಬಂದರು. ಜೈಲ್ ಸುಪರಿಂಟೆಂಡೆಂಟರು ಭೇಟಿಕೊಡಿಸಲಾಗುವುದಿಲ್ಲವೆಂದರಂತೆ. "ಹಾಗಾದರೆ ನಾನು ಬಂದೆನೆಂದು ಜವಾಹರಲಾಲರಿಗೆ ಗುಡ್‌ಮಾರ್ನಿಂಗ್ ಹೇಳಿರಿ!" ಎಂದರಂತೆ ಪ್ರೊಫೆಸರರು. "ಇರಬಹುದು ಅದಕ್ಕೆ ಭೇಟಿ ಇಲ್ಲ" ಎಂದೇ ಸುಪರಿಂಟೆಂಡೆಂಟರ ಉತ್ತರವಂತೆ. ಜವಾಹರಲಾಲರು ಗುಡ್‌ಮಾರ್ನಿಂಗಿಗೂ ಯೋಗ್ಯರಲ್ಲವೇ? ಅಲ್ಮೋರಾ ಜೈಲಿನ ಸುಪರಿಂಟೆಂಡೆಂಟರು ಮ್ಯಾಜಿಸ್ಟ್ರೇಟರಾದರೇ?—ಎಂದು ಅಮೃತಬಜಾರ ಪತ್ರಿಕೆಯು ಪ್ರಶ್ನಿಸುತ್ತಿದೆ.

ಕೇಳಿದಿರಾ—ಈ ಬಿದಾಯ್!

ರಿವಾ ಸಂಸ್ಥಾನವೆಂದರೆ ಬಡೋದೆಯಷ್ಟು ಮುಂದುವರಿದುದಲ್ಲ. ಆದರೆ ಸಾಕಷ್ಟು ಹಣ ತುಂಬಿದೆ ಎಂದು ತೋರುವುದು. ವೈಸರಾಯರು ಇನ್ನು ಸದ್ಯದಲ್ಲೆ ಅಲ್ಲಿಗೆ ದಯಮಾಡಿಸಲಿರುವರು. ಆ ಸಂದರ್ಭದಲ್ಲಿ ಅಲಂಕಾರಾದಿ ವಿನೋದಗಳ ವೆಚ್ಚಗಳಿಗೆಂದು ಒಂದು ಲಕ್ಷ ರೂಪಾಯಿ ಮಂಜೂರಾಗಿರುವುದಂತೆ.

"ಹಿಂದೂದೇಶದ ಸಂಪತ್ತು ಆಶ್ರಮಗಳಲ್ಲಿದೆ"

—ಹೀಗೆನ್ನುವರು ಸಾಧು ವಾಸ್ವಾನಿಯವರು. "ಈಗ ನಮಗೆ ಅತೀವ ಅಗತ್ಯವಾದುವೆಂದರೆ ಅಲ್ಲಲ್ಲಿ ಆಶ್ರಮಗಳು. ಇಂದು ದೊಡ್ಡ ದೊಡ್ಡ ನಗರಗಳು ಬೆಳೆಯುತ್ತಿರುವುವೆ. ಜನಸಂಖ್ಯೆ ಹೆಚ್ಚು, ಶಬ್ದ ಹೆಚ್ಚು, ಉದ್ರೇಕವೂ ಹೆಚ್ಚು. ಅಂತರಿಕ ಜೀವನವೆಲ್ಲಿ? ನಿಜವಾದ ಶಾಂತಿಯೆಲ್ಲಿ? ಬೊಂಬಾಯಿಯಲ್ಲಿ ವಾಣಿಜ್ಯಪತಿಗಳಿರುವರು—ಅರಮನೆಗಳಂತಹ ಬಂಗಲೆಗಳಿರುವುವು—ಪರಂತು, ನಿಜವಾದ ಸಂಪತ್ತು ಆಶ್ರಮಗಳಲ್ಲಿದೆ. ಆತ್ಮೋನ್ನತಿಗೆ ಸಾಧಕವಾದ ತಪಸ್ಸಿಯ ಸಿದ್ಧಾಂತದ ಪ್ರೇರಣೆ, ಸಾಧನೆ, ತಪಶಕ್ತಿಗಳೆಲ್ಲ ಆಶ್ರಮಗಳಲ್ಲಿ ಮಾತ್ರ ಸಾಧ್ಯವೆಂದು"ವೆಂದು ಅವರ ಅಭಿಪ್ರಾಯ.

ಬ್ರಿಟನಿನ ಮಹಾ ಕಾಮಗಾರಿಗಳ–

—ಆಲೋಚನೆ ಈಗಾಗಲೇ ಸಿದ್ಧವಾಗಿದ್ದು, ಇಷ್ಟು ಕಾಲದಲ್ಲೆ ಕೆಲಸವನ್ನಾರಂಭಿಸುವ ಸಂಭವವಿದೆ. ಇದರಿಂದ ನಿರುದ್ಯೋಗವು ಬಹುಮಟ್ಟಿಗೆ ಕಡಿಮೆಯಾಗುವುದು. ೨ ಮಿಲ್ಲಿಯ ಪವನುಗಳಿಂದ ಸರಕಾರೀ ಆಫೀಸುಗಳಿರುವ ಒಂದು ದೊಡ್ಡ ಕಟ್ಟಡ; ೧೫ ಮಿಲ್ಲಿಯ ಪವನುಗಳ ವೆಚ್ಚದಿಂದ ಚಾರಿಂಗ್‌ಕ್ರಾಸ್ ಹೊಸ ಸಂಕ; ಹೊಸ ಇನ್‌ಕಮ್‌ಟ್ಯಾಕ್ಸ್ ಆಫೀಸುಗಳು. ೫ ಲಕ್ಷ ಪವನು; ಹೊಸ ಲೇಬರ್ ಎಕ್ಸ್‌ಚೇಂಜ್ ಆಫೀಸುಗಳು—೭೫ ಲಕ್ಷ ಪವನು; ಸೈನ್ಯದವರಿಗೆ ಉಳಕೊಳ್ಳಲು ವಿಹಾರಗಳು, ಪೋಲೀಸರ ಬಗ್ಗೆ ಹೊಸ ಮನೆಗಳು, ೨೫ ನಗರಗಳಲ್ಲಿ ಟೆಲಿಫೋನ್ ಎಕ್ಸ್‌ಚೇಂಜು ಇತ್ಯಾದಿಗಳ ಆಲೋಚನೆಯೂ ಇದೆ.

"ಮೇಜರ್ ಟೆಬ್ಸ್" ಎಂಬವರ ಆಸ್ತಿಯ ಅಧಿಕಾರದಿಂದ ಲಂಡನಿನ ಮೇಜರ್ ಗ್ರಾಹಮ್ ಪೋಲರವರು ಕಾಶಿಯ ಹಿಂದೂ ವಿಶ್ವವಿದ್ಯಾಲಯಕ್ಕೆ ೧೧,೯೩೪ ರೂಪಾಯಿಗಳ ಸಹಾಯಧನವನ್ನು (ಬಿರ್ಲ್ಸ್‌ರವರ ಉದಾರಿಸಂತೆ) ಕಳುಹಿರುವರು,

"ಗುರುಭಕ್ತಿ ದುರ್ಗಾಭಕ್ತಿ" ಎಂಬ ಪುಸ್ತಕವು, ಸಿಕ್ಖ ಜನರ ಧಾರ್ಮಿಕ ಭಾವನೆಗಳನ್ನು ನೋಯಿಸಬಹುದೆಂಬ ಕಾರಣದಿಂದ, ಪಂಜಾಬ ಪ್ರಾಂತ್ಯದಲ್ಲಿ ನಿಷಿದ್ಧವಾಗಲ್ಪಟ್ಟಿದೆ.

ಗೋಹಟಿಯ ಮುಸ್ಲಿಂ ಎಸೋಸಿಯೇಶನವರು, ಸಹ ಶಿಕ್ಷಣವನ್ನು ತಾವು ನಿಷಿದ್ಧಿಸುವುದರಿಂದ, ಬಾಲಿಕೆಯರಿಗಾಗಿ ಪ್ರತ್ಯೇಕ ಕೊಲೇಜುಗಳನ್ನು ಸ್ಥಾಪಿಸಬೇಕೆಂದು ಸರಕಾರಕ್ಕೆ ವಿನಂತಿಕಳುಹಲು ನಿರ್ಧರಿಸಿರುವರು.

ಅಶ್ಲೀಲ ಚಲಚ್ಚಿತ್ರ ಪ್ರದರ್ಶನಗಳ ನಿಷೇಧಾರ್ಥವಾದ ಒಂದು ಠರಾವು ಮೈಸೂರಿನ ಮಹಿಳಾ ಪರಿಷತ್ತಿನಲ್ಲಿ ಮಂಜೂರಾಗಿದೆ.

ಲಂಡನಿನಲ್ಲಿರುವ ಬಡ ಹಿಂದೀಯರನೇಕರನ್ನು ಅಲ್ಲಿಯ "ಇಂಡಿಯನ್ ಸೋಶ್ಯಲ್ ಕ್ಲಬ್ಬಿ"ನವರು ದೀಪಾವಳಿ ಹಬ್ಬದ ದಿನ ಮೇಜವಾನಿ ಕೊಟ್ಟು ಸತ್ಕರಿಸಿದರು.

ಹಾಲುಗರೆವ ದನಗಳನ್ನೂ ಇತರ ಉಪಯುಕ್ತ ಪಶುಗಳನ್ನೂ ವಧಿಸಲಾಗದಂತೆ ಶಾಸನಗಳನ್ನು ರಚಿಸಬೇಕೆಂದು ಬಂಗಾಳ ಪ್ರಾಂತ್ಯದ ಕಿಶೋರಗಂಜದಲ್ಲಿ ಸೇರಿದ ಸಾರ್ವಜನಿಕ ಪರಿಷತ್ತಿನಲ್ಲಿ,—ತ್ರಿಪುರಾಧಿಪ ರೊಡನೆಯೂ ನರೇಂದ್ರ ಮಂಡಲದೊಡನೆಯೂ ವಿನಂತಿಸಿಕೊಳ್ಳಬೇಕಾಗಿ ಠರಾವಾಗಿದೆ.

ನಿರುದ್ಯೋಗ ದುಃಖವನ್ನು ಸಹಿಸಲಾರದೆ ಸಿಕ್ಖ ತರುಣನೊಬ್ಬನು, ಅಮೃತಸರದ ಸ್ವರ್ಣದೇವಾಲಯದ ಕೆರೆಗೆ ಹಾರಿ ಪ್ರಾಣತ್ಯಾಗಮಾಡಿದನು.

ತಿರ್ಕ್ಕುಡಿ ಮುನಿಸಿಪಾಲಿಟಿಗೆ ಶ್ರೀ ವೆಯ್ಯಪ್ಪ ಚೆಟ್ಟಿಯಾರ ಎಂಬವರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು. ಇವರ ವಯಸ್ಸು ಕೇವಲ ೨೪ ವರ್ಷ!

ಖಾನ್ ಅಬ್ದುಲ್ ಗಫರ್ ಖಾನರು ಲಖ್ನೋಗೆ ಸ್ವದೇಶೀ ಪ್ರದರ್ಶನವನ್ನು ತೆರೆಯಲು ಬಂದಾಗ ಅವರಿಗೊಂದು ಮಾನಪತ್ರವನ್ನರ್ಪಿಸಬೇಕೆಂದು ಅಲ್ಲಿಯ ಮುನಿಸಿಪಾಲಿಟಿಯವರು ೨೦೦ ರೂಪಾಯಿಗಳನ್ನು ಮಂಜೂರು ಮಾಡಿರುವರು.

ಢಾಕ್ಕಾ ಜಿಲ್ಲಾ ಕಲೆಕ್ಟರರು ಒಂದು ಆಜ್ಞೆ ಹೊರಡಿಸಿರುವರು—೧೨ರಿಂದ ೩೦ ವಯಸ್ಸಿನೊಳಗಿನವರಾರೂ ನಾರಾಯಣಗಂಜ್ ನಗರದೊಳಗಿನ ಕೆಲವು ನಿರ್ದಿಷ್ಟ ಸ್ಥಳಗಳಲ್ಲಿ ಸೂರ್ಯಾಸ್ತಮಾನದಿಂದ ಸೂರ್ಯೋದಯದ ವರೆಗೆ ಸುಳಿದುಕೊಳ್ಳಲೇ ಬಾರದು. ಈ ಆಜ್ಞೆಯು ೧ ೩ನೇ ಜುಲಾಯಿ ತಿಂಗಳ ೩೧ ೪೦ರ ತನಕ ಜ್ಯಾರಿಯಲ್ಲಿರುವುದು.

ಸುಶಿಕ್ಷಿತರಿಗೆ ಉದ್ಯೋಗ ದೊರಕಿಸಿ ಕೊಡುವಲ್ಲಿ ಸಹಾಯಕರಾಗಲು ಕೊಲಂಬೋ ರೊಯಲ್ ಕೊಲೇಜಿನವರು "ಕೆರಿಯರ್ಸ್ ಮಾಸ್ಟರ್" ಎಂಬ ಹೊಸ ಅಧಿಕಾರಿಯ ನೇಮಕಮಾಡಿರುವರು. ಸರಕಾರೀ ಖಾತೆಗಳಲ್ಲಾಗಲೀ ಸ್ವತಂತ್ರ್ಯ ಉದ್ಯಮಗಳಲ್ಲಾಗಲಿ, ಕೆಲಸದ ಸ್ಥಾನವಿದ್ದರೆ ಇವರು ಕೂಡಲೇ ತಿಳಿಸುವರು.

ಆಗ್ರದಲ್ಲಿ ಮೆನಿಂಜೈಟಿಸ್ ರೋಗವು ಕಾಣಿಸಿಕೊಂಡಿದೆ. ಕಳೆದ ವಾರ ಮೂರು ಮರಣಗಳಾಗಿವೆ.

ಸಂಯುಕ್ತಪ್ರಾಂತ್ಯದ ಗವರ್ನರರಾಗಿ ನೇಮಿಸಲ್ಪಟ್ಟ ಸರ್ ಹರ್ರಿ ಹೇಗರವರು ಹಿಂದೂದೇಶಕ್ಕೆ ಪಯಣ ಹೊರಟಿರುವರು.

ಸ್ಪಾಂತಿಮಯ ಸ್ಪೆಯಿನಿನಲ್ಲಿ ಲೇಬರ್ ಸಂಘಗಳ ಮೇಲೆ ಸರಕಾರವು ನಿರ್ಬಂಧವಿರಿಸಿ, ಅವುಗಳ ನಿಧಿಗಳನ್ನು ಮುಟ್ಟುಗೋಲು ಹಾಕುವಂತೆ ನಿರ್ಧರಿಸಿದೆ.

ಉಬ್ಬಸದಿಂದ ಅಸ್ವಸ್ಥರಾದ ಶ್ರೀ ಬಾಬೂ ರಾಜೇಂದ್ರ ಪ್ರಸಾದರವರು ಈಗ ಕೊಂಚ ಗುಣಮುಖರಾಗಿರುವರೆಂದು ವಾರ್ತೆ.

ರಸಾಯನ ಶಾಸ್ತ್ರಕ್ಕಾಗಿ ಪ್ರತ್ಯೇಕಿಸಲಾದ ೧೯೩೪ನೇ ವರ್ಷದ ನೊಬೆಲ್ ಬಹುಮಾನವು ಕೊಲಂಬಿಯಾ (ಅಮೇರಿಕ) ವಿಶ್ವವಿದ್ಯಾಲಯದ ಪ್ರೊಫೆಸರ ಹೆರೋಲ್ಡ್ ಕ್ಲೇಯ್ಟನ್ ಯುರೇ ಎಂಬವರಿಗೆ ಸಂದಿದೆ.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur. Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd
64, III Cross Road, Srirampur Extn Malleswaram Post, BANGALORE

OR

The Managing Agents,
The S. I. G. A. Co. Ltd
55 Poonamallee High Road, Kilpauk, MADRAS.

Shiromani Narayanacharya,
Choukhamba, Benares City

ಶಾಸ್ತ್ರಗಳೇ ಪೂರ್ವಿಕರು ಅರೋಗ್ಯರೇ ಅಥವಾ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಆಯುರ್ವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವುವು ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು

ಸಣ್ಣ ಅಡ್ಕೆ ಪ್ರಮಾಣದ ಕಂಠಿಸರ 1ಕ್ಕೆ ಅಣೆ 10ರಿಂದ ರೂ 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಅಣೆ 4ರಿಂದ ರೂಪಾಯಿ 10 ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 20ರಿಂದ 30ರ ವರೆಗೆ 12 13–14 ಮುಖದ ಕಾಳು 1ಕ್ಕೆ ರೂಪಾಯಿ 50ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ದೊಡ್ಡ ರುದ್ರಾಕ್ಷಿ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು.

(ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಅಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು– 1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ 1 ಕೆಟಲಾಗ ನೊಡನೆ 3 ಇನಾಮುಗಳು)

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ ಬೆನಾರಿಸ್ (ಕಾಶೀ)

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ ಅರುಚಿ ಅಗ್ನಿಮಾಂದ್ಯ ವಾಯು ಉಪದ್ರ ಮೊದಲಾದುವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು ರಕ್ತವೃದ್ಧಿಯನ್ನೂ ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ಸಿರೋಗಿಗಳೂ ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯೂ ಲಭಿಸುವುದು

ಬಾಟ್ಲಿ 1ರ ರೂ 2 0–0 ಬಾಟ್ಲಿ 3ರ ರೂ 5–12–0.

ಮೇಹ ಕುಠಾರ—ಪ್ರಮೇಹ ಮೂತ್ರಕೃಚ್ಛ್ರ ಮೂತ್ರ ಹೋಗದಿರುವಿಕೆ ಮೂತ್ರ ಹೋಗುವಾಗ ಉರಿ ಮೂತ್ರದ್ವಾರದಿಂದ ಕೀವು ಬರುವುದು ಮೂತ್ರದಿಂದ ಧಾತು ಹೋಗುವುದು ಮೂತ್ರ ಆಗಾಗ ಒಂದು ತಡಿಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ

ಡಬ್ಬಿ 1ಕ್ಕೆ ರೂ 2–8–0 ಡಬ್ಬಿ 3ರ ರೂ 7–0–0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ ಅಗ್ನಿಮಾಂದ್ಯ ಅರುಚಿ, ನಂಜಿನ ಜ್ವರ ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು ಬಾಣಂತಿಯರು ಪುಷ್ಟಿಹೊಂದಿ ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು

ಬಾಟ್ಲಿ 1ಕ್ಕೆ ರೂ 1—8—0 ಬಾಟ್ಲಿ 2ರ ರೂ 3–0–0

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್ ಕೆ ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು ತದನಂತರ ಏನು ಮಾಡಿದರೂ ಸುರುವಾಗುವುದಿಲ್ಲ ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ ಎ ವೈದ್ಯ ಎಲ್ ಸಿ ಪಿ ಎಸ್ ಕೆಳಗಾಮಾಹಿಮ್ ಕಾಹೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು ಗರ್ಭಧಾರಣವೂ ಆಗುವುದಿಲ್ಲ ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ ೪–೦–೦ ವಿ ಪಿ ಅಣೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ಮಿರಜ, S M C

"ಮಿತಸಂತತಿ–ಮಿತಸಂತತಿ" ಎಂದು ಹಲುಬಿದರೆ ಫಲವಿಲ್ಲ;

ಪ್ರೊರೆಸ್ ಕೇಪ್ ಪೆಸರಿ

ರಬ್ಬರಿನ ಈ ಅಮೂಲ್ಯ ಚೀಲವನ್ನುಪಯೋಗಿಸುವುದರಿಂದ 'ಮಿತಸಂತತಿ'ಯು ಸುಲಭವು ಪರಿಪಾಲಿಸಲ್ಪಡುವುದು. ಈ ಚೀಲದ ಉಪಯೋಗವನ್ನು ಪ್ರಸಿದ್ಧ ವೈದ್ಯರೂ ಡಾ। ಮೇರಿಸ್ಟೋಪರೂ ಪರೀಕ್ಷಿಸಿ ಜಗತ್ತಿಗೆ ಶಿಫಾರಸು ಮಾಡಿರುವರು.

1 ಅಣೆ ಅಂಚೆ ಚೀಟು ರವಾನಿಸಿದರೆ ಕೆಟಲಾಗು ಕಳುಹಿಸುತ್ತೇವೆ

ಪ್ರೊರೆಸ್ ಚಿನೊಸೋಲ್ ಸೊಲ್ಯುಬ್ಲ್ಸ Promce Chinosal Solubles

ಎಂಬುದನ್ನು ಇದರೊಡನೆ ಉಪಯೋಗಿಸಿರಿ ಇದು ದ್ರಾವಕದಂತಿಧ

ಪ್ರೊರೆಸ್ ಎಂಬ ಹೆಸರುಳ್ಳದು ಸರ್ವೋತ್ಕೃಷ್ಟ ಇದರ ಕ್ರಯ. ಒಂದು ಟಸ್ಸಿಗೆ

ರೂ 2—0—0 (ಹಸ್ತದ ಬಾಟ್ಲಿಗಳಿವೆ)

ಮುಖ್ಯ ಪ್ರವರ್ತಕರು—The Pioneer Book Depot,
378 375 Esplanade Road, Madras

ಮಂಗಳೂರು ಏಜಂಟರು—

ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ಮಂಗಳೂರು

ಕೇಶ್ಮೈಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು)
ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು — ಬೆಲೆ ಸೀಸೆ ಒಂದಕ್ಕೆ ರೂ.0—12—0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—

ಕುಂತಳ ಕೌಮುದಿ ಕ್ಟೆಂ,
ಜೆನರಲ್ ಆಸ್ಪತ್ರೆ ಎದುರು, ಮಂಗಳೂರು



ಸ್ಕಿಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶನಿಗೂ ಜನಕೋಟಿಗೂ ಇದುವೇ ರಾಜಮದ್ದು

ಮಲೇರಿಯಾ, ಇನ್ ಫ್ಲುಯಂಜಾ ಮತ್ತು ಜ್ವರಗಳನ್ನು ಗುಣಪಡಿಸುತ್ತದೆ,

ಮೆಡನ್ ಸನ್ಸ್ ಎಂಡ್ ಕೋ.,
ಬೊಂಬಾಯಿ, 2

MADON SONS & CO
PHARMACEUTICAL CHEMISTS BOMBAY

ಶ್ಯಾಮರಾಯರು

ಅಂದು ಆದಿತ್ಯವಾರ. ನನಗೆ ಶಾಲೆ ಇರಲಿಲ್ಲ. [illegible] ದಿನವನ್ನು [illegible] ವುದರಲ್ಲಿ [illegible]. ಸಂಜೆ ಐದು ಘಂಟೆಯ ವರೆಗೆ ಹೇಗೋ ಕಳೆದೆನು? ಹೀಗೆಯೇ ಹೋಗುತ್ತ ಮತ್ತೂ ಬೇಸರವಾಗುವುದಿಲ್ಲವೆ? ಕಳ್ಳನೆ ಹೊಳೆಯಿತು—ಆ ದಿನ ಗಾಂಧೀ ಮೈದಾನಿನಲ್ಲಿ ಸಭೆಯಿದೆ. ಮುಂಚಿನ ದಿನವೇ ಅದರ ಕರಪತ್ರವು ನನಗೆ ಸಿಕ್ಕಿತ್ತು. ಮನಸ್ಸಿನಲ್ಲಿ ನೆಮ್ಮದಿಯುದ್ದುದರಿಂದ ಸೀದಾ ಮೈದಾನಿಗೆ ಹೊರಟೆ. ಹಾದಿಯಲ್ಲಿ ಪಕ್ಕದ ಅಂಗಡಿಯಿಂದ ಒಂದು ಮುಕ್ಕಾಲಿನ ಬೀಡಿ—ಒಂದು ಬೆಂಕಿಪೆಟ್ಟಿಗೆ ತೆಗೆದುಕೊಂಡು ಕಿಸೆಯೊಳಗೆ ಹಾಕಿದೆ. ಅಷ್ಟರಿಂದಲೇ ರಾಜನಂತಾಗಿ ಮೈದಾನಿಗೆ ಹೋಗಿ ಸೇರಿದೆ. ಮೈದಾನು ತುಂಬಾ ಜನ, ಹೆಂಗಸರು ಗಂಡಸರು ಕೂಡಿ ಐದಾರು ಸಾವಿರವಾದೀತು. ದೇಶಭಕ್ತ ಶ್ಯಾಮರಾಯರ ಭಾಷಣವು ಆಗುತ್ತಿತ್ತು. ನಾನೂ ಗುಂಪನ್ನು ಒತ್ತಿ ನಿಂತುಕೊಂಡೆ. ಬಿಳಿ ಖಾದಿಯ ಪಟ್ಟೆ ಕಚ್ಚೆ ಹಾಕಿ, ಮುರ್ಥದ ಗುಂಡಿಯ ಶರ್ಟನ್ನು ಹಾಕಿಕೊಂಡು—ಗಾಂಧಿ ಟೊಪ್ಪಿಯಿಟ್ಟು ಶ್ಯಾಮರಾಯರು ಬಿರುಸಾಗಿ ಭಾಷಣ ಕೊಡುತ್ತಿದ್ದರು. ಕೈಗಳೂ ತೋರಿಸಬೇಕಾದುದನ್ನು ತೋರಿಸುತ್ತಿದ್ದುವು. ಶ್ಯಾಮರಾಯರು ನಾಲ್ಕೂ ಕಡೆಗಳಲ್ಲಿ ತನ್ನನ್ನು ಆಲಿಸುತ್ತಿರುವ ಜನರಿಗಾಗಿ ಸುತ್ತುಮುತ್ತು ತಿರುಗಿ ಹಾವಭಾವಗಳೊಡನೆ ಆವೇಶಪೂರ್ಣ ಉಪನ್ಯಾಸವೀಯುತ್ತಿದ್ದರು. ನಾನು ಸೋತುಹೋಗಿ ಏಕಾಗ್ರತೆಯಿಂದ ಕೇಳತೊಡಗಿದೆ. "ಹ್ಯಾಗದು? ನಮ್ಮ ನಾಡಿನಲ್ಲೇ—ನಮ್ಮ ಹಾಗೆಯೇ ಮನುಷ್ಯರಾಗಿ ಹುಟ್ಟಿ—ನಮ್ಮ ಸ್ಪರ್ಶಕ್ಕೂ ಬಾಹಿರರಾಗುವುದೆಂದರೆ ಹ್ಯಾಗದು! ......ಇಲ್ಲ, ನಿಜವಾಗಿಯೂ ಇಲ್ಲ! ದೇವಸ್ಥಾನಗಳಲ್ಲಿ ದೇವರು ಇಲ್ಲವೇ ಇಲ್ಲ!! ಹೊಲೆಯರು ದೇವಸ್ಥಾನಕ್ಕೆ ಹೋಗದೆ ಆತನು ಅಲ್ಲಿಗೆ ಬರುವ ಹಾಗೂ ಇಲ್ಲ!!......" ದೇಶಭಕ್ತ ಶ್ಯಾಮರಾಯರು ದೀರ್ಘ ಭಾಷಣವನ್ನು ಮಾಡಿದರು; ಅದನ್ನೆಲ್ಲಾ ನಾನು ಕೇಳಿದೆ. ಸಭೆ ಮುಗಿದು ಹಿಂದಿರುಗುವಾಗ ಹಾದಿಯಲ್ಲೇ ಭಾರೀ ಯೋಚನೆ ನನಗೆ. "ಸುಳ್ಳೆ? ಮನುಷ್ಯನು ಮನುಷ್ಯನನ್ನು ಮುಟ್ಟದಿರುವುದೆಂದರೆ? ಹೇಗೆ ವಿವರಿಸಿದರಪ್ಪಾ ಶ್ಯಾಮರಾಯರು! ಹರಿಜನರನ್ನು ಮುಟ್ಟಬಾರದೆಂಬುದಕ್ಕೆ ಕಾರಣ ಕೊಟ್ಟು ವಾದಿಸುವವರಿದ್ದರೆ ಬರಲಿ—ಎಂದು ಕರೆದರಲ್ಲಾ, ಯಾರು ಹೋದರು? ಹೋಗಿ ಮಾತಾಡುವುದಕ್ಕೊಂದು ನ್ಯಾಯ ಬೇಕಲ್ಲಾ!" ಇಷ್ಟನ್ನೇ ಮತ್ತೂ ಮತ್ತೂ ಯೋಚಿಸುತ್ತಾ ಬಂದೆ.

\+ + + + + +

ಲೇಬರ್ ಶಾಲೆಯ ಮಾಸ್ತ್ರ ದೂಮನಿಗೂ ನನಗೂ ಕೆಲವು ದಿವಸದಿಂದ ಭಾರೀ ದೋಸ್ತಿ. ಊಟದ ಕೈಯೊಣಗುವುದರೊಳಗೆ ಅವನು ನನ್ನಲ್ಲಿಗೆ ಬರಬೇಕು, ಇಲ್ಲವೆ ನಾನು ಅವನಲ್ಲಿಗೆ ಹೋಗಬೇಕು. ಮಾತಾಡಿಕೊಂಡು ರಸ್ತೆಗಿಳಿದ ಮೇಲೆ ಅವನ ಹೆಗಲ ಮೇಲೆ ಕೈ ಹಾಕಿ ನಡೆಯದಿದ್ದರೆ ನನಗೆ ಬಲವೇ ಇಲ್ಲ. ಸಮಯವಿದ್ದಾಗ ಅವನ ಶಾಲೆಯ ವರೆಗೂ ಮಾತಾಡಿಕೊಂಡು ಹೋಗುವುದಿತ್ತು. ಅಲ್ಲಿಂದ ಘಂಟೆಗೆ ಸರಿಯಾಗಿ ವಾಪಾಸ್ ನನ್ನ ಶಾಲೆಗೆ ಬಹಳ ಸುಲಭವಾಗುತ್ತಿತ್ತು. ಈ ಕ್ರಮವು ನನ್ನ ದಿನಚರ್ಯೆಯ ಪಟ್ಟಿಯಲ್ಲಿ ಸೇರಿಹೋಯಿತು. ಮಾತನಾಡಲಿಕ್ಕೆ ತೊಡಗಿದ ಮೇಲಲ್ಲವೆ? ಘಂಟೆ ಮಿನಿಟಿಗೆಲ್ಲಾ ಲಕ್ಷ್ಯ ಕೊಟ್ಟೇ ಮಾತಾಡುವುದೆಂದರೆ ಹೇಗೆ? ಅಪರೂಪವಾಗಿ ಒಮ್ಮೊಮ್ಮೆ ಶಾಲೆಗೆ ತಡವಾಗುತ್ತಲೂ ಇತ್ತು. ತಡವೆಂದರೆ ಘಂಟೆ—ಎರಡು ಘಂಟೆಯೇನೂ ಅಲ್ಲ. ಒಂದು ದಿವಸ ಹಾಜರಿ ಕರೆದು ಆಗಿತ್ತು; ಮತ್ತೊಂದು ದಿನ ಪ್ರಾರ್ಥನೆ ಮುಗಿದಿತ್ತು; ಅಷ್ಟೆ. ಆದರೆ ಹೆಡ್ ಮಾಸ್ತ್ರ ನನ್ನನ್ನು ಸ್ವಲ್ಪ ಜೋರು ಮಾಡಿದರು. ಇಷ್ಟಕ್ಕಾಗಿ ಅಷ್ಟು ಮಾತಾಡುವ ಅಗತ್ಯ ಅವರಿಗಿರಲಿಲ್ಲ. "ಉಪಾಧ್ಯಾಯರು ಶಾಲೆಯ ಸುವ್ಯವಸ್ಥೆಗೆ ಸಹಾಯಕರಾಗಿರಬೇಕು. ನೀವು ಹೀಗೆ ಹೊಲೆಯನನ್ನು ಮುಟ್ಟಿಕೊಂಡು ಶಾಲೆಗೆ ಬಂದರೆ ಇಲ್ಲಿ ಬ್ರಾಹ್ಮಣ ಹುಡುಗರೂ ಇದ್ದಾರೆ. ಅವರ ಹೆತ್ತವರೇನು ಹೇಳಿಯಾರು? ನೀವು ಹೀಗೆ ಅಜಾಗ್ರತೆಯಿಂದ ನಡೆಯುವುದಾದರೆ ನಾನು ಮುಂದಿನ ಆಲೋಚನೆ ಮಾಡಬೇಕಾಗುವುದು!" ಹೀಗೂ ಹೇಳಿಬಿಟ್ಟರು ಹೆಡ್ ಮಾಸ್ತ್ರ. ನನಗದು ಸರಿ ತೋರಲಿಲ್ಲ. ಅವರಿಗೆ ಉತ್ತರ ಕೊಡುವುದಾದರೆ ಶ್ಯಾಮರಾಯರ ಭಾಷಣದಿಂದ ಸಂಗ್ರಹಿಸಿದ ಒಳ್ಳೊಳ್ಳೆ ಮಾತುಗಳು ನನ್ನಲ್ಲಿದ್ದುವು. ಆದರೂ ನಾನು ಮಾತಾಡಲಿಲ್ಲ. ಶಾಲೆಯೊಳಗೆ ನನ್ನನ್ನು ಸ್ವಲ್ಪ ದೂರ ದೂರ ಮಾಡಿ ನೋಡತೊಡಗಿದರು, ನನಗೂ ಛಲ ಬಿತ್ತು. "ಎಲಾ! ಇವರ ಶಾಸ್ತ್ರ ಹಾಳಾಯಿತು! ಶಾಲೆಯೊಳಗಿನ ಕೆಲಸದಲ್ಲಿ ನಿರುಮ್ಮವನ್ನಿಡಲಿ; ನನ್ನ ಆಚಾರಕ್ಕೂ ಇವರ ವಿಚಾರವೆ? ನೋಡಿ ಬಿಡುವ!" ಎಂದು ನಾನೂ ಪಂಥ ಕಟ್ಟಿದೆ. ಪ್ರತಿ ಸಲವೂ ಶಾಲೆ ಸುರು ಆಗುವ ಮೊದಲೇ ನಾನು ಶಾಲೆ ಸೇರುವ ಅಭ್ಯಾಸವನ್ನಿಟ್ಟುಕೊಂಡೆ. ದೂಮನನ್ನು ಬೇಕೆಂದೇ ಶಾಲೆಯ ವಠಾರದೊಳಗೂ ಕರಕೊಂಡು ಹೋಗಿ ನಿಲ್ಲಿಸಿ ಮಾತಾಡಹತ್ತಿದೆ. ಘಂಟೆ ಹೊಡೆದ ಕೂಡಲೇ ದೂಮನನ್ನು ಕಳುಹಿಸಿ ಶಾಲೆಯೊಳಗೆ ಹೋಗುವುದು—ಉಪಾಧ್ಯಾಯರು ಮಾತಾಡಲಿ, ಮಾತಾಡದಿರಲಿ ನನ್ನ ಪಾಠವನ್ನಾರಂಭಿಸುವುದು! ನನ್ನನ್ನು ಕೇಳುವವರಾರು?

ಹೀಗೆಯೇ ಬಹು ಸಮಯ ಹೋಯಿತು. ನಮ್ಮೊಳಗಿನ ಮನಸ್ತಾಪವು ದೊಡ್ಡದಾಗುತ್ತಾ ಬಂತು. ನಮ್ಮದು ಹಳ್ಳಿ ಶಾಲೆ. ಶಾಲೆಗೆ ಕಲಿಸಲು ಬರುವ ಉಪಾಧ್ಯಾಯರು ನಾಲ್ಕೇ ಮಂದಿಯಾದರೂ ಹಾಜರುಪಟ್ಟಿಯಲ್ಲಿ ಮೆನೇಜರರು ಕೂಡಿ ಒಂಭತ್ತು ಮಂದಿಯಿದ್ದರು. ಪರೀಕ್ಷೆಯ ದಿವಸ ಅವರೆಲ್ಲರೂ ಸ್ವತಃ ಹಾಜರಿ! "ನೂರರುವತ್ತು ಮಂದಿ (ಹಾಜರಿಯಲ್ಲಿ) ಹುಡುಗರುವ ಶಾಲೆಯಲ್ಲಿ ಎಂಟು ಉಪಾಧ್ಯಾಯರೇ ಸಾಕೆಂದು ತೋರುತದೆ" ಎಂದು ಇನ್ಸ್ಪೆಕ್ಟರರು ಪ್ರತಿ ವರ್ಷವೂ ರಿಮಾರ್ಕಿನಲ್ಲಿ ಬರೆಯುವುದಿತ್ತು. ಈ ವರ್ಷವೂ ಹಾಗೆಯೇ ಬರೆದರು. ಅದರಿಂದೇನೂ ನಷ್ಟವಿಲ್ಲ. ಗ್ರೇಂಟು ಒಂಭತ್ತು ಮಂದಿಯ ಲೆಕ್ಕಕ್ಕೂ ಬರುತ್ತಿತ್ತು. ಆದುದರಿಂದ ಇನ್ಸ್ಪೆಕ್ಟರರ ಚರ್ವಿತಚರ್ವಣವನ್ನು ನಾನು 'ಕ್ಯಾರ್' ಮಾಡಲಿಲ್ಲ. ನಾನು ಸ್ವಸ್ಥವಾಗಿಯೇ ಇದ್ದೆ. ಒಂದು ದಿವಸದಲ್ಲಿ ನನಗೊಂದು ನೋಟೀಸು ಸಿಕ್ಕಿತು. 'ಒಬ್ಬ ಉಪಾಧ್ಯಾಯನನ್ನು ತೆಗೆದುಹಾಕಬೇಕೆಂದು ಮೇಲಧಿಕಾರಿಗಳ ಹುಕುಮಿರುವುದರಿಂದ ಇದೇ ತಾ. ೧೫ರ ನಂತರ ನಿಮ್ಮನ್ನು ತೆಗೆದುಹಾಕಲಾಗಿದೆ' ಎಂದು ಮೆನೇಜರರು ಅದರಲ್ಲಿ ತಿಳಿಸಿದ್ದರು. ಅನ್ನ ಕೊಡುತ್ತಿದ್ದ ಕೆಲಸವಲ್ಲವೆ? ನನಗೆ ಬೇಜಾರಾಯಿತು. ಆದರೂ ಗರಮ್ ಮಾಡಿಕೊಂಡು, ಅಂದಿನಿಂದಲೇ ಶಾಲೆಗೆ ಹೋಗುವುದನ್ನು ಕೈದು ಮಾಡಿದೆ. ಹ್ಯಾಗೂ ಕೆಲಸದಿಂದ ತೆಗೆಯುತ್ತಾರೆ—ಅವರ ಹುಕುಮಿನಂತೆ ತೆಗೆದು ಹಾಕಲ್ಪಡುವುದಲ್ಲ; ನಾನೇ ಬಿಟ್ಟೆನೆಂದಾಗಲಿ!

\+ + + + + +

ಶಾಲೆ ಬಿಟ್ಟವನು ನಾನು ಶುದ್ಧ ತತ್ವವೇತ್ತನಾಗಿ ಹೋದೆ. 'ಮನುಷ್ಯನು ಶಾಲೆಯಂಥಾ ಸಣ್ಣ ಕ್ಷೇತ್ರದಲ್ಲಿ ಕೆಲಸಮಾಡಿ ಸಾಯುವುದಷ್ಟೇ ಅಲ್ಲ; ಸಾರ್ವಜನಿಕ ಸೇವೆ ಮಾಡಿ ಜನ್ಮಸಾರ್ಥಕ ಮಾಡಿಕೊಳ್ಳಬೇಕು. ತಿಂಗಳಿಗೆ ಇಪ್ಪತ್ತು ರೂಪಾಯಿಯ ಸಂಬಳ ಹೋದರೆ ಅಷ್ಟೇ ಹೋಯಿತು. ಹರಿಜನ ಕಾರ್ಯ ಮಾಡಿ ನಮ್ಮ ಶಾಲೆಯ ಮಾಸ್ತರರಂತಹವರಿಗೆಲ್ಲಾ ಬುದ್ಧಿ ಕಲಿಸಿಬಿಡಬೇಕು ಅಂದುಕೊಂಡೆ. ಕಳೊಳ್ಳಿ—ಆ ಮೇಲೆ ಶ್ಯಾಮರಾಯರ ಭಾಷಣವಿದ್ದಲ್ಲೆಲ್ಲಾ ನನ್ನದೂ ಭಾಷಣ! ನಾವಿಬ್ಬರೂ ಒಟ್ಟಾದೆವು. 'ಹರಿಜನೋದ್ಧಾರ ಸಭಾ' ಸ್ಥಾಪಿಸಿ ಆ ಸಣ್ಣ ಊರಲ್ಲಿ ದೊಡ್ಡ ಕೆಲಸವನ್ನು ಮಾಡಹತ್ತಿದೆವು. ಅಸ್ಪೃಶ್ಯರಿಗೆ ಸಾರ್ವಜನಿಕ ಬಾವಿ, ರಸ್ತೆ, ಶಾಲೆ, ದೇವಸ್ಥಾನಗಳಿಗೆಲ್ಲಾ ಪ್ರವೇಶ ಕೊಡಬೇಕೆಂದು ನಮ್ಮ ಚಳವಳ.

ನಮ್ಮ ಊರಲ್ಲಿ ದುರ್ಗಾ ಪರಮೇಶ್ವರೀ ದೇವಸ್ಥಾನವಿದೆ. ಊರು ಸಣ್ಣದಾದರೂ ದೇವಸ್ಥಾನ ದೊಡ್ಡದು. ಒಂಭತ್ತು ಕೋರ್ಜಿ ಅಕ್ಕಿಯ ಹುಟ್ಟುವಳಿ ಇರುವ ಅಸ್ತಿ ದೇವಸ್ಥಾನಕ್ಕಿದೆ. ತಸಧೀಕು, ಮುಣ್ಣು—ಮುಸಣಾ ಅಂತೆ ಸುಮಾರು ಐನೂರು ರೂಪಾಯಿಗಳ ವರೆಗೆ ಹೊರಗಿನಿಂದ ಸಿಗುತ್ತಿತ್ತು. ದೇವಸ್ಥಾನದ ವಿನಿಯೋಗಗಳಿಗೆಲ್ಲಾ ಖರ್ಚು ಉಂಟೂ ಅಸ್ಸಿ. ನಿತ್ಯಪೂಜೆ, ನಂದಾದೀಪ, ಅಯನೋತ್ಸವ, ದೀಪೋತ್ಸವ—ಹೀಗೆಲ್ಲಾ ದೈನಿಕ, ಮಾಸಿಕ, ವಾರ್ಷಿಕ ವಿಶೇಷಗಳೂ ಇವೆ. ಮೊಕ್ತೇಸರರು ಗೇಣಿ ವಸೂಲು ಮಾಡಿ, ತಸ್ತೀಕು ಪಡಕೊಂಡು ದೇವಸ್ಥಾನದ ಕೆಲಸಗಳನ್ನೆಲ್ಲಾ ಮಾಡಿಸಿ ಬಿಟ್ಟರೆಂದರೆ ಮತ್ತೆ ರಾಯನ ಹಾಗೆ—ಹೇಳುವವರಿಲ್ಲ, ಕೇಳುವವರಿಲ್ಲ! ನಮ್ಮ ದುರ್ಗಾ ಪರಮೇಶ್ವರೀ ದೇವಸ್ಥಾನದಲ್ಲಿ 'ಅಂಧಾ ದರ್ಬಾರ್'ರೇನೂ ನಡೆಯುತ್ತಿರಲಿಲ್ಲ. ಎಲ್ಲಾ ಕಟ್ಟುಕಟ್ಲೆ. ಜನರು ಹೇಳುತ್ತಿದ್ದರು ಮೊಕ್ತೇಸರ್ ವೆಂಕಣ್ಣ ಹೆಗ್ಗೇರಿಗೆ ಖರ್ಚು ಕಳೆದು ವರ್ಷ ಒಂದಕ್ಕೆ ಕಡಿಮೆ ಎಂದರೆ ಒಂದೂವರೆ ಸಾವಿರವಾದರೂ ಉಳಿಯಬೇಕು ಅಂತ.

ನಾನೂ ಶ್ಯಾಮರಾಯರೂ ಮೈದಾನಿನಲ್ಲಿ ಕುಳಿತುಕೊಂಡು ಇದೇ ಹರಿಜನ ಕಾರ್ಯದ ಕುರಿತು ಮಾತಾಡುತ್ತಿದ್ದಾಗ ನಿಧಾನವಾಗಿ ಅವರೊಂದು ಪ್ರಸ್ತಾಪವೆತ್ತಿದರು. "ನನಗೊಂದು ಆಲೋಚನೆಯಿದೆ ಈಗ; ನಮ್ಮೂರಿನ ದೇವಸ್ಥಾನಕ್ಕೇ ಹೊಲೆಯರಿಗೆ ಪ್ರವೇಶ ಸಿಗುವಂತೆ ಮಾಡಬೇಕು. ಅದಕ್ಕೆ ನಿನ್ನ ಆಲೋಚನೆಯೇನು ಹೇಳು."

"ಬೇರೇನು ಆಲೋಚನೆ? ಗಟ್ಟಿ ಮನಸ್ಸಿನ ಐದು ಮಂದಿ ಹೊಲೆಯ ಒಲಂಟಿಯರರು ಸಿಕ್ಕಿದರೆ ಸಾಕು. ದೇವಸ್ಥಾನ ಪ್ರವೇಶಕ್ಕೆ ಸತ್ಯಾಗ್ರಹ ಹೂಡಬಹುದಲ್ಲಾ."

ಶ್ಯಾಮರಾಯರು ಮುಗುಳು ನಕ್ಕರು: "ಈ ಹಳ್ಳಿಯಲ್ಲಿ ಸತ್ಯಾಗ್ರಹ ಮಾಡಿದರೆ ತಲೆ ಒಡಕೊಂಡದ್ದೇ ಬಂತು. ಹಾಗಲ್ಲ ನನ್ನ ಪ್ಲೇನು ಬೇರೆಯೇ ಉಂಟು ನೋಡು." ಸುತ್ತುಮುತ್ತು ನೋಡಿಕೊಂಡು ರಾಯರು ಹೇಳಿದರು: "ನಮ್ಮ ದೇವಸ್ಥಾನದ ಮೊಕ್ತೇಸರಿಕೆಗೆ ನಾನು ಅರ್ಜಿ ಹಾಕಿದ್ದೇನೆ—ಅದಕ್ಕೆಲ್ಲಾ ಬೇರೆ ಕೈಯೂ ಉಂಟು. ಕೆಲಸ ಆಗುತ್ತದೆ. ಆ ಮೇಲೆ ಮೊದಲು ದೇವಸ್ಥಾನದ ಗೋಪುರದ ಶಾಲೆ ಉಂಟಲ್ಲಾ—ಅದಕ್ಕೆ ಹೊಲೆಯರ ಮಕ್ಕಳನ್ನು ಸೇರಿಸಿಕೊಳ್ಳುವುದು. ಮತ್ತೆ ಸರಾಸರಿಯಿಂದ ದೇವಸ್ಥಾನ ಪ್ರವೇಶ!"

ಶ್ಯಾಮರಾಯರ ಆಲೋಚನೆಯು ನನಗೆ ಒಪ್ಪಿಗೆಯಾಯಿತು. ನಾವು ಅದೇ ವಿಷಯವಾಗಿ ಮಾತಾಡಿಕೊಂಡು ಮನೆಗೆ ಹೋದೆವು.

ಸಮಯಕ್ಕೆ ಸರಿಯಾಗಿ ಶ್ಯಾಮರಾಯರಿಗೆ ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನದ ಮೊಕ್ತೇಸರಿಕೆಯ ಸನದು ಸಿಕ್ಕಿತು. ನನ್ನ ಆನಂದಕ್ಕೆ ಪರಿಮಿತಿಯಿಲ್ಲ. ನನಗೆ ಒಂದು ಯೋಚನೆ ಹೊಳೆಯಿತು. "ಅಸ್ಪೃಶ್ಯತಾ ನಿವಾರಣೆಗಾಗಿಯೇ ಕೆಲಸ ಕಳಕೊಂಡ ತ್ಯಾಗಿಯು ನಾನು. ನನ್ನ ಹಾನಿಸ್ಸು ಮೇಲೆ ಬಿತ್ತೀಗ. ದೇವಸ್ಥಾನದ ಗೋಪುರದ ಶಾಲೆಗೆ ಶ್ಯಾಮರಾಯರೇ ಇನ್ನು ಮೆನೇಜರ್. ನಾನು ಹೆಡ್ ಮಾಸ್ತ್ರ ಬೇಕು—ಆಗುವುದಕ್ಕೂ ಕಷ್ಟವಿಲ್ಲವಷ್ಟೆ. ಇದರಿಂದ ಹರಿಜನೋದ್ಧಾರ ಕಾರ್ಯ, ಮತ್ತೆ ನನಗೆ ಕೆಲಸ, ಎರಡೂ ಒದ ಹಾಗಾಯಿತು. ನೋಡೀ—ಆ ಮೇಲೆ ಹೊಲೆಯರ ಹುಡುಗರನ್ನು ಶಾಲೆಗೆ ಸೇರಿಸಿಕೊಂಡು ಏನೆಲ್ಲಾ ಮಾಡುತ್ತೇನೆಂಬುದನ್ನು! ನನ್ನ ಕೆಲಸ ತೆಗೆದವರು ನಾಚಿಕೆಯಿಂದ ತಲೆಯೆತ್ತದಂತೆ ಮಾಡಿಬಿಡುತ್ತೇನೆ." ಇದೆಲ್ಲಾ ಒಂದು ದಿವಸ ಮನೆಗೆ ಬರುವಾಗ ಹಾದಿಯಲ್ಲಿ ಆಲೋಚನೆ. ಮನೆಗೆ ಹೋದವನೇ 'ಶ್ರೀ ದುರ್ಗಾ ಪರಮೇಶ್ವರೀ ಶಾಲಾ ಮೆನೇಜರರ ಸನ್ನಿಧಾನಕ್ಕೆ ಒಂದು ಅರ್ಜಿ ಬರೆದು ಹಾಕಿದೆ. ಅಗತ್ಯವಿರಲಿಲ್ಲ, ಆದರೂ ಮರ್ಯಾದೆಗಾಗಿ ಹಾಗೆ ಮಾಡಿದೆ. ಶ್ಯಾಮರಾಯರೊಡನೆ ಮಾತಾಡುವಾಗ ಒಂದಿಷ್ಟು ಪ್ರಸ್ತಾಪ ಮಾಡಬೇಕೆಂದಿದ್ದೆ. ಆದರೆ ನನಗೆ ಸಂದರ್ಭವೇ ಸಿಕ್ಕಲಿಲ್ಲ. ಅಂದಿನಿಂದ ಅವರ ಭೇಟಿಯೇ ನನಗಾಗಲಿಲ್ಲ. "ಏನಾಯಿತು! ನನ್ನ ಅರ್ಜಿಯು ಅವರಿಗೆ ಮುಟ್ಟಿರಬೇಕು. ಮತ್ತೆ ನಾನು ಮಾತಾಡುವ ಅಗತ್ಯವೇ ಇಲ್ಲ. ಶ್ಯಾಮರಾಯರು ನನಗಲ್ಲದೆ ಇನ್ಯಾರಿಗೆ ಕೆಲಸ ಕೊಟ್ಟಾರು! ನನ್ನ ನಿರ್ಧಾರ ಹೀಗೆ. ಕೆಲವರು ಹೇಳಲಿಕ್ಕೆ ಸುರು ಮಾಡಿದರು—"ನಿನಗೆ ತಿಳಿಯಲ್ಲ ಹುಡುಗ! ಶ್ಯಾಮರಾಯರು ಈಗ ಪೂರ್ತಿ ಬೇರೆಯಾಗಿದ್ದಾರೆ. ನಿನಗೆ ಕೆಲಸ ಕೊಡಬೇಕಾದರೆ ದೇವಸ್ಥಾನದವರು ಒಪ್ಪಬೇಕು. ನಿಮ್ಮನ್ನು—ಜಾತಿಭ್ರಷ್ಟರನ್ನು ಕಟ್ಟಿಕೊಂಡರೆ ಅವರ ಆದಾಯಕ್ಕೆ ಸೊನ್ನೆ ಬಿದ್ದೀತು—ಆ ಜಾಗ್ರತೆ ಶ್ಯಾಮರಾಯರಿಗುಂಟು!" ನಾನು ಇದನ್ನು ಕೊನೆಯ ವರೆಗೂ ನಂಬಲಿಲ್ಲ.

ಸುಮಾರು ಒಂದು ತಿಂಗಳ ಮೇಲೆ ಶ್ಯಾಮರಾಯರು ಮೈದಾನಿನಲ್ಲಿ ನೋಡಲಿಕ್ಕೆ ಸಿಕ್ಕಿದರು. ಆಗ ಶಾಲೆಯ ಮಾಸ್ತ್ರ ಕೆಲಸವು ದೇವಸ್ಥಾನದ ಪೂಜೆಯ ಭಟ್ರ ದೊಡ್ಡ ಮಗನಿಗೆ ಆಗಿಹೋಗಿತ್ತು.

ವಿಟ್ಟು.

ಸ್ವೀಕಾರ.

"ಮೂಲ್ಕಿ ಯೂನಿಯನ್ ಕ್ಲಬ್ಬಿನ ೧೯ನೇ ವರ್ಷದ ವರದಿ":—ಈ ಸಂಸ್ಥೆಯು ಅಭಿವೃದ್ಧಿಮುಖವಾಗಿ ಮುಂದರಿಯುತ್ತಿರುವುದು ಸಂತೋಷಕರ. ಗ್ರಂಥ ಭಂಡಾರವು ದಿನೇ ದಿನೇ ಬೆಳೆಯುತ್ತಿದೆ; ಹಲವು ಕರ್ನಾಟಕ ವೃತ್ತ ಪತ್ರಿಕೆಗಳಿಗೂ ಮಾಸಪತ್ರಿಕೆಗಳಿಗೂ ಪ್ರೋತ್ಸಾಹವಿದೆ. ಕೇವಲ ವಿನೋದದ 'ಕ್ಲಬ್' ಆಗಿರದೆ, ಸದಸ್ಯರ ಚಂದಾಹಣವು ಸದ್ವಿನಿಯೋಗವಾಗುವಂತೆ ಜ್ಞಾನದಾನ ಮಾಡಲು ಸಹಕಾರಿಯಾಗಿದೆ. ಗ್ರಂಥಗಳನ್ನು ಗ್ರಂಥಾಲಯದ ಉಪಯೋಗವು, ಕ್ಲಬ್ಬಿಗೆ ಬರಲಾಗದ ಸ್ತ್ರೀಯರಿಗೂ ದೊರೆವಂತೆ ವ್ಯವಸ್ಥೆ ಮಾಡಿ, ಸುಸೂತ್ರವಾಗಿ ನಡೆಸಲ್ಪಡುತ್ತಿರುವುದು ಸಂತೋಷಕರ. ಇಂತಹ ಪ್ರಗತಿಪರ ಸಂಸ್ಥೆಯನ್ನು ವಿದ್ಯಾರ್ಥಿ ಮಾನಿಗಳು ಅವಶ್ಯವಾಗಿ ಪ್ರೋತ್ಸಾಹಿಸುತ್ತಿರಲಿ!

ಸಂತಸಖು:—ಕ್ರೌನ್ ⅛; ಪುಟ 24; ಬೆಲೆ ಆಣೆ 0—2—0; ಆಂಟಿಕ್ ಕಾಗದದಲ್ಲಿ ಮುದ್ರಣ. ಬರೆಹಗಾರರು ಶ್ರೀ ಕೋ. ಶಂಕರನಾರಾಯಣ ಕಾರಂತ, ಬಿ. ಎ. ಬಿ. ಎಲ್.

ಇದು, ಭಕ್ತಾಗ್ರಣಿಯಾದ ಸಖುವಿನ ಚರಿತ್ರ; 'ಮುಕ್ತ ಪ್ರಾಸ' (Blank Verse) ದಲ್ಲಿ ಈಗ ಕಂಡುಬರುತ್ತಿರುವ ಶೈಲಿಯನ್ನನುಸರಿಸಿಯೇ ನಾಟಕ ರೂಪದಲ್ಲಿ ಬರೆಯಲ್ಪಟ್ಟಿದೆ. ಈಗಳಿನ ಓದುಗರ ಅಭಿರುಚಿಗೊಪ್ಪುವಂತಹ ಗದ್ಯ. 'ನೂತನಾದ ಹೆಸರಲ್ಲಿ ಲೇಖಕರು ಕಥಾವಸ್ತುವನ್ನೇನೂ ಬದಲಾಯಿಸಿಲ್ಲ. ಆದರೆ, ಸನ್ನಿವೇಶಗಳನ್ನು ತಮಗೆ ಉಚಿತ ಕಂಡಂತೆ ಚಾತುರ್ಯದಿಂದ ಪೋಣಿಸಿ ತಂದಿರುವರು. ಪುಸ್ತಕವು ಕನ್ನಡಿಗರ ಆದರಕ್ಕೆ ಪಾತ್ರವಾಗದಿರದು. (ಪ್ರತಿಗಳನ್ನು, ಪ್ರಕಾಶಕರಾದ ಬಿ. ಎನ್. ಸೋಮಯಾಜಿ ಕಂಪೆನಿ, ರಥಬೀದಿ ಮಂಗಳೂರು, ಇವರಿಂದ ಪಡಕೊಳ್ಳಬಹುದು.)

ಹಾಸನ ಟವನ್‌ನಿನ 26ನೇ ದನಗಳ ಪ್ರದರ್ಶನ.

ಹಾಸನ ಟವನ್ ದನದ ಪ್ರದರ್ಶನ ಕ್ಷೇತ್ರದಲ್ಲಿ 26ನೇ ದನದ ಪ್ರದರ್ಶನವು ನಡೆಯಲು ಏರ್ಪಾಡಾಗಿರುತ್ತದೆ.

ಪ್ರದರ್ಶನವು 1935ನೇ ಜನವರಿ ಮೊಹೆ ತಾರೀಕು 2ನೇ ಬುಧವಾರದಿಂದ 6ನೇ ಭಾನುವಾರ ಸಾಯಂಕಾಲದವರೆಗೂ ನಡೆಯುತ್ತೆ.

ಗೌರ್ನ್ಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು 1ಕ್ಕೆ ಎರಡಾಣೆಯಂತೆ ವಸೂಲಾಗುತ್ತೆ.

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲುಮಾಡುವ ಫೀ ಬಾಬನ್ನೂ ಮತ್ತು ಪ್ರದರ್ಶನ ಜಾಗಾದಲ್ಲಿ (ಮ್ಯುನಿಸಿಪಲ್) ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನೂ ಸಹಾ-ತಾ. 4-12-1934ನೇ ಮಂಗಳವಾರ ಮಧ್ಯಾಹ್ನ 2 ಘಂಟೆ ಲಾಗಾಯಿತು ಹಾಸನದ ಸಂತೆಬೀದಿ ಇರುವ ಆಕ್ಟಾಯಿ ಕಟ್ಟೆಬೀದಿ ಬಹಿರಂಗವಾಗಿ ಕ್ಯಾಟಲ್ ಷೋ ಕಮಿಟಿ ಪ್ರೆಸಿಡೆಂಟ್ ಯಾ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತೆ.

ಅಂಗಡಿ ವಗೈರೆಗಳಿಗಾಗಿ ಬಿಂಗಡಿಸಿರುವ ಜಾಗಗಳನ್ನೂ ತಾ. 15-12-1934ರ ಲಾಗಾಯಿತು ಹಾಸನ ಟವನ್ ಮ್ಯುನಿಸಿಪಲ್ ಆಫೀಸಿನಲ್ಲಿ ಏಲಂ ಮಾಡಲು ಉಪಕ್ರಮಿಸುತ್ತೆ. ಇದಕ್ಕೆ ಪೂರ್ವಭಾವಿ ಬರೆತಕ್ಕ ಅರ್ಜಿಗಳನ್ನು ಅಂಗೀಕರಿಸುವದಿಲ್ಲ.

ಈ ರೀತಿ ಜಾಗಾಗಳು ಅಪೇಕ್ಷಿಸಿ ತೆಗೆದುಕೊಳ್ಳಲು ಇಷ್ಟವುಳ್ಳವರು ಮ್ಯುನಿಸಿಪಲ್ ಆಫೀಸಿನಲ್ಲಿ ಖುದ್ದು ಯಾ ಅವರಿಂದ ಕ್ರಮವಾದ ಅಧಿಕಾರಹೊಂದಿದವರು ಹಾಜರಾಗಿ ಹೊಂದತಕ್ಕದ್ದಿರುತ್ತೆ. ಅಲ್ಲದೆ ಒಬ್ಬ ಮನುಷ್ಯನಿಗೆ ತನ್ನ ಸ್ವಂತ ಉಪಯೋಗ ಯಾ ವ್ಯಾಪಾರಕ್ಕೆ ಅವಶ್ಯಕವಾದಷ್ಟು ಸೈಟುಗಳು ಮಾತ್ರ ಕೊಡಲಾಗುತ್ತೆ. ಇದರ ಅಧಿಕಾರವು ಸಂಪೂರ್ಣವಾಗಿ ಪ್ರೆಸಿಡೆಂಟ್ ಯಾ ಇವರಿಂದ ಅಧಿಕಾರ ಹೊಂದಿದವರಿಗೆ ಇರುತ್ತೆ.

ಬಾಕಿ ವಿಷಯಗಳನ್ನು ಹಾಸನ ಟವನ್ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

S. R. Srikantia,
For President
Cattle Show Committee
Town Municipality
Hassan.

ಬಿ. ಎಸ್. ಎನ್. ಕಂಪೆನಿಯ ಇತಿಹಾಸ.

ಪಶ್ಚಿಮ ಕರಾವಳಿಯಲ್ಲಿ ಮೊಟ್ಟಮೊದಲು ಸರಿಯಾದ ನಾವೆಯ ಸೌಕರ್ಯಗಳನ್ನು ಕಲ್ಪಿಸಿದ ಕೀರ್ತಿಯು ಒಂದನೇ ಬಿ. ಎಸ್. ಎನ್. ಕಂಪೆನಿಗೆ ಸಲ್ಲುವುದು. 1845ರಲ್ಲಿ ಇದು ಪ್ರಾರಂಭವಾಗಿ 10 ಲಕ್ಷ ರೂ-ಗಳ ಬಂಡವಾಳ ಹಾಕಿತು. ಇದರ ನಾವೆಗಳು ಉತ್ತರಕ್ಕೆ ಕರಾಚಿ ವರೆಗೂ ದಕ್ಷಿಣಕ್ಕೆ ದಿಗಲ್ಲೀ ವರೆಗೂ ಹಬ್ಬಿತ್ತು. ಇದಲ್ಲದೆ ಮದರಾಸು, ಕಲ್ಕತ್ತೆ ಪೆನಾಂಗ ಮತ್ತು ಸಿಂಗಪುರಗಳಿಂದ ಬರುವ ಪಿ ಮತ್ತು ಓ. ನಾವೆಗಳ ಸಂಬಂಧವೂ ಇದಕ್ಕಿತ್ತು. ೧೦ ವರ್ಷಗಳು ಯಶಸ್ವಿಯಾಗಿ ದುಡಿದ ಕಂಪೆನಿಗೆ ತಡೆಯಲಾರದ ಸಂಕಟಗ ಳೊದಗಿ ೧೮೬೩ರಲ್ಲಿ ಅದರ ಕೆಲಸಗಳು ನಿಂತು ಹೋದವು.

೧೮೬೫ರಲ್ಲಿ ಎರಡನೆ ಬಿ. ಎಸ್. ಎನ್. ಎನ್. ಕಂಪೆನಿಯು ಜನ್ಮತಾಳಿತು. ಕಂಪೆನಿಯ ಅಭಿವೃದ್ಧಿಯಲ್ಲಿ ಆಸಕ್ತಿಯುಳ್ಳ ಕೆಲಸಗಾರರು ಕಂಪೆನಿಯಿತ್ತ ಸೌಕರ್ಯಗಳನ್ನು ಉಪಯೋಗಿಸಿಕೊಂಡು ತಮ್ಮ ವ್ಯಾಪಾರವನ್ನು ವಿಸ್ತರಿಸಿದರು. ಇದರಿಂದ ಕಾಥೇವಾಡದ ಹತ್ತಿ ವ್ಯಾಪಾರದಲ್ಲೂ ಕೆನರಾ ಜಿಲ್ಲೆಯ ಕಾಫಿ ವ್ಯಾಪಾರದಲ್ಲಿಯೂ ಅಸಾಧ್ಯ ಪರಿವರ್ತನೆಗಳಾದುವು.

ಈ ಕಾಲದಲ್ಲಿ ಯುರೋಪಿಯನ್ ಕಮಾಂಡರ್‌ಗಳನ್ನೆಲ್ಲ ತೆಗೆದು ಭಾರತೀಯರನ್ನೇ ಆ ಸ್ಥಾನಗಳಿಗೆ ನೇಮಿಸಿದರು.

೧೯೦೬ರಲ್ಲಿ ಮುಂಬಯಿಯ ಕಿಲ್ಲಿಕ್ ನಿಕ್ಸನ್ ಕಂಪೆನಿಯವರು ೬೦ ಲಕ್ಷ ರೂ. ಗಳ ಬಂಡವಾಳ ಹಾಕಿ ಮೂರನೇ ಬಿ. ಎಸ್. ಎನ್. ಕಂಪೆನಿಯನ್ನು ತೆಗೆದರು. ಅದರ ನಾವೆಗಳು, ಸ್ವಾಸ್ಥ್ಯಗಳು ಎಲ್ಲವನ್ನೂ ಈ ಕಂಪೆನಿಯೇ ತೆಗೆದುಕೊಂಡಿತು. ಅಲ್ಲಿಂದ ಮುಂದೆ ಕಂಪೆನಿಯು ಹಣಕಾಸಿನ ಕಡೆಯಲ್ಲಿ ಭದ್ರವಾಗತೊಡಗಿತು.

ಕಂಪೆನಿಯು ಬೇರೆ ಬೇರೆ ಹಡಗುಗಳು ಕರಾಚಿ, ಮಂಗಳೂರು ಮತ್ತು ಭಾವನಗರಗಳಿಗೆ ಸಾಮಾನುಗಳನ್ನೂ ಪ್ರಯಾಣಿಕರನ್ನೂ ಹೊತ್ತು ತರುವುವು. ಒಂದು ಸಾರಿ ಪೂರ್ತಿ ಪ್ರಯಾಣಮಾಡಲು ಒಂದು ವಾರ ಹಿಡಿಯುತ್ತದೆ. ನೋಡತಕ್ಕ ಸ್ಥಳಗಳಲ್ಲೆಲ್ಲ ಒಂದೊಂದು ದಿನ ನಿಲ್ಲಬಹುದು. ಭಾವನಗರ, ಮಾರ್ಮುಗೋವಾ, ಕರಾಚಿ ಈ ಕಡೆಗಳಲ್ಲಿ ಉಚಿತವಾಗಿ ಕ್ಯಾಬಿನ್ ಸೌಕರ್ಯವು ಲಭಿಸುವುದರಿಂದ ಹೋಟಲಿನ ವೆಚ್ಚ ಬೇಡ ಇಲ್ಲ. ರೂ. ೫೬ ಕೊಟ್ಟರೆ ಎರಡೂಕಡೆ ಪ್ರಯಾಣ ಮಾಡಬಹುದು. ಮಂಗಳೂರು ಮಾರ್ಗದಲ್ಲಿ ವೇಂಗುರ್ಲಾ, ಮಾರ್ಮುಗೋವಾ ಮುಂತಾದ ಉತ್ತಮ ವಾಯುಗುಣವಿರುವ ಸ್ಥಳಗಳಲ್ಲಿ ನಿಲ್ಲುವುದು.

ಅಶಕ್ತತೆಯು ಅಪಾಯಕರ!

ಶಕ್ತಿ ಮತ್ತು ಚೈತನ್ಯಗಳನ್ನು ಕಳೆದುಕೊಳ್ಳುವುದು—ತಿನ್ನುವುದಕ್ಕೂ ಅಥವಾ ಕೆಲಸಮಾಡುವುದಕ್ಕೂ ಇಚ್ಛೆಯಿಲ್ಲದಿರುವುದು—ಜೀವನದ ಭಾಗ್ಯವನ್ನುಣ್ಣಲು ಸಾಮರ್ಥ್ಯವಿಲ್ಲದಿರುವುದು—ಇದಕ್ಕೆಲ್ಲ ನಿಮಗೆ ತಿಳಿದಿರುವ ಕೆಲವು ಕಾರಣಗಳಿರುವುವು.

ಇದೆಲ್ಲ ಕುಗ್ಗುತ್ತಿರುವ ಆರೋಗ್ಯದ ಲಕ್ಷಣಗಳೆಂದು ನೀವು ಬಲ್ಲಿರಿ. ಇದರೊಡನೆ ಹಾನಿಕರ ಪರಿಣಾಮವೂ ತಲೆದೋರುವುದು—ಕ್ಷಯ, ಪಕ್ಷವಾತ, ಪ್ರಾಣ ಹಾನಿ ಉಂಟಾಗುವ ದುಷ್ಪರಿಣಾಮಗಳಲ್ಲಿ ಕೆಲವಾಗಿವೆ.

ಇಂತಹ ವ್ಯಾಧಿಯು ತಲೆದೋರಿತೆಂದು [illegible] ಭಾಸವಾದೊಡನೆ ಅದನ್ನು ಓಡಿಸುವುದರಲ್ಲಿ ಹಿಂದಾಗಬೇಡಿರಿ! ಭದ್ರವಾದ ಶಾಸ್ತ್ರೀಯವಾದ (ಮುಂದಕ್ಕೆ ದುಷ್ಪರಿಣಾಮವು ತಲೆದೋರದಂತಹ) [illegible] ಫಲಕಾರಿಯಾದ ಔಷಧವನ್ನು ಸೇವಿಸಿರಿ.

ಕೆಲವೇನೋ ಕಠಾರಿ ಟಾನಿಕ್‌ಗಳಿರುವುವಾದರೂ ಎಲ್ಲವೂ ಅವುಗಳಂತೆ [illegible] ನಂಬಿಕೆಯಿಂದ ಇರಬೇಡಿ. ಅನೇಕ ಜನಗಳು ಜೀವನದ ಸುಖವನ್ನು ಅಲಕ್ಷ್ಯದಿಂದಲೂ, ಆಲಸ್ಯದಿಂದಲೂ ಕಳಕೊಂಡಿವೆ. [illegible] ಹಿತಕರವೆಂದು ಶೋಧಿಸಿ ತಿಳಿಯಿರಿ—ಯಾವುದು ಪ್ರಯೋಗದಲ್ಲಿದೆ, ಯಾವುದು ಜಗತ್ತಿನ ವೈದ್ಯರಿಂದ ಪ್ರಶಂಸಿಸಲ್ಪಟ್ಟು ಯಾವುದು ಸಾವಿರಾರು ರೋಗಿಗಳ ಮೆಚ್ಚಿಗೆಗೆ ಪಾತ್ರವಾಗಿದೆಯೋ ಯಾವುದು ಎಂತಹ ಬಲವಾದ ರೋಗಗಳನ್ನೂ ಓಡಿಸುವುದೋ ಅದನ್ನುಪಯೋಗಿಸಿರಿ.

ಅಸ್‌ಗಂಧರಾ

ಎಂಬುದನ್ನು ನೆನಪಿನಲ್ಲಿಡುವುದು ಉತ್ತಮ.

ಸಾಲಾಮಿಸ್ರಿ (ಶಕ್ತಿವರ್ಧನೆಗಾಗಿ) ಯ ಮಿಶ್ರಣ ಕಾಲ್‌ಸಿಯಮ್ (ದೀರ್ಘಾಯುಷ್ಯಕ್ಕೆ) ಫೊಸ್‌ಫರಸ್ (ಮೆದುಳಿಗಾಗಿ) ಸಸ್ಯಜನ್ಯ ಜೀವನಸಾರ (ಅವುಗಳ ವಿವಿಧ ಗುಣಗಳಿಗಾಗಿ) ಹಿಂದೂದೇಶದ ಮೂಲಿಕೆ ಮತ್ತು ಬೇರುಗಳ ರಸ (ದೇಹದಾರ್ಢ್ಯವನ್ನು ಹೆಚ್ಚಿಸುವುದಕ್ಕೆ) ಇವುಗಳಿರುವ ಟೋನಿಕ್ ಎಂದರೆ ಇದೊಂದೇ. ಅದರ ಅಮೋಘ ಗುಣಗಳಿಂದಾಗಿ ಇದು ಅಖಿಳಭಾರತ ವೈದ್ಯಸಮ್ಮೇಳನ (ಮದ್ರಾಸ್ ಗವರ್ನರರ ನೇತೃತ್ವದಲ್ಲಿ ಜರಗಿದ ಎ. ಐ. ಎಸ್. ಎಂಡ್ ಎಸ್. ವಸ್ತು ಪ್ರದರ್ಶನ) ದಲ್ಲಿ ಭಂಗಾರದ ಪದಕವನ್ನು ಹೊಂದಿರುತ್ತದೆ.

ನಮ್ಮ ನುಡಿಗಳನ್ನೇ ಸ್ವೀಕರಿಸಬೇಡಿ! ಇದನ್ನುಪಯೋಗಿಸಿದವರ ನುಡಿಗಳನ್ನು ಕೇಳಿರಿ.

'ಅಸ್‌ಗಂಧರಾ'ವೆಂಬುದಕ್ಕೆ ಕ್ರಯ ಕಡಿಮೆ;

ಇನ್ನಿತರ ಟೋನಿಕ್‌ಗಳಿಗಿಂತ ವಿಶೇಷ ಗುಣಕಾರಿ.

ಪೆರಗನ್ ಪ್ರೊಡಕ್ಟ್ಸ್ ಕಂಪೆನಿ,

ಸ್ವದೇಶೀ ಔಷಧಗಳ ಇಲಾಖೆ.

ಬೆಲ್ಲಾರ್ಡ್ ಎಸ್ಟೇಟ್, ಬೊಂಬಾಯಿ.

ವಿ. ಸೂ—ಹಿಂದೂಸ್ಥಾನ ಮತ್ತು ಬರ್ಮಾಗಳ ಪ್ರಖ್ಯಾತ ಕೆಮಿಸ್ಟರರಲ್ಲಿ ದೊರೆಯುತ್ತದೆ.

ಮದ್ರಾಸು ಪ್ರಾಂತ್ಯಕ್ಕೆ ಡಿಸ್ಟ್ರಿಬ್ಯೂಟರರು—ಇಂಡಿಯನ್ ಟ್ರೇಡಿಂಗ್ ಕೊರ್ಪರೇಶನ್, 188 ಮೌಂಟ್ ರೋಡ್, ಮದ್ರಾಸು.

ದಕ್ಷಿಣ ಕನ್ನಡ ಜಿಲ್ಲೆಗೆ ಡಿಸ್ಟ್ರಿಬ್ಯೂಟರರು— ಪೈ ಫಾರ್ಮಸಿ, ಕಾರ್‌ಸ್ಟ್ರೀಟ್, ಮಂಗಳೂರು.

The Bombay Life Assurance Co. Ltd.

ESTABLISHED:

1933 Valuation Results just out.

DISCLOSES BETTER RESULTS.

BONUS DECLARED

YEAR.	WHOLE LIFE.	ENDOWMENT.	
130	20	15	Per Thousand Per Year.
1933	23	18	

PROGRESS SHOWS POPULARITY.

There it pays you to take up a policy now in this Co.
and receive "Our best service."

Policy-holders kindly note:—

Bonus Certificates are in preparation and will be posted early next month.

Kochikar Brothers, Madras Branch Secretaries.

UDIPI—MADRAS—CALICUT BANGALORE BOMBAY—MANGALORE.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

(ಸಂಸ್ಥಾಪನೆ 1908.)

1933ನೇ ಲೆಕ್ಕಾಚಾರಗಳ ಫಲಿತಾಂಶಗಳು ಈಗಾಗಲೇ ಪ್ರಕಟವಾಗಿದ್ದು, ಅತ್ಯುತ್ತಮ ಕಾರ್ಯವೃತ್ತಾಂತದ ವರದಿಯನ್ನು ತೋರುವುವು.

ಸಾರಲಾದ ಬೋನಸ್

ವರ್ಷ.	ಇಡೀ ಜೀವಮಾನ.	ಉಂಬಳಿ ಯಾನೆ ಎಂಡೌಮೆಂಟ್.	
1930	20	15	ಪ್ರತಿ ಸಾವಿರಕ್ಕೆ ವರುಷಕ್ಕೆ
1933	23	18	

ಪ್ರಗತಿಯು ಜನಾದರದ ದ್ಯೋತಕವಾಗಿದೆ. ಈ ಪ್ರಗತಿಪರವಾದ ಕಂಪೆನಿಯಲ್ಲಿಯೇ ವಿಮೆಯಿಳಿಸಿ, ನಮ್ಮ ಅತ್ಯುತ್ತಮ ವಿಮಾ ಸೇವೆಯನ್ನು ಪಡೆಯುವುದರಿಂದ ನಿಮಗೆ ಆದಾಯವಿದೆ.

ಪೊಲಿಸಿದಾರರು ದಯಮಾಡಿ ಗಮನಿಸಿರಿ.

ಬೋನಸ್ ಸರ್ಟಿಫಿಕೇಟುಗಳು (ಪತ್ರಗಳು) ಸಿದ್ಧವಾಗುತಿದ್ದು, ಬರುವ ತಿಂಗಳಲ್ಲಿ ಅಂಚೆ ಮೂಲಕ ಕಳುಹಲಾಗುವುವು.

ಕೊಚ್ಚಿಕಾರ್ ಬ್ರದರ್ಸ್, ಮದರಾಸು ಶಾಖಾ ಕಾರ್ಯದರ್ಶಿಗಳು.

ಉಡುಪಿ-ಮದರಾಸು-ಕಲ್ಲಿಕೋಟೆ-ಬೆಂಗಳೂರು-ಬೊಂಬಾಯಿ ಮತ್ತು ಮಂಗಳೂರು.

ಮದರಾಸಿನ ಕಾಂಗ್ರೆಸ್ ವಿಜಯ.

ಶ್ರೀ ಸತ್ಯಮೂರ್ತಿಯವರಿಗೆ ಗಾಂಧೀಜಿಯವರ ಅಭಿವಂದನಾ ತಂತಿ. ಮದರಾಸಿನಲ್ಲಿ ಸಂತೋಷ ಸಮಾರಂಭ.

ಮಹಾತ್ಮಾ ಗಾಂಧಿಯವರು ಶ್ರೀ। ಎಸ್, ಸತ್ಯಮೂರ್ತಿಯವರನ್ನು ಅಭಿವಂದಿಸಿ ಈ ಕೆಳಗಿನಂತೆ ತಂತಿ ಕಳುಹಿರುವರು:—'ನನ್ನ ಅಭಿವಂದನೆಗಳು. ಈ ವಿಜಯ ವಾರ್ತೆಗಳು ನನ್ನನ್ನು ಹರ್ಷಭರಿತನನ್ನಾಗಿ ಮಾಡಿವೆ.'

ಮದರಾಸಿನಲ್ಲಿ ಸಭೆ

ಹೈಕೋರ್ಟು ಬೀಚಿನಲ್ಲಿ ಕಾಂಗ್ರೆಸ್ ವಿಜಯದ ಆಚರಣೆಯ ಬಗ್ಗೆ ಒಂದು ಪ್ರಚಂಡ ಸಭೆಯು ತಾ. ೧೬ರಲ್ಲಿ ಜರಗಿತು ಶ್ರೀ। ಕೆ ನಾಗೇಶ್ವರರಾವ್ ಪಂತಲುರವರು ಅಧ್ಯಕ್ಷಪೀಠವನ್ನಲಂಕರಿಸಿದ್ದರು.

ಸಭೆಯಲ್ಲಿ ಭಾಷಣ ಮಾಡುತ್ತ ಶ್ರೀ। ಪ್ರಕಾಶಂರವರು, ಇದು ಕಾಂಗ್ರೆಸ್ ವಿಜಯದ ಪ್ರಥಮ ಸೋಪಾನ ಮಾತ್ರವಾಗಿದೆಯೆಂದೂ; ಪೂರ್ಣ ವಿಜಯವು ಸರಕಾರದವರ ಮೇಲಾದ ನಂತರವೇ ಆಚರಿಸಲ್ಪಡುವುದಾಗಿಯೂ, ಶ್ರೀ। ಸತ್ಯಮೂರ್ತಿ ಮತ್ತು ವೆಂಕಟಾಚಲಂ ಚೆಟ್ಟಿಯವರ ವಿಜಯವು ನಮ್ಮ ಪ್ರಾಂತ್ಯದಲ್ಲಿ ಜಾತಿದ್ವೇಷವಿರುವುದೆಂದು ಸಾರುವ ಅಥವಾ ಹಾಗೆ ಸಾರಿ ಅದನ್ನು ಉಜ್ವಲಿಸಲಿಚ್ಛಿಸುವವರಿಗೆ ತೀಕ್ಷ್ಣ ಉತ್ತರವೆಂದೂ ನುಡಿದು, ಈ ವಿಜಯ ಸಾಧನೆಗೆ ಶ್ರೀ। ಸಿ ಗೋಪಾಲಾಚಾರ್ಯರೇ ಕಾರಣೀಭೂತರೆನ್ನುತ್ತ ಅವರನ್ನು ಕೊಂಡಾಡಿ, ನಮ್ಮೊಳಗೆ, ಯಾವ ಭೇದಭಾವಗಳಿದ್ದರೂ ದೇಶದ ಕರೆಬಂದಾಗ ನಾವು ಒಗ್ಗಟ್ಟಿನಿಂದ ಮುಂದೆ ನುಗ್ಗುವವರೆಂಬುದನ್ನು ಆವೇಶಪೂರ್ಣವಾಗಿ ವಿವರಿಸಿ ನುಡಿದರು

ಆ ವೇಳೆ ಶ್ರೀ ಸತ್ಯಮೂರ್ತಿಯವರ ಭಾಷಣವಾಯಿತು ರಾಜ್ಯಾಂಗರಚನಾ ಸೂತ್ರಗಳನ್ನನುಸರಿಸಿ ನುಡಿವುದಾದರೆ, ನಮ್ಮ ಮದರಾಸು ಸರಕಾರದ ಮಂತ್ರಿಗಳು ಈಗಿಂದೀಗಲೇ ರಾಜೀನಾಮೆಯನ್ನು ಕೊಡತಕ್ಕದ್ದೆಂದ ನಾನು ಕೇಳುವೆನು. ಈ ಪ್ರಾಂತ್ಯದಲ್ಲಿ ಪ್ರಬಲವೆನಿಸಿ ಅಧಿಕಾರರೂಢವಾದುದು ಜಸ್ಟಿಸ್ ಪಕ್ಷ ಆ ಪಕ್ಷವಿಂದು ಸಂಪೂರ್ಣ ಅಪಜಯ ಹೊಂದಿದೆ ಆದುದರಿಂದಾಗಿ ಅದೀಗ ನಮ್ಮ ಜನರ ನೈಜ ಪ್ರತಿನಿಧಿಯಲ್ಲವೆಂಬುದು ಸುವ್ಯಕ್ತ. ನಮ್ಮ ಮಾನ್ಯ ಗವರ್ನರರಿಗೆ ಆ ವಿಷಯ ಏನಾದರೂ ಸಂದೇಹವಿದ್ದರೆ, ಬಹು ಕಾಲದಿಂದ ಹಳಸಿ ಹೋದ ಈ ಕೌನ್ಸಿಲನ್ನೊಮ್ಮೆ ಮುಕ್ತಾಯಗೊಳಿಸಿ ಹೊಸ ಚುನಾವಣೆಗಳಿಗೆ ಅಪ್ಪಣೆ ಕೊಡಿಸಿ ನೋಡಲಿ' ಅದರಲ್ಲಿ ಜಸ್ಟಿಸ್ ಪಕ್ಷದ ಗರ್ವವನ್ನು ತಿಳಿದುಬಾರದಿರದು. ಆದರೂ ಕಾಂಗ್ರೆಸ್ ವಿಜಯವೆಂದು ಜಸ್ಟಿಸ್ ಪಕ್ಷದವರ ದುರಾಡಳಿತದ ಫಲದಿಂದಾದುದೆಂದು ನಾನು ಹೇಳುವುದಿಲ್ಲ ಸರಕಾರದ ದಬ್ಬಾಳಿಕೆಯಿಂದ ಜನಕೋಟಿಯ ಅಂತರ್ಯವು ಕಾಂಗ್ರೆಸ್ಸಿಗಾಗಿ ಸಹಾನುಭೂತಿಯಿಂದ ಮುಂದೆ ಬಂತು' ಎಂಬುದು ಅವರ ಭಾಷಣ ಸಾರ, ಇವರನ್ನನುಸರಿಸಿ ಶ್ರೀ। ಕಾಳೇಶ್ವರ ರಾಯರೂ ಶ್ರೀ। ವೆಂಕಟಾಚಲಂ ಚೆಟ್ಟಿಯವರೂ ರಾಜಗೋಪಾಲಾಚಾರ್ಯರೂ—ಜಸ್ಟಿಸ್ ಪಕ್ಷದ ಅಪಜಯದ ಕಾರಣಗಳು, ಕಾಂಗ್ರೆಸ್ ವಿಜಯದ ಮರ್ಮ, ಮದರಾಸಿನ ವೋಟರರ ಕರ್ತವ್ಯನಿಷ್ಠೆ ಇವುಗಳನ್ನು ಬಗೆಬಗೆಯಾಗಿ ವಿಮರ್ಶಿಸಿ, ಭಾಷಣಮಾಡಿ, ಜಯಘೋಷದಿಂದ ಸಭೆ ಚದರಿತು.

ಎಸೆಂಬ್ಲಿ ಚುನಾವಣೆಗಳ ಫಲಿತಾಂಶಗಳು.

ಮೌಲಾನಾ ಶೌಕತಾಲಿಯವರು ಚುನಾಯಿಸಲ್ಪಟ್ಟರು.

ಮುಸ್ಲಿಂ ಯೂನಿಟಿ ಬೋರ್ಡಿನ ಪರವಾಗಿ, "ಸಪ್ತನಗರ" (Seven Cities) ಮುಸ್ಲಿಂ ಕೊನ್ಸ್ಟಿಟ್ಯೂಯನ್ಸಿಯಿಂದ ಚುನಾಯಿಸುವುದಕ್ಕೆ ಚುನಾವಣೆಗೆ ನಿಂತ ಮೌ। ಶೌಕತಾಲಿಯವರು ಬಹುಮತ ಪಡೆದು ಚುನಾವಣೆ ಹೊಂದಿರುವರು

ಅಂಕೆಸಂಖ್ಯೆಗಳು—

ಮೌಲಾನಾ ಶೌಕತಾಲಿ—೨೪೧೭

ಡಾ। ಶಫಾದ್ ಅಹಮ್ಮದ್—೧೩೧೧

ಹಾಜಿ ವಾಜಿಯುದ್ದೀನ್—೫೬೨

ಮುಜಫರಪುರ-ಚಂಪಾರಣ್ಯ ಕೊನ್ಸ್ಟಿಟ್ಯೂಯನ್ಸಿ.

ಈ ಕೊನ್ಸ್ಟಿಟ್ಯೂಯನ್ಸಿಯಿಂದಲೂ ಕಾಂಗ್ರೆಸ್ ಉಮೇದ್ವಾರರೇ ಜಯಹೊಂದಿರುವರು

ವಿಪಿನ ವಿಹಾರಿವರ್ಮ (ಕಾಂಗ್ರೆಸ್)—೨೪೧೭

ಗಯಾಪ್ರಸಾದಸಿಂಘ (ಕಾಂಗ್ರೆಸ್)—೮೩೩

ಗಡಿಪ್ರಾಂತ್ಯದ ಚುನಾವಣೆಗಳು

ಡಾ। ಖಾನ್ ಸಾಹೇಬರು (ಖಾನ್ ಅಬ್ದುಲ್ ಗಫರ್ ಖಾನರವರ ಸಹೋದರ) ಎಸೆಂಬ್ಲಿ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಉಮೇದ್ವಾರರಾಗಿದ್ದು, ಬಹುಮತ ಪಡೆದು ಆರಿಸಿಬಂದಿರುವರು ಪೇಶಾವರದಲ್ಲಿ ಇವರ ಮತ್ತು ಖಾನ್ ಅಬ್ದುಲ್ ಗಫರ್ ಖಾನರವರ ಪಟಗಳನ್ನು ಹಿಡಿದುಕೊಂಡು ಮೆರವಣಿಗೆ ಮಾಯಿತು.

ಬಿರಾರ್ ಕೊನ್ಸ್ಟಿಟ್ಯೂಯನ್ಸಿ.

ರಾಷ್ಟ್ರೀಯ ಪಕ್ಷದಿಂದ ಉಮೇದ್ವಾರರಾಗಿದ್ದ ಶ್ರೀಯುತ ಎಮ್ ಎಸ್ ಅಣೆಯವರು, ತಮ್ಮ ಪ್ರತಿಸ್ಪರ್ಧಿಗಳಿಗಿಂತ ಇಪ್ಪತ್ತು ಪಾಲು ಹೆಚ್ಚು ಮತಗಳನ್ನು ಪಡೆದು ಚುನಾಯಿಸಲ್ಪಟ್ಟಿರುವರು. ಶ್ರೀ ಅಣೆಯವರಿಗೆ ದೊರೆತ ವೋಟುಗಳು ೬೯೫೨, ಮಿ। ಬಾಬೂರಾವ್ ಪಾಟೀಲ್—೩೩೫, ಮಿ। ಎಸ್, ಸಿ ಜೋಗ್—೨೪, ಇವರಿಬ್ಬರ ಠೇವಣಾತಿ ಹಣವೂ ಮುಟ್ಟುಗೋಲಾಗಿ ಹೋಯಿತು

ಫೈಜಾಬಾದ್ ಕೊನ್ಸ್ಟಿಟ್ಯೂಯನ್ಸಿಯಿಂದ ಸರದಾರ್ ಗುಲಾಬ್ ಸಿಂಘ ಮತ್ತು ಸರದಾರ್ ಅನೂಪಸಿಂಘ ಎಂಬವರಿಗೆ ಪ್ರತಿಸ್ಪರ್ಧಿಗಳಾಗಿ ಕಾಂಗ್ರೆಸ್ ಪಕ್ಷದಿಂದ ನಿಂತ ಸರದಾರ ಸಂತಸಿಂಘರವರು ಚುನಾವಣೆ ಹೊಂದಿರುವರು. (ಅನೂಪ ಸಿಂಘರವರು ಕೇವಲ ನಾಲ್ಕು ವೋಟುಗಳನ್ನು ಕಳಕೊಂಡರು)

ಪಂಜಾಬಿನಲ್ಲಿ ನಡೆದ ಪಶ್ಚಿಮ ಪಂಜಾಬ ಕೊನ್ಸ್ಟಿಟ್ಯೂಯನ್ಸಿಯ ಎಸೆಂಬ್ಲಿ ಚುನಾವಣೆಗಳಲ್ಲಿ ಮಾತ್ರ ಒಂದು ಸ್ಥಾನವು, ಕಾಂಗ್ರೆಸ್ ಉಮೇದ್ವಾರರಿಗೆದುರಾಗಿ, ಹಿಂದೂ ಮಹಾಸಭೆಯ ಉಮೇದ್ವಾರರಿಗೆ ಸಲ್ಲುವುದಾಯಿತು. ಹಿಂದೂ ಮಹಾಸಭೆಯ ಉಮೇದ್ವಾರರು ಶ್ರೀ। ಭಾಯಿ ಪರಮಾನಂದರವರು, ಇವರಿಗೆ ೬೨೫೫ ವೋಟುಗಳು; ಕಾಂಗ್ರೆಸ್ ಉಮೇದ್ವಾರರು ದಿವಾನ್ ಚಮನ್‌ಲಾಲರು ಇವರಿಗೆ ೪೩೪೯ ವೋಟುಗಳು ಭಾಯಿ ಪರಮಾನಂದರ ಇಂತಹ ವಿಜಯವು ಕೇವಲ ಅನಿರೀಕ್ಷಿತವೇ ಆಗಿದೆ ಇವರನ್ನು ಜಯಘೋಷದಿಂದ ಮೆರವಣಿಗೆಯಾಗಿ ಕೊಂಡೊಯ್ದರು

ಅಂಬಾಲಾ ಡಿವಿಜನಿಗಾಗಿ ನಿಂತ ಉಮೇದ್ವಾರರಲ್ಲಿ—

ಲಾಲಾ ಶ್ಯಾಮಲಾಲ್ (ಕಾಂಗ್ರೆಸ್)—೩೯೮೨.

ಲಾಲಾ ಠಾಕೂರದಾಸ ಭಾರ್ಗವ (ರಾಷ್ಟ್ರೀಯ ಪಕ್ಷ)—೨೭೪೯

ಹೀಗೆ ಪಂಜಾಬಿನಲ್ಲಿ ಮಾಲವೀಯರ ಪಕ್ಷದ ಒಬ್ಬ ಉಮೇದ್ವಾರರು ಅಪಜಯ ಹೊಂದುವಂತಾಯಿತು

ಜಲಂಧರ ಕೊನ್ಸ್ಟಿಟ್ಯೂಯನ್ಸಿಯಿಂದ ನಿಂತ ರಾಷ್ಟ್ರೀಯ ಪಕ್ಷದ ಉಮೇದ್ವಾರರು ಚುನಾಯಿಸಲ್ಪಟ್ಟಿರುವರು,—

ಲಾಲಾ ಫಕೀರಚಂದ (ರಾಷ್ಟ್ರೀಯ)—೧೯೫೭

ಲಾಲಾ ಧುನಿಚಂದ್ (ಕಾಂಗ್ರೆಸ್)—೧೪೬೧

ಪೂರ್ವ ಪಂಜಾಬ ಸಿಖ್ಖ ಕೊನ್ಸ್ಟಿಟ್ಯೂಯನ್ಸಿಯಿಂದ ಅಕಾಲಿ ಪಕ್ಷದ ಮಂಗಲ ಸಿಂಘರವರೂ, ಪೂರ್ವ ಪಂಜಾಬ ಕೇಂದ್ರದ ಮುಸ್ಲಿಂ ಕೊನ್ಸ್ಟಿಟ್ಯೂಯನ್ಸಿಯಿಂದ ಮಿ। ಕೆ ಎಲ್ ಗೂಬಾರವರೂ, ಪಂಜಾಬ ವಾಯವ್ಯ ಕೊನ್ಸ್ಟಿಟ್ಯೂಯನ್ಸಿಯಿಂದ ಖಾನ್ ಸಾಹೇಬ ಎಸ್ ಎಚ್ ಫಜಲ್ ಹಖ್‌ರವರೂ ಚುನಾವಣೆ ಹೊಂದಿರುವರು ವರ್ಗದಾರರ ಕೊನ್ಸ್ಟಿಟ್ಯೂಯನ್ಸಿಯಿಂದ ನಿಜಾಮಾನ್ ಗೇಯಾಸುದ್ದೀನರವರು, ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದಿರುವರು

ಅಸ್ಸಾಮಿನ ಯುರೋಪಿಯನ್ ಸ್ಥಾನಕ್ಕೆ ಮಿ ಎಫ್ ಡಬ್ಲ್ಯು ಹೊಕನ್‌ಹಲ್ ಎಂಬವರ ಚುನಾವಣೆಯಾಗಿದೆ

ಮದ್ರಾಸು ಪ್ರಾಂತ್ಯದ ಚುನಾವಣೆಗಳ ಫಲಿತಾಂಶ

ತಂಜಾವೂರು—ತ್ರಿಚಿನಾಪಳ್ಳಿ ಕೊನ್ಸ್ಟಿಟ್ಯೂಯನ್ಸಿಯಿಂದ ಮೂವರ ಉಮೇದ್ವಾರರು ಅವರಲ್ಲಿ, ಕಾಂಗ್ರೆಸ್ ಉಮೇದ್ವಾರರಾದ ಡಾ ಟಿ ಎಸ್ ಎಸ್ ರಾಜನ್‌ರವರು, ೧೩,೦೯೭ ವೋಟುಗಳನ್ನು ಪಡೆದು ವಿಜಯಶೀಲರಾಗಿರುವುದು ಆನಂದದ ಸುದ್ದಿಯಾಗಿದೆ ರಾವ್ ಬಹದ್ದೂರ್ ಜಿ ಕೃಷ್ಣಮಾಚಾರ್ಯರಿಗೆ ೩೦೩೫ ಮತ್ತು ಶ್ರೀ ಟಿ ವಿ ವೇಣುಗೋಪಾಲ ಚೆಟ್ಟಿಯಾರರಿಗೆ ೫೮೫ ವೋಟುಗಳು ಮಾತ್ರ ದೊರೆತುವು. ಈ ಕೊನ್ಸ್ಟಿಟ್ಯೂಯನ್ಸಿಯಲ್ಲಿ ಈ ಫಲಿತಾಂಶವನ್ನಾರೂ ನಿರೀಕ್ಷಿಸಿರಲಿಲ್ಲ.

ಚೆಂಗಲ್ಪಟ್ಟು—ಆರ್ಕಾಡು ಕೊನ್ಸ್ಟಿಟ್ಯೂಯನ್ಸಿಯಲ್ಲಿ

ಶ್ರೀ। ಸಿ. ಎನ್. ಮುತ್ತುರಂಗಂ ಮೊದಲಿಯಾರರು (ಕಾಂಗ್ರೆಸ್)—೧೦೧೩೭.

ಶ್ರೀ। ನಟೇಶ ಮೊದಲಿಯಾರರು (ಜಸ್ಟಿಸ್)—೩೭೦೪.

ಪಶ್ಚಿಮ ಕರಾವಳಿಯ ಮಹಮ್ಮದೀಯ ಕೊನ್ಸ್ಟಿಟ್ಯೂಯನ್ಸಿಯಿಂದ ಮಿ। ಅಬ್ದುಲ್ಲ ಸತಾರ ಇಸಾಕ್ ಸೇಟರವರು, ೧೯೬೦ ವೋಟುಗಳನ್ನು ಪಡೆದು ಜಯ ಹೊಂದಿದರು. ಇವರ ಎದುರಾಳಿಗಳಾದ ಮಿ। ಎಮ್. ಅಬ್ದುರ್ ರಹಿಮಾನರವರಿಗೆ ದೊರೆತ ವೋಟುಗಳು ೧೬೩೮

ಜರ್ಮನಿ — ಜಾಪಾನುಗಳೊಳಗಣ ರಹಸ್ಯದ ಕರಾರು.

'ಧಾನ್ಯಕ್ಕೆ ಬದಲಾಗಿ ಸಿದ್ಧಿಮದ್ದು.

ಜಾಪಾನು ಇತ್ತೀಚೆಗೆ ಜರ್ಮನಿಯೊಡನೆ, ರಹಸ್ಯವಾಗಿ ಒಂದು ಕರಾರು ಮಾಡಿರುವುದು ಆದರೆ, ರಹಸ್ಯವು ಅಲ್ಪ ಕಾಲದಲ್ಲೆ ಬಯಲಾಯಿತು.

ಮಂಚಕುವೋದಲ್ಲಿ ಸೋಯಾಬೀನ್ಸ್ ಎಂಬ ಧಾನ್ಯವು ಬೆಳೆಯುತ್ತಿದೆ. ಅದನ್ನು ವಿಶೇಷವಾಗಿ ಜಾನುವಾರುಗಳಿಗೆ ಆಹಾರವಾಗಿ ಕೊಡುವರು ಅದನ್ನು ಜಾಪಾನಿನವರು ಜರ್ಮನಿಗೆ ಕೊಟ್ಟು ಬದಲಾಗಿ, ಜರ್ಮನಿಯಿಂದ ತೋಪು—ಬಂದೂಕು—ಸಿಡಿಮದ್ದು—ಮೇಶೀನು ಗನ್ನುಗಳನ್ನು—ವಿಮಾನ ಯಂತ್ರಗಳು ಮತ್ತು ನಾನಾರಸಾಯನಗಳನ್ನುಪಡೆವರು ಕಾರಣ,—ಜರ್ಮನಿಯಲ್ಲಿಂದು ಆಹಾರ ದನಸಗಳ ಅಭಾವವು ತೋರುತ್ತಿದೆ. ಆ ಸೋಯಾಬೀನ್ಸ್ ಗಳನ್ನು ವರ್ಷಂಪ್ರತಿ ಜರ್ಮನಿಯು ಕೊಂಡುಕೊಳ್ಳುವುದು

ಅಷ್ಟರಲ್ಲೆ ಮುಗಿಯಲಿಲ್ಲ, ಬರುವವರ್ಷ, ೩೦೦ ಮಂದಿ ಜರ್ಮನ್ ಯಂತ್ರ ಸಂಯೋಜಕರೂ ವೈಜ್ಞಾನಿಕರೂ ಜಾಪಾನಿಗೆ ಕಳುಹಲ್ಪಡುವರು

ಸೋಯಾಬೀನ್ಸ್‌ಗಳನ್ನು ಹಿಂಡಿ ತೆಗೆದ ತೈಲವನ್ನು ಸಾಬೂನು, ಗ್ಲಿಸರಿನ್ ಮುಂತಾದ ವಸ್ತುಗಳ ತಯಾರಿಯಲ್ಲಿ ಉಪಯೋಗಿಸಬಹುದು.

ಇದನ್ನು ಕೇಳಿ (ಅಥವಾ ಕೇಳದೆ ಆಗಿರಲೂ ಬಹುದು)—ಮಂಚಕುವೋವಿಗೆ ಆಗಮಿಸಿದ ಸಮ್ಮಿಳಿತ ಬ್ರಿಟಿಷ ಕೈಗಾರಿಕೆಗಳ ಸಂಘ (Federation of British Industries) ಇದರ, ಜಾಪಾನು ಬ್ರಿಟಿಷ ಸಾಮಾನುಗಳನ್ನು ಕೊಂಡುಕೊಂಡರೆ ಬ್ರಿಟನು ಜಾಪಾನಿನಿಂದ ಸೋಯಾಬೀನ್ಸ್‌ಗಳನ್ನು ಕೊಂಡುಕೊಳ್ಳುವುದೆಂದು ತಿಳಿಸಿದೆ ಆದರೆ, ಜರ್ಮನಿಯೊಡನೆ ಮೊದಲೇ ಕರಾರು ಮಾಡಿದ ಜಾಪಾನು ಇದಕ್ಕೊಪ್ಪುವುದೋ ತಿಳಿದಿಲ್ಲ ಆ ಕರಾರು ೮ ವಾರಗಳ ಮೊದಲೇ ಪೂರೈಸಿದೆ

೧೯೩೪ ಬೋನಸ್‌ನ ವರ್ಷ

ನೇಶನಲ್ ಇಂಡಿಯನ್ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್

12 ಮಿಶನ್‌ರೋ ಕಲ್ಕತ್ತ.

ಚೆಯರ್‌ಮೆನ್

ಸರ್ ಆರ್. ಎಸ್. ಮುಖರ್ಜಿ, ಕೆ ಸಿ. ಐ. ಇ. ಕೆ. ಸಿ. ವಿ. ಒ.

ಮೆನೇಜಿಂಗ್ ಏಜಂಟ್ಸ್

ಮಾರ್ಟಿನ್ ಎಂಡ್ ಕೊ.

೩೧—೧೨—೩೪ಕ್ಕೆ ನಡೆದು ಬಂದಿರುವ ಮತ್ತು ೩೧—೧೨—೩೪ರ ಒಳಗೆ ಪಡೆದ ಪೋಲಿಸಿಗಳು ಪ್ರಕೃತದ ೧೯೩೪ಕ್ಕೆ ಅಂತ್ಯವಾಗುವ, ಪಂಚವಾರ್ಷಿಕ ಲಾಭದಲ್ಲಿ ಭಾಗವಹಿಸಲು ಹಕ್ಕುಳ್ಳವುಗಳಾಗಿವೆ.

ಯೋಗ್ಯಶರ್ತಗಳ ಮೇಲೆ ಏಜಂಟರು ಬೇಕಾಗಿದ್ದಾರೆ.

ವಿವರಗಳಿಗಾಗಿ ಬರೆಯಿರಿ:—

ಬಿ. ವಿ. ಎನ್ ಪ್ರಭು, ಏಜಂಟ್.
ಶ್ರೀಕೃಷ್ಣ ನೊವೆಲ್ಟಿ ಹೌಸ್, ಮಾರ್ಕೆಟ್ ರೋಡ್, ಮಂಗಳೂರು.

ಟಿ. ವಿ. ರಾಘವಯ್ಯ ಮದ್ರಾಸು ಪ್ರಾಂತ್ಯ ಮತ್ತು ಆಶ್ರಿತ ಸಂಸ್ಥಾನಗಳಿಗೆ ಸೆಕ್ರೆಟರಿ,
ಟ್ಟ್ರೆಸ್ಟ್, ನಂಬ್ರ ೧೫೦, ಮದ್ರಾಸು

The Canara Banking Corporation Udipi, Ltd.

Head office:—UDIPI, S. K. (Incorporated in British India) ESTD. 1906

Branches:—1. Udipi, 2. Coondapoor, 3. Car Street, Mangalore, 4. Shimoga, 5. Madras, 6. Bunder Mangalore, 7. Mercara.

Authorised Capital Rs 3,50,000/- Subscribed & Paid up Rs. 2,25,000 Reserve & other Funds—2,60,953—7—8

ಇದರ ಒಂದು ಶಾಖೆಯು ಇದೇ ತಿಂಗಳ ತಾ 12ನೇ ಸೋಮವಾರ ದಿನ ಮಂಗಳೂರು ಬಂದರದಲ್ಲಿ

(ಪಂಚವಟ್ಟಾಲ್ ಬಿಲ್ಡಿಂಗಿನ ಮಾಳಿಗೆಯಲ್ಲಿ) ತೆರೆಯೋಣಾಗಿದೆ.

ಇದರ ಇನ್ನೊಂದು ಶಾಖೆಯು ಇದೇ ತಿಂಗಳ ತಾ 16ನೇ ಶುಕ್ರವಾರ ಮಡಿಕೇರಿಯಲ್ಲಿ ತೆರೆಯೋಣಾಗಿದೆ.

Office of the Corporation,
Udipi, S. K. 17—11—1934

M. Shrinivas Prabhu,
Ag. Manager.

(Regd)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲಿನೋವು ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ

ರಿಂಗ್‌ವರ್ಮ್ ಮುಲಾಮು:—ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ ಡಜನಿಗೆ ರೂ 3—8—0 ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ, ಮದರಾಸು ಮತ್ತು ಬೊಂಬಾಯಿ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಬೊಂಬೇ.

1908ರಲ್ಲಿ ಸ್ಥಾಪಿತವಾದುದು.

ಪೋಲಿಸಿದಾರರಿಗೆ ವಿಶೇಷ ರಿಯಾಯತಿ.

ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲಾ ಪೋಲಿಸಿದಾರರಿಗೂ "ಸಿಲ್ವರ್ ಜ್ಯೂಬಿಲಿ" ರಿಯಾಯತಿಯಾಗಿ ಅವರವರ ಮುಂದಿನ ಪ್ರತಿ ವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2½ ಸಟೆಯಷ್ಟು ಕಡಿಮೆಯಾದ ಮೊಬಲಗನು ತೆರವ ರಿಯಾಯತಿ ಕೊಡಲಾಗಿದೆ. ಈ ರಿಯಾಯತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೋಲಿಸಿದಾರರು ಪಡಕೊಂಡಿದ್ದಾರೆ ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ್ನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೋಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಯಾ ಸಮ್ಮಂಧಪಟ್ಟ ನಮ್ಮ ಇತರ ಆಫೀಸಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳೋಣಾಗುತ್ತದ

ವಿ ಸೂ —ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು

ಕೊಚ್ಚಿಕಾರ್ ಬ್ರದರ್ಸ್, ಮದ್ರಾಸ್ ಬ್ರೇಂಚ್ ಸೆಕ್ರೆಟರಿಯವರು.

ಆಫೀಸುಗಳು —(1) ಪೋಸ್ಟ್ ಬೋಕ್ಸ್ ನಂಬ್ರ 337 ಪರ್ಮೆಂಟ್ ರೋಡ್, ಮದ್ರಾಸ್, (2) ವಿಶ್ವೇಶ್ವರಪುರಂ ಸರ್ಕಲ್ ಬೆಂಗಳೂರು ಸಿಟಿ (3) ಮಂಗಳೂರು ದಕ್ಷಿಣ ಕನ್ನಡ (4) ಉಡುಪಿ ದಕ್ಷಿಣ ಕನ್ನಡ, (5) ಇಸ್ಮಾಯಿಲ ಬಿಲ್ಡಿಂಗ್ ಲೋಹರ್‌ಚಾಲ್ ಬೊಂಬಾಯಿ ನಂಬ್ರ 2, (6) ಕಲ್ಲಿಕೋಟೆ

Karnataka Chemical and Pharmaceutical Works, Ltd., Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ)

ತಾ 10-10-1934ರಲ್ಲಿ ನಮ್ಮ ಡಿಸ್ಪೆನ್ಸರಿ ಇಲಾಖೆಯನ್ನು ತೆರೆದಂದಿನಿಂದ ನಮ್ಮ ಗಿರಾಕಿಗಳು ತಮ್ಮ ಕಾಹಿಲೆಗಳನ್ನು ನಮ್ಮ ಡಾಕ್ಟರರಿಂದ ಧರ್ಮಾರ್ಥವಾಗಿ ಪರೀಕ್ಷಿಸಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಬಡವರಿಗೆ ಧರ್ಮಾರ್ಥವಾಗಿ ಔಷಧವನ್ನು ಕೊಡುವ ಏರ್ಪಾಡೂ ಮಾಡಿರುತ್ತದೆ ಈಗ ಪರವೂರಿನವರಿಗೂ ಇದರ ಪ್ರಯೋಜನ ಸಿಕ್ಕುವಂತೆ ಪತ್ರ ಮುಖಾಂತರವೂ ಔಷಧಗಳನ್ನು ಸೂಚಿಸುವ ಏರ್ಪಾಡನ್ನು ಮಾಡಿರುತ್ತೇವೆ

ದ್ರಾಕ್ಷಾಸವ (ಉಲ್ಲಾಸ ಉಂಟುಮಾಡುವುದಕ್ಕೆ)	ಚ್ಯವನಪ್ರಾಶ (ಕ್ಷಯಕ್ಷೀಣಾದಿಗಳಿಗೆ)
ಪ್ರಸೂತಿ ಸಂಜೀವನ (ಬಾಣಂತಿಯರಿಗೆ)	ಬ್ರಾಹ್ಮಿ ತೈಲ (ಮೆದುಳಿನ ಕೆಲಸಗಾರರಿಗೆ)
ಹಿಮಸಾಗರ ತೈಲ (ನಿದ್ರಾನಾಶಕ್ಕೆ)	ಕ್ಷೀರಬಲಾ (ಪಕ್ಷವಾತಕ್ಕೆ)
ನಿಯೋವಿಗರ್ (ನಿತ್ರಾಣಕ್ಕೆ)	ಕಾರ್ವೊಫ್ಲೋಜಿಸ್ಟಿನ್ (ಕಫ, ಬಾವು ಇತ್ಯಾದಿಗೆ
ಗ್ರ್ಯಾಪ್ ಲಿಕ್ವಿಡ್ (ಮಕ್ಕಳ ಆರೋಗ್ಯಕ್ಕೆ)	ಯುಟೆರೀನಾ (ಋತುಶೂಲೆ ಇತ್ಯಾದಿಗೆ)

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ

ಹೆಡ್ ಆಫೀಸು ಮತ್ತು ಕಾರಖಾನೆ.—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ —(1) ದೇವಕರಣ ಮೆನ್ಶನ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ 2

ಏಜಂಟ್ಸ್—(2) 1/70 ನ್ಯಾನಪ್ಪ ನ್ಯಾಕನ ಬೀದಿ, ಪಾರ್ಕ್‌ಟೌನ್ ಮದರಾಸು

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

The Printing is the Success of your Trade
Consult: Sharada Press, Mangalore.

ಸ್ವದೇಶಾಭಿಮಾನಿ
SWADESHABHIMANI

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in THE BOMBAY LIFE
Madras Branch Secretaries: Kochikar Brothers, Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೮. | ಮಂಗಳೂರು ತಾ. ೩೦ನೇ ಶುಕ್ರವಾರ ನವಂಬರ ೧೯೩೪. | (30—11—'34) | ಸಂಚಿಕೆ ೪೭

ಕೊಮನ್ಸ್ ಸಭೆಯಲ್ಲಿ ಪಂಡಿತ ಜವಾಹರಲಾಲರ ಬಿಡುಗಡೆಯ ಪ್ರಶ್ನೆ!

ನ್ಯಾಯ ವಿಧಾಯಕ ಸಭೆಗೆ ಶರಸ್ಚಂದ್ರ ಬೋಸರು ಅಧ್ಯಕ್ಷರು?

ನೂತನ ರಾಜ್ಯಭಾರಕ್ರಮವು ಸಂತೃಪ್ತಿಕರವಲ್ಲ!

ಜೊಯಿಂಟ್ ಸಿಲೆಕ್ಟ್ ಕಮಿಟಿಯ ವರದಿಯು ಪ್ರಕಟವಾದಂದಿನಿಂದ ಹಿಂದೂಸ್ಥಾನ ಇಂಗ್ಲಾಂಡುಗಳಲ್ಲಿನ ರಾಜಕೀಯ ವಾತಾವರಣವು ವಿಲಕ್ಷಣ ಪರಿಸ್ಥಿತಿಗೊಳಗಾಗಿದೆ. ಎಲ್ಲೆಲ್ಲಿಯೂ ವರದಿಯ ಖಂಡನೆಯಾಗುತ್ತಿದೆ. ಈ ಸುಧಾರಣೆಗಳ ಜನನಕ್ಕೆ ಕಾರಣೀಭೂತವಾದ ರೌಂಡ್ ಟೇಬಲ್ ಪ್ರತಿನಿಧಿಗಳು ಕೂಡಾ ಈ ರಾಜ್ಯಭಾರ ಕ್ರಮಗಳನ್ನು ಕಂಡು ಅಸಂತೃಪ್ತಿಗೊಂಡಿರುತ್ತಾರೆ. ಕೊಂಗ್ರೆಸ್ ಅಂತೂ ಇಷ್ಟರ ತನಕ ಸುಮ್ಮಗಿದ್ದು ತನ್ನ ಪರಿಪೂರ್ಣ ನಿಷೇಧವನ್ನು ವ್ಯಕ್ತಗೊಳಿಸಿರುತ್ತದೆ.

ಜೊಯಿಂಟ್ ಸಿಲೆಕ್ಟ್ ಕಮಿಟಿ ವರದಿಯ ಪ್ರತಿಗಳು ಬೊಂಬಾಯಿಗೆ ಬಂದು ಇಳಿದಾಗ ತೆಗೆದ ಛಾಯಾಚಿತ್ರ. ಪ್ರತಿಗಳಿರುವ ಪೆಟ್ಟಿಗೆಗಳನ್ನು ಲೋರಿಗಳಲ್ಲಿ ಒಯ್ಯುತ್ತಿರುವರು.

ಅಖಿಳ ಪಕ್ಷೀಯ ಪರಿಷತ್ತು.

ಕೊಂಗ್ರೆಸ್ಸಿನ ಅಧ್ಯಕ್ಷರಾದ ಬಾಬೂ ರಾಜೇಂದ್ರ ಪ್ರಸಾದರು ಮಹಾತ್ಮಾಜಿಯವರೊಡನೆ ವಿಚಾರಿಸಿದ ನಂತರ ಈ ಸಿಲೆಕ್ಟ್ ಕಮಿಟಿಯ ವರದಿಯ ಮೇಲೆ ಕೊಂಗ್ರೆಸ್ಸಿನ ಅಭಿಪ್ರಾಯವನ್ನು ತಿಳಿಸಲಿರುವರು. ಮಹಾತ್ಮಾಜಿಯವರೇ ಮೊದಲಾದ ಎಲ್ಲಾ ಧುರೀಣರ ಒಂದು ಸಭೆಯು ವಾರ್ಧಾದಲ್ಲಿ ಬೇಗನೇ ಸೇರಿ ನವೀನ ಸುಧಾರಣೆಗಳ ವಿಮರ್ಶೆಯಾಗಲಿರುವುದು. ಪ್ರತಿನಿಧಿಗಳಿಗೆ ಆಮಂತ್ರಣಗಳು ಹೋಗಿರುತ್ತವೆ. ಅಖಿಳ ಪಕ್ಷೀಯರ ಒಂದು ಪರಿಷತ್ತು ಪುನಃ ಸೇರಿ ಈ ಸುಧಾರಣೆಗಳನ್ನು ನಿಷೇಧಿಸಬೇಕೆಂದು ನಿರ್ಧಾರವಾಗಿರುತ್ತದೆ.

ಶ್ರೀ ಶರಸ್ಚಂದ್ರ ಬೋಸರು ಅಧ್ಯಕ್ಷರು?

ಚುನಾವಣೆಯಲ್ಲಿ ಕೊಂಗ್ರೆಸ್ಸಿಗೆ ಲಭಿಸಿದ ವಿಜಯವು ಕೊಂಗ್ರೆಸ್ಸಿನ ವಾತಾವರಣದ ವರ್ಚಸ್ಸನ್ನು ದ್ವಿಗುಣಿತಗೊಳಿಸಿರುತ್ತದೆ. ಮುಂದಿನ ನ್ಯಾಯವಿಧಾಯಕ ಸಭೆಗಳಲ್ಲಿ ಯಾವ ರೀತಿಯಲ್ಲಿ ವರ್ತಿಸಬೇಕೆಂದು ನಿರ್ಧಾರವಾಗುತ್ತಿದೆ. ನ್ಯಾಯವಿಧಾಯಕ ಸಭೆಗಳಲ್ಲಿ ಬಹು ಸಂಖ್ಯಾತ ಕೊಂಗ್ರೆಸ್ ಪಕ್ಷೀಯರಿರುವುದರಿಂದ, ಕೇಂದ್ರ ನ್ಯಾಯವಿಧಾಯಕ ಸಭೆಗೆ ಅಧ್ಯಕ್ಷನನ್ನಾಗಿ ಒಬ್ಬ ಕೊಂಗ್ರೆಸ್ ಪಕ್ಷೀಯನನ್ನೇ ಚುನಾಯಿಸಲಿರುವರು. ಅನೇಕರ ಹೆಸರುಗಳು ಸೂಚಿತವಾಗಿರುವುವಾದರೂ, ಶ್ರೀ ಶರಸ್ಚಂದ್ರ ಬೋಸರ (ಇವರು ರಾಜಬಂಧನದಲ್ಲಿರುವರು) ಹೆಸರು ಎಲ್ಲರಿಂದಲೂ ಪುಷ್ಟೀಕರಿಸಲ್ಪಟ್ಟಿರುವುದರಿಂದ ಮುಂದಿನ ಅಧ್ಯಕ್ಷರಾಗಿ ಅವರೇ ಚುನಾಯಿತರಾಗುವರೋ ಎಂಬ ನಿರೀಕ್ಷೆಯಿದೆ.

ಲಂಡನಿನಲ್ಲಿ ಕೋಲಾಹಲ.

ಅತ್ತಲಿಂದ ಲಂಡನಿನಲ್ಲಿ ಮಹಾ ವಾಗ್ಯುದ್ಧಕ್ಕಾರಂಭವಾಗಿರುತ್ತದೆ. ಜೊಯಿಂಟ್ ಸಿಲೆಕ್ಟ್ ಕಮಿಟಿಯ ನೂತನ ರಾಜ್ಯಭಾರ ಕ್ರಮಗಳನ್ನು ಹಿಂದೀಯರು ಸ್ವೀಕರಿಸಲಾರರೆಂಬ ಸಂದೇಹವು ಕೊಮನ್ಸ್ ಸಭೆಯವರಲ್ಲಿದೆ. ತಾ. ೨೮ರಲ್ಲಿ ಕೊಮನ್ಸ್ ಸಭೆಯಲ್ಲಿ ಈ ವಿಷಯಕವಾದ ವಿವಾದಕ್ಕಾರಂಭವಾಯಿತು:—ಲೋರ್ಡ್ ಜೆಟ್‌ಲೇಂಡರು ಈಸ್ಟ್ ಇಂಡಿಯಾ ಸಂಘದಲ್ಲಿ ಭಾಷಣ ಮಾಡುತ್ತಾ—ಹಿಂದೂದೇಶವು ಈ ಸುಧಾರಣೆಗಳನ್ನು ನಿರಾಕರಿಸುವುದು ಅಸಂಭವವೆಂದೂ, ಕೇಂದ್ರದಲ್ಲಿ ಜವಾಬ್ದಾರಿಯು ಸಿಗುವ ತನಕ ಹಿಂದೂದೇಶವು ಶಾಂತವಾಗಲಿಕ್ಕಿಲ್ಲವೆಂದೂ, ಈ ವರದಿಯ ಪರಿಣಾಮವು ಬ್ರಿಟನಿಗೆ ಶ್ರೇಯಸ್ಸನ್ನು ಎಂದೂ ತರಲಾರದೆಂದೂ ಹೇಳಿದರು. ಲೋರ್ಡ್ ಹಾರ್ಡಿಂಜರು ಅಭಿಪ್ರಾಯಗಳನ್ನು ಕೊಡುತ್ತಾ—ಬ್ರಿಟಿಷ ಸರಕಾರವು ಹಿಂದೀಯರಿಗೆ ಅನೇಕ ಸಲ ವಾಗ್ದಾನವಿತ್ತಿರುತ್ತದೆಯಾದುದರಿಂದ ಈಗಲಾದರೂ ಅವರನ್ನು ಸಮಾಧಾನಗೊಳಿಸುವುದು ಹಿತಕರವೆಂದು ಹೇಳಿದರು. ಇವರು ಕೂಡಾ ಹಿಂದೀಯರಿಗೆ ಕೇಂದ್ರದಲ್ಲಿ ಜವಾಬ್ದಾರಿಯನ್ನು ಕೊಡಬೇಕೆಂದು ಸೂಚಿಸಿದರು.

ಜವಾಹರಲಾಲರ ಬಿಡುಗಡೆ?

ತಾ. ೨೮ರಲ್ಲಿ ಜರಗಿದ ಕೊಮನ್ಸ್ ಸಭೆಯಲ್ಲಿ ಕರ್ನಲ್ ವೆಜ್‌ವುಡ್ ಬೆನ್ನರು ಭಾಷಣ ಮಾಡುತ್ತ "ಸಿಲೆಕ್ಟ್ ಕಮಿಟಿಯ ರಿಪೋರ್ಟಿನ ಪ್ರಕಟಣೆಯ ಈ ಸಂದರ್ಭದಲ್ಲಿ ಹಿಂದೀಯ ಧುರೀಣರಲ್ಲಿ ಮಹಾ ವಿಚಕ್ಷಣರೂ ನ್ಯಾಯವಾದಿಗಳೂ ಆದ ಪಂಡಿತ ಜವಾಹರಲಾಲರನ್ನು ಬಿಡುಗಡೆ ಮಾಡುವುದು ವಿಹಿತವೆಂದು ಸರ್ ಸಾಮುವೆಲ್ ಹೋರರು ತಿಳಿಯುವರೇ?" ಎಂದರು. ಇದಕ್ಕೆ ಉತ್ತರವಾಗಿ ಸರ್ ಹೋರರು "ಪರಿಸ್ಥಿತಿಯನ್ನೆಲ್ಲ ನಾನು ಚೆನ್ನಾಗಿ ತರ್ಕಿಸಿಕೊಂಡಿರುವೆನು. ಪಂಡಿತ ನೆಹರೂರವರನ್ನು ಯಾವುದಾದರೂ ಟ್ರಿಬ್ಯುನಲ್ಲಿ ಶಾಸನದ ಮೇರೆಗೆ ಬಂಧಿಸಲಾಗಲಿಲ್ಲ, ಅವರನ್ನು ಸಾಮಾನ್ಯ ಶಾಸನದನುಗುಣವಾಗಿ ಬಂಧಿಸಲಾಗಿದೆ. ಆದುದರಿಂದ ಅವರ ಬಿಡುಗಡೆಯ ವಿಷಯವಾಗಿ ನಾನು ಈಗ ಕೈಯಿಕ್ಕಲಾರೆ" ಎಂದರು.

ಬಹಿರಂಗವಾಗಿ ಗಲ್ಲಿಗೇರಿಸಿದರೇಕೆ?

ಸರ್ ಸಾಮುವೆಲ್ ಹೋರರು ಇನ್ನೊಂದು ಪ್ರಶ್ನೆಗೆ ಉತ್ತರವಾಗಿ ಅವರು "ಕಳೆದ ಆಗೋಸ್ತು ತಿಂಗಳಲ್ಲಿ ಸಿಂಧ್ ದೇಶದ ಶಾಹದಕೋಟ್ ಎಂಬಲ್ಲಿ ಇಬ್ಬರು ಡಕಾಯಿತರನ್ನು ಬಹಿರಂಗವಾಗಿ ಗಲ್ಲಿಗೇರಿಸಿದರೆಂದು ನಾನು ತಿಳಿದಿರುವೆನು. ಆಚರಣೆಯು ನಿಷಿದ್ಧವೆಂದು ನಾನು ತಿಳಿಯುವುದಿಲ್ಲ. ಜನರಿಗೆ ಎಚ್ಚರ ರೂಪವಾಗಿ, ಅಗತ್ಯವಿದ್ದರೆ,—ಹೀಗೆ ಮಾಡುವುದು ಅಲ್ಲಿಯ ಅಧಿಕಾರಿಗಳಿಗೆ ಅನುಕೂಲವೆಂದೇ ನನ್ನ ಮತ" ವೆಂದು ಹೇಳಿರುವರು.

ತನ್ನ ಕೊನ್ಸ್ಟಿಟ್ಯೂಯನ್ಸಿಯಿಂದ ಹೊರಗೆ ಅಟ್ಟಲ್ಪಟ್ಟ ಸರ್ ಷಣ್ಮುಗಂ ಚೆಟ್ಟಿಯವರು ದಿಲ್ಲಿಯಲ್ಲಿರುವ "ಅಧ್ಯಕ್ಷ ಗೃಹ"ವನ್ನು ತ್ಯಜಿಸಿ, ತನ್ನ ಮಹತ್ವಿಕೆಯ ಗುರುತನ್ನು (ಒತ್ತಾಯ ಒಪ್ಪಂದ ಮತ್ತು ಎಸೆಂಬ್ಲಿ ಅಧ್ಯಕ್ಷರ ಶಿರೋಭೂಷಣ—ವಿಗ್) ಹಿಂದೆ ಬಿಟ್ಟು ತೆರಳುವರು.

[illegible]

(All Rights Reserved)

[illegible]

× × × × ×

[illegible]

× × × × ×

ಸ್ವಾತಂತ್ರ್ಯವೆಂದರೇನೆಂದು ನಮಗೆ ... ಬಹುದು. ಅದು ಒಂದು ಪುಸ್ತಕ. ಹಿಂದೂದೇಶದ ಆಡಳಿತವನ್ನು ಇಂಗ್ಲೆಂಡಿನ ಬ್ರಿಟಿಷರು ಹಿಂದೀಯರಿಗಾಗಿ ಹೇಗೆ ಮಾಡುವರೆಂದು ತೋರಿಸುವುದೇ ಅದರ ಒಂದು ಉದ್ದೇಶ! (ಇದನ್ನು ಸ್ವೀಕರಿಸುವುದು ನಮ್ಮ ಧರ್ಮ.)

× × × × ×

ಇನ್ನು ನಮ್ಮ ಹಿಂದೂದೇಶದ ಆಡಳಿತವನ್ನು ವೈಸರಾಯರ ಮೂಲಕ ಪಾರ್ಲಿಮೆಂಟಿನವರು ಮಾಡುತ್ತಿದ್ದರು. ಮುಂದಕ್ಕೆ (?) ಹಾಗಲ್ಲ, ವೈಸರಾಯರೂ ಗವರ್ನರರೂ ಒಟ್ಟಾಗಿ ಹಿಂದೀಯ ಮಂತ್ರಿಗಳ ಸಹಾಯದಿಂದ ಈ ದೇಶವನ್ನಾಳುವರು. (ದುಡ್ಡು, ಸೈನ್ಯ, ವಿದೇಶೀಯ ಸಂಪರ್ಕ ಇವುಗಳೆಲ್ಲ ನಮಗಿಲ್ಲ)

× × × × ×

ಒಂದೊಂದು ಪ್ರಾಂತ್ಯಕ್ಕೆ ಒಬ್ಬೊಬ್ಬ ಗವರ್ನರರು. ಅವರು ಮಂತ್ರಿಮಂಡಲದೊಡನೆ ವಿಚಾರಿಸಿಯೇ ಶಾಸನ ಮಾಡಬೇಕು; ಮಾತನಾಡಬೇಕು; ಊಟ ಮಾಡಬೇಕು; (ಒಂದು ವೇಳೆ ತಮಗೆ ಹಾಗೆ ಮಾಡಲಿಷ್ಟವಿಲ್ಲವಾದರೆ ಅವರಿಗೆ ಅಂದಂತೆ ಅವರು ನಡೆಯಲು ಸ್ಪೆಶಲ್ ಕಾನೂನು ಇದೆ.)

× × × × ×

ಹಿಂದೂದೇಶವನ್ನು ಅನ್ಯದೇಶೀಯರು ಮುತ್ತಿ ನಮ್ಮ ಮಕ್ಕಳು ಮರಿಗಳ ಒಂಟೆಕರಗಳನ್ನೆತ್ತಿಕೊಂಡು ಹೋಗದ ಹಾಗೆ ನಮ್ಮನ್ನು ರಕ್ಷಿಸಲು ನಮಗೆ ಸೈನ್ಯದ ಭದ್ರತೆ ಇದೆ. ಹಿಂದೀಯ ಸೈನಿಕರ ಎದೆಗಳು ಅಷ್ಟು ಗಟ್ಟಿಯಲ್ಲವಾದುದರಿಂದ ಅವುಗಳನ್ನು ಗಟ್ಟಿಮಾಡಲು ಬ್ರಿಟಿಷ ಸೈನಿಕರು ಇರುತ್ತಾರೆ. (ಹೆದರುವುದು ತೀರಾ ಅನವಶ್ಯ.)

× × × × ×

ಕ್ರಾಂತಿಕಾರರ (ಇವರಲ್ಲಿ ಕೊಂಗ್ರೆಸ್ಸಿನವರು ಕೂಡ ದರೋಡೆ ಪಾಸೋ!) ಹುಟ್ಟಡಗಿಸುವುದಕ್ಕಾಗಿ ವೈಸರಾಯರಿಗೆ ಸಂಪೂರ್ಣ ಅಧಿಕಾರವಿದೆ. (ಈ ಅಧಿಕಾರವನ್ನು ಪ್ರಯೋಗಿಸುವ ಮೊದಲು ವೈಸರಾಯರು—ರೂಢಿಗಾಗಿ—ದಾಕ್ಷಿಣ್ಯಕ್ಕಾಗಿ—ಮಂತ್ರಿಗಳನ್ನು ವಿಚಾರಿಸಬೇಕು.) ಇಷ್ಟವರ ಗತಿಯೇನೆಂದು ಹೇಳಲಾಗಲಿಲ್ಲ.

× × × × ×

ನಿಮ್ಮ ಕುಟುಂಬಕ್ಕೆ ಸದಾರೋಗ್ಯ

ನಿಮ್ಮ ಮನೆಯಲ್ಲಿ ರುಚಿಕರ ಓವಲ್ಟಿನ್‌ನ್ನು ದಿನನಿತ್ಯದ ಪಾನೀಯವನ್ನಾಗಿ ಮಾಡಿರಿ. ನಿಮ್ಮವರ ಚೈತನ್ಯ ಬಲಗಳನ್ನು ಇದು ದಿನೇ ದಿನೇ ವೃದ್ಧಿಸುವುದು. ಇದು ಸಂಪೂರ್ಣ ಮತ್ತು ಸಮತೂಕದ ಆಹಾರ. ಇದನ್ನು ಪ್ರಕೃತಿಸಿದ್ಧವಾದ ಟೋನಿಕ್ ಆಹಾರಗಳಿಂದ ತಯಾರಿಸಲಾಗಿದೆ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ವಿಶೇಷವಾಗಿ ತಯಾರಿಸಿದ ಕೋಕೋಗಳಿಂದ ಇದು ತಯಾರಾಗಿದೆ. ಆರೋಗ್ಯ ಶಕ್ತಿಗಳನ್ನು ಹೆಚ್ಚಿಸುವುದಕ್ಕಾಗಿ ಬೇಕಾದ ಎಲ್ಲಾ ಶಕ್ತಿಗಳನ್ನು ಇದು ಧಾರಾಳವಾಗಿ ಕೊಡುತ್ತದೆ.

ಬೆಳಗಲ್ಲೂ ರಾತ್ರೆಯೂ ಒಂದು ಕಪ್ ಓವಲ್ಟಿನ್ ಸೇವನೆ ಸುಖಕರವಾಗಿರುತ್ತದೆ. ಇದು ಚೈತನ್ಯವನ್ನು ಕಟ್ಟಿ ಸ್ವಾದಿ ಶಕ್ತಿಯನ್ನು ಕೊಡುತ್ತದೆ. ಆಯಾಸಗಳೂ ಕೆಲಸದಲ್ಲೂ ಇದು ಶಕ್ತಿದಾಯಕವಾಗಿದೆ. ರಾತ್ರಿಯ ಗಾಢ ನಿದ್ರೆಯನ್ನು ಕೊಡುತ್ತದೆ. ನಿಮ್ಮ ಕುಟುಂಬವು ಇದನ್ನು ಕುಡಿದು ದೀರ್ಘಾರೋಗ್ಯ ಹೊಂದಲಿ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಕವಾಗಿಲ್ಲ. ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ಸಿಗುತ್ತದೆ

ಏಜಂಟ್ಸ್:—ಜೇಮ್ಸ್ ರೈಟ್, ೮೫ಎ. ಕ್ಲೈವ್ ಸ್ಟ್ರೀಟ್ ಕಲ್ಕತ್ತ ಮತ್ತು ಬೊಂಬಾಯಿ ಮದ್ರಾಸುಗಳಲ್ಲಿ

OV/...

ಈ ಪತ್ರವು ಪ್ರಕಟವಾದೊಡನೆ, ಇದನ್ನು ಕೊಂಗ್ರೆಸ್ಸಿನವರೆಲ್ಲ ರಾತ್ರಿ ಹಗಲು ಓದಿ ಮಡಚಿಯಿಟ್ಟರು. ಮೊದಲೇ ನಿರ್ಧರಿಸಿದಂತೆ ಇದರ ಕುರಿತು ತಮ್ಮ ಅಭಿಪ್ರಾಯವನ್ನು ಕೊಟ್ಟಿರುವುದಿಲ್ಲ. (ಹೃದಯದೊಳಗೆ ಮುಚ್ಚಿ ಮಾತ್ರ.)

× × × × ×

ಇದರ ಕುರಿತು ಸಾಯ್ಬನ ಅಭಿಪ್ರಾಯವೇನೆಂದರೆ: ಮಿ. ಮೆಕ್ಡೊನಾಲ್ಡರಾಗಲೀ, ವೈಸರಾಯರಾಗಲೀ ಕೇಳಿದರೆ ಅವನು ಚುಟುಕಾಗಿ ಬರೆಯುವುದು ಹೀಗೆ:—
"ಹಣವನು ಕೇಳಿದ ದಾಸಪ್ಪ; ಪೈಯನು ಕೊಟ್ಟನು ಕೂಸಪ್ಪ; ಹಣ್ಣನು ಕೇಳಿದ ರಂಗಣ್ಣ; ಮಣ್ಣನು ಕೊಟ್ಟನು ಲಿಂಗಣ್ಣ. ಅನ್ನವ ಕೇಳಿದ ಗಾಂಧ್ಯಣ್ಣ; ಕಲ್ಲನು ಕೊಟ್ಟನು ಸೇಂಧ್ಯಣ್ಣ."

× × × ×

ದಾನ ಮಾಡಬೇಕು ಹೀಗೆ ಸ್ವಾಮಿ; ಕೊಡುವುದರಲೂ ಕೊಳ್ಳುವ ಬುದ್ಧಿಯಿರಬೇಕು. ಕೊಳ್ಳುವುದರಲೂ ಕೊಡುವ ಜ್ಞಾನವಿರಬೇಕು: ಇದೀಗ ಶ್ವೇತಪತ್ರ!

ಶ್ವೇತಪತ್ರಕೀ ಜೈ!

'ಸಾಯ್ಬ'

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಪಟ್ಟು, ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶಿಯ ಜೊಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ಕೊಟ್ಟ ಮೂಲಧನ: ರೂ. 330,900. ಕ್ಷೇಮನಿಧಿಗಳು: ರೂ. 444,647. ಠೇವಣಾತಿಗಳು: ರೂ. 57,67,040.

ಆಫೀಸುಗಳು—ಮಂಗಳೂರು, ಮುಂಬಾಯಿ, ಆಲಪ್ಪೆ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ ಮತ್ತು ಬಂಟವಾಳ.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

ಪತ್ರಿಕಾ ಪ್ರಪಂಚ:

ಠಾಕೂರರ ಸಂಗೀತಸೃಷ್ಟಿ. ಪ್ರಾಚೀನ ಹಿಂದೂಶಿಕ್ಷಣದ ಆದರ್ಶಗಳು. ಮಕ್ಕಳ ಗ್ರಂಥಾಲಯಗಳು. ಇಂದಿನ ಚೀನೀಯ ಸ್ತ್ರೀಯರು. ಹೊಗೆದಿಯು ಹೋಗಬೇಕು.

ಠಾಕೂರರ ಸಂಗೀತ ಸೃಷ್ಟಿ.

ಯುರೋಪಿನಲ್ಲಿ ಇತ್ತೀಚೆಗೆ ನಡೆದ ವಸ್ತುಪ್ರದರ್ಶನದ ವೇಳೆ ರವೀಂದ್ರನಾಥ ಠಾಕೂರರು ತಮ್ಮ ಕೈಲಚಿತ್ರಗಳನ್ನು ಕಳುಹಿಸಿಯುತ್ತ, ಅವುಗಳು ಪ್ರಪಂಚಕ್ಕಾಗಿ ಕಲ್ಪಿಸಿ ರಚಿಸಲ್ಪಟ್ಟಿರುವೆಂದೂ, ಆದರೆ ತಮ್ಮ ಸಂಗೀತವು ಮಾತ್ರ ಹಿಂದೂದೇಶಕ್ಕಾಗಿ ರಚಿಸಲ್ಪಟ್ಟಿತೆಂದೂ ಹೇಳಿರುವರು. ಠಾಕೂರರು ತಮ್ಮ ಕವಿತಾ ಸಂಪನ್ನತೆಯನ್ನು ಅಖಿಲ ಹಿಂದೂದೇಶಕ್ಕೆ ಅರ್ಪಿಸಿರುವರಾದರೂ, ಇದುವರೆಗೆ ಅವರ ಪ್ರತಿಭೆಯೆಲ್ಲವೂ ಬಂಗಾಳದ ಒಳಗೆ ಮಾತ್ರ ಉಳಿಯಿತು. ಬಂಗಾಳೀ ಭಾಷೆಯು ಹೊರಗಿನವರಿಗೆ ತಿಳಿಯದಿದ್ದುದೇ ಇದಕ್ಕೆ ಕಾರಣ. ಆದರೆ ಕವಿಗಳು ತಮ್ಮ ಬಂಗಾಳೀ ಭಾಷೆಯ ಕವಿತೆಗಳನ್ನು ಇಂಗ್ಲಿಷಿಗೆ ತರ್ಜುಮೆ ಮಾಡಿದ ನಂತರ ಅವರ ಪ್ರತಿಭೆಯು ಬಾಹ್ಯ ಪ್ರಪಂಚಕ್ಕೆ ತಿಳಿದುಬಂತು. ತರ್ಜುಮೆಯಲ್ಲಿ ಕವಿಯ ಮೂಲಭೂತ ಸ್ವಭಾವವು ತಿಳಿದುಬರುವುದು ಅಸಾಧ್ಯವಾಗಿದೆ. ಆದರೆ ಕವಿಯ ನೈಜ ಪ್ರಭಾವವನ್ನರಿಯಬೇಕಾದರೆ ಅವರ ಮಾತೃಭಾಷೆಯ ಕವಿತೆಗಳನ್ನು ಓದಬೇಕು. ಠಾಕೂರರು ಬರಿಯ ಕವಿಗಳಲ್ಲ; ಚಿತ್ರಕಾರರೂ ಆಹುದು. ಅದರೊಡನೆ ಸಂಗೀತಜ್ಞರೂ ಆಗಿರುವರು. "ಕವಿತೆ, ಚಿತ್ರಕಲೆ, ಸಂಗೀತ ಕಲೆಗಳು ಬೇರೆಬೇರೆಯಾಗಿಲ್ಲ" ವೆಂದು ಅವರೇ ಹೇಳುವರು. ಠಾಕೂರರ ಗಾನದ ಸಂಪನ್ನತೆಯು ಪ್ರಾಚೀನ ಶಾಸ್ತ್ರದಲ್ಲಿ ಹುಟ್ಟಿಕೊಂಡಿದೆ. ಅವರ ಗಾನವು— ಸ್ವಾತಂತ್ರ್ಯ, ಸತ್ಯ, ಪ್ರತಿಭೆಗಳನ್ನು ಸಾರುತ್ತದೆ. ಅವರ ಸಂಗೀತವು ಮನುಷ್ಯನ ಆತ್ಮವನ್ನು ಕಾಡುತ್ತದೆ. ಆತ್ಮನಲ್ಲಿ ನಿಲುತ್ತದೆ. ವಿಶ್ವಭಾರತಿಯ ಸಂಗೀತಜ್ಞರು ಜಗತ್ತನ್ನು ಸಂಚರಿಸಿ ತಮ್ಮ ಜ್ಞಾನವನ್ನು ಪ್ರಸರಿಸಿದರೆ ಲೋಕವು ಎಷ್ಟೋ ಶಾಂತಿಮಯವಾಗುವುದು.

'The Indian Review'

ಪ್ರಾಚೀನ ಹಿಂದೂಶಿಕ್ಷಣದ ಆದರ್ಶಗಳು.

ಪ್ರಾಚೀನ ಗುರುಗಳು ವಿದ್ಯಾರ್ಥಿಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಶಿಕ್ಷಣಕೊಡುವುದರ ಮಹತ್ವವನ್ನರಿತಿದ್ದರು. ಇದಕ್ಕಾಗಿ ವಿದ್ಯಾರ್ಥಿಗಳು ಗುರುಕುಲದಲ್ಲಿ ವಾಸಿಸುತ್ತಿದ್ದರು. ಈ ರೀತಿಯ ವಿದ್ಯಾದಾನದಿಂದ ಪ್ರಾಚೀನ ವಿದ್ಯಾರ್ಥಿಗಳ ಅನುಭವದಂತೆ, ಮಕ್ಕಳಿಗಾಗಲಿಯಾ, ಹಿರಿಯರಿಗಾಗಲಿ ಈ ರೀತಿಯ ವಿದ್ಯೆ. ಆದರೆ ಆಧುನಿಕ ಶಾಲೆಗಳಲ್ಲಿ, ಹಲವು ಬಗೆಯ ಸ್ವಭಾವದ ಹುಡುಗರನ್ನು ಒಂದೇ ಶಾಲಾಧಿಕಾರಿಗಳ ಅಧೀನದಲ್ಲಿ ಒಂದೇ ಅನುಭವವನ್ನು ಕೊಡಲಾಗುತ್ತದೆ. ಇದರ ಪರಿಣಾಮವಾಗಿ ಒಳ್ಳೊಳ್ಳೆ ವಿದ್ಯಾರ್ಥಿಯ ವಿಶಿಷ್ಟ ಗುಣಗಳು ಮನದಲ್ಲೇ ಮುದುಡಿಹೋಗುತ್ತವೆ. ಒಂದು ಆಸ್ಪತ್ರೆಯಲ್ಲಿ ಹಲವು ರೋಗಗಳಿಂದ ಬಾಧಿತರಾಗಿರುವ ಹಲವರಿರುವಾಗ, ಅವರೆಲ್ಲರಿಗೆ ಒಂದೇ ತರದ ಔಷಧಿಯನ್ನು ಕೊಟ್ಟರೆ ಹೇಗಾಗುವುದೋ ಹಾಗೆ ಈ ವಿಷಯ [illegible]. ದೈಹಿಕ ರೋಗಗಳಿಗೆ ಬೇರೆಬೇರೆ ಔಷಧಿಗಳು ಬೇಕೆಂದಿರುವಾಗ, ದೃಷ್ಟಿಗೆ ಗೋಚರವಾಗದ ವಿದ್ಯಾರ್ಥಿಗಳ ವಿವಿಧ ಸ್ವಭಾವಗಳಿಗೆ ಎಷ್ಟು ವಿಧದ ಜ್ಞಾನದಾನವು ಅಗತ್ಯವಿರುವುದಿಲ್ಲ? ಆದ್ದರಿಂದಲೇ ಪ್ರಾಚೀನ ಹಿಂದೂ ಶಿಕ್ಷಣದ ಆದರ್ಶವು ಭಿನ್ನ ಭಿನ್ನ ಸ್ವಭಾವಕ್ಕೆ ಭಿನ್ನ ಭಿನ್ನ ಶಿಕ್ಷಣವಾಗಿದ್ದಿತು. ಆಗಿನವರಿಗೆ ಈ ತತ್ವದ ಸಂಪೂರ್ಣ ಅರಿವಿದ್ದಿತು. ಆದ್ದರಿಂದಲೇ ಅವರು ಪಠ್ಯಗಳಲ್ಲಿ ಗುರುಕುಲವನ್ನು ಸ್ಥಾಪಿಸಿಕೊಂಡು ಒಬ್ಬೊಬ್ಬ ವಿದ್ಯಾರ್ಥಿಗೆ ಒಂದೊಂದು ಬಗೆಯ ವಿದ್ಯಾದಾನ ಮಾಡುತ್ತಿದ್ದರು. ಆಗ ಹಿಂದೂ ದೇಶವು ಪಟ್ಟಣಗಳ ಬಾಹ್ಯರಂಗದಲ್ಲಿರಲಿಲ್ಲ. ಹಳ್ಳಿಗಳ ಅಂತರಂಗದಲ್ಲಿದ್ದಿತು. [illegible] ಸಾವಿರಾರು ವಿದ್ಯಾದಾನದ ಕ್ರಮವನ್ನನುಸರಿಸಲಿಲ್ಲ ವೆಂದು ಹೇಳಲಾಗದು. ನಲಂದದಲ್ಲಿನ ವಿಶ್ವವಿದ್ಯಾಲಯದಲ್ಲಿ ಬಹು ವಿಸ್ತಾರವಾದ ೧೦,೦೦೦ ವಿದ್ಯಾರ್ಥಿಗಳನ್ನು ಸ್ವೀಕರಿಸಲಾಗಿ ಬಹು ಕ್ರಮಬದ್ಧವಾದ ಶಿಕ್ಷಣವು ನಡೆಯುತ್ತಿತ್ತು. [illegible] ಹುವಾಂಗ್‌ಟ್ಸಾಂಗನು [illegible] ನಲಂದದ ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿರುವಾಗ ಬಹು ಸಂಖ್ಯಾತ ವಿದ್ಯಾರ್ಥಿಗಳ ಅರ್ಜಿಗಳಲ್ಲಿ ತಿರಸ್ಕರಿಸಲಾಯಿತಂತೆ.—ಅಲ್ಲಿದ್ದಾಗ್ಯೂ ೧೦,೦೦೦ ವಿದ್ಯಾರ್ಥಿಗಳು ಆ ಶಾಲೆಯಲ್ಲಿದ್ದರಂತೆ. ಈ ವಿದ್ಯಾಲಯದಲ್ಲಿ ೧೫೦೦ ಅಧ್ಯಾಪಕರು ದಿನಕ್ಕೆ ೧೦೦ ಬಗೆಯ ಉಪನ್ಯಾಸಗಳನ್ನು ಕೊಡುತ್ತಿದ್ದರಂತೆ. ಈ ವಿದ್ಯಾಲಯದ ಪದ್ಧತಿಗಳನ್ನು ನೋಡಲು ಗ್ರಾಮಗಳ ಜನರೇ ನೋಡಿಕೊಳ್ಳುತ್ತಿದ್ದರು. ಆಗಿನ ಅಧ್ಯಾಪಕರೂ ವಿದ್ಯಾರ್ಥಿಗಳೂ ಸತ್ಯಾನ್ವೇಷಿಗಳಾಗಿದ್ದರು. ಅವರ ಈ ಸಾಧನೆಯಲ್ಲಿ ಮಹಾರಾಜರು, ಧನಿಕರು, ಸಹಕಾರವೂ ದೊರೆಯುತ್ತಿತ್ತು. ವಿದ್ಯೆಯ ಪ್ರಸಾರವೇ ಅದು ಜ್ಞಾನಿಗಳಿಗಾಗಿ ಮಾತ್ರವಲ್ಲದೆ ಸಂತೋಷದಲ್ಲಿದ್ದೆ. ಲೌಕಿಕ ವ್ಯವಹಾರ ಜ್ಞಾನದ ಪಾಠ ದಲ್ಲೆಲ್ಲ—ಅಲ್ಲದೆ ಬರಿಯ ಪುಸ್ತಕಜ್ಞಾನದ ಮೇಲೆ ಇರಲಿಲ್ಲ.

'Prabuddha Bharatha'

ಮಕ್ಕಳ ಗ್ರಂಥಾಲಯಗಳು.

ಮಕ್ಕಳಿಗಾಗಿ ಗ್ರಂಥಾಲಯಗಳನ್ನು ಸಂಸ್ಥಾಪಿಸುವ ಆಲೋಚನೆಯು ಪ್ರಥಮದಲ್ಲಿ ಆಂಗ್ಲೋ-ಸಾಕ್ಸನರಿಂದ ಬಂದಿತು. ಕ್ರಮೇಣ ಈ ಅಭ್ಯಾಸವು ಫ್ರಾನ್ಸ್, ಜರ್ಮನಿ, ಹೊಲ್ಲೆಂಡ್, ರಷ್ಯ, ಸ್ವೀಡನ್, ನೋರ್ವೆ, ಡೆನ್ಮಾರ್ಕ್, ಬೆಲ್ಜಿಯಂಗಳಲ್ಲಿಯೂ ಯುರೋಪಿನ ಇತರ ಪ್ರಾಂತ್ಯಗಳಲ್ಲಿಯೂ ಪ್ರಚಾರಕ್ಕೆ ಬಂದಿತು. ಅಮೇರಿಕದಲ್ಲಿ ಈ ಚಳವಳಿಯು ಬಹುವಾಗಿ ವ್ಯಾಪ್ತವಾಯಿತು. ಇಷ್ಟಾದರೂ ಈ ದೇಶಗಳಲ್ಲೆಲ್ಲ ಮಕ್ಕಳ ಗ್ರಂಥಾಲಯಗಳು ಅನ್ವರ್ಥನಾಮ ಹೊಂದುವಷ್ಟು ಯೋಗ್ಯತೆಯ ಗ್ರಂಥಗಳ ಸಂಗ್ರಹಗಳೊಂದಿಲ್ಲ. ಶಾಲಾ ಲೈಬ್ರರಿಗಳೇ ಮಕ್ಕಳಿಗೆ ಸಾಕೆಂದು ಅನೇಕರ ಅಭಿಪ್ರಾಯ. ಮಕ್ಕಳ ವಾಚನಕ್ಕೆ ಯೋಗ್ಯವಾದ ಗ್ರಂಥಗಳೇ ವಿರಳವಾಗಿವೆ. ಸಂಯುಕ್ತ ಸಂಸ್ಥಾನಗಳು ಮತ್ತು ಅಮೇರಿಕಗಳು ತಮಗೆ ಕಾಣಿಸಿದಷ್ಟು ಪ್ರಬಲ ಚಳವಳಿಯನ್ನು ಹೂಡಿರುತ್ತವೆ. ಮಿಸ್. ಎಮಿಲಿ ಹನಾಲೇ ಎಂಬವರು ಮಕ್ಕಳ ಗ್ರಂಥಗಳ ರಚನೆಯು ಬೇಗಿಂದಬೇಕೆಂದು ಸಹಜವಾಗಿಯೇ ಪರಿಣಾಮವಾಗಿ ಈ ಈ ಕುರಿತು ಹೆಚ್ಚಿನ ಸುಧಾರಣೆಗಳಾಗಿವೆ. ಮಕ್ಕಳು ಓದುವ ಗ್ರಂಥಗಳು ಭಾವಭರಿತವಾಗಿರಬೇಕು; ಸಕಲ ವಿಷಯಗಳನ್ನು ಆಕರ್ಷಕವಾಗಿ, ಸಂಕ್ಷಿಪ್ತವಾಗಿ, ಹೃದಯಂಗಮವಾಗಿ ಬರೆಯಬೇಕು. ಶೈಲಿಯು ಸರಳವೂ ಸುಲಭವೂ ಆಗಬೇಕು. ಪಾಠಕನ ಚಿತ್ತವನ್ನು ಭಾವನಾಸಾಮ್ರಾಜ್ಯಕ್ಕೆ ಎಳೆಯುವಂತೆ ಮಕ್ಕಳ ಗ್ರಂಥಗಳು ಬರೆಯಲ್ಪಡಬೇಕು.

The Modern Librarian.

ಇಂದಿನ ಚೀನೀಯ ಸ್ತ್ರೀಯರು.

ಕಳೆದ ೪೦ ವರ್ಷಗಳಿಂದ ಚೀನೀಯ ಸ್ತ್ರೀಯರ ಜೀವನ ಮತ್ತು ಸ್ಥಿತಿಗಳಲ್ಲಿ ಅನುಲ್ಲಕ್ಷ್ಯನೀಯ ಸುಧಾರಣೆಯು ಬಂದೊದಗಿರುತ್ತದೆ. ವಿದೇಶೀಯ ಸಂಪರ್ಕ, ಸಂಚಾರ, ವಿದ್ಯೆ, ಸಮರ, ವಾಣಿಜ್ಯ, ಕೈಗಾರಿಕೆ, ಪ್ರಚಾರಕಾರ್ಯ ಮತ್ತಿನ್ನಿತರ ಸಾಧನೆಗಳಿಂದಾಗಿ ಅವರ ಅಂತರ್ಯಬಾಹ್ಯಗಳಲ್ಲಿ ಅದ್ಭುತ ಪರಿವರ್ತನೆಯುಂಟಾಗಿದೆ. ಜಗತ್ತಿನಲ್ಲಿಯ ಪ್ರಮುಖ ಸಾಹಿತ್ಯಗಳು ಅವರಿಗೆ ದೊರೆತಿವೆ. ಪ್ರಗತಿಸೂಚಕ ವಿಜ್ಞಾನವೂ ಅವರ ಹಸ್ತಗತವಾಗಿದೆ. ಸ್ವಾತಂತ್ರ್ಯ, ಲೌಕಿಕಜ್ಞಾನ, ಮನುಷ್ಯನ ಕರ್ತವ್ಯ, ಸ್ತ್ರೀಪುರುಷರೊಳಗಿನ ಸಮಾನಭಾವನೆ, ವಿದ್ಯೆ, ರಾಜಕೀಯ ಆಂದೋಲನಗಳ ತತ್ವಗಳನ್ನೇ ಮನವರಿಕೆಯಾಗಿಸಿಕೊಂಡಿರುವ ಆಗಿನ ಚೀನೀಯ ಮಹಿಳೆಯರಿಗೆ ತಮ್ಮ ಕರ್ತವ್ಯ ಸಾಧನೆಗಳ ಶಕ್ತಿಯುಂಟಾಗಿರುತ್ತದೆ. ಪುರುಷರಂತೆ ಸ್ತ್ರೀಯರಿಗೂ ಆಸ್ತಿಗಳ ಬಾಧ್ಯತೆಗಳು ಬೇಕೆಂದು ಅವರು ಚಳವಳಿಸಿರುವರ ಪರಿಣಾಮವಾಗಿ ಅಲ್ಲಿಯ ಸರಕಾರವು ಸ್ತ್ರೀಯರಿಗೆ ಆ ವಿಷಯಗಳ ಸ್ವಾತಂತ್ರ್ಯವನ್ನೀಯುವ ಶಾಸನಗಳನ್ನು ಮಂಜೂರು ಮಾಡಿರುತ್ತದೆ. ಈಗೀಗ ತರುಣರೂ ತರುಣಿಯರೂ ಒಮ್ಮತದಿಂದ ಸ್ವೀಕರಿಸಲಾದ ದಾಂಪತ್ಯ ಜೀವನದ ಕರಾರಿಗೆ ಸರಕಾರವು ತನ್ನ ಮುದ್ರೆಯನ್ನೊತ್ತುವುದೇ ಇಲ್ಲ.

ಇಂದಿನ ದಿನದಲ್ಲಿ ಮಾನುಷಿಕವಾದ ಯಾವ ಜವಾಬ್ದಾರಿಕೆಯನ್ನು ವಹಿಸುವುದರಲ್ಲಿ ಚೀನೀಯ ಸ್ತ್ರೀಯರು ಹಿಂದಿರುವುದಿಲ್ಲ. ರಾಷ್ಟ್ರದ ರಾಜಕೀಯದಲ್ಲಿ ಚೀನೀಯ ಮಹಿಳೆಯರು ಆಶ್ಚರ್ಯಕರವಾದ ಸಮಪಾಲನ್ನು ಪಡೆದಿರುತ್ತಾರೆ! ವಿದ್ಯೆಯಲ್ಲಿ ಅವರು ಧುರೀಣತೆಯನ್ನು ವಹಿಸುವರಾಗಿವೆ. ಉದ್ಯೋಗಗಳಲ್ಲಿ ತಾವೇ ಮುಂದರಿಕೊಂಡಿರುತ್ತಾರೆ. ವ್ಯಾಪಾರ ವಾಣಿಜ್ಯದಲ್ಲಿ ಎಲ್ಲಾ ಸ್ತ್ರೀಯರಿರುವರು. ಸಾಮಾಜಿಕ ವ್ಯವಹಾರಗಳಲ್ಲಿ ಸ್ತ್ರೀಯರ ಸಂಖ್ಯೆ ಬಹಳ; ಹಾಗೆಯೇ ಗೃಹ ಸಂಬಂಧವಾದ ಜವಾಬ್ದಾರಿಯನ್ನು ಅವರು ವಹಿಸಿಕೊಂಡಿರುತ್ತಾರೆ. ಡಾಕ್ಟರರಾಗಿ, ಉಪಾಧ್ಯಾಯರಾಗಿ, ಸಾಹಿತ್ಯಿಕರಾಗಿ, ವಕೀಲರಾಗಿ, ಪತ್ರಿಕೋದ್ಯೋಗಿಗಳಾಗಿ, ಶಿಲ್ಪಿಗಳಾಗಿ, ಕೈಗಾರಿಕೆಯವರಾಗಿ—ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ಚೀನೀಯ ಮಹಿಳೆಯರು ಪಾಲು ವಹಿಸಿ ಮುಂದುವರಿಯುತ್ತಿದ್ದಾರೆ.

ವಿದ್ಯೆಯ ವಿಷಯದಲ್ಲಿ ಅವರ ಪ್ರಗತಿಯನ್ನು ಲಕ್ಷಿಸೋಣ: ೧೯೧೦ರಲ್ಲಿ ಚೀನೀಯ ಸರಕಾರವು ಸ್ತ್ರೀವಿದ್ಯಾಭ್ಯಾಸವನ್ನು ಸುಸ್ಥಾಪಿಸಿದ್ದಾಗ ೧೩,೦೦೦ ಹುಡುಗಿಯರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದರು. ೧೯ ವರ್ಷಗಳು ಕಳೆದನಂತರ ೪೦೦,೦೦೦ ಹುಡುಗಿಯರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಹೊಂದುತ್ತಿದ್ದರೆಂದು ಲೆಕ್ಕಕ್ಕೆ ಸಿಕ್ಕಿತು. ಹೀಗೆಯೇ ಪ್ರತಿಯೊಂದು ಶಾಲೆಯಲ್ಲಿ, ಕಾಲೇಜಿನಲ್ಲಿ ಮಹಿಳೆಯರು ಹೆಚ್ಚುತ್ತಿರುವರು.

ವ್ಯಾಪಾರೋದ್ಯಮಗಳಲ್ಲಿ ಸ್ತ್ರೀಯರು ಮುಂದಾಗಿರುತ್ತಿರುವರು. ಶಾಂಘೈ ನಗರದಲ್ಲಿರುವ ವಿಮೆನ್ಸ್ ಕಮರ್ಷಿಯಲ್ ಎಂಡ್ ಸೇವಿಂಗ್ಸ್ ಬ್ಯಾಂಕನ್ನು ಮಿಸ್. ನಿಯಾನ್ ಸೋಂಗ್ ಎಂಬ ಸ್ತ್ರೀಯು ನಡೆಸುತ್ತಿರುವಳು. ಈ ಸಂಸ್ಥೆಯು ಸ್ತ್ರೀಯರಿಂದಲೇ ನಡೆಸಲ್ಪಡುತ್ತಿದೆ. ೧೯೩೪ರಲ್ಲಿ ೨೦೦,೦೦೦ ಡೊಲ್ಲರುಗಳ ನಿಧಿ ಈಗಿದಕ್ಕೆ ೫,೦೦೦,೦೦೦ ಡೊಲ್ಲರುಗಳ ನಿಧಿಯಿದೆ. ನೆಂಕಿಂಗ್ ನಗರದಲ್ಲಿ ಇನ್ನೊಂದು ಬ್ಯಾಂಕು ಇದು ಉತ್ಪನ್ನಗೊಂಡಿತ್ತಿದ್ದಲ್ಲಿದೆ.

ರಾಜಕೀಯರಂಗದಲ್ಲೂ ನೂರಾರು ಪ್ರತಿಭಾಶಾಲಿಗಳಿರುವರು. ಅದರಲ್ಲಿ ಕ್ರಾಂತಿಕಾರಕ ಧುರೀಣರಾದ ಸನ್-ಯೆಟ್-ಸೆನ್ ಎಂಬವರ ಧರ್ಮಪತ್ನಿಯು ಪ್ರಮುಖರು. ಜನಸಾಧಾರಣರಲ್ಲಿ ಈ ಮಹಿಳೆಯ ಮಾತುಗಳನ್ನು ಅತ್ಯಧಿಕ [illegible] ಬಾಳಿಸಲಾಗುತ್ತದೆ. ನಾನ್‌ಕಿಂಗ್‌ದ [illegible] ಸರಕಾರದಲ್ಲಿ ರಾಷ್ಟ್ರೀಯ ಚಳವಳಿಗೇ ಆಧಾರವಾಗಿರುತ್ತದೆ. ಇವರು ಅಲ್ಲಿಯ ರಾಷ್ಟ್ರಕ್ಕೊಂದು ಆಧಿಪತ್ಯರೆಯುಂತೆ ವಿದೇಶೀಯರ ಮುಷ್ಟಿಗಳಿ ಮತ್ತು ದೇಶೀಯ ಸಂಸ್ಥೆಗಳೂ ಗೋಚರವಾಗಿರುವ ಚೀನಾದೇಶದಲ್ಲಿ ಈ ಅಂಗನೆಯ ಕೀರ್ತಿಯು ದಿಗಂತವ್ಯಾಪ್ತವಾಗಿದೆ.

Stri Dharma.

ಹೊಗೆದಿಯು ಹೋಗಬೇಕು.

ಮೈಸೂರು ಹೊಗೆ ತೆತ್ತು ತೆತ್ತು ದಿನದಿನವೂ ಕೃಶವಾಗುತ್ತಿದೆ. ಇಂದು ಮೈಸೂರು ತಲೆಯೆತ್ತಲಾರದ ತಪಕೆಯಿಂದ ಜೀವಿಸಿನಡೆಸುತ್ತಿದೆ. ಅದಕ್ಕೆ ಕಾರಣವೇನು? ಜನರ ಅಭಾವ-ಆರ್ಥಿಕ ದುರ್ದಶೆ, ಜತೆಗೆ ಪಟ್ಟಿ ಕಾಟ. ಮೈಸೂರು ಸರಕಾರದವರೂ, ಪ್ರಜೆಗಳೂ ಒಂದೇ ಸಮನಾಗಿ—"ಈ ಅನ್ಯಾಯದ ಹೊಗೆದಿಯು ಹೋಗಿ ಹೋಗಬೇಕು, ಸಾಗರಿಕ ರಾಷ್ಟ್ರಗಳ ಆಕ್ರಮಣದ ಪಕ್ಕ ಕಳಂಕ ತರುವ ತಲೆಗಂದಾಯವಿದು" ಎಂಬವಾಗಿ ಒತ್ತಿ ಒತ್ತಿ ಹೇಳುತ್ತಾರೆ. ಸಮಿತಿಗಳ ಮೇಲೆ ಸಮಿತಿಗಳು ಬಂದವು. ಡೇವಿಡ್‌ಸನ್ ಸಮಿತಿ ಬಂತು; ಆ ಸಮಿತಿಯವರೇನೋ ದೇವರ ದಯೆಯಿಂದ "ಹೊಗೆದಿಯೇನೋ ಇಂದಲ್ಲ ನಾಳೆ ಹೋಗಲೇ ಬೇಕು" ಎಂದು ಹೇಳಿ ತತ್ವವನ್ನು ಅಂಗೀಕರಿಸಿದರು. ಅಷ್ಟೇ ಅಲ್ಲ; ಒಂದು ಕಾಲಾವಧಿಯೊಳಗಾಗಿ ಈ ಹೊಗೆದಿಯನ್ನು ತರಗಿಸಬೇಕೆಂದು ಸಲಹೆಕೊಟ್ಟರು. ಜಂಟಿಪಾರ್ಲಿಮೆಂಟರಿ ಸಮಿತಿಯವರಾದರೋ ಈ ವಿಚಾರವಾಗಿ ಹೆಚ್ಚಾಗಿ ಒಂದಕ್ಷರವನ್ನು ಹೇಳದೆ ಬ್ರಿಟಿಷರಂತೆಯೇ "ಡೇವಿಡ್‌ಸನ್ ಸಮಿತಿಯವರ ಶಿಫಾರಸುಗಳು ನಮಗೆ ಪಥ್ಯ" ಎಂದುಬಿಟ್ಟರು. ಅಂದರೇನು, ಈ ಹೊಗೆದಿ ಪ್ರಶ್ನೆಯು ಎಲ್ಲಿತ್ತೋ ಅಲ್ಲಿಯೇ ಉಳಿದಿದೆಯೆಂದಾಯಿತು.

ಸಾವಿರಾರು ಸುಮ್ಮನೆ ಕೂಡಲಾಗದು. ಸಂಯುಕ್ತ ರಾಜ್ಯಾಂಗರಚನೆ ಆದಾಗಲಿ, ಸಾಕೆಯಾಗಲಿ ಮೈಸೂರಿನ ಪ್ರಜೆಗಳೂ, ಪ್ರಧಾನ್ಯರೂ ಜಗಳಿರುವರು, ಹೊರಡಬಾರದು. ಎಲ್ಲಾ ಲಕ್ಷ ರೂಪಾಯಿಗಳ ವಾರ್ಷಿಕ "ಸೂರೆ"ಯಿಂದ ಮೈಸೂರನ್ನು ರಕ್ಷಿಸಬೇಕು. ಇಲ್ಲವಾದರೆ ಮೈಸೂರಿಗೆ ಮೋಕ್ಷವಿಲ್ಲ, ಮೈಸೂರಿನ ಸಿರಿಸಂಪದಗಳೆಲ್ಲ ಸ್ವಪ್ನದ ಮಾತೆ. ಮೈಸೂರಿನ ಸುಖಕ್ಕೆ ಎರಡು ಹೊಸ್ತು ಹೊಟ್ಟೆತುಂಬ ಉಣಲು ಅನ್ನ ಲಭ್ಯವಾಗುವುದೇ ಕಷ್ಟವಾದೀತು. ವಿ. ಕೃ.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.

	ರೂ.	ಆ.	ಪೈ.
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0

ಸಿವಿಕ್ಸ್ ಮತ್ತು ನೀತಿಬೋಧೆ.

ಐದನೇ ದರ್ಜೆ	0	3	0
ನಾಲ್ಕನೇ ,,	0	3	0
ಮೂರನೇ ,,	0	2	6
ಎರಡನೇ ,,	0	2	0

ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.

	ರೂ.	ಆ.	ಪೈ.
ಐದನೇ ದರ್ಜೆ	0	3	0
ನಾಲ್ಕನೇ ಸ್ಟಾಂಡರ್ಡ್	0	3	0

ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.

ಎರಡನೇ ದರ್ಜೆ	0	3	6
ಮೂರನೇ ,,	0	3	0
ನಾಲ್ಕನೇ ,,	0	3	0
ಐದನೇ ,,	0	4	0

ಅಜ್ಜಿ ಕಥೆಗಳು (ಸಚಿತ್ರ).

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು.
ಮೆಣಸಿನ ಕಾಳಪ್ಪ.
ಆಗಸದ ಮುತ್ತೈ.
ಇಲಿಗಳ ಭಕ್ತಿ.
ಅಂಗಳ ಮುತ್ತು.
ಗುಡುಗುಡು ಗುಮ್ಮಟ ದೇವರು.
ಒಡ್ಡನ ಓಟ.
(ಇವುಗಳ ಕ್ರಯ: 1ಕ್ಕೆ 0-0-9)

ಮತ್ತು

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸಮಾಜಶಾಸ್ತ್ರ' ಸಿದ್ಧವಾಗುತ್ತಿದೆ.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

1935ರ ಡೈರಿಗಳು, ಎಲ್ಲಾ ಕೋರ್ಟು ಫಾರ್ಮುಗಳು, ಬೇಕೆಂದಾದರೆ

ಶಾರದಾ ಛಾಪಖಾನೆ, ಮಂಗಳೂರು.

ಲೋಧ್ರ

ಸ್ತ್ರೀಯರಿಗೊಂದು ದಿವ್ಯ ಟಾನಿಕ್.

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 3 ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು.

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಪ್ರಯುಕ್ತೀಣಾತಿಗಳಿಗೆ

ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ

(ಕಸ್ತೂರಿ ಮಿಶ್ರಣ)

ಸಮಸ್ತ ವಾತರೋಗಗಳಿಗೆ

ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮಾವೈದ್ಯಾಶ್ರಮ ಸಂಸ್ಥೆ, ಡೊಂಗರಕೇರಿ ರಸ್ತೆ, ಮಂಗಳೂರು.

ಚಿತ್ರಾಹುತಿ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್

ಅವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಿಸಹಿತ,

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಟ್ಟಿಗೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— **ಶಾರದಾ ಛಾಪಖಾನೆ,**
ರಥಬೀದಿ, ಮಂಗಳೂರು

ಉತ್ತಮ ಉಳುಮೆಯ ಇಯತ್ತೆಯನ್ನು ಸ್ಥಾಪಿಸಿರುವುದೆಂದರೆ—

ಕಿರ್ಲೋಸ್ಕರ ನೇಗಿಲು.

ಕಳೆದ ಕಾಲು ಶತಮಾನದಿಂದ ಅದು ಹಿಂದೆ ರಹಿತನ ಮೆಚ್ಚುಗೆಯ ನೇಗಿಲಾಗಿ ಮೆರೆಯುತ್ತಿವೆ.

ಈ ನೇಗಿಲುಗಳು ಇಪ್ಪತ್ತೆರಡು ಬೇರೆ ಬೇರೆ ತರದವುಗಳಾಗಿ, ಎಲ್ಲ ಬಗೆಯ ಜಮೀನುಗಳಿಗನು ಕೂಲವಾಗುವಂತೆ ಮಾಡಲ್ಪಟ್ಟಿರುವ ಕಾರಣ, ನೀವು ನಮಗೆ ಬೇಕಾದಂಥದ್ದನ್ನು ನಮ್ಮ ವಿಪುಲ ಸಂಗ್ರಹದಿಂದ ಆರಿಸಿ ತೆಗೆಯಬಹುದಾಗಿದೆ.

ವಿವರಕ್ಕಾಗಿ ಬರೆದುಕೊಳ್ಳಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೊಲರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ. 1—0—0.

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ಪ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸಿನ ಬಾಟ್ಲಿ 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ

ಇಲ್ಲಿ ಸಿಗುವುದು.

ಸೈಂಟಿಫಿಕ್ ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗ ಧರ್ಮಾರ್ಥ.

ವಿಳಾಸ:—

The Scientific Gold Bangles Co., Ltd.,
Head Office:—43, Byragimatam Street,
Post Box No. 203, Madras.

ಪುರುಷರಾಗಬೇಕು!

ನೀವು ಶೇಕಡಾ ನೂರು ಭಾಗವೂ, ದೃಢಕಾಯರಾಗಿಯೂ, ಶಕ್ತಿಯುಳ್ಳವರಾಗಿಯೂ ರೋಗವನ್ನು ಕಡೆದು ಜಯಿಸುವಂಥ ಸಾಮರ್ಥ್ಯವುಳ್ಳವರಾಗಿಯೂ ಆಗಿರಬೇಕೆಂದು ನಿಮಗೆ ಪ್ರಬಲವಾದ ಆಶೆಯಿರುತ್ತದೆ, ದೇಹದ ಅಬಲತೆಯಿಂದಾಗುವ ಹಾನಿಗಳು ನಿಮಗೆ ತಿಳಿದಿವೆ. ಅಬಲರನ್ನು ಕಂಡರೆ ಜನರು ವಿನೋದ ಮಾಡುತ್ತಾರೆ, ನಗುತ್ತಾರೆ, ಪರಿಹಾಸ್ಯ ಮಾಡುತ್ತಾರೆ, ಮತ್ತು ಅವರನ್ನು ಜೊತೆಯಲ್ಲಿ ಸಹ ಸೇರಿಸಿಕೊಳ್ಳುವುದಿಲ್ಲ.

ಜೀವಾಮೃತವು

ಇದು ಆರೋಗ್ಯಸಾಧಕ ಮತ್ತು ಶಕ್ತಿವರ್ಧಕ.

ಇದನ್ನು ಉಪಯೋಗಿಸಿ ಅಬಲಪ್ರಾಣಿಗಳಾಗಿದ್ದ ಸಾವಿರಾರು ಜನರು ದೃಢಕಾಯರಾಗಿದ್ದಾರೆ.

ಆರೋಗ್ಯವನ್ನು ಪಡೆಯಬೇಕೆಂದೂ, ದೇಹಬಲವನ್ನು ಹೊಂದಬೇಕೆಂದೂ, ಶಕ್ತಿಸಾಮರ್ಥ್ಯಗಳನ್ನು ಹೊಂದಬೇಕೆಂದೂ ನಿಮ್ಮ ನರಗಳಲ್ಲಿಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕೆಂದೂ ನಿಮಗೆ ಅಭಿಲಾಷೆಯಿದ್ದರೆ, (ಪ್ರತಿಯೊಬ್ಬನಿಗೂ ಇದು ಇದ್ದೇ ಇರುತ್ತದೆ.) ಜೀವಾಮೃತವನ್ನು ಸೇವಿಸುವುದರಿಂದ ನಿಮಗೆ ಇವೆಲ್ಲವೂ ಲಭಿಸುತ್ತವೆ. ನಿಮ್ಮಲ್ಲಿ ರಕ್ತಕ್ಕ ಅಬಲತೆಯೂ, ಅಜೀರ್ಣವೂ ನರಗಳ ನಿಶ್ಶಕ್ತಿಯೂ ಜಿಗುಪ್ಸೆಯೂ ಎಲ್ಲವೂ ತೊಲಗಿಹೋಗುತ್ತವೆ. ಗಂಡಸರಾಗಲೀ, ಹೆಂಗಸರಾಗಲೀ, ಎಲ್ಲಾ ವಯಸ್ಸಿನವರೂ ಜೀವಾಮೃತವನ್ನು ಉಪಯೋಗಿಸಬಹುದು. ಎಲ್ಲಾ ಔಷಧಿ ಅಂಗಡಿಗಳಲ್ಲಿಯೂ ಬಿಕರಿಗೆ ಸಿದ್ಧವಿರುತ್ತದೆ.

ಎರಡು ಸೈಜಿನ ಬಾಟಲಿಗಳು ಕ್ರಯ: ರೂ. 3—4—0 ಮತ್ತು ರೂ. 1—12—0.

ಆಯುರ್ವೇದಾಶ್ರಮಂ, ಪೋ. ಬಾಕ್ಸ್ ನಂ. ೩೦೭, ಮದ್ರಾಸು.

ಸೋಲ್ ಏಜಂಟರು:— ಸಿಟಿ ಮೆಡಿಕಲ್ ಮತ್ತು ಜನರಲ್ ಏಜನ್ಸಿ, ೯೦ ಚಿಕ್ಕಪೇಟೆ ಬೆಂಗಳೂರು ಸಿಟಿ. (ಉಡುಪಿ ಹೋಟೆಲ್ ಎದುರು)
ದಕ್ಷಿಣ ಕನ್ನಡದ ಏಜಂಟರು— ಪೊಪ್ಯುಲರ್ ಸ್ಟೋರ್ಸ್, ಮಂಗಳೂರು. P. No. 104

---

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai

Sawkar Mahal,
Car Street, MANGALORE.

An Advertisement in

'Swadeshabhimani'

Means a sure fortune to you

Ask for Contract Rates.

The Swadeshabhimani office,
Car Street, Mangalore.

---

preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ತಿರಿಗಿ ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:— **ಪಂಡಿತ ಕೆ. ನಾರಾಯಣರಾವ್,** ಆಯುರ್ವೇದ ಭಿಷಕ್, ಕಾರ್ಕಳ, ದ. ಕ.

Branches—Kukkundoor & Kalkamba; (Gurpoor) ಬ್ರಾ—ಕುಕ್ಕುಂದೂರು, ಕೃಕಂಬ, ಗುರ್ಪುರ.

[N. B.—[illegible]]

ಜೊಯಿಂಟ್ ಸಿಲೆಕ್ಟ್ ಕಮಿಟಿ ವರದಿಯ ಪ್ರಕಟಣೆ!

ಹಿಂದೂದೇಶಕ್ಕೆ ಪ್ರಾಂತಿಕ ಸ್ವಾತಂತ್ರ್ಯ. — ಸಮ್ಮಿಳಿತ ರಾಜ್ಯಭಾರ ಕ್ರಮ.

ಹಿಂದೂದೇಶದಲ್ಲಿನ ಸ್ವಾತಂತ್ರ್ಯ ಚಳವಳಿಯ ಪರಿಣಾಮವಾಗಿ ಇಂಗ್ಲಾಂಡಿನಲ್ಲಿ ಮೂರು ರೌಂಡ್‌ಟೇಬಲ್ ಪರಿಷತ್ತುಗಳು ಜರಗಿ ಬ್ರಿಟಿಷ ಮತ್ತು ಹಿಂದೀಯ ಪ್ರತಿನಿಧಿಗಳು ಒಟ್ಟಾಗಿ ಜೊಯಿಂಟ್ ಸಿಲೆಕ್ಟ್ ಕಮಿಟಿಯೊಂದನ್ನು ಮಾಡಿಕೊಂಡು ಹಿಂದೂದೇಶದ ನೂತನ ರಾಜ್ಯಭಾರದ ಕುರಿತಾಗಿ ಕ್ರಮನಿಯಮಗಳನ್ನು ನಿರ್ಧರಿಸಿಕೊಂಡು, ಅದರ ವರದಿಯನ್ನು ಹಿಂದೀಯರ ಮತದಾನಕ್ಕಾಗಿ ತಾರೀಕು ೨೨-೧೧-೩೪ರಲ್ಲಿ ಇಂಗ್ಲಾಂಡು ಮತ್ತು ಹಿಂದೂದೇಶಗಳಲ್ಲಿ ಏಕಕಾಲದಲ್ಲಿ ಪ್ರಕಟಿಸಿದರು. ಇದರ ಪ್ರಥಮ ಸಂಪುಟದ ಒಂದನೇ ಭಾಗದಲ್ಲಿ ೪೨೭ ಪುಟಗಳಿವೆ. ಭಾಗ ೨ರಲ್ಲಿ ಜೊಯಿಂಟ್ ಸಿಲೆಕ್ಟ್ ಕಮಿಟಿಯ ವರದಿ ಮೊದಲಾದುವುಗಳಿವೆ. ಎರಡನೇ ಸಂಪುಟದಲ್ಲಿ ಇನ್ನಿತರ ಎಲ್ಲಾ ವಿಷಯಗಳಿವೆ. ಈ ಕಮಿಟಿಯ ಕಾರ್ಯ ನಿರ್ವಹಣಕ್ಕೆ [illegible] ಹಣವು ವೆಚ್ಚವಾಯಿತು.

ಇದನ್ನು ಪ್ರಕಟಿಸಿದ ಬ್ರಿಟಿಷ ಸರಕಾರವು ತನ್ನ ಸಾಹಸದಲ್ಲಿ ಭಾಗಿಗಳಾಗಿದ್ದ ಬ್ರಿಟಿಷ ಮತ್ತು ಹಿಂದೀಯ ಪ್ರತಿನಿಧಿಗಳಿಗೂ ಇತರರಿಗೂ ಅಭಿವಂದಿಸಿರುತ್ತದೆ. ಹಿಂದೂದೇಶದಲ್ಲಿ ರಾಷ್ಟ್ರೀಯತಾ ಭಾವನೆಯು ತಲೆದೋರಿರುತ್ತಿರುವುದರಿಂದ ಈ ಸುಧಾರಣೆಗಳನ್ನು ಕೊಡಲಾಯಿತೆಂದು ಸರಕಾರದ ಮತ. ಇಂತಹ ಭಾವನೆಯುಳ್ಳವರು ಅಲ್ಪ ಸಂಖ್ಯೆಯಲ್ಲಿರುವರಾದರೂ—ಸಾಮಾನ್ಯ ಜನರ ಕೇಳಿಕೆಗಳಿಗೆ ಕಿವಿಗೊಡುವುದು ಅಧಿಕಾರವರ್ಗದ ಕಳಿಗೇಡಿತನವಾದರೂ ಸಾರ್ವಜನಿಕರ ಕೇಳಿಕೆಗಳವೆಯೆಂಬುದರಿಂದಲೇ ಈ ಶಿಫಾರಸುಗಳನ್ನು ಕೊಡಲಾಯಿತೆಂದು ಸರಕಾರದ ವಾದವಿದೆ. ಇಂಗ್ಲಾಂಡಿನ ರಾಜ್ಯಭಾರಕ್ರಮವು ಹಿಂದೂದೇಶಕ್ಕೆ ಒಪ್ಪಲಾರದೆಂದು ಕಮಿಟಿಯ ಶಿಫಾರಸು. ಆದುದರಿಂದ ಹಿಂದೂದೇಶಕ್ಕೆ ಕೊಡುವ ಸುಧಾರಣೆಗಳಿಗೆ ತಕ್ಕ ಭದ್ರತೆಗಳು ಅವಶ್ಯವೆಂದು ವರದಿಯನ್ನು ಬರೆದವರ ಆಶ್ವಾಸನೆ. ಹಿಂದೂದೇಶದ ರಾಜ್ಯಭಾರ ಕ್ರಮವು ಕ್ರಮೇಣ ವೃದ್ಧಿಯನ್ನು ಹೊಂದುವುದೆಂದು ಕಮಿಟಿಯು ನುಡಿದಿರುತ್ತದೆ. ಸಾರಾಂಶವು ಹೀಗಿದೆ:—

ಭಾರತ ದೇಶಕ್ಕೆ ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡಲಾಗಿದೆ. ಸಂಸ್ಥಾನಗಳಲ್ಲಿರುವ ಈಗಿರುವ ದ್ವಿದಳ ಸರಕಾರ ಪದ್ಧತಿಯನ್ನು ರದ್ದುಗೊಳಿಸಿ ಅವುಗಳಿಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಗಳನ್ನು ಮಂತ್ರಿಮಂಡಲದ ವಶ ಕೊಟ್ಟಿರುತ್ತದೆ. ಮಂತ್ರಿಮಂಡಲಕ್ಕೂ ಎಕ್ಸಿಕ್ಯೂಟಿವ್ ಅಧಿಕಾರಕ್ಕೂ ಸಂಬಂಧವಿರುವುದಿಲ್ಲ. ಇಂಡಿಯಾ ಸರಕಾರ ಮತ್ತು ಪಾರ್ಲಿಮೆಂಟಿನ ಸಂಬಂಧವು ಮೊದಲು ಹೇಗೆಯೋ ಇದ್ದಿತು. ಅದೇ ರೀತಿಯ ಸಂಬಂಧವು ಸಂಸ್ಥಾನಗಳ ನ್ಯಾಯವಿಧಾಯಕ ಸಭೆಗಳೊಳಗೂ ಮಂತ್ರಿಮಂಡಲಕ್ಕೂ ಇರಬೇಕು. ಎಕ್ಸಿಕ್ಯೂಟಿವ್ ಅಧಿಕಾರವು ಪೂರ್ಣ ಸ್ವತಂತ್ರವಾಗಿರಬೇಕು. ಪ್ರಕೃತ ಸ್ಥಿತಿಯಲ್ಲಿ ಪ್ರಾಂತಿಕ ಸರಕಾರದ ಪ್ರಧಾನ ಎಕ್ಸಿಕ್ಯೂಟಿವ್ ಅಧೀಶರರಾದ ಗವರ್ನರರಿಗೆ ಈ ಅಧಿಕಾರವು ಬೇಕು. ಕೆಲವು ಭದ್ರತೆಗಳನ್ನಿಟ್ಟುಕೊಳ್ಳಲಾಗಿದೆ. ಆದರೆ ಈ ಭದ್ರತೆಗಳು ಹಿಂದೂದೇಶದ ಮುಂದಿನ ಸ್ವಾತಂತ್ರ್ಯ ಪ್ರಾಪ್ತಿಗೆ ವಿಘ್ನವಾಗಿರುವುದಿಲ್ಲ. ಈ ಭದ್ರತೆಗಳನ್ನು ಹಿಂದೂದೇಶದ ಶ್ರೇಯಃ ದೃಷ್ಟಿಯಿಂದಲೇ ಇಟ್ಟುಕೊಳ್ಳಲಾಗಿದೆ. ಪ್ರಾಂತಿಕ ಸ್ವಾತಂತ್ರ್ಯವನ್ನು ಕೊಡುವ ಈ ವೇಳೆಯಲ್ಲಿ ಕೇಂದ್ರ ಸರಕಾರದಲ್ಲಿ ಕೆಲವು ಬದಲಾವಣೆಗಳಾಗುವುವು. ಕಾರಣ, ಇದು ಸಿಕ್ಕಿದ ನಂತರ ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಕೆಲವು ಬದಲಾವಣೆಗಳು ಅಗತ್ಯ. ಪ್ರಾಂತಿಕ ಸರಕಾರದ ಕೈಯೊಳಗೆ ಎಲ್ಲಾ ಅಧಿಕಾರವೂ ಇದ್ದು ಕೇಂದ್ರ ಸರಕಾರವು ನಿಷ್ಪ್ರಯೋಜಕವಾಗುವಂತಾಗದಂತೆ ಯೋಜನೆಯನ್ನು ಮಾಡಲಾಗಿದೆ. ಇವೆರಡಕ್ಕೂ ಸಂಬಂಧವನ್ನು ಕಲ್ಪಿಸಲಾಗಿದೆ. ದೇಶೀಯ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಕ್ಕೂ ಪರಸ್ಪರ ಸಂಬಂಧವನ್ನು ಕಲ್ಪಿಸಲಾಗಿದೆ. ಬ್ರಿಟಿಷ್ ಹಿಂದೂಸ್ಥಾನದ ಸಂಯೋಜಿತ ರಾಜ್ಯಭಾರ ಕ್ರಮವು ಯಶಸ್ವಿಯಾಗುವಂತೆ ಇನ್ನೊಂದು ಕೇಂದ್ರಸ್ಥಾನವನ್ನು ಕಲ್ಪಿಸುವುದು ಅವಶ್ಯವಿರುತ್ತದೆ. ಆದುದರಿಂದ ಹಿಂದೂಸ್ಥಾನಕ್ಕೆ ಫೆಡರೇಶನ್ ಬೇಕೆಂದೂ, ಪ್ರಾಂತಿಕ ಸರಕಾರದಲ್ಲಿ ಸ್ವಾತಂತ್ರ್ಯವನ್ನು ಕೊಡುವುದೆಂದೂ ತೀರ್ಮಾನಿಸಲಾಗಿದೆ. ಕೇಂದ್ರ ಸರಕಾರದಲ್ಲಿ ತಿದ್ದುಪಡಿಯಾಗುವುದರ ಮೊದಲು ಪ್ರಾಂತಿಕ ಸರಕಾರದಲ್ಲಿ ತಿದ್ದುಪಡಿಗಳಾಗುವುವು. ಒಂದೇ ಶಾಸನದಲ್ಲಿ ಇವೆರಡಕ್ಕೂ ಅನ್ವಯಿಸುವ ಕ್ರಮ ನಿಯಮಗಳನ್ನು ಪಾರ್ಲಿಮೆಂಟಿನವರು ಸೇರಿಸಬೇಕು. ಈಗಿರುವಂತೆ ಪ್ರಧಾನ ನ್ಯಾಯವಿಧಾಯಕ ಸಭೆಯೂ ಸರಕಾರದ ಕಾರ್ಯಕಾರಿ ಮಂಡಲವೂ ಇರಬೇಕು. ನ್ಯಾಯವಿಧಾಯಕ ಸಭೆ ಮತ್ತು ಕಾರ್ಯಕಾರಿ ಮಂಡಲದಲ್ಲೂ ಅಧಿಕಾರಿಗಳ ಬದಲಾವಣೆಯಾಗುವುದು.

ಪ್ರಾಂತಿಕ ಸ್ವಾತಂತ್ರ್ಯ

ಶ್ವೇತಪತ್ರದ ಶಿಫಾರಸಿನನುಗುಣವಾಗಿ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಅಧಿಕಾರಗಳನ್ನು ನಿರ್ಣಯಿಸಬೇಕು. ಈ ಎರಡು ಸರಕಾರಗಳಿಂದ ನಡೆಸಲಾಗದ ಅತಿರಿಕ್ತದ ಅಧಿಕಾರವು ಗವರ್ನರ್ ಜನರಲರ ಅಧಿಕಾರದಲ್ಲಿರಬೇಕು. ಸಿಂಧ ಮತ್ತು ಒರಿಸ್ಸಾಗಳನ್ನು ಪ್ರತ್ಯೇಕ ಪ್ರತ್ಯೇಕ ಸಂಸ್ಥಾನಗಳನ್ನಾಗಿ ವಿಭಾಗಿಸಲಾಗುವುದು. ಬೀರಾರನ್ನು ಸೆಂಟ್ರಲ್ ಪ್ರಾವಿನ್ಸಿನೊಡನೆ ಸೇರಿಸುವುದೆಂದು ನಿಷ್ಕರ್ಷಿಸಲಾಗಿದೆ. ಜವಾಬ್ದಾರಿ ತೀರ್ಪನ್ನು ನ್ಯಾಯವಾದ ರೀತಿಯಲ್ಲಿ ಬೀರಾರಿಗಾಗಿ ವೆಚ್ಚಮಾಡಲಾಗುತ್ತದೋ ಇಲ್ಲವೋ ಎಂದು ನೋಡುವ ಅಧಿಕಾರವು ಗವರ್ನರರಿಗೆ ಸೇರಿರುತ್ತದೆ. ಸಂಸ್ಥಾನಗಳಲ್ಲಿರುವ ದ್ವಿದಳ ಸರಕಾರದ ಪದ್ಧತಿಯನ್ನು ರದ್ದುಗೊಳಿಸಿ, ಗವರ್ನರರು ನ್ಯಾಯವಿಧಾಯಕ ಸಭೆಯ ಮಂತ್ರಿಗಳು ಹೇಳಿದಂತೆ ವರ್ತಿಸಬೇಕು.

ನ್ಯಾಯಶಾಸನ ಮತ್ತು ಶಾಂತಿ

ಪ್ರಾಂತಿಕ ಸರಕಾರಗಳ ಸಂಪೂರ್ಣ ಅಧಿಕಾರವು ಮಂತ್ರಿ ಮಂಡಲದ ಕೈಸೇರಿದಾಗ ನ್ಯಾಯಶಾಸನ ಮತ್ತು ಶಾಂತಿಸ್ಥಾಪನೆಯ ಅಧಿಕಾರಗಳೂ ಅದಕ್ಕಿವೆ. ಪೋಲೀಸರ ಶ್ರದ್ಧೆಯು ಸದಾಕಾಲ ಇರುವಂತೆ ನೋಡುವುದು ಇವರ ಕೆಲಸ. ಈ ಸಂಬಂಧವಾದ ಕೆಲಸಗಳನ್ನು ಪ್ರಾರಂಭಿಸುವಾಗ ಮಂತ್ರಿಗಳು ಗವರ್ನರರೊಡನೆ ವಿಚಾರಿಸಬೇಕು. ಶಾಂತಿಯನ್ನಡಗಿಸುವುದಕ್ಕಾಗಿ ಗವರ್ನರರಿಗೆ ಸ್ವೇಚ್ಛೆ ಪ್ರಕಾರ ಅಧಿಕಾರವಿರಬೇಕು. **ಪ್ರಾಂತಿಕ ಮತದಾನ ಕ್ರಮ**:—ಪ್ರಾಂತಿಕ ಸರಕಾರಗಳ ಮತದಾರರ ಸಂಖ್ಯೆಯನ್ನು ೭ರಿಂದ ೩೫ ಮಿಲ್ಯಕ್ಕೇರಿಸಬೇಕು. **ಪ್ರಾಂತಿಕ ನ್ಯಾಯವಿಧಾಯಕ ಸಭೆಗಳು**:—ಮದ್ರಾಸು, ಮುಂಬಾಯಿ, ಬಂಗಾಳ, ಬಿಹಾರ ಮತ್ತು ಸಂಯುಕ್ತ ಪ್ರಾಂತ್ಯಗಳಿಗೆ ಎರಡೆರಡು ನ್ಯಾಯವಿಧಾಯಕ ಸಭೆಗಳು ಅಗತ್ಯ.

ಜಾತೀಯ ತೀರ್ಮಾನ; ಪೂನಾ ಒಪ್ಪಂದ ಜಾತಿವಾರು ಪ್ರಾತಿನಿಧ್ಯವು ಅಗತ್ಯವಿರುತ್ತದೆ.

ಫೆಡರೇಶನ್ ಮತ್ತು ದೇಶೀಯ ಸಂಸ್ಥಾನಗಳು ಅಖಿಳಭಾರತ ಫೆಡರೇಶನ್‌ಗೆ ಸೇರುವುದು ದೇಶೀಯ ರಾಜರುಗಳ ಇಷ್ಟ. ಬಲಾತ್ಕಾರಪಡಿಸಿ ಫೆಡರೇಶನ್‌ಗೆ ಸೇರಿಸಕೂಡದು. ಅರ್ಧಕ್ಕಿಂತ ಹೆಚ್ಚಿನ ಸಂಖ್ಯೆಯ ದೇಶೀಯ ರಾಜರ ಅನುಮತಿಯಿದ್ದು ಪ್ರಧಾನ ಶಾಸನ ಸಭೆಯ ಶಿಫಾರಸು ಮೇರೆಗೆ ಫೆಡರೇಶನ್ ನಡೆಯಬೇಕು.

ಕೇಂದ್ರದಲ್ಲಿ ಜವಾಬ್ದಾರಿ.

ಶ್ವೇತಪತ್ರದಲ್ಲಿ ಹೇಳಿರುವ ಮೇರೆಗೆ ಫೆಡರಲ್ ಎಕ್ಸಿಕ್ಯೂಟಿವ್ ಇದ್ದೇ ಇರಬೇಕೆಂದು ನಿಷ್ಕರ್ಷಿಸಲಾಗಿದೆ. ಗವರ್ನರ್ ಜನರಲ್‌ರಿಗೆ ಮೂವರು ಮಂತ್ರಾಲೋಚಕರಿರತಕ್ಕದು. ಇವರಲ್ಲಿ ಒಬ್ಬರು ದೇಶರಕ್ಷಣೆ, ಇನ್ನೊಬ್ಬರು ಅಂತರ್ರಾಷ್ಟ್ರೀಯ ವಿಷಯ, ಮತ್ತೊಬ್ಬರು ಧಾರ್ಮಿಕ ವಿಷಯ ಮತ್ತು ಬಲೂಚಿಸ್ಥಾನಗಳ ವಿಷಯವಾಗಿಯೂ ಇವರಿಗೆ ಮಂತ್ರಾಲೋಚನೆಯನ್ನೀಯತಕ್ಕದು. ಇವು ಹೊರತು ಮಿಕ್ಕ ಎಲ್ಲಾ ವಿಷಯಗಳಲ್ಲಿಯೂ ಗವರ್ನರ್ ಜನರಲರು ಮಂತ್ರಿಗಳ ಸಲಹೆಗಳನ್ನು ಮನ್ನಿಸತಕ್ಕದು. (ಇದರಲ್ಲಿ ಗವರ್ನರ್ ಜನರಲರಿಗೆ ವಿಶಿಷ್ಟ ಅಧಿಕಾರಗಳು ಇವೆ.) ಅರ್ಥ ವಿಷಯಕವಾದ ಸಲಹೆಗಳನ್ನು ಕೊಡಲು ಒಬ್ಬ ಫೈನಾನ್ಸಿಯಲ್ ಎಡ್ವೈಜರನನ್ನು ನೇಮಿಸಲಾಗುವುದು. ಕೌನ್ಸಿಲರರೂ ಮಂತ್ರಿಗಳೂ ಸೇರಿ ಕೆಲಸಮಾಡತಕ್ಕದು.

ಕೇಂದ್ರ ನ್ಯಾಯವಿಧಾಯಕ ಸಭೆಗೆ ಬ್ರಿಟಿಷ್ ಇಂಡಿಯದ ಪ್ರತಿನಿಧಿಗಳನ್ನು ಚುನಾಯಿಸುವುದು.

ಇದರಲ್ಲಿ, ಬ್ರಿಟಿಷ್ ಇಂಡಿಯಕ್ಕೆ ಸಿಗಬೇಕಾದ ಸ್ಥಾನಗಳಲ್ಲಿ ಮೂರನೇ ಒಂದಂಶವು ಮುಸಲ್ಮಾನರಿಗೆ ಸಿಗಬೇಕು. ಚುನಾವಣೆಯು ಪ್ರಾಂತಿಕ ಸಭೆಗಳಿಂದ ಫೆಡರಲ್ ನ್ಯಾಯವಿಧಾಯಕ ಸಭೆಗಾಗಬೇಕು. ಮುಂದಕ್ಕೆ ಪ್ರಾಯಸ್ಥರೆಲ್ಲ ಮತಕೊಡುವ ಹಕ್ಕನ್ನು ಹೊಂದುವರಾದುದರಿಂದ ಈ ಕ್ರಮವನ್ನು ಈಗಲೇ ಪ್ರಚಾರಕ್ಕೆ ತರುವುದು ವಿಹಿತವಿದೆ.

ಫೆಡರಲ್ ನ್ಯಾಯವಿಧಾಯಕ ಸಭೆಗೆ ಪರೋಕ್ಷ ರೀತಿಯ ಚುನಾವಣೆಯ ಮೂಲಕ ಸದಸ್ಯರನ್ನಾರಿಸಬೇಕು. ಇದರಲ್ಲಿ ಕುಂದುಕೊರತೆಗಳು ಕಂಡುಬಂದರೆ ಅದನ್ನು ಬ್ರಿಟಿಷ್ ಪಾರ್ಲಿಮೆಂಟಿನ ಮುಂದಿಡಬಹುದು.

ಉದ್ಯೋಗ

ಇಂಡಿಯನ್ ಸಿವಿಲ್ ಸರ್ವಿಸ್, ಮತ್ತು ಇಂಡಿಯನ್ ಪೋಲೀಸ್ ಸರ್ವಿಸಿನ ವಿನಹ ಮಿಕ್ಕ ಉದ್ಯೋಗಗಳಿಗೆ ಇಂಡಿಯಾ ಸೆಕ್ರೆಟರಿಯವರು ಜನರನ್ನು ಆರಿಸಕೂಡದು. ಹಿಂದೂದೇಶದಲ್ಲಿ ಮೇಲುದ್ಯೋಗಗಳಿಗೆ ಹಿಂದೀಯರನ್ನು ಚುನಾಯಿಸುವ ವಿಷಯವು ಈಗ ನಿಷ್ಕರ್ಷಿಸಲ್ಪಟ್ಟಿಲ್ಲ. ಈ ವಿಷಯಕ್ಕೆ ಅಗಾಧ ವಿಮರ್ಶೆಯು ಬೇಕಾಗಿರುವುದರಿಂದ ಐದು ವರ್ಷಗಳು ಬೇಕಾಗುವುವೆಂದು ನಿರ್ಧರಿಸಲಾಗಿದೆ.

ಕಾಡು ಮತ್ತು ನೀರಾವರಿ ಇಲಾಖೆಗಳಿಗೆ ಪ್ರಾಂತಿಕ ಸರಕಾರದವರು ಕೆಲಸಕ್ಕೆ ಜನರನ್ನು ಆರಿಸಬಹುದು. ಆದರೆ ಇಂಡಿಯಾ ಸೆಕ್ರೆಟರಿಗೆ ಇದರಲ್ಲಿ ಸ್ವಲ್ಪ ಅಧಿಕಾರವಿರಬೇಕು. ನೀರಾವರಿ ಕೆಲಸಗಳಿಗೆ ಬೇಕಾದ ಕೆಲಸಗಾರರು ಸಿಗದಿದ್ದರೆ ಇಂಡಿಯಾ ಸೆಕ್ರೆಟರಿಯು ಬೇಕಾದವರನ್ನು ಆರಿಸಿಕೊಳ್ಳುವ ಅಧಿಕಾರವಿರಬೇಕು. ಅಲ್ಪಸಂಖ್ಯಾತರ ಪ್ರಾತಿನಿಧ್ಯವಿರುವಂತೆ ಗವರ್ನರ್ ಜನರಲರಿಗೂ ಗವರ್ನರರಿಗೂ ಅಧಿಕಾರವಿರಬೇಕು.

ವ್ಯಾಪಾರ ಮತ್ತು ಇತರ ವಿಷಯಗಳಲ್ಲಿ ಭೇದ.

ಈ ಪ್ರಶ್ನೆಯನ್ನು ಎರಡು ವಿಧವಾಗಿ ವಿಭಾಗಿಸಿದ್ದಾರೆ—ಹಿಂದೂಸ್ಥಾನದಲ್ಲಿ ಆಂಗ್ಲೇಯರ ವ್ಯಾಪಾರಕ್ಕೆ ಪ್ರತಿಬಂಧಕವಾಗುವಂತೆ ಮಾಡುವುದೊಂದು; ಬ್ರಿಟಿಷರ ಸಾಮಗ್ರಿಗಳು ಇಂಡಿಯಕ್ಕೆ ಆಮದಾಗದಂತೆ ಪ್ರತಿಬಂಧಕವನ್ನುಂಟುಮಾಡುವುದು ಇನ್ನೊಂದು.

ಇಂಡಿಯಾ—ಇಂಗ್ಲೆಂಡ್ ದೇಶಗಳೊಳಗಿರುವ ಪರಸ್ಪರ ಸಂಬಂಧವನ್ನು ಈ ರಾಜ್ಯರಚನೆಯ ಶಾಸನದಲ್ಲಿ ಸೇರಿಸಬೇಕು. ಆರ್ಥಿಕ ಸ್ವಾತಂತ್ರ್ಯವು ಇಂಗ್ಲಿಷರ ವ್ಯಾಪಾರದ ನಾಶಕ್ಕಾಗಿ ಕೊಡಲ್ಪಡಲಿಲ್ಲವೆಂತಲೂ, ಭಾರತ ಪ್ರತಿನಿಧಿಗಳು ಭೇದಭಾವವನ್ನು ಇನ್ನು ಮೇಲೆ ತೋರಿಸುವುದಿಲ್ಲವೆಂದು ಹೇಳಿದುದಾಗಿಯೂ ತಿಳಿಸುತ್ತಾರೆ.

ಬ್ರಿಟಿಷ್ ಸಾಮಗ್ರಿಗಳು ಇಂಡಿಯಕ್ಕೆ ಬರದಂತೆ ಮಾಡುವ ಶಾಸನಗಳನ್ನು ಮುರಿದುಬಿಡುವ ಅಧಿಕಾರವು ಗವರ್ನರ್ ಜನರಲರಿಗೆ ಕೊಡಲ್ಪಡಬೇಕು. ಇದರಿಂದ ಇಂಡಿಯಾ ಸರಕಾರಕ್ಕೆ ಇಂಗ್ಲಿಷ್ ಅಥವಾ ಬೇರೆ ಸರಕಾರಗಳೊಡನೆ ಅರ್ಥ, ವ್ಯಾಪಾರ, ಇತ್ಯಾದಿಗಳ ಒಪ್ಪಂದ ಮಾಡಿಕೊಳ್ಳುವ ಅಧಿಕಾರಕ್ಕೆ ಮೋಸವಿಲ್ಲ. ಇಂಗ್ಲಿಷರ ವ್ಯಾಪಾರದ ನಾಶಕ್ಕೆಂದು ಗವರ್ನರ್ ಜನರಲರಿಗೆ ತೋರಿಬಂದಲ್ಲಿ ಅವರು ಅದನ್ನು ಮುರಿದುಬಿಡಬೇಕು. ಇದರಂತೆಯೇ ಹಿಂದೂದೇಶದಲ್ಲಿ ವ್ಯಾಪಾರ ಮಾಡುವವರಿಗೆ ತೊಂದರೆಯುಂಟಾಗದಂತೆ ನೋಡಬೇಕು. ರಾಜ್ಯಭಾರದ ಕೆಲಸದಲ್ಲಿಯೂ ಭೇದಭಾವಗಳು ಬರದಂತೆ ಗವರ್ನರರೂ ಗವರ್ನರ್ ಜನರಲರೂ ನೋಡಿಕೊಳ್ಳುವಂತೆ ಪಾರ್ಲಿಮೆಂಟಿನ ಕಾನೂನಿನಲ್ಲಿ ಸ್ಪಷ್ಟಪಡಿಸಬೇಕು.

ಪ್ರಜೆಯ ಪ್ರಧಾನ ಹಕ್ಕು

ಈ ವಿಷಯವು ಬಹು ಪ್ರಾಮುಖ್ಯವಾಗಿರುವುದಾದರೂ ಅದನ್ನು ರಾಜ್ಯರಚನೆಯಲ್ಲಿ ಕಾಣಿಸುವ ಅವಶ್ಯವಿಲ್ಲವೆಂದು ಕಮಿಟಿಯು ತೀರ್ಮಾನ ಮಾಡಿ ಅದರ ಬದಲಿಗೆ ಜಾತಿ, ನೀತಿ, ಮತ, ಹುಟ್ಟಿದ ಸ್ಥಳ ಇವುಗಳಿಂದಾಗಿ ಯಾರಿಗೂ ಹುದ್ದೆ ದೊರೆಯದಿರಬಾರದೆಂಬ ವಾಚಕವನ್ನು ಸೇರಿಸಿರುವರು. ಸಾರ್ವಜನಿಕ ಉಪಯೋಗಕ್ಕಲ್ಲದೆ ಆಸ್ತಿಪಾಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳಬಾರದಾಗಿ ಶಿಫಾರಸು ಮಾಡಿರುವರು.

ರಾಜ್ಯರಚನಾ ಶಾಸನಕ್ಕೆ ಅಧಿಕಾರ.

ಈ ಅಧಿಕಾರವನ್ನು ಈಗ ಇಂಡಿಯದ ನ್ಯಾಯವಿಧಾಯಕ ಸಂಸ್ಥೆಗಳಿಗೆ ಕೊಡಲು ಸಾಧ್ಯವಿಲ್ಲ. ಆದಕಾರಣ ಪಾರ್ಲಿಮೆಂಟಿನ ಆಕ್ಟುಗಳನ್ನು ರದ್ದುಮಾಡದೇನೆ ಸ್ವಲ್ಪ ವ್ಯತ್ಯಾಸಪಡಿಸಬೇಕಾಗಿ ಬಂದಲ್ಲಿ "ಆರ್ಡರ್ಸ್ ಇನ್ ಕೌನ್ಸಿಲ್" ಮೂಲಕ ಮಾಡಬಹುದು. ಪಾರ್ಲಿಮೆಂಟು ಸಮ್ಮತಿಸಿದರೆ ಮಾತ್ರ ಸಾಕು. ಮತ್ತು ಕೆಲವು ವಿಷಯಗಳಲ್ಲಿ ಹಿಂದೂಸ್ಥಾನದ ನ್ಯಾಯವಿಧಾಯಕ ಸಭೆಗಳೇ ತಮ್ಮ ಮೂಲಕ ಬದಲಾವಣೆಯಾಗಬೇಕೆಂದು ಹೇಳಿದಲ್ಲಿ ಅದನ್ನು ಬ್ರಿಟಿಷ್ ಸರಕಾರದ ಒಂದು ಸ್ಟೇಟ್‌ಮೆಂಟಿನೊಂದಿಗೆ ಪಾರ್ಲಿಮೆಂಟುಗಳ ಮುಂದಿರಿಸಬೇಕು.

ಇಂಡಿಯಾ ಸೆಕ್ರೆಟರಿಯೂ ಇಂಡಿಯಾ ಕೌನ್ಸಿಲೂ

ಹಣದ ಆಡಳಿತವು ಮಂತ್ರಿಗಳ ವಶವಾದ ಮೇಲೆ ಇಂಡಿಯಾ ಸೆಕ್ರೆಟರಿಯ ಕೌನ್ಸಿಲ್ ಲಂಡನಿನಲ್ಲಿರಬೇಕಾದುದು ಅನಗತ್ಯವಾಗಿ ಕಂಡು ಬಂದರೂ ಭಾರತ ಸೆಕ್ರೆಟರಿಗೆ ಆಲೋಚನೆ ಹೇಳಲು ಒಂದು ಸಣ್ಣ ಸಂಸ್ಥೆಯಿದ್ದರೆ ಒಳ್ಳೆಯದು. ಸೆಕ್ರೆಟರಿಯು ಅವರ ಸಹಾಯವನ್ನು ಬೇಕಾದಾಗ ಪಡೆಯಬಹುದು. ಪಬ್ಲಿಕ್ ಸರ್ವಿಸಿನ ವಿಷಯದಲ್ಲಿ ಅವರ ಸಹಾಯವು ಅಗತ್ಯವಾಗಿ ಬೇಕಾಗಬಹುದು.....

ರೋಗಗಳಾಗದಿರಲು....

ದುಷ್ಟ ರೋಗಗಳಲ್ಲಿ ಹೆಂಗಸರ ರೋಗಕ್ಕೆ ಸಿಕ್ಕಿ ಬಾಯಿಲೆ ಪಟ್ಟುಕೊಳ್ಳಬೇಡಿ!

ಆ ರೋಗ ಹತ್ತದಂತೆ ಇದೇ ನಾವು ಜವಾಬ್ದಾರಿಯಿಂದ, ತಡೆಯುವ ಪಟ್ಟಿನ ಸಾಧನವನ್ನು ಉಪಯೋಗಿಸಿರಿ!

ಗಂಡಸರದ್ದು ಬೆಲೆ 1-8-0

ಹೆಂಗಸರಿಗೆ (ಗರ್ಭನಿರೋಧಕ್ಕೆ) 2-4-0

ಆರ್ಡರಿನೊಡನೆ 4 ಆಣೆ ಸ್ಟ್ಯಾಂಪು ಇರಬೇಕು.

ವಿಳಾಸ—ಕರ್ನಾಟಕ ಏಜನ್ಸಿ,
82, ಕೃಷ್ಣಪ್ಪ ನಾಯ್ಕ್ ಟೇಂಕ್ ಸ್ಟ್ರೀಟ್,
ಜಿ. ಟಿ. ಮದ್ರಾಸು.

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ಗ್ನಾನ

(ಪ್ರಬಂಧಮಾಲೆ)

ಲೇಖಕರು – ಡಾ॥ ಶಿವರಾಮ ಕಾರಂತ

ಅಧ್ಯಾಯ ೨೨

ಧರ್ಮ

ಮನುಷ್ಯನು ತನ್ನ ನಿತ್ಯಜೀವನವನ್ನು ಇತರ ಯಾವತ್ತು ಪ್ರಾಣಿಗಳಿಂದ ತಪ್ಪಿಸಿಕೊಂಡು, ಅವಕಾಶವಾದಾಗಲೆಲ್ಲ ಅವುಗಳ ಮೇಲೂ ಅಧಿಕಾರವನ್ನು ನಡಿಸುತ್ತ ಬದುಕಲು ಒಂದು ಕ್ರಮ ಬೇಕಷ್ಟೆ! ಒಂದು ಬಗೆಯ ರೀತಿ–ನೀತಿ, ಆಯ–ಅಳತೆ, ಕರ್ತವ್ಯ–ಕೆಲಸ, ವಿಚಾರ–ಆಚಾರ, ನೇಮ–ನಿಯಮ, ನಗು–ಬಗೆ–ಇವೆಲ್ಲವನ್ನೂ ನಿರ್ಧರಿಸುವ ಗ್ನಾನವು 'ಸಾದಾ ವಿಗ್ನಾನ' (Social Sceinces) ಎನಿಸಿಕೊಳ್ಳುವುದು ಈ ವಿಭಾಗವನ್ನು ನಡೆಯಿಸುವಾಗ ಹಲವು ಇಲಾಖೆಗಳು ಬೇಕಾಗುತ್ತವೆ ಮನುಷ್ಯನ ಪರಲೋಕದ ವ್ಯವಸ್ಥೆ, ಏರ್ಪಾಡುಗಳ ಸಲುವಾಗಿ ಧಾರ್ಮಿಕ ಇಲಾಖೆಯನ್ನೂ ಇಹಲೋಕದ ಸಲುವಾಗಿ ರಾಜಕೀಯ ವಿಚಾರಬದ್ಧವಾದಂಥ ಸರಕಾರದ ವ್ಯವಸ್ಥೆಯನ್ನೂ, ಆರೋಗ್ಯ ದೃಷ್ಟಿಯಿಂದ ಒಂದು ಇಲಾಖೆಯನ್ನೂ ಸಾಂಪತ್ತಿಕ ವಿಚಾರವಾದ ಬೇರೆ ಖಾತೆ ಉಪಖಾತೆಗಳನ್ನೂ ಏರ್ಪಡಿಸಿ ಈ ಮನುಷ್ಯ ಪ್ರಾಣಿಯು ಅದರಂತೆ ನಡೆದು ತನ್ನ ಮುಂದಿನ ಬಾಳ್ವೆಯ ಬಗ್ಗೆ ಸಾಕಷ್ಟು ಮಾರ್ಗಗಳನ್ನು ಸ್ವರ್ಗಮೋಕ್ಷಗಳ ಪ್ರಯಾಣದ ಬಗ್ಗೆ ತನ್ನ ಕೈಯಿರಿಸಿಕೊಂಡಿರಬೇಕಾಗುವುದು ಆದುದರಿಂದ ಅವುಗಳ ಬಗ್ಗೆ ಬೇಕಾದ ವಿಚಾರವು ಅತಿ ಅವಶ್ಯವೂ ಜರೂರಿನದೂ ಎಂದು ತಿಳಿಯಲೇಬೇಕು

ಮುಖ್ಯವಾಗಿ ಬದುಕಿದವರನ್ನು ಮಾತ್ರವಲ್ಲ ಇನ್ನು ಮುಂದೆ ಹುಟ್ಟಿರುವವರು ಈಗಾಗಲೇ ಸತ್ತವರ ಸಹ ಅವಶ್ಯವಾಗಿ ಗಮನಿಸಬೇಕಾದ ಶಾಸ್ತ್ರವೇ ಧರ್ಮ ಇದರ ಹಾದಿಯನ್ನು ತಿಳಿಯಲು ಬಲು ಕಷ್ಟ ಅದರಂತೆ ಯೋಚಿಸುವುದು ಮತ್ತೂ ಕಷ್ಟ ಯೋಚಿಸಿದರೂ ನಡೆಯುವುದು ತೀರ ಕಷ್ಟ ನಡೆದರೆ ಸರಿಯಾಗಿ ನಡೆದು ಅನೇಕಾನೇಕ ಕೋಟಿ ದೇವಾನುದೇವತೆಗಳನ್ನು ತೃಪ್ತಿ ಪಡಿಸಿಕೊಂಡು ಅವರಿಂದ ಪ್ರಶಂಸೆಯನ್ನು ಪಡೆಯುವುದು ಕಷ್ಟ ಕಾರಣ ಈ ಪ್ರಪಂಚದಲ್ಲಿ ಹಿಂದೂ ಜನರನ್ನು ತೂಗಲು 33,00,00 000 ದೇವತೆಗಳ ಒಂದ ಕಮಿಟಿಯಿದೆ ಇವರಿಲ್ಲದೂ ಸೇರಿ, ಅವರಲ್ಲಿ ಕನಿಷ್ಠ 28 17 61 006 ಜನರಾದರೂ ಬಹುಮತ ಕೊಟ್ಟಲ್ಲಿ ಮಾತ್ರ ಆ ಮನುಷ್ಯನು ಧರ್ಮಿಷ್ಠನೆಂದೂ ಅಲ್ಲವಾದರೆ ಕೇವಲ ಪಾಪಿಯೆಂದೂ ತೀರ್ಮಾನಿಸಲಾಗುವುದು ಕ್ರಿಸ್ತಿಯರ ಮಾತ್ರ ಒಬ್ಬ ಜಿಹೋವನನ್ನು, ಮುಸಲ್ಮಾನರು ಒಬ್ಬ ಅಲ್ಲನನ್ನೂ ಈ ಕೆಲಸಕ್ಕೆ ನೇಮಿಸಿಕೊಂಡಂತೆ ಕಾಣುವುದು ಅವರಿಗೆ ಹಲವರನ್ನು ಒಲಿಸುತ್ತಿರಬೇಕಾದ ಕಾರಣವಿಲ್ಲವಾದರೂ, ಒಬ್ಬೊಬ್ಬ ದೇವರೇ ಇಷ್ಟೊಂದು ಜನರನ್ನು ಪರೀಕ್ಷಿಸುತ್ತಿರುವಾಗ– ಮಾರ್ಕುಗಳು ಯದ್ವಾತದ್ವಾ ಬೀಳಲಾರವೆಂದು ಹೇಗೆ ಹೇಳಲಿ? ಇರಲಿ, ಈ ಪರೀಕ್ಷೆಯೇನೋ ಕಷ್ಟಕರದ್ದು ಇದಿಲ್ಲದೆ ನಿರ್ವಾಹವೂ ಇಲ್ಲ ಆದುದರಿಂದ ಈ ಅತ್ಯಾವಶ್ಯವಾದ ವಿಷಯದ ಮೇಲೆ ನಾವು ಚೆನ್ನಾಗಿ ಎಚ್ಚರ ವಹಿಸಬೇಕೆಂಬುದರಿಂದ ಅದರ ಸವಿಸ್ತಾರ ವಿಮರ್ಶೆ ಮಾಡಬೇಕಾಗಿದೆ

ಮನುಷ್ಯನು ಪರಲೋಕವನ್ನು ಸೇರಲು ಏನು ಪ್ರಯತ್ನ ಮಾಡಬೇಕೆಂಬ ವಿಚಾರ ಇದು ಸೂಚಿಸುವ ಶಾಸ್ತ್ರವು ಅಲ್ಲದೆ ಈ ಲೋಕದಲ್ಲಿ ಅವನು ರೈಲಿನಲ್ಲಿ ಪ್ರಯಾಣ ಬೆಳೆಯಿಸಬೇಕೊ, ನಡೆದುಹೋಗಬೇಕೊ ಎಂಬ ವಿಷಯವಾಗಿ ಇದು ತೀರ್ಮಾನಿಸುವುದಿಲ್ಲ ಹೀಗೆ ಪರಲೋಕದಲ್ಲಿರಲು ಪಾಪ ಪುಣ್ಯ ನಿರ್ಣಯವೇ ಅಲ್ಲಿಯವರಿಗೆ ಆಧಾರವು ಇದನ್ನೇ 'ಮಾರ್ಕು' ಎನ್ನುವುದು

ಪಾಪ-ಪುಣ್ಯವೆಂದರೇನು?

ಅದನ್ನು ಬಣ್ಣಿಸುವುದು ಕಷ್ಟ ಆದುದರಿಂದ ಅವುಗಳನ್ನು ಸೂಚಿಸುವ ಕೆಲವು ಉದಾಹರಣೆ ಕೊಟ್ಟರೆ ಸರಿಯಷ್ಟೆ –

ಕಾಶಿ, ಗಂಗೆಗಳಿಗೆ ಹೋಗಿ ಅಲ್ಲಿಯ ನದಿಗಳಲ್ಲಾಗಲಿ ನದಿನೀರಿನ ನಲ್ಲಿಗಳಲ್ಲಿಯಾಗಲಿ, ತಿರುಪತಿ ಮುಂತಾದಲ್ಲಿರುವ ದಿವ್ಯ ನೀರಿನ ಹೊಂಡಗಳಲ್ಲಾಗಲಿ ಏಕೋಭಾವದಿಂದ ಸ್ನಾನಮಾಡಿ ಮೇಲೆದ್ದರೆ ಪುಣ್ಯಸಿಗುವುದು ಕಾಶಿಯಲ್ಲಿ ಮಾಡಿದ ಒಂದು ಸ್ನಾನಕ್ಕೆ ಸ್ವರ್ಗವಾಸದ 10 ದಿನಗಳಂತೆ ಮಾರ್ಕು. ಗಯಾ ಸ್ನಾನಕ್ಕೆ 12, ತಿರುಪತಿ ಸ್ನಾನಕ್ಕೆ 15, ತಿರುಪತಿಯ ಕಪಿಲ ತೀರ್ಥಕ್ಕೆ 15 ದಿನಗಳಂತೆ ಮಾರ್ಕುಗಳು.

ನಿಮ್ಮ ನಿಮ್ಮ ಊರಿನ ಕ್ಷೇತ್ರಗಳಲ್ಲಿ ಮಿಂದರೆ 2 ಗಂಟೆಯಂತೆ ಅಲ್ಲಿನ ಪಂಡರಲ್ಲಿ ಯಾರು ಆದಷ್ಟು ಬಹು ಪಕ್ಷಿವೃತಸ್ಥರೋ, ಯಾರಿಗೆ ಸ್ನಾನದ ಪರವೆ ಸಹ ಇಲ್ಲವೊ, ಯಾರಲ್ಲಿ ಈ ಮೊದಲೇ ಕನಿಷ್ಠ 50,000 ರೂಪಾಯಿಗಳಾದರೂ ಇವೆಯೋ, ಅವರಿಗೆ 100 ರೂಪಾಯಿ ದಕ್ಷಿಣೆಕೊಟ್ಟಲ್ಲಿ ರೂಪಾಯಿ 1ರ 10 ದಿನದಂತೆ ಸ್ವರ್ಗ. ತಿರುಪತಿಯನ್ನು 1 ರೂಪಾಯಿ ಕೊಟ್ಟು ದೇವರ ವಿಗ್ರಹವನ್ನು ಕಂಡವರಿಗೆ 7½ ದಿನ ಸ್ವರ್ಗ, ಉಡುಪಿಯಲ್ಲಿ 8 ದಿನ (ಸರಾಗವಾಗಿ) ಚೌಕಿ ಊಟ ಮಾಡಿದವರಿಗೆ 1 ತಿಂಗಳ ಸ್ವರ್ಗ

ಸಾಯುವ ಎರಡು ದಿನಗಳ ಮೊದಲಾದರೂ ದನ, ಎಮ್ಮೆ, ಹೋರಿ ಇತ್ಯಾದಿ ಉಪಯುಕ್ತ ವಸ್ತುಗಳನ್ನು, ಬೂಟೀಸು, ಇಜಾರು, ಶಾಲು, ಚಂಬು ಇತ್ಯಾದಿ ಒಡವೆಗಳನ್ನು ಯೋಗ್ಯ ಬ್ರಾಹ್ಮಣನಿಗೆ* ದಾನಮಾಡಲು 1 ದಿನದ ಸ್ವರ್ಗ

ಪಾಪದ ಸೆಂಪಲುಗಳು

ಹೆಂಡತಿಯ ಮಾತನ್ನು ಕೇಳಿದವನಿಗೆ–ಮಾತೊಂದರ 16 ದಿನ ನರಕ, ಶೂದ್ರನಿಗೆ ದಾನಮಾಡಿದವನಿಗೆ ದಾನ ಮಾಡಿದ ಆಣೆಯೊಂದರ 1 ದಿನ ನರಕ, ಅಸ್ಪೃಶ್ಯರಿರುವ ಸ್ಥಳದ ಒಂದು ಫರ್ಲಾಂಗು ಗಡಿಯ ಒಳಗೆ ಸೇರಿದವನಿಗೆ– ಪಾಪದ ಪ್ರತಿ ನಿಮಿಷಕ್ಕೆ 1 ವರ್ಷ 18 ದಿನ 6½ ಗಂಟೆ ನರಕ ಕ್ಷೇತ್ರದಲ್ಲಿರುವ ಬಡಬಗ್ಗರಿಗೆ ದಾನಮಾಡಲು–ದಾನದ ಆಣೆಯೊಂದರ 7 ದಿನದಂತೆ ನರಕ

ಈ ಪಾಪಪುಣ್ಯದ ಲೆಕ್ಕಾಚಾರವು ಆಯಾಯ ಕ್ಷಣ, ಯಮನು ನಮ್ಮ ಹಿಂದೆಯೇ ಬಿಟ್ಟಿರುವ (I I) ಆಫೀಸರಿಂದ ಅವನಿಗೆ ತಿಳಿದುಬರುವುದು ಅದು ಚಿತ್ರಗುಪ್ತನ ರಿಜಿಸ್ಟ್ರಿಯಲ್ಲಿ ದಾಖಲುಮಾಡಿಕೊಳ್ಳಲ್ಪಡುವುದು ಅಲ್ಲಿನ ಅಕೌಂಟೆಂಟರು ಮಾಡಿದ ಲೆಕ್ಕವೇ–ನಮ್ಮ ಗಿರಾಕಿತಕ್ಕೆ ಕಾರಣವಾಗುವುದು

ನೇಕಡಾ 20% ಪಾಪವನ್ನು ಕೃತಯುಗದಲ್ಲೂ,
30% ದ್ವಾಪರ ತ್ರೇತಗಳಲ್ಲೂ
50% ಕಲಿಯುಗದಲ್ಲೂ ಮಾಫಿ ಬಿಡಲಾಗುವುದು

ಮನುಷ್ಯನು ಪಾಪದ ಬಲೆಯಲ್ಲಿ ಸಿಕ್ಕಲು ಮಾನಗಾರನಾದ ದೇವರು ದಾರಿಯಲ್ಲಿ ಪರೀಕ್ಷೆಗಾಗಿ ಹಲವು ಗುರುಳುಗಳನ್ನು ಇರಿಸುತ್ತಾನೆ ಇಂಥ ಒಂದೆರಡರಲ್ಲಿ ವಿಶ್ವಾಮಿತ್ರನ ಸಿಕ್ಕಿ ಕಂಗಾಲಾದುದುಂಟು (ಇವನ್ನು ಅತಿ ಸಾಕ್ಷಿ ಕಷ್ಟಪಟ್ಟು ಕಾಪಿಸಿಂದಲೂ ತಿಳಿಯುವುದು ಕಷ್ಟ) ಅಲ್ಲದೆ ಒಂದೊಂದು ಕಾಲದವರ ಯೋಗ್ಯತೆಗೆ ಸರಿಯಾಗಿ ಈ ಪಾಪದ ತೀರ್ಮಾನವಿದೆ ಆದುದರಿಂದ ಈ ವಿಷಯದ ರೂಲ್ ಪುಸ್ತಕವನ್ನು ನಾವು ಮೊದಲು ಓದಬೇಕು

(1) ಪವಿತ್ರವಾದ ಆರ್ಯಾವರ್ತದಲ್ಲಿ ಹುಟ್ಟಿದ ಹಿಂದೂ ದೇಶಿಗಳು ಸ್ವರ್ಗದ ಪಾಸ್‌ಪೋರ್ಟನ್ನು ಕೇಳುವ ತಿಳ್ಲ ಅವರಿಗೆ ಮೋಕ್ಷವು ಕನಸಿಗೂ ಸಹ ದೂರವೇ ಸರಿ

(2) ಅಂಥ ಜನರು ಕ್ರಿಶ್ಚಿಯನರೋ ಮುಸಲ್ಮಾನರೋ ಆಗಿ ಸದ್ರಿ ಜನರ ಕಡಿಮೆ ತರದ ಸ್ವರ್ಗವನ್ನು ಸೇರಬೇಕು ಅಲ್ಲಿನ ಅಧಿಕಾರಿಗಳ ವಿವರ ವಿಚಾರಗಳ ನಮಗೆ ತಿಳಿದಿಲ್ಲ ಅಂತು ಇಷ್ಟು ತಿಳಿದಿದೆ ಅಲ್ಲಿ ಇಂದಿಗೂ ಇಲ್ಲವೆಂದೂ ಮಜಾಮಾಡಲು ರೋಗರಹಿತರಾದ ಅಪ್ಸರೆ ಕಿನ್ನರಿಗಳ ಇಲ್ಲವೆಂದೂ ತಿಳಿದಿದೆ

(3) ಹಿಂದುಸ್ಥಾನದ ಗಡಿ ಸೇರಿದ್ದರೂ ಪಂಚಮರೆನಿಸಿಕೊಂಡಿರುವ ಹೊಲೆಯರಿಗೆ ಸ್ವರ್ಗ ನರಕಗಳ ಹೊರ ಪ್ರಾಂಗಣದ ಸುತ್ತ ಅಲೆಯುವ ಅಧಿಕಾರವಿಲ್ಲ ಬೇಗನೆ ಅವರು ಸ್ವರ್ಗವನ್ನು ಬಯಸುವುದಾದರೆ, ಪಾದ್ರಿಗಳ ಪಾಸಪೋರ್ಟನ್ನು ಪಡೆಯಬಹುದು ಹಿಂದೂ ಸ್ವರ್ಗವನ್ನು ಸೇರುವ ಆಸೆಯಿದ್ದರೆ, ಅವರು ಹಳುವಿನಿಂದ ಮನುಷ್ಯನಾಗಿ ಅಂದರೆ, ಹೊಲೆಯನಾಗಿ ಸತ್ತು ತಿರುಗಿ ಹಳವಿನಿಂದ ಅಲ್ಲಿಗೇನೆ ಕನಿಷ್ಠ 28 ಸಲವಾದರೂ ಜನಿಸಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದಲ್ಲಿ–29ನೇ ಜನ್ಮದಲ್ಲಿ ತಾಜಾ ಹಿಂದೂವಾಗಲು ಅಧಿಕಾರವು ಸಿಗುವುದು

ಈ ನ್ಯಾಯನಿಯಮಗಳಿರುವ ಗ್ರಂಥಗಳ ಲೀಸ್ಟು

ಇವುಗಳಲ್ಲಿ ಕೆಲವು ಮುಂದೆ ಜಾರಿಗೆ ಬರುವುವೆಂದೂ, ಕೆಲವು ಹಿಂದಕ್ಕೆ ಜಾರಿಯಲ್ಲಿ ಇದ್ದುವೆಂದೂ ತಿಳಿಯಬೇಕು

ಪುಸ್ತಕದ ಹೆಸರು	ಯಾವ ಕಾಲಕ್ಕೆ?	ಷರಾ
(1) ಋಗ್ವೇದ ಯಜುರ್ವೇದ	ಕೃತ,ತ್ರೇತ,ದ್ವಾಪರಗಳಿಗೆ	ಅದರಲ್ಲಿರುವಂತೆ ಕಲಿಯುಗದವರು ಸತ್ತ ಅಹಿಂಸೆಯಿಂದ ಆಚರಿಸಲು, ಇಲ್ಲವೆ ಪ್ರೌಢ ವಿವಾಹ ಪುನರ್ವಿವಾಹ ನಡೆಯಿಸಿದರೆ–ಶಿಕ್ಷೆಗೆ ಗುರಿಯಾಗುವರು.
(2) ಸಾಮವೇದ	ಹಿಂದಿನ ಯುಗದ ಸಂಗೀತಗಾರರಿಗೆ ಮಾತ್ರ	
(3) ಅಥರ್ವಣ	ಐದು ಕಲ್ಪಕ್ಕಾಕರ ವೇಟು	ಈಗ ಇದು ಜರ್ಮನಿಯವರಿಗೆ ಸಿಕ್ಕಿ ಇದರ ಗುಟ್ಟಿಂದಲೇ ಅಲ್ಲಿ ವಿಮಾನ, ಬಿಸ್ಕಿಟು, ಬಿಸ್ಕಿ ಮೊದಲಾದುವುಗಳ ತಯಾರ ನಡೆಯುತ್ತದೆ
(4) ಉಪನಿಷತ್ತುಗಳು	ಕೃತ, ತ್ರೇತ, ದ್ವಾಪರಗಳಿಗೆ	ಕಲಿಯುಗದವರು ಅದರ ಅರ್ಥಮಾಡಲಾಗದು
ಮನುಸ್ಮೃತಿ, ಇನ್ನು ಸ್ಮೃತಿಗಳು	ಕಲಿಯುಗದ ಬ್ರಾಹ್ಮಣರಿಗೆ ಮಾತ್ರ	ಉಳಿದವರು ಇದನ್ನು ಓದಕೂಡದು ಮೇಲಿನವರು ಇದನ್ನು ತಮಗೆ ಯೋಗ್ಯ ಕಂಡ ರೀತಿಯಲ್ಲಿ ಅರ್ಥ ಮಾಡಿಕೊಳ್ಳಲೂ ಬಹುದು ಹೀಗೆ ಅರ್ಥ ಹೇಳುವ ಅಧಿಕಾರವು ಎಲ್ಲರಿಗಿಲ್ಲ ಕೇವಲ ಮಠದ ಸ್ವಾಮಿಗಳಿಗೂ ಗೀರ್ವಾಣವರಿಯದ ಪುರೋಹಿತರಿಗೂ ಇದೆ.
ಪುರಾಣಗಳು	ಎಲ್ಲರಿಗೂ ಕಲಿಯುಗಕ್ಕೆ	ಇವನ್ನು ವ್ಯಾಸಮುನಿಯು ಪ್ರತಿಯೊಂದು ಪಾಂಗಡದವರಿಗೂ ಅನುಕೂಲಿಸುವಂತೆ ಬರೆದಿರುತ್ತಾನೆ

*ಯೋಗ್ಯ ಬ್ರಾಹ್ಮಣನು ಕನಿಷ್ಠ ಒಬ್ಬ ಗಯ್ಯಾಳಿಯಂತಾದರೂ ಇರಬೇಕು.

ಇದಕ್ಕೆ ಹೆಚ್ಚಾಗಿ ಕಾಣುವ ಎಲ್ಲಾ ಸಂಸ್ಕೃತ ಗ್ರಂಥಗಳು ಶಾಸ್ತ್ರಗಳೆಂದೇ ಕಲಿಯುಗದವರಿಂದ ತಿಳಿಯಲ್ಪಡುವುದು ಅವಶ್ಯ

ಮನುಷ್ಯನ ಜಾತಿಗೆ ಸರಿಯಾದ ಶಾಸ್ತ್ರದ ವಿವರ

ಹಿಂದಿನ ಯುಗದಲ್ಲಿನ ವರ್ಣವಿಭಾಗವು–ಪಾಂಡವ ನಿರ್ವಾಣ ಕಾಲದಿಂದ ಜಾರಿಯಲ್ಲಿಲ್ಲ ಬೌದ್ಧ ಧರ್ಮವು ಒಂದು ಜನರನ್ನು ನಾಸ್ತಿಕರಾಗಿ ಮಾಡಿದ ನಿಮಿತ್ತ, ಅನಂತರ ಜಾತಿ ಧರ್ಮವನ್ನು ರೂಢಿಗೆ ತರುವ ಅಧಿಕಾರವನ್ನು ಮಠದ ಸ್ವಾಮಿಯವರಿಗೆ ಕೊಡಲಾಗಿದೆ ಇವರು ಜಾತಿಗಳ ಸಂಖ್ಯೆಗಳನ್ನು ಬೆಳೆಯಿಸಿ ಕಲಿಯುಗದ ಅಂತ್ಯದಲ್ಲಿ ತಲಾ ಒಂದರ ಒಂದು ಜಾತಿಯಂತೆ ಮಾಡಬೇಕಾಗಿದೆ

ಹಿಂದಿನ ಜಾತಿಗಳಲ್ಲಿ

ಕ್ಷತ್ರಿಯ ವೈಶ್ಯ ಜಾತಿಗಳು ರದ್ದಾಯಿಸಲ್ಪಟ್ಟಿವೆ ಈ ಯುಗಕ್ಕೆ ಮುಖ್ಯವಾಗಿ ದರೆ ಬ್ರಾಹ್ಮಣ ಅಬ್ರಾಹ್ಮಣ ಎಂದು ಮಾತ್ರ ಇವುಗಳಲ್ಲಿ ಉಪವಿಭಾಗಗಳು ತೀರ ಅವಶ್ಯ

ಬ್ರಾಹ್ಮಣರಲ್ಲಿ ಮೊದಲನೆ ಸ್ಥಾನವು (1) ವಿಶಿಷ್ಟಾದ್ವೈತಿಗಳಿಗೂ ಎರಡನೆಯದು ಮಾಧ್ವರಿಗೂ ಮೂರನೆಯದು ಶಂಕರರ ಶಿಷ್ಯರಿಗೂ ಸಲ್ಲುವುದು ಆದುದರಿಂದ ಆ ಥರದ ಬ್ರಾಹ್ಮಣರಿಗೆ ದಕ್ಷಿಣೆ ಕೊಡುವ ಕಾಲದಲ್ಲಿ– ಮೂರು ಪಟ್ಟು ಎರಡು ಪಟ್ಟು ಒಮ್ಮಟ್ಟು ಈ ರೀತಿಯ ದ ಕ್ರಮವಾಗಿ ಸಲ್ಲತಕ್ಕದ್ದು

ಶೂದ್ರರಾದವರಿಗೆ ಜಾತಿ ವಿಚಾರಗಳಲ್ಲಿ ಬ್ರಾಹ್ಮಣರ ಹುಕುಮನ್ನು ಕೇಳುವ ಅಧಿಕಾರವು ಧಾರಾಳವಾಗಿದೆ ತಂತಮ್ಮ ಜಾತಿಗಳ ಸಂಖ್ಯೆಯನ್ನು ಒಡೆದು ಹೆಚ್ಚಾಗಿ ಮಾಡುವ ಅಧಿಕಾರವು ಅವರಿಗೇನೆ ಬಿಟ್ಟಿಯದೆ

ಕರ್ತವ್ಯ ನಿಯೋಜನೆ ಮಾದರಿ.

ಬ್ರಾಹ್ಮಣನ ನೇಗಿಲು ಹಿಡಿಯುವಾರದು (ಎತ್ತಿನ ಬಾಲವನ್ನು ಹಿಡಿಯದೆ ಉಳಲು ಆಕ್ಷೇಪವಿಲ್ಲ) ಶೂದ್ರನು ದೇವರ ಪೂಜೆಯನ್ನು ಸದಾ ಮಾಡಬಾರದು, ಹೊರ ಅಂಗಣದಲ್ಲಿದ್ದ ದಕ್ಷಿಣೆಯಿರಿಸಿದ ಹರಿವಾಣವನ್ನು ಗರ್ಭಗುಡಿಗೆ ಕಳುಹಿಸತಕ್ಕದ್ದು ಅವನ ಕೊಡುವ ತೆಂಗಿನ ಕಾಯಿಯಲ್ಲಿ ಅರ್ಧವು ಪೂಜಾರಿಗೇನೆ ಸಲ್ಲಬೇಕು

ಇನ್ನು ಮನುಷ್ಯನ ವಯಸ್ಸಿಗೆ ಸರಿಯಾದ ಶಾಸ್ತ್ರವೂ ಇದೆ.

ಈ ಶಾಸ್ತ್ರವು ಹೆಣ್ಣು ಜನರಿಗೆ ಅನ್ವಯಿಸುವುದಿಲ್ಲ ಆ ವಿಷಯದಲ್ಲಿ ಅವರು ಪುರಾತನ ಅನುವರ್ತಿಗಳು ಈ ವಿಷಯವಾಗಿ, 'ಸ್ತ್ರೀಧರ್ಮರಹಸ್ಯ' — ಎಂಬ ಭಾಗದಲ್ಲಿ ಬೇರೆಯಾಗಿ ಹೇಳುವೆವು.

ಬ್ರಹ್ಮಚರ್ಯ.

ಹುಡುಗನಿಗೆ ಉಪನಯನವಾಗಿ, ಬ್ರಾಹ್ಮಣರಿಗೆ ಹೋಳಿಗೆ ಪರಮಾನ್ನಗಳು ಮುಟ್ಟುವ ದಳಿಗೆಯ, ತನಕ ಬ್ರಾಹ್ಮಣ ಬಾಲನೂ ಶೂದ್ರನೇ ಅನಂತರ ಅವನು ಬ್ರಹ್ಮಚಾರಿಯೆನಿಸುವನು ಅಲ್ಲಿಂದ ಅವನು ಕನಿಷ್ಠ 8 ಅಷ್ಟಕ–ವೇದವನ್ನು ಕಲಿಯಬೇಕು ಅದರ ಅರ್ಥ ಮಾಡುವ ಅಧಿಕಾರವು ಈ ಯುಗದಲ್ಲಿ ಅವನಿಗೆ ಇಲ್ಲ

(೧೪ನೇ ಪುಟಕ್ಕೆ ಮುಂದುವರಿದಿದೆ)

ಹಾಸನ ಟವನ್‌ನ 28ನೇ ದನಗಳ ಪ್ರದರ್ಶನ

ಹಾಸನ ಟವನ್ ದನದ ಪ್ರದರ್ಶನ ಕ್ಷೇತ್ರದಲ್ಲಿ 28ನೇ ದನದ ಪ್ರದರ್ಶನವು ನಡೆಯಲು ಏರ್ಪಾಡಾಗಿರುತ್ತದೆ

ಪ್ರದರ್ಶನವು 1985ನೇ ಜನವರಿ ನ್ಯಾಹೆ ತಾರೀಖು 2ನೇ ಬುಧವಾರದಿಂದ 6ನೇ ಭಾನುವಾರ ಸಾಯಂಕಾಲದವರೆಗೂ ನಡೆಯುತ್ತೆ.

ಗೌರ್ನಮೆಂಟ್ ಆರ್ಡರು ಅನುಸರಿಸಿ ದನಗಳ ಪ್ರದರ್ಶನಕ್ಕೆ ಬಿಡಲ್ಪಡುವ ರಾಸುಗಳ ಮೇಲೆ ರಾಸು 1ಕ್ಕೆ ಎರಡಾಣೆಯಂತೆ ವಸೂಲಾಗುತ್ತೆ

ಪ್ರದರ್ಶನಕ್ಕೆ ಬರುವ ರಾಸುಗಳ ಮೇಲೆ ವಸೂಲುಮಾಡುವ ಫೀ ಬಾಬನ್ನೂ ಮತ್ತು ಪ್ರದರ್ಶನ ಜಾಗಾದಲ್ಲಿ (ಮ್ಯುನಿಸಿಪಲ್) ಬೀಳುವ ಗೊಬ್ಬರವನ್ನು ಸಾಗಿಸುವ ಬಾಬನ್ನೂ ಸಹಾ–ತಾ 4–12–1984ನೇ ಮಂಗಳವಾರ ಮಧ್ಯಾಹ್ನ 2 ಘಂಟೆ ಲಾಗಾಯಿತು ಹಾಸನದ ಸಂತೆಬಳಿ ಇರುವ ಆಕ್ಟಾಯಿ ಕಟ್ಟೆಬಳಿ ಬಹಿರಂಗವಾಗಿ ಕ್ಯಾಟಲ್ ಷೋ ಕಮಿಟಿ ಪ್ರೆಸಿಡೆಂಟ್ ಯಾ ಮ್ಯುನಿಸಿಪಲ್ ಕೌನ್ಸಿಲ್ ಪ್ರೆಸಿಡೆಂಟರವರಿಂದ ಹರಾಜು ಮಾಡಿಸಲ್ಪಡುತ್ತೆ

ಅಂಗಡಿ ವಗೈರೆಗಳಿಗಾಗಿ ವಿಂಗಡಿಸಿರುವ ಜಾಗಗಳನ್ನೂ ತಾ 15–12–1984ರ ಲಾಗಾಯಿತು ಹಾಸನ ಟವನ್ ಮ್ಯುನಿಸಿಪಲ್ ಆಫೀಸಿನಲ್ಲಿ ವಿಲೆವಾರಿ ಮಾಡಲು ಉಪಕ್ರಮಿಸುತ್ತೆ ಇದಕ್ಕೆ ಪೂರ್ವಭಾವಿ ಬರತಕ್ಕ ಅರ್ಜಿಗಳನ್ನು ಅಂಗೀಕರಿಸುವದಿಲ್ಲ

ಈ ರೀತಿ ಜಾಗಾಗಳು ಅಪೇಕ್ಷಿಸಿ ತೆಗೆದುಕೊಳ್ಳಲು ಇಷ್ಟವುಳ್ಳವರು ಮ್ಯುನಿಸಿಪಲ ಆಫೀಸಿನಲ್ಲಿ ಖುದ್ದು ಯಾ ಅವರಿಂದ ಕ್ರಮವಾದ ಅಧಿಕಾರಹೊಂದಿದವರು ಹಾಜರಾಗಿ ಹೊಂದತಕ್ಕದ್ದಿರುತ್ತೆ ಅಲ್ಲದೆ ಒಬ್ಬ ಮನುಷ್ಯನಿಗೆ ತನ್ನ ಸ್ವಂತ ಉಪಯೋಗ ಯಾ ವ್ಯಾಪಾರಕ್ಕೆ ಅವಶ್ಯಕವಾದಷ್ಟು ಸೈಟುಗಳು ಮಾತ್ರ ಕೊಡಲಾಗುತ್ತೆ ಇದರ ಅಧಿಕಾರವು ಸಂಪೂರ್ಣವಾಗಿ ಪ್ರೆಸಿಡೆಂಟ್ ಯಾ ಇವರಿಂದ ಅಧಿಕಾರ ಹೊಂದಿದವರಿಗೆ ಇರುತ್ತೆ

ಬಾಕಿ ವಿಷಯಗಳನ್ನು ಹಾಸನ ಟವನ್ ಮುನಿಸಿಪಲ್ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು

S R Srikantia,
For President
Cattle Show Committee
Town Municipality
Hassan

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ ಆ	ರೂ ಆ
ಹೊಸ ರಾಶಿ ಅಕ್ಕಿ	3— 2	3— 6
ಹಳ್ಳು ಮುಸ್ತಿ	4— 2	4—12
ಹಳ್ಳು ಸುಡು	4— 0	4— 6
ಹಳ್ಳು ಸುಗ್ಗಿ	3— 8	4— 2
ಹೊಸ ಅಪ್ಪಲ್ ಬೆಳ್ತಿಗೆ	4—12	5— 4
ರಂಗೂನು ಬಿ. ಗೋ. ಅಕ್ಕಿ	5— 4	6— 4
ಎಲ್ಲಾರುಚಿ, ಮು. ಅಕ್ಕಿ	4— 2	4— 4
ಗೋಧಿ ಗೋಣಿ ಅಕ್ಕಿ	10— 0	12— 8
ಕೊಗರಿ ಗೋಣಿ ಅಕ್ಕಿ	9— 8	10— 0
ಹುರುಳಿ ಗೋಣಿ ಅಕ್ಕಿ	7 — 0	7— 4
ಅವರೆ ಗೋಣಿ ಅಕ್ಕಿ	7 — 0	10— 8
ಕಡಲೆಬೇಳೆ ಗೋಣಿ ಅಕ್ಕಿ	10— 0	17— 0
ಉದ್ದು ಗೋಣಿ ಅಕ್ಕಿ	8— 0	8— 2
ಹೆಸರು ಗೋಣಿ ಅಕ್ಕಿ	6—12	7— 6
ಉಂಡೆಬೆಲ್ಲ ಖಂಡಿ ಅಕ್ಕಿ	38— 0	40— 0
ಉಪ್ಪು ಗೋಣಿ ಅಕ್ಕಿ	4— 8	5— 0
ಕೊಬ್ರಿ ಖಂಡಿ ಅಕ್ಕಿ	41— 0	43— 0
ಕೊಬ್ರಿ ಹಿಂಡಿ ಖಂಡಿ ಅಕ್ಕಿ	25— 8	26— 4
ಎಳ್ಳಿಂಡಿ ಖಂಡಿ ಅಕ್ಕಿ	30— 0	35—12
ಕೊಬ್ರಿ ಎಣ್ಣೆ ಮುಡಿ ಅಕ್ಕಿ	3— 0	4— 0
ಎಳ್ಳೆಣ್ಣೆ ಮುಡಿ ಅಕ್ಕಿ	5— 2	5—10
ಚಿಮಣಿಎಣ್ಣೆ ಪೆಟ್ಟಿಗೆ ಅಕ್ಕಿ	5— 7	5—7
ಮೋರಿಸ ಸಕ್ಕರೆ ಮು ಅಕ್ಕಿ	3— 9	3—10
ಮೆಣಸು	5—12	7— 0
ಸಾಸಿವೆ ಮುಡಿ ಅಕ್ಕಿ	4—12	5— 4
ಕಾಳುಮೆಣಸು ಖ. ಅಕ್ಕಿ	150— 0	165— 0
ಯೇಲಕ್ಕಿ ಮುಡಿ ಅಕ್ಕಿ	24— 0	26— 0
ಗೇರುಬೀಜ ಮು. ಅಕ್ಕಿ	3—14	4— 0
ಶಬ್ಬಿಗ ಖಂಡಿ ಅಕ್ಕಿ	42— 0	44— 0
ತ್ರಾಂಮ್ರಕಗಳು ಮು ಅಕ್ಕಿ	9 — 8	10—0
ತಾಂಮ್ರಪಾತ್ರಗಳು ಮು ಅಕ್ಕಿ	12— 8	14— 0
ಚೀನಿಬೆಲ್ಲ ಸೇರು ಅಕ್ಕಿ	14—12	15— 0
ಹಿತ್ತಾಳೆ ತಗಡು ಮು. ಅಕ್ಕಿ	9— 2	9—10
ತವಡು ಅಕ್ಕಿ	20—10	21— 0
ಹುಣಸೆ ಹುಳಿ ಖಂಡಿ ಅಕ್ಕಿ	30— 0	40— 0
ನೇಟಿವ್ ಕಾಫಿ ಖಂಡಿ ಅಕ್ಕಿ	170— 0	185— 0
ಪ್ಲಾಂಟೇಶನ್ ಕಾಫಿ ಖಂಡಿ ಅಕ್ಕಿ	275— 0	280— 0
ಹಳೆ ಅಡಿಕೆ	85 — 0	115— 0
ಹೊಸ ಅಡಿಕೆ	55— 0	61 — 0

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಕಾರ್ತಿಕ ಬ॥ ೧೦ ಶನಿವಾರದಿಂದ– ಮಾರ್ಗಶಿರ ಶು॥ ೧ ಶುಕ್ರವಾರದ ವರೆಗಿನ ಪಂಚಾಂಗ (೧೯೩೪ನೇಯ ಸಿಂಹಸೋಣ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಕಾರ್ತಿಕ	ಸೂರ್ಯ ಉ	ಅಸ್ತ	ಷರಾ
1	ಶನಿ	೧೦	೪೮।	ಉತ್ತರ	೧೯॥	೧೩	6 22	6 18	●
2	ರವಿ	೧೧	೫೦	ಹಸ್ತ	೨೩।	೧೬	6 22	6 17	
3	ಸೋಮ	೧೨	೫೦।	ಚಿತ್ರ	೨೫॥	೧೭	6 22	6 17	
4	ಮಂಗಳ	೧೩	೪೯॥	ಸ್ವಾತಿ	೨೭	೧೮	6 2 2	6 16	
5	ಬುಧ	೧೪	೪೭।	ವಿಶಾಖ	೨೭	೧೯	6 22	6 15	
6*	ಗುರು	೩೦	೪೪॥	ಅನೂರಾಧ	೨೫॥	೨೦	6 22	6 14	
7	ಶುಕ್ರ	೧	೪೦॥	ಜ್ಯೇಷ್ಠ	೨೩॥	೨೧	6 22	6 14	

NEW ARRIVALS.

Medicines.

Dr. Schuessler's Twelve Tissue Remedies 5 gr. bot. As. 4/-
Homoeopathy Medicines 5 gr. bot As. 5/—
Sugar of Milk Dr Schwabe's original bot, 1 lb Rs 2/-
Haarlem Oil—a world-renowned remedy As. 8/ per phial
Dr. Haslo's New Curative Earth—Radium Cure Rs 4/-per lb
Dr. Schwabe's other special remedies are always in stock

Please consult us for your requirements

Kanarese Book a Family Guide to Biochemistry Re 1/-
" Domestic Homoeopathy Rs 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As 2/6
Delightful in aroma, charming in appearance. Please try

Kirloskar Pumps.

We are the Representatives for Kirloska Brothers for their reliable Shallow-well and Deep-well Pumps, Spring Cots, Spring Couches etc, and stock

Pipes and pipe fittings at cheap prices Coir Mats and Mattings
Steadler Pencils and Stationeries

We are the recognised agents for STEADLER'S all stationeries and shall be glad to serve you.

Olympia Typwriter.

An up to date Machine in Standard and portable sizes
For Full particulars apply to the undersigned—

Basel Mission Book & Tract Depository,
Mangalore, S K or Hubli, S M.

"ITS A PARAGON PRODUCT."

ಅದರ ಬೆಲೆಯೇನೂ ಇಲ್ಲ –

ಅಂದರೆ – ಶಿಶುಗಳ ಹಲವು ಗುಣಗಳನ್ನು ಗಣಿಸಿದರೆ 'ಬೇಬೀಸ್ ಜುವೆನೋಲ್'ವು ಮಕ್ಕಳಿಗೆ, ಪ್ರಪಂಚದ ಅತಿದಿವ್ಯ ಟಾನಿಕ್ ಎಂಬುದಕ್ಕೆ – ಇತ್ತಲಾಗೆ ದೇಶದ ಪ್ರಸಿದ್ಧ ವೈದ್ಯರೂ ವೈಜ್ಞಾನಿಕರೂ ಜರಗಿಸಿದ ಆಲ್ ಇಂಡಿಯಾ ಸೆನಿಟರಿ ಮತ್ತು ಸೈಂಟಿಫಿಕ್ ಎಗ್ಸಿಬಿಶನಿನಲ್ಲಿ ಸ್ವರ್ಣಪದಕವನ್ನು ಪಡೆದಿದೆಯೆಂಬುದಕ್ಕಿಂತ ಒಳ್ಳೆಯ ರುಜು ಮಾತು ಬೇಕೆ? ಇಂದಿನಿಂದಲೇ ನಿಮ್ಮ ಮಗುವಿಗೆ ಈ ಸರಳ, ಸುರಕ್ಷಿತ ಹಾಗೂ ಶಾಸ್ತ್ರೋಕ್ತ ಅಮೃತವನ್ನು ಕೊಡಲಾರಂಭಿಸಿ ನಿಮ್ಮ ಮಗುವು ಆರೋಗ್ಯ–ಪುಷ್ಟಿಗಳನ್ನು ಹೊಂದಿ ಬಹು ಕಾಲ ಬಾಳುವುದೇ ನಿಮಗೊಂದು ಮಹಾನಿಧಿಯ ಲಕ್ಷಣೆಯಾದಂತೆ

ಇದನ್ನ ಕೊಂಡುಕೊಳ್ಳುವ ಆಗ್ರಹವಿರಲಿ–

BABY'S Juvenol
RECOMMENDED BY EMINENT MEDICAL MEN.

ಎಲ್ಲ ಕೆಮಿಸ್ಟರಲ್ಲಿಯೂ ರೂ 2 ಮತ್ತು ರೂ 1½ಕ್ಕೆ ದೊರೆಯುತ್ತದೆ.
ಅಥವಾ
ಮೆಸರ್ಸ್ ಪೈ ಫಾರ್ಮಸಿ ಎಂಡ್ ಕಂಪನಿ,
ರಥಬೀದಿ, ಮಂಗಳೂರು.

Standard Furniture Co. Ltd
KALLAI, MALABAR
The BEST HOUSE for FURNITURE.

BRANCHES:—
Madras —34—35, General Patters Road, Mount Road
Trichinopoly —11, Promenade Road, Cantt

ಸ್ಫುಟವಿಚಾರಗಳು

'ಜಾಪಾನಿನ ಯಂತ್ರಗಳು ಲಂಕೆ ಶಯರಿಗೆ!'

—ಎಂಬೀ ವಾರ್ತೆಯನ್ನು ಕೇಳಿ ಬ್ರಿಟ್ಸನಿಗೆ ಮಾತ್ರವಲ್ಲ, ಪ್ರಪಂಚಕ್ಕೇ ಆಶ್ಚರ್ಯವಾಗಿದೆಯೆನ್ನಬಹುದು. ಬ್ರಿಟ್ಸನಿನ ಧನಸತ್ತಾವಾದಿಗಳಿಗೆ ಇತ್ತೀಚೆಗೆ, ಆಗಾಗ ದುಸ್ತರ ಸಂಕಟಗಳು ಪ್ರಾಪ್ತವಾಗ ಹತ್ತಿದುದು ಸಹಜವೇ ಆದರೂ, ಜಾಪಾನಿನ ಯಂತ್ರದ ಆಮದಿನಷ್ಟು ವಿಶೇಷ ವಾರ್ತೆಯೊಂದು ಅಲ್ಲಿ ಉಂಟಾಗಿರಲಿಲ್ಲ. ಕೆಲವೇ ವರ್ಷಗಳ ಹಿಂದೆ ಜಾಪಾನು ಬ್ರಿಟ್ಸನಿಂದ ಅರಿವೆಯನ್ನು ಖರೀದಿ ಮಾಡುತ್ತಿತ್ತು. ಆ ನಂತರ, ಅರಿವೆಗಳನ್ನು ತಯಾರಿಸಲು ಬೇಕಾದ ಯಂತ್ರಾದಿಗಳನ್ನು ಬ್ರಿಟ್ಸನಿಂದ ಕೊಂಡುಕೊಂಡಿತು. ಈಗಲಾದರೋ?—ಪ್ರವಾಹವು ವಿರುದ್ಧಗತಿಗೆ ತಿರುಗಿದೆ. ಇನ್ನು ಕೆಲವು ವರ್ಷಗಳಲ್ಲಿ ಬ್ರಿಟ್ಸನನವರು ಜಾಪಾನಿನಿಂದಲೇ ಅರಿವೆಗಳನ್ನು ಕೊಂಡುಕೊಳ್ಳುವಲ್ಲಿ ಈ ನಾಟಕಕ್ಕೆ ಮಂಗಲವಾಗುವುದೋ ಎಂಬ ಸಂದೇಹವು ತೋರುವುದು. ಹತ್ತು ವರುಷಗಳ ಹಿಂದೆ, ಇಂತಹ ವಿದ್ಯಮಾನವನ್ನು ಯಾರು ನಿರೀಕ್ಷಿಸಿದ್ದರು!

ಮತ್ತೋರ್ವ ಚರಂಡೀಶೋಧಕರು—

—ಈಗ ಮುಂದೆ ಬಂದು, ಬ್ರಾಹ್ಮಣರನ್ನು ಅತಿ ಹೇಯವಾದ ನುಡಿಗಳಿಂದ ಕೆಣಕಿ, ಬ್ರಿಟಿಷ್ ಸಿಂಹವು ಬ್ರಾಹ್ಮಣನ ಮುಗ್ಧ ಮಂತ್ರಕ್ಕೆ ಬಗ್ಗುತ್ತಿದೆಯಾಗಿ ದೂರಿ ಕೃತಾರ್ಥರಾಗಿರುವವರು. ಇವರು ಪಂಜಾಬ ಸಂಸ್ಥಾನದ ಒಂದು ಜಮಾಬಂದೀ ಹುದ್ದೆಯಲ್ಲಿ ಮೆರೆದವರೆಂಬುದು ಅತ್ಯಂತ ವಿಷಾದಕರ. ಭಾರತಮಾತೆಯ ಉಪ್ಪನ್ನ ತಿಂದು, ಸವ್ಯಕ್ತಿಹೊಂದಿದ ಕೂಡಲೇ ಉಂಡ ಮನೆಗೆ ಎರಡು ಬಗೆವವರೆಷ್ಟೋ ಮಂದಿ ಇರುವರಾದರೂ, ಇವರು ಅವರೆಲ್ಲರ ದಾಖಲೆಯನ್ನು ಕಿತ್ತುಕೊಂಡರೆನ್ನಬೇಕಾಗುವುದು. ಇವರು ಚರಂಡಿಗಳಲ್ಲಿ ವಾಸಿಸಿಯೇ ಆ ಅನುಭವ ಪಡೆದಿರಬಹುದೆನ್ನುವ, ಅವರ ಯಾವ ಜನಾಂಗವು ಕಾಯಕಷ್ಟ ಮಾಡಿ, ಇವರನ್ನು ಪೋಷಿಸುತ್ತಿತೋ ಆ ಜನಾಂಗದ ವಿಷಯವಾಗಿ ಸವಿಯಾದ ಎರಡು ಮಾತುಗಳನ್ನು ಹೇಳುವಷ್ಟು ಸೌಜನ್ಯವು ಇವರಲ್ಲಿಲ್ಲದೆ ಹೋಯಿತೆಂಬುದು ಅತ್ಯಂತ ವಿಷಾದಕರವೇ ಆಗಿದೆ.

ಕಮಿಶನರರ ಹೊಸ ಕಾರ್ಯವು—

—ಕಾಂಗ್ರೆಸ್ ಉಮೇದ್ವಾರರಿಗೆದುರಾಗಿ ವೋಟುಗಳನ್ನು ಸಂಗ್ರಹಿಸುವುದೇ? ಸಂಯುಕ್ತ ಸಂಸ್ಥಾನದ ಕಾಂಗ್ರೆಸ್ ಮುಖಂಡರಾದ ಮಿ| ರಾಫಿ ಅಹಮದ್ ಕಿದ್ವಾಯಿಯವರು ಒಂದು ವಿಚಿತ್ರ ಕತೆಯನ್ನು ಹೇಳುತ್ತಿರುವರು:—"ಕಮಿಶನರರಿಂದ ಮೊದಲಾಗಿ ಎಲ್ಲ ಆಫೀಸರರೂ ನನ್ನ ಎದುರಾಳಿ ಡಾ| ಜಿಯಾವುದ್ದೀನರ ಕಡೆಯಿಂದ ವೋಟುಗಳನ್ನು ಸಂಗ್ರಹಿಸುತ್ತಿದ್ದರೆಂಬ ವಾರ್ತೆ ಕೇಳಿ ಸೋಜಿಗಪಟ್ಟೆನು. ನಾನೇ ಕಮಿಶನರರನ್ನು ಕಂಡು, ಪ್ರಶ್ನಿಸಿದಾಗ-ತನ್ನನ್ನು ಸರಕಾರವು ತಡೆಯಲಾರದೆಂದೂ ತಾನು ಜಿಯಾವುದ್ದೀನರವರಿಗಾಗಿ ಕೆಲಸ ಮಾಡುತ್ತಿರುವುದು ನಿಶ್ಚಯವೆಂದೂ ದಿಟ್ಟತನದಿಂದ ನುಡಿದರು. ತಾನು ಹಿಂದೆ ಹಾಗೆ ಮಾಡಿರುವೆನು—ಮುಂದೆಯೂ ಮಾಡುವೆನೆಂದೂ ತಿಳಿಸಿದರು." ಇಂತಹ ವಾರ್ತೆಗಳನ್ನು, ಡಿಲ್ಲಿಯಲ್ಲಿರುವ ನಮ್ಮ ರಾಜಪ್ರತಿನಿಧಿಗಳು ಹೇಗೆ ಸ್ವೀಕರಿಸುವರೋ ತಿಳಿದಿಲ್ಲ!

ಮಹಾತ್ಮಾ ಗಾಂಧಿಯವರು—

—ಅಖಿಲಭಾರತ ಗ್ರಾಮ್ಯ ಕೈಗಾರಿಕಾ ಸಂಘದ ಸ್ಥಾಪನೆಯ ಕುರಿತು ಒಂದು ಪ್ರಕಟಣೆ ಹೊರಡಿಸಿ, "ಈ ಹೊಸ ಕಾರ್ಯಕ್ರಮದಲ್ಲಿ ವಿಶ್ವಾಸವಿರುವ, ಶ್ರದ್ಧೆಯಿಂದ ಕೆಲಸ ಮಾಡುವ, ತಮ್ಮಿಂದ ಶಕ್ಯವಿದ್ದಷ್ಟು ಹೆಚ್ಚು ಸಮಯ ದುಡಿಯಬಲ್ಲ—ಕಾರ್ಯಕುಶಲರು ಕೆಲವೇ ಮಂದಿಯಾದರೂ ಸಾಕು—ಅಂಥವರನ್ನೇ ಬಯಸುವೆನು. ಇಂತಹ ಕಾರ್ಯಭಾರವನ್ನು ಹೊತ್ತುಕೊಳ್ಳುವವರು ಯಾವ ಜಾತೀಯ ಪಕ್ಷಪಾತವಿದ್ದವರೂ ಆಗಿರಬಾರದು." ಎಂದಿರುವರು. ಇದನ್ನು ಜನರು ಚೆನ್ನಾಗಿ ಲಕ್ಷ್ಯದಲ್ಲಿರಿಸಬೇಕಾಗಿದೆ. ಹಾಗೆಯೇ 'ಇದು ಕಾಂಗ್ರೆಸ್ಸಿನ ಒಂದು ಅಂಗ'ವೆಂದೂ ಯಾರೂ ತಪ್ಪು ಭಾವನೆಯುಂದಿರದೆ, ರಾಜಕೀಯಗಳಿಗೆ ಸಂಬಂಧಿಸಿರದ, ಕೇವಲ ದೇಶಾಭ್ಯುದಯ ಚಿಂತನೆಯಿಂದ ಹೊರಟ ಒಂದು ಸಂಸ್ಥೆಯಿದೆಂಬುದನ್ನರಿತು, ತ್ರಿಕರಣಪೂರ್ವಕವಾಗಿ ಸಹಾಯಮಾಡಿ, ಈ ಮಹಾ ಉದ್ಯಮದಲ್ಲಿ ನೆರವಾಗುವರೆಂಬ ಭರವಸೆಯಿದೆ.

ಹಿಂದೂದೇಶಕ್ಕೆ ಬೇಕಾದುದೇನು?

'ಒಂದು ತುತ್ತು, ಪೌಷ್ಟಿಕವಾದ ಆಹಾರ; ಮತ್ತು ಗ್ರಾಮ ಶೌಚ್ಯ' ಎಂದು ಮೇಜರ್ ಜನರಲ್ ಸರ್ ರೊಬರ್ಟ್ ಮೆಕ್ ಕೆರ್ರಿಸನರು ಬರೆಯುವರು. ಇದು ಅಕ್ಷರಶಃ ನಿಜವಾಗಿದೆ. ನಿರಕ್ಷರತೆ ಮತ್ತು ದಾರಿದ್ರ್ಯವು ಒಂದನ್ನೊಂದನ್ನು ಬಿಟ್ಟಿಲ್ಲ. ನಮ್ಮ ಹಳ್ಳಿಗಳ ಇಂದಿನ ಚಿತ್ರವು ಅತ್ಯಂತ ಕರುಣಾಜನಕವಿದೆ. ಒಂದು ನಗರದ ಜೀವನವು ನೂರಾರು ಗ್ರಾಮಗಳಲ್ಲಿನ ಸಂಪತ್ತಿನ ಮೇಲೆ ಹೊಂದಿಕೊಂಡಿದೆ. ಗ್ರಾಮದ ಕೈಗಾರಿಕೆಗಳು ಇಂದು ನಾಮಾವಶೇಷವಾಗಿವೆ. ಅವು ಎಂತಹವು, ಅವನತಿಯ ಕಾರಣವೇನು, ಪುನರುಜ್ಜೀವನದ ಸಾಧ್ಯತೆಗಳೇನು ಎಂಬೀ ವಿಚಾರ-ವಿಮರ್ಶೆಗಳಿಂದು ಆವಶ್ಯವಿವೆ. ಹಿಂದೂದೇಶದ ಶೇಕಡಾ ೭೫ರಷ್ಟು ಪ್ರಜಾಕೋಟಿಯು ಹಳ್ಳಿಗಳಲ್ಲಿರುತ್ತ—ಹಳ್ಳಿಗಳ ಈ ಪ್ರಶ್ನೆಯನ್ನು ಸಕಾಲದಲ್ಲಿ ಎತ್ತಿ ಹಿಡಿದು, ಬಂದಿರುವ ಮಹಾತ್ಮಾಜಿಯವರ ಶ್ರಮವು ಸಫಲವಾಗಲಿ.

ಚುನಾವಣೆಗಳ ಫಲಿತಾಂಶದ ಸ್ಥೂಲ ವಿಮರ್ಶೆ—

—ಯನ್ನು ಮಾಡುತ್ತ ನಮಗೆ ತಿಳಿದುಬರುವುದೇನು? ಎಲ್ಲ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಉಮೇದ್ವಾರರೇ ಬಹು ಸಂಖ್ಯೆಯಲ್ಲಿ ಚುನಾಯಿಸಿ ಬಂದಿರುವರು. ಪಂಜಾಬ ಮತ್ತು ಬಂಗಾಲಗಳಲ್ಲಿ ಮಾತ್ರ ಕಾಂಗ್ರೆಸ್ ಉಮೇದ್ವಾರರಿಗೆ ಜಯ ಸಿಗಲವಕಾಶವಿಲ್ಲದೆ ಹೋಯಿತು. ಆ ಪ್ರಾಂತ್ಯಗಳಲ್ಲಿ ಜಾತೀಯ ಎವಾರ್ಡಿನ ವಿರೋಧವು ಅತಿ ಹೆಚ್ಚಾಗಿರುವುದೇ ಇದಕ್ಕೆ ಕಾರಣವಷ್ಟೆಯಲ್ಲದೆ, ಕಾಂಗ್ರೆಸ್ಸಿನವರು ಜಾತೀಯ ಎವಾರ್ಡಿನ ಕುರಿತಾಗಿ ಮಾಡಿದ ಠರಾವನ್ನು ಆ ಪ್ರಾಂತ್ಯಗಳು ಅನುಮೋದಿಸಿಲ್ಲ. ಆದರೆ, ರಾಷ್ಟ್ರೀಯ ಪಕ್ಷದ ಉಮೇದ್ವಾರರ ವಿಜಯವು ಒಂದು ಬಗೆಯಲ್ಲಿ ಕಾಂಗ್ರೆಸ್ಸಿನ ವಿಜಯವೇ ಆಗಿದೆಯೆನ್ನಬೇಕು. ಏಕೆಂದರೆ, ಜಾತೀಯ ಎವಾರ್ಡಿನ ಒಂದು ಪ್ರಶ್ನೆ ಬಿಟ್ಟರೆ, ರಾಷ್ಟ್ರೀಯರೆಲ್ಲ ಕಾಂಗ್ರೆಸ್ಸಿನ ಧೋರಣೆಗನುಕೂಲರಾಗಿಯೇ ಇರುವವರು.

'ಗುಡ್ ಮಾರ್ನಿಂಗಿ'ಗೂ ಬೆಲೆಯಿದೆ.

ಸಂದೇಹವೇನು? ಆಲ್ಮೋರ ಜೈಲಿನಲ್ಲಿರುವ ಪಂಡಿತ ಜವಾಹರಲಾಲರಿಗೊಂದು 'ಗುಡ್ ಮಾರ್ನಿಂಗ್' ವಂದನೆಯನ್ನರ್ಪಿಸಲು ನೈನಿತಾಲಿನ ಪ್ರೊಫೆಸರರೊಬ್ಬರು ಬಂದಾಗ, 'ಆಗುವುದಿಲ್ಲ'ವೆಂದು ಜೈಲಿನ ಸುಪರಿಂಟೆಂಡೆಂಟರು ನಿರ್ದಾಕ್ಷಿಣ್ಯವಾಗಿ ಉತ್ತರ ಕೊಟ್ಟರೆಂದು ಪ್ರಕಟವಾಗಿದೆ. ಯಾವನೊಬ್ಬ ಉಚ್ಚಾಧಿಕಾರಿಯಷ್ಟಾದರೂ ಆಂಗ್ಲ ಶಿಕ್ಷಣವನ್ನು ಇಂಗ್ಲಾಂಡಿನಲ್ಲಿ ಪಡೆದಿರುವ ಜವಾಹರಲಾಲರಿಗೆ, ಸ್ವದೇಶದ ಒಂದು ಜೈಲಿನಲ್ಲಿ 'ಗುಡ್ ಮಾರ್ನಿಂಗ್' ಪಡೆವಷ್ಟು ಭಾಗ್ಯವೂ ಇಲ್ಲದಾಗಿ ಹೋದುದನ್ನೂ, ಈ 'ಆಫಿಶಿಯಲ್' ಕಾಠಿಣ್ಯದ ಮಾದರಿಯನ್ನೂ ನೋಡಿ ಆ ಆಂಗ್ಲ ಪ್ರೊಫೆಸರರು ಏನೆಂದು ಗ್ರಹಿಸಿದರೋ! ಭಾರತವರ್ಷದಲ್ಲಾಗುತ್ತಿರುವ 'ಮಾರ್ನಿಂಗು'ಗಳು ನಿಜವಾಗಿಯೂ 'ಗುಡ್' ಆಗಿಲ್ಲದಿರಬೇಕೆಂದೇ ಹಾಗೆ ಹೇಳಲು ಸುಪರಿಂಟೆಂಡೆಂಟರು ಆತಂಕಿಸಿರಬಹುದು.

ನೋಟಗಳು
NOTES

ಸಹಶಿಕ್ಷಣವು ಹುಡುಗಿಯರನ್ನು ಹುಡುಗರನ್ನಾಗಿಯೂ, ಹುಡುಗರನ್ನು ಹುಡುಗಿಯರನ್ನಾಗಿಯೂ ಮಾಡುವುದಿಲ್ಲವೆಂದು ಡಾ| ರಾಧಾಕುಮುದ ಮುಖರ್ಜಿಯವರ ಆಶ್ವಾಸನೆ. ಹಾಗಾಗುವುದೆಂದು ನಿರೀಕ್ಷಿಸಿ ಯಾರಾದರೂ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿದ್ದರೆ, ಪುನಃ ಕರೆಸಿಕೊಳ್ಳದಿರಲಿ.

* * *

ಪುದುಕೋಟೆಯ ಅಸಾಫರೆಂಬವರು ತಯಾರಿಸುವ ಬೆಂಕಿಪೆಟ್ಟಿಗೆಗಳನ್ನೆ ಕೊಂಡುಕೊಳ್ಳಬೇಕೆಂದು ಪುದುಕೋಟೆಯ ಜನರಿಗೆ ಅಲ್ಲಿಯ ರಾಜರ ಆಜ್ಞೆ. ಈ ಆಜ್ಞೆಯು—'ಕೊಂಡುಕೊಳ್ಳಬಾರದು' ಎಂದು ಪ್ರಕಟಣೆ ಹೊರಡುವ ವರೆಗೆ ಇರುವುದು.

* * *

ಅಸಾಫರು ಮಾತ್ರ ಬೆಂಕಿಪೆಟ್ಟಿಗೆ ತಯಾರಿಸಬಹುದೆಂಬ ಒಂದು ಆಜ್ಞೆಯೂ, ಅದನ್ನು ಜನರು ಇಂತಿಷ್ಟೇ ಕೊಂಡುಕೊಳ್ಳಬೇಕೆಂಬ ಆಜ್ಞೆಯೂ ಇನ್ನು ನಿರೀಕ್ಷಿಸಲ್ಪಡಬಹುದು. ಆದರೆ, ಬೆಂಕಿಪೆಟ್ಟಿಗೆ ಬೇಡವಾದವರೂ ಕೊಂಡುಕೊಳ್ಳಲೇ ಬೇಕೆಂಬ ಆಜ್ಞೆ ಬರಲಾರದಷ್ಟೆ?

* * *

ಕಾಲ್ದಾರಿಯಿದ್ದಲ್ಲಿ ಜನರು ಮೋಟಾರು ದಾರಿಯಿಂದ ಹೋಗದೆ ಇದ್ದರೆ ಅಪಘಾತಗಳು ಕಡಿಮೆಯಾಗುವುವೆಂದು, ಬೊಂಬಾಯಿಯ "ವೆಸ್ಟರ್ನ್ ಇಂಡಿಯಾ ಆಟೊಮೊಬೈಲ್ ಎಸೋಸಿಯೇಶನ್"ನವರ ಹಿತವಾದ.

* * *

ಸಂದೇಹವಿಲ್ಲ. ಆದರೆ, ಅದಕ್ಕೆ ಮತ್ತೊಂದು ಪಕ್ಷವೂ ಇದೆ. ಮೋಟಾರು ದಾರಿಯಿದ್ದಲ್ಲಿ ಮೋಟಾರ ವಾಹನಗಳು ದಯಮಾಡಿ ಕಾಲುದಾರಿ ತನಕವೂ ಹೋಗದೆ ಇದ್ದರೆ ಅಪಘಾತಗಳು ಮತ್ತಷ್ಟು ಕಡಿಮೆಯಾಗುವುವು.

* * *

ಕಾಡುಹಿತ್ತಿಲಿನಲ್ಲಿ ರಸ್ತೆ ಕಡಿದಾಗ ಆ ಚಿಕ್ಕ ಮೈದಾನಿನಲ್ಲಿ ಆಗಾಗ ಚಿಕ್ಕ ಚಿಕ್ಕ ಇಸ್ಪೀಟು ಕೂಟಗಳು ಸೇರುತ್ತಿವೆ. ಇವರು ಹಣದ ಪಣ ಮಾಡುತ್ತಿರುವುದರಿಂದ ಆಟಗಳು ಸಾಮಾನ್ಯವಲ್ಲವೆಂದೆಣಿಸಲಾಗಿದೆ. ನಗರ ರಕ್ಷಕರು ಆಗಾಗ ಇತ್ತ ಬರುತ್ತಿದ್ದರೆ, ಈ ಆಟಗಾರರನ್ನೂ ರಕ್ಷಿಸಿದಂತಾಗುವುದು.

* * *

ಗನ್ ನೋಟಿಸು ಪುನಃ ಮಂಗಳೂರಿಗೆ ಬರಲಿರುವನೆಂದು ಯಾರೋ ದೊಡ್ಡ ಗನ್ ಹೊಡೆದು ಬಿಟ್ಟಿರುವರು. ಇದು ನಿಜವಾದಲ್ಲಿ, ಕಳೆದ ವರ್ಷ ಅವನು ಈ ಊರು ಬಿಡುವಾಗ ಅವನೊಂದಿಗೆ ಕಾಣದಾದ ಕೆಲವರು ಈಗ ಪುನಃ ಮಂಗಳೂರಲ್ಲಿ ಕಾಣಸಿಗಬಹುದೆಂಬ ಆಸೆ.

For Sale! **For Sale!**

One slightly used "CLIMAX" vertical 6, B. H. P. Crude oil Engine in quite good & running order. For prices and particular write to or call at.,

Kanara Medical & Surgical Institute, Udipi.

ಮಾರಾಟಕ್ಕಿದೆ! **ಮಾರಾಟಕ್ಕಿದೆ!**

ಸ್ವಲ್ಪ ಸಮಯ ಉಪಯೋಗಿಸಿದ್ದು, ಸರಿಯಾಗಿ ಆರ್ಡರಿನಲ್ಲಿ ಕೆಲಸ ಮಾಡುವ "ಕ್ಲೈಮಾಕ್ಸ್" ವರ್ಟಿಕಲ್ 6 B. H. P. ಕ್ರೂಡ್ ಆಯಿಲ್ ಇಂಜಿನ್ ಒಂದು ಮಾರಾಟಕ್ಕಿದೆ. ಕ್ರಯ ವಗೈರೆಯನ್ನು ತಿಳಿದುಕೊಳ್ಳುವರೆ ಈ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ.

ರೊಕ್‌ಫೆಲ್ಲರರು ಬೇಚಾರೊತ್ತಿದ್ದಾರೆ!

ಪಾಪ!—ಬದುಕಬೇಕೆಂದು— ಅವರ ವಯಸ್ಸೀಗ ೯೫ ವರ್ಷ! ಈಗ ಅವರಿಗೆ ಪ್ರಾಣಭೀತಿ ಉಂಟಾಗುವಂತಿದೆಯೆಂದು ಸುದ್ದಿ. ಆದರೆ, ವಿದ್ವಾಂಸರು ಅವರ ಜನಕ ವಾಯುವನ್ನು ಅವರ ಶ್ವಾಸಕೋಶಗಳಿಗೆ, ಶಕ್ತಿ ನರಗಳಿಗೆ ಚೇತನಕಾರೀ ಔಷಧಗಳನ್ನು "ಇಂಜಕ್ಟ್" ಮಾಡಿ, ಬದುಕಿಸಿರಲು ಯತ್ನಿಸುತ್ತಿರುವರಂತೆ. "ಇದೇಕೆ ಇಷ್ಟು ಕೋಲಾಹಲ?— ಅವರ ಧನರಾಶಿಯು ಅವರನ್ನು ಬದುಕಿಸಬಲ್ಲುದೇ?" ಎಂದು "ಗ್ರಾಫಿಕ್" ಎಂಬ ಪತ್ರಿಕೆಯ ಪ್ರಶ್ನೆ.

ಸಾಮುವೇಲ್ ಇನ್ಸಲ್ಲರ ಬಿಡುಗಡೆ.

ಅಮೇರಿಕದ ಇತಿಹಾಸದಲ್ಲಿ ಮಹಾ ವಂಚಕನೆಂದು ಆಪಾದನೆ ಹೊರಿಸಲ್ಪಟ್ಟ ಚಿಕಾಗೋವಿನ ವಾಣಿಜ್ಯ ನೃಪತಿ ಸಾಮುವೇಲ್ ಇನ್ಸಲ್ಲರು ನಿರಪರಾಧಿಯೆಂದು ಚಿಕಾಗೋ ಕೋರ್ಟಿನ ತೀರ್ಮಾನವಾಯಿತು. ಇವರು ಕೋಟಿಗಟ್ಟಲೆ ಧನವನ್ನು ಜನರಿಂದ ಪಡೆದು, ಕಂಪೆನಿಗಳನ್ನು ತೆರೆದು, 'ದಿವಾಳಿ'ಯೆನಿಸಿ, ಕಡೆ ಮುರಿಸಿಕೊಂಡು ಕೊನೆಗೆ ತುರ್ಕಿಯಲ್ಲಿ ಹಿಡಿಯಲ್ಪಟ್ಟಿದ್ದರು.

ಡಾ| ವರನೋಫರ ಹೊಸ ಕಾರ್ಯಕ್ಷೇತ್ರ

ಯೌವನಪ್ರದಾಯಕ ಕಸಿಯನ್ನು ಬಲ್ಲ ಡಾ| ವರನೋಫರು ನವವಧುವಿನೊಡನೆ ಸಿಲೋನಿಗೆ ಬಂದಿರುವರು, ಅವರ ಹೊಸ ಕಾರ್ಯಕ್ಷೇತ್ರವಿನ್ನು ಆಫ್ರಿಕದ ರೋಗಕ್ಕೊಂದು ಯೋಗ್ಯ ಚಿಕಿತ್ಸೆ ಕಂಡುಹಿಡಿಯುವುದಾಗಿದೆಯೆಂದು ತಿಳಿಸಿರುವರು.

ಮಾನವನ ಆಯುಷ್ಯವನ್ನು ಹನ್ನೆರಡು ವರ್ಷಗಳಷ್ಟಾದರೂ ಹೆಚ್ಚಿಸಬಲ್ಲೆನೆಂಬ ಪ್ರಗತಿಯೊಗ ಅವರ ಯೌವನಪ್ರದಾಯಕ ಕಸಿಯಲ್ಲಿಗಿದೆಯೆನ್ನುತ್ತಿರುವರು.

ಹರಿಜನರ ವಿಜಯ.

ನಾಗಪುರದ [illegible] ಹರಿಜನರು [illegible] ಕೆರೆಗೆ ತೆರಳಿ, ಅಲ್ಲಿಯ ಪ್ರಸಿದ್ಧ ರಾಮದೇವಾಲಯದ ಬಳಿಯ ಕೆರೆಯಲ್ಲಿ ಸ್ನಾನಮಾಡಲು ಅಪ್ಪಣೆ ಕೊಡಬೇಕಾಗಿ ಪ್ರಾರ್ಥಿಸಲು, ಪೋಲೀಸರು ಅವರನ್ನು ತಡೆದು ನಿಲ್ಲಿಸಿದರು. ಮುಂದೆ, ಕೆರೆಯ ಅಧಿಕಾರಿಗಳೊಡನೆ ರಾಜಿ ಪ್ರಸ್ತಾಪಗಳು ನಡೆದು, ಕೆರೆಯ ಒಂದು ಪಾರ್ಶ್ವವನ್ನು ಹರಿಜನರ ಉಪಯೋಗಾರ್ಥ ಬಿಟ್ಟುಕೊಡುವುದೆಂದು ನಿರ್ಣಯವಾಯಿತು.

ಸಮುದ್ರಜನ ಕೋಲಾಹಲ.
ಜಪಾನಿನಲ್ಲಿ ಕೆಲಸಗಾರರ ಮರಣ.

ಜಪಾನ್ ದೇಶದ [illegible] ಎಂಬಲ್ಲಿ, [illegible] ಜನಸಂಗದ ಕಾರ್ಖಾನೆ ನಡೆಯುವಲ್ಲಿಗೆ ಸಮುದ್ರವು ಹಠಾತ್ತನೆ ಉಕ್ಕಿ ಬಂದು, ೫ ಜಪಾನೀ [illegible] ಮಂದಿ ಕೆಲಸಗಾರರು ಜಲಸಮಾಧಿ ಹೊಂದಿದರೆಂಬ ವಾರ್ತೆ ಬಂದಿದೆ.

ನೋಟೀಸು.
ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮಸಂಖ್ಯೆ 551/34.

ವಾದಿ—ದಾಸ ಶೇರಿಗಾರ.

ಪ್ರತಿವಾದಿಯು—ಶಂಕರಶೆಟ್ಟಿ ಕೂಡಾ 6 ಜನರು.

ಸದರಿ ದಾವೆಯ 1-2-3ನೇ ಪ್ರತಿವಾದಿರಾದ ಕುಂದಾಪುರ ತಾಲೂಕು ಬೈಂದೂರು ಗ್ರಾಮದ ಮಯ್ಯಾಡಿಯಲ್ಲಿರುವ ನಾರಾಯಣ ಶೆಟ್ಟಿ ಮಕ್ಕಳು 1ನೇ ಪ್ರತಿವಾದಿ ಶಂಕರ ಶೆಟ್ಟಿ, 2ನೇ ಪ್ರತಿವಾದಿ ರಾಮಶೆಟ್ಟಿ, 3ನೇ ಪ್ರತಿವಾದಿ ವಾಸುದೇವ ಶೆಟ್ಟಿ ವ ಇತರ ಮೂರು ಜನರು ಕೂಡಾ 6 ಜನರ ಮೇಲೆ ಮಾಡಿದ ಮೇಲ್ಕಂಡ ದಾವೆಯು ತಾ. 8—12—34ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿದೆ. ಆ ಕುರಿತು ಮೇಲ್ಕಾಣಿಸಿದ 1, 2, 3ನೇ ಪ್ರತಿವಾದಿಗಳು ಆಕ್ಷೇಪ ಇದ್ದ ಪಕ್ಷಕ್ಕೆ ಆ ತಾರೀಕಿನ ಬೆಳಗ್ಗೆ 11 ಗಂಟೆಗೆ ಹಾಜರಾಗಿ ಹೇಳತಕ್ಕದ್ದು. ಅದಕ್ಕೆ ತಪ್ಪಿದರೆ ಅವರ ವಿನಹ ನಂಬ್ರವನ್ನು ತೀರ್ಮಾನಿಸಲಾಗುವದು.

ಕುಂದಾಪುರ, 28-11-34. | K. Narayana Shenoi, Pleader, ವಾದಿ ಕಡೆ ವಕೀಲ.

ಅನುಕ್ರಮಣಿಕೆ.

ಕೂಚಾನ್ ಸಲ್ತನತ್ತು ಹುಜೂರರಾಗಿರುವ ಶಾಸನ ಸಭೆಗಳು ಕೈಕ್ಕೆ. ೧
ಅಗ್ರಲೇಖ
ಸರು-ಸುದ್ದಿ ೨
ಜೈಂಟ್ ಸಿಲೆಕ್ಟ್ ಕಮಿಟಿ ವರದಿಯು ಪ್ರಕಟಿತ ಗ್ರಂಥ ೫
ಪ್ರುಟಗಳಾರಗಳು ಸೋಟಿಗಳು ೯
ಜ್ಯೊಂಟ್ ಸಿಲೆಕ್ಟ್ ಕಮಿಟಿಯ ವರದಿ ೧೦
ವರ್ತಮಾನ ಸಂಗ್ರಹ ೧೧
ಇಂಗ್ಲಾಂಡು ಹಾಡುಗಳೊಳಗೆ ಒಪ್ಪಂದ ೧೨
ವಿವಿಧ ಸಮಾಚಾರಗಳು ೧೩
ಮಂಗಳೂರು ೧೧
ಬರ್ಲಿ (ಕೆಂಪೋರ್ನಿಯಾ)ದಲ್ಲಿ ಪ್ರಥಮಿಕ ಶಿಕ್ಷಣ. ೧೪

ಸ್ವದೇಶಾಭಿಮಾನಿ

ತಾ. ೩೦ನೇ ಶುಕ್ರವಾರ ನವಂಬರ '೩೪

ಜ್ಯೊಂಟ್ ಸಿಲೆಕ್ಟ್ ಕಮಿಟಿಯ ವರದಿ.

ಭಾರತವರ್ಷವು ಯಾವುದನ್ನು ಅವಿಶ್ವಾಸದಿಂದ ನಿರೀಕ್ಷಿಸುತ್ತಿತ್ತೋ—ಅದೀಗ ಬಂತು. ನೆನೆದುದೆಲ್ಲ ಸತ್ಯವಾಯಿತು. ಹಿಂದೂದೇಶವು ಇನ್ನನೇಕ ಕಾಲ, 'ಸ್ವರಾಜ್ಯ'ಕ್ಕಾಗಿ ಆಸೆಯಿಟ್ಟು ಕಾಯದಂತೆ ಜ್ಯೊಂಟ್ ಕಮಿಟಿ ವರದಿಯು ಯಾವ ಇಂಬನ್ನೂ ಒಳಗೊಂಡಿರದೆ, ಶ್ವೇತಪತ್ರದ ಶಿಫಾರಸುಗಳನ್ನೂ ವಿಕಾರವಾಗಿ ತಿದ್ದಿ, ನಮಗೊಂದು ದುರ್ದಾನವನ್ನು ತಂದಿದೆ.

ಯಾವ ಜನಾಂಗದವರೂ ರಾಜಕೀಯ ಸುಧಾರಣೆಗಳ ಪ್ರಸಾದಕ್ಕೆ ಕೈ ನೀಡುವಾಗ ಶಾಸನ ಮತ್ತು ಶಾಂತಿಪಾಲನೆ, ಸೈನ್ಯ ಮತ್ತು ಆರ್ಥಿಕ ಸ್ವಾತಂತ್ರ್ಯ ಇವುಗಳನ್ನು ಅಪೇಕ್ಷಿಸುತ್ತದೆ. ಈ ಮೂರು ಮುಖ್ಯ ಸ್ವಾತಂತ್ರ್ಯಗಳು ಪೂರ್ಣವಾಗಿ ದೊರೆಯದ 'ಅಧಿಕಾರ'ಗಳು ಹಾಸ್ಯಾಸ್ಪದವಾದುವು. ಕೇಂದ್ರದಲ್ಲಿ ಜವಾಬ್ದಾರಿ—'ಪ್ರಾಂತಿಕ ಸ್ವಾತಂತ್ರ್ಯ'ವೆಂಬ ಮರುಳಾಟದ ಮಾತುಗಳನ್ನು ಈ ವರದಿಯು ಲಿಖಿಸಿ ಅದರ ನೆರಳನ್ನು ಮಾತ್ರ ಮುಂದೆ ಇರಿಸಿದೆ.

ವರದಿಯಲ್ಲಿ ಒಡೆದು ಕಾಣುವ ವಿಷಯಗಳೇನು? ಕೆಲವೊಂದು ಪ್ರಾಂತ್ಯಗಳನ್ನು ಅಧಿಕವಾಗಿ ರಚಿಸಲಾಗುತ್ತದೆ. ಆಯಕ್ಯಂತ ವ್ಯಯವೇ ಅಧಿಕವಾಗಬಹುದೆಂಬುದನ್ನು ಒಪ್ಪುವುದಾದರೂ ವರದಿಯು ಸಿಂಧವನ್ನು ಬೊಂಬಾಯಿಯಿಂದ ಪ್ರತ್ಯೇಕಿಸುವ ಶಿಫಾರಸು ಮಾಡಿದೆ. ಮಂತ್ರಿಗಳ ಸಂಖ್ಯೆಯು ಹೆಚ್ಚಿಸಲ್ಪಟ್ಟು ಅವರ ಮೇಲೆ 'ಜವಾಬದಾರಿ'ಯನ್ನು ಹೊರಿಸುವುದಾದರೂ, ಅವರ ಮಂತ್ರಾಲೋಚನೆಯನ್ನು ಗವರ್ನರುಗಳು ಅಂಗೀಕರಿಸದೆ ಇರಬಹುದು. ಗವರ್ನರುಗಳಿಗೆ, ವಿಶೇಷ ಶಾಸನಗಳನ್ನು (ಒರ್ಡಿನೆನ್ಸು) ಮಾಡುವ ಅಧಿಕಾರವಿದೆ. ಗವರ್ನರುಗಳೇ ಮಂತ್ರಿಗಳನ್ನು ಚುನಾಯಿಸುವರು; ಕೆಲವೊಂದು ಪ್ರಾಂತಗಳಿಗೆ ಎರಡೆರಡು ಸಭೆಗಳ ಉದಾರದಾನ ಮಾಡಲಾಗಿದೆ; ಗವರ್ನರ್ ಜನರಲರು ಸೈನ್ಯದ ವಿಚಾರವನ್ನು 'ರಿಜರ್ವ್' ಆಗಿ ಇರಿಸಿಕೊಳ್ಳುವರು. ಸಿವಿಲ್ ನೌಕರರ ನಿವೃತ್ತಿವೇತನಗಳ ವಿಚಾರದಲ್ಲಿ ಕೇಂದ್ರ ಶಾಸನ ಸಭೆಯು ಯಾವ ತಿದ್ದುಪಡಿಯನ್ನೂ ಮಾಡದಂತೆಯೂ, ಸೈನ್ಯ, ನಾನಾ ಮೇಲು ಹುದ್ದೆಗಳಲ್ಲಿ ಕೈಹಾಕದಂತೆಯೂ ಎಚ್ಚರ ವಹಿಸಲಾಗಿದೆ.

ಮತದಾರರ ಸಂಖ್ಯೆಯನ್ನೇನೋ ಈ ವರದಿಯು ಹೆಚ್ಚಿಸುವಂತೆ ಶಿಫಾರಸು ಮಾಡಿರುವುದು. ಈಗ ಇರುವ ಮತದಾರರಲ್ಲಿ ಪುರುಷರ ಸಂಖ್ಯೆಯನ್ನು ೭,೦೦೦,೦೦೦ರಿಂದ ೨೯,೦೦೦,೦೦೦ಕ್ಕೂ ಸ್ತ್ರೀಯರ ಸಂಖ್ಯೆಯನ್ನು ೩೧೫,೦೦೦ರಿಂದ ೬,೦೦೦,೦೦೦ಕ್ಕೂ ಹೆಚ್ಚಿಸುವರು. ಹಿಂದೆ ಶೇಕಡಾ ೩ರಷ್ಟಿದ್ದ ಈ ಸಂಖ್ಯೆಯು ಈ ಹೊಸ ಸುಧಾರಣೆಯಿಂದ ೧೪ಕ್ಕೆ ಏರುವುದು. ಆದರೆ, ಈ ಮತದಾರರು ಚುನಾಯಿಸಿದ ಪ್ರತಿನಿಧಿಗಳು ಯಾವ ಬಗೆಯ ಅಧಿಕ ಸ್ವಾತಂತ್ರ್ಯವನ್ನು ಶಾಸನ ಸಭೆಗಳಲ್ಲಿ ಪಡೆಯರೆಂಬುದು ಮಾತ್ರ—ಅನ್ನವನ್ನು ಬಾಯಿಮುಂದೆ ಇರಿಸಿ, ಉಣಬಿಡದಂತೆ ಆಗಿದೆಯೆನ್ನಬೇಕು.

ಇನ್ನು 'ವಕ್ರಚುನಾವಣೆ'ಯ ವಿಚಾರ. ಕಳೆದ ಹನ್ನೆರಡು ವರ್ಷಗಳಿಂದಲೂ ಇದ್ದ ನೇರಾದ ಚುನಾವಣೆಯ ಪದ್ಧತಿಯು ಹಿಂದೂದೇಶದ ಶಾಸನ ಸಭೆಯ ಕಳೆಯನ್ನೇರಿಸಲು ಸಹಕಾರಿಯಾಯಿತೆಂಬುದನ್ನೊಪ್ಪುವ ಈ ಜ್ಯೊಂಟ್ ಸಮಿತಿಯು, ವಕ್ರಚುನಾವಣೆಯ ಪದ್ಧತಿಯನ್ನು ಶಿಫಾರಸು ಮಾಡುತ್ತ, ಮುಂದೆ ಇದು ಯಶಸ್ವಿಯಾಗದಿದ್ದರೆ ತ್ಯಜಿಸಲ್ಪಡುವಂತೆ ಸೂಚನೆ ಕೊಟ್ಟಿದೆ. ನೇರಾದ ಚುನಾವಣೆಗಳಿಂದಲೇ ತಂತಮ್ಮ ಕೊನ್ಸ್‌ಟಿಟ್ಯೂಯನ್ಸಿಗಳಲ್ಲಿನ ಜನಸಾಮಾನ್ಯದ ಹಾಳಹವಾಲೆಗಳನ್ನು ಶಾಸನ ಸಭೆಯ ಮುಂದೆ ಇಡದ-ತಮ್ಮ ಪ್ರಾಂತ್ಯವನ್ನೆ ತಾವು ಅರಿಯದ-ಸದಸ್ಯರು ಇರುವಾಗ, ಇನ್ನು ಮುಂದೆ ವಕ್ರಚುನಾವಣೆಗಳಿಂದ ಆರಿಸಿ ಬರುವ ಪ್ರತಿನಿಧಿಗಳು ಯಾವ ಬಗೆಯಿಂದ ಜನತೆಯ ಸಂಕಷ್ಟ ನಿವಾರಣೆಗೆ ದುಡಿವರೋ ತಿಳಿಯದಾಗಿದೆ.

ಅಖಿಲ ಭಾರತ ಸಮ್ಮಿಳಿತ ರಾಜ್ಯಭಾರ ಯೋಜನೆಯನ್ನು ಜ್ಯೊಂಟ್ ಸಮಿತಿಯು ಶಿಫಾರಸು ಮಾಡಿದೆ. ಅದಕ್ಕಾಗಿ ಕೆಲವೊಂದು ಶರ್ತಗಳನ್ನು ಮುಂದಿಟ್ಟಿದೆ. ಇದರಲ್ಲಿ ಸಂಸ್ಥಾನಗಳ ಮತ್ತು ಬ್ರಿಟಿಷ್ ಇಂಡಿಯದ ಪ್ರಾತಿನಿಧ್ಯ, ಆರ್ಥಿಕ ವಿಚಾರ, ಶಾಸನ ನಿರ್ಮಾಣದ ಅಧಿಕಾರ ಇವುಗಳೂ ಸಂಸ್ಥಾನಗಳ ಕೆಲವೊಂದು ವಿಶೇಷ ವಿಚಾರಗಳಲ್ಲಿ ಪ್ರಶ್ನೆ ಬರಲಾರದಂತಹ ತಣ್ಣಗಿನ ಶರ್ತಗಳೂ ಇಲ್ಲದಿಲ್ಲ. ಇವರೆಲ್ಲರ ಮೇಲೆ ಗವರ್ನರ ಜನರಲರ ವಿಶೇಷಾಧಿಕಾರವಿದ್ದೇ ಇರುವುದು.

ಇದನ್ನು 'ಸುಧಾರಣೆ'ಯೆನ್ನುವುದಾದರೆ ಸಾರ್ವಭೌಮ ಸರಕಾರದ ಅಧಿಕಾರಗಳನ್ನು ದ್ವಿಗುಣಿಸುವ ಸುಧಾರಣೆಯೆನ್ನಬಹುದು. ಗವರ್ನರುಗಳನ್ನೂ ಗವರ್ನರ್ ಜನರಲರನ್ನೂ 'ಸರ್ವಾಧಿಕಾರಿ'ಯೆನಿಸುವಷ್ಟು ಅಧಿಕಾರಗಳಿಂದ ಭೂಷಿಸಿ ಜನತೆಗೆ 'ಇದು ಪ್ರಾಂತಿಕ ಸ್ವಾತಂತ್ರ್ಯ'—'ಪೂರ್ಣ ಸ್ವಾತಂತ್ರ್ಯದ ಸೋಪಾನ'ವೆನ್ನುವುದರಲ್ಲಿ ಅರ್ಥವಿರದು. ಮಂತ್ರಿಗಳು ತಮ್ಮ ತಿಂಗಳ ಸಂಬಳವನ್ನು ಜೇಬಿನೊಳಗೆ ಸೇರಿಸಿಕೊಳ್ಳುವ, ಪ್ರತಿನಿಧಿಗಳು ನಿಸ್ಸಹಾಯವಾಗಿ ಕಣ್ಣು ಬಿಟ್ಟು ನೋಡುವ, ಗವರ್ನರುಗಳು ತಮ್ಮ ಅಧಿಕಾರಗಳನ್ನು ನಿರ್ಬಾಧಿತವಾಗಿ ಚಲಾಯಿಸುವ ಈ 'ಸ್ವಾತಂತ್ರ್ಯ'ವು ಯಾವ ಭಾರತೀಯನಿಗೆ ಒಪ್ಪುವುದೋ ತಿಳಿದಿಲ್ಲ. ಮಂದಪಕ್ಷೀಯರೂ ಇದರಿಂದ ಅತೃಪ್ತರಾಗಿರುವರು. ಜಾತೀಯ ನಿವಾಡ್ರ್ ಮತ್ತು ಸಿಂಧವಿಭಜನೆಯ ವಿಷಯದಲ್ಲಿ 'ರಿಯಾಯತಿ'ಯನ್ನು ತೋರಲ್ಪಟ್ಟಿರುವ ಮಹಮ್ಮದೀಯರೂ ಇದರಿಂದ ಆನಂದ ಪಡುವರು.

೧೯೧೯ನೇ ಆಕ್ಟಿನಲ್ಲಿ ಪಾರ್ಲಿಮೆಂಟು, ಆಶ್ವಾಸನಾ ರೂಪವಾಗಿ ಏನನ್ನು ನಮೂದಿಸಿತ್ತೋ ಅದೀಗ ಕುಚೇಷ್ಟೆಯ ರೂಪದಲ್ಲಿ ಕೊಡಲ್ಪಟ್ಟಿದೆಯೆನ್ನಬೇಕು. ಶಾಸನ ಸಭೆಯು ರಚಿಸಿದ ಒಂದು ಶಾಸನವನ್ನು ಗವರ್ನರುಗಳು 'ಪುನರಾಲೋಚಿಸಿರಿ' ಎನ್ನುತ್ತ ಹಿಂದಕ್ಕಟ್ಟುವ, ಅಥವಾ 'ತಿದ್ದುಬಿಡಿರಿ' ಎಂದು ವಿನಂತಿರೂಪವಾದ ಅಪ್ಪಣೆ ಮಾಡುವ ವಿಧದ ಪ್ರಾಂತಿಕ ಸ್ವಾತಂತ್ರ್ಯವಾಗಲಿ,—ಸೈನ್ಯ, ಅರ್ಥ ಮತ್ತು ನ್ಯಾಯ—ಶಾಂತಿಪಾಲನೆಯ ಪೂರ್ಣಾಧಿಕಾರಗಳಿಲ್ಲದ 'ಕೇಂದ್ರದ ಜವಾಬ್ದಾರಿ'ಯಾಗಲಿ ಹಿಂದೀಯರಿಗೆ ಬೇಕಾಗಿಲ್ಲವೆಂಬುದನ್ನು ಜನರು ಒಗ್ಗಟ್ಟಾಗಿ ಸರಕಾರಕ್ಕೆ ತಿಳಿಸದೆ ಇರಬಹುದೇ? ಶ್ವೇತಪತ್ರವು ಹಿಂದೀಯರಿಗೆ ಅವಮಾನ ಮಾಡಿತೆನ್ನುವ ಬಹುಜನಾಭಿಪ್ರಾಯವು ಇನ್ನಷ್ಟು ದೃಢವಾಗಿದ್ದೀತೆ? ಈ ಸುಧಾರಣೆಗಳನ್ನು, ಅನಪೇಕ್ಷಿತವಾಗಿ ಜನತೆಯ ಮೇಲೆ ಬಲಾತ್ಕರಿಸುವುದರಿಂದ ದೇಶಕ್ಕೆ ಶಾಂತಿ-ಸುಖಗಳು ಲಭಿಸವೆಂಬುದು ನಿಶ್ಚಯ!

ವಿದೇಶ ವರ್ತಮಾನ.

ಇಂಪೀರಿಯಲ್ ಕೆಮಿಕಲ್ಸ್ ಲಿಮಿಟೆಡ್, ಬ್ರಿಟನ್ ಇವರು ಪಂಜಾಬಿನ ಕಲ್ಲುಉಪ್ಪಿನ ಗಣಿಗಳಲ್ಲಿನ 'ಪಿಸ್ರಯೋಜಕ' ಧಾತುಗಳನ್ನು ಪ್ರಯೋಗಿಸುವುದಕ್ಕಾಗಿ ಪಂಜಾಬಿನಲ್ಲಿ ಒಂದು ಕಾರ್ಖಾನೆಯನ್ನು ತೆರೆಯುವುದಕ್ಕಾಗಿ ಪಂಜಾಬ್ ಸರಕಾರದೊಡನೆ ಲೈಸೆನ್ಸ್ ಕೇಳಿರುವರು. ಈ ಲೈಸನ್ಸನ್ನು ಪಂಜಾಬು ಸರಕಾರವು ಇಂಡಿಯಾ ಸರಕಾರದೊಡನೆ ವಿಚಾರಿಸಿಕೊಟ್ಟಿರುತ್ತದೆಂದೂ, ಕೊಟ್ಟಿದ್ದರೆ ದೇಶಹಿತ ದೃಷ್ಟಿಯಿಂದ ಈ ಲೈಸನ್ಸನ್ನು ರದ್ದುಗೊಳಿಸಬೇಕೆಂದೂ ಪ್ರಾರ್ಥಿಸಿ, ಲಾಹೋರಿನ ಇಂಡಿಯನ್ ಚೇಂಬರ್ ಒಫ್ ಕೊಮರ್ಸ್ ಇವರು ಇಂಡಿಯಾ ಸರಕಾರಕ್ಕೆ ಮನವಿಮಾಡಿಕೊಂಡಿರುವರು.

ನೌಕಾಪರಿಷತ್ತಿನ ಪಂಪದದಲ್ಲಿ ಆಶಾಜನಕ ಬದ್ಲಿಗಳೇನೂ ತೋರುವುದಿಲ್ಲ.

ಸಪ್ಟಂಬರ ತಿಂಗಳಿಗೆ ಅಂತ್ಯವಾಗುವ ಆರು ತಿಂಗಳುಗಳಲ್ಲಿ ಇಂಗ್ಲಾಂಡ್ ಮತ್ತು ವೇಲ್ಸ್‌ಗಳಲ್ಲಿ ಒಟ್ಟು ೧೫೩,೪೬೩ ಹೊಸ ಮನೆಗಳು ಕಟ್ಟಿಸಲಾಗಿವೆ. ೧೯೩೩ನೇ ಇದೇ ಆರು ತಿಂಗಳುಗಳಲ್ಲಿ ೧೧೩,೩೩೨ ಮನೆಗಳು ಮಾತ್ರ ಕಟ್ಟಿಸಲಾಗಿದ್ದುವು.

ಇಟೆಲಿಯಲ್ಲಿ ಮಜೂರರ ಸ್ಥಿತಿಗತಿಗಳ ಸುಧಾರಣಾರೂಪವಾದ ಅನೇಕ ಯೋಜನೆಗಳಾಗಿವೆ. ಅವರ ಕೆಲಸದ ಅವಧಿಯನ್ನು ಕಡಿಮೆ ಮಾಡಿ, ಚಿಕ್ಕ ಬಾಲಕರೂ ಸ್ತ್ರೀಯರೂ ಅತಿ ಕಡಿಮೆ ಸಂಖ್ಯೆಯಲ್ಲಿ (ಆರೋಗ್ಯ ದೃಷ್ಟಿಯಿಂದ) ನೇಮಿಸಲ್ಪಡುವಂತೆ ಸಲಹೆಗಳಿವೆ. ಕೆಲಸಗಾರರ ಕುಟುಂಬಗಳಿಗೆ ಅವಶ್ಯವಾಗಿ ಮಹಾ ನಿಧಿಯೊಂದು, ಕೆಲಸಗಾರರ ವಂತಿಗೆಯಿಂದಲೇ ಆರಂಭವಾಗಿದೆ.

ಜ್ಯೊಂಟ್ ಸಿಲೆಕ್ಟ್ ಕಮಿಟಿಯ ವರದಿ ವಿಷಯಕವಾದ ಅಭಿಪ್ರಾಯಗಳನ್ನು ವೈಸರಾಯರು ದಶಂಬರ ತಿಂಗಳಿನ ಮಧ್ಯದಲ್ಲಿ ಲಂಡನಿಗೆ ರವಾನಿಸಲಿರುವರು. ಹಿಂದೀಯರು ಯಾವುದನ್ನು ಸ್ವೀಕರಿಸಿರುವರು; ಯಾವುದನ್ನು ತಿರಸ್ಕರಿಸಿರುವರೆಂದು ವೈಸರಾಯರು ಲಂಡನಿಗೆ ಬರೆಯುವರು. ವರದಿಯಲ್ಲಿರುವ ಸುಧಾರಣೆಗಳನ್ನೆಲ್ಲ ಹಿಂದೂದೇಶದಲ್ಲಿ ಪ್ರಚಾರಗೊಳಿಸುವುದಕ್ಕಾಗಿ ಇಂಡಿಯಾ ಸರಕಾರವು ಕೂಡಲೇ ವ್ಯವಸ್ಥೆ ಮಾಡುವುದು.

ಜರ್ಮನಿಯಲ್ಲಿ ಕಮ್ಯೂನಿಸ್ಟ ಪಂಗಡದವರ ಹಾವಳಿ ಗುಪ್ತರೂಪವಾಗಿರುತ್ತದೆ. ಕ್ರೈಲ್ ಮತ್ತು ರ್ಹುರ್ ಜಿಲ್ಲೆಗಳಲ್ಲಿ ಕಮ್ಯೂನಿಸ್ಟರ ಮುಖಂಡರಾಗಿ ಮೆರೆದಿದ್ದ ಮೂವರನ್ನು ಸರಕಾರವು ಬಂಧಿಸಿ ಶಿಕ್ಷೆಗೊಳಪಡಿಸಿರುತ್ತದೆ.

ಬಡವರಿಗೆ ಧರ್ಮಾರ್ಥವಾಗಿ ಉಪ್ಪು! ಗಾಂಧಿ-ಇರ್ವಿನ್ ಸಂಧಿಯಿಂದ ಫಲಿಸಿದ ರಿಯಾಯತಿ.

ಗಾಂಧಿ ಇರ್ವಿನ್ ಸಂಧಿಯಲ್ಲಿ, ಬಡವರು ನಿರ್ದಿಷ್ಟ ಪ್ರದೇಶಗಳಿಂದ ತಮ್ಮ ಸ್ವಪ್ರಯೋಜನಕ್ಕಾಗಿ ಉಪ್ಪನ್ನು ಧರ್ಮಾರ್ಥವಾಗಿ ಒಯ್ಯಬಹುದೆಂಬ ಒಪ್ಪಂದವಾಗಿತ್ತು. ಈ ಉಪ್ಪು ವ್ಯಾಪಾರದ ಉದ್ದೇಶದಿಂದ ಒಯ್ಯಲ್ಪಡಬಾರದು. ಈ ವಿಚಾರದಲ್ಲಿ ಮಹಾತ್ಮಾಜಿಯವರು ಇತ್ತೀಚೆಗೆ ಹೊರಡಿಸಿದೊಂದು ಪ್ರಕಟನೆಯು ಹೀಗೆ ತಿಳಿಸುತ್ತದೆ:—"ಅನೇಕರು ಈ ರಿಯಾಯತಿಯ ಸದುಪಯೋಗ ಮಾಡಿಕೊಳ್ಳದಾದರು. ತಮ್ಮ ಮುಂದೆ ಉಪ್ಪಿನ ರಾಶಿಯಿದ್ದರೂ ಜನರು ಅದನ್ನು ಮುಟ್ಟಲಾರರು. ಮಂಗಳೂರಿನ ಮೊಗವೀರರು ಈ ವಿಷಯವನ್ನು ನನ್ನ ಗಮನಕ್ಕೆ ತಂದರು. ನಾನು ಕೂಡಲೇ ಆ ವಿಚಾರವಾಗಿ ಸರ್ ಜೋರ್ಜ್ ಶೂಸ್ಟರರೊಡನೆ ಪತ್ರವ್ಯವಹಾರ ಬೆಳೆಸಿದೆ. ಅಗ್ನ ಆ ಶರ್ತವಿನ್ನೂ ಜ್ಯಾರಿಯಲ್ಲಿದೆಯೆಂಬ ಉತ್ತರ ಬಂದುದನ್ನೋದಿ- ಆನಂದಿತನಾದೆ. ಉಪ್ಪಿನ ಆಗರಗಳಿರುವಲ್ಲಿ, ಬಡವರು ತಾವೇ ಆಗರಗಳನ್ನು ಕಟ್ಟಿ, ಉಪ್ಪನ್ನು ಮಾಡಿ, ತಮ್ಮ ಸ್ವಪ್ರಯೋಜನಕ್ಕೆ ತೆಗೆಯಬಹುದು; ಮತ್ತು ಆ ಹಳ್ಳಿಯವರಿಗೆ ಮಾತ್ರ ಮಾರಾಟ ಮಾಡಬಹುದು. (ಸ್ವಪ್ರಯೋಜನವೆಂದರೆ—ಗೊಬ್ಬರಕ್ಕಾಗಿಯೂ ದನಕರುಗಳ ಬಗ್ಗೆಯೂ ಮೀನು ಒಣಗಿಸಲೂ ಉಪಯೋಗಿಸಬಹುದಾಗಿದೆ) ಉಪ್ಪನ್ನು ಗಾಡಿಗಳಲ್ಲಿ ಹೇರಿ ಕೊಂಡೊಯ್ಯಬಾರದು; ಒಂದು ಹಳ್ಳಿಗೆ ಬೇಕಾದುದಕ್ಕಿಂತ ಹೆಚ್ಚು ಉಪ್ಪನ್ನು ತಯಾರಿಸಿದವರಿಗೆ— ಈ ನಿಬಂಧನೆಗಳನ್ನುಲ್ಲಂಘಿಸಿದವರಿಗೆ ಆ ರಿಯಾಯತಿಯು ನಿಲ್ಲಿಸಲ್ಪಡುವುದು.

ಸ್ವದೇಶ ವರ್ತಮಾನ!

ಆಸ್ಸಾಂ ಪ್ರಾಂತ್ಯದ ಶಿಲ್ಲಾಂಗ್ ಎಂಬಲ್ಲಿ, ಅಲ್ಲಿಯ ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲೀಸ್‌ರಾದ ಮಿ. ಟಿ. ಒ. ಕಲ್ಲಗನ್‌ರವರು, ರಾತ್ರಿ ಸಮಯ ಮೋಟಾರಿನಲ್ಲಿ ಸಂಚರಿಸುತ್ತಿರುವಾಗ ಯಾರೋ ಪುಂಡರು ಅವರಿಗೆ ಕಲ್ಲೆಸೆದರೆಂದೂ ಅವರು ಗಾಯಗೊಂಡಿರುವರೆಂದೂ ತಿಳಿದುಬಂದಿದೆ.

ಕೃಷ್ಣಾದ ಕೊಲಹಾನ್ ಎಂಬ ಹಳ್ಳಿಯಲ್ಲಿ ಒಬ್ಬ ಮುಸ್ಲಿಮನು ತನ್ನ ತಂಗಿಯನ್ನೂ ಒಬ್ಬ ಯುವಕನನ್ನೂ ಕೊಂದಿಕ್ಕಿರುವನು. ಪೋಲೀಸರು ಅವನನ್ನು ಸೆರೆ ಹಿಡಿಯಲಾಗಿ ತಪ್ಪನ್ನು ಒಪ್ಪಿಕೊಂಡಿರುವನು.

ಆರೋಗ್ಯ ಸಪ್ತಾಹವನ್ನು ಅತ್ಯಂತ ಆಕರ್ಷಣೀಯವಾಗಿಯೂ ಮನೋರಂಜಕವಾಗಿಯೂ ಪ್ರದರ್ಶಿಸಿದುದಕ್ಕೆ ದಿಂಡಿಗಲ್ ಮುನಿಸಿಪಾಲಿಟಿಗೆ ಪ್ರಸಿದ್ಧ ರೋಟೇಟಿಂಗ್ ಶೀಲ್ಡ್ ಬಹುಮಾನವಾಗಿ ದೊರಕಿರುತ್ತದೆ.

ನಿಜಾಮು ಸರಕಾರವು ನಿಜಾಮು ನಗರದಲ್ಲಿ ಹೈದರಾಬಾದಿಗಾಗಿ ಒಂದು ಸಕ್ಕರೆ ಕಾರ್ಖಾನೆಯನ್ನು ೨೫ ಲಕ್ಷ ರೂಪಾಯಿಗಳ ವೆಚ್ಚವನ್ನಿಟ್ಟು ರಚಿಸಲಿದೆ.

ಜಮ್ಮಲಮಡಗು ತಾಲೂಕಿನಲ್ಲಿ ರಾಮರೆಡ್ಡಿಯೆಂಬವನ ಕೊಲೆಮಾಡಿ ಅವನ ಸಹಾಯಕ್ಕಾಗಿ ಬಂದ ಅವನ ಸಹೋದರಿಯನ್ನು ಘಾಯಗೊಳಿಸಿದ ೬ ಮಂದಿಯನ್ನು ಸೆರೆಹಿಡಿದಿರುವರು.

ನ್ಯಾಯವಿಧಾಯಕ ಸಭೆಗೆ ಪುನಃ ಚುನಾಯಿತರಾದ ಸೇಟ್ ಹಾಜಿ ಅಬ್ದುಲ್ ಹಾರೂನರವರನ್ನು ಸರಕಾರವು ರಿಜರ್ವೇಶನ ಡೈರೆಕ್ಟರನ್ನಾಗಿ ಚುನಾಯಿಸಿದರೂ ಹಾರೂನರು ಅದಕ್ಕೊಪ್ಪದೆ ತಾನು ನ್ಯಾಯವಿಧಾಯಕ ಸಭೆಯಲ್ಲೇ ಇರುವೆನೆಂದು ತಿಳಿಸಿರುವರು.

ಇದೇ ತಾ. ೨೬ರಿಂದ ನೊದಲುಗೊಂಡು ದಶಂಬರ ತಾ. ೧ರ ವರೆಗೆ ಕಲ್ಕತ್ತದಲ್ಲಿ ಇಂಡಿಯನ್ ರಿಸರ್ಚ್ ಫಂಡ್ ಎಸೋಸಿಯೇಶನಿನ ವೈದ್ಯಜ್ಞರ ಪರಿಷತ್ತು ಜರಗಲಿದೆ.

ಮೈಸೂರು ಸಂಸ್ಥಾನದ ಬಾಳೆಹೊನ್ನೂರಿನಲ್ಲಿ ಮೈಸೂರು ಸರಕಾರದ ಪ್ರೋತ್ಸಾಹದಿಂದ ಕಳೆದ ಮೂರು ವರ್ಷಗಳ ಹಿಂದೆ ಕೋಫಿ ಎಕ್ಸ್‌ಪರಿಮೆಂಟಲ್ ಸ್ಟೇಶನ್ ಒಂದು ಸ್ಥಾಪಿಸಲ್ಪಟ್ಟಿದ್ದು, ಕಾಫಿಬೆಳೆಯ ಸುಧಾರಣೆಯಲ್ಲಿ ಯಶಸ್ಸುಗೊಂಡಿದೆಯೆಂದು ತಿಳಿದುಬಂದಿದೆ. ಇದೇ ಪ್ರಯೋಗವು ಸಂಘಟಿತವಾಗಿ ಮುಂದೊತ್ತಲ್ಪಟ್ಟರೆ ಕಾಫಿ ವ್ಯಾಪಾರವು ವೃದ್ಧಿಹೊಂದುವುದರಲ್ಲಿ ಸಂದೇಹವಿಲ್ಲವೆಂದೂ ಗೊತ್ತಾಗಿದೆ.

ಕೊಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಅಧ್ಯಕ್ಷರಾದ ಡಾ। ಅನ್ಸಾರಿಯವರು. "ರೌಂಡ್‌ಟೇಬಲ್ ಪರಿಷತ್ತಿನ ಬಂಟರೂ ಜಾತೀಯ ಬಂಟರೂ ಈ ಚುನಾವಣೆಗಳಲ್ಲೆಲ್ಲಿರುವರು?" ಎಂದು ಇವರ ಪ್ರಶ್ನೆ.

ಚುನಾವಣೆಯ ವಾರ್ತೆಗಳು.

ಮುಂಬಾಯಿ:— ಈ ನಗರದ ಸಿರವಾಗಿರುವ ಎರಡು ಸ್ಥಾನಗಳಿಗೆ ನಾಲ್ವರು ಉಮೇದ್ವಾರರು. ಅವರಿಗೆ ದೊರೆತ ವೋಟುಗಳ ಸಂಖ್ಯೆ ಈ ಕೆಳಗಿನಂತಿದೆ—
ಡಾ। ದೇಶಮುಖ (ಕೊಂಗ್ರೆಸ್) . . . ೧೯,೮೭೨;
ಸರ್ ಕವಾಸ್ಜಿ ಜಹಾಂಗೀರ್ ೧೫,೧೪೦;
ಶ್ರೀ। ಕೆ. ಎಮ್. ಮುನಶಿ (ಕೊಂಗ್ರೆಸ್) ೧೬,೦೧೫;
ಜಮ್ನಾದಾಸ್ ಮೆಹತಾ ೫೬೨೬;
ಮೊದಲನೆಯವರಿಬ್ಬರೂ ಚುನಾವಣೆ ಹೊಂದಿದರು.

ಗುಜರಾತ್:— ಶ್ರೀ। ಭುಲಾಭಾಯಿದೇಸಾಯಿಯವರು, ತಮ್ಮ ಪ್ರತಿಸ್ಪರ್ಧಿಯನ್ನು ಅನೇಕ ಸಾವಿರ ವೋಟುಗಳಿಂದ ಸೋಲಿಸಿ ಜಯಹೊಂದಿದರು. ಇವರ ಪ್ರತಿಸ್ಪರ್ಧಿಗಳ ಠೇವಣಾತಿ ಹಣವೂ ಮುಟ್ಟುಗೋಲಾಯಿತು.

ಕರ್ನಾಟಕ:— ರಾವ್ ಬಹದೂರ್ ಪಾಟೀಲರವರನ್ನು ಸುಮಾರು ೧೦ ಸಾವಿರ ವೋಟುಗಳಿಂದ ಸೋಲಿಸಿ ಕೊಂಗ್ರೆಸ್ ಉಮೇದ್ವಾರರಾದ ಶ್ರೀ। ಜೋಶಿ ಮುನಿಯವರು ಚುನಾಯಿತರಾದರು.

ಪೂನಾ:— ಕೊಂಗ್ರೆಸ್ ಉಮೇದ್ವಾರರು ಇಬ್ಬರು ಶ್ರೀ। ಕೇಶವರಾವ್ ಎಮ್. ಜೋಗ್ ಮತ್ತು ಎನ್. ವಿ. ಜಹಗೀರ್, ಇಬ್ಬರೂ ಚುನಾವಣೆ ಹೊಂದಿರುವರು.

ಮಂಗಳೂರು.

ದಕ್ಷಿಣ ಕನ್ನಡ, ಮಲಬಾರು ಮತ್ತು ನೀಲಗಿರಿ ಜಿಲ್ಲೆಗಳ ಪರವಾಗಿ ಎಸೆಂಬ್ಲಿ ಚುನಾವಣೆಗೆ ಕೊಂಗ್ರೆಸ್ ಉಮೇದ್ವಾರರಾಗಿ ನಿಂತು ಚುನಾವಣೆ ಹೊಂದಿದ ಶ್ರೀ ಸಾಮುವೇಲ್ ಆರೂನರವರು ಸಪತ್ನೀಕರಾಗಿ, ಇದೇ ಕಳೆದ ತಾ. ೩೦ನೇ ಶನಿವಾರ ಬೆಳಗ್ಗೆ ೬.೩೦ಕ್ಕೆ ರೈಲುಬಂಡಿಯಲ್ಲಿ ಇಲ್ಲಿಗೆ ದಯಮಾಡಿಸಿದ್ದರು. ಇಲ್ಲಿಯ ಕೊಂಗ್ರೆಸ್ ಕೆಲಸಗಾರರು ಅವರನ್ನು ರೈಲ್ವೆ ಸ್ಟೇಶನಿನಲ್ಲಿ ಸ್ವಾಗತಿಸಿದರು. ಅಂದು ಶ್ರೀ ಕಾರ್ನಾಡು ಸದಾಶಿವರಾಯರಲ್ಲಿ ಆತಿಥ್ಯವಾಯಿತು. ಶ್ರೀ ಎ. ಬಿ. ಶೆಟ್ಟರಲ್ಲಿ ನಡೆದ ಟೀಪಾರ್ಟಿ ಸತ್ಕಾರಕ್ಕೂ ದಯಮಾಡಿಸಿದ್ದರು. ಸಾಯಂಕಾಲ ಸಾರ್ವಜನಿಕ ಮೈದಾನಿನಲ್ಲಿ ಸಭೆಯು ಏರ್ಪಡಿಸಲ್ಪಟ್ಟಿತು. ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಆರೂನರು ತನ್ನನ್ನು ಚುನಾಯಿಸಲು ಬೆಂಬಲವಿತ್ತ ಕೆಲಸಗಾರರಿಗೂ ಮತದಾರರಿಗೂ ವಂದನೆಗಳನ್ನು ಸಮರ್ಪಿಸಿ, ಕೊಂಗ್ರೆಸ್ಸಿನ ಧೋರಣೆಗೆ ವ್ಯತಿರಿಕ್ತವಾಗದಂತೆ ತಾನು ನಡೆದುಕೊಳ್ಳುವೆನೆಂಬ ಆಶ್ವಾಸನೆಯಿತ್ತು ಭಾಷಣ ಮಾಡಿದರು. ಶ್ರೀ ಆರೂನರ ಧರ್ಮಪತ್ನಿಯವರೂ, ತನ್ನ ಪತಿಯ ದೇಶಸೇವಾ ಕಾರ್ಯದಲ್ಲಿ ತಾನೂ ಯಥಾಶಕ್ತಿ ಸಹಕರಿಸುವುದಾಗಿ ಹೇಳಿ ಕೆಲವು ಮಾತುಗಳನ್ನಾಡಿದ ನಂತರ, ದೇಶಭಕ್ತ ಕಾರ್ನಾಡು ಸದಾಶಿವರಾವ್ ಮೊದಲಾದವರ ಭಾಷಣಗಳಾಗಿ ವಂದೇ ಮಾತರಂ ಗೀತದೊಂದಿಗೆ ಸಭೆಯು ಕೊನೆಗೊಂಡಿತು. ಶ್ರೀ ಆರೂನರವರು ಮರುದಿನ ಕಣ್ಣಾನೂರಿಗೆ ಹೊರಟು ಹೋಗಿರುವರು. ಬರುವ ವಾರ ಪುನಃ ಮಂಗಳೂರಿಗೆ ಬರಲಿರುವರೆಂದು ತಿಳಿದು ಬರುತ್ತದೆ.

"ಲಾಟಿ ಮತ್ತು ಲೇಜಿಂ" ಶಿಬಿರದವರು ಲಾಠೀ-ಲೇಜಿಂಗಳ ಒಂದು ವಿನೋದ ಪ್ರದರ್ಶನವನ್ನು ಇದೇ ಕಳೆದ ತಾ. ೨೬ನೇ ಸೋಮವಾರ ಅಪರಾಹ್ನ ಘಂಟೆ ೫ಕ್ಕೆ ಗಣಪತಿ ಹೈ ಸ್ಕೂಲಿನಲ್ಲಿ, ಗವರ್ನಮೆಂಟ್ ಕೊಲೇಜಿನ ಪ್ರಿನ್ಸಿಪಾಲರಾದ ಶ್ರೀ ಜಿ. ಕೆ. ಚೆಟ್ಟೂರ್, ಎಮ್. ಎ. (ಒಕ್ಸನ್) ಇವರ ಅಧ್ಯಕ್ಷತೆಯಲ್ಲಿ ನಡೆಸಿದರು. ಅಧ್ಯಕ್ಷರ ಚುನಾವಣೆ, ಶಿಬಿರದ ಕಾರ್ಯಕಲಾಪಗಳ ವರದಿ, ವಿನೋದ ಪ್ರದರ್ಶನ, ಶಿಕ್ಷಾರ್ಥಿ ಪತ್ರಗಳ ಪ್ರದಾನ, ಅಧ್ಯಕ್ಷರ ಭಾಷಣ ಇತ್ಯಾದಿ ಕಾರ್ಯಕ್ರಮಗಳು ಯಥಾವತ್ತಾಗಿ ಜರಗಿ ಮುಗಿದುವು.

"ಶ್ರೀ ಕೃಷ್ಣ ಸಿನೆಮಾದಲ್ಲಿ ಮೆಟ್ರೋ ಗೋಲ್ಡ್‌ವಿನ್ ಮೇಯರ್ಸ್‌ರವರ "ಟಾರ್ಜನ್ ದಿ ಏಪ್‌ಮೇನ್" ಎಂಬ ಪ್ರಸಿದ್ಧ ಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಇದಾದ ನಂತರ ಮಾಸ್ಟರ್ ವಿಠ್ಠಲ್ ಮತ್ತು ಮಿಸ್. ಜುಬೇದ, ಇವರ ಅಭಿನಯವಿರುವ "ನಂದ-ಕೇ-ಲಾಲಾ ಅಥವಾ ರಾಧಾ ಮೋಹನ್" ಎಂಬ ಚಿತ್ರವು ಪ್ರದರ್ಶಿಸಲ್ಪಡುವುದೆಂದು ಅಧಿಕಾರಿಗಳು ತಿಳಿಸುತ್ತಾರೆ.

ಶಾಲೆಗಳೊಳಗಣ ಪಂದ್ಯಾಟಗಳು ಇದೇ ಕಳೆದ ಸೋಮವಾರ-ಮಂಗಳವಾರ, ಇವೆರಡು ದಿನಗಳಲ್ಲಿ ನಡೆದು, ಮೂರನೆ ವರ್ಷಕ್ಕೆ ಕ್ರಮಾನುಗತವಾಗಿ ಗೆದ್ದ ಕೆನರಾ ಹೈ ಸ್ಕೂಲಿನ "ಜೂನಿಯರ್ಸ್"ಗಳೂ ಸೈಂಟ್ ಎಲೋಶಿಯಸ್ ಕೋಲೇಜಿನ "ಸೀನಿಯರ್ಸ್"ಗಳೂ ಬಹುಮಾನದ 'ಕಪ್ಪ'ನ್ನು ಪಡೆದರು. ಓಪನ್ ಕ್ಲಾಸ್" ಎಂಬ ಪ್ರತ್ಯೇಕ ಟೀಮುಗಳೊಳಗಣ ಪಂದ್ಯಾಟವೂ ಈ ವರ್ಷ ಪ್ರಾರಂಭವಾಗಿದ್ದು, ಇದರಲ್ಲಿ ಸೈಂಟ್ ಎಲೋಶಿಯಸ್ ಕೊಲೇಜಿನವರು ಜಯಶೀಲರಾಗಿದ್ದರು.

ಸ್ಥಳೀಯ ಬ್ರಹ್ಮ ಯುವಕ ಸಂಘದವರ ಆಶ್ರಯದಲ್ಲಿ ನಾಳೆ ಸಾಯಂಕಾಲ ಘಂಟೆ ೬ಕ್ಕೆ ಡೊಂಗರಕೇರಿಯ ಬ್ರಹ್ಮಸಮಾಜ ಮಂದಿರದಲ್ಲಿ, ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರರಾದ ಶ್ರೀ ಆರ್. ವೆಂಕಟಯ್ಯಂಗಾರ್, ಬಿ. ಎ. ಎಲ್. ಟಿ.ಯವರು "ಉಪಾಧ್ಯಾಯರು, ಪತ್ರಿಕೆ ಮತ್ತು ದಯಾಳುಬಾಗದ ಚಟುವಟಿಕೆಗಳು" ಎಂಬ ವಿಷಯವನ್ನೆತ್ತಿ ಭಾಷಣ ಮಾಡುವರು. ಸರ್ವರಿಗೂ ಸುಸ್ವಾಗತವಿದೆ.

"ಪಲ್ಲಿಕುನ್ನು ವೈಟ್ ಲಿಫ್ಟಿಂಗ್ ಕ್ಲಬ್, ಪಲ್ಲಿಕುನ್ನು" ಇದರ ಸಹಾಯಾರ್ಥವಾಗಿ, ಇಲ್ಲಿಯ ಹಿಂದುಸ್ಥಾನ ಸಿನೆಮಾದಲ್ಲಿ, ಇದೇ ಬರುವ ತಾ. ೨ನೇ ರವಿವಾರ ಸಾಯಂಕಾಲ ಘಂಟೆ ೫ಕ್ಕೆ ಶ್ರೀ ಎಮ್. ಭರತನ್, ಎ. ಕುಂಞಿಕಣ್ಣನ್ ಮತ್ತು ರಾಮಚಂದ್ರನ್ ಇವರ ನಾನಾ ಕಸರತ್ತುಗಳೂ, ಯೋಗಾಸನ, ಜಟ್ಟಿ ಕಾಳಗ ಇತ್ಯಾದಿ ಪ್ರದರ್ಶನಗಳೂ ಜರಗಲಿವೆ.

ನಂಬ್ರ ೨೪೬೬ನೇ ಮಂಗಳೂರು ಕೋ-ಒಪರೇಟಿವ್ ಟೌನ್ ಬೇಂಕ್, ಲಿಮಿಟೆಡ್, ಇದರ ವರ್ಷಾವಧಿ ಮಹಾಸಭೆಯು ಇದೇ ಕಳೆದ ತಾ. ೨೫ನೇ ರವಿವಾರ ಅಪರಾಹ್ನ ಘಂಟೆ ೪.೩೦ಕ್ಕೆ ಜರಗಿತು. ಕಳೆದ ವರ್ಷದ ವರದಿಯು ಓದಲ್ಪಟ್ಟು ಮಂಜೂರಾದ ನಂತರ ನೇಕಡಾ ೭॥ರಂತೆ ಡಿವಿಡೆಂಡನ್ನು ಹಂಚುವುದಾಗಿ ಸರ್ವಸಮ್ಮತಿಯಿಂದ ನಿಶ್ಚೈಸಲಾಯಿತು. ಸಾರ್ವಜನಿಕೋಪಯೋಗ ನಿಧಿಯಿಂದ ಬಿಹಾರ್ ನಿಧಿಗೆ ಸಹಾಯಧನವಾಗಿ ಸಂದರೂ. ೫ನ್ನೂ ಕೆಲವು ವಿದ್ಯಾರ್ಥಿಗಳಿಗೆ ಸಹಾಯಧನವನ್ನೂ ಮಂಜೂರು ಮಾಡಲಾದ ನಂತರ ಕೆಲವೊಂದು ಕಾರ್ಯಕ್ರಮಗಳು ನಡೆದು, ಫಲಾಹಾರದ ನಂತರ ಮುಂದಿನ ವರ್ಷದ ಡೈರೆಕ್ಟರರ ಚುನಾವಣೆ ನಡೆಯಿತು.

ತಾ. ೨೪-೧೧-೧೯೩೪ಕ್ಕೆ ಅಂತ್ಯವಾಗುವ ಒಂದು ವಾರದ ಮಂಗಳೂರು ನಗರದ ಆರೋಗ್ಯದ ವರದಿ:— ಮರಣಗಳು ೨೬; ಜನನಗಳು ೫೮. ಮರಣಗಳ ಪೈಕಿ ವಿಷಮಜ್ವರ ೧, ಕ್ಷಯ ೫, ಇತರ ಶ್ವಾಸಕೋಶ ಸಂಬಂಧ ವ್ಯಾಧಿಗಳು ೨, ಆಮಶಂಕೆ ೧, ಶಿಶುಜನನ ೧, ಆತ್ಮಹತ್ಯೆ ೧, ಅಪಘಾತ ೧, ಮತ್ತು ಇತರ ಕಾರಣಗಳಿಂದ ೧೪. (ಇವುಗಳಲ್ಲಿ ಒಂದು ವಯಸ್ಸಿನೊಳಗಣ ಶಿಶುಮರಣಗಳು ೪) ವರದಿಯ ವಾರದಲ್ಲಿ ಸಿಡುಬಿನ ಮರಣಗಳೂ ಇಲ್ಲ, ಆಕ್ರಮಣಗಳೂ ಇಲ್ಲ.

ಸ್ಥಳೀಯ ಗವರ್ನಮೆಂಟ್ ಕೊಲೇಜಿನ ವರ್ಧಂತ್ಯುತ್ಸವವು ಇದೇ ಕಳೆದ ರವಿವಾರ ಸಾಯಂಕಾಲ ಘಂಟೆ ೫ಕ್ಕೆ ಮದನಪಲ್ಲಿಯ ಥಿಯೋಸೊಫಿಕಲ್ ಕೊಲೇಜಿನ ಪ್ರಿನ್ಸಿಪಾಲರಾದ ಡಾ। ಜೇಮ್ಸ್ ಎಚ್. ಕಝಿನ್ಸ್‌ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಕೊಲೇಜಿನ ಹಳೇ ಹೊಸ ವಿದ್ಯಾರ್ಥಿಗಳೂ, ಮಂಗಳೂರಿನ ಪುರಪ್ರಮುಖರೂ, ಉದ್ಯೋಗಾಧಿಕಾರಿಗಳೂ ಬಂದು ನೆರೆದಿದ್ದರು. ಕಾರ್ಯಕ್ರಮದಂತೆ ಬೆಳಗ್ಗೆ ಫಲಾಹಾರ, ಪಂದ್ಯಾಟ, ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚುವಿಕೆ, ಇತ್ಯಾದಿಗಳು ನಡೆದುವು. ಸಾಯಂಕಾಲ ಸಭೆ ನೆರೆದು, ಶ್ರೀ ಎಮ್. ನರಸಿಂಗರಾವ್, ಬಿ. ಎ., ಎಮ್. ಎಲ್. (ನಿವೃತ್ತ ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜ್) ಇವರಿಂದ ಕೊಲೇಜಿನ ಸ್ವಸ್ತಿವಾಚನವೂ ಅ ನಂತರ ಕೊಲೇಜ್ ಪ್ರಿನ್ಸಿಪಾಲರಿಂದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣ, ಅಧ್ಯಕ್ಷರ ಭಾಷಣ ಇವುಗಳು ಜರಗಿ, ಗಾನ, ನರ್ತನ, ಪ್ರಹಸನಾದಿ ವಿನೋದಗಳು ನಡೆದು ಅಂದಿನ ಸಮಾರಂಭವು ಮುಕ್ತಾಯಗೊಂಡಿತು.

"ರಾಷ್ಟ್ರಬಂಧು" ಹೊಸ ಮುದ್ರಾಲಯದ ಪ್ರಾರಂಭೋತ್ಸವವು. ಕದಿರೆ ರಸ್ತೆಯಲ್ಲಿರುವ 'ರಾಷ್ಟ್ರಬಂಧು' ಕಟ್ಟೋಣದಲ್ಲಿ, ನೆರ್ಮ್ಲ ಮುನಿಸಿಪಲ್ ಚೆಯರ್ಮ್ಯಾನರಾದ ಡಾ। ವಿಟ್ಠಲ ಶೆಟ್ಟರವರಿಂದ ಕಳೆದ ರವಿವಾರ ಅಪರಾಹ್ನ ೪.೩೦ಕ್ಕೆ ಜರಗಿತು. ರಾವ್ ಬಹದ್ದೂರ್ ಬಂಟ್ವಾಳ ವೆಂಕಟರಾಯರವರು ಅಧ್ಯಕ್ಷರಾಗಿದ್ದರು. ಆಮಂತ್ರಿತರಾದವರಿಗೆ ಫಲಾಹಾರ ಸತ್ಕಾರವಾದ ನಂತರ "ರಾಷ್ಟ್ರಬಂಧು"ವಿನ ಪ್ರೊಪ್ರೈಟರರಾದ ಡಾ। ಯು. ರಾಮರಾಯರೂ, ಸಂಪಾದಕರಾದ ಶ್ರೀ ಕಡೆಂಗೋಡ್ಲು ಶಂಕರಭಟ್ಟ, ವಿದ್ವಾನ್, ಇವರೂ, ಶ್ರೀ ಕೆ. ಆರ್. ಕಾರಂತರವರೂ ಸಮಯೋಚಿತವಾದ ಭಾಷಣಗಳನ್ನು ಮಾಡಿದರು.

ಉತ್ತರ ಕನ್ನಡ ಜಿಲ್ಲಾ ಕಾರವಾರ ತಾಲೂಕು ಸುಂಕೇರಿ ಗ್ರಾಮಸ್ಥರೂ ಸಕಲ ಶಾಸ್ತ್ರ ಪಾರಂಗತರೂ ಷಟ್ಕರ್ಮನಿರತರೂ ಆಗಿರುವ ಶ್ರೀಮಾನ್ ವೇದಮೂರ್ತಿ ರಘುವೀರ ವ್ಯಾಸರಾಯಾಚಾರ್ಯರವರಿಗೆ ಮಂಗಳೂರು ಪೇಟೆಯ ಶ್ರೀ ವೆಂಕಟರಮಣ ದೇವಸ್ಥಾನದ ಭಜಕರಾಗಿರುವ ಗೌಡಸಾರಸ್ವತ ಬ್ರಾಹ್ಮಣ ವೃಂದದ ವೈದಿಕ ಮತ್ತು ಲೌಕಿಕ ಸಮಸ್ತರು ಇದೇ ತಾ. ೨೩-೧೧-೩೪ನೇ ದಿನ ಅಭಿವಂದನೆಗಳನ್ನರ್ಪಿಸಿ, ಅವರು ನಾಲ್ಕೈದು ತಿಂಗಳುಗಳಿಂದ ಸದ್ರಿ ದೇವಸ್ಥಾನದಲ್ಲಿ ಶ್ರೀಮದ್ಭಾಗವತ ಪುರಾಣಗಳನ್ನೋದಿದುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ ರೂ. ೮೦೦ರ ಥೈಲಿಯನ್ನೂ ಬಹು ಮಾನವಸ್ತ್ರಗಳನ್ನೂ ಅವರಿಗೆ ಅರ್ಪಿಸಿರುವರು.

ಸ್ವೀಕಾರ:—ಮೈಸೂರಿನ ಪ್ರಸಿದ್ಧ ಹಾರ್ಮೋನಿಯಮ್ ವ್ಯಾಪಾರಿಗಳಾದ ಮೆಸರ್ಸ್ ಎಮ್. ಎಸ್. ಶಿದ್ದಪ್ಪ ಬ್ರದರ್ಸರವರು ಕಳುಹಿಸಿಕೊಟ್ಟ ೧೯೩೫ನೇ 'ಪೋಕೆಟ್' ಮತ್ತು 'ಶೀಟ್' ಕ್ಯಾಲೆಂಡರುಗಳನ್ನು ಆಭಾರದಿಂದ ಸ್ವೀಕರಿಸಿರುವೆವು. ("ಎಂಟಾಣೆ ಮನಿಯಾರ್ಡರ್ ಮಾಡುವವರಿಗೆ ೩೨ ಶೀಟ್ ಕ್ಯಾಲೆಂಡರುಗಳನ್ನೂ ಪನ್ನೆರಡಾಣೆ ಕಳುಹುವವರಿಗೆ ೩೨ ಪೋಕೆಟ್ ಕೆಲೆಂಡರುಗಳನ್ನೂ ಅಂಚೆ ಮೂಲಕ ರವಾನಿಸಿಕೊಡಲಾಗುವುದೆ"ಂದು ಅವರು ತಿಳಿಸುತ್ತಾರೆ.)

ತಾಲೂಕುಗಳಿಂದ.

ಕಾರ್ಕಳ — ಈ ಹಿಂದೆ ಪ್ರಕಟವಾದಂತೆ, ಕಾರ್ಕಳ ಶ್ರೀ ಪದ್ಮಸಾಲಿ ವೈಶ್ಯ (ಶೆಟ್ಟಿಗಾರ) ಸಮಾಜ ಸೇವಾ ಯುವಕ ಸಂಘದ ದ್ವಿತೀಯ ವಾರ್ಷಿಕ ವರ್ಧಂತಿಯು ಇದೇ ಬರುವ ದಶಂಬರ ತಾ. ೭ರಲ್ಲು ಕಾರ್ಕಳ ಮಾರ್ಕೆಟ್ ರೋಡ್ ಶ್ರೀ ವೀರಭದ್ರನಿಲಯದ ಸೇವಾಸದನದಲ್ಲಿ ಜರಗಲಿರುವುದು.

"ಶ್ರೀ ವೆಂಕಟರಮಣ ದೇವಾಲಯದವರು ನಡೆಸಿಕೊಂಡು ಬರುತ್ತಿರುವ ಹಿಂದೂಬಾಲಿಕಾ ಪಾಠಶಾಲೆಯ ಹೊಸ ಕಟ್ಟೋಣ ಕಟ್ಟಿಸಲಿಕ್ಕೆ ೫೦೦೦ ರೂಪಾಯಿಗಳ ಉದಾರದಾನವನ್ನು ಮಾಡಿದ ಶ್ರೀ ಕೆ. ಸುಬ್ರಾಯರು ಸದರಿ ಕಟ್ಟೋಣಕ್ಕೆ ಹೆಚ್ಚಿಗೆ ಖರ್ಚಾದ ಸುಮಾರು ೧೫೦೦ ರೂಪಾಯಿಗಳನ್ನು ಕೂಡ ತಾನೇ ಕೊಡುವೆನೆಂದು ವಾಗ್ದಾನ ಮಾಡಿ ವಿದ್ಯಾಪ್ರೇಮಿಗಳ ಶ್ಲಾಘನೆಗೆ ಪಾತ್ರರಾಗಿರುವರು. ಇವರಂತೆಯೇ ಇತರ ಶ್ರೀಮಂತ ಭಕ್ತಜನರು ಮನಸ್ಸು ಮಾಡಿದರೆ, ಶ್ರೀ ದೇವಾಲಯದವರು ನಡೆಸಿಕೊಂಡು ಬರುವ ಹುಡುಗರ ಹಾಯರ್ ಎಲಿಮೆಂಟರಿ ಶಾಲೆಗೂ ಒಂದು ಉತ್ತಮ ಕಟ್ಟೋಣವನ್ನು ಒದಗಿಸಿಕೊಡುವುದು ತ್ರಾಸದಾಯಕವಾಗಲಿಕ್ಕಿಲ್ಲ. ಶ್ರೀದೇವರ ಶ್ರೀಮಂತ ಭಕ್ತರು ಈ ಕಡೆಗೆ ಮನಸ್ಸು ಕೊಡಬೇಕೆಂದು ನಮ್ಮ ಪ್ರಾರ್ಥನೆ" ಎಂದೊಬ್ಬ ಬಾತ್ಮಿದಾರರು ಬರೆಯುತ್ತಾರೆ.

ಕೋಟೇಶ್ವರ ಇಲ್ಲಿಯ ವರ್ಷಾವಧಿಯ ರಥೋತ್ಸವವು ಇದೇ ಕಳೆದ ತಾ. ೨೧ನೆಯ ದಿನ ಯಥಾಸಾಂಗವಾಗಿ ನೆರವೇರಿತು. ಈ ಸಂದರ್ಭದಲ್ಲಿ ಕುಂದಾಪುರ ಸೆಂಟರಿನ ಪ್ರೊತೆಸ್ತಾಂತ ಮಿಶ್ಯನರಿಗಳು ತಮ್ಮ ಧರ್ಮಪ್ರಚಾರಕ್ಕಾಗಿ ಬಂದಿದ್ದು, ಭಾಷಣಮಾಡುತ್ತಿರಲು, ಅದನ್ನು ತಾಳ್ಮೆಯಿಂದ ಕೇಳಲಾರದ ಹಿಂದೂ ಮತಾನುಯಾಯಿಗಳು ಭಾಷಣವನ್ನು ನಿಲ್ಲಿಸುವ ಯುಕ್ತಿಯಾಗಿ ಗಲಭೆಯೆಬ್ಬಿಸಿದರು. ಶಾಂತಿಭಂಗವಾಗದಂತೆ ಪೋಲೀಸರು ಜನರನ್ನು ಚದರಿಸಿದರು. ಆಗಲೇ ಶ್ರೀಯುತ ರಾಘವೇಂದ್ರರಾಯ ಭಂಡಾರಿ ಎಂಬವರು ಮಿಶ್ಯನರಿಗಳ ಒಳಿಯಲ್ಲಿಯೇ ನಿಂತು ಹಿಂದೂಮತದ ಶ್ರೇಷ್ಠತ್ವದ ಕುರಿತು ಭಾಷಣವನ್ನಾರಂಭಿಸಲು, ಮಿಶ್ಯನರಿಗಳು ಶ್ರೀಯುತ ಭಂಡಾರಿಯವರೊಡನೆ ಒಪ್ಪಂದ ಮಾಡಿ, ತಮ್ಮ ಭಾಷಣವನ್ನು ನಿಲ್ಲಿಸಿ ತೆರಳಿದರು; ಎಂದೊಂದು ಬಾತ್ಮಿ.

ವಿಟ್ಲ — ಸ್ಥಳೀಯ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಚಿತ್ರಕಲಾ ನಿಪುಣ ಶ್ರೀ ಬಾಬುರಾಯರು ಪ್ರೆಸ್ಸಿಡೆನ್ಸಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಗೆ ವರ್ಗಾಯಿಸಲ್ಪಟ್ಟಿದ್ದಾರೆ.

ಶಿರ್ವ — ಇದೇ ಕಳೆದ ತಾ. ೨೨ನೇ ಗುರುವಾರ ಸಂಜೆ ಆರು ಘಂಟೆಗೆ ಇಲ್ಲಿಯ ಹಿಂದೂ ಶಾಲೆಯಲ್ಲಿ ಉಡುಪಿ ಶ್ರೀ ರಾಘವೇಂದ್ರರಾಯರ ಅಧ್ಯಕ್ಷತೆಯಲ್ಲಿ ಹಿಂದೀ ಪ್ರಾರಂಭೋತ್ಸವವು ಜರಗಿತು. ಮೊದಲು ಕಾರ್ಯದರ್ಶಿಗಳಾದ ಶ್ರೀ ಸಂಕಪ್ಪ ಹೆಗ್ಗಡೆಯವರು ಸಭೆಯ ಉದ್ದೇಶವನ್ನೂ, ಶ್ರೀ ದತ್ತಾತ್ರೇಯ ಗ್ರಂಥಮಾಲೆಯ ಹಿಂದೀ ಸಂಘವು ಅಪೇಕ್ಷಿಸುವ ಸಹಕಾರವನ್ನೂ ಕುರಿತು ಮಾತಾಡಿದರು. ಶ್ರೀ ಮಹಾಬಲ ಶೆಟ್ರು ಹಿಂದೀಭಾಷೆಯ ಆವಶ್ಯಕತೆಯ ಕುರಿತು ಭಾಷಣವಿತ್ತರು. ಜಮೀನ್ದಾರರಾದ ರಾ। ಶಂಕರನಾರಾಯಣರಾಯರು ಹಲವು ಹಿತಸೂಚನೆಗಳನ್ನಿತ್ತು ಮಾತಾಡಿದರು. ಅಧ್ಯಕ್ಷರು ತಮ್ಮ ಅನುಭವಪೂರ್ಣ ಭಾಷಣವಿತ್ತನಂತರ ಧನ್ಯವಾದ ಸಭಾಸತ್ಕಾರಗಳೊಡನೆ ಸಭೆಯು ಕೊನೆಗೊಂಡಿತು.

ಧರ್ಮಸ್ಥಳ:—"ಮೊದಲೇ ಪ್ರಕಟವಾದಂತೆ, ಇಲ್ಲಿಯ ದೀಪೋತ್ಸವ ಸಮಯ ದಶಂಬರ ತಾ. ೫ ಮತ್ತು ೬ನೇ ತಾರೀಕುಗಳಲ್ಲಿ ಮಧ್ಯಾಹ್ನ ಘಂಟೆ ೨ರಿಂದ ೬ರ ವರೆಗೆ "ಧರ್ಮಸಮ್ಮೇಳನ"ವು ಶ್ರೀಯುತ ಬೆಂಗಳೂರು ಪ್ರಾಕ್ತನ ವಿಮರ್ಶಕ ನರಸಿಂಗಾಚಾರ್ಯರವರ ಅಧ್ಯಕ್ಷತೆಯಲ್ಲಿ ನಡೆಯಲಿಕ್ಕಿರುವುದು. ಪ್ರಥಮ ದಿವಸ "ಜಡ ಮತ್ತು ಚೈತನ್ಯ ವಸ್ತುಗಳ ಸ್ವರೂಪವೂ, ಅವುಗಳೊಳಗಿರುವ ಪರಸ್ಪರ ಸಂಬಂಧವೂ, ದ್ವಿತೀಯ ದಿವಸದಲ್ಲಿ "ಆಧುನಿಕ ಸಂಶೋಧನೆಗಳು ಮತಧರ್ಮಕ್ಕೆ ಸಾಧಕವೋ! ಬಾಧಕವೋ?" ಎಂಬ ವಿಷಯದಲ್ಲಿ ಶ್ರೀಯುತ ಅಕ್ಕರಾಮ ಶಾಸ್ತ್ರಿಯವರು, (ಓಡ್ಲಮನೆ), ಪುತ್ತೂರು ಶಂಭು ಶರ್ಮರು, ಶಿರೋಮಣಿ ಉಡುಪಿ ಜನಾರ್ಧನಾಚಾರ್ಯರು, ಮೈಸೂರು ಅರಮನೆ ಆಸ್ಥಾನ ವಿದ್ವಾನ್ ಶಾಂತಿರಾಜ ಶಾಸ್ತ್ರಿಯವರು, ಕುಮಟ್ಟೂರ್ ಮಹೋಪಾಧ್ಯಾಯರು, ಧರ್ಮದೇವ ಸಿದ್ಧಾಂತಾಲಂಕಾರರು, ಕೋಟೆ ಶಿವರಾಮ ಕಾರಂತರು, ಬೆಂಗಳೂರು ಬಿ. ಪಿ. ರಾಜರತ್ನಮರು, ಯು. ಆರ್. ಕುಲಕರ್ಣಿ ಎಂ. ಎ. ಧಾರವಾಡ ಮೊದಲಾದವರು ಅದ್ವೈತ, ದ್ವೈತ, ಜೈನ, ಆರ್ಯಸಮಾಜ, ಇಸ್ಲಾಂ, ಕ್ರೈಸ್ತಾನಿಕಧರ್ಮ, ಬೌದ್ಧಧರ್ಮ ಮೊದಲಾದ ವಿವಿಧ ಧರ್ಮದ ಪ್ರಕಾರ ಮಾತಾಡಲಿರುವರು. ಎಲ್ಲವರೂ ಕನ್ನಡದಲ್ಲಿಯೇ ಮಾತಾಡಬೇಕೆಂದಿರುವುದು. ವಿಷಯವು ಗಹನವಾಗಿರುವುದರಿಂದ ಅದನ್ನು ಹೆಚ್ಚು ಜನರಿಗೆ ತಿಳಿಯುವಂತೆ ಸುಲಭಶೈಲಿಯಲ್ಲಿ ಮಾತಾಡಬೇಕೆಂಬ ನಿಯಮ. ಮೇಲಿನ ವಿಷಯಗಳ ಪರವಾಗಿ ತಮ್ಮ ತಮ್ಮ ಮತಸ್ವರೂಪ ನಿರೂಪಣೆಯೇ ಗುರಿಯಲ್ಲದೆ, ಅನ್ಯಮತತತ್ವಗಳ ಖಂಡನೆಗೆ ಅವಕಾಶ ಇರಲಿಕ್ಕಿಲ್ಲ.

ಮೊದಲಿನ ಪ್ರಕಟಣೆಯಂತೆ ಕೃಷಿ ಸಮ್ಮಂಧವಾದ ಠರಾವುಗಳು ಕಾರಣಾಂತರದಿಂದ ನಿಲ್ಲಿಸಲ್ಪಟ್ಟಿವೆ ಎಂದು ಸಮ್ಮೇಳನದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಉಡುಪಿ — ಇಲ್ಲಿಗೆ ಮುನಿಸಿಪಾಲಿಟಿ ಬರುವ ಕುರಿತಾಗಿ ಪರ್ಯಾಲೋಚಿಸುವ ಬಗ್ಗೆ ಪುರಜನರ ಸಭೆಯು ಇದೇ ಕಳೆದ ತಾ. ೧೬ರಲ್ಲಿ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಸೇರಿ, ಸದ್ಯಕ್ಕೆ ಇದು ಅನವಶ್ಯವೆಂಬ ಠರಾವು ಸರ್ವಸಮ್ಮತಿಯಿಂದ ಮಂಜೂರಾಗಿದೆ. ಈ ಅಭಿಪ್ರಾಯವನ್ನು ಸರಕಾರಕ್ಕೆ ತಿಳಿಸಪಡಿಸಲು, ಶ್ರೀಯುತರುಗಳಾದ ಅಡ್ವೊಕೇಟ್ ರಮಾನಾಥಪ್ಪ, ಯು. ಉಪೇಂದ್ರ ನಾಯ್ಕ, ಖಾನ್ ಬಹದ್ದೂರ್ ಹಾಜಿ ಅಬ್ದುಲ್ಲಾ ಹಾಜಿ ಖಾಸಿಂ ಸಾಹೇಬರೇ ಮೊದಲಾದ ಮಹನೀಯರು ಮದರಾಸು ಸರಕಾರದ ಮುಖ್ಯ ಮಂತ್ರಿಯವರಲ್ಲಿಗೆ ಡೆಪ್ಯುಟೇಶನನ್ನೊಯ್ಯುವುದೆಂದು ಗೊತ್ತಾಗಿದೆ.

ಕೆಲವು ವರ್ಷಗಳಿಂದ ಉಡುಪಿಗೆ ಮುನಿಸಿಪಾಲಿಟಿಯು ಬರುವುದೆಂಬ ಸುದ್ದಿಯಿತ್ತಷ್ಟೆ. ಇತ್ತೀಚೆಗೆ ಈ ವಾರ್ತೆಯು ನಿಜವೆಂದು ತಿಳಿದುಬಂದ ಕಾರಣ, ಇದರ ನಿಷೇಧಾರ್ಥವಾಗಿ ಇದೇ ತಾ. ೧೬ರಲ್ಲಿ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನ ವಠಾರದಲ್ಲಿ ವಕೀಲ ಶ್ರೀ ವಿಠ್ಠಲ ಕಾಮತರವರ ಅಧ್ಯಕ್ಷತೆಯಲ್ಲೊಂದು ಸಭೆಯು ಜರಗಿ, ಸದ್ಯಸ್ಥಿತಿಯಲ್ಲಿ ಉಡುಪಿಗೆ ಮುನಿಸಿಪಾಲಿಟಿಯು ಅನಗತ್ಯವೆಂಬ ಠರಾವು ಮಂಜೂರಾಯಿತು.

ಮಲ್ಪೆ:—ಕೆಲವರ್ಷಗಳಿಂದ ತಲೆಯೆತ್ತಿದ 'ಪಟ್ಟೆ ಬಲೆ'ಯವರಿಗೂ, ಪೂರ್ವದಿಂದ ನಡೆದು-ಬಂದಿರುವ 'ಮಾಡಿಬಲೆ'ಯವರಿಗೂ ಬಹುಕಾಲದಿಂದ ಬೆಳೆದುಬಂದ ದ್ವೇಷವು ಮಹಾರಾಮಾರಿಯಲ್ಲಿ ಫಲಿತವಾಗಿ ಅನೇಕರು ಜಖಂಗೊಂಡು ಆಸ್ಪತ್ರೆಗೊಯ್ಯಲ್ಪಟ್ಟಿರುವರಷ್ಟೆ. ಇತ್ತೀಚೆಗೆ ಒಬ್ಬ ಪಟ್ಟೆಬಲೆ ಮತ್ತು ಒಂದು ದೋಣಿಯನ್ನು ಮತ್ತೊಂದು ಪಕ್ಷದವರು ಸುಟ್ಟಿರುತ್ತಾರೆ. ಸ್ಥಿತಿಯನ್ನು ಹತೋಟಿಯಲ್ಲಿಡದಿದ್ದರೆ, ವಿಷಮ ಸಂಘಟನೆಗಳಾಗುವುದೆಂದು ಊಹಿಸಲಾಗಿದೆ.

The Kanara Enterprise, Ltd.,
Puttur, S. Kanara. (Banking)

NOTICE.

It is hereby notified that the following changes will be made in timing with effect from 1-12-1934.
On week days 10 A.M. to 3-30 P.M.
On Saturdays 10 A.M. to 12-30 P.M.

Office of Bank, Puttur, 26-11-1934. G. N. Lakshman Pai, Secretary.

The Kanara Enterprise, Ltd.,
Puttur, S. Kanara. (Banking).

NOTICE.

The Annual General Meeting of the share-holders of the Bank will be held in the Registered Office on Sunday the 2nd December 1934 at 8 P.M. All share-holders of the Bank are requested to be present on the occasion.

Puttur, 26-11-34. G. N. Lakshman Pai, Secretary.

ಇಂಗ್ಲಾಂಡು ಜಾಪಾನುಗಳೊಳಗೆ ಒಪ್ಪಂದ!

ಲಂಡನಿನಲ್ಲಿ ಗುಸು ಗುಸು ವಾರ್ತೆ!

ಇಂಗ್ಲಾಂಡು ಜಾಪಾನುಗಳೊಳಗೆ ಏನೋ ಒಂದು ಹೊಸ ಒಪ್ಪಂದವಾಗಿದೆಯೆಂಬ ವಾರ್ತೆಯು ಟೋಕಿಯೊದಲ್ಲೂ ಲಂಡನಿನಲ್ಲೂ ವ್ಯಾಪಿಸಿ ಅಧಿಕಾರಿಗಳ ಲಕ್ಷ್ಯವನ್ನಾಕರ್ಷಿಸಿರುತ್ತದೆ. ಅಂಗ್ಲೇಯರಿಗೂ ಅಮೇರಿಕನರಿಗೂ ವೈಮನಸ್ಯವನ್ನುಂಟುಮಾಡಲು ಹವಣಿಸುವವರಿಲ್ಲ ಈ ವಾರ್ತೆಯನ್ನು ಮಹಾಮೇರುವಿನಂತೆ ಮಾಡಿ ಹರಡಿಸುತ್ತಿರುವರು. ಈ ಸುದ್ದಿಯನ್ನರಿತ ಯುನೈಟೆಡ್ ಸ್ಟೇಟ್ಸ್‌ನ ಪ್ರತಿನಿಧಿಗಳಾದ ಮಿ. ನೋರ್ಮನ್ ಎಚ್. ಡೇವಿಸ್‌ರವರು ವಾರ್ತೆಯ ಸತ್ಯವನ್ನು ತಿಳಿಯುವುದಕ್ಕಾಗಿ ಕಳೆದ ತಿಂಗಳಲ್ಲಿ ಮೆಕ್ಡೊನಾಲ್ಡರನ್ನು ಕಂಡು ಸಂಭಾಷಿಸಿದರು. ಜಾಪಾನ ಸರಕಾರವು ಲಂಡನ್ ಮಾರ್ಕೆಟಿನಲ್ಲಿ ತನ್ನ ಸರಕುಗಳನ್ನು ಸ್ವೇಚ್ಛೆಯಿಂದ ವ್ಯಾಪಾರಮಾಡಬಹುದೆಂಬ ತಹಾವಾಗಿದೆಯೆಂದು ಸುದ್ದಿ ಹರಡಿದೆ. ಬೋಂಡ್‌ಗಳನ್ನು ಕೊಟ್ಟು ಸಾಲವೆತ್ತುವ ಜಾಪಾನ ಸರಕಾರದ ಯೋಜನೆಯಲ್ಲಿ ಬ್ರಿಟನಿನ ಸರಕಾರವೂ ಸಮ್ಮತಿ ಸಹಕಾರಗಳನ್ನು ಕೊಟ್ಟಿದೆಯಾಗಿ ತಿಳಿದುಬಂದಿದೆ. ಬ್ರಿಟಿಷ ಅಧಿಕಾರಿಗಳು ಈ ವಾರ್ತೆಯನ್ನು ಮನಃಪೂರ್ವಕವಾಗಿ ದುರ್ಲಕ್ಷಿಸುವುದಿಲ್ಲ. ಬ್ರಿಟನು ಮತ್ತು ಜಾಪಾನುಗಳೊಳಗೆ ಏನಾದರೊಂದು ಒಪ್ಪಂದವಾಗುವುದು ವಿಹಿತವೆಂದು ಅನೇಕರ ಮತವಿದೆ. ಮಂಚುಕುವೋದಲ್ಲಿನ ಎಣ್ಣೆಯ ಗಣಿಗಳ ವಿಷಯವಾಗಿ ಅಮೇರಿಕವು ಆಲೋಚಿಸುತ್ತಿದೆ. ಅಲ್ಲಿಯ ಈ ವ್ಯಾಪಾರವನ್ನು ವಶೀಕರಿಸಿಕೊಳ್ಳಬೇಕೆಂದು ಅಮೇರಿಕದ ಇಂಗಿತವಿರುತ್ತದೆ.

ಚೀನದ ಪ್ರಗತಿ.

ಚೀನದಲ್ಲಿ ಪ್ರಜಾಸತ್ತೆಯು ಪ್ರಚಾರಕ್ಕೆ ಬಂದು ೨೩ ವರ್ಷಗಳಾದುವು. ಮೊನ್ನಿನ ಇದರ ವಾರ್ಷಿಕೋತ್ಸವದ ದಿನ ಜನರಲ್ ಚಿಯಾಂಗ್ ಕೈಶೇಕ್‌ರವರು ಚೀನಕ್ಕೆ ಕೊಟ್ಟ ಸಂದೇಶವಿದು:—

'ಈ ೨೩ನೇ ವಾರ್ಷಿಕೋತ್ಸವವನ್ನು ಆಚರಿಸುವ ಸಮಾರಂಭದ ವೇಳೆ ನಾವು ನಮ್ಮ ದೃಷ್ಟಿಯನ್ನು ಸ್ವಲ್ಪ ಮುಂದಕ್ಕೆ ಹರಿಸಿ ನೋಡಿದರೆ ಮುಂದಿನ ವರ್ಷಗಳಲ್ಲಿ ನಮಗೆ ಶುಭವೇ ಆಗುವುದೆಂಬುದನ್ನು ನಾವು ಭಾವಿಸಿಕೊಂಡರೆ ಅಸ್ವಾಭಾವಿಕವಾಗಲಾರದು. ಚೀನದ ಕ್ರಾಂತಿಯು ರಕ್ತದ ಬಲಿಯನ್ನು ಕೊಡಲಿಲ್ಲವೆಂಬುದರಲ್ಲಿ ಮಹದಭಿಮಾನವಿದೆ. ಈ ವಿಷಯವು ಜಗತ್ತಿನ ಚರಿತ್ರೆಯಲ್ಲಿ ಉಳಿಯುವುದು. ಕ್ರಾಂತಿಯು ಕೊನೆಗೊಂಡನಂತರ ತಲೆದೋರಿದ ಕ್ಷೋಭೆಯು ಅಸ್ವಾಭಾವಿಕವಾದುದಲ್ಲ. ಯುಗಾಂತರದಲ್ಲಿ ನಿರಂಕುಶ ಪ್ರಭುತ್ವದ ಮುಷ್ಟಿಯೊಳಗೆ ಸಿಲುಕಿ ಬಳಲಿದ ದೇಶವು ಮುಕ್ತಿಪಥವನ್ನು ಹಿಡಿದು ಸಾಗುವ ಮೊದಲು ತನ್ನಲ್ಲಿರುವ ಕಲಂಕವನ್ನು ಹೋಗಲಾಡಿಸಿಕೊಳ್ಳುವುದು ಅವಮಾನಕರವಲ್ಲ. ಈ ತೆರನಾಗಿ ಚೇತರಿಸಿಕೊಂಡು ಮುಂದೆ ಸಾಗುವುದರಲ್ಲಿ ನಮ್ಮ ಹಿರಿಯರ ಧೈರ್ಯ, ಸಾಹಸ, ಧರ್ಮ ಶೌರ್ಯಗಳು ಪ್ರಕಟವಾಗಿವೆ. ಸುಗುಣವು ಬಾಹ್ಯಕ್ಕಿಂತ ಅಂತರ್ಯದಲ್ಲಿರಬೇಕೆಂದು ನಮ್ಮ ಹಿರಿಯರು ನಿರ್ಧರಿಸಿರುವರು. ಫ್ರಾನ್ಸ್, ಅಮೇರಿಕಾ, ರಷ್ಯಾಗಳಲ್ಲಿನ ಒಟ್ಟು ಜನಸಂಖ್ಯೆಗಿಂತ ಹೆಚ್ಚು ಜನರಿರುವ ಈ ದೇಶದಲ್ಲಿ [illegible]ಕೀಯ ಪ್ರೇಮವು ಹೇಗೆ ಪ್ರಸಿದ್ಧಿ ಹೊಂದಿತು;- ದೇಶಿಗರು ಹೇಗೆ ಸಾಹಸವಂತರಾದರು ಎಂಬುದನ್ನು ವಿಚಾರಿಸುವಾಗ ನಮ್ಮ ಸಾಧನೆಯು ಪ್ರಶಂಸನೀಯವಿದೆಯೆಂದು ಬೇರೆ ಹೇಳಲವಶ್ಯವಿದೆಯೋ?

ನಮ್ಮ ಮುಖಂಡರ ಬುದ್ಧೀಶ—ಕ್ಲೇಶ ಸಹಿಷ್ಣುತೆಗಳನ್ನು ಪರಿಶೀಲಿಸುವಾಗ ನಮ್ಮವರು ತಮ್ಮವರಿಗಾಗಿ ಆಳುವ ಧ್ಯೇಯವು ಎಲ್ಲೆಲ್ಲೂ ಕಲಿಯುತ್ತಿದೆಯೆಂದು ಹೇಳಲು ಸಾಧ್ಯವಿದೆ.

ನಮ್ಮ ನವಚೇತನವು ಕ್ರಮಕ್ರಮವಾಗಿ ಮೊದಲಿನ ಸರಕಾರವು ಪ್ರಜೆಗಳ ಮೇಲೆ ಹೊರಿಸಿದ್ದ ಭಾರವಾದ ತೆರಿಗೆಗಳು, ಹೋದುವು. ಬಡ ಪ್ರಜೆಗಳ ದುಃಖದ ಮೇಲೆ ಸಿರಿವಂತರು ಗೋರಿಕಟ್ಟಿ ಸುಖಲೋಲುಪರಾಗಿ ಜೀವಿಸುವ ದಿನಗಳು ಕಳೆದುಹೋದುವು. ಶಾಸ್ತ್ರೀಯವೂ ಸಕಾರಣವೂ ಆದ ಕಂದಾಯವನ್ನು ಹೊರಿಸುವಂತಹ ಶಾಸನಗಳುಂಟಾದುವು. ವಾಣಿಜ್ಯವು ಮುಂದರಿಯುವಂತಾಯಿತು. ಪ್ರಾಂತ್ಯಗಳನ್ನೊಂದುಗೂಡಿಸಿ ಕೇಂದ್ರಸ್ಥಾನದಲ್ಲಿ ಸರಕಾರವು ನಿಲ್ಲುವಂತಾಯಿತು. ವಿದ್ಯೆ, ಧರ್ಮಗಳ ಪ್ರಚಾರಕಾರ್ಯವು ಕೈಯಲ್ಲಿ ತೆಗೆಯಲ್ಪಟ್ಟಿತು. ಇವುಗಳ ಸಂಬಂಧವಾದ ಕೆಲಸಗಳು ಸಾಗುತ್ತಿವೆ.

ಚೀನಾದಲ್ಲಿ ರಾಷ್ಟ್ರಭಕ್ತರು ಕಡಮೆಯಾಗಿಲ್ಲ. ಅವರಿಗೆ ತಮ್ಮ ಭಕ್ತಿಯನ್ನು ತೋರ್ಪಡಿಸುವುದಕ್ಕಾಗಿ ಯೋಗ್ಯ ಸಂದರ್ಭವು ದೊರೆಯಲಿಲ್ಲ. ಆದರೆ ಈಗ, ವಿಚಕ್ಷಣಶಾಲಿಗಳ ವಿವೇಕವನ್ನು ಸದುಪಯೋಗಕ್ಕಿಡುವಂತಹ ಆಯೋಜನೆಯಾಗಿರುತ್ತದೆ. ಇಷ್ಟಾದರೂ, ಕಳೆದ ಇಪ್ಪತ್ತು ವರ್ಷಗಳಿಂದ ನಾವು ಸಂಪೂರ್ಣ ಮುಕ್ತಿಯನ್ನು ಹೊಂದಲಿಲ್ಲವೆಂಬುದು ಖರೆಯಾದರೂ ವ್ಯಸನಾಸ್ಪದವಾಗಿಲ್ಲ. ಪಾಶ್ಚಾತ್ಯ ದೇಶಗಳಲ್ಲಿರುವ ಆರ್ಥಿಕ ದುರವಸ್ಥೆಯನ್ನು ಪರಿಗಣಿಸುವಾಗ ನಮ್ಮ ಪ್ರಗತಿಯು ಪ್ರಶಂಸನೀಯವೆಂದೆನ್ನಲೇಬೇಕಾಗಿದೆ.

ಎಂತಹ ದುರ್ನಿಮಿತ್ತಗಳು ಸನ್ನಿಹಿತನಾದರೂ ನಾವು ನಮ್ಮ ಉದ್ಧಾರ ಮಾರ್ಗವನ್ನು ಅಲಕ್ಷಿಸಿ ವರ್ತಿಸಬಾರದು. ದೇಶದ ಬೆಳವಣಿಗೆಗೆ ಸಾಧಕವಾದ ಸಕಲ ಸದ್ಗುಣಗಳೂ ನಮ್ಮಲ್ಲಿ ಮೂರ್ತಿಮತ್ತಾಗಿರಬೇಕು. ಜುಗಾರಿ ಅಥವಾ ಅನೈತಿಕ ವರ್ತನೆಯಿಂದ ದೂರಿದ ಧೃಷ್ಟ ಸಂಪಾದನೆಯಿಂದ ವಿಮುಖರಾಗುವಂತೆ ನಾವು ನಮ್ಮ ಜನತೆಗೆ ಬೋಧಿಸಬೇಕು.

ಜನತೆಯ ಜೀವನ ಪಥವು ಸುಗಮವಾಗಿರಬೇಕೆಂಬ ಉದ್ದೇಶವನ್ನು ನಮ್ಮ ಸರಕಾರವು ಲಕ್ಷ್ಯದಲ್ಲಿಟ್ಟು, ದೇಶದ ಸ್ಥಿತಿ ಮತ್ತು ಭಾಗ್ಯಗಳನ್ನು ಸದುಪಯೋಗಕ್ಕೆ ಹಚ್ಚಿ ನಡೆಯಲು ನಿರ್ಧಾರವಾಗಿರುತ್ತದೆ. ಇದರ ಎಲ್ಲಾ ಶಾಸನಗಳು ದೇಶ ಹಿತದೃಷ್ಟಿಯಿಂದಲೇ ರಚಿಸಲ್ಪಡುವುವು. ದೇಶೀಯರಾಗಲೀ, ವಿದೇಶೀಯರಾಗಲೀ ಸುಖದಿಂದ ಜೀವಿಸಬೇಕೆಂಬುದೇ ರಾಷ್ಟ್ರೀಯ ಸರಕಾರದ ಆಶಯವಿರುತ್ತದೆ. ಇದರಲ್ಲಿ ಎಲ್ಲರೂ ಸಹಕರಿಸಿ ನಡೆಯಬೇಕಾಗಿದೆ.

ಬೊಂಬಾಯಿಯ ಅರಿವೆ ವ್ಯಾಪಾರ.

ಕಳೆದ ಅಗೋಸ್ತು ತಿಂಗಳಿಂದಿತ್ತೀಚೆಗೆ ಬೊಂಬಾಯಿಯ ನೂಲು ಮತ್ತು ಅರಿವೆ ವ್ಯಾಪಾರವು ಹೆಚ್ಚಿದೆಯೆಂದೂ, ಅಂತೇ ಆಮದು ಹೆಚ್ಚುತ್ತಿದೆಯೆಂದೂ, ಅಲ್ಲಿ ಗಿರಣಿಮಾಲಿಕರ ಪ್ರಕಟಣೆ. ಅಗೋಸ್ತು ತಿಂಗಳಲ್ಲಿ, ಎಲ್ಲ ಬಗೆಯ ಅರಳಿಯ ನೂಲು ೮೬೦,೦೦೦ ರಾತ್ಲು ಆಮದಾಗಿತ್ತು; ಸಪ್ಟಂಬರದಲ್ಲಿ ಒಂದು ಮಿಲಿಯಷ್ಟು ಹೆಚ್ಚಿದೆ. ಯೂನೈಟೆಡ್ ಕಿಂಗ್ಡಮಿನಿಂದ ಬರುವ ನೂಲು ಹೆಚ್ಚಿದೆ—೧೫೬,೦೦೦ ರಾತ್ಲು; ಚೀನದಿಂದಲೂ ೪೧೬,೦೦೦ ರಾತ್ಲು ಆಯಾತವಾಗಿದೆ. ಸಪ್ಟಂಬರದಲ್ಲಿ ಹತ್ತಿಯ ಅರಿವೆಗಳು ೨೪೨೨ ಮಿಲ್ಲಿಯ ಗಜ ಆಮದಾಗಿದೆ. ಜಾಪಾನಿನಿಂದ ಆಮದು ಹೆಚ್ಚಿದೆ.

ಗೂಢಚಾರರು.

ಬ್ರಿಟನ್ ಮತ್ತು ಜಾಪಾನುಗಳ ವ್ಯಯ.

ಎಲ್ಲ ಪ್ರಬಲ ರಾಷ್ಟ್ರಗಳಲ್ಲೂ ಗೂಢಚಾರರಿರುವರು. ಇವರು ಬೇರೆ ಬೇರೆ ದೇಶಗಳಲ್ಲಿ ನಾನಾ ವೇಷಗಳಲ್ಲಿ, ಸಾಹುಕಾರರಾಗಿಯೋ ವಿಲಾಸಿಗಳಂತೆಯೋ ಇದ್ದು, ಸರಕಾರದ ರಹಸ್ಯವನ್ನು ತಿಳಕೊಂಡು ತನ್ನ ಸರಕಾರಕ್ಕೆ ಕಳುಹುವರು. ಸೈನ್ಯದ ಚಲನವಲನ, ಹೊಸ ಕಾರ್ಯಕ್ರಮಗಳು, ಶಸ್ತ್ರಾಸ್ತ್ರ ಸಂಗ್ರಹದ ಸಿದ್ಧತೆ—ಈ ರಹಸ್ಯಗಳನ್ನೆ ಮುಖ್ಯವಾಗಿ ಈ ಗೂಢಚಾರರು ಅನ್ವೇಷಿಸುವುದಾಗಿದೆ. ಪರರಾಷ್ಟ್ರದ ಶಕ್ತಿಯೆಷ್ಟು ಎಂಬುದೇ ಎಂದೆಂದೂ ಕುತೂಹಲದ ಪ್ರಶ್ನೆ. ಅದಕ್ಕಾಗಿಯೇ ಜಿಜ್ಞಾಸೆ.

ಯುರೋಪಿನ ಮಹಾಯುದ್ಧದ ನಂತರ ಬ್ರಿಟಿಷರ ಗೂಢಚಾರರು ಫ್ರಾನ್ಸ್, ಜರ್ಮನಿ, ರಷ್ಯ, ಅಮೇರಿಕ ಮೊದಲಾದ ಕಡೆಗಳಲ್ಲೆಲ್ಲ ಇರುವರು. ಇಂಥ ಗೂಢಚಾರರ ಸಂಖ್ಯೆ ಎಷ್ಟಿರುವುದೋ ತಿಳಿದಿಲ್ಲ. ಆದರೆ, ೧೯೩೩ನೇ ಅಕ್ಟೋಬರ ತಾ. ೩೧ಕ್ಕೆ ಅಂತ್ಯವಾಗುವ ಒಂದು ವರ್ಷದೊಳಗೆ ಇಂತಹ ೧೮೮ ಗೂಢಚಾರರು ದಸ್ತಗಿರಿ ಮಾಡಲ್ಪಟ್ಟಿರುವರೆಂದು ತಿಳಿದುಬಂದಿದೆ. ಈ ಕಾಲವು, ಯುದ್ಧಗಳಿಲ್ಲದ ಶಾಂತಕಾಲವಾಗಿದ್ದರೂ ದಸ್ತಗಿರಿ ಮಾಡಲ್ಪಟ್ಟವರಲ್ಲಿ ೩೦ ಮಂದಿ ಮರಣದಂಡನೆಗೊಳಗಾಗುವುದಾಯಿತು. ಬ್ರಿಟಿಷರು ವರ್ಷಂಪ್ರತಿ ೨ ಲಕ್ಷದಿಂದ ೩, ಲಕ್ಷ ಪವನುಗಳ ವರೆಗೆ—ಸಿಕ್ರೆಟ್ ಸರ್ವಿಸಿಗಾಗಿಯೇ ವೆಚ್ಚ ಮಾಡುವರಂತೆ.

ಜಾಪಾನೀಯರು ಮತ್ತಷ್ಟು ಬಲಶಾಲಿಗಳು—ಗೂಢಚಾರರ ಸರ್ವೀಸು ವೆಚ್ಚಗಳಲ್ಲಿ! ಇವರು ಬ್ರಿಟಿಷರಿಗಿಂತ ೪ ಪಾಲು ಹೆಚ್ಚು ವ್ಯಯ ಮಾಡುತ್ತಿರುವರು. ಚಿಕ್ಕ ದೋಣಿಗಳಲ್ಲೂ ವಯರ್‌ಲೆಸ್ ಯಂತ್ರವನ್ನಿಟ್ಟು ಬೆಸ್ತರ ವೇಷಗೊಂಡಿರುವ ಗೂಢಚಾರರಿರುವರಂತೆ!

To Whomsoever it may concern

It is notified that Murdeshwar's Banking Institute and Modern Literary & Publishing Agency, will be removed from 2, Fernandes Mansion, Hampankatta, Mangalore, to a building near Ganapathy High School, Mangalore, as from the 1st December, 1934.

D. R. Murdeshwar,
Dip. Econ., F. R. Econ. S.
Principal and Director.

Mangalore, 28th November, 1934.

ಚೆ. ಸಿ. ಸಾಲಿಮಠ, ಪ್ರಿಂಟರ, ಗದಗ. ಇವರಿಂದ ಬರೆಯಲ್ಪಟ್ಟ,

ಕಾಮಕಳಾ ಶಾಸ್ತ್ರ.

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ ಈ ಪುಸ್ತಕದೊಳಗಿನ ವಿಷಯಗಳು:-

ಸಾಮುದ್ರಿಕ ವಿಷಯ (೧) ಪುರುಷ ಸಾಮುದ್ರಿಕ ಲಕ್ಷಣ, (೨) ಸ್ತ್ರೀ ಸಾಮುದ್ರಿಕ ಲಕ್ಷಣ, ಪುರುಷ ಜಾತಿಯ ವರ್ಣನೆ (೩) ಶಶಪುರುಷನ ಲಕ್ಷಣ, (೪) ವೃಷಭಪುರುಷನ ಲಕ್ಷಣ, (೫) ಅಶ್ವಜಾತಿ ಪುರುಷನ ಲಕ್ಷಣ, ಸ್ತ್ರೀಜಾತಿಯ ವರ್ಣನೆ - (೬) ಪದ್ಮಿನಿ ಸ್ತ್ರೀಯಳ ಲಕ್ಷಣ, (೭) ಚಿತ್ರಿಣಿ ಸ್ತ್ರೀಯಳ ಲಕ್ಷಣ, (೮) ಶಂಖಿನಿ ಸ್ತ್ರೀಯಳ ಲಕ್ಷಣ, (೯) ಹಸ್ತಿನಿ ಸ್ತ್ರೀಯಳ ಲಕ್ಷಣ, ಕಾಮಕಳಾ ವಿಷಯ (೧೦) ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬ ಸ್ತ್ರೀಯರ ಸುಖ ತಿಳಿಯುವ ವಿವರ, (೧೧) ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮ, (೧೨). ಚಂದ್ರಕಳೆಯ ಸ್ಥಾನಗಳು, (೧೩) ಸ್ತ್ರೀ ವಶೀಕರಣ, (೧೪) ಪುರುಷ ವಶೀಕರಣ, (೧೫) ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, (೧೬) ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, (೧೭) ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ, (೧೮) ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ (೧೯) ನಾಲ್ಕೂ ಜಾತಿ ಸ್ತ್ರೀಯರಿಗೂ ಉಪಯೋಗ ಬೀಳುವ ಸಾಮಾನ್ಯ ಸ್ತ್ರೀ ವಶೀಕರಣ, (೨೦) ಭೋಗಕ್ಕೆ ಯೋಗ್ಯ ಸ್ಥಳ, (೨೧) ಭೋಗಕ್ಕೆ ಅಯೋಗ್ಯ ಸ್ಥಳ, (೨೨) ಮೈಥುನಕ್ಕೆ ಅಯೋಗ್ಯವಾದ ವೇಳೆ, (೨೩) ಮೈಥುನಕ್ಕೆ ಅಯೋಗ್ಯ ಸ್ತ್ರೀಯರು, (೨೪) ಪರಸ್ತ್ರೀಗಮನದಿಂದಾಗುವ ಹಾನಿ, (೨೫) ಸುಗಂಧ ಪುಷ್ಪ ಚೂರ್ಣ, (೨೬) ಅಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ, (೨೭) ಬಾಯ ದುರ್ಗಂಧ ಹೋಗುವುದಕ್ಕೆ, (೨೮) [illegible]ಕ್ಕೆಗೆ, (೨೯) ಕೇಶ ರಂಜನಕ್ಕೆ, (೩೦) [illegible] ನಾಶಕ್ಕೆ, (೩೧) ಕೂದಲು ಉದುರುವದಕ್ಕೆ, (೩೨) ಶರೀರದ ಕಪ್ಪು ಬಣ್ಣಕ್ಕೆ, (೩೩) ಕುಚ ವೃದ್ಧಿಗೆ, (೩೪) ಹರಿಣೀ ಜಾತಿಯ ಸ್ತ್ರೀಲಕ್ಷಣ, (೩೫) ಅಶ್ವಿನೀ ಜಾತಿಯ ಸ್ತ್ರೀಲಕ್ಷಣ (೩೬) ಕರಿಣೀಜಾತಿಯ ಸ್ತ್ರೀಲಕ್ಷಣ, (೩೭) ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯು ಯೋಗ್ಯ, (೩೮) ಮೈಥುನ ಸುಖದಲ್ಲಿ [illegible] ಅಂತರ [illegible], (೩೯) ಸ್ತ್ರೀಯರ ಕಾಮಕಳಾ ಪರಿಪೂರ್ಣತೆಯ ವಿವರ, (೪೦) ದಂಪತಿಗಳು ಕೂಡುವ ದಿಕ್ಕಿನ ಫಲ, (೪೧) ಸತಿಪತಿಗಳು ಕೂಡುವ ದಿವಸ ಫಲ, (೪೨) ಗರ್ಭನಿಂತ ದಿವಸ ಫಲ, (೪೩) ಗರ್ಭನಿಂತ ಕಾಲಫಲ, (೪೪) ಸ್ತ್ರೀಯರ ಜಾತಿ ಮೇಲಿಂದ ಕೂಡುವ ಲಕ್ಷಣ, (೪೫) ವಿಪರೀತಯೋಗಕ್ಕೆ ಉಪಾಯಗಳು, (೪೬) ಯೋನಿ ಸಂಕೋಚಕ್ಕೆ, (೪೭) ಲಿಂಗ ವೃದ್ಧಿಗೆ, (೪೮) ಸ್ತ್ರೀಯರಿಗೆ ಮೈಥುನ ಬೇಗನೆ [illegible]ಆಗುವಂತೆ ಮಾಡುವ ಉಪಾಯ, (೪೯) ಪುರುಷರ [illegible] ಉಪಾಯ, (೫೦) [illegible], (೫೧) [illegible], (೫೨) ಸಂತತಿ ಪ್ರತಿಬಂಧಕ ಉಪಾಯ, (೫೩) ಮುಟ್ಟು ತಡೆದಿದ್ದರೆ, (೫೪) ಬಹಳ ಮುಟ್ಟಾಗುತಿದ್ದರೆ, (೫೫) ಗರ್ಭಾಶಯದ ಶುದ್ಧಿಗೆ, (೫೬) ಗರ್ಭಧಾರಣಕ್ಕೆ ಉಪಾಯ, (೫೭) ಗರ್ಭಪಾತಕ್ಕೆ ಉಪಾಯ, (೫೮) ಬೇಗ ಹಡೆಯಲಿಕ್ಕೆ ಉಪಾಯ, (೫೯) ನಪುಂಸಕದೋಷಕ್ಕೆ ಉಪಾಯ, (೬೦) ವಿವಾಹಕ್ಕೆ ಅಯೋಗ್ಯ ಪುರುಷ, (೬೧) ಸ್ತ್ರೀಯರ [illegible] ವರ್ಣನೆ, (೬೨) ಸ್ತ್ರೀಯರು ವಶವಾಗುವ ಮತ್ತು ಗರ್ಭಧರಿಸುವ ಕಾಲ, (೬೩) ಹೆಂಗಸರು ಯಾವ ಕಾರಣದಿಂದ ಕೆಡುತ್ತಾರೆ, (೬೪) ಸತಿಯ ವಿಷಯಕ್ಕೆ ಪತಿಯು ಬೇಸರ ಪಟ್ಟಿರುವನೆಂಬುದನ್ನು ತಿಳಿಯುವುದಕ್ಕೆ, (೬೫) ಉದಾಸೀನತೆ ಪ್ರಾಪ್ತವಾಗುವ ಕಾರಣ, (೬೬) ಭೋಗೇಚ್ಛಾ ಉಂಟಾದ ಸ್ತ್ರೀಲಕ್ಷಣ, (೬೭) ನಿರಂತರ ಸುರತಯೋಗವಿರುವ ಸ್ತ್ರೀಯರ ಲಕ್ಷಣ (೬೮) ವಿರಹಿಣೀ ಸ್ತ್ರೀಯ ಲಕ್ಷಣ, (೬೯) ಭೋಗೇಚ್ಛಾ ಪೂರ್ಣವಾದ ಮೇಲೆ ತೋರುವ ಸ್ತ್ರೀಯ ಲಕ್ಷಣ, (೭೦) ಉಷ್ಣ ರೋಗಕ್ಕೆ, (೭೧) ರಕ್ತ ಉಷ್ಣಕ್ಕೆ, (೭೨) [illegible] ಉಷ್ಣಕ್ಕೆ, (೭೩) ಉಷ್ಣ ಕೈಯೊಳಗೆ ಒಡೆದರೆ, (೭೪) ಉಷ್ಣ ಹುಣ್ಣಿನ ಘಾಯಕ್ಕೆ (೭೫) [illegible], (೭೬) [illegible], (೭೭) ಬಿಳೀ ಉಷ್ಣಕ್ಕೆ, (೭೮) ೧೮ ತರದ ಪ್ರಮೇಹಕ್ಕೆ, (೭೯) ಪ್ರದರ ರೋಗಕ್ಕೆ, (೮೦) ಗರ್ಮಿ ರೋಗಕ್ಕೆ, (೮೧) ಪುಷ್ಟಿಗೆ, (೮೨) ಧಾತು ಪುಷ್ಟಿಗೆ, (೮೩) ರೇತು ಸಂಚಯಕ್ಕೆ, (೮೪) ವೀರ್ಯ ವೃದ್ಧಿಗೆ, (೮೫) ಕಾಮೋತ್ತೇಜನಕ್ಕೆ, (೮೬) ದೇಹಶಕ್ತಿ ಬರುವದಕ್ಕೆ (೮೭) ಮುಷ್ಟಿಮೈಥುನದಿಂದಾದ ಅಶಕ್ತಿಗೆ, (೮೮) ಗಂಡುಸುತನಕ್ಕೆ (ಷಂಡತ್ವಕ್ಕೆ), (೮೯) ಸ್ವಪ್ನೇಂದ್ರಿಯಕ್ಕೆ, (೯೦) ಇಂದ್ರಿಯ ಸ್ತಂಭನಕ್ಕೆ, (೯೧) ಶುಕ್ಲ ಸ್ತಂಭನಕ್ಕೆ, (೯೨) ಧಾತುಸ್ರಾವಕ್ಕೆ, (೯೩) [illegible], (೯೪) ರಸಾಯನ ಮೈಯಲ್ಲಿ ಒಡೆದಿದ್ದರೆ (೯೫) ಜಲಮೂಲ ಕಟ್ಟಿದರೆ, (೯೬) ಗೂದಿಗೆ, (೯೭) ಮೂಲವ್ಯಾಧಿಗೆ.

ಸಿಗುವ ಸ್ಥಳ— ಶ್ರೀ ರುದ್ರ ವಿಲಾಸ ಮುದ್ರಣಾಲಯ, ಗದಗ.

ಪ್ರಥಮ ಬಹುಮಾನ ರೂ 4000

ಬಹುಮಾನಗಳು 600. ರೂ. 11,000,

ಟಿಕೇಟು 1ಕ್ಕೆ 0—8—0 ಮಾತ್ರ.

ಕುಕ್ಕುಂದೂರು ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲಾ ಸಹಾಯಾರ್ಥವಾಗಿ ಸೊಡ್ತಿ.

ಸೋಡ್ತಿ ತೆಗೆಯುವ ತಾ 16-2-'35.

ಸುಸಂದರ್ಭವನ್ನು ಕಳಕೊಳ್ಳಬೇಡಿರಿ ಅದೃಷ್ಟ ಪರೀಕ್ಷೆಗೆ ಒಳ್ಳೆ ಸಮಯ, ಸದುದ್ದೇಶಕ್ಕೆ ಸಹಾಯಮಾಡಿ ಪುಣ್ಯ ಭಾಗಿಗಳಾಗಿರಿ

ಉತ್ಸಾಹಿಗಳಾದ ಏಜಂಟರಿಗೆ ಧಾರಾಳ ಕಮಿಶನ್ ಇದೆ.

ವಿಶೇಷ ಮಾಹಿತಿಗೆ ಈ ವಿಳಾಸಕ್ಕೆ ಬರೆಯಿರಿ.—

ಗೌರವ ಕಾರ್ಯದರ್ಶಿ,

ದಿ ಗ್ರೇಂಡ್ ರೇಫಲ್ ಆಫೀಸು,

ಕಾರ್ಕಳ, ದ. ಕ.

ಪ್ರಕಟಣೆ

ಮಂಗಳೂರು ಶಹರ ಬೋಳೂರು ಬೊಕ್ಕಪಟ್ಣದಲ್ಲಿ ಇರುವ ಅಂಗರ ಮರಕಾಲರ ಮಗ ಪರದೇಸಿ ಮರಕಾಲನು ಈ ಮೂಲಕ ಪ್ರಕಟಿಸುವುದೇನೆಂದರೆ—ನಾನು ಮೈನರ್ ನಾಗಿರುವಾಗ್ಗೆ ನನ್ನ ತಂದೆಯವರು ನನಗೂ ನನ್ನ ಅಣ್ಣ 1ನೇ ಕೊರಗ ಮರಕಾಲನಿಗೂ 2ನೇ ಬಾಬು ಮರಕಾಲನಿಗೂ 3ನೇ ಮಲ್ಲು ಹೆಂಗ್ಸಿಗೂ 4ನೇ ಮೈನರ್ ಪರದೇಸಿಯಾದ ನನಗೂ ಕೂಡಾ 4 ಜನರಿಗೆ ಕೊಟ್ಟ ಬೋಳೂರು ಬೊಕ್ಕಪಟ್ಣ ಗ್ರಾಮದ ನೇ ಆಸ್ತಿಯನ್ನು ಮ। ರಾ। ರಾ। ಕುಡುಪಿ ಆನಂದ ರಾಯರವರಿಗೆ ಹಂಚು ಕಾರ್ಖಾನೆಯ ಸಂಬಂಧ ಮಾರಿ ಬಂದ ಆ ಐವಜಿನಲ್ಲಿ ಬೋಳೂರು ಬೊಕ್ಕಪಟ್ಣದಲ್ಲಿ ಕಾಲಿ ಸ್ಥಳವನ್ನು ಕ್ರಯಕ್ಕೆ ಪಡೆದು ಅದರಲ್ಲಿ T S ನಂಬ್ರ 428 ಮತ್ತು 429 ಮನೆಯನ್ನು ಕಟ್ಟಿಸಿರುತ್ತಾರೆ ಅಪ್ರಮಾಣ ಇರಾದೆಯಿಂದ ಸದ್ರಿ ಆಸ್ತಿಯನು ಆ ಮೂರು ಜನರು ಮಾತ್ರ ಒಳ್ಳೆಯಾಗಿ ಸ್ವಂತಕ್ಕೆ ಉಪಯೋಗಿಸಿ ಪರಂಧೀನ ಮಾಡುವ ದುರಾಲೋಚನೆಯಲ್ಲಿರುತ್ತಾರೆ ಈ ಸಂಗತಿಯು ನಾನು ಹಿಸೆ ಹಕ್ಕುದಾರನಾಗಿ ಈಗ ನನಗೆ ಸುಮಾರು 26 ವರುಷ ಪ್ರಾಯ ಬಂದಿರುವುದರಿಂದ ಸದ್ರಿ ಆಸ್ತಿಯನ್ನು ನನ್ನ ಒಪ್ಪಿಗೆ ದಸ್ಕತು ಇಲ್ಲದೆ ಯಾವ ವಿಧದಿಂದಲೂ ಪೊದಲಾಗಲೀ ಯಾ ಇನ್ನು ಮುಂದೆ ಯಾಗಲೀ ಯಾರಿಗೂ ಅಡವು ಕ್ರಯ ದಾನ ಪತ್ರ ವ್ಯವಹಾರ ಚೀಟು ಚಾರ್ಜು ಇಂದ ಮಂಟ್ ಬೋಂದು ಪಗ್ಯೆರೆ ಪರಾಧೀನ ಮಾಡಿದರೆ ಸಿಂಧು ಆಗತಕ್ಕದ್ದಲ್ಲ ಈ ಸಂಗತಿ ಪಬ್ಲಿಕ್ಕಾಗಿ ಈ ಮೂಲಕ ಪ್ರಕಟನೆ ಮಾಡಿರುತ್ತೇನೆ ಇದಕ್ಕೆ ವಿರೋಧವಾಗಿ ಸದ್ರಿ ಆಸ್ತಿಯನ್ನು ಪಡಕೊಂಡವರು ಮಾಡಿದವರು ನನ್ನ ಸಕಲ ನಷ್ಟಕ್ಕೆ ವಾ ಕ್ರಿಮಿನಲ್ ಶಿವಿಲ್ ವ್ಯವಹರಣೆಗಳಿಗೆ ಬದ್ಧರಾಗಿರುತ್ತಾರೆ ತಿಳಿದಿರುವದು ||| ಈ ಮೂರು ಗೆರೆ ಎಡಕ್ಕೆ ಹೆಬ್ಬೆಟ್ಟಿನ ಗುರ್ತು

ಪರದೇಶಿ ಮರಕಾಲನ ರುಜು.

ತಾ 22—11—1934

ನೋಟೀಸು

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

ಕ್ರಮ ನಂಬ್ರ 394/1934

ಸೀಮಣ್ಣ ನಾಯ್ಕ— ವಾದಿ

ಮತು

ಚಂದ್ರರಾಜ ಹೆಗಡೆ—ಪ್ರತಿವಾದಿ

ಇವರೊಳಗೆ—

ಪ್ರತಿವಾದಿ ಚಂದ್ರರಾಜ ಹೆಗಡೆ ಬಾಬ್ತು ಬಟ್ಟು ನೇಮಿರಾಜ ಹೆಗಡೆರ ಅಳಿಯ ಕಾರ್ಕಳ ತಾಲೂಕು ಪದವರು ಗ್ರಾಮದ [illegible] ಇವರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ಮೇಲ್ಕಾಣಿಸಿರುವ ಕೋರ್ಟಿನಲ್ಲಿ ಮೇಲೆ ಹೆಸರು ಕಾಣಿಸಿರುವ ವಾದಿಯು ದಾಖಲು ಮಾಡಿರುವ ಸದ್ರಿ ದಾವೆಯು ತಾ 19 12-34ಕ್ಕೆ ತೀರ್ಮಾನಕ್ಕೆ ಇಡಲ್ಪಟ್ಟಾಗಿರುತ್ತದೆ ಆದಕಾರಣ ಆ ದಿನ ಬೆಳಿಗ್ಗೆ 11 ಗಂಟೆಗೆ ಅವನು ಸ್ವತಹಾ ಅಥವಾ ವಕೀಲರ ಮುಖಾಂತರ ಈ ಕೋರ್ಟಿಗೆ ಹಾಜರಾಗಿ ಆತನ ಆಕ್ಷೇಪಣೆಗಳು ಯಾ ಉದಾಹರಣೆಯಿರುವುದಾದರೆ ಜ್ಯಾಹೀರು ಮಾಡಬಹುದೆಂತ ಈ ಮೂಲಕ ತಿಳಿಸೋಣಾಗುತ್ತದೆ ಈ ಮುಂಚೆ ಹಲವು ಸರ್ತಿ ಮಾಡಿಸಿದ ನೋಟೀಸುಗಳಿಗೆ ಆತನು ಸಿಕ್ಕದೇ ಇರುವುದರಿಂದ ಕೋರ್ಟು ಹುಕುಂ ಪ್ರಕಾರ ಈ ನೋಟೀಸನ್ನು ಈ ಪತ್ರದಲ್ಲಿ ಪ್ರಕಟಪಡಿಸಿರುವದಾಗಿರುತ್ತದೆ

ಕಾರ್ಕಳ, 27—11 34 } ಇಡ್ಯಡ ವಾಸುದೇವಯ್ಯ, ಬಿ ಎ ಬಿ ಎಲ್
ವಾದಿ ಕಡೆ ವಕೀಲ

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S C S No 113/1928

S E P. No 338/1934.

ಕೃಷ್ಣ ಸೆಟ್ಟಿ—ವಾದಿ, ಅರ್ಜಿದಾರ

ಮತ್ತು

ನಕ್ರ ಸೆಟ್ಟಿ ಕೂಡಾ 4 ಜನರು—ಎದ್ರಿರು

ಇವರೊಳಗೆ—

ಮೇಲ್ಕಂಡ ಅಮಲ್ದಾರಿಯು 1ನೇ ಎದ್ರಿ ಮಂಗಳೂರು ತಾಲ್ಲೂಕ ಕಸಿಗೆರೆ ಗ್ರಾಮದಲ್ಲಿ ರುವ ಕೋಮು ಹೆಂಗ್ಸಿನ ಮಗ ನಕ್ರ ಸೆಟ್ಟರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ನೀವು ಮೇಲ್ಕಂಡ ಅಮಲ್ದಾರಿಯು ಡಿಕ್ರಿದಕ್ಕೆ [illegible] ತೋಮು ಹೆಂಗ್ಸು ಕೂಡಾ 8 ಜನರಿಗೆ ಮಾಡಿಕೊಟ್ಟ ಸ್ಥಿರಾಸ್ತಿ ಖಂಡಿತ ಕ್ರಯ ಚೀಟಿನಲ್ಲಿ ಅರ್ಜಿದಾರರಿಗೆ ಸಲ್ಲತಕ್ಕ ಬೇಕಾಗಿ ಅಮಾನತು ಇಟ್ಟ ರೂ 100/- ಜಪ್ತಿಗೆ ಅಪೇಕ್ಷಿಸಿದ ಸದ್ರಿ ಅಮಲ್ದಾರಿಯು ತಾ 20—12—'34ಕ್ಕೆ ಇಟ್ಟಿರುವುದರಿಂದ ನಿಮ್ಮ ಆಕ್ಷೇಪಗಳೇನಾದರೂ ಇದ್ದರೆ ಮೇಲ್ಕಂಡ ತಾರೀಕಿನಲ್ಲಿ ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 11 ಘಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅಮಲ್ದಾರಿಯು ತೀರ್ಮಾನಿಸಲ್ಪಡುವುದು ತಿಳಿದಿರಲಿ

ಕಾರ್ಕಳ, 27—11—34 } **S. N. Shetty,**
Pleader for Petitioner

Notice.

In the Court of the District Judge of South Kanara

O. P No 393/1934.

Between —

D Narayana—Petitioner.

and

Sheena & others—Respondents

In the matter of the estate of the deceased Luxumana

Notice is hereby given that an application has been made to the above Court praying for an order to prepare an Inventory of all the movables, jewels and cash belonging to the deceased Luxumana and a Curator may be appointed to take possession of the said assets for their safe custody and for costs etc etc and the said petition is posted to 6—12—1934 for hearing before this Court at 11 A M Any person interested may be present on the said date and file objections. On failure of which the petition will be decided on the merits

Mangalore, 24—11—'34 } G Som sheker Rao
Vakil for Petitioner

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter —

Modern Hindu Hotel,
Calicut, 17—6 — 1934

Dear Sir,

We wish to thank you for all that you did for us to make our stay at Mangalore comfortable It is extremely nice of you to have looked after us as you did.

Yours faithfully,

(Sd) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ — ಮಂಗಳೂರಿಗೆ

ಮಂಗಳೂರಿನಿಂದ — ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ಸಾಗಿಸಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನು ಕೊಡುತ್ತೇವೆ.

ಚಿಕ್ಕಮಗಳೂರಿನಿಂದ— ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
— ಮೂಡಗೆರೆಗೆ, ಸಕಲೇಶಪುರಕ್ಕೆ.
— ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ
— ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿರಾಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ಬರ್ಕಲಿ (ಕಲಿಫೋರ್ನಿಯಾ)ದಲ್ಲಿ ಪ್ರಾಥಮಿಕ ಶಿಕ್ಷಣ.

ಲೇಖಕರು—ಶ್ರೀ ದೇವೇಂದ್ರ ಚಂದ್ರದಾಸಗುಪ್ತ ಎಂ. ಎ. ಡಿ. (ಕಲಿಫೋರ್ನಿಯಾ)

ಅಮೆರಿಕ ದೇಶಗಳಲ್ಲಿನ ಪ್ರಾಥಮಿಕ ಶಿಕ್ಷಣ ಕ್ರಮದ ಸಂಕ್ಷಿಪ್ತ ಸ್ವರೂಪವನ್ನು ಕಲಿಫೋರ್ನಿಯದಲ್ಲಿನ ಒಬ್ಬ ಲೇಖಕರ ಲೇಖನದಿಂದ ಆರಿಸಿ ಇಲ್ಲಿ ಕೊಡಲಾಗಿದೆ. ದಕ್ಷಿಣ ಕನ್ನಡದಲ್ಲಿನ ಪ್ರಾಥಮಿಕ ಶಿಕ್ಷಣ ಕ್ರಮವನ್ನೂ ಬರ್ಕಲಿಯ ಶಿಕ್ಷಣ ಕ್ರಮವನ್ನೂ ತುಲನೆ ಮಾಡಿ ನೋಡಿದರೆ, ನಮ್ಮ ಶಿಕ್ಷಣವು ಎಷ್ಟು ಹಿಂದುಳಿದಿರುವುದು ಭಾಸವಾಗುವುದು. ಪ್ರಾಥಮಿಕ ಉಪಾಧ್ಯಾಯರುಗಳಿಗೆ ಈ ಲೇಖನವು ಪ್ರಯೋಜನಕಾರಿಯಾಗಬಹುದು. ಸಂ.

The American schools, whether Elementary or High are a community within a larger community, and the school curriculam reflects the vital needs of the community and it is constantly changing with the moving needs of the time and society, whereas in India the school curriculam is static...!

೧

ಬರ್ಕಲಿ ಎಂಬುದು, ಕಲಿಫೋರ್ನಿಯಾದ ಪ್ರಖ್ಯಾತ ವಿಶ್ವವಿದ್ಯಾಲಯದ ಕೇಂದ್ರ. ಬರ್ಕಲಿಯ ಸಾರ್ವಜನಿಕ ಶಾಲೆಗಳ ಆಡಳಿತವು ಐದು ಜನ ಸದಸ್ಯರ 'ಬೋರ್ಡ್ ಒಫ್ ಎಡ್ಯುಕೇಶನ್' ಎಂಬವರ ಕೈಕೆಳಗಿದೆ. ಈ ಸದಸ್ಯರಲ್ಲಿ ನಾಲ್ಕರನ್ನು ಸಾರ್ವಜನಿಕರೇ ತಮ್ಮ ವೋಟು ಮೂಲಕ ಚುನಾಯಿಸಿದರು. ಐದನೆಯವರು ಬರ್ಕಲಿಯ ಮೆಯರರೇ ಆಗಿರುತ್ತಾರೆ. ಇವರು ತನ್ನ ಆಫೀಸು ಅವಧಿಯವರೆಗೆ ಈ ಸ್ಥಾನದಲ್ಲಿರುವರು. ಸಂಯುಕ್ತ ಅಮೇರಿಕಾದಲ್ಲಿ ನೂತನ ಸೂತ್ರಗಳ ಮೇಲೆ ಶಾಲಾ ಕ್ರಮಗಳನ್ನಿಡಲು ತೊಡಗಿದುದರಲ್ಲಿ ಬರ್ಕಲಿ ಪಟ್ಟಣವೇ ಪ್ರಥಮದ್ದು. ಮೊದಲಿನ ಆರು ಗ್ರೇಡುಗಳನ್ನು ಪ್ರಾಥಮಿಕ ಶಾಲೆಗಳೆಂದು ವರ್ಗೀಕರಿಸಿರುತ್ತಾರೆ. ೭ನೇ ೮ನೇ ಮತ್ತು ೯ನೇ ತರಗತಿಗಳನ್ನು ಜೂನಿಯರ್ ಹೈಸ್ಕೂಲುಗಳೆಂದು ವರ್ಗೀಕರಿಸಿರುವರು. ೧೦, ೧೧ ಮತ್ತು ೧೨ನೇ ತರಗತಿಗಳನ್ನು ಜೂನಿಯರ್ ಹೈಸ್ಕೂಲುಗಳೆಂದು ಪ್ರತ್ಯೇಕಿಸಿಟ್ಟಿರುವರು. ಕಾಲ ಗಣನೆಯ ದೃಷ್ಟಿಯಿಂದವಲೋಕಿಸಿದರೆ ಅಮೇರಿಕನ್ ಹೈಸ್ಕೂಲ್‌ಗಳು ಹೆಚ್ಚಿನ ಮೇಲ್ತರಗತಿಗಳದ್ದಾದರೂ—ನಮ್ಮ ಇಂಟರ್‌ಮಿಡಿಯೆಟ್ ಕೋಲೇಜ್‌ಗಳಿಗೆ ಸರಿ ಸಮಾನವಾದವುಗಳೆಂದು ಸ್ಪಷ್ಟವಾಗಿ ತಿಳಿದು ಬರುವುದು. ಬರ್ಕಲಿಯಲ್ಲಲ್ಲದೆ ಸಂಯುಕ್ತ ಅಮೇರಿಕದ ಬಾಲೋದ್ಯಾನ (Kindergarten)ಗಳ ಮೊದಲುಗೊಂಡು ವಿಶ್ವವಿದ್ಯಾಲಯಗಳೊಳಗಿನ ಶಾಲೆಗಳ ಅದ್ವಿತೀಯ ಗುಣವೆಂದರೆ – ಸಂಸ್ಥಾನದ ಪ್ರಜೆಗಳಿಗೆಲ್ಲ ಅದು ಧರ್ಮಾರ್ಥ ವಿದ್ಯಾದಾನ ಮಾಡುವುದಲ್ಲದೆ,—ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕವಾಗಿ, ಓಕ್‌ಲೇಂಡ್ ಎಂಬಲ್ಲಿ—ಮಿಲ್ಸ್ ಕೋಲೇಜ್ ಎಂಬುದಿದೆ—ಇದರಲ್ಲಿ ಬಾಲಕಬಾಲಿಕೆಯರೂ ಕೂಡಿ ಕಲಿಯುತ್ತಾರೆ.

ಬರ್ಕಲಿ ಪಬ್ಲಿಕ್ ಸ್ಕೂಲಿನ ನಿಯಮಾವಳಿಯಂತೆ ಬಾಲೋದ್ಯಾನ ಖಾತೆಗೆ ಐದು ವರ್ಷ ಪ್ರಾಯದ ಬಾಲಕ ಬಾಲಿಕೆಯರನ್ನು ಸೇರಿಸಿಕೊಳ್ಳುತ್ತಾರೆ. ಈ ಮಕ್ಕಳು ಅರ್ಧ ದಿನ ಶಾಲೆಯಲ್ಲಿದ್ದು ಶಿಷ್ಟಸಂಪ್ರದಾಯ, ನರ್ತನ, ಗಾನ, ವಾದ್ಯ ಮೊದಲಾದ ಅಂಗ ಸಾಧನೆಗಳಲ್ಲಿ ತರಬೇತು ಹೊಂದುತ್ತಾರೆ. ಕೆಲವು ವೇಳೆ ಬಾಲೋದ್ಯಾನದಲ್ಲಿ ಭೋಜನ ಸಮಾರಂಭವು ನಡೆಯುತ್ತದೆ. ಅಲ್ಲಿ, ಮಕ್ಕಳಿಗೆ ಭೋಜನ ಕ್ರಮಗಳನ್ನು ಕಲಿಸುತ್ತಾರೆ. ತಮಗೆ ಯಾವುದನ್ನು ಚಿತ್ರಿಸಬೇಕೆಂದಿದೆಯೋ ಅದರ ಚಿತ್ರವನ್ನು ಮಕ್ಕಳು ಬಿಡಿಸುತ್ತಾರೆ. ಒಂದು ಮಾತಿನಿಂದ ಹೇಳುವುದಾದರೆ,—ಕಿಂಡರ್ ಗಾರ್ಟನ್ ಶಾಲೆಗಳಲ್ಲಿ ಪುಸ್ತಕ ಜ್ಞಾನದ ಉಪದೇಶವು ಕೊಡಲ್ಪಡದೆ, ಸಾಮಾಜಿಕ, ಆಧ್ಯಾತ್ಮಿಕ ಮತ್ತು ದೈಹಿಕ ಸಂಬಂಧವಾದ ನೀತಿನಿಯಮಗಳನ್ನುಪದೇಶಿಸಲಾಗುತ್ತದೆ. ಬೆಳಗ್ಗಿನ ಒಂದು ಪಂಗಡವು ಶಾಲೆಯಿಂದ ಹೊರಗಾದೊಡನೆ ಮಧ್ಯಾಹ್ನದ ಇನ್ನೊಂದು ಪಂಗಡವು ಶಾಲೆಗೆ ಪ್ರವೇಶಿಸುತ್ತದೆ.

ಬರ್ಕಲಿಯಲ್ಲಿನ Thousand Oak Schoolಗೆ ಸಂಬಂಧಿಸಿಕೊಂಡು ಹದಿನೇಳು ಪ್ರಾಥಮಿಕ ಶಾಲೆಗಳೂ, ಹದಿನಾಲ್ಕು ಸ್ಪೆಶಲ್ ಶಾಲೆಗಳೂ, ಒಂದು ಸೂರ್ಯರಶ್ಮಿ ಶಾಲೆಯೂ ಇದೆ. ಸಂಯುಕ್ತ ಅಮೇರಿಕದ ಎಲ್ಲಾ ಎಲಿಮೆಂಟರಿ ಶಾಲೆಗಳ ಉದ್ದೇಶದಂತೆ ಬರ್ಕಲೆಯ ಪ್ರಾಥಮಿಕ ಶಾಲೆಗಳಲ್ಲೂ ಜ್ಞಾನವರ್ಧನೆಗೆ ಸಾಧಕವಾದ ವಿಷಯಗಳನ್ನು ಮಾತ್ರ ಕಲಿಸುವರು. ಅದರೊಡನೆ, ಆರೋಗ್ಯ ಮತ್ತು ನಾಗರಿಕರ ಕರ್ತವ್ಯ ಜ್ಞಾನಗಳನ್ನೂ ಉಪದೇಶಿಸಲಾಗುತ್ತದೆ. ಚುಟುಕಾಗಿ ಹೇಳುವುದಾದರೆ, ಅಮೇರಿಕದ ಪ್ರಾಥಮಿಕ ಶಾಲಾಧಿಕಾರಿಗಳ ಮುಖ್ಯೋದ್ದೇಶವು ಬೆಳೆಯುತ್ತಿರುವ ಬಾಲಕರ ಪರಿಪೂರ್ಣ ಜ್ಞಾನವರ್ಧನೆಯಾಗಿರುತ್ತದೆ. ಈ ಶಾಲಾಧಿಕಾರಿಗಳು ಬಾಲಕ ಬಾಲಿಕೆಯರನ್ನು ಬೆಳೆಯುವ ಮಕ್ಕಳೆಂಬ ಒಂದೇ ಭಾವನೆಯಿಂದ ಸಂರಕ್ಷಿಸಿ, ಅವರನ್ನು ಪ್ರಗತಿ ಮಾರ್ಗದಲ್ಲಿ ನಡೆಸಿ ಅವರ ಅದೃಶ್ಯ ಸ್ವಭಾವವನ್ನು ರೂಪುಗೊಳಿಸುವುದರಲ್ಲಿ ತೊಡಗಿರುತ್ತಾರೆ.

ಈ ಮಕ್ಕಳ ಮಾನಸಿಕ ಪ್ರಗತಿಯನ್ನು ಪರಿಶೋಧಿಸುವದಕ್ಕಾಗಿ ಬರ್ಕಲಿ ಬ್ಯೂರೊ ಒಫ್ ರಿಸರ್ಚ್ ಎಂಡ್ ಗೈಡೆನ್ಸ್ ಸಂಘದವರು ನಾಲ್ಕನೇ ಆರನೇ ಮತ್ತು ಒಂಭತ್ತನೇ ತರಗತಿಗಳಲ್ಲಿ ವಾರ್ಷಿಕ ಪರೀಕ್ಷೆಗಳನ್ನೇರ್ಪಡಿಸುವರು. ಸೀನಿಯರ್ ಹೈಸ್ಕೂಲ್ ವಿದ್ಯಾರ್ಥಿಗಳಿಗೂ ಈ ರೀತಿಯ ಪರೀಕ್ಷೆಯಿದೆ. ರಿಸರ್ಚ್ ಬ್ಯೂರೋದ ಅಧಿಕಾರಿಗಳು, ಅಪೇಕ್ಷಿಸಿದಾಗ ಈ ಪರೀಕ್ಷೆಗಳನ್ನೇರ್ಪಡಿಸುವ ಕ್ರಮವೂ ಇದೆ. ಆದರೆ ದುರ್ದೈವಶಾತ್,—ಹಿಂದೀಯ ಶಾಲಾಧಿಕಾರಿಗಳು ಮಕ್ಕಳ ಮಾನಸಿಕ ಪ್ರಗತಿಯ ದೃಷ್ಟಿಯಿಂದ ಇಂತಹ ಪರೀಕ್ಷೆಗಳನ್ನು ಏರ್ಪಡಿಸುವುದಿಲ್ಲ. ಬದಲಿಗೆ, ಒಂದೇ ಕ್ಲಾಸಿನಲ್ಲಿ ಕುಳಿತು ಅವರು ಶಿಕ್ಷಣ ಹೊಂದುವಂತೆ ಮಾಡಲಾಗುತ್ತದೆ.

ಲಂಕೆಶಯರಿಗೆ ಜಾಪಾನಿನ ಯಂತ್ರಗಳು.

'ಬ್ರಿಟಿಷರೂ ಜಾಪಾನಿನಿಂದ ಯಂತ್ರಗಳನ್ನು ಕೊಂಡುಕೊಂಡರೇ?' ಎಂದು ಜನರೆಲ್ಲ ಸೋಜಿಗಪಡುವಂತೆ, ಸಂಯುಕ್ತ ಅಮೇರಿಕದ "ವಾಶಿಂಗ್ಟನ್ ನಗರದಲ್ಲಿ, ಜಾಪಾನಿನ ರಾಯಭಾರಿಯು,—'ಲಂಕೆಶಯರಿನವರು ಜಾಪಾನಿನಿಂದ ೧ ಲಕ್ಷ ಪವನು ಬೆಲೆಯಾಗುವ ಯಂತ್ರಗಳನ್ನು ಕೊಂಡುಕೊಂಡರು!' ಎಂದು ಅಭಿಮಾನಪುರಸ್ಸರವಾಗಿ ಸಾರಿದರು! ಈ ವಾರ್ತೆಯು ಅಮೇರಿಕ ಮತ್ತು ಬ್ರಿಟಿಷ್ ಗಿರಣಿಮಾಲಿಕರನ್ನು ಬೆರಗುಗೊಳಿಸಿದೆ.

ಜಾಪಾನಿನ ಯಂತ್ರಗಳ ಉತ್ಕೃಷ್ಟತೆಯು ಇದರಿಂದ ವ್ಯಕ್ತವಾಗುವುದಾದರೂ ಬ್ರಿಟಿಷರು ಪೂರ್ಣವಾಗಿ ಅದನ್ನೊಪ್ಪದೆ, 'ಇದು ಪರೀಕ್ಷಾರ್ಥ ಕೊಂಡುಕೊಳ್ಳಲಾದುದು. ಲಂಕೆಶಯರು /ಇತರ ಕಡೆಗಳ ಯಂತ್ರಗಳನ್ನೂ ಕೊಂಡುಕೊಂಡಿದೆ'ಯೆಂಬ ಸಮಾಧಾನವಾಕ್ಯನ್ನಾಡಿರುವರು.

ಇದಕ್ಕೆ ಉತ್ತರವಾಗಿಯೇ ಎಂಬಂತೆ, ಇದೇ ಸಮಯದಲ್ಲಿ, ಜಾಪಾನಿನವರು ತಮ್ಮ ಇತ್ತೀಚೆಗಿನ ಹೊಸ ಮಾದರಿ ಅಂವೆಗಳ ಬಟ್ಟೆಗಳನ್ನು ಹಿಡಿದುಕೊಂಡು, ಮ್ಯಾಂಚೆಸ್ಟರ್ ನಗರಕ್ಕೆ ದಂಡೆತ್ತಿ ಬಂದಿರುವರು.

ಅಲ್ಲೊಂದು ಅರಿವೆಗಳ ಪ್ರದರ್ಶನವೂ ನಡೆಯುತ್ತಿದೆ. ಅದರಲ್ಲಿ ಜಾಪಾನ್, ಜರ್ಮನಿ ಮತ್ತು ಸ್ವಿಝರ್ಲೆಂಡುಗಳ ಉತ್ಕೃಷ್ಟ ಬಟ್ಟೆಗಳು ಪ್ರದರ್ಶಿತವಾಗಿವೆಯೆಂದೂ, ಲಂಕೆಶಯರಿನವರ ಪ್ರದರ್ಶನ ವಿಭಾಗವು ಅಷ್ಟೊಂದು ಆಕರ್ಷಕವಾಗಿಲ್ಲವೆಂದೂ ತಿಳಿದುಬಂದಿದೆ.

(೭ನೆಯ ಪುಟದಿಂದ ಮುಂದುವರಿದುದು.)

ಗೃಹಸ್ಥ.

ಕಲಿಯುಗದಲ್ಲಿ ಈ ಧರ್ಮವು ಪುರುಷನಿಗೆ 14 ವರುಷಕ್ಕೂ, ಸ್ತ್ರೀಯರಲ್ಲಿ 5 ವರುಷಕ್ಕಾದರೂ ನಡೆಯಬೇಕು. ಅನಂತರ ಆಗುವ ವಿವಾಹಗಳು ರಾಕ್ಷಸ ವಿವಾಹದಂತೆಯೇ ಸರಿ. ಈ ನಿಯಮ ಮೀರುವವನಿಗೆ ತಪ್ಪಾದ 1 ದಿನಕ್ಕೆ ಸರಿಯಾಗಿ, ಒಂದು ವರುಷದಂತೆ ನರಕವಾಸವಿದೆ. ಗೃಹಸ್ಥಧರ್ಮದ ಇತರ ಜವಾಬುದಾರಿಗಳು ಕಳಚಲ್ಪಟ್ಟಿವೆ. ಅವನು—ಗೋವುಗಳೆಷ್ಟು ಅವಿಲ್ಲದಲ್ಲಿ ಬ್ರಾಹ್ಮಣರನ್ನು ಆಗಾಗ ಪರಮಾನ್ನದಿಂದ ತೃಪ್ತಿಗೊಳಿಸಿದರಾಯಿತು.

ವಾನಪ್ರಸ್ಥ.

ಕಲಿಯುಗದಲ್ಲಿ ಯಾವತ್ತು ಕಾಡುಗಳು ಫಾರೆಸ್ಟ ಡಿಪಾರ್ಟ್‌ಮೆಂಟಿಗೆ ಸೇರುವ ನಿಮಿತ್ತ ಈ ಆಶ್ರಮವನ್ನು ತೆಗೆದುಹಾಕಿದೆ. ಈ ದೋಷವು ಅರಸನಿಗೆ ಅಂಟುವುದು. ಅವನು ಪ್ರತ್ಯಕ್ಷ ದೇವತೆಯಾದುದರಿಂದ ಅವನಲ್ಲಿ ಅದು ಸುಟ್ಟು ಬೂದಿಯಾಗುವುದು.

ಸನ್ಯಾಸ.

ಇದರಲ್ಲಿ ಮಠದ ಸನ್ಯಾಸ, ಬೋಳು ಸನ್ಯಾಸವೆಂದು ಎರಡು ರೀತಿಯಿದೆ. ಮಠದ ಸನ್ಯಾಸಕ್ಕೆ ಸಮಾಜದ ಜವಾಬುದಾರಿಯು ಹೆಚ್ಚು. ಇವರನ್ನು ಆರಿಸುವಾಗ ಬಲು ಎಚ್ಚರಬೇಕು. 7½ ವರುಷಕ್ಕಿಂತ ಹೆಚ್ಚಿನ ಬ್ರಹ್ಮಚಾರಿಗಳು ಅಪರಿಗ್ರಹರು. ಅವರು ರಕ್ತ ಸಂಬಂಧಿಗಳಾದರೆ 16 ವರುಷದ ತನಕವು ಈ ರಿಯಾಯತಿಯು ಮುಂದರಿಯುವುದು.

ಅವನ ಯೋಗ್ಯತೆ.

ಹೆಚ್ಚಿನ ಬಿಡುವಿಲ್ಲದೆ ಅವನು ಶಾಸ್ತ್ರವನ್ನು ನುಂಗಲು ಕಲಿಯಬೇಕು,

ಊಟಕಾಲದಲ್ಲಿ ಕನಿಷ್ಟ 6 ರಾತ್ಲು ಕ್ಷೀರ, ಮೂರು ಸೇರು ಪರಮಾನ್ನವನ್ನಾದರೂ ಹೊಡೆಯಲು ಶಕ್ತನಾಗಿರಬೇಕು.

ಮುಂದೆ ಅಧಿಕಾರಕ್ಕೆ ಬಂದ ಬಳಿಕ—ರೇಶ್ಮೆ, ಜರತಾರಿಗಳ ವಿನಹ ಇತರ ಬಟ್ಟೆಯುಡಬಾರದು.

ಬೋಳು ಸನ್ಯಾಸಿಗಳು ಯಾರೂ ಆಗಬಹುದು. ಬಹುಮಟ್ಟಿಗೆ ಸಂಸಾರದಿಂದ ಪೀಡಿಸಲ್ಪಟ್ಟವರೂ, ಪತ್ನಿಯಿಂದ ತಿರಸ್ಕರಿಸಲ್ಪಟ್ಟವರೂ ಇದಕ್ಕೆ ಯೋಗ್ಯರು. ಇವರು ದಿನವೊಂದರ ಕನಿಷ್ಟ ನಾಲ್ಕು ತೊಲೆ ಭಂಗಿಯನ್ನಾದರೂ ಎಳೆಯಬೇಕು.. ಕಳವು, ಅಂತಃಗ್ರಹ—ಮೊದಲಾದ ನಿಯಮಗಳು ಇವರಿಗಿಲ್ಲ. ಇಂಥವರು ತಮ್ಮ ಪ್ರಭಾವದಿಂದ ತಾವು ಹೋದ ಊರಿನ ಕನ್ನಿಕೆಯರ ಭಕ್ತಿಯನ್ನು, ಗಳಿಸಿ ಅವರಿಂದ ದೂಡವೇಡಾ ಕಾಣಿಕೆಗಳನ್ನು ಕೊಂಡು, ಅವರಿಂದ ಅಭಿಷೇಕ ಪೂಜೆಗಳನ್ನು ಗಳಿಸಿಕೊಂಡರೆಂದರೆ ಪರಮಹಂಸರಾಗುವರು. ಇಂಥವರ ಯೋಗ್ಯತೆಯ ವಿಷಯ ಅಂತರಂಗವಾಗಿಯಾಗಲೀ ಬಹಿರಂಗವಾಗಿಯಾಗಲೀ ಆಕ್ಷೇಪಿಸುವವನು 14 ವರುಷ (ಬ್ರಹ್ಮನ) ನರಕವಾಸಕ್ಕೆ ಗುರಿಯಾಗುವನು.

ಮನುಷ್ಯನು ಈ ಎಲ್ಲಾ ಆಶ್ರಮಗಳನ್ನು ವಹಿಸಿ ಸತ್ತ ಬಳಿಕ—ಅವನ ಭಾವೀಕಾಲದ ಪಯಣ ಸೌಕರ್ಯ ಮೊದಲಾದುವು—ಅವನ ಮಕ್ಕಳಿಂದ ವಹಿಸಲ್ಪಡಬೇಕು. ಆದುದರಿಂದ ಮಕ್ಕಳಿಲ್ಲದೆ ಸತ್ತವನು ಮೇಲೆ ತಲೆಯೆತ್ತಲು ಸಾಧ್ಯವಿಲ್ಲ. ಈ ಕೊರತೆಯನ್ನು ತಪ್ಪಿಸಲು ತಲಾ ಒಂದರ 16 ಗಂಡುಮಕ್ಕಳನ್ನಾದರೂ (ಹೆಣ್ಣು ಕೂಸುಗಳು ಮಕ್ಕಳೆಂದು ಗಣಿಸಲ್ಪಡುವುದಿಲ್ಲ) ಬಿಟ್ಟೇ ಮುಂದಿನ ದಾರಿ ಹಿಡಿಯಬೇಕು.

The Popular Insurance Company, Ltd.

Head Office:—MANGALORE, S. India,

The Pioneer Life Office of the West Coast.

Wanted influential District agents in Unrepresented areas.

A few Press opinions.

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Company can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds.

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the fact of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B. Vittal Rau, who has developed in him a great deal of life Insurance sense..........

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ- (ನಿಶ್ಶಕ್ತಿಗೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ-(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ-(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ-(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ-(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ-(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

ಶುದ್ಧ ಸ್ವದೇಶಿ! ಸ್ವದೇಶಿ ಭಾಂಡವಾಳದಿಂದ ಸ್ವದೇಶಿಯರಿಗಾಗಿ!

ಗಂಧದ ಸಾಬೂನು (ಸೆಂಡಲ್‌ವುಡ್) ನಿರ್ವಿವಾದವಾಗಿ ಅತ್ಯುತ್ತಮವಾದುದು!

ತಾಜಾ ಗಂಧದ ತೈಲ ಮೊದಲಾದ ವನಸ್ಪತಿ ತೈಲಗಳಿಂದಲೇ ತಯಾರಿಸಿದ ಅತ್ಯುತ್ತಮ ಸಾಬೂನು.
ಮೈಸೂರು ಸರಕಾರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ದೊರೆವ ಆ ಉತ್ತಮ ಎಣ್ಣೆಯ ಸ್ನಿಗ್ಧ ಸುಗಂಧವುಳ್ಳದ್ದು.

ಪ್ರಾಣಿಜನ್ಯ ಚರ್ಬಿಯ ಸ್ಪರ್ಶವೂ ಇಲ್ಲದ

ಮಲಬಾರು ಸೋಪ್

ಮಲಬಾರು ಸೇಂಡಲ್ ವುಡ್

ದಿ ವೆಜಿಟೇಬಲ್ ಸೋಪ್ ವರ್ಕ್ಸ್, ಕಲ್ಲಿಕೋಟೆ.

ಪ್ರೊಪ್ರೈಟರ್:— ಸನ್ ಬೆಂಡ್ ಕೊಡಿಯ. ಖ್ಯಾತಿಯ ಸೇಟ್ ನಾಗಜೀ ಪುರುಷೋತ್ತಮ ಮತ್ತು ಕಂಪೆನಿ, ಕಲ್ಲಿಕೋಟೆ.

ಈ ಜಿಲ್ಲೆಗೆ ಪ್ರವರ್ತಕರು:— ರಾಘವೇಂದ್ರ ರಂಗ ಪೈ ರಥಬೀದಿ, ಮಂಗಳೂರು.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯ ಬಯಸುವವರಿಂದ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನೊಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಪ್ಪಾಲು ಹಾಸಲು ವಿನಹ ಕಳುಹಿಸಲ್ಪಡುವ ನಮ್ಮ
ಕಾಮಶಾಸ್ತ್ರವನ್ನೋದಿರಿ.
Agents:—Shah Company, MANGALORE.
„ Pearl & Sons, MANGALORE.
Atank Nigrah Pharmacy.
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು.

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ನಂಬರುಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ವ.

BUY ADVERTISED GOODS

A Recurring Pleasure *To Smoke them*

REGISTERED



TRADE MARK

Mangalore Darbar Beedies

Thousands enjoy them daily all over India.
When buying see our Trade Mark!

Regd. Trade Mark.

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!
ಯಾವ ಕೂಟದಲ್ಲೂ ಸಿಗರೇಟುಗಳ ಸ್ಥಾನವನ್ನು ಯೋಗ್ಯವೆನಿಸುವಂತೆ ನಡೆಸುವ ಬೀಡಿಗಳಿರುವುವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.
ಇವರಿಂದ ತಯಾರಿಸಲ್ಪಟ್ಟವುಗಳು.

ಡಾಕ್ಟರ ವಾಮನ ಗೋಪಾಳರವರ



ಬಿಡಿಡಾಯುಜ್ಞ
ಸಾರ್ಸಪರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ, ೬೦ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳಿದ್ದಾರೆ.
ಡಾ॥ ಗೌತಮ ರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.
ಡಾಕ್ಟರ್ ಗೌತಮ ರಾವ್ ಕೇಶವ ಅಂಡ್ ಸನ್ಸ್, ಠಾಕುರದ್ವಾರ, ಮುಂಬಯಿ ೨.
ಪ್ರತಿನಿಧಿ ... ಮಂಗಳೂರು,
[ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ.]

ವಿವಿಧ ವಿಷಯ.

ವಿಟಮಿನ್‌ನ ಹೊಸ ಉಪಯೋಗ!

[illegible] ವಿಟಮಿನುಗಳ ಅವಶ್ಯಕತೆ [illegible] ಗೃಹಕೆಲಸಗಾರರು, ಸಂಯುಕ್ತ ಅಮೇರಿಕದ ಡಾ. ಜೋಸೆಫ್ ಹಾಲ್ ಎಂಬವರು— ದೃಷ್ಟಿಗೂ ಅದರಿಂದ ಮುಖ್ಯ ಯೋಜನವಿದೆಯೆಂದು ತಿಳಿಸುತ್ತಾರೆ. ದೃಷ್ಟಿಗೂ ವಿಟಮಿನ್ 'ಎ'ಗೂ ನಿಕಟ ಸಂಬಂಧವಿದೆಯೆನ್ನುತ್ತಾರವರು! ತಾನೇ ಶೋಧಮಾಡಿ ನೋಡಿರುವರಂತೆ.

ಪೋಸ್ಟಾಫೀಸಿನದೂ ಒಂದು ಚಲಚ್ಚಿತ್ರ:

ಇದನ್ನು ಲಂಡನಿನ ಜನರಲ್ ಪೋಸ್ಟಾಫೀಸಿನವರು ತಯಾರಿಸಿರುವರಂತೆ. ಪೋಸ್ಟ್‌ಮ್ಯಾನುಗಳೇ ಇದರಲ್ಲಿ ನಟರು; ಲಂಡನ್ ನಗರದ ವೆಸ್ಟ್ ಎಂಡ್ ಪೋಸ್ಟಾಫೀಸಿನ ಕಟ್ಟಡದೊಳಗಿನ ಕೊಠಡಿಗಳೇ ದೃಶ್ಯ. ಅಲ್ಲಿ, ಅಪರಾಹ್ನ ೪ರಿಂದ ರಾತ್ರಿ ೮ ಗಂಟೆಯ ತನಕ, ಸುಮಾರು ಮೂರುವರೆ ಲಕ್ಷ ಪತ್ರಗಳು ಬಂದು ಬೀಳುತ್ತವೆ. ಅವುಗಳನ್ನು ಪೋಸ್ಟ್‌ಮ್ಯಾನರು ಹೇಗೆ ವಿಂಗಡಿಸಿ, ಕಟ್ಟಿ,—ರೈಲು, ಬಸ್ಸು ಯಾ ವಿಮಾನದ ಮೂಲಕ ಕಳುಹಿಸುವರೆಂಬುದೇ ಅದನ್ನೆಲ್ಲ ಈ ಚಿತ್ರದಲ್ಲಿ ತೋರಿಸಲಾಗುವುದು.

ರೇಡಿಯೋ ಅದ್ಭುತವು–

— ಎಂತಹದೆಂಬುದನ್ನು ಈಗಾಗಲೇ ಲಂಡನ್ ನಗರದಲ್ಲಿ ಪ್ರದರ್ಶಿಸಿರುವರು. ಅಮೇರಿಕದಿಂದ, ೧೦ ಫೀಟು ಫಿಲ್ಮನ್ನು ರೇಡಿಯೋ ಮೂಲಕ, ಒಂಭತ್ತು ಸಾವಿರ ಮೈಲು ದೂರವಿರುವ ಲಂಡನ್ ನಗರದ ಒಂದು ಸಿನೆಮಾ ಥಿಯೇಟರಿನಲ್ಲಿ ಕಾಣುವಂತೆ ಪ್ರದರ್ಶಿಸಿರುವರೆಂದರೆ!!! ಏನು ಅದ್ಭುತವಿದು! ಚಿತ್ರವು ಸ್ಪಷ್ಟವಾಗಿತ್ತು. ವಯರ್‌ಲೆಸ್ಸಿನ ರೀತಿಯಲ್ಲಿಯೇ ಚಿತ್ರ ಪ್ರದರ್ಶನವೂ ಸಾಧ್ಯವೆಂದಾಯಿತು (ಈ ಹತ್ತಡಿಯ ಫಿಲ್ಮಿಗೆ ೮ ಸಾವಿರ ಹಣವು ವ್ಯಯ ತಗಲಿತು.)

ಕಲಿಯುಗದ ಬಕಾಸುರ.

ಅಂಥವನೊಬ್ಬನಿರುವನು. ನೋರ್ಮಂಡಿಯಲ್ಲಿ ಆತನ ಮನೆ. ಚಾರ್ಲ್ಸ್ ವಿನೆಟ್ ಎಂದು ಆತನ ಹೆಸರು. ೩೨೬ ರಾತ್ತಲು ಭಾರದ ದೇಹವಾತನದು. ಒಮ್ಮೆ ಊಟಕ್ಕೆ ಕುಳಿತನೆಂದರೆ, ಮಾಂಸ–ಕೋಳಿ–ಮೀನು ಇವುಗಳನ್ನು ಎರಡೂವರೆ ರಾತ್ತಲುಗಳಂತೆಯೂ, ಸೇಬಿನ ಹಣ್ಣನ್ನು ಡಜನ್ ಲೆಕ್ಕದಲ್ಲಿಯೂ, ದ್ರಾಕ್ಷಾರಸವನ್ನು ಬಾಟಲಿಗಳ ದಶಸಂಖ್ಯೆಯಲ್ಲಿಯೂ ಭುಂಜಿಸಿ ಏಳುವನು! ಈ ಪುಣ್ಯಾತ್ಮನಿಗೆ ಅಜೀರ್ಣವೆಂಬುದೇ ಇಲ್ಲ!

'ಭಕ್ತ'ರು ಕದಿಯುವುದೇನು?

ಭಕ್ತರು ತಮ್ಮ ಭಕ್ತಿಯಿಂದ ದೇವರ ಪ್ರೀತಿಯನ್ನು ಮಾತ್ರವಲ್ಲ;–ಪುಸ್ತಕ ವ್ಯಾಪಾರಿಗಳಿಂದ ಪುಸ್ತಕಗಳನ್ನೂ ಕದಿಯುವರಂತೆ. ಲಂಡನಿನ ಒಬ್ಬ ಪುಸ್ತಕ ವ್ಯಾಪಾರಿಯ ಲೆಕ್ಕದಂತೆ, ಧಾರ್ಮಿಕ ಗ್ರಂಥಗಳೇ ಹೆಚ್ಚಾಗಿ ಕಳವಾಗುತ್ತಿರುವುವು!

ಕೊಠಡಿಗೊಂದು ಮರ!

ಇದು ರಷ್ಯದವರ ಹೊಸ ಯೋಜನೆ. ಅಲ್ಲಿ, ಚಹಾ ಪಾನಕದಲ್ಲಿ ನಿಂಬೆಹುಳಿಯನ್ನು ಬೆರಸುವುದಿದೆ. ಅದನ್ನು ಇನ್ನು ತಂತಮ್ಮ ಮನೆಗಳಲ್ಲಿಯೇ—(ಕೊಠಡಿಗಳಲ್ಲಿ!) — ಬೆಳೆಸುವಂತೆ ಮೋಸ್ಕೋ ನಗರದಲ್ಲೊಂದು ಯೋಜನೆಯಾಗಿದೆ. ಒಂದು ನಿಂಬೆ ಮರವು ವರ್ಷಕ್ಕೆ ಸುಮಾರು ೨೦೦ ನಿಂಬೆಹಣ್ಣುಗಳನ್ನು ಕೊಡುವುದು. ಈ ಮರವನ್ನು ಸುಲಭವಾಗಿ ಕೊಠಡಿಯೊಳಗೇ ಬೆಳೆಯಿಸಬಹುದೆಂದೂ, ಇದು ಅಲಂಕಾರವಾಗಿಯೂ ಒಪ್ಪುವುದೆಂದೂ ತಿಳಿಯಲಾಗಿದೆ.

ಪ್ರಪಂಚದ ಸ್ನಾನಸಂಭ್ರಮಗಳು–

—ಅನೇಕ ವಿಧವಾಗಿವೆ. ನೋರ್ವೇಯಲ್ಲಿ ಮಂಜನ್ನು ಮೈಗೆ ತಿಕ್ಕಿ ಸ್ನಾನಮಾಡುವರಂತೆ. ನ್ಯೂಝಿಲೇಂಡಿನಲ್ಲಿ ಬಿಸಿನೀರಿನ ಬುಗ್ಗೆಗಳಿವೆ. ಅಮೇರಿಕದ ಕೋಟ್ಯಾಧೀಶರು ಹಿಂದೂದೇಶದ ಮೊಗಲ್ ಬಾದಶಹರಂತೆ—ಪರಿಮಳದ್ರವ್ಯಗಳನ್ನು ಬೆರಸಿದ ನೀರಿನಲ್ಲಿ ಸ್ನಾನಮಾಡುವುದಿದೆ. ಅಲ್ಲಿ [illegible] ಸುಗಂಧ ತೈಲಗಳನ್ನು ಮೈಗೆ ತಿಕ್ಕಿ ಸ್ನಾನ ಮಾಡುವರು. ಜಪಾನಿನ ಕೆಲವು ನಗರಗಳಲ್ಲಿ ಸಾರ್ವಜನಿಕ ಕೆರೆಗಳಲ್ಲಿ, ಸ್ತ್ರೀಯರೇ [illegible] ಮೈಯೊರೆಸಿಬಿಡುವರು.

ಪ್ರಚಲಿತ ಸಮಾಚಾರ.

ಹೊಗೆಸೊಪ್ಪು ವ್ಯಾಪಾರಿಗಳ ಪರಿಷತ್ತು.

ಹೊಗೆಸೊಪ್ಪು ಬೆಳೆಸುವವರ, ಕೊಂಡುಕೊಳ್ಳುವರ, ವ್ಯಾಪಾರಮಾಡುವವರ (ಮುಂಬಯಿ ಪ್ರಾಂತ್ಯ) ಎಲ್ಲರ ಸಮ್ಮೇಳನವು ನಿಪ್ಪಾಣಿಯಲ್ಲಿ ಇದೇ ತಾ. ೫ರಲ್ಲಿ ಜರಗಿತು. ಕೊಲ್ಹಾಪುರದ ಮಾಜಿ ದಿವಾನರಾದ ದಿವಾನ್‌ಬಹದ್ದೂರ್ ಅಣ್ಣಾಬಾಬ್ಲ ಲಾಠೆಯವರು ಅಧ್ಯಕ್ಷರು. ಸರಕಾರವು ಹೊಗೆಸೊಪ್ಪಿನ ಮೇಲೆ ಅಧಿಕ ಸುಂಕವನ್ನು ಹೇರುವ ಹೊಸ ಮಸೂದೆಯನ್ನು ಮಾಡಿರುವುದರಿಂದ ವ್ಯಾಪಾರಕ್ಕೆ ಆಘಾತವುಂಟಾಗಿದೆಯೆಂದೂ, ಆ ಮಸೂದೆಯನ್ನು [illegible] ವಿನಂತಿ ಮಾಡಲಾಗಿದೆ.

ಹುಚ್ಚುನಾಯಿಗಳ ಕಾಟವನ್ನು–

— ಸಂಪೂರ್ಣವಾಗಿ ನಿರ್ಮೂಲಿಸಬಹುದಾಗಿ ಕೊಲಂಬೋ ಮುನಿಸಿಪಲ್ ಪಶುವೈದ್ಯಶಾಲೆಯವರ ಅಭಿಪ್ರಾಯ. ಶ್ವಾನಗಳಿಗೇ ವಿಷಹಾರೀ ಇಂಜಕ್ಷನನ್ನು ಕೊಡುವ ಆಲೋಚನೆ. ಆ ಔಷಧವೀಗ ಸಿದ್ಧವಾಗುತ್ತಿದ್ದು, ಪೂರ್ಣ ಯಶಸ್ವಿಯಾಗಿ ಪ್ರಯೋಗಿಸಲ್ಪಡುವುದೆಂದು ಅಭಿಪ್ರಾಯವುಂಟಾಗಿದೆ. ಈ ತನಕ, ಬೀದಿ ನಾಯಿಗಳನ್ನು ಹಿಡಿದು ಕೊಲ್ಲುವುದೇ ಶ್ವಾನವಿಷದ ಅನಾಹುತಗಳನ್ನು ತಡೆವ ಏಕಮಾತ್ರ ಉಪಾಯವಾಗಿತ್ತು. ಇನ್ನು ಈ "ಶ್ವಾನದಾತ" ಪ್ರಚಾರಕ್ಕೆ ಬರಬಹುದಾಗಿದೆ.

ಕಾಶಿ ಹಿಂದೂ ವಿಶ್ವವಿದ್ಯಾಲಯಕ್ಕೆ–

— ಕಳೆದವಾರ ಎರಡು ನಿಜವಾದ ಉದಾರದಾನಗಳು! ಕೊಲ್ಹಾಪುರಾಧೀಶರು ಒಂದು ಲಕ್ಷ ರೂಪಾಯಿಯನ್ನು ಮಂಜೂರು ಮಾಡಿರುವರು. ಸ್ವಾಂತವಾಡಿ ದರ್ಬಾರಿನವರು ಹತ್ತು ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿರುವರಂತೆ.

ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು.

ಬರುವ ವಾರದಲ್ಲಿ ಪಾಟ್ನದಲ್ಲಿ ಸೇರಬಹುದೆಂದು ತೋರುವುದು. ಈ ಸಭೆಯಲ್ಲಿ, ಜೊಯಿಂಟ್ ಸಿಲೆಕ್ಟ್ ಕಮಿಟಿಯ ವರದಿಯ ವಿಷಯವಾಗಿ ಚರ್ಚೆ ನಡೆಯುವುದು. ಕೊಂಗ್ರೆಸ್ ಅಧ್ಯಕ್ಷರಾದ ಬಾಬೂ ರಾಜೇಂದ್ರಪ್ರಸಾದರವರು ಇನ್ನೂ ಪೂರ್ಣ ಸೌಖ್ಯದಲ್ಲಿಲ್ಲವಾದರೂ ಸಭೆಗೆ ಬರುವಂತೆ ಸದಸ್ಯರಿಗೆ ಆಮಂತ್ರಣ ಕಳುಹಿರುವರೆಂದು ತಿಳಿಯಲಾಗಿದೆ.

ಮೀರಾಬಾಯಿಯವರು–

—ತಮ್ಮ ಇಂಗ್ಲಂಡ್—ಅಮೇರಿಕ ಸಂಚಾರವನ್ನು ಮುಗಿಸಿ, ಕಳೆದ ವಾರ ಮುಂಬಾಯಿಗೆ ಬಂದಿಳಿದರು. ಇವರನ್ನು ಕೊಂಗ್ರೆಸ್ ಮುಖಂಡರನೇಕರು ಸ್ವಾಗತಿಸಿ, ಸಂಚಾರದ ವೃತ್ತಾಂತವೇನೆಂದು ಪ್ರಶ್ನಿಸಿದಾಗ ತಿಳಿದುಬಂದ ಮುಖ್ಯಾಂಶವಿದು:—ಮೀರಾಬಾಯಿಯವರು, ಇಂಗ್ಲಂಡ್, ಸ್ಕೊಟ್ಲೆಂಡ್ ಮತ್ತು ವೇಲ್ಸ್‌ಗಳಲ್ಲಿ ಒಟ್ಟು ೬೬ ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿರುವರು. ಅಮೇರಿಕದಲ್ಲಿ, ಅಧ್ಯಕ್ಷರ ಪತ್ನಿಯವರಾದ ಮಿಸೆಸ್ ರೂಸವೆಲ್ಟರವರನ್ನು ಕಂಡು, ಒಟ್ಟು ೩೫ ಸಭೆಗಳಲ್ಲಿ ಭಾಷಣಮಾಡಿರುವರು. ಪಾಶ್ಚಾತ್ಯರಿಗೆ ಗಾಂಧೀತತ್ವದ ತಿರುಳನ್ನರುಹುವುದೇ ಮೀರಾಬಾಯಿಯವರ ಸಂಚಾರದ ಮುಖ್ಯೋದ್ದೇಶವಾಗಿತ್ತು. ಅಲ್ಲಿಯ ಮಜೂರರನ್ನು ಕಂಡು, ಅವರ ಸ್ಥಿತಿಗತಿಗಳನ್ನು ಅವಲೋಕಿಸಿ, ಹಿಂದೂದೇಶದ ಶ್ರಮಜೀವಿಗಳ ವಿಷಯ ಹೇಳಬೇಕಾದುದನ್ನು ಅಲ್ಲಿ ತಿಳಿಸಿರುವರು. ಹಿಂದೂದೇಶದ ಸತ್ಯಸ್ಥಿತಿಯು ನಮ್ಮನ್ನಾಳುವ ಜನಾಂಗಕ್ಕೆ ತಿಳಿವಂತೆ ಅಲ್ಲೊಂದು ಪ್ರಚಾರಸಂಘವನ್ನು ತೆರೆವ ಸೂಚನೆಯೂ ಇದೆ. (ಮೀರಾಬಾಯಿಯವರು ವಾರ್ಧಕ್ಕೆ ತೆರಳಿರುವರು)

ಉಪವಾಸಗಳು 'ಫ್ಯಾಶನ್' ಆದುವೇ?

ಸಂದೇಹವಿಲ್ಲ. ಉಪವಾಸದಿಂದ ಆರೋಗ್ಯವೆಂಬ ಪ್ರಶ್ನೆಯನ್ನು ಬಿಟ್ಟು, ಶತ್ರುಪಕ್ಷವನ್ನು ಸದೆಬಡಿವ ಅಸ್ತ್ರವೆನಿಸಿದುದಾಯಿತು. ಈಗ ಅದು ರೂಢಿಗೆ ಬಂದು ಹೋಗಿದೆ. ಶೀಕಾಪುರದ ಪಂಡಿತ ಲಾಭರಾಯಿಜರೆಂಬ [illegible] ಈಗ ಒಂದು ಉಪವಾಸವನ್ನು—ಮರಣಾಂತ ಉಪವಾಸವನ್ನು ಕೈಕೊಂಡಿದ್ದಾರೆ. ಕಾರಣ, ನಿರ್ದಯರಾದ ಸಾಹುಕಾರರ ಅನ್ಯಾಯವಾದ ಬಡ್ಡಿದರಗಳು! (ಇವರು ಮುನಿಸಿಪಲ್ ಕಮೀಶನರೊಬ್ಬರಿಗೆ ತಮ್ಮ ಮನೆಯನ್ನು ಬರೆದುಕೊಟ್ಟು ೪೦೦ ರೂಪಾಯಿಗಳನ್ನು ಸಾಲಪಡೆದಿದ್ದರು. ಈಗ ನ್ಯಾಯವಾದ ಬಡ್ಡಿ ಸಹಿತ ಕೊಡಲು ಸಿದ್ಧರು. ಆದರೆ, ಕಮೀಶನರರು, ತಮ್ಮ ಕರಾರಿನಂತೇ ನಡೆಸಿಕೊಳ್ಳಬೇಕೆಂದು ಹಟಹಿಡಿದಿರುವರು)

ಬರೋಡೆಯಲ್ಲಿ ಸುಧಾರಣೆಗಳು—

ಅನುಕ್ರಮವಾಗಿ ಸಾಗುತ್ತಿವೆ. ಬರೋಡೆ ಸರಕಾರದ ಅಧಿಕಾರದಲ್ಲಿ [illegible] ತೋರಿಸಿಕೊಡಬೇಕೆಂದು ಪ್ರಜೆಗಳಿಗೂ ನೌಕರರಿಗೂ ಪ್ರಶ್ನೆ. ಜೂಜಾಟವನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡುವ ಸರಕಾರದ ಯತ್ನದಲ್ಲಿ ಜನರೆಲ್ಲರೂ ಸಹಕರಿಸಬೇಕೆಂದು ಕೇಳಿಕೊಳ್ಳಲಾಗಿದೆ. ಜಾತೀಯ ಕಲಹಗಳೇಳದಂತೆ ದೇವಾಲಯ ಯಾ ಮಸೀದಿಗಳನ್ನು ಕಟ್ಟಿಸುವ ಕ್ರಮವನ್ನು ತಿದ್ದಲು ಒಂದು ಮಸೂದೆಯಾಗಲಿದೆ. ಸಾರ್ವಜನಿಕ ನಿಧಿಯಲ್ಲಿ ನಡೆವ ದೇವಾಲಯಾದಿ ಧರ್ಮಸಂಸ್ಥೆಗಳ ಲೆಕ್ಕವನ್ನು ಮೊಕ್ತೇಸರರು ಸರಕಾರದ ಪರಿಶೋಧನೆಗೆ ಒಪ್ಪಿಸುವಂತೆ ರಾಜಾಜ್ಞೆ ಹೊರಟಿರುವುದು.

ಕಾಡುಮೃಗಗಳ ನಾಶವು–

— ಶಿಕಾರಿಗಳ ಹುಚ್ಚು ಹೆಚ್ಚಿದ ದೆಸೆಯಿಂದ ಶೀಘ್ರಗತಿಯುಳ್ಳದಾಗುತ್ತಿದೆ. ಈ ಬೇಟೆಗಳಿಂದ ಸಿಂಹಗಳು ಜಗತ್ತಿನಲ್ಲಿನ್ನು ಕೆಲವೇ ಉಳಿದಿವೆಯಂತೆ. ಹಾಗೆಯೇ ಹಿಂದೂದೇಶದ ಹುಲಿ–ಚಿರತೆ–[illegible] ಜಂತುಗಳೂ ನಶಿಸುತ್ತ ಬರುತ್ತಿದ್ದು, ಈಗಳಿನ ಗತಿಯಲ್ಲಿ ಹತ್ಯಾಕಾಂಡವು ನಡೆದರೆ ಮುಂದೆ ಕೆಲವು ವರ್ಷಗಳಲ್ಲಿ ಅವು ನಾಮಮಾತ್ರಶೇಷವಾಗಬಹುದಾಗಿ ಅಂಜಿಕೆಯುಂಟಾಗಿದೆ. ಇದಕ್ಕಾಗಿ ಯಾವ ನಿವಾರಣೋಪಾಯಗಳನ್ನು ಕೈಕೊಳ್ಳಬಹುದೆಂಬುದನ್ನು ಪರ್ಯಾಲೋಚಿಸಲು, ಎಲ್ಲ ಪ್ರಾಂತ್ಯಗಳಿಂದಲೂ ಪ್ರತಿನಿಧಿಗಳು ಸೇರಿ ಒಂದು ಪರಿಷತ್ತು ಇದೇ ಬರುವ ಜನವರಿ ತಾ. ೧೯ರಿಂದ ೩೦ರ ತನಕ ದಿಲ್ಲಿಯಲ್ಲಿ ಜರಗುವುದೆಂದು ನಿಶ್ಚಯವಾಗಿದೆ

ಶಾಲೆಗೊಂದು ಸಿನೆಮಾ.

ಇನ್ನೀಗ ಲಂಡನಿನ ವಿದ್ಯಾಧಿಕಾರಿಗಳ ಕನಸು, ಅಲ್ಲಿ ಕಟ್ಟಲ್ಪಡುವ ಪ್ರತಿ ಒಂದು ಹೊಸ ಎಲಿಮೆಂಟರಿ ಶಾಲೆಗೆ ಒಂದೊಂದು ಸಿನೆಮಾ ಗೃಹವೂ ಇರುವಂತೆ ನಿರ್ಮಾಣ ಮಾಡಿದರಾಗದೇ ಎಂದು ಅವರ ಆಲೋಚನೆ. ಶೈಕ್ಷಣಿಕ ಮೌಲ್ಯವುಳ್ಳ ಚಿತ್ರಗಳನ್ನು ಮಾತ್ರ ಇವುಗಳಲ್ಲಿ ಪ್ರದರ್ಶಿಸುವರು.

"ಇದೆಂತಹ ಉಯಿಲು—"

ಎಂದು ಯಾರಾದರೂ ಅಚ್ಚರಿ ಪಡುವಂತೆ, ಸಾನ್ ಪೆಡ್ರೋ ಎಂಬಲ್ಲಿ ಗತಿಸಿದೊಬ್ಬ ಅಮೇರಿಕನನು ಅಮೇರಿಕದ ಅಧ್ಯಕ್ಷರಿಗೂ, ರಷ್ಯದ ಸರ್ವಾಧಿಕಾರಿ ಸ್ಟಾಲಿನನಿಗೂ ನೂರು ಪವನುಗಳಂತೆ ಉಯಿಲಿನಲ್ಲಿ ಬರೆದಿಟ್ಟಿದ್ದಾನೆ. "ಅವರಿಗಿನ್ನೂ ನಾನು ಕೊಡಬೇಕಾಗಿದೆ, ಆದರೆ, ನನ್ನೊಡನೆ ಇಲ್ಲ"ವೆಂದೂ ಬರೆದಿರುವನು. ಇದೇನು ಸಾಲವೇ? ಕಾಣಿಕೆಯೋ? ಯಾರು ಬಲ್ಲ!

ವಿನಯಶೀಲವು–

—ಆಳುವವರಲ್ಲಿಯೂ, ಆಳಲ್ಪಡುವವರಲ್ಲಿಯೂ ಇರಬೇಕು. ಅದು ಜನಾಂಗದ ನಾಗರಿಕತೆಯನ್ನು ಅಳೆವ ಮಾನದಂಡವಲ್ಲದೆ ಶಾಂತಿಪಾಲನೆಗೆ ಸಹಕಾರಿಯೂ ಅಹುದು. ಜರ್ಮನಿಯ ಮೋಟಾರುಚಾಲಕರಿಗೆ ಈಗ ಬೆದರಿಕೆಯ ಯಾವ ನೋಟೀಸುಗಳೂ ಇಲ್ಲ. "೪೦೦ ಗಜ ದೂರದಲ್ಲಿ ಕೂಲಿಯಾಳುಗಳು ಕೆಲಸ ಮಾಡುತ್ತಿರುವರು; ನಿಧಾನವಾಗಿ ಹೋಗಿರಿ" ಎಂದು [illegible] ಬೋರ್ಡನ್ನು ನೋಡಿದವನೊಬ್ಬನು ಮುಂದೆ ಆ ೪೦೦ ಗಜಗಳು ದಾಟಿದ ನಂತರ "ನೀವು ನಿಧಾನವಾಗಿ ಬಂದುದಕ್ಕೆ ವಂದನೆಗಳು" ಎಂಬ ಬೋರ್ಡನ್ನು ಕಂಡು ಸಂತೋಷಪಡುವನು. ಹಾಗೆಯೇ 'ಟ್ರಾಫಿಕ್'ಯ "ಶಿಕ್ಷೆ" ನೋಟೀಸುಗಳೂ ಬದಲಾವಣೆಗೊಳಗಾಗಿವೆ. ಮೋಟಾರನ್ನು ಜಾಗ್ರತೆಯಿಂದ ನಡೆಸುವಂತೆ ನಿಬಂಧನೆಗಳು ವಿನಂತಿ ರೂಪದಲ್ಲಿ, ಸೌಮ್ಯಶೈಲಿಯಲ್ಲೇ ಇವೆ.

ಲಾಹೋರಿನ ಆರ್ಯಸಮಾಜದ ೫೭ನೇ ವಾರ್ಷಿಕೋತ್ಸವವು ಇದೇ ತಾ. ೨೦ರಿಂದ ೨೫ರ ತನಕ ಧಾರ್ಮಿಕ ಭಾಷಣಾದಿ ಕಾರ್ಯಕ್ರಮಗಳಿಂದ ಜರಗಿಸಲ್ಪಟ್ಟಿತು.

ತುಂಡು ಸುದ್ದಿ.

ಕಲ್ಕತ್ತೆಗೆ [illegible] ವಿಮಾನ ನಿಲ್ದಾಣವಾಗುವುದಾಗಿ ಸುದ್ದಿ.

ಲಾಹೋರಿನ "ಮಿಲಾಪ್" ಪತ್ರಿಕೆಯು ಗುರುನಾನಕರ ಚಿತ್ರದ ಬಳಿಯಲ್ಲಿ [illegible] ಚಿತ್ರವನ್ನು ಪ್ರಕಟಿಸಿದುದಕ್ಕಾಗಿ ಸಿಕ್ಖರು ಮನನೊಂದು, ನಿಷೇಧವನ್ನು ವ್ಯಕ್ತಪಡಿಸಿರುವರು.

"ಮಿಲಿಟರಿ ಸಯನ್ಸ್" (ಸೈನಿಕ ವಿಜ್ಞಾನ) ವನ್ನು ಬಿ. ಎ. ತರಗತಿಯಲ್ಲಿ ಐಚ್ಛಿಕವಿಷಯವನ್ನಾಗಿ ಇಡಬೇಕೆಂದು ಅಲ್ಲಹಾಬಾದ್ ವಿಶ್ವವಿದ್ಯಾಲಯದ [illegible] ಮಂಡಲಿಯ ನಿರ್ಧಾರ.

[illegible] ಬಳಿಯಲ್ಲಿ, ನಾಲ್ಕು ಕಲೆಬರಹ (ಮನುಷ್ಯರ)ಗಳು ಸಿಕ್ಕಿವೆ. ಇವು ಸುಮಾರು ಐದು ಲಕ್ಷ ವರ್ಷಗಳ ಪೂರ್ವದ್ದೆಂದು ಊಹಿಸಲಾಗಿದೆ.

ವಿವಾಹ–ಉಪನಯನಾದಿಗಳಲ್ಲಿ ಮಾಡುವ ದುಂದುವ್ಯಯವನ್ನು ನಿಲ್ಲಿಸಲು ಹೋಳ್ಕರ್ ಸರಕಾರವು ಒಂದು ಶಾಸನವನ್ನು ರಚಿಸಿದೆ.

ವೈಸರಾಯರ ಭೂಕಂಪ ನಿಧಿಯು ರೂ. ೬೮,೦೪,೨೦೬ ರಷ್ಟಾಯಿತು.

ಧರ್ಬಂಗಿ ಮಹಾರಾಜರು, ಅಲ್ಲಿಯ ಗೋಶಾಲಾ ಸಮಿತಿಯವರ ಕಾರ್ಯಕಲಾಪಗಳನ್ನು ಮೆಚ್ಚಿ, ೧೦ ಸಾವಿರ ರೂಪಾಯಿಗಳ ದಾನ ಮಾಡಿರುವರು.

ಲೇಡಿ ಬ್ಯಾಂಕ್ ಡೊಗ್ಲಾಸ್ ಎಂಬ ಆಂಗ್ಲ ಮಹಿಳೆಯು ಇಂಗ್ಲಾಂಡಿನಿಂದ ಇಂಡಿಯಕ್ಕೆ ವಿಮಾನದಲ್ಲಿ ಏಕಾಕಿನಿಯಾಗಿ ಹೊರಟಿರುವಳು.

೧೯೩೫ನೇ ಮೇ ತಾ. ೬ಕ್ಕೆ ಸಮ್ರಾಟ್ ಸಾರ್ವಭೌಮರ ಪಟ್ಟಕ್ಕೆಯ ರಜತೋತ್ಸವವು ಸಾಮ್ರಾಜ್ಯದಲ್ಲೆಲ್ಲ ಜರಗಿಸಲ್ಪಡುವುದು. ಆ ದಿನವನ್ನು ಸಾರ್ವಜನಿಕ ರಜಾದಿನವಾಗಿ ಪರಿಗಣಿಸಲಾಗುತ್ತದೆ.

ಪಂಡಿತ ಮದನಮೋಹನ ಮಾಳವೀಯರ ಅಸ್ವಸ್ಥದ ದೆಸೆಯಿಂದ ಕಾಶಿ ಹಿಂದೂ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಇದೇ ಬರುವ ದಶಂಬರ ತಿಂಗಳಿಗೆ ಮುಂದುವರಿಸಲ್ಪಟ್ಟಿದೆ.

ಕಾಶಿಯ "ಬನಾರಸ್ ಸ್ಟೇಟ್ ಬ್ಯಾಂಕ್"ನ ಮೇನೇಜರರಾದ ಶ್ರೀ [illegible]ರವರು ತಾ. ೩೧ನೇ ದಿನ ಬೆಳಿಗ್ಗೆ, ಒಂದು ಕೊಠಡಿಯಲ್ಲಿ ಸತ್ತು ಬಿದ್ದುದು ಕಂಡುಬಂದಿದೆ. ಪೋಲೀಸರು ಪತ್ತೆಮಾಡುತ್ತಿರುವರು.

ಜಪಾನಿನಿಂದ ಪರ್ಶಿಯಕ್ಕೆ ತಿಂಗಳಿಗೊಂದಾವರ್ತಿ ನೇರವಾದ ಸ್ಟೀಮರು ಸರ್ವೀಸು ಆರಂಭಿಸಲ್ಪಡುವುದು.

ಪಂಡಿತ ಜವಾಹರಲಾಲರ ಮಾತೋಶ್ರೀಯವರಾದ ಸ್ವರೂಪರಾಣಿ ನೆಹರೂಯವರಿಗೆ [illegible] ಚಿಕಿತ್ಸೆ ಬಗ್ಗೆ ಬೊಂಬಾಯಿಗೆ ತೆರಳಿರುವರು.

ನೃತ್ಯಕಲಾಪ್ರವೀಣ ಉದಯಶಂಕರನು ಮಲಬಾರಿನ ಸಂಚಾರವನ್ನು ಮುಗಿಸಿ ಬೊಂಬಾಯಿಗೆ ಬಂದಿರುವನು. ಮೇಡಮ್ ಸಿಮ್ಕಿಯೂ ಬೊಂಬಾಯಿಗೆ ಬಂದು ಉದಯಶಂಕರನನ್ನು ಭೇಟಿಯಾದಳು.

ಮದರಾಸಿನ "ಟ್ರಾಯಂಫ್ ಟ್ಯುಟೋರಿಯಲ್" ಕಾಲೇಜಿನವರು ಪತ್ರಿಕಾ ವ್ಯವಸಾಯ ಶಿಕ್ಷಣವನ್ನಾರಂಭಿಸಿರುವರು

ಕಲ್ಕತ್ತೆಯಲ್ಲಿ, ಭಯೋತ್ಪಾದಕ ಚಳವಳಿಯಲ್ಲಿ, ಸಂಬಂಧವಿದ್ದವರೆಂಬ ಸಂದೇಹದಲ್ಲಿ ಮೂವರು ಯುವಕರ ದಸ್ತಗಿರಿಯಾಗಿದೆ.

ಲೆಫ್ಟನೆಂಟ್ ಕರ್ನಲ್ ಫ್ರೆಡರಿಕ್ ಮಾರ್ಷಮನ್ ಬೈಲಿ, ಸಿ. ಐ. ಇ., ಎಂಬವರು ನೇಪಾಳದ ಬ್ರಿಟಿಷ್ ಮಂತ್ರಿಯಾಗಿ ನೇಮಕಹೊಂದಿರುವರು.

ಮಧ್ಯಪ್ರಾಂತ್ಯದಲ್ಲಿಯ ಅಧ್ಯಾಪಕರುಗಳ ಪರವಾಗಿ ಅಲ್ಲಿಯ ಕೌನ್ಸಿಲಿನಲ್ಲಿ ಮೂವರು ಸದಸ್ಯರ ಪ್ರಾತಿನಿಧ್ಯವಿರಬೇಕಾಗಿ, ನಾಗಪುರದಲ್ಲಿ ಸೇರಿದ ಸಮ್ಮಿಳಿತ ವಿದ್ಯಾಸಂಸ್ಥೆಗಳ ಪರಿಷತ್ತಿನಲ್ಲಿ ಠರಾವಾಗಿದೆ.

ಕೊಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ದಶಂಬರ ತಾ. ೬ರಲ್ಲಿ ಪಾಟ್ನದಲ್ಲಿ ಸೇರುವುದು.

ಆಫ್ರಿಕದ ಶ್ರೀಮಂತ ವಿಲಾಸಿಗಳ ಜನಾನೆಗೆ ಫ್ರೆಂಚ್ ಮತ್ತು ಆಂಗ್ಲ ಸುಂದರಿಯರು ಬೇಕಾಗಿವೆಯಂತೆ! ಅದಕ್ಕಾಗಿ ಇವರ ಏಜಂಟರು ಪ್ಯಾರಿಸ್ ನಗರದಲ್ಲಿಯೂ ಲಂಡನಿನಲ್ಲಿಯೂ "ನರ್ತನ ಮಂಡಳಿ" ಎಂಬ ಹೆಸರಲ್ಲಿ, ಸುಂದರ ಬಾಲಿಕೆಯರನ್ನು ಒಟ್ಟುಗೂಡಿಸುತ್ತಿದ್ದರೆಂಬ ವಾರ್ತೆಯು ಪ್ರಕಟವಾಗಿದೆ. ಪೋಲೀಸರು ಇದನ್ನು ಪತ್ತೆ ಮಾಡುತ್ತಿರುವರು.

WANTED.

Four Organisers to organise the work of the South Indian General Assurance Society, Ltd., in the following places noted below. Capable organisers can expect to have attractive and encouraging terms with sound footing for their future.

(1) South Canara, (2) Mysore, Hassan and Coorg, (3) Kadur, Shimoga, Chitaldroog and Tumkur. (4) Mangalore, Kolar.

For terms and other particulars please apply to—

The Divisional Manager,
The South Indian General Assurance Co. Ltd.
64, III Cross Road, Srirampur Extn. Malleswaram Post, BANGALORE.

OR

The Managing Agents,
The S. I. G. A. Co. Ltd.
55, Poonamallee High Road, Kilpauk, MADRAS.

Shiromani Narayanacharya
Choukhamba, Benares City

ಶಸ್ತ್ರಿಗಳೇ, ಪೂರ್ವಿಕರು ಋಷಿಗಳೇ, ಗೃಹಿಗಳೇ ಅಥವಾ ಈಗಿನವರೇ? ರಾಮಾನುಜ್ಯ ಮೊದಲಾದವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ನಿತ್ಯದ ಯಾವಾಗಲೂ ಧಾರಣೆಮಾಡುತ್ತಿದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ದೀರ್ಘಾಯುಷ್ಯ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ಐಶ್ವರ್ಯವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುವವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಕುಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು.

ಸಣ್ಣ ಅಥವಾ ಪ್ರಮಾಣದ ಕಂಠಿಸರ 1ಕ್ಕೆ ಅಣೆ 1ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಅಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3–4–5–6–7–8 ಮುಖಗಳ ಕಾಳು 1ಕ್ಕೆ ಅಣೆ 4ರಿಂದ ರೂಪಾಯಿ 10. ಮತ್ತು 9–10–11 ಮುಖಗಳುಳ್ಳ ಕಾಳು 1ಕ್ಕೆ ರೂ. 2ರಿಂದ 30ರ ವರೆಗೆ 12-13–14 ಮುಖದ ಕಾಳು 1ಕ್ಕೆ ರೂಪಾಯಿ 5ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷಿ ಅವರೆಕಾಳಿಗಿಂತ ಸಣ್ಣದಾಗಿತ್ತು ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷಿ ಅದಕ್ಕಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ಪತ್ರಕ್ಕೆ ಕಟ್ಟಲಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇನೆ. 1 ಅಣೆ ಸ್ಟಾಂಪು ಕಳುಹಿಸಿದರೆ ಕ್ರಯಪಟ್ಟಿ ಇನಾಮುಗಳು— 1 ಪಿಕ್ಚರ್ ಪಟ, 1 ಕಾಶೀ ನಕ್ಷೆ, 1 ಕಟಲಾಗ ಸಹಿತ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ
ಚೌಕುಂಬಾ, ಬನಾರಸ್ (ಕಾಶೀ)

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಮಹಾ ಮದನಕಾಮೇಶ್ವರಿ ಲೇಹ:—ಆಯುರ್ವೇದ ಶಾಸ್ತ್ರದಲ್ಲಿ ಅತಿ ಪ್ರಾಮುಖ್ಯತೆಯನ್ನು ಪಡೆದ ಔಷಧಿ. ನರಗಳ ಮತ್ತು ಜನನೇಂದ್ರಿಯದ ಶಕ್ತಿಹೀನತೆ, ಎದೆನೋವು, ಮಲಬದ್ಧತೆ, ಅಜೀರ್ಣ, ಅರುಚಿ, ಅಗ್ನಿಮಾಂದ್ಯ, ವಾಯು ಉಪದ್ರ ಮೊದಲಾದವುಗಳನ್ನು ಹೋಗಲಾಡಿಸಿ ಮಾನಸಿಕ ಶಕ್ತಿಯನ್ನು ಹೆಚ್ಚಿಸುವುದು. ರಕ್ತವೃದ್ಧಿಯನ್ನೂ, ವೀರ್ಯ ವೃದ್ಧಿಯನ್ನೂ ಉಂಟುಮಾಡಿ ದೇಹಕ್ಕೆ ಸಂಪೂರ್ಣ ಆರೋಗ್ಯವನ್ನು ಉಂಟುಮಾಡುವುದು. ವಿದ್ಯಾರ್ಥಿಗಳೂ, ಶ್ರಮಜೀವಿಗಳೂ ಇದನ್ನು ಪ್ರತಿನಿತ್ಯ ಸೇವಿಸಿದ್ದಲ್ಲಿ ಶ್ರಮ ಪರಿಹಾರವಾಗಿ ಸುಖನಿದ್ರೆಯು ಲಭಿಸುವುದು.

ಬಾಟ್ಲಿ 1ರ ರೂ. 2–0–0. ಬಾಟ್ಲಿ 3ರ ರೂ. 5–12–0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರದಿಂದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2–8–0. ಡಬ್ಬಿ 3ರ ರೂ. 7–0–0.

ಕಸ್ತೂರಿ ಮಿಶ್ರಿತ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಪ್ರಸವದ ಆಯಾಸವನ್ನು ಹೋಗಲಾಡಿಸಿ ಗರ್ಭಕೋಶದ ವೇದನೆಗಳನ್ನು ಸಮಾಧಾನಪಡಿಸುವುದು. ಗರ್ಭಕೋಶದಲ್ಲಿ ಕೆಟ್ಟ ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ಸಂಜೆಯ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1–8–0. ಬಾಟ್ಲಿ 2ರ ರೂ. 3–0–0

[ಗುಣಬಾರದಿದ್ದರೆ ಹಣ ವಾಪಾಸು]

ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ

ಸಂತತಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ)

ಬಹಳ ಸಾರಿ ಹಡೆಯುವುದರಿಂದ ಹೆಂಗಸರ ಆರೋಗ್ಯ ಅಶಕ್ತಿಯಾಗುತ್ತದೆ. ಬಡತನದಲ್ಲಿ ವಿಶೇಷ ಮಕ್ಕಳಾಗುವುದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ತರುವಾಯ ಏನು ಮಾಡಿದರೂ ಸುರುವಾಗುವುದಿಲ್ಲ. ಮೊದಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೊಡಮಾಡಿದರು. ಸೂಚನೆ:— ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದಿಲ್ಲ. ಪೂರ್ಣ ಗುಣಕಾರಿ ಡಬ್ಬಿ ಕಿಮ್ಮತ್ತು ರೂ. ೪–೦–೦. ವಿ. ಪಿ. ಅಣೆ ೬.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ಮಿರಜ, S. M. C.

"ಮಿತಸಂತತಿ"–"ಮಿತ್ರಸಂತತಿ" ಎಂದು ಹಲುಬಿದರೆ ಫಲವಿಲ್ಲ;

ಪ್ರೊರೆಸ್ ಕೇಪ್ ಪೆಸರಿ

ಎಂಬ ಈ ಅಮೂಲ್ಯ ಚೀಲವನ್ನುಪಯೋಗಿಸುವುದರಿಂದ 'ಮಿತಸಂತತಿ'ಯು ಸೂತ್ರವು ಪರಿಪಾಲಿಸಲ್ಪಡುವುದು. —ಈ ಚೀಲದ ಉಪಯೋಗವನ್ನು ಪ್ರಸಿದ್ಧ ವೈದ್ಯರೂ ಡಾ। ಮಂಡಸ್ಲೋಹರೂ ಪರೀಕ್ಷಿಸಿ ಜಗತ್ತಿಗೆ ಶಿಫಾರಸು ಮಾಡಿರುವರು.

1 ಅಣೆ ಅಂಚೆ ಚೀಟು ರವಾನಿಸಿದರೆ ಕೆಟಲಾಗ ಕಳುಹಿಸುತ್ತೇವೆ.

ಪ್ರೊರೆಸ್ ಚಿನೋಸೋಲ ಸೊಲ್ಯುಬಲ್ಸ (Prorace Chinosal Solubles)

ಎಂಬುದನ್ನು ಇದರೊಡನೆ ಉಪಯೋಗಿಸಿರಿ. ಇದು ದ್ರಾವಕದಂತಿದೆ.

ಪ್ರೊರೆಸ್ ಎಂಬ ಹೆಸರುಳ್ಳದು ಸರ್ವೋತ್ಕೃಷ್ಟ! ಇದರ ಕ್ರಯ ಒಂದು ಟಿನ್ನಿಗೆ ರೂ. 2–0–0 (ಹನ್ನೆರಡು ಬಾಟ್ಲಿಗಳಿವೆ.)

ಮುಖ್ಯ ಪ್ರವರ್ತಕರು:—The Pioneer Book Depot,
373/375 Esplanade Road, Madras.

ಮಂಗಳೂರು ಏಜಂಟರು:—
ದಿ ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ಲಿಮಿಟೆಡ್, ಮಂಗಳೂರು.



ರೇಶ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನನಿತ್ಯದ ಸ್ನಾನಕ್ಕೆ ಮುಂಚಿತವಾಗಿ ನಿಮ್ಮ ಕೂದಲುಗಳನ್ನು ಚೆನ್ನಾಗಿ ಬಾಚಿ, ಬ್ರಷ್ಷಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ.

(ಮನಮುಗ್ಧಕರವಾದ ಸುಗಂಧವನ್ನುಳ್ಳದು.)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ.

ತಯಾರಿಸುವವರು:— ಬೆಲೆ ಸೀಸೆ ಒಂದಕ್ಕೆ ರೂ. 0–12–0.

ಆರ್. ಸಿ. ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ.

ಏಜಂಟರು:—
ಕುಂತಳ ಕೌಮುದಿ ಸ್ಟೋರ್,
ಜನರಲ್ ಆಸ್ಪತ್ರೆ ಎದುರು, ಮಂಗಳೂರು



ಸ್ಕಿಬ್ಸ್ ಎಗ್ಯೂ ಸ್ಪೆಸಿಫಿಕ್

ಕೋಟ್ಯಾಧೀಶನಿಗೂ ಬಡತೊಟಿಗೂ ಇದುವೇ ರಾಜಮದ್ದು

ಮಲೇರಿಯ, ಇನ್‌ಫ್ಲುಯಂಜಾ ಮತ್ತು ಜ್ವರಗಳನ್ನು ಗುಣಪಡಿಸುತ್ತದೆ.

ಮೆಡನ್ ಸನ್ಸ್ ಎಂಡ್ ಕೋ.,
ಬೊಂಬಾಯಿ, 2.

MADON SONS & Co
PHARMACEUTICAL CHEMISTS, BOMBAY

ಕೂಪ್ರನ್ ಬಂಗಾರದ ಮುಚ್ಚಳದ ನಳಿಗೆ(tube)ಗಳು

ಸ್ಕ್ರೂ ಕೇಪ್ ಮತ್ತು ಕ್ಲಿಪ್ ಕೇಪ್‌ಗಳನ್ನು ಸಂಗ್ರಹಿಸಿರಿ—

ಸುಂದರವಾದ ಉಚಿತ ಉಡುಗೊರೆಗಳನ್ನು ಪಡೆಯಿರಿ.

ಈ ಕೆಳಗೆ ಕೆಲವನ್ನು ಕೊಟ್ಟಿರುತ್ತದೆ—

ಕನ್ನಡಿ ಸಹಿತವಿರುವ ಸೇಫ್ಟಿರೇಜರ್ ಪೆಟ್ಟಿಗೆಯೊಂದು, ಒಂದು ಪೆಟ್ಟಿಗೆ ಬ್ಲೇಡ್‌ಗಳು. ಮೊರೊಕ್ಕೊ ಚರ್ಮದ ಚೀಲ (ಇದರಲ್ಲಿ ವಿಭಾಗಗಳಿವೆ.) ಫೌಂಟನ್ ಪೆನ್; 14 ಕ್ಯಾರೆಟ್ ಬಂಗಾರದ ನಿಬ್; ಇರಿಡಿಯಮ್ ಇರುವಂಥದ್ದು. ಸೆಲ್ಫ್ ಫಿಲ್ಲಿಂಗ್ ರೋಲ್ಡ್‌ಗೋಲ್ಡ್ ಪಟ್ಟಿ ಮತ್ತು ಕ್ಲಿಪ್ ಇದೆ. ಪ್ರಸಿದ್ಧ ಪೆಟ್ಟಿ ನವನೂನೆದ್ದು ಸ್ತ್ರೀಯರ ಸುಂದರ ಕೈಪೆಟ್ಟಿಗೆ; ಕನ್ನಡಿಯಿದೆ, ಅದರೊಡನೆ ಜೇಬಿನ ಪಾಕೆಟ್ ಇದೆ.

ಮನೋಹರವಾದ ಮಣಿಕಟ್ಟಿನ ಗಡಿಯಾರ.

ಸ್ವಿಸ್ ತಯಾರಿಯ ಲಿವರ್ ರಿಸ್ಟ್‌ವಾಚ್ (ಜಂಪಿಂಗ್ ಫಿಗರ್ಸ್)

ವಿವರಕ್ಕೆ ಗಿಫ್ಟ್‌ಕೂಪನ್‌ಗಳನ್ನು ಕಾಣಿರಿ ಅಥವಾ

ಕೂಪ್ರನ್ ಕೆಮಿಕಲ್ ಕೊ., ಲಿಮಿಟೆಡ್, 83–85 ಹಾರ್ನ್‌ಬೀ ರೋಡ್, ಮುಂಬಾಯಿ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ

Notice.

In the Court of the District Judge of South Kanara.

O. P. No. 145/1928.
E. I. A. 208/1934.

Between—

K. Ramesh Rao—Petitioner.

In the matter of the Will of Mrs. Tellichery Amba Bai.

Notice is hereby given that the Petitioner has filed an application before the above Court praying that the Succession Certificate granted on 8-7-1929 in the above O. P. 145/28 may be extended to the debts and securities specified in this petition and the said Certificate amended on the strength of the above said Will and the said application is posted to 4—12—1934 for hearing before the above Court at 11 A. M. Any person interested in the matter may be present at the hearing on the said date before the said Court.

Mangalore } G. Narayana Rao,
19-11-34 } *Vakil for Petitioner.*

ಅಶಕ್ತತೆಯು ಅಪಾಯಕರ!



ಶಕ್ತಿ ಮತ್ತು ಚೈತನ್ಯಗಳನ್ನು ಕಳೆದುಕೊಳ್ಳುವುದು—ತಿನ್ನುವುದಕ್ಕೂ ಅಥವಾ ಕೆಲಸಮಾಡುವುದಕ್ಕೂ ಇಚ್ಛೆಯಿಲ್ಲದಿರುವುದು—ಜೀವನದ ಭಾಗ್ಯವನ್ನುಣ್ಣಲು ಸಾಮರ್ಥ್ಯವಿಲ್ಲದಿರುವುದು—ಇದಕ್ಕೆಲ್ಲ ನಿಮಗೆ ತಿಳಿದಿರುವ ಕೆಲವು ಕಾರಣಗಳಿರುವುವು.

ಇದೆಲ್ಲ ಕುಗ್ಗುತ್ತಿರುವ ಆರೋಗ್ಯದ ಲಕ್ಷಣಗಳೆಂದು ನೀವು ಬಲ್ಲಿರಿ. ಇದರೊಡನೆ ಭಯಂಕರ ಪರಿಣಾಮವೂ ತಲೆದೋರುವುದು—ಕ್ಷಯ, ಪಕ್ಷವಾತ, ತ್ವಾಕ್ಷುಕುಂದಿ ಉಂಟಾಗುವ ದುಷ್ಪರಿಣಾಮಗಳಲ್ಲಿ ಕೆಲವಾಗಿವೆ.

ಇಂತಹ ವ್ಯಾಧಿಯು ತಲೆದೋರಿತೆಂದು ಭಾಸವಾದೊಡನೆ ಅದನ್ನು ಓಡಿಸುವುದಕ್ಕೆ ಓಡಾಗಬೇಕಿರಿ. ಭದ್ರವಾದ ಶಾಸ್ತ್ರೀಯವಾದ (ಮುಂದಕ್ಕೆ ದುಷ್ಪರಿಣಾಮವು ತಲೆದೋರದಂತಹ) ಶೀಘ್ರ ಫಲಕಾರಿಯಾದ ಔಷಧವನ್ನು ಸೇವಿಸಿರಿ.

ಎಂತೇನೋ ಅನೇಕ ಟಾನಿಕ್‌ಗಳಿರುವುವಾದರೂ ಎಲ್ಲವೂ ಅವುಗಳ ಮೇಲೆ ಪೂರ್ಣ ನಂಬಿಕೆಯಿಂದ ಇರಬೇಡಿ ಅನೇಕ ಜೀವಗಳು ಜೀವನದ ಸುಖವನ್ನು ಅಲಕ್ಷ್ಯದಿಂದಲೂ, ಅಜ್ಞಾನದಿಂದಲೂ ಕಳೆಕೊಂಡಿವೆ. ನಿಮಗೆ ಯಾವುದು ಹಿತಕರವೆಂದು ಶೋಧಿಸಿ ತಿಳಿಯಿರಿ—ಯಾವುದು ಪ್ರಯೋಗದಲ್ಲಿದೆ, ಯಾವುದು ಜಾಣತನದ ವೈದ್ಯರಿಂದ ಪ್ರಶಂಸಿಸಲ್ಪಟ್ಟಿದೆ—ಯಾವುದು ಸಾವಿರಾರು ರೋಗಿಗಳ ಮೆಚ್ಚುಗೆಗೆ ಪಾತ್ರವಾಗಿದೆಯೋ ಯಾವುದು ಬಹಳ ಬಲವಾದ ರೋಗಗಳನ್ನೂ ಓಡಿಸುವುದೋ ಅದನ್ನುಪಯೋಗಿಸಿರಿ.

ಅಸ್‌ಗಂಧರಾ

ಎಂಬುದನ್ನು ನೆನಪಿನಲ್ಲಿಡುವುದು ಉತ್ತಮ.

ಸಾಲಾಮಿಸ್ರಿ (ಶಕ್ತಿವರ್ಧನೆಗಾಗಿ) ಯು ಮಿಶ್ರಣಕಾಲ್ಸಿಯಮ್ (ದೀರ್ಘಾಯುಷ್ಯಕ್ಕೆ) ಫೋಸ್‌ಫರಸ್ (ಮೆದುಳಿಗಾಗಿ) ಸಸ್ಯಜನ್ಯ ಜೀವನಸಾರ (ಅವುಗಳ ವಿವಿಧ ಗುಣಗಳಿಗಾಗಿ) ಹಿಂದೂದೇಶದ ಮೂಲಿಕೆ ಮತ್ತು ಬೇರುಗಳ ರಸ (ದೇಹದಾರ್ಢ್ಯವನ್ನು ಹೆಚ್ಚಿಸುವುದಕ್ಕೆ) ಇವುಗಳಿರುವ ಟೋನಿಕ್ ಎಂದರೆ ಇದೊಂದೇ. ಅದರ ಅಮೋಘ ಗುಣಗಳಿಂದಾಗಿ ಇದು ಅಖಿಲಭಾರತ ವೈದ್ಯಸಮ್ಮೇಳನ (ಮದ್ರಾಸ್ ಗವರ್ನರರ ನೇತೃತ್ವದಲ್ಲಿ ಜರಗಿದ ಎ. ಐ. ಎಸ್. ಎಂಡ್ ಎಸ್. ವಸ್ತು ಪ್ರದರ್ಶನ) ದಲ್ಲಿ ಭಂಗಾರದ ಪದಕವನ್ನು ಹೊಂದಿರುತ್ತದೆ.

~~ನಮ್ಮ ನುಡಿಗಳನ್ನೇ ಸ್ವೀಕರಿಸಬೇಡಿ! ಇದನ್ನುಪಯೋಗಿಸಿದವರ ನುಡಿಗಳನ್ನು ಕೇಳಿರಿ.~~

'ಅಸ್‌ಗಂಧರಾ'ವೆಂಬುದಕ್ಕೆ ಕ್ರಯ ಕಡಿಮೆ;

ಇನ್ನಿತರ ಟೋನಿಕ್‌ಗಳಿಗಿಂತ ವಿಶೇಷ ಗುಣಕಾರಿ.

ಪೆರಗನ್ ಪ್ರೊಡಕ್ಟ್ಸ್ ಕಂಪೆನಿ,

ಸ್ವದೇಶೀ ಔಷಧಗಳ ಇಲಾಖೆ.

ಬೆಲ್ಲಾರ್ಡ್ ಎಸ್ಟೇಟ್, ಬೊಂಬಾಯಿ.

ವಿ. ಸೂ—ಹಿಂದೂಸ್ಥಾನ ಮತ್ತು ಬರ್ಮಾಗಳ ಪ್ರಖ್ಯಾತ ಕೆಮಿಸ್ಟರರಲ್ಲಿ ದೊರೆಯುತ್ತದೆ.

ಮದ್ರಾಸು ಪ್ರಾಂತ್ಯಕ್ಕೆ ಡಿಸ್ಟ್ರಿಬ್ಯೂಟರರು—ಇಂಡಿಯನ್ ಟ್ರೇಡಿಂಗ್ ಕೊರ್ಪರೇಶನ್, 188 ಮಾರ್ಟ್ ರೋಡ್, ಮದ್ರಾಸು.

ದಕ್ಷಿಣ ಕನ್ನಡ ಕೊಡಗು ಮತ್ತು ಮಲಬಾರ್ ಜಿಲ್ಲೆಗಳಿಗೆ ಡಿಸ್ಟ್ರಿಬ್ಯೂಟರರು— ಶೈ ಫಾರ್ಮಸಿ, ಎಂಡ್ ಕೊ., ಕಾರ್‌ಸ್ಟ್ರೀಟ್, ಮಂಗಳೂರು.

ಪಾರ್ಲಿಮೆಂಟ್ ಅಧಿವೇಶನ: ಸಾರ್ವಭೌಮರ ಭಾಷಣ.

ಪಾರ್ಲಿಮೆಂಟಿನ ಹೊಸ ಅಧಿವೇಶನವನ್ನು ನಮ್ಮ ಸಾರ್ವಭೌಮರು, ಮಹಾರಾಜ್ಞಿಯವರ ಸಮೇತ ತೆರಳಿ, ಆರಂಭೋತ್ಸವ ಭಾಷಣದಿಂದ—ತಾ॥ ೨೦ರಲ್ಲಿ ತೆರೆದರು. ಪಾರ್ಲಿಮೆಂಟ್ ಸಭಾಗೃಹವು ಸದಸ್ಯರುಗಳಿಂದಲೂ, ಪ್ರೇಕ್ಷಕರಿಂದಲೂ ಕಿಕ್ಕಿರಿದಿದ್ದಿತು. ರಾಜಕುಮಾರರೂ ಈ ಸಂದರ್ಭದಲ್ಲಿ ದಯಮಾಡಿಸಿದ್ದರು.

ಸಾರ್ವಭೌಮರು ತಮ್ಮ ಭಾಷಣವನ್ನಾರಂಭಿಸುತ್ತ "ಪ್ರಪಂಚದ ಶಾಂತಿರಕ್ಷಣಾ ಕಾರ್ಯವು ನನ್ನ ಸರಕಾರದ ನಿತ್ಯದ ಮಹತ್ ಚಿಂತನೆಯಾಗಿದೆ. ಸರಕಾರವು ಲೀಗ್ ಒಫ್ ನೇಶನ್ಸಿನ ಅಧಿಕಾರವನ್ನೂ ಬೆಂಬಲವನ್ನೂ ತನ್ನ ಧೋರಣೆಯ ಮುಖ್ಯಾಂಗವಾಗಿ ದೃಷ್ಟಿಪಥದಲ್ಲಿರಿಸಿ, ಆ ಮಹಾಕಾರ್ಯವನ್ನು ಸಾಧಿಸುವ ಯತ್ನದಲ್ಲಿ ಮುಂದೊತ್ತುವುದು. ಶಸ್ತ್ರಸನ್ಯಾಸ ಪರಿಷದದ ಕಾರ್ಯಗಳನ್ನು ಮುಂದೊತ್ತಲಾಗುವುದಾಗಿ ಭರವಸೆಯಿದೆ. ಸ್ಪಷ್ಟ ಫಲವು ಲಭಿಸುವಂತೆ ರಾಜಕೀಯ ವಾತಾವರಣವು ಅನುಕೂಲವಿದೆ" ಎಂದು ಅಪ್ಪಣೆ ಕೊಡಿಸಿದರು.

ಈಗಾಗಲೇ ಪ್ರಕಟವಾದ, ಹಿಂದೂದೇಶದ ಭಾವೀ ಸುಧಾರಣಾ ವಿಷಯಕವಾದ ಸಿಲೆಕ್ಟ್ ಕಮಿಟಿಯ ವರದಿಯ ಕುರಿತು ಆಡುತ್ತ ನಮ್ಮ ಸಾರ್ವಭೌಮರವರು,—ಪಾರ್ಲಿಮೆಂಟು ಅದರ ವಿಮರ್ಶೆ ಮಾಡುತ್ತ ಸಾಮ್ರಾಜ್ಯದ ಮೇಲ್ಮೆಯನ್ನು ದೃಷ್ಟಿಯಲ್ಲಿರಿಸಿ, ಅದೊಂದೇ ಗುರಿಯಿಂದ ನಿರ್ಧಾರಕ್ಕೆ ಬರಬೇಕೆಂದು ವಿನಂತಿಸಿದರು.

ಅಂತರಾಷ್ಟ್ರೀಯ ವ್ಯಾಪಾರ ವಹಿವಾಟಗಳು ತಮ್ಮ ಪೂರ್ವದ ಪೂರ್ಣತ್ವವನ್ನಿನ್ನೂ ಪಡೆದಿಲ್ಲವಾದರೂ ಬರುವ ವರ್ಷ ಅದರ ಶೀಘ್ರ ಪ್ರಗತಿಯು ದೃಗ್ಗೋಚರವಾಗದಿರದೆಂಬ ತಮ್ಮ ಭರವಸೆಯನ್ನು ವ್ಯಕ್ತಪಡಿಸಿ, ಬ್ರಿಟ್ನಿನ್ ಮತ್ತು ಇತರ ದೇಶಗಳೊಳಗಿನ ಭರವಸೆ—ವಾತ್ಸಲ್ಯಗಳು ಪುನಃ ಯಥಾವತ್ತಾಗಿ ಸ್ಥಾಪಿಸಲ್ಪಡುವುದಾಗಿ ಹಾರೈಸಿದರು.

ಕೊನೆಯದಾಗಿ,—ಬ್ರಿಟ್ನಿನಲ್ಲಿ ಬಡವರ ಕೊಳಕು ಗುಡಿಸಲುಗಳನ್ನು ತೆಗೆಸಿ ಹೊಸ ಕಟ್ಟಡಗಳನ್ನು ಕಟ್ಟಿಸುವ, ನಿರಾಶ್ರಿತರಿಗೆ ಸಹಾಯ ಸಲ್ಲಿಸುವ, ವಾಯುಮಾರ್ಗಗಳ ಸರ್ವಿಸಿನ ಬಡಾವಣೆ ಸಂಬಂಧವಾದ ಆಶ್ವಾಸನೆ ಕೊಟ್ಟು ಭಾಷಣವನ್ನು ಅಂತ್ಯಗೊಳಿಸಿದರು.

ಜಾಪಾನ್ ಸ್ಪರ್ಧೆಯ ವಿಚಾರವೇನು?

ಹೀಗೆಂದು,—ಲಂಕಶಯರ್ ಕಡೆಯ ಪಾರ್ಲಿಮೆಂಟ್ ಸದಸ್ಯರೊಬ್ಬರ ಪ್ರಶ್ನೆ. ಚಕ್ರವರ್ತಿಯವರು, ಜಾಪಾನ್ ಸ್ಪರ್ಧೆಯನ್ನು ತಡೆದು ಬ್ರಿಟ್ನಿನ ಶುದ್ಧ ಹಾಗೂ ಕೃತಕ ರೇಶ್ಮೆ ವ್ಯಾಪಾರವನ್ನು ಸುರಕ್ಷಿತಗೊಳಿಸುವ ಯಾವ ಆಶ್ವಾಸನೆಯನ್ನೂ ಕೊಟ್ಟಿಲ್ಲದುದಕ್ಕಾಗಿ ಅವರು ನೊಂದುಕೊಂಡು, ಈ ವಿಚಾರವನ್ನು ಅಲಕ್ಷಿಸಿದುದಕ್ಕಾಗಿ ದುಃಖವನ್ನು ಸೂಚಿಸಿ ಒಂದು ಠರಾವನ್ನು ಪಾರ್ಲಿಮೆಂಟಿನಲ್ಲಿ ತರುವರಂತೆ!

ಚಕ್ರವರ್ತಿಯವರು ಎಷ್ಟನ್ನು ಹೇಳಬೇಕಾಗಿದ್ದಿತೋ, ಸರಕಾರವು ಯಾವುದನ್ನು ಕಾರ್ಯರೂಪಕ್ಕೆ ಹಚ್ಚಲು ನಿರ್ಧರಿಸಿತ್ತೊ ಅಷ್ಟನ್ನೆ—ಅದನ್ನೇ ಅಪ್ಪಣೆ ಕೊಡಿಸಿರುವರೆನ್ನಬಹುದು.

ಮಾಸ್ಟರ್ ಮೋದಕ್.

"ಶ್ಯಾಮ ಸುಂದರ" ಎಂಬ ಚಿತ್ರದಲ್ಲಿ ಪಾತ್ರವಹಿಸಿ ಜನರ ಮೆಚ್ಚುಗೆಗೆ ಪಾತ್ರನಾದೀ ಬಾಲ ನಟನು "ನಂದ ಕೆ ಲಾಲ" ಅಥವಾ "ರಾಧಾ ಮೋಹನ್" ಎಂಬ ಚಿತ್ರದಲ್ಲಿಯೂ ಶ್ರೀಕೃಷ್ಣನ ಪಾತ್ರವಹಿಸಿ ಅಭಿನಯಿಸಿರುವನು. (ಈ ಚಿತ್ರವು ಬರುವ ವಾರ ಶ್ರೀ ಕೃಷ್ಣ ಸಿನೆಮಾದಲ್ಲಿ ಪ್ರದರ್ಶಿಸಲ್ಪಡುವುದು.)

ನಮ್ಮ ಮಹಾಮಾನ್ಯ ವೈಸ್ರಾಯರ ಎರಡನೆ ವಿಮಾನ.

ಮಹಾಮಾನ್ಯ ಲೋರ್ಡ್ ವಿಲ್ಲಿಂಗ್ಡನ್ನರ ಉಪಯೋಗಾರ್ಥ, ಮ್ಯಾಂಚೆಸ್ಟರಿನ "ಎವ್ರೋ ವರ್ಕ್ಸ್" ಎಂಬಲ್ಲಿ ಹೊಸ ವಿಮಾನವೊಂದು ಸಿದ್ಧವಾಗುತ್ತಿದೆ. (ಇವರು ಕಳೆದ ವರ್ಷ ಒಂದು ವಿಮಾನವನ್ನು ಕೊಂಡುಕೊಂಡಿದ್ದರು.) ಈ ವಿಮಾನವು ಆಧುನಿಕ ಸೌಕರ್ಯಗಳನ್ನುಳ್ಳದಾಗಿದೆ. ಈ ವಿಷಯವಾಗಿ ಇಲ್ಲಿಯ "ನೆಶನಲ್ ಕಾಲ್" ಪತ್ರಿಕೆಯು ಹೀಗೆ ಬರೆಯುತ್ತಿದೆ:—

"ಇಂಡಿಯನ್ ಎಕ್ಸ್‌ಚೆಕ್ಕರಿಂಗೆ ಕೆಲವು ಸಾವಿರ ರೂಪಾಯಿಗಳನ್ನು ಸುರುವುವ ಸಮಯವು ಬಂತು. ಕಳೆದ ವರ್ಷ ಇವರು ಒಂದು ವಿಮಾನವನ್ನು ತರಿಸಿದರು. ಈಗ ಪ್ರಾಯಶಃ ಅದು ಹಳತಾಯಿತು. ಆಕಾಶ ಹಾರಾಟದಲ್ಲಾದ ಪ್ರಗತಿಯೊಂದಿಗೆ ನಮ್ಮ ವೈಸರಾಯರೂ ಹೆಜ್ಜೆಯಿಡುತ್ತಿರುವರು. ಈ ಹೊಸ ವಿಮಾನದ ಸರಿಯಾದ ಬೆಲೆಯೂ, ಅದನ್ನು ಯಾರು ತೆರುವರೆಂಬುದೂ ಇನ್ನೂ ತಿಳಿದು ಬಂದಿಲ್ಲ. ಅದರೆ,—ವೈಸರಾಯರು ತಮ್ಮ ಸ್ವಂತ ಹಣವನ್ನು ತೆತ್ತು ಕೊಂಡುಕೊಳ್ಳಲಾರರು."

'ಒಂದು ನಗುಮೊಗವಾದರೂ ಇಲ್ಲ!'

ಇದು ರಷ್ಯದ ಕುರಿತು ಈಗ ಒಕ್ಸ್‌ಫರ್ಡಿನಲ್ಲಾದ ಅಭಿಪ್ರಾಯ: ಇತ್ತೀಚೆಗೆ ಒಕ್ಸ್‌ಫರ್ಡಿನ ವಿದ್ಯಾರ್ಥಿ ಕೂಟಗಳಲ್ಲಿ ರಷ್ಯದ ವಿಷಯವಾಗಿಯೇ ತರ್ಕಗಳು ಹೆಚ್ಚುತ್ತಿವೆ. ಸುಮಾರು ಮೂರು ತಿಂಗಳ ಹಿಂದೆ ಲೋರ್ಡ್ ನಫೀಲ್ಡರವರು, ರಷ್ಯವು ನಾವೆಣಿಸಿದುದಕ್ಕೂ ಸುಖಕರವಾದ ಸ್ವರ್ಗವಲ್ಲವೆಂಬುದಾಗಿ ಹೇಳಲು, ಓರ್ವ ವಿದ್ಯಾರ್ಥಿಯು ಎದ್ದು ನಿಂತು, ಅವರನ್ನು ಪ್ರತಿಭಟಿಸಿದನು. ನಫೀಲ್ಡ ಪ್ರಭುಗಳು ಆತನಿಗೆ, ತನ್ನ ವೆಚ್ಚದಲ್ಲಿ ರಷ್ಯಕ್ಕೆ ಹೋಗಿ ಬರುವಂತೆ ಆಗಲೇ ಹೇಳಿದರು; ಆತನೂ ಆ ಸ್ಪರ್ಧಾವಚನವನ್ನೆತ್ತಿಹಿಡಿದು, ಆಗಲೇ ಹೊರಟನು! ಮೂರು ವಾರಗಳ ತನಕ ರಷ್ಯದಲ್ಲಿ ಸಂಚರಿಸಿ ಬಂದ ಆತನ ಅಭಿಪ್ರಾಯವಿಷ್ಟು:—'ರಷ್ಯದಲ್ಲಿಂದು ಸುಖ—ಕ್ಷೇಮಗಳಿಂದಿರುವ ವಾರ್ತೆಗಳಲ್ಲಿ ನಿಜಾಂಶವು ಕಡಿಮೆ; ಮನೆಮಠಗಳ ಯೋಜನೆಗಳು ಸುಖಕರವಾಗಿ ತೋರುವುದಿಲ್ಲ; ನೌಕರಿಯು ಸುಖವಿಲ್ಲ; ರಾಜ್ಯಭಾರದ ಕ್ರಮದಲ್ಲಿ ಅಲ್ಲಲ್ಲಿ ಅತೃಪ್ತಿ ತೋರುತ್ತಿದೆ; ನಾನು ನನ್ನ ಮೂರು ವಾರಗಳ ಸಂಚಾರದಲ್ಲಿ ಅಲ್ಲಿ ಒಂದೇ ಒಂದು ನಗುಮೊಗವನ್ನು ಕಾಣದಾದೆನು!'

ರಷ್ಯದ ಒಂದು ಸಾಮಾನ್ಯಚಿತ್ರವೇನು?

ಬರ್ಮಿಂಗ್ಹ್ಯಾಮಿನ ಶಾಲಾ ಮಾಸ್ತರರೊಬ್ಬರು ರಷ್ಯದಲ್ಲಿ ಎರಡು ವರ್ಷಗಳ ಕಾಲ ನಿಂತು ಅನುಭವ ಪಡೆದವರು ತಮ್ಮ ಅಭಿಪ್ರಾಯಗಳನ್ನು ಈ ಬಗೆಯಾಗಿ, 'ಅತಿಶಯೋಕ್ತಿಯಿಲ್ಲದೆ' ಸ್ಪಷ್ಟೀಕರಿಸಿರುವರು:—'ರಷ್ಯವು ಪ್ರಾಪಂಚಿಕ ಸ್ವರ್ಗವೆಂದು ಹೇಳುವುದು ಸತ್ಯವಾಗದು. ಹಾಗೆಯೇ ಅಲ್ಲಿಯ ಜೀವನ ಪರಿಸ್ಥಿತಿಯನ್ನು ಪಶ್ಚಿಮ ದೇಶಗಳ ನಾಗರಿಕರ ಜೀವನದೊಂದಿಗೆ ಹೋಲಿಸುವುದೂ ತಪ್ಪು. 'ಸಂಪೂರ್ಣ'ವೆನಿಸಬೇಕಾದರೆ ರಷ್ಯವು ಇನ್ನೆಷ್ಟೋ ಮುಂದರಿಯಬೇಕಾಗಿದೆ. ಅಲ್ಲಿಯ ಕೈಗಾರಿಕೆಯ ಅಭಿವೃದ್ಧಿಯು ಶೀಘ್ರಗತಿಯುಳ್ಳಾಗಿದೆಯೆಂಬುದು ನಿಜ. ತನ್ನ ಆಹಾರದ ಬಗ್ಗೆ ದವಸ-ಧಾನ್ಯಗಳ ಬೆಳೆಯನ್ನು ರಷ್ಯವು ಅಧಿಕಾಧಿಕವಾಗಿ ಮಾಡುವ ಯತ್ನದಲ್ಲಿದೆ.

'ರಷ್ಯದಲ್ಲಿ ಮಿಲ್ಲಿಯಗಟ್ಲೆ ಜನರು, ಹೊಟ್ಟೆಗಿಲ್ಲದೆ ಮಡಿದರೆನ್ನುವ ಸುದ್ದಿಗಳನ್ನು, ಅಲ್ಲಿಗೆ ಹೋಗಿ ಅಲ್ಲಿಯ ಪರಿಸ್ಥಿತಿಗಳನ್ನು ಅವಲೋಕಿಸಿ ಬಂದವರಾರೂ ದೃಢೀಕರಿಸಿಲ್ಲ. ಅಲ್ಲಿ ದವಸಧಾನ್ಯಗಳ ಅಭಾವವು ಇಲ್ಲದಿಲ್ಲ. ಆದರೆ ಅಷ್ಟು ಮಾತ್ರದಿಂದಲೇ ಅಲ್ಲಿ ಕ್ಷಾಮವೆನ್ನುವುದೂ ತಪ್ಪು.

'ಮಕ್ಕಳ ಶಿಕ್ಷಣವನ್ನು ನೂತನ ವಿಧಾನಗಳಿಂದ ಸಾಧಿಸಿ ತರುವಲ್ಲಿ ರಷ್ಯಕ್ಕೆ ಪ್ರಥಮ ಸ್ಥಾನ ಸಲ್ಲುವುದು.'

ಇದರಿಂದ ನಮಗೆ ತಿಳಿದುಬರುವುದಿಷ್ಟು: ರಷ್ಯವನ್ನು ಇತರರ ದೃಷ್ಟಿಯಲ್ಲಿ ಹೀನವೆನಿಸ ಲೆತ್ನಿಸಿ ಪ್ರಚಾರಕಾರ್ಯ ಮಾಡುವವರು ಅಪ್ರತ್ಯಕ್ಷವಾಗಿಯಾದರೂ ಅದನ್ನು ಹೊಗಳದೆ ಇರರು!

೧೯೩೪ರ ಬೋನಸ್‌ನ ವರ್ಷ

ನೇಶನಲ್ ಇಂಡಿಯನ್ ಲೈಫ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್ 12 ಮಿಶನ್ ರೋ ಕಲ್ಕತ್ತ.

ಚೆಯರ್‌ಮೆನ್
ಸರ್ ಆರ್. ಎನ್. ಮುಖರ್ಜಿ, ಕೆ. ಸಿ. ಐ. ಇ. ಕೆ. ಸಿ. ವಿ. ಒ.

ಮೆನೇಜಿಂಗ್ ಏಜಂಟ್ಸ್
ಮಾರ್ಟಿನ್ ಎಂಡ್ ಕೊ.

೩೧–೧೨–೩೪ಕ್ಕೆ ನಡೆದು ಬಂದಿರುವ ಮತ್ತು ೩೧–೧೨–೩೪ರ ಒಳಗೆ ಪಡೆದ ಪೋಲಿಸಿಗಳು ಪ್ರಕೃತದ ೧೯೩೪ಕ್ಕೆ ಅಂತ್ಯವಾಗುವ ಪಂಚವಾರ್ಷಿಕ ಲಾಭದಲ್ಲಿ ಭಾಗವಹಿಸಲು ಹಕ್ಕುಳ್ಳವುಗಳಾಗಿವೆ.

ಯೋಗ್ಯ ಶರ್ತಗಳ ಮೇಲೆ ಏಜಂಟರು ಬೇಕಾಗಿದ್ದಾರೆ.

ವಿವರಗಳಿಗಾಗಿ ಬರೆಯಿರಿ:—

ಬಿ. ವಿ. ಎಲ್ ಪ್ರಭು, ಏಜಂಟ್,
ಶ್ರೀಕೃಷ್ಣ ನೊವೆಲ್ಟಿ ಹೌಸ್, ಮಾರ್ಕೆಟ್ ರೋಡ್, ಮಂಗಳೂರು.

ಟಿ. ವಿ. ರಾಘವಯ್ಯ, ಮದ್ರಾಸು ಬ್ರಾಂಚ್ ಮತ್ತು ಚಿತ್ರಿತ ಸಂಸ್ಥಾನಗಳಿಗೆ ಸೆಕ್ರೆಟರಿ,
ಟಿ. ಪಿ. ನಂಬ್ರ ೧೫೦, ಮದ್ರಾಸು

[illegible]a Banking Corporation Udipi, Ltd.

[illegible]—UDIPI, S. K. (Incorporated in British India) ESTD. 1906.

[illegible]—1. Udipi, 2. Coondapoor, 3. Car Street Mangalore, 4. Shimoga, 5. Madras, 6. Bunder Mangalore, 7. Mercara.

[illegible] Capital Rs. 3,50,000/- Subscribed & Paid up Rs. 2,25,000 Reserve & other Funds—2,60,953—7—8

ಇದರ ಒಂದು ಶಾಖೆಯು ಇದೇ ತಿಂಗಳ ತಾ. 12ನೇ ಸೋಮವಾರ ದಿನ ಮಂಗಳೂರು ಬಂದರದಲ್ಲಿ
(ಪಂಚನ್ಲಾಲ್ ಬಿಲ್ಡಿಂಗಿನ ಮಾಳಿಗೆಯಲ್ಲಿ) ತೆರೆಯೋಣಾಗಿದೆ.

ಇದರ ಇನ್ನೊಂದು ಶಾಖೆಯು ಇದೇ ತಿಂಗಳ ತಾ. 16ನೇ ಶುಕ್ರವಾರ ಮಡಿಕೇರಿಯಲ್ಲಿ ತೆರೆಯೋಣಾಗಿದೆ.

Office of the Corporation,
Udipi, S. K. 17—11—1934.

M. Shrinivas Prabhu,
Ag. Manager.

(Regd)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಷ್ಟಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು:— ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ, ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3-8-0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪ್ಪೋ, ಮದರಾಸು ಮತ್ತು ಬೊಂಬಾಯಿ

THE BOMBAY LIFE ASSURANCE CO., LTD.

Established 1908.

EXCELLENT BONUSES.

1933 Valuation Results.

	WHOLE LIFE	ENDOWMENT	
1925-'30	20	15	Per thousand per year.
1931-'33	23	18	

Every "With Profit" Policy is entitled to "PERMANENT DISABILITY BENEFITS."—No extra premium.

PAYS DOUBLE THE ASSURED SUM IN THE EVENT OF DEATH BY ACCIDENT ON PAYMENT OF MINIMUM EXTRA PREMIUM OF RS. 1-8-0 PER RS. 1000 POLICY PER YEAR.

Existing Policy-holders may avail of this benefit. For particulars apply to:—

Offices at:— Udipi, Mangalore, Bangalore, Calicut, Madras and Bombay.

KOCHIKAR BROTHERS,
Madras Branch Secretaries.

Karnataka Chemical and Pharmaceutical Works, Ltd., Udipi. (South India)

ಕರ್ನಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ನಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ನಾಟಕ ಹೌಸ್ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚು ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ನಾಟಕ ಸ್ನೋ, ಕರ್ನಾಟಕ ಬ್ರಿಲ್ಲಿಂಟೈನ್, ಆರೋರಾ ಕ್ರೀಮ್, ಕ್ವಿಮೊರ್ ಲಿಮೊನಿಸ್, ಕರ್ನಾಟಕ ರೋಸ ಪೌಡರ್.

ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೋಪತಿಕ್ ಔಷಧಗಳೂ, ಫೌಂಟನ್ ಪೇನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಪ್ಪಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:-ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೋ:-(1) ದೇವಕರಣ ಮೆನ್ಶನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾನಪ್ಪ ನ್ಯಾಕನ ಬೀದಿ, ಜಾರ್ಜ್ ಟೌನ್ ಮದರಾಸು.

ಕರ್ನಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

Edited, Printed & Published By A. S. Kamath at the Sharada Press, Car Street, Mangalore.

NOW READY!
Sharada
POCKET DIARIES
1935
ಇನಿಯ
ಶಾರದಾ
ಪೋಕೆಟ್ ಡೈರಿಗಳು
ಸಿದ್ಧವಾಗಿವೆ.
ಶಾಖಾ ಸ್ಥಳಗಳಲ್ಲಿವೆ.
ವಿಚಾರಿಸಿರಿ.

SWADESHABHIMANI

"LIFE ASSURANCE
IS
NO EXPENSE
BUT
AN INVESTMENT."
Safeguard yourself & your family TODAY
Buy a policy ... LIFE
Madras Branch Secretaries:
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906
(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)
ಪ್ರತಿ ಶುಕ್ರವಾರದಲ್ಲಿ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ.

ಪುಸ್ತಕ ೨೮. ಮಂಗಳೂರು ತಾ. ೧೪ನೇ ಶುಕ್ರವಾರ ದಶಂಬರ ೧೯೩೪. (14-12-'34) ಸಂಚಿಕೆ ೪೯

ಖಾನ್ ಅಬ್ದುಲ್ ಗಫರ್‌ಖಾನರನ್ನು ದಸ್ತಗಿರಿ ಮಾಡಿದರು!!!

ಶ್ರೀ ಸುಭಾಷಚಂದ್ರ ಬೋಸರ ಮೇಲೆ ನಿರ್ಬಂಧದ ನೋಟೀಸು!

ಮಹಾತ್ಮಾ ಗಾಂಧಿಯವರು ಗಡಿನಾಡಿಗೆ ಹೋಗಬಾರದು! ಡಾ। ಸತ್ಯಪಾಲರನ್ನು ಕೈದುಮಾಡಿದರು!

ಮಹಾತ್ಮಾಜೀಯವರು ಸತ್ಯಾಗ್ರಹವನ್ನಾರಂಭಿಸುವರೇ?

ವಾರ್ಧಾದಲ್ಲಿ ಮಹಾತ್ಮಾಜೀಯವರೊಡನಿದ್ದ ಖಾನ್ ಅಬ್ದುಲ್ ಗಫರ್‌ಖಾನರನ್ನು ತಾ. ೭ನೇ ಸಂಜೆ ಪೋಲೀಸರು ಕೈದುಮಾಡಿದರು. ಈ ವಾರ್ತೆಯನ್ನು ಸ್ವಾಮಿ ಆನಂದರವರು ಟೆಲಿಫೋನಿನ ಮೂಲಕ ಒಡನೆ ಮುಂಬಾಯಿಯ ಶ್ರೀ। ಕೆ. ಎಮ್. ಮುನ್ಷಿಯವರಿಗೆ ತಿಳುಹಿಸಿದರು. ವಾರ್ತೆಯು ನಿಮಿಷಾರ್ಧದಲ್ಲಿ ನಗರದಲ್ಲಿ ವ್ಯಾಪಿಸಿತು.

ನವದಂಪತಿಗಳು.

ಶ್ರೀ। ಎನ್. ಕೇಶವ ಭಟ್ಟರು, ಬಾಲವಿಧವೆ ಶ್ರೀಮತಿ ನಾಗವೇಣಿಯನ್ನು, ಕಳೆದ ತಾ. ೩ನೇ ಸೋಮವಾರ ರಾತ್ರಿ, ಇಲ್ಲಿಯ ಥಿಯಾಸೊಫಿಕಲ್ ಲೋಜಿನಲ್ಲಿ ವಿವಾಹವಾದಾಗ ತೆಗೆದ ನವದಂಪತಿಗಳ ಛಾಯಾಚಿತ್ರ.

ಖಾನರು ಮುಂಬಾಯಿ ಕೊಂಗ್ರೆಸ್ ಸಭೆಯಲ್ಲಿ ಮಾಡಿದ ಭಾಷಣದ ಫಲಿತಾಂಶವಾಗಿ ಈ ದಸ್ತಗಿರಿಯನ್ನು ಮಾಡಲಾಯಿತೆಂದು ತಿಳಿದು ಬರುತ್ತದೆ.

ಮಹಾತ್ಮರೂ ಖಾನರೂ ಆಶ್ರಮದ ಉಪ್ಪರಿಗೆಯಲ್ಲಿ ಕುಳಿತಿದ್ದರು. ಅಷ್ಟರಲ್ಲಿ ಮುಂಬಾಯಿ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಒಂದು ಅಪ್ಪಣೆಯನ್ನು ಹಿಡಿದುಕೊಂಡು ಪೋಲೀಸ್ ಸುಪರಿಂಟೆಂಡೆಂಟರು ಆಶ್ರಮಕ್ಕೆ ಬಂದರು. ಈ ವಿಷಯವನ್ನು ಮೀರಾಬೆನ್ನರವರು ಮೇಲೆ ತಿಳಿಸಿದರು. ಅವರನ್ನು ಮೇಲೆ ಬರಹೇಳಿರೆಂದು ಗಾಂಧಿಜಿಯವರು ಮೀರಾಬೆನ್ನರಿಗೆ ಹೇಳಿದರು.

ಅದರಂತೆ ಡಿ. ಎಸ್. ಪಿ. ಯವರು ಉಪ್ಪರಿಗೆಯ ಮೇಲೆ ಬಂದು ಖಾನರನ್ನು ತಾನು ಕೈದು ಮಾಡಿರುವೆನೆಂದು ಹೇಳಿದರು.

ಮಹಾತ್ಮರು ವಾರಾಂಟನ್ನು ಕೇಳಿದರು. ಡಿ. ಎಸ್. ಪಿ. ಯವರು ಅದನ್ನವರ ಕೈಯಲ್ಲಿ ಕೊಟ್ಟರು ಗಾಂಧಿಜಿಯವರು ಅದನ್ನು ಖಾನರಿಗೆ ಓದಿ ಹೇಳಿದರು. ಖಾನರ ತಪ್ಪೇನೆಂದು ಅದರಲ್ಲಿ ಸೂಚಿತವಾಗಿರಲಿಲ್ಲ; ಸೆಕ್ಷನ್ ೧೨೪ Aಯ ಅನ್ವಯ ಅವರನ್ನು ದಸ್ತಗಿರಿ ಮಾಡಲಾಯಿತೆಂದು ಬರೆದಿತ್ತು. ಡಿ. ಎಸ್. ಪಿ. ಯವರು ಖಾನರನ್ನು ಪ್ರಶ್ನಿಸುತ್ತಾ ಅವರು ಹೊರಡಲು ಯಾವಾಗ ಸಿದ್ಧರಿರುವರೆಂದು ಕೇಳಿದರು. ಖಾನರು, ತಟ್ಟನೆ 'ನಾನು ಈಗಲೇ ಹೊರಟಿರುವೆನು' ಎಂದರು. ಅಷ್ಟಾಗುವಾಗ ಗಾಂಧಿಜಿಯವರು ಡಿ. ಎಸ್. ಪಿ. ಯವರು ಒಪ್ಪುವುದಾದರೆ ಖಾನರು ಸೇಟ್ ಜಮ್ನಾಲಾಲರ ಮನೆಯವರೆಗೆ ಹೋಗಿ ಅವರ ಸಹೋದರರನ್ನೂ ಮಕ್ಕಳನ್ನೂ ಕಂಡು ಬರುವಗು ಎಂದು ಸೂಚಿಸಿದರು.

ಖಾನರನ್ನು ಕೂಡಲೇ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರ ಆಫೀಸಿಗೆ ಮೋಟಾರಿನಲ್ಲಿ ಕರೆದೊಯ್ಯಲಾಯಿತು. ಅಲ್ಲಿ ದಾಖಲೆಯಾದನಂತರ ಅವರನ್ನು ಸೇಟ್ ಜಮ್ನಾಲಾಲರ ಮನೆಗೆ ಕೊಂಡೊಯ್ಯಲಾಯಿತು. ಅಲ್ಲಿ ಡಾ। ಖಾನ್ ಸಾಹೇಬರೂ ಇವರ ಮಕ್ಕಳೂ ಗಫರ್‌ಖಾನರನ್ನು ಬೀಳ್ಕೊಂಡರು.

ಅಬ್ದುಲ್ ಗಫರ್‌ಖಾನರು ಇನ್ನೂ ಕೆಲವು ದಿನಗಳಲ್ಲೇ ಬಂಗಾಳ ಪ್ರಾಂತ್ಯದ ಹಳ್ಳಿಗಳನ್ನು ಸುತ್ತಿಕೊಂಡು ಬರಬೇಕೆಂದು ಯೋಚಿಸಿದ್ದರು. ಪತ್ರಿಕಾಪ್ರತಿನಿಧಿಯು ಅವರನ್ನು ಸಂದರ್ಶಿಸಿದಾಗ ಅವರು "ನನ್ನ ದೇಶಿಗರಿಗೆ ಕೊಡಲು ನನ್ನಲ್ಲಿ ಸಂದೇಶವೇನೂ ಇರುವುದಿಲ್ಲ. ಆದರೆ ಒಂದು ಮಾತ್ರ ಇದೆ-ಅದೇ ಹಿಂದೂ ಮುಸಲ್ಮಾನ ಒಗ್ಗಟ್ಟು' ಹೀಗೆನ್ನುತ್ತಾ ಖಾನರು ಸಂತೋಷಚಿತ್ತರಾಗಿ ಡಿ. ಎಸ್. ಪಿ. ಯವರೊಡನೆ ಹೊರಟರು. ಪುನಃ ಪ್ರಶ್ನಿಸಿದ್ದಲ್ಲಿ ಅವರು-'ಬಂಗಾಳದ ನನ್ನ ಬಾಂಧವರಾದ ಮುಸಲ್ಮಾನರ ಅಲ್ಪ ಸೇವೆಯನ್ನು ಮಾಡಲು ನನಗೆ ಸಾಧ್ಯವಾಗಲಿಲ್ಲ;-ಇದಕ್ಕಾಗಿ ಮಾತ್ರ ನನಗೆ ದುಃಖವಿದೆ. ಅಲ್ಲದೆ ಗಡಿನಾಡಿನ ನನ್ನ ಸೋದರ ಸೋದರಿಯರಿಗೆ ನನ್ನ ಸ್ವಸ್ತಿವಚನವಿದೆ. ನನ್ನ ಈ ಬಂಧನವನ್ನು ಅವರು ಶಾಂತಿಯ ಧೈರ್ಯದಿಂದಲೂ ದೃಢತೆಯಿಂದಲೂ ಸ್ವೀಕರಿಸಲಿ; ಸತ್ಯ ಮತ್ತು ಅಹಿಂಸೆಗಳ ಮೂಲಕವೇ ನಮ್ಮ ಹೆಗ್ಗುರಿಯು ಮುಟ್ಟಲಿ. ಅಂತಃಕಲಹಗಳೆಲ್ಲ ಮರೆತು ಅವರು ಐಕ್ಯರಾಗಲಿ ಎಂದೇ ನನ್ನ ಆಶಯ' ಎಂದರು.

ಖಾನರು ಹೊರಡುವಾಗ ಗಾಂಧಿಜಿಯವರು "ಖಾನ್ ಸಾಹೇಬರೇ, ಈ ಸಲ ನಾವು ನಮ್ಮ ವಕಾಲತನ್ನು ಕಟ್ಟಿ ಪ್ರತಿಪಾದಿಸಬೇಕು. ಇದನ್ನಿಷ್ಟರಲ್ಲಿಯೇ ಬಿಡಬಾರದು" ಎಂದರು. ಅದಕ್ಕೆ ಖಾನರು "ಆದಾಗಬಹುದು, ಆದರೆ ನ್ಯಾಯಸ್ಥಾನದಲ್ಲಿ ನನ್ನನ್ನು ನಾನು ವಕಾಲತ್ತು ಮೂಲಕ ರಕ್ಷಿಸಿಕೊಳ್ಳಲಿಚ್ಛಿಸುವುದಿಲ್ಲ. ೧೯೧೯ರಿಂದ ಮೊದಲಾಗಿ ನ್ಯಾಯಸ್ಥಾನಗಳನ್ನು ಗಮನಿಸಬಾರದೆಂದು ನೀನೇ ನಮಗೆ ಕಲಿಸಿರುವಿರಿ ಈ ಸಲವೂ ನಾನು ಅದರ ಪರವಾಗಿ ಇಲ್ಲ" ಎಂದರು. ಗಾಂಧಿಜಿಯವರೆಂದರು: "ಅದು ಸರಿ; ಆದರೆ ಸಾಧಿಸಲು ಎಡೆಯಿರುವಾಗ ನಾವು ಸೆರೆಗೆ ಹೋಗುವುದಗತ್ಯವಿಲ್ಲ; ಆದುದರಿಂದ ನಮ್ಮ ವಕಾಲತನ್ನು ಕಟ್ಟಲೇಬೇಕೆಂದು ಅಪೇಕ್ಷಿಸುವೆನು" ಎಂದರು. ಕೊನೆಗ ಖಾನರು "ನಿಮ್ಮಿಚ್ಛೆ ಇದ್ದಂತೆ ಮಾಡಿರಿ" ಎನ್ನುತ್ತ ಆಫೀಸರುಗಳೊಡನೆ ಹೊರಟರು. ಗಾಂಧಿಜಿಯವರು ಮೋಟರ್ ಕಾರಿನ ವರೆಗೆ ಖಾನರೊಡನೆ ನಡೆದರು.

ಕೊಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರೂ, ಶ್ರೀ ಸಿ. ರಾಜಗೋಪಾಲಾಚಾರ್ಯರೂ, ಶ್ರೀ ಜಮ್ನಾದಾಸ ದ್ವಾರಕಾದಾಸ ರಾಮರವರೂ ಇನ್ನಿತರ ಅನೇಕ ಕೊಂಗ್ರೆಸ್ ಪಕ್ಷೀಯರೂ ಖಾನರ ದಸ್ತಗಿರಿಗಾಗಿ ವ್ಯಸನಿಸಿರುವರು. "ಖಾನರ ದಸ್ತಗಿರಿಯು ಸರಕಾರದ ನೈಜ ಹೃದಯದ ಪ್ರತಿಬಿಂಬವೆಂದು ಪ್ರಸಾದರ ಹೇಳಿಕೆ. ಶ್ರೀ ರಾಜ ರಾಜಗೋಪಾಲಾಚಾರ್ಯರು-"ಇದರಿಂದ ಹಿಂದೀಯ ಅಸಹಾಯಕತೆಯು ಪುನಃ ಬೆಳಕಿಗೆ ಬಂತು" ಎಂದರು.

ಮುಂಬಾಯಿ ತಾ. ೮-೧೨-೧೯೩೪.

ಖಾನರು ಮುಂಬಾಯಿಗೆ ತಲಪಿದರು. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವುದಕ್ಕಾಗಿ ಕೊಂಗ್ರೆಸ್ ಪಕ್ಷೀಯರು ನಿಷ್ಕರ್ಷಿಸಿರುವರಾಗಿ ತಿಳಿದು ಬಂದು ಖಾನರು; ತನಗೆ ಅದು ಅಗತ್ಯವಿಲ್ಲವೆಂದು ತಿಳಿಸಿರುವರು. ಪ್ರತಿವಾದಿಸುವುದಕ್ಕಾಗಿ ಯೋಗ್ಯ ವಕೀಲರನ್ನು ನೇಮಿಸಿರುವರು.

ಶ್ರೀ। ಸುಭಾಷ್ಚಂದ್ರ ಬೋಸರ ಮೇಲೆ ನಿರ್ಬಂಧ!

ಶ್ರೀ। ಸುಭಾಷ್ಚಂದ್ರ ಬೋಸರು ಕಲ್ಕತ್ತದ ತನ್ನ ಮನೆಯಿಂದ ಹೊರಗೆ ಹೋಗಬಾರದು; ಪೋಲೀಸರಿಗೆ ತೋರಿಸದೆ ಪತ್ರಗಳನ್ನು ಬರೆಯಬಾರದು. ಪತ್ರಗಳನ್ನು ತೆರೆಯಬಾರದು; ಅಧಿಕಾರಿಗಳ ಅಪ್ಪಣೆ ವಿನಹ ಮನೆಯವರೊಡನಲ್ಲದೆ ಇನ್ನಿತರರೊಡನೆ ಭಾಷಣ ಮಾಡಬಾರದು-ಎಂಬ ನಿರ್ಬಂಧಗಳನ್ನು ಇವರ ಮೇಲೆ ಹೊರಿಸಲಾಗಿದೆ.

ಲೋರ್ಡ್ ಹಾಲಿಫಾಕ್ಸರವರು.

ನಮ್ಮ ವೈಸರಾಯರಾಗಿದ್ದ ಲೋರ್ಡ್ ಇರ್ವಿನರವರು, "ಜೊಯಿಂಟ್ ಪಾರ್ಲಿಮೆಂಟರಿ ಕಮಿಟಿ ರಿಪೋರ್ಟಿನಲ್ಲಿ ಶಿಫಾರಸು ಮಾಡಲ್ಪಟ್ಟ ಸಂರಕ್ಷಣಾ ಸೂತ್ರಗಳು ಹಿಂದೂದೇಶದ ಹಿತಚಿಂತನೆಗಾಗಿಯೇ!" ಎಂದು ಅಭಿಪ್ರಾಯ ಪಡುವರು.

ಗಫರ್‌ಖಾನರ ದಸ್ತಗಿರಿಯಾದುದರಿಂದಲೂ ಶ್ರೀ। ಸುಭಾಷ್ಚಂದ್ರ ಬೋಸರನ್ನು ಕಟ್ಟುಪಾಡಿಗೆ ಗುರಿಪಡಿಸಿರುವುದರಿಂದಲೂ, ತನ್ನನ್ನು ಗಡಿನಾಡಿಗೆ ಹೋಗಗೊಡದಿರುವುದರಿಂದಲೂ ಮಹಾತ್ಮರಿಗೆ ಬಹು ದುಃಖವುಂಟಾಗಿರುತ್ತದೆಂದು ತಿಳಿದು ಬಂದಿದೆ. ಈ ಸಂಘಟನೆಗಳೆಲ್ಲ ಮಹಾತ್ಮರು ಪುನಃ ವೈಯಕ್ತಿಕ ಸತ್ಯಾಗ್ರಹವನ್ನಾರಂಭಿಸಲು ಕಾರಣವಾಗುವವೇ ಎಂದು ಸಂಶಯಿಸಲಾಗಿದೆ. ಶ್ರೀ ರಾಜಗೋಪಾಲಾಚಾರ್ಯ, ಶ್ರೀಮತಿ ಸರೋಜಿನಿ ನಾಯುಡು ಮೊದಲಾದ ಕೆಲವು ಕೊಂಗ್ರೆಸ್ ಭಕ್ತರು ಈ ಊಹನೆಯನ್ನು ಸಮರ್ಥಿಸುವುದಿಲ್ಲವಾದರೂ ಸಾಮಾನ್ಯರ ಅಭಿಪ್ರಾಯವು ಮೇಲಿನಂತೆಯೇ ಇದೆ.

(All Rights Reserved)

[illegible] ! ಈ ರೋಗಕ್ಕೆ ಮದ್ದು [illegible] ಹಾಕಿ [illegible] ದನು ಹಾಗೇ ದೇಹ-ಪೂರಾ [illegible] ಒಳ್ಳೆಗಾಗುತ್ತಾನೆ, [illegible] ದನು [illegible] ಹಾಗೇ [illegible] ದನು

× × × × ×

ಮೊನ್ನೆ ಹಿಂದೂಮತೀಯರಿಗೆ ಸುಭಾಷ್‌ಚಂದ್ರ ಬೋಸರ [illegible] ಆಗುವುದಾದರೂ, ಬಂಗಾಳದಲ್ಲೇ [illegible] ಅವರ [illegible] ಕಾಗದಗಳನ್ನು [illegible] ಹಾಕುತ್ತಿದ್ದರು. ಅದರ ಮೇಲೆ ಬೋಸರು ಮನೆಯಿಂದ ಹೊರಗೆ ಹೋಗಬಾರದೆಂದು ಆಜ್ಞಾಪನೆ ಮಾಡಿದರು! ಏನು ಅನ್ಯಾಯ ಈ ಬೋಸರಿಗೆ!

× × × × ×

ಬೋಸರು ಐರೋಪ್ಯದಿಂದ ಬಂದನಂತರದಿಂದ ಅವರನ್ನು ಕಾಣಲು ಜನರು ಗುಂಪು ಗುಂಪಾಗಿ ಹೋಗುತ್ತಾರೆಂದು ಬಂಗಾಳ ಸರಕಾರಕ್ಕೂ ಮುಂಬಾಯಿ ಸರಕಾರಕ್ಕೂ ಚೆನ್ನಾಗಿ ಗೊತ್ತು. ಹಾಗೆ ಬೋಸರನ್ನು ದಣಿಸಬಾರದೆಂದು ಮೊನ್ನೆ ಸರಕಾರವು ಬೋಸರ ಮೇಲೆ ಒಂದು ನೋಟೀಸು ಜ್ಯಾರಿಮಾಡಿ "ನೀವು ಮನೆಯಲ್ಲೇ ಇರಬೇಕು, ಯಾವ ಸಂತೆ ಸಭೆಗಳಿಗೂ ಹೋಗಬಾರದು" ಎಂದರು. ಏನು ಪುಣ್ಯವಯ್ಯ ಈ ರಾಯರದ್ದು!

× × × ×

ಬೋಸರಿಗೆ ಹೊಟ್ಟೆನೋವು ಉಂಟಂತೆ! ಸೌಖ್ಯವಾಗಿಲ್ಲವಂತೆ—ಹೀಗೆಂದು ಮೊನ್ನೆ ಅವರೇ ಹೇಳಿದರು. ಸರಕಾರವು ಈಗ ಅವರನ್ನು ಮನೆಯಲ್ಲೇ ಇರಲು ಹೇಳಿದುದರಿಂದ ಅವರ ದೇಹಕ್ಕೆ ಎಷ್ಟು ಸುಖವಾಯಿತು! "ನಮ್ಮ ಪರಿಷತ್ತಿಗೆ ಅಧ್ಯಕ್ಷರಾಗಿ" "ನಮ್ಮ ಸಂಘದಲ್ಲಿ ಭಾಷಣ ಕೊಡಿ" ಎಂದು ಈಗ ಯಾರೂ ಹೇಳಲಾರರಷ್ಟೆ! ಈ ಜನರನ್ನು ಹೀಗೆಯೇ ಶಿಕ್ಷಿಸಬೇಕು! ಸ್ವಸ್ಥ ಅಸ್ವಸ್ಥವೆನ್ನದೆ ಯಾವಾಗಲೂ ಭಾಷಣ ಕೊಡಲು ಅವರನ್ನು ದೇವರು ಬಿಟ್ಟಾನೆ?

× × × × ×

ರಾಜಕೀಯ ವಾದಿಗಳ ಮೇಲೆ ಸರಕಾರಕ್ಕೆ ಪ್ರೀತಿಯಿಲ್ಲವೆಂದು ಜನರ ಅಭಿಪ್ರಾಯ! ಎಂತಹ ಸುಳ್ಳಯ್ಯ ಇದು! ನೋಡಿ ಮೊನ್ನೆ ಅಬ್ದುಲ್ ಗಫಾರ್ ಖಾನರು ಮುಂಬಾಯಿಯಲ್ಲಿ ಒಂದು ಭಾಷಣ ಕೊಟ್ಟುದಕ್ಕೆ ಅವರನ್ನು ವಾರ್ಧಾದಲ್ಲಿ ಎರೆಸ್ಟುಮಾಡಿಬಿಟ್ಟರಂತೆ! ಭಾಷಣ ಮಾಡಿದರೆ ಎದೆಯು ತಗ್ಗಿಕುಂದಿ ಜನರು ದುರ್ಬಲರಾಗುತ್ತಾರೆಂದು ಗೊತ್ತಿದ್ದ ಮೇಲೆ ಭಾಷಣಗಾರರನ್ನು ಹಾಗೆಯೇ ಬಿಡುವುದು ಧರ್ಮವೇ! ಅಯ್ಯಾ ಗಫಾರ್ ಖಾನರೇ, ಜೈಲಲ್ಲಿ ಹಾಗೆಯೇ ಇದ್ದುಬಿಡಿ! ಎದೆಯು ಇನ್ನೂ ಬೆಳೆಯಲಿ!

× × × × ×

ನೋಡಿ, ಆ ಗಾಂಧಿಯವರು ಭಾಷಣ ಮಾಡಿಮಾಡಿ ಅವರ ತಲೆಯು ದೊಡ್ಡದಾಗುತ್ತಾ, ಕಿವಿಗಳು ಅಗಲವಾಗುತ್ತಾ ಬರುತ್ತಿವೆ. ಅವರ ಅವರ ಎದೆಯನ್ನು ನೋಡಿ; ಅದು ದೊಡ್ಡದಾಗುತ್ತಾ, ದೇಹವು ಸಣ್ಣಗಾಗುತ್ತಾ ಬರುತ್ತಿದೆ. ಇಂತಹವರನ್ನೆಲ್ಲ ಭಾಷಣ ಮಾಡಬಿಟ್ಟರೆ ಪ್ರಜಾಸಂಖ್ಯೆಯು ಕಡಮೆಯಾಗುವುದಲ್ಲವೇ? ಪ್ರಜೆಗಳು ಕಡಮೆಯಾದರೆ ಪ್ರೊಬೇಟ್ ಟೇಕ್ಸ್, ಇನ್‌ಕಮ್ ಟೇಕ್ಸ್, [illegible] ಟೇಕ್ಸ್, ಪ್ರೊಫೆಸರ್ ಟೇಕ್ಸ್ ಎಲ್ಲ ಕೊಡುವುದಾರು? ಇವರನ್ನು ಉಳಿಸುವ ದೇವರಿಗೆ ನನ್ನದೊಂದು ಸಲಾಂ!

× × × × ×

ನಮ್ಮನ್ನಾಳುವ ಸರಕಾರವು,—ನಾವು ಕರೆಯದೆ, ಅದಾಗಿ ನೊಆಖಾಲಿನಲ್ಲಿ ಜನ ಕಳುಹಿಸಿ ನಮ್ಮನ್ನು ಅಂಗರಕ್ಷಕರ ಸಹಾಯದಿಂದ ಅತಿ ಜಾಗ್ರತೆಯಿಂದ ಮನೆಗೊಯ್ಯುತ್ತ ಅನ್ನಬಟ್ಟೆಗಳನ್ನು ಕೊಟ್ಟು ಸಾಕಿ ಸಲಹುವುದೆಂದರೆ ಏನು, ಸಾಮಾನ್ಯವಾದ ಲಾಭವೆಂದು ನೆನಸಬಾರದು!—ಈ ಪುಣ್ಯವು ಎಲ್ಲರಿಗೆ ಸಿಗುವಂತಿಲ್ಲ, ತಿಳಿದಿರುವುದು!

× × × × ×

ತನ್ನನ್ನು ಗಡಿನಾಡಿಗೆ ಹೋಗಲು ಬಿಡದಿರುವುದರಿಂದಲೂ ಗಡಿನಾಡ ಗಾಂಧಿಯಾದ ಅಬ್ದುಲ್ ಗಫಾರ್ ಖಾನರನ್ನು ತಮಗೆ ಬೇಕಾದಲ್ಲಿಗೆ ಕೊಂಡೊಯ್ದುದರಿಂದಲೂ ಗಾಂಧಿಯವರಿಗೆ ದುಃಖವಾಗಿ, ಅವರು ಆ ಬಗ್ಗೆ ಉಪವಾಸ ಮಾಡುವರೋ ಎಂಬ ಚಿಂತೆ ದೇಶದಲ್ಲೆಲ್ಲ ಎದ್ದಿದೆ; ಈ ಗಾಂಧಿಯವರಿಗೇಕೆ ಹೀಗೆ ಹೊಟ್ಟೆಯುರಿಯೋ, ನಾನರಿಯೆ! ಅಯ್ಯಾ ಗಾಂಧ್ಯಪ್ಪನವರೇ, ದಯವಿಟ್ಟು ಸುಮ್ಮನಿರಿ ಎಂದು ಹೇಳುವ ನಿಮ್ಮ

'ಸಾಯ್ಬ.'

ಅಸ್ವಸ್ಥದ ನಂತರ ನಿಮ್ಮ ಶಕ್ತಿಯನ್ನು ವೃದ್ಧಿಸುತ್ತದೆ.

ಅಸ್ವಸ್ಥರಾದ ನಂತರ ನಿಮ್ಮ ದೇಹವು ನಿರ್ಬಲಗೊಳ್ಳುತ್ತದೆ. ನಿಮ್ಮ ದೇಹಪ್ರಕೃತಿಯು ಅಪಾಯಕರವಿರುತ್ತದೆ. ನಿಮಗೆ ಶಕ್ತಿಚೈತನ್ಯವಿಲ್ಲ. ನಿಮ್ಮ ಬಲವೆಲ್ಲಾ ಹೋಗಿದೆ. ನಿಮ್ಮ ಬಲವನ್ನು ಪುನಃ ತರುವುದು ಒಂದು ಮಹಾ ಕೆಲಸ. ಹೊಸ ಶಕ್ತಿಯು ಸರಿಯಾದ ಪೋಷಣೆಯಲ್ಲಿದೆ. ನಿತ್ಯದ ಆಹಾರದಲ್ಲಿ ಜೀವಸಾರವಿರುವುದಿಲ್ಲ. ಆದುದರಿಂದ ಅಸ್ವಸ್ಥಗೊಂಡವನು ಸಂಪೂರ್ಣ ಸರಿಯಾದ ಮತ್ತು ಸಮತೂಕ ಆಹಾರವಾದ 'ಓವಲ್ಟಿನ್'ನ್ನು ಸೇವಿಸಬೇಕು.

ಓವಲ್ಟಿನ್ ಎಂಬುದು ಪ್ರಕೃತಿಸಿದ್ಧ ಆಹಾರ. ಬೆಳೆದ ಬಾರ್ಲಿ, ದನದ ಕೆನೆ ಹಾಲು, ವಿಶೇಷವಾದ ಕೋಳಿಮೊಟ್ಟೆಗಳಿಂದ ತಯಾರಿಸಲ್ಪಟ್ಟಿದ್ದು, ಅಸ್ವಸ್ಥದ ನಂತರ ಬೇಕಾದ ಶಕ್ತಿಯನ್ನೊದಗಿಸುತ್ತದೆ. ಆರೋಗ್ಯ, ಬಲಗಳು ಉಂಟಾಗುತ್ತವೆ.

OVALTINE

ಮೆದುಳು, ನರ ಮತ್ತು ದೇಹವನ್ನು ವೃದ್ಧಿಸುತ್ತದೆ.

ತಯಾರಿಯಲ್ಲಿ ಕೈಯಲ್ಲಿ ಸ್ಪರ್ಶಿತವಾಗಿಲ್ಲ. ಎಲ್ಲಾ ಕೆಮಿಸ್ಟರಲ್ಲಿಯೂ ಸ್ಟೋರುಗಳಲ್ಲಿಯೂ ದೊರೆಯುತ್ತದೆ.

OV/196

1906ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ, ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಪಟ್ಟು ದೇಶಸೇವೆಯನ್ನು ಮಾಡಬಯಸುವ ಮದ್ರಾಸ್ ಸಂಸ್ಥಾನದ ದೇಶಿಯ ಜ್ಯೊಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ಶಿಕ್ತ ಮೂಲಧನ: ರೂ. 330,900. ಕ್ಷೇಮನಿಧಿಗಳು: ರೂ. 444,647. ಠೇವಣಾತಿಗಳು: ರೂ. 57,67,040.

ಆಫೀಸುಗಳು:—ಮಂಗಳೂರು, ಮುಂಬಾಯಿ, ಆಲಪ್ಪಿ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ ಮತ್ತು ಬಂಟವಾಳ.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

B4

A4

ಮನುಷ್ಯನ ಭಾಗ್ಯದಲ್ಲಿರುವ ಬದಲಾವಣೆಗಳ ಹಾಗು ಸುಖಶಾಂತಿಗಳ ಮಹಾದ್ವಾರ:

"ಈ ನವಗ್ರಹ ಯಂತ್ರವು"

ಇಡೀ ಜಗತ್ತಿನಲ್ಲಿ ಇದಕ್ಕೆ ಸರಿಯಾದ ಬೇರೆ ಯಾವ ಶಕ್ತಿಯೂ

ಶುಭ

ಮನುಷ್ಯನ ಭಾಗ್ಯದ ಮೇಲೆ ಅಧಿಕಾರ ನಡೆಸುವುದು, ಜೀವನ ಬದಲಾಯಿಸುವುದು, ಒಳಿತು ಕೆಡುಕುಗಳನ್ನು ತೋರಿಸುವುದು, ಜೀವನ ಸುಖ ಅಥವಾ ದುಃಖಮಯವನ್ನಾಗಿ ಮಾಡುವುದು — ಈ ಅಧಿಕಾರಗಳು ನವಗ್ರಹಗಳಿಗೆ ಮಾತ್ರ ಇದೆಯೆಂದು ಧರ್ಮಗ್ರಂಥಗಳಲ್ಲಿ ಹೇಳಿದೆ. ಗ್ರಹಗಳು ಉತ್ಪನ್ನವಾದ ಕೆಟ್ಟ ಪರಿಣಾಮವನ್ನು ಪುನಃ ಸುಖಮಯವನ್ನಾಗಿ ಮಾಡಲು ನವಗ್ರಹಶಾಂತಿ ಮಾಡುವುದೇ ಈ ನವಗ್ರಹ ಯಂತ್ರದ ಗುಟ್ಟು! ನವಗ್ರಹ ಯಂತ್ರವು ಮನುಷ್ಯನ ಜೀವನದಲ್ಲಿ ಸುಖವನ್ನು ತಂದುಕೊಡುವ ಒಂದು ಶ್ರೇಷ್ಠವಾದ ಮಹಿಮೆಯೇ ಆಗಿದೆ! ಗ್ರಹಗಳಿಂದುಂಟಾಗುವ ಹಾನಿ ಕೇಡುಗಳನ್ನು ನಿವಾರಣೆಮಾಡಿಕೊಳ್ಳಲು ಬೇರೆ ಯಾವ ಮಂತ್ರ–ತಂತ್ರ–ಯಂತ್ರಗಳೂ ಇಲ್ಲ, ಗ್ರಹಶಾಂತಿಯೊಂದೇ ಒಂದು ನವಗ್ರಹ ಯಂತ್ರವಾಗಿದೆಯೆಂಬುದನ್ನು ಬುದ್ಧಿವಂತರೆಲ್ಲಾ ಚೆನ್ನಾಗಿ ಅರಿತಿದ್ದಾರೆ. ಉಳಿದುದೆಲ್ಲವೂ ಜೊಳ್ಳು! ಟೊಳ್ಳು!

ಪ್ರತಿಯೊಬ್ಬನೂ ಈ ಖಂಡಿತವಾದ ಮಾತನ್ನು ತಮ್ಮ ಹೃದಯದಲ್ಲಿಟ್ಟುಕೊಳ್ಳಬೇಕು.

ಈ ಯಂತ್ರದಿಂದ ಕೋಟ್ಯಾವಧಿ ವರ್ಷಗಳಿಂದಲೂ ಲಾಭವಾಗುತ್ತಿಲ್ಲವಿದೆ. ಹಾನಿ, ದುರ್ಭಾಗ್ಯದಿಂದ ಮುಕ್ತರಾಗಿ ಭಾಗ್ಯೋದಯವಾಗುವುದು. ಇಂಥ ವಸ್ತುವನ್ನು ಸುಳ್ಳೆಂದು ಹೇಳುವ [illegible] ಈ ವಸ್ತುವಿನಿಂದ ಮಹರ್ಷಿಗಳೇ ಕರು ಸಹಾ ಲಾಭವನ್ನು ಪಡೆದಿದ್ದಾರೆ. [illegible] ಲಾಭಯೋಗವನ್ನು ಕಳೆದುಕೊಳ್ಳುವಿರಾ? ನೀವು ನಿಮ್ಮ ಭಾಗ್ಯೋದಯವನ್ನು ಮಾಡಿಕೊಳ್ಳ ಬಯಸಿದರೆ......... [illegible] ಕೀರ್ತಿಯನ್ನು ಪಡೆದು ಶತ್ರುಗಳನ್ನು ಗೆದ್ದು ಸೌಖ್ಯವಾಗಿರುವ ಇಚ್ಛೆಯಿದ್ದರೆ ಎಲ್ಲರೂ ನಮ್ಮ ಪ್ರಭಾವಶಾಲಿ ನವಗ್ರಹ ಯಂತ್ರವನ್ನು ತರಿಸಬೇಕು. [illegible] ಇದರ ಅಸಾಮಾನ್ಯವಾದ ಗುಣದ ಬಗ್ಗೆ ಪುರಾಣಗಳೂ ಸಾಕ್ಷಿ ಕೊಡುತ್ತಲಿವೆ. ಇದರಿಂದ ಶೀಘ್ರವಾದ ಫಲ ದೊರೆತಿರುವ ಬಗ್ಗೆ ಬೇರೆ ಪ್ರಮಾಣಗಳ ಅವಶ್ಯಕತೆ [illegible] ಮನುಷ್ಯನು ಈ ಆಯುಷ್ಯದಲ್ಲಿ ಎಂದೂ ಸುಖವನ್ನು ಪಡೆಯಲಾರನೆಂದು ಶ್ರೀ ಕೃಷ್ಣಪರಮಾತ್ಮನೇ ಹೇಳಿದ್ದಾನೆ. ಈ ನವಗ್ರಹ ಯಂತ್ರವು ದುಷ್ಟ ಗ್ರಹಗಳನ್ನು ಶಾಂತವನ್ನಾಗಿ ಮಾಡಿ [illegible] ಗಳನ್ನೂ ಪೂರ್ತಿ ಮಾಡುವುದು.

[illegible]



[illegible]

ಎಲ್ಲಾ ಪತ್ರವ್ಯವಹಾರವನ್ನೂ ಇಂಗ್ಲಿಷಿನಲ್ಲೇ ನಡೆಸಿರಿ.

ಈ ನವಗ್ರಹ ಯಂತ್ರವು ಶಾಸ್ತ್ರೋಕ್ತವಾದದ್ದು — [illegible]

ಕೆಲವು ಪ್ರಶಂಸನಾ ಪತ್ರಗಳು: — [illegible]

[illegible]

ವಿಳಾಸ:— **Pandit B. R. BHAVISYAVAKTA (S. S. M.) Bombay, No. 4.**



[illegible]

[illegible] ಗಳಾಗುತ್ತಾರೆ. ಅದರ [illegible] ನಗಳಲ್ಲಿ ಅವರಿಗೆ ಅನ್ಯದೇಶೀಯ ಭಾಷೆಯನ್ನು ನಿರ್ದೇಶಿಸಿದೊಡನೆ ಅವರ ವಿಚಕ್ಷಣೆಯು ಬಿದ್ದುಬಿಟ್ಟಂತೆ ಗೋಚರವಾಗುತ್ತದೆ. ತಮ್ಮ ಪ್ರಕೃತಿಯೊಂದು ಪಾಠವನ್ನು ಪರದೇಶ ಭಾಷೆಯಿಂದ ಕಲಿಯಬೇಕೆಂದರೆ ಅದು ಅವರಿಗೊಂದು ಹೊರೆಯಾಗುವುದಿಲ್ಲವೇ? ಪರೀಕ್ಷೆಗಾಗಿ ಗಿಳಿಪಾಠದಂತೆ ಮಾಡಿ ಉತ್ತರಗಳನ್ನು ಬರೆದುಬಿಡುತ್ತಾರೆ. ಹೊರತು, ಅವರ ಜ್ಞಾನಪ್ರವರ್ಧನೆಗೆ ಸಾಧಕವಾದುದನ್ನವರು ಶಾಲೆಗಳಲ್ಲಿ ಕಲಿಯಲು ದುಸ್ಸಾಧ್ಯವಾಗಿದೆ.

ಈಗಿನ ವಿದ್ಯಾಭ್ಯಾಸವು ವಿದ್ಯಾರ್ಥಿಗಳ ಮಿದುಳಲ್ಲಿ ಶಬ್ದಮಂಜರಿಯನ್ನು ತುಂಬಲು ಸಹಾಯಕವಾಗುತ್ತದೆ. ಅದರೆ ಶಬ್ದಕೋಶವು ಪಾಂಡಿತ್ಯವೆಂದು ಪರಿಗಣಿಸಲ್ಪಡುವುದಿಲ್ಲ. ಈಗಿನ ವಿದ್ಯಾಕ್ರಮವೆಂದರೆ ಕೆಲವು ಭಾಷೆಗಳನ್ನು ಅಸ್ಪಷ್ಟ ಕಲಿಯುವಂತಹದು. ಬೇಕಾದ ಒಂದು ಭಾಷೆಯನ್ನು ಪರಿಪೂರ್ಣವಾಗಿ ತಿಳಿಯಲವಕಾಶವಿರುವುದಿಲ್ಲ. ಇಂಗ್ಲೀಷನ್ನು ಕಲಿಯುವ ಉತ್ಸಾಹದಿಂದ ಸ್ವಭಾಷೆಯನ್ನು ಅಲಕ್ಷಿಸುತ್ತಾರೆ. ಅದರೆ ಬೇಕಾದುದನ್ನು ಇಂಗ್ಲೀಷಿನಲ್ಲಿ ತಿಳಿಯಲು ಅವರಿಗಾಗುವುದಿಲ್ಲ. ಕಟ್ಟಕಡೆಗೆ, ಒಂದುಕಡೆಯಿಂದ ಇಂಗ್ಲಿಷು ಸರಿಯಾಗಿ ತಿಳಿಯುವುದು ತಪ್ಪುತ್ತದೆ. ಮತ್ತೊಂದು ಕಡೆಯಿಂದ ದೇಶಭಾಷೆಯು ಮರೆತುಹೋಗುತ್ತದೆ. ದೇಶಭಾಷೆಯು ಪ್ರೋತ್ಸಾಹಿಸಲ್ಪಡುವುದು ಅಗತ್ಯವಿದೆ.

The Teachers' Journal.

ಧಾರ್‌ನಲ್ಲಿಯ ಕಂಭ.

[illegible] ಮಧ್ಯಹಿಂದೂಸ್ಥಾನದ ಧಾರ್ ಎಂಬಲ್ಲಿ ಲೋಹದಿಂದ ನಿರ್ಮಿಸಲ್ಪಟ್ಟಿರುವ ಒಂದು ಕಂಭವಿದೆ. ಇದನ್ನು ಪರಿಶೀಲಿಸುವಾಗ ಹಿಂದೂಸ್ಥಾನದ ಪೂರ್ವಕಾಲದ ಲೋಹವಿಜ್ಞಾನ, ಕಲಾಸಂಪನ್ನತೆಗಳು ತಿಳಿದುಬರುವುವು. ಈ ಕಂಭವು ಈಗ ಮೂರು ತುಂಡುಗಳಾಗಿ ವಿಭಾಗಿಸಲ್ಪಟ್ಟಿದೆ. ಮೂರನ್ನು ಒಟ್ಟುಗೂಡಿಸಿದರೆ ೪೩ ಅಡಿ ಎತ್ತರವಾಗುತ್ತದೆ. ಇದರ ನಾಲ್ಕನೆಯ ತುಂಡೊಂದು ಇರಬೇಕೆಂದೂಹಿಸಲ್ಪಟ್ಟಿದೆ. ಅದರೆ ಅದು ಸಿಕ್ಕಿರುವುದಿಲ್ಲ. ಇದು ಗುಪ್ತಸಾಮ್ರಾಜ್ಯದ ಕಾಲದಲ್ಲಿ ಹೇಗೋ ರಚಿಸಲ್ಪಟ್ಟ ಕಂಭವಿರುತ್ತದೆ. ಇತ್ತೀಚಿಗಿನ ಶೋಧನೆಯಿಂದ—ಇದು, ಭೋಜರಾಜನ ಕಾಲ (ಕ್ರಿ. ಶ. ೧೦೧೮–೬೦)ದಲ್ಲಿ ರಚಿಸಲ್ಪಟ್ಟಿತೆಂದು ಒಂದು ಶಿಲಾಲೇಖದ ಮೂಲಕ ತಿಳಿದುಬಂದಿರುತ್ತದೆ. ಭೋಜರಾಜನ ವಿಜಯದ ಸಂಕೇತವಾಗಿ ಈ ಕಂಭವನ್ನು ನಿರ್ಮಿಸಿ ನಿಲ್ಲಿಸಲಾಗಿತ್ತೆಂದು ತಿಳಿಯಲಾಗಿದೆ.

Tisco Review.

ಹೆಚ್ಚು ಜಗಿದು ಹೆಚ್ಚು ಬಾಳಿರಿ.

ಆಹಾರವನ್ನು ಹೆಚ್ಚಾಗಿ ಜಗಿಯುವುದರಿಂದಾಗುವ ಹಿತವೇನು?—ಎಂಬ ಪ್ರಶ್ನೆಯಿದೆ. ಬಾಯಿಯೊಳಗಿನ ಆಹಾರವು ಜಗಿದಲು ಪುಡಿ ಪುಡಿ ಮಾಡಲ್ಪಡುತ್ತದೆ. ಹಾಗೆ ಅದು ಪುಡಿಯಾಗುವಾಗ ಹಲ್ಲುಗಳ ಮತ್ತು [illegible] ಲಾಲಾ ಎಂಬ ಈ ರಸದಲ್ಲಿ [illegible] [illegible]

[illegible] ಪ್ರಾಪ್ತವಾದ ಶಾರ್ಗನೆ [illegible] ಸಾಮ್ರಾಜ್ಯದಲ್ಲಿಲ್ಲ. ಅತಿ [illegible] ಆಧುನಿಕ ಉಪಕರಣಗಳಿಂದೊಡಗೂಡಿದುದಾಗಿರುತ್ತದೆ.

(೩) ಕಬ್ಬಿಣ ಮತ್ತು ಉಕ್ಕು ತಯಾರಿಸುವುದಕ್ಕಾಗಿ ಕಂಪೆನಿಗೆ ದಿನಂಪ್ರತಿ ಹದಿನಾರು ಮೈಲುಬಂಡಿಗಳು ಸಾಮಾನುಗಳೊಡನೆ ಹೊರಗಿನಿಂದ ಬರುತ್ತವೆ.

(೪) ಅಖಿಳ ಹಿಂದೂಸ್ಥಾನಕ್ಕೆಲ್ಲ ಆಜರ ಸಾಮಗ್ರಿಗಳನ್ನು ಕಳುಹಿಸುವುದಕ್ಕಾಗಿ ಜಾಮ್ಷೆಡ್‌ಪುರದಿಂದ ದಿನಂಪ್ರತಿ ಹದಿನಾರು ಮೈಲುಬಂಡಿಗಳು ಹೊರಡುತ್ತವೆ.

(೫) ಬಂಗಾಳ ನಾಗಪುರ ರೈಲ್ವೆ ಕಂಪೆನಿಯ ಒಟ್ಟು ಹೊರೆಯಲ್ಲಿ ಮೂರರಲ್ಲಿ ಒಂದಂಶ ಹೊರೆಯನ್ನು ಈ ಟಾಟಾಕಂಪನಿಯೇ ಒದಗಿಸಿಕೊಡುತ್ತದೆ.

(೬) ಅಸ್ಸಾಂ, ಬಂಗಾಳ, ಬಿಹಾರ್ ಮತ್ತು ಒರಿಸ್ಸಾ, ಮುಂಬಾಯಿ, ಬರ್ಮಾ, ಮಧ್ಯಪ್ರಾಂತ್ಯಗಳು, ಪಂಜಾಬ್, ಸಂಯುಕ್ತಪ್ರಾಂತ್ಯ ಮತ್ತು ಅನ್ಯ ಸಂಸ್ಥಾನಗಳು ಇದರಲ್ಲಿ ಪಾಲುಗಳನ್ನು ಪಡೆದಿರುತ್ತವೆ.

(೭) ಇದರ ಉತ್ಕೃಷ್ಟ ಕಂಪೆನಿಯಲ್ಲಿ ಹಿಂದೂದೇಶದ ಎಲ್ಲಾ ಭಾಗಗಳಿಂದ ಬಂದಿರುವ ೩೦,೦೬೦ ಜನರು ಉದ್ಯೋಗದಲ್ಲಿರುವರು. ಈ ಕಂಪೆನಿಯು ಎಷ್ಟು ದೊಡ್ಡದಿರಬಹುದೆಂದು ಇದರಿಂದ ತಿಳಿದುಬರುವುದು.

Tisco Review.

ಜೀವನ್ಮುಕ್ತಳಲ್ಲಿರಬೇಕಾದ ಅರ್ಹತೆಗಳು.

ಡಾ॥ ರವೀಂದ್ರನಾಥ ಠಾಗೂರರು ಒಂದು ಭಾಷಣವನ್ನು ಮಾಡುತ್ತಾ,—"ನಮ್ಮ ಹುಡುಗಿಯರಲ್ಲಿ ಸಭ್ಯ

[illegible] ಅನುಸಾರವಾಗಿ [illegible] ರುವವರಿಗೆ ತೊಂದರೆಯು [illegible] ವುದು; ಮಲಗುತ್ತಿರುವವರನ್ನು ಎಚ್ಚರಿಸುವುದು; ಅಪ್ಪಣೆ ವಿನಹ ಅನ್ಯರ ಕೋಣೆಗಳನ್ನು ಪ್ರವೇಶಿಸುವುದು; ಪರರ ಸಾಮಗ್ರಿಗಳನ್ನು ಮುಟ್ಟುವುದು; ಪರರ ಕಾಗದಪತ್ರಗಳನ್ನು ಓದುವುದು; ಅವರ ಪುಸ್ತಕಗಳನ್ನು ತೆಗೆಯುವುದು; ಇವೆಲ್ಲ ಅಕ್ಷಮ್ಯವಾದ ನಡತೆಗಳು. ಒಬ್ಬರ ನಿಂದೆಯನ್ನು ಇನ್ನೊಬ್ಬರೊಡನೆ ಮಾಡುವುದು; ಅಲ್ಲಸಲ್ಲದ ಸುದ್ದಿಗಳನ್ನು ಹರಡಿಸುವುದು—ಇದೂ ಕೂಡಾ ಅಸಭ್ಯವಾದ ವರ್ತನೆ; ಇದರಿಂದಾಗಿ ಪರರು ಹಾಳಾಗುವ ನೋಡಲು ನಾವೇ ಹಾಳಾಗುತ್ತೇವೆ. ಈ ದುರ್ಗುಣವನ್ನು ತ್ಯಜಿಸಿಬಿಡಬೇಕು.

ಶುದ್ಧಾಚಾರ ಮತ್ತು ಸ್ವಚ್ಛತೆಯಂತೆಗಳನ್ನು ಎಂದೂ ಮರೆಯಬಾರದು. ಕೆಲವರು ವೈಭವವು ಬೇಕಾದಷ್ಟು ಒಂದೆ ನಿರ್ಧಾರವಮಾಡಿಕೊಂಡು ಶುದ್ಧತೆಯನ್ನು ಮರೆತುಬಿಡುತ್ತಾರೆ. ಅದರೆ ಶುದ್ಧ ಉಡಿಗೆತೊಡಿಗೆ, ಸುಂದರರೂಪವಾದ ಕಾರ್ಯಕಲಾಪಗಳಿಲ್ಲ ಈ ದರ್ಜೆಗೆ ಸೇರಿಲ್ಲವೆಂದು ಇವರಿಗೆ ತಿಳಿಯದು. ಉಡಿಗೆಯು ಸರಳವಾಗಿದ್ದು ಆಕರ್ಷಕವಾಗಿರದೆ ಅದು ವೈಭವವಲ್ಲ. ಪರರನ್ನು ಸಂದರ್ಶಿಸಹೋಗುವಾಗ ಶುದ್ಧ ಉಡುಪನ್ನು ಧರಿಸಬೇಕು. ಹಾಗೆ ಮಾಡದಿದ್ದರೆ ನಾವವರನ್ನು ಲಕ್ಷಿಸುವುದಿಲ್ಲವೆಂಬ ಅರ್ಥವು ಬರುತ್ತದೆ.

Vishwa Bharati News.

ಕೇರಿ: ಹಿಂದೂದೇಶಕ್ಕೆ ಬೈಬಲನ್ನು ಕೊಟ್ಟವನು.

ವಿಲಿಯಮ್ ಕೇರಿಯು ಈಗಿನಿಂದ ಒಂದು ಶತಮಾನವು ಮೊದಲೇ ಅಗಲಿತು. ಹಿಂದೂದೇಶಕ್ಕೆ ಬೈಬಲನ್ನು ಕೊಟ್ಟವನೆಂದರೆ ಇವನೇ. ೧೭೯೩ರ ಜನವರಿಯಲ್ಲಿ ಕೆಲವು ಹಿಂದೀಯರ ಒಟ್ಟಾಗಿ ಡಾ॥ ಥೋಮಸರಿಗೊಂದು ಪತ್ರ ಬರೆದು ಹಿಂದೂಸ್ಥಾನದ ಭಾಷೆಗಳನ್ನು

[illegible] ಕೇರಿ ಕಟ್ಟಿದನು.

[illegible] ಕೇರಿಯರೆ ಹಿತನೆಂದು [illegible] ಬಂಗಾಳಿಗೆ [illegible] ಮುದ್ರಿಸಿಕೊಡು [illegible] ಹಿಂದೂದೇಶಕ್ಕೆ [illegible] ಬಂಗಾಳಿಯನ್ನು [illegible] ಮಾಡಿದ್ದ. ೧೮೦೧ರ [illegible] ಬಾರಿಸು ಬಂದು ನೋಡಬೇಕ್ಕಾಗಿ— [illegible] ಮಯವಾಗಿರುತ್ತದೆ. ಕೇರಿಯು ಬಂಗಾಳಿಯನ್ನೂ [illegible] ಕೆಲವು ಭಾಷೆಗಳನ್ನು ಕಲಿತು ಮುಂದುವರಿದದ್ದಾನೆ. ಕೇರಿಯು ಮಧ್ಯಾಹ್ನದ ಬಿಡುವಿನಲ್ಲೂ ರಾತ್ರಿಯ ಬೆಳಕಿನಲ್ಲೂ ಈ ಕೆಲಸವನ್ನು ಪೂರೈಸಿಬಿಟ್ಟ. ಇದನ್ನು ಮುದ್ರಿಸುವುದಕ್ಕಾಗಿ ಸಣ್ಣ ಮುದ್ರಣಯಂತ್ರವನ್ನೂ ಪಡೆಯಲ್ಪಟ್ಟಿತು. ಹದಿನೈದು ವರ್ಷಗಳಲ್ಲಿ ಬೈಬಲನ್ನು ಹಿಂದೂದೇಶದ ಎಲ್ಲಾ ಭಾಷೆಗಳಲ್ಲೂ ಬರೆಯಲಾಯಿತು.

The National Christian Council Review.

ಮರಣವನ್ನು ಮೆಚ್ಚುವ ಜಗತ್ತು.

ಜಗತ್ತಿಗೆ ಬಡತನವು ಬಂದೊದಗಿದೆ; ಇದಕ್ಕೆ ಕಾರಣವೇನು? ೧೯೧೪ರ ಮಹಾಯುದ್ಧ. ಅಂದಿನ ಮಹಾಸಮರವು ನಮ್ಮನ್ನು ಇಂದಿಗೂ ನಿರ್ಬಲರನ್ನಾಗಿ ಮಾಡಿದೆ. ಆದರೇನು, ಇನ್ನೊಂದು ಮಹಾಯುದ್ಧವು ಬಂದೇ ಬರುತ್ತದಂತೆ. ಹಂಗೇರಿಯದಲ್ಲಿ ವಿಷಮ ದಾರಿದ್ರ್ಯವು ತಲೆದೋರಿದೆ. ವಾರಕ್ಕೆ ಎರಡು ಡಾಲರು ಕೊಡದೆ ತಾವು ಕೆಲಸಮಾಡೆವೆಂದು ಕೆಲಸಗಾರರು ಮುಷ್ಕರಹೊಟ್ಟಿರುವರು. ಹಂಗೇರಿಯದ ಒಂದು ಗಣಿಯಲ್ಲಿ ಕೆಲಸಮಾಡುತ್ತಿದ್ದ ೧೨೦೦ ಕೆಲಸಗಾರರು ಬ್ರಿಟಿಷ ಮತ್ತು ಒಟ್ಟಿಯಾದ ಧನಿಕರಿಗೆ ಲಾಭವನ್ನು ತರುವುದಕ್ಕಾಗಿ ಹೆಂಡತಿಮಕ್ಕಳ ವಿದಾಯ ಪಡೆದು, ಅತ್ತು, ಮುಂದಕ್ಕೆ ಬದುಕುವ ಆಶೆಯನ್ನೇ ಬಿಟ್ಟು, ಗಣಿಯೊಳಗಿನ ಆ ಮಹಾ ಆಳಕ್ಕೆ ಇಳಿದರು. ಅಲ್ಲಿ ತಲುಪಿದಮೇಲೆ "ನಾವು ಇಲ್ಲೇ ಸಾಯುವೆವು. ಇಲ್ಲೇ ಪ್ರಾಣತ್ಯಾಗ ಮಾಡುವೆವು. ಭೂಮಿಯ ಮೇಲೆ ಉಪವಾಸದಿದ್ದು ಕೊರಗಿ ಸಾಯುವುದರ ಬದಲಿಗೆ ಇಲ್ಲಿ ಕೆಲವು ದಿನಗಳಲ್ಲೇ ಸೊರಗಿ ಸಾಯುವೆವು. ವಾರಕ್ಕೆ ಎರಡು ಡಾಲರುಗಳಿಗಿಂತ ಕಡಿಮೆ ಕೊಟ್ಟರೆ ಬಾಳಲಾರೆವು. ನಮ್ಮ ಈ ಗಣಿಯೊಳಗಿನ ಮನವಿಯು ನಮ್ಮ ದೇಶಿಗರ ಹೃದಯಕಂದರವನ್ನು ಪ್ರವೇಶಿಸಲಿ" ಎಂದು ಹಟ ತೊಟ್ಟರು. ಅವರನ್ನು ಸಮಾಧಾನಗೊಳಿಸಲಾಯಿತು. ಇಂತಹ ದುಃಸ್ಥಿತಿಯನ್ನು ಕಂಡೊಡ್ಡುವ ದುರ್ಗತಿಯು ಜಗತ್ತಿಗೆ ಬಂದಿರುವಾಗ ಇನ್ನೊಂದು ಯುದ್ಧವು ಬೇಕೆ?

The Christian Century.

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಪಾಠಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

ಚರಿತ್ರೆ ಮತ್ತು ಕಥೆಗಳು.	ರೂ.	ಅ.	ಪೈ.	ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.	ರೂ.	ಅ.	ಪೈ.
ನಾಲ್ಕನೇ ದರ್ಜೆ	0	6	0	ಐದನೇ ದರ್ಜೆ	0	8	0
ಮೂರನೇ ,,	0	4	6	ನಾಲ್ಕನೇ ಸಚಿತ್ರ	0	8	0
ಎರಡನೇ ,,	0	4	0	ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.			
ಸಿವಿಕ್ಸ್ ಮತ್ತು ನೀತಿಬೋಧೆ.							
ಐದನೇ ದರ್ಜೆ	0	8	0	ಎರಡನೇ ದರ್ಜೆ	0	8	6
ನಾಲ್ಕನೇ ,,	0	8	0	ಮೂರನೇ ,,	0	8	0
ಮೂರನೇ ,,	0	2	6	ನಾಲ್ಕನೇ ,,	0	8	0
ಎರಡನೇ ,,	0	2	0	ಐದನೇ ,,	0	4	0

ಅಜ್ಜಿ ಕಥೆಗಳು (ಸಚಿತ್ರ).

ಮೂರು ಕರಡಿಗಳು.
ಹೇನು ಸತ್ತು ಕಾಗೆ ಬಡವಾಯಿತು.
ಮೊಲಸಿನ ಕಾಳಪ್ಪ.
ಅರಗಣಿ ಮುದ್ದೆ.
ಇಲಿಗಳ ಧಕ್ಕ ಧೈ.
ಅಂಗಳ ದುಗ್ಗು.
ಗುಡುಗುಡು ಗುಮ್ಮಟ ದೇವರು.
ಒಕ್ಕಲು ಟಟ.

(ಇವುಗಳ ಕ್ರಯ: 1ಕ್ಕೆ 0–0–9)

ಮತ್ತು

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸಮಾಜಶಾಸ್ತ್ರ' ಸಿದ್ಧವಾಗುತ್ತಿದೆ.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೊಳ್ಳೆ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಅತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

1935ರ ಡೈರಿಗಳು, ಎಲ್ಲಾ ಕೋರ್ಟು ಫಾರ್ಮುಗಳು, ಬೇಕೆಂದಾದರೆ

ಶಾರದಾ ಛಾಪಖಾನೆ, ಮಂಗಳೂರು.

ಲೋಧ್ರ

ಪುತ್ರಸಂತಾನ [illegible]

ಸ್ತ್ರೀಯರಿಗೊಂದು ಮಹಾ ವರ.

[illegible] ಮುಟ್ಟಾಗುವುದ [illegible] ಬಿಳಿ ಸೆರಗು, ಗರ್ಭ [illegible] ಅಶುದ್ಧರಕ್ತ, [illegible]

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ [illegible]

ಕೇಸರಿ ಕು[illegible]

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, [illegible]

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,
ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಕ್ಷಯಕ್ಷೀಣಾದಿಗಳಿಗೆ
ಚ್ಯವನಪ್ರಾಶಾವಲೇಹ.
ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.
(ಕಸ್ತೂರಿ ಮಿಶ್ರಿತ)

ಸಮಸ್ತ ವಾತರೋಗಗಳಿಗೆ
ಮಹಾನಾರಾಯಣ ತೈಲ.
ಶ್ರೀ ರಾಮಕೃಷ್ಣ ಧರ್ಮೌಷಧಾಲಯ
ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

[illegible]

30, 50, 10[illegible]

ವಿಳಾಸ:— [illegible]

ಉತ್ತಮ ಉಳುಮೆಯ ಆಯತ್ತೆಯನ್ನು ಸ್ಥಾಪಿಸಿರುವುದೆಂದರೆ—

ಕಿರ್ಲೋಸ್ಕರ ನೇಗಿಲು.

ಕಳೆದ ಕಾಲು ಶತಮಾನದಿಂದ ಅದು ಹಿಂದೀ ರಹಿತನ ಮೆಚ್ಚುಗೆಯ ನೇಗಿಲಾಗಿ ಮೆರೆಯುತ್ತಿವೆ.

ಈ ನೇಗಿಲುಗಳು ಇಪ್ಪತ್ತೆರಡು ಬೇರೆ ಬೇರೆ ತರದವುಗಳಾಗಿ, ಎಲ್ಲ ಬಗೆಯ ಜಮೀನುಗಳಿಗನು ಕೂಲವಾಗುವಂತೆ ಮಾಡಲ್ಪಟ್ಟಿರುವ ಕಾರಣ; ನೀವು ನಮಗೆ ಬೇಕಾದಂಥದ್ದನ್ನು ನಮ್ಮ ವಿಪುಲ ಸಂಗ್ರಹದಿಂದ ಆರಿಸಿ ತೆಗೆಯಬಹುದಾಗಿದೆ.

ವಿವರಕ್ಕಾಗಿ ಬರೆದುಕೊಳ್ಳಿರಿ:—

ಕಿರ್ಲೋಸ್ಕರ ಬ್ರದರ್ಸ್ ಲಿಮಿಟೆಡ್,

ಕಿರ್ಲೋಸ್ಕರವಾಡಿ, (ಸತಾರಾ.)

ಚಾತುಕುಟ್ಟಿ ವೈದ್ಯರ

ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕಾಲರೆಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!
ಕ್ರಯ ಡಬ್ಬಿ 1ಕ್ಕೆ ರೂ. 1—0—0.

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)

ಗುಹ್ಯರೋಗ ನಿವಾರಣೆಗೆ ಅಮೋಘ ವನಸ್ಪತಿ ಔಷಧಿ ಕುಟುಂಬ ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ನಿರೋಗಿಗಳೂ ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸಿನ ಬಾಟ್ಲಿ 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಬಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ
ಇಲ್ಲಿ ಸಿಗುವುದು.

ಸೈಂಟಿಫಿಕ್
ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಿಸಲ್ಪಟ್ಟಿವೆ.)

ಹೈಕೋರ್ಟ್ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:—
The Scientific Gold Bangles Co., Ltd.,
Head Office:—43, Byragimatam Street,
Post Box No. 203, Madras.

ಪಂಡಿತ ಗೋಪಾಲಾಚಾರ್ಲುರವರ
ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ಮುಗಿಸುತ್ತಿದೆ. ಅದರ ಫಲವೇ—ಆಯಾಸ, ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು. ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿ ಬಿಡದಂತೆ ನೀವೀಗಲೇ ತಡೆಹಾಕಬೇಕು; ಉತ್ತಮೋಪಾಯವೇ ಜೀವಾಮೃತಸೇವನೆ—ಈ ಪರಿಣಾಮಕಾರೀ ಸೌಖ್ಯವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು. ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಶಕ್ತಿಯುತ ಪುರುಷರನ್ನಾಗಿ ಮಾಡುವುದು.

ಎಲ್ಲೆಲ್ಲಿಯೂ ದೊರೆವುದು:—ದೊಡ್ಡದು ರೂ. 3—4—0. ಸಣ್ಣದು ರೂ. 1—12—0.

ತಯಾರಿಸುವವರು:—ಆಯುರ್ವೇದಾಶ್ರಮ, ಪೋಸ್ಟು ಬಾಕ್ಸ್ 287, ಮದರಾಸು

ಮೈಸೂರುಪ್ರಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
93, ಚಿಕ್ಕಪೇಟೆ, ಬೆಂಗಳೂರು ಸಿಟಿ.

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದ ಯೋಗ್ಯ ಹಾಗೂ ಬಹುಕಾಲ ಬಾಳುವ ಸರ್ವ ತರದ ಉಡುಪುತೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮುಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೇ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್ ಶೀಟ್. ಬಾತ್ ಟುವಾಲುಗಳೂ ಧೋತಿ, ಸೀರೆ—ಪೈರವಾಸು—ಚಿಕ್ಕ—ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

(ಸಾಹುಕಾರ ದುಕಾನ್)
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For — **A. & F. Harvey,**
Managers: Madura Mills Co, Ltd.,

An Advertisement in
'Swadeshabhimani'
Means a sure fortune to you
Ask for Contract Rates.
The Swadeshabhimani office,
Car Street, Mangalore.

Preserve Your Wealth by BIRTH-CONTROL.

ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾದಿಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದಲ್ಲಿ ಹಿಂಗಿ ಭರ್ಗವಾಗುವಂತ ಔಷಧವಿದೆ.

ವರ್ಷಕ್ಕೊಂದರಂತ ಹೆತ್ತು ತಾಯಿ—ಮಕ್ಕಳು ನರಳದಂತ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:—ಪಂಡಿತ ಕೆ. ನಾರಾಯಣರಾವ್, ಆಯುರ್ವೇದ ಫಾರ್ಮ, ಕಾರ್ಕಳ, ದ. ಕ.
Branches—Kukkundoor & Kalkamba. (Gurpoor ಬ್ರಾ:—ಕುಕ್ಕುಂದೂರು, ಕೈಕಂಬ, ಗುರುಪುರ.
[N. B.—ಉತ್ತರದನ್ನಪೇಕ್ಷಿಸುವವರು ಒಂದಾಣೆಯ ಸ್ಟಾಂಪು ಲಗತ್ತಿಸಿ ಬರೆಯಬೇಕು.]

ಅಮೇರಿಕದ ಕೋಟ್ಯಾಧಿಪತಿಗಳೊಡನೆ

ವಿ। ಇಶಾಲಿಲ್ ಎ. ವರ್ಗೀಸ್ ಎಂ. ಎ. ರವರ ಸಂಭಾಷಣೆ.

ಸಾಮಾಜಿಕ ವ್ಯವಹಾರ ಕ್ಷೇತ್ರದಲ್ಲಿ ಅಮೇರಿಕದ ಕೋಟ್ಯಾಧಿಪರು ಕಾಣಸಿಗು ವುದು ಒಬ್ಬನ ಜೀವಮಾನದಲ್ಲೊಂದು ಸಲ; ಆದರೆ ನಾನು ಮೂವರನ್ನು ಸಂದರ್ಶಿಸಿರುವೆ— ರೊಕ್‌ಫೆಲ್ಲರ್, ಡೋಜ್ ಮತ್ತು ಕಾರ್ನೆಗಿ ಇವ ರನ್ನು. ಮೊದಲಿನವರು ಎಣ್ಣೆಯ ಮಹಾ ಮಾಂಡಲಿಕರು; ಎರಡನೆಯವರು ತಾಮ್ರದ ಮಾಂಡಲಿಕರು. ಮೂರನೆಯ ಕಾರ್ನೆಗಿಯ ವರು ಉಕ್ಕಿನ ಮಾಂಡಲಿಕರು. ನನ್ನ ಅದೃಷ್ಟವು ಹೇಗೆ ಸಂದರ್ಭಗಳನ್ನೊದಗಿಸಿಕೊಟ್ಟಿತೆಂದು ತಿಳಿಯಲಿಚ್ಛಿಸುವೆನು;

ರೊಕ್‌ಫೆಲ್ಲರ್ ಸಂಪ[illegible] ನಿರ್ಮಿಸಿದ [illegible] [illegible] ವಿ[illegible] [illegible] ಭಾವನೆಯು [illegible] [illegible]ಯ ಭಾವನೆಯದು.

ರೊಕ್‌ಫೆಲ್ಲರರ ಧರ್ಮಪತ್ನಿಯವರು ನನ್ನನ್ನು ಬಾಗಿಲ ಬಳಿ ಸ್ವಾಗತೀಕರಿಸಿದರು. ಎತ್ತರವಾಗಿ ಗಂಭೀರ ಮುಖಮುದ್ರೆಯುಳ್ಳ ಸ್ತ್ರೀಯವರು. ರೋಮನರಂತಹ ನಾಸಿಕವವ ರದು. ದೂರದಿಂದ ಅವರ ಕಾವಲು ಮಾಡುತ್ತ ಒಬ್ಬ ಅಂಗರಕ್ಷಕನಿದ್ದನು. ಈ ಸ್ತ್ರೀಯು ಮುಂಚಿನ ಸಿನೆಟರರ ಪುತ್ರಿಯೆಂದು ಮತ್ತೆ ತಿಳಿದೆ. ಅಲ್ಲದೆ ಇವರು ಅಮೇರಿಕಾದಲ್ಲೂ ಇಡೀ ಪ್ರಪಂಚದಲ್ಲೂ ದೊಡ್ಡದೆನಿಸುವ ಚೇಜ್ ನೇಶನ್ ಬೇಂಕ್ ಎಂಬುದರ ಅಧ್ಯಕ್ಷರ ತಂಗಿ ಯೆಂದು ತಿಳಿದುಬಂತು.

ರೊಕ್‌ಫೆಲ್ಲರರೆಂದರೆ ಬಹು ಸರಳ ಸ್ವಭಾವ ದವರು. ಜೊನ್ ಡಿ ಜೂನಿಯರರು ಕುಶಲ ಮತಿಯೂ ವಿಚಕ್ಷಣಶಾಲಿಯೂ ಎಂದು ಭೋಜನದ ವೇಳೆ ಗೊತ್ತಾಯಿತು. ಮದ್ಯ ಬಹಿಷ್ಕಾರಕ್ಕೆ ಅವರು ವಿರುದ್ಧರಿರುವರಾದರೂ, ಅವರು ಧೂಮ್ರ ಸೇವಕರಲ್ಲ,—ಕುಡಿಯುವುದೂ ಇಲ್ಲ. ಆದರೆ ಚೇಸ್ ನೇಶನಲ್ ಬ್ಯಾಂಕಿನ ಅಧ್ಯಕ್ಷರಾದ ಮಿ। ಅಲ್ಡ್ರಿಚ್ ಎಂಬವರು (ಇವರ ಭಾವ) ದೂರದಲ್ಲಿ ಕುಳಿತು ಚೆನ್ನಾಗಿ ಧೂಮ್ರ ಪಾನ ಮಾಡುತ್ತಿದ್ದರು. ರೊಕ್‌ಫೆಲ್ಲರರ ಮಕ್ಕಳೂ ಅಲ್ಲಿದ್ದರು. ತಂದೆಯಂತೆ ಮಕ್ಕಳು. ಮಕ್ಕಳ ಉಡುಗೆತೊಡಿಗೆ, ನಡತೆ ಅಥವಾ [illegible]ನಲ್ಲಾಗಲೀ ಅವರು, ಹಿಂದೂದೇಶದ ಜನರಿಗಿಂತ ಹೆಚ್ಚು ರೊಕ್ಕವಿದ್ದವರೆಂದು ಪ್ರದರ್ಶಿ ಸಿದುದಿಲ್ಲ. ಶ್ರೀಮಂತಿಕೆಯನ್ನು ಮೀರಿ ಬಾಳು ವವರಾಗಿರುವರವರು. ತಂದೆಯು ಮಕ್ಕಳಿಗೆ ವಿಶ್ವವಿದ್ಯಾಲಯಗಳಲ್ಲಿ ವಿದ್ಯೆ ಕೊಟ್ಟು, ಅವರನ್ನು ವಿವಾಹಿತರನ್ನಾಗಿ ಮಾಡಿದ;—ತನ್ನ ರೊಕ್‌ ಫೆಲ್ಲರ್ ಸಂಸ್ಥೆಗಳಲ್ಲಿ ಅವರನ್ನು ಕೆಲಸಕ್ಕೆ ಕಳುಹಿಸಿದ. ಮಕ್ಕಳು ಬಹು ಕಷ್ಟಪಟ್ಟು ಅನು ಭವಿಕರಾದರು. ನೆಲ್ಸನ್ ಎಂಬ ಅವರ ಒಬ್ಬ ಪುತ್ರನು ತನ್ನ ತಂದೆಯಿಂದ ಸಂಬಳ ಹೊಂದ ಬೇಕಾದರೆ ಕೊಲೆಜಿನಲ್ಲಿ ಬಹು ಸಾಹಸಪಟ್ಟು ಕಲಿತನು. ಹಣದ ಬೆಲೆಯೇನೆಂದು ರೊಕ್‌ ಫೆಲ್ಲರರು ಮಕ್ಕಳಿಗೆ ಚೆನ್ನಾಗಿ ತಿಳಿಸಿರುವರು. ರೊಕ್‌ಫೆಲ್ಲರರ ಮಕ್ಕಳು ಭೂಸಂಚಾರಮಾಡಿ ರುವರು—ಹಿಂದೂಸ್ಥಾನವನ್ನೂ ಕಂಡಿರುವರು. ಆದರೆ ಇವರು ಮೂರನೇ ಕ್ಲಾಸಿನ ಗಾಡಿ ಯಲ್ಲೇ ಟಿಕೇಟು ಪಡೆದರೆಂಬುದು ನೆನಪಿನಲ್ಲಿರ ಬೇಕಾಗಿದೆ. ನನ್ನ ಬಳಿ ಊಟಕ್ಕೆ ಕುಳಿತಿದ್ದ ಒಬ್ಬ ಮಗನು ಒಂದು ರೈಲ್ವೆ ಸ್ಟೇಷನಿನಲ್ಲಿ ತನ್ನ ದೊಡ್ಡ ಕೈಚೀಲವನ್ನು ಹಿಡಿದುಕೊಂಡು ಇತ್ತಲಿಂದತ್ತ ತಿರುಗಾಡುತಿದ್ದುದನ್ನು ನಾನೇ ಕಂಡಿರುತ್ತೇನೆ. (ಹಿಂದೂಸ್ಥಾನದಂತೆ ಅಮೇ ರಿಕದಲ್ಲಿ ಕೂಲಿಯಾಳುಗಳು ಅಷ್ಟು ಸುಲಭ ದಲ್ಲಿ ದೊರೆಯುವುದಿಲ್ಲ). ಈ ಮಗನು ತನ್ನ

ಪತ್ನಿಯೊಂದಿಗೆ ಮಾವನ ಮನೆಯಿಂದ ಆಗಲೇ ಬಂದಿದ್ದನು. ಇವನ ಪತ್ನಿಯು ಆಭರಣ ಗಳನ್ನು ಧರಿಸಿಕೊಂಡಿದ್ದಿಲ್ಲ—ಸುಂದರಿಯಾ ದ್ದಳು. ಆದರೂ ಅನ[illegible] [illegible] ಎಲ್ಲವೆಂದು [illegible] [illegible] ಬಂದ್ದ,— [illegible] ಹೇಗೆಂಬ [illegible] —ಎಂದೆ.

ಸಂಪತ್ಸಾಧನೆಗೆ ಸುಲಭೋಪಾಯವಿ ದೆಯೋ ಎಂದು ನನಗೆ ಗೊತ್ತಿದ್ದರೆ ತಿಳಿಸಬೇ ಕೆಂದು ಅವರೇ ನನಗೆ ಹೇಳಿದರು.

ನಾನೆಂದೆ—“ಐಶ್ವರ್ಯವಂತ ತಂದೆಯು ಮಗನಾಗಿ ಹುಟ್ಟಬೇಕು. ಅಥವಾ ಸ್ಟೊಕ್ ಮಾರ್ಕೆಟಿನಲ್ಲಿ ನಿಂತು ಅದೃಷ್ಟ ಪರೀಕ್ಷೆಗಾಗಿ ಕಲ್ಪನೆಯೊಂದನ್ನು ಮಾಡಬೇಕು.”

ಅವರು ನಕ್ಕರು. ನಂತರ ನಾನು ಹೊರ ಡುವಾಗ ಒಂದು ಸರಪಣಿಯನ್ನೂ ಒಂದು ಅದೃಷ್ಟಶಾಲಿ ಆನೆ ಮತ್ತು ಕುದುರೆ ಗೊರಸುಗಳ ಗೊಂಬೆಗಳನ್ನು ಕೈಗೆ ಕೊಟ್ಟರು. ದೊಡ್ಡ ನಕ ಲಿಯೇ ಆಯಿತದು. ಸ್ಮರಣೆಗಾಗಿ ಏನಾದ ರೊಂದನ್ನು ಕೇಳಿದರೆ ೧೦ ಪೈಗಳನ್ನು ಕೊಡು ವುದು ಅವರ ಕ್ರಮ. ಜೊನ್ ಜೂನಿಯರರ ಒಬ್ಬ ಮಗ ಭಾಷಣಕ್ಕೆ ತೊಡಗಿದ:

“ನಮ್ಮ ದೇಶದಲ್ಲಿ ನಿಮಗೆ ತಕ್ಕ ಭಂಡಾ ರವೇ ಇದೆ” ಎಂದನವನು.

“ಹೌದು ನಿಮಗೆ ದುಡ್ಡಿದೆ; ಜೀವನದಲ್ಲಿ ಬೇಕಾದ ಸುಖವಿದೆ; ನಮಗೆ ಕಷ್ಟವಿದೆ; ಬೇಕಾ ದಷ್ಟು ತತ್ವದ ಆಗರವಿದೆ—ಕಷ್ಟದ ತತ್ವವೂ ಇದೆ. ತತ್ವದ ದುಃಖವೂ ಇದೆ. ಇವುಗಳೆನ್ನು ಯಾವಾಗ ಬೇಕಾದರೂ ವಿನಿಮಯ ಮಾಡಲು ನಿಮ್ಮೊಡನೆ ನಾನು ಸಿದ್ಧನಿದ್ದೇನೆ” ಎಂದೆ.

ಹೆಚ್ಚಿನ ಕೋಟ್ಯಾಧಿಪತಿಗಳಂತೆ ರೊಕ್‌ ಫೆಲ್ಲರರಿಗೆ ಅವರ ಕುಟುಂಬವಾಸಕ್ಕೆ ಬೇಕಾದ

ಒಂದು ಮನೆಯೂ ಇದೆ. ಒಂದು ಮನೆಯು ಪಟ್ಟಣದ[illegible] ಅಲ್ಲಿ ತಮ್ಮ ಮಿತ್ರ ರನ್ನು [illegible] ಫ್ಲೊರಿಡಾ [illegible] ಗಳ [illegible] ಇತರ ಮನೆಯೊಂದರಗಳ [illegible] [illegible] ಹೋದೆ. ನೋಡ[illegible] ನೋಟೀಸುಗಳು [illegible] ಅತಿಕ್ರಮ ಪ್ರವೇಶ ಮಾಡಿದ [illegible] ಶಿಕ್ಷಿಸಲಾಗುತ್ತದೆ” ಎಂದು ಸಾರು ತ್ತಿದ್ದುವು. ಮತ್ತೂ ಮುಂದೆ ಹೋದೆ. ಕೊನೆ ಗೊಂದು ಮನೆಯು ಕಾಣಸಿಕ್ಕಿತು. ಮೋಟ ರಿನ ಗೇರೆಜ್ ಇತ್ತು. ಬಳಿಯಲ್ಲಿ ರೋಷಾ ವಿಷ್ಟ ನಾಯಿಯೊಂದು ಹಾರುತ್ತಿತ್ತು. ಸಣ್ಣ ಗುಡಿಸಲಂತಹ ಗೃಹವದು. ಚಿನ್ನದ ಇಟ್ಟಿಗೆ ಗಳ ಗೋಡೆಯಿದ್ದಿಲ್ಲ, ಪುತ್ಥಳಿಯಂತಹ ನೆಲ ವಲ್ಲ. ವಜ್ರನಿರ್ಮಿತ ಸಾಮಗ್ರಿಯೊಂದಿಲ್ಲ— ವಾಸ ಮಾಡುವವರೊಳಗೆ ಯಾವ ಜಗಳವೂ ಇಲ್ಲ! ರೊಕ್‌ಫೆಲ್ಲರರು ಚೆನ್ನಾಗಿ ಕಷ್ಟಪಟ್ಟು ದುಡಿದು ಸಂಪತ್ಸ್ವಾಮಿಗಳಾದವರೆಂದು ಡಾರ್ಬೆಲ್ಲರ ಅಥವಾ ರಿಪ್ಲ ಎಂಬವರ ಗ್ರಂಥ ಗಳಿಂದ ತಿಳಿದು ಬರುತ್ತದೆ. ರಿಬೇಟ್, ದರ, ಕೋರ್ಟು ಖಚೇರಿಗಳೆಲ್ಲವೂ ಅವರನ್ನು ಬಿಟ್ಟಿಲ್ಲ. ಆಗ ಅದೊಂದು ಕ್ರಮವಾಗಿತ್ತು. ರೊಕ್‌ಫೆಲ್ಲರರಿಂದ ಈ ಕ್ರಮವು ಅವಸಾನ ಹೊಂದಿತು. ಗೋಡೆಗೆ ಬೆನ್ನು ಹಾಕಿ ಅವರು ಯುದ್ಧ ಮಾಡಿದರು. ಬಂದುದನ್ನು ಹೊಡೆದು ಹಾಕಿ ತಾನು ಹೊಡೆಸಿಕೊಂಡರು. ಆದರೆ ರೊಕ್‌ಫೆಲ್ಲರರು—ಅದರಲ್ಲೂ ಅವರ ಪುತ್ರರು ರಾಷ್ಟ್ರಹಿತವಾದಿಗಳು. ಇವರ ಸಿರಿಯ ಅಂಶ ವನ್ನಿವರು ವಿದ್ಯೆ, ವೈದ್ಯ ಮೊದಲಾದ ಶ್ರೇಯ ಸ್ಕರ ವಿಷಯಗಳಿಗಾಗಿ ವೆಚ್ಚ ಮಾಡಿದರು. ಚೀನಾ ಅರೇಬಿಯಾಗಳಲ್ಲಿನ ಅವಿದ್ಯೆಯನ್ನದು ಓಡಿಸುತ್ತಿದೆ. ಬ್ರೇಜಿಲ್‌ನಲ್ಲೂ ಪನಾಮಾ ದಲ್ಲೂ ಅವರ ಹಣವು ಕ್ರಿಮಿಗಳನ್ನು ಕೊಲ್ಲು ತ್ತಿದೆ. ಹಿಂದೂಸ್ಥಾನದಲ್ಲಿ ಕಾಲರಾವನ್ನು ಹಿಡಿದೋಡಿಸುತ್ತಿದೆ. ಅಸಹ್ಯಗಳಾಗಿ ದೊರೆತ ದುದು ಅನುಕೂಲ್ಯವಾಗಿ ವೆಚ್ಚವಾಯಿತು.

ಇತರ ಮಿಲಿಯಾಧಿಪತಿಗಳಿಗಿರುವ ಅವ ಗುಣಗಳು ರೊಕ್‌ಫೆಲ್ಲರರಲ್ಲಿಲ್ಲ. ಇಂಗ್ಲಾಂ

ದಿನ ದಿವಾನಖಾನೆ [illegible] ಕುಟುಂಬದಲ್ಲಾಗಲೀ, ಇಟಲಿಯ ಅರ್ಥ[illegible] ಬಿರುದುಬಾವಲಿ [illegible] ಮುಂದಾಳುಗಳಲ್ಲಾಗಲೀ ಅವರು ವಿವಾಹ ಸಂಬಂಧವನ್ನಪೇಕ್ಷಿಸಿದುದೇ ಇಲ್ಲ. ಇಚ್ಛೆಯೊಂದು ಇರುತ್ತಿದ್ದರೆ, ರೊಕ್‌ಫೆಲ್ಲರ್ ಡೋಲರುಗಳು ಇಂತಹವರನ್ನು ರಾಶಿರಾಶಿ ಯಾಗಿ ಪಡೆಯಬಹುದಿತ್ತು. ಅವರಿಗೆ ಸರ [illegible] ತಮ್ಮಂತಹವರು ಬೇಕು.

[illegible]ಫೆಲ್ಲರರನ್ನು ಹಿಂದೂಸ್ಥಾನಕ [illegible]—“ನಿಮ್ಮ ಪ್ರಯಾಣಕ್ಕಾಗಿ ಆನೆ ಗಳನ್ನು ತರುವೆನು”—ಎಂದು ಅವರತ್ತ ಆನೆಯ ಗೊಂಬೆಯನ್ನು ನೋಡಿ ಹೇಳಿದೆ. ಒಬ್ಬ ಮಿತ್ರರೂ ನನಗೆ ಹೇಳಿದರು. “. . . ರ ಹಣ ವೆಂದರೆ ಮುಷ್ಠಾ ಶಾಪ; ರೊಕ್‌ಫೆಲ್ಲರರ ಹಣ ವೆಂದರೆ ಜಗತ್ತಿಗೊಂದು ವರ” ಎಂದು.

ತಾಮ್ರದ ಮಹಾಮಾಂಡಲಿಕರಾದ ಡೋಜ್ ಕುಟುಂಬವು ನ್ಯೂಯೋರ್ಕ ಪಟ್ಟಣದ ಹಡ್ಸನ್ ಎಂಬಲ್ಲಿ ಆರ್ವತ್ತು ಎಕ್ರೆ ಸ್ಥಳವನ್ನು ಪಡೆದು ವಾಸಿಸುತ್ತಿದೆ. ಅವರಿಗೆ ಪ್ರಪಂಚದಲ್ಲೆಲ್ಲ ಗಣಿಗಳಿವೆ. ಟರ್ಕಿ, ಅರೇಬಿಯಾ, ಕೊಲಂ ಬಿಯಾ, ಅಮೇರಿಕಾಗಳ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಅವರ ದ್ರವ್ಯವು ಪ್ರಮುಖ ಭಾಗ ವಹಿಸುತ್ತಿದೆ.

ಒಬ್ಬ ಡೋಜರ ಪತ್ನಿಯು ಮೋರ್ಗನ್‌ರ ಪುತ್ರಿ. ಈ ಮೋರ್ಗನರಿಂದ ಫ್ರಾನ್ಸ್ ಇಂಗ್ಲಾಂ ಡುಗಳು ಕೈಕಡ ಪಡೆಯುತ್ತವೆ. ಪ್ರೆಸಿಡೆಂಟ್ ವಿಲ್ಸನರು ಡೋಜ್ ಕುಟುಂಬದವರು. ನ್ಯೂಯೋರ್ಕಿಗೆ ಬಂದಾಗ ಅವರು ಇವರಲ್ಲೇ ವಾಸಿಸುತಿದ್ದರು. ವಿಲ್ಸನರು ತನ್ನ ಹದಿನಾಲ್ಕು ಸೂತ್ರಗಳನ್ನು ಬರೆದ ಆ ಕೋಣೆಯನ್ನು ನನಗೆ ತೋರಿಸಲಾಯಿತು. ರೊಕ್‌ಫೆಲ್ಲರರ ಗ್ರಾಮದ ಮನೆಯಂತೆ ಡೋಜರ ಮನೆಯೂ ಸಣ್ಣದೇ. ಅಲ್ಲಲ್ಲಿ ಸಣ್ಣ ಸಣ್ಣ ಮನೆಗಳು; ಒಂದೊಂದ ರಲ್ಲಿ ತಾಯಿ, ಅಣ್ಣತಮ್ಮಂದಿರು ವಾಸಿಸುವರು. ಹಿಂದೂದೇಶದಲ್ಲಿ ನಾವು ಕಟ್ಟುವಂತೆ ಅಮೇರಿಕ ನರು ಸರ್ವ ಕಾಲಕ್ಕಾಗುವ ಮನೆಮಠಗಳನ್ನು ಕಟ್ಟುವುದಿಲ್ಲ. ಇಪ್ಪತ್ತು ವರ್ಷಗಳಿಗಿಂತ ಹೆಚ್ಚು ಬಾಳುವ ನೂರಿಪ್ಪತ್ತೈದು ಮಾಳಿಗೆಗಳ ಮನೆ ಯಿಲ್ಲ.

ಡೋಜ್ ಕುಟುಂಬವು ಗುಣಶಾಲಿಗಳದ್ದೇ. ನಾನು ಹೊರಟಾಗ ಅವರ ಮಗುವೊಂದು ನನ್ನ ಅಂಗಿಗೆ ಹೂವೊಂದನ್ನು ತಗಲಿಸಿತು.

ಹಿರಿಯ ಎಂಡ್ರೂ (ಎಂಡಿ) ಕಾರ್ನೆಗಿಯ ವರು ಕಾಲವಾಗಿದ್ದಾರೆ. ಅವರ ವಿಧವೆಯು ಎಲ್ಲರನ್ನು ಸತ್ಕರಿಸುತ್ತಾರೆ. ‘ ದೊಡ್ಡ ದೊಡ್ಡ

(೧೯ನೇ ಪುಟಕ್ಕೆ ಮುಂದುವರಿದಿದೆ)

ಕೊಪ್ರನ್ ದಂತಮಂಜನದ ನಳಿಗೆ(tube)ಗಳ

ಸ್ಕ್ರ್ಯೂ ಕೇಪ್ ಮತ್ತು ಕ್ಲಿಪ್ ಕೇಪ್‌ಗಳನ್ನು ಸಂಗ್ರಹಿಸಿರಿ—

ಸುಂದರವಾದ ಉಚಿತ ಉಡುಗೊರೆಗಳನ್ನು ಪಡೆಯಿರಿ.

ಈ ಕೆಳಗೆ ಕೆಲವನ್ನು ಕೊಟ್ಟಿರುತ್ತದೆ:—

ಕನ್ನಡಿ ಸಹಿತವಿರುವ ಸೇಫ್ಟಿರೇಜರ್ ಪೆಟ್ಟಿಗೆಯೊಂದು. ಒಂದು ಪೆಟ್ಟಿಗೆ ಬ್ಲೇಡ್‌ಗಳು. ಮೊರೊಕೊ ಚರ್ಮದ ಚೀಲ (ಇದರಲ್ಲಿ ವಿಭಾಗಗಳಿವೆ) ಫೌಂಟನ್ ಪೆನ್; 14 ಕ್ಯಾರೆಟ್ ಭಂಗಾರದ ನಿಬ್; ಇರಿಡಿಯಮ್ ಇರುವಂ ಥದ್ದು. ಸೆಲ್ಫ್ ಫಿಲ್ಲಿಂಗ್ ರೋಲ್ಡ್ ಗೋಲ್ಡ್ ಪಟ್ಟಿ ಮತ್ತು ಕ್ಲಿಪ್ ಇದೆ. ಪ್ರಸಿದ್ಧ ಪಟ್ಟಿ ನಮೂನೆದ್ದು ಸ್ತ್ರೀಯರ ಸುಂದರ ಕೈಪೆಟ್ಟಿಗೆ; ಕನ್ನಡಿಯಿದೆ, ಅದರೊಡನೆ ಜೇಬಿನ ಪಕೆಟ್ ಇದೆ.



ಮನೋಹರವಾದ ಮೇಜಿನ ಗಡಿಯಾರ.

ಸ್ವಿಸ್ ತಯಾರಿಯ ಲಿವರ್ ರಿಸ್ಟ್‌ವಾಚ್ (ಜಂಪಿಂಗ್ ಫಿಗರ್ಸ್)

ವಿವರಕ್ಕೆ ಗಿರಾಕಿಗಳನ್ನು ಕಾಣಿರಿ ಅಥವಾ

ಕೊಪ್ರನ್ ಕೆಮಿಕಲ್ ಕೊ., ಲಿಮಿಟೆಡ್, 83—85 ತಾರದೇವ್ ರೋಡ್, ಮುಂಬಾಯಿ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

FRESH CONSIGNMENT ARRIVED

UNEQUALLED QUALITY — EXCEPTIONAL PRICE.

A TIRE THAT SAVES YOUR REPUTATION AND MONEY

The Canara Public Conveyance Co., Ltd.

MANGALORE.

'ಯುದ್ಧವಾಗಬಾರದು' ಎಂಬ ಚಳವಳಿ!

೧೯೧೪ರಲ್ಲಿ ಪ್ರಾರಂಭವಾದ ಮಹಾಯುದ್ಧದಂತಹ ಇನ್ನೊಂದು ಯುದ್ಧವು ನಡೆಯದಂತೆ ತಡೆಯುವುದು ಲೋಕ ವಿದಿತ ವಿಷಯ. ಈ ಯುದ್ಧವಾದರೆ ಮತ್ತು ಇಪ್ಪತ್ತು ವರ್ಷಗಳ ತನಕ ಜಗತ್ತಿನ ಉದ್ಧಾರವಾಗದು. ಅದಕ್ಕಾಗಿ ಇದನ್ನು ತಡೆಯಬೇಕೆಂದು ರಾಜನೀತಿಜ್ಞರು ಸಾಹಸಪಡುತ್ತಿರುವರು. ಅದೇ ಸೆಪ್ಟೆಂಬರ ತಾ. ೧೯ರಲ್ಲಿ ಲೀಡ್ಸನಲ್ಲಿ "ಯುದ್ಧವಾಗಬಾರದು" ಎಂಬ ಚಳವಳಿಯನ್ನು ಹೂಡುವುದರ ಸಲುವಾಗಿ ಮಹಾ ಪರಿಷತ್ತು ಸೇರಿತು. ಅಧ್ಯಕ್ಷರಾಗಿ ಮಿ। ವಿಲ್ಫ್ರೆಡ್ ವೆಲ್ಲಾಕ್ ಎಂಬ ಲೋಕಪ್ರಖ್ಯಾತ ರಾಜಕಾರಣ ಪಟುಗಳು ಉಜ್ವಲ ಭಾಷಣವಿತ್ತರು. ಅದನ್ನಿಲ್ಲಿ ಉದ್ಧರಿಸಿ ಕೊಡಲಾಗಿದೆ. [illegible] ಇದು ಪಾತ್ರವಾಗದಿರದೆಂದು ನಂಬಿಕೆ.—ಸಂ, ಸ್ವ.

೧

ನಾಗರಿಕ ಜನಾಂಗವು ಚರಿತ್ರೆಯಲ್ಲಿ ಕೇಳದ ಇನ್ನೊಂದು ಮಹಾಯುದ್ಧದ ಬೆಂಕಿಯಲ್ಲಿ ಬಿದ್ದು ಬೇಗನೇ ಹತಗೊಳ್ಳಲಿದ್ದು [illegible] ತಿಳುವಳಿಕೆಯುಳ್ಳವರಾಗಿ ನಾವು [illegible] ಸೇರಿ ಬಂದಿರುವೆವು. [illegible] ಅಲ್ಲದೆ [illegible] ಈ ಸಂದಿಗ್ಧ ಸ್ಥಿತಿಯು ಬಂದೊದಗಿದೆ. [illegible] ಭಂಡಾರವೆಲ್ಲ ಮನುಷ್ಯನ ಸ್ವಾಧೀನವಾಗಿದೆ. ವಿಜ್ಞಾನವು ಎಲ್ಲವನ್ನೂ ಸಮೀಕರಿಸಿದೆ; ಜೀವನವನ್ನು ಸಕಾರಣವಾಗಿ ಸುಖಕರವಾಗಿ ಮಾಡುತ್ತಿದೆ. ಮಾನವನಿಗೆ ಬೇಕಾದಷ್ಟು ಬಿಡುವಿದೆ.

ಈ ಪರಿಸ್ಥಿತಿಯು ಪ್ರತಿಯೊಬ್ಬ ಕುಶಲಮತಿಯೆದುರು ಪ್ರತಿಭಟಿಸಿ ನಿಂತಿದೆಯೆಂದು ತಿಳಿಯಬೇಕು; ಶಾಂತಿಪ್ರಿಯನಾದ ಪ್ರತಿಯೊಬ್ಬನನ್ನು ಎದುರಿಸಿ ನಿಂತಿದೆಯೆಂದು ಗೊತ್ತಿರಬೇಕು. ಈ ಪರಿಸ್ಥಿತಿಗೆ ಕಾರಣಗಳೇನೆಂದು ಕಂಡು ಹಿಡಿದು, ಅವುಗಳನ್ನು ಹೊರಗಟ್ಟಬೇಕಾಗಿದೆ. ವಿಚಾರಿಸಿದರೆ ನಿಸ್ಸಂದೇಹವಾಗಿ ಕಾರಣವು ಹೊರಗಾಗುವುದು; ಈ ಕಾರಣಗಳು ಉತ್ಪನ್ನಗೊಳಿಸಿರುವ ಸಂದಿಗ್ಧತೆಯು ನಮ್ಮನ್ನು ಕೆರೆದ ಹೃದಯದಿಂದ ನುಡಿಯಲು ಪ್ರೇರೇಪಿಸುವುದು.

ಆಧುನಿಕ ಜೀವನವೆಂದರೆ, ಜಗತ್ತಿನ ಒಂದು ಮೂಲೆಯಿಂದ ಇನ್ನೊಂದು ಮೂಲೆಯ ವರೆಗೆ ಅವಿಶ್ರಾಂತವಾಗಿ ಹರಿಯುತ್ತಿರುವ ಭೌತಿಕ ವಿಷಯ ಸಂಪಾದನೆಯ ಆಶೆ; ಅದರ ಉತ್ಪನ್ನದ ತೃಷೆ—ಆರ್ಥಿಕ ಐಶ್ವರ್ಯ, ರಾಜಕೀಯ ಉತ್ಕರ್ಷತೆಗಳಿಗಾಗಿ ಇರುವ ಹಸಿವು—ಇವುಗಳಿಗಾಗಿ ನಡೆಯುವ ಸಾಹಸವು. ಈ ಸಮರವು ಶಿಥಿಲ ಸುಖಗಳುಳ್ಳದ್ದಾಗಿದೆ. ಒಂದು ಕೈಗಾರಿಕೆಯೊಡನೆ ಇನ್ನೊಂದರ ಸ್ಪರ್ಧೆ; ಅಂತರಾಷ್ಟ್ರೀಯವಾಗಿರುವ ವ್ಯಾಪಾರ ವಾಣಿಜ್ಯ—ಆರ್ಥಿಕ ಸಮಸ್ಯೆಗಳ ಪರಸ್ಪರ ಹೊಡೆದಾಟ; ಒಳಗೂ ಹೊರಗೂ ವ್ಯಾಪಾರ ಮತ್ತು ಮಾರ್ಕೆಟುಗಳ ಸ್ವಾಧೀನತೆಯ ಪ್ರಯತ್ನ; ಕೆಲಸ ಮಾಡುವವರೊಳಗೂ ಮಾಡಿಸುವವರೊಳಗೂ ವೈಷಮ್ಯ, ಸಿರಿವಂತರ ಮತ್ತು ದರಿದ್ರರೊಳಗೆ ಹೊಯ್ದಾಟ,—ಕೊನೆಗೆ ರಾಷ್ಟ್ರ ರಾಷ್ಟ್ರಗಳ ಹೊಡೆದಾಟ— ಈ ಹೊಡೆದಾಟವು ಮಹಾ ಕಾದಾಟವಾಗಿ ಪರಿಣಮಿಸಿ, ಹಾನಿಯನ್ನುಂಟುಮಾಡುತ್ತಿದೆ; ಪ್ರಪಂಚವನ್ನು ವ್ಯಾಪಿಸುವಷ್ಟು ಪ್ರಚಂಡವಾಗಿ ಬೆಳೆದಿದೆ. ಸಕಾರಣವಾದ ಸುಖವನ್ನಾಶಿಸುವವರೊಳಗೂ, ಸ್ವಾರ್ಥಿಗಳಾಗಿ ವರ್ತಿಸುವ ಸಣ್ಣ ಸಣ್ಣ ತಂಡಗಳಿಗೂ ಹೊಯ್ಕೈಯಾಗುತ್ತಿದೆ. ಅಂತೂ ಸಮಷ್ಟಿಹಿತವು ಲಕ್ಷಿಸಲ್ಪಟ್ಟಿಲ್ಲ. ಸ್ವಹಿತವು ಗಮನಕ್ಕೆ ಬರಿದೆ.

ಈ ದ್ವಂದ್ವಗಳು ಇಟಲಿಯಲ್ಲಿ ಫೆಸಿಸಮನ್ನು ತಂದೊಡ್ಡಿತು; ಜರ್ಮನಿಯಲ್ಲಿ ನಾಜಿ ರಾಜ್ಯ, ಟರ್ಕಿಯಾದಲ್ಲೂ ಪೋಲೆಂಡಿನಲ್ಲೂ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಿತು. ಮಧ್ಯ ಯುರೋಪಿನ ಹಲವು ಸಂಸ್ಥಾನಗಳಲ್ಲಿ ಇದೇ ಸ್ಥಿತಿಯು ಬಂದೊದಗಿದೆ. ಸಂಕಷ್ಟವು ಒದಗಿದೆ. ಇದು ಸ್ಪೈನಿನಲ್ಲಿ ಕ್ರಾಂತಿಯನ್ನುತ್ಪನ್ನಮಾಡಿದೆ. ರಷ್ಯದಲ್ಲಿ ಕಮ್ಯೂನಿಸಮನ್ನು ಸ್ಥಾಪಿಸಿದೆ. ಅಮೆರಿಕಾದಲ್ಲಿ ಕೈಗಾರಿಕೆಗಳಲ್ಲೂ ರಾಷ್ಟ್ರಾಡಳಿತದಲ್ಲೂ ನಿರ್ವಿವಾದವಾದ ನಿರಂಕುಶಾಧಿಕಾರವು ತಲೆದೋರಿದೆ. ದಕ್ಷಿಣಾಮೆರಿಕದಲ್ಲಿ ಕ್ಷೋಭೆಗೆ ಕಾರಣವಾಗಿದೆ. ಫ್ರಾನ್ಸಿನಲ್ಲಿ ಜ್ವಾಲಾಮುಖಿಯಂತಹ ಕಠೋರ ಪರಿಸ್ಥಿತಿಯನ್ನುಂಟುಮಾಡುತ್ತದೆ. ಅಂತೂ, ಜಗತ್ತಿನ [illegible] ಕ್ಷೇತ್ರದಲ್ಲಿ ಅಸಂತುಷ್ಟಿಯು [illegible] ವ್ಯಕ್ತವಾಗಿ ಬೆಳೆದಿದೆ. ಹಿಂದೂಸ್ಥಾನದಲ್ಲಂತೂ [illegible] ದಂಗೆಯುದ್ಭವಿಸಿದೆ. [illegible] ಆರ್ಥಿಕ ಸಾಮ್ರಾಜ್ಯ [illegible] ಇತ್ಯಾದಿ ಇತ್ಯಾದಿ. ಮಹಾ ರಾಷ್ಟ್ರಗಳಾದ ಬ್ರಿಟನ್, ಸಂಯುಕ್ತ ಅಮೇರಿಕಾ, ಜಾಪಾನ್, ಫ್ರಾನ್ಸ್, ಜರ್ಮನಿ, ಇಟಲಿ [illegible] ಕಾರಣೀಭೂತವಾಗಿವೆ. [illegible]

ಶಕ್ತಿಗಳಾವುವು—ಅವುಗಳ ಚಿತ್ರಣವೆಂತೆಂಬುದೆಂದರಿಯಬೇಕಾಗಿದೆ.

'ಶಾಂತಿ ಚಳವಳಿ'ವು ಲೋಕದ ಚಲನೆಯನ್ನು ಸಾವಧಾನವಾಗಿ ಪ್ರೇಕ್ಷಿಸುತ್ತಾ ಬಹು ಹೊತ್ತನ್ನು ಕಳೆಯಿತು. ಅದರೇನು?—[illegible] ಸಮಸ್ಯೆಗಳಿಗೆಲ್ಲ ಅವುಗಳಿಗಗತ್ಯವಿದ್ದ ಲಕ್ಷ್ಯವನ್ನೀಯಲು ಅದರಿಂದ ಸಾಧ್ಯವಾಗಲಿಲ್ಲ. ವೀಸ [illegible] ಎಂಬುದು ಜನಾಂಗ ಸಭೆಯೊಡನೆ ಶಸ್ತ್ರಸನ್ಯಾಸದ ಮನವಿಯನ್ನು ಮಾಡಿದ್ದಾಗಲೇ ಜನಾಂಗ ಸಭೆಯು ಮರಿ[illegible]ರುವ ಕೆಲವು ಆರ್ಥಿಕ ಶಕ್ತಿಗಳಿಂದ ಪ್ರೇರಿಸಲ್ಪಟ್ಟು ಶಸ್ತ್ರತ್ಯಾಗವನ್ನು ಮಾಡಲು ಸಾಧ್ಯವಾಗುವುದಿಲ್ಲ. [illegible] ಯುದ್ಧ [illegible] ಶಸ್ತ್ರಸಿದ್ಧತೆಯ ಮಹಾ [illegible] ದುಸ್ಸಾಹಸವನ್ನು ನಾವು ಕಂಡೆವು. ರಾಜಕೀಯ [illegible], ಕವಿಗಳು, 'ಜ್ಞಾನಿಗಳು' ಅಲ್ಲದೆ, [illegible] ಕೂಡಾ ಅದರ ವಿಷಮತೆಗೆ ಬಲಿಯಾಯಿತು. ಬ್ರಿಟಿಷ ಜನಾಂಗವು ಜುನಸ್ವೀಕರಿಸಿಕೊಂಡಿತು. 'ನಮಗೆ ಎಂಟು ಬೇಕು; ಶಾಂತಿಯು ಕಟಿಬೇಡ' ಎಂದಿತು. ರಾಜ

ಹೇಗಿದೆಯೆಂದರೆ; ಶಕ್ತಿಯೊಂದನ್ನು ಬಿಟ್ಟು ಬೇರೆ ರಾಷ್ಟ್ರಕ್ಕೆ ಸ್ವಾತಂತ್ರ್ಯ, ಆರ್ಥಿಕ ಶಕ್ತಿಯೆಲ್ಲ ಸಣ್ಣ ಸಣ್ಣ ಜನಾಂಗಗಳ ಕೈವಶವಾಗಿ [illegible] ಸರಕಾರಗಳ ಕೈಯಲ್ಲಿಲ್ಲ—ಬರಿಯ ಜನರ ಕೂಟಗಳಲ್ಲಿದೆ. ಈ ಪ್ರತಿಯೊಂದು ಪಂಗಡವು ಸ್ವಪ್ರಯೋಜನದ ಕುರಿತು ಚಿಂತಿಸುತ್ತಾ ಬದುಕಿ ಬಾಳುತ್ತಿದೆ. ಸಮಷ್ಟಿ ಲೌಕಿಕ ವಿಚಾರಗಳು ಅದಕ್ಕೆ ಬೇಕಾಗಿದೆ. ಪ್ರತಿ ರಾಷ್ಟ್ರದ ನ್ಯಾಯವಿಧಾಯಕ ಸಭೆಗಳಲ್ಲೋ ಸರಕಾರಗಳಲ್ಲೂ [illegible] ಪಂಗಡಗಳ ಪ್ರಾತಿನಿಧ್ಯವಿದೆ. [illegible] ಸರಕಾರಗಳಂತೂ ಸ್ವೇಚ್ಛೆ [illegible] ಬೇರೆ ರೀತಿಯಾಗಿ ವರ್ತಿಸುವುದೇ ಇಲ್ಲ. ಕೆಲವೊಂದು ವೇಳೆ ಈ ಪಂಗಡಗಳೆಲ್ಲ ರಾಷ್ಟ್ರೀಯತಾ ಭಾವನೆಯನ್ನುಳ್ಳವುಗಳು. ಇವುಗಳು ವಿಶಿಷ್ಟವಾದ ವ್ಯಾಪಾರ, ವಾಣಿಜ್ಯ, ಅಥವಾ ಸಂಘಗಳನ್ನು ಪ್ರತಿನಿಧಿಸುತ್ತವೆ. ಕೆಲವೊಂದು ವೇಳೆ ಅವುಗಳು ಅಂತರಾಷ್ಟ್ರೀಯ ಭಾವನೆಯನ್ನುಳ್ಳವುಗಳು. ಮಿಕ್ಕವುಗಳೆಲ್ಲ ಸಾಮ್ರಾಜ್ಯವಾದಿಗಳಾಗಿವೆ. ವ್ಯಾಪಾರ, ವ್ಯವಹಾರ, ದುಡ್ಡು ಎಲ್ಲ ಅವುಗಳಿಗೇ

"ಗೃಹಲಕ್ಷ್ಮಿ" ಚಲಚ್ಚಿತ್ರದೊಳಗಿನ ದೃಶ್ಯಗಳು. ಇದರಲ್ಲಿ ಸವಿತಾದೇವಿ ಮತ್ತು ಜಾಲ್ ಮರ್ಚಂಟ್ ಇವರು ಮುಖ್ಯ ಪಾತ್ರ ವಹಿಸಿರುವರು. ಸವಿತಾದೇವಿಯು ಚಲಚ್ಚಿತ್ರಗಳಲ್ಲಿ ಅಭಿನಯಕ್ಕಾರಂಭಿಸಿ, ನಾಲ್ಕು ವರುಷಗಳಾಗುತ್ತವಷ್ಟೆ. ಇಷ್ಟರಲ್ಲೆ ಈಕೆ ಬಹುಜನರ ಮೆಚ್ಚುಗೆಗೆ ಪಾತ್ರಳಾಗಿದ್ದಾಳೆ. ಪ್ರಖ್ಯಾತ ಸಿನೆಮನಟಿ ಸೀತಾದೇವಿಯ ಸ್ಥಾನವನ್ನೀಕೆ ಪಡೆವಳೆಂಬ ಭರವಸೆಯಿದೆ.

ಈ ವೈಷಮ್ಯದ, ಈ ಹೊಡೆದಾಟದ ಮಹತ್ತ್ವಿಕೆಯು,—ಮಹಾಗುಣವು, ಅದರೆದುರು ನಿಲ್ಲಲಾರದೆ ಸೋತು ಹೋಗುವ ಜನಾಂಗ ಸಭೆ, ಪ್ರಪಂಚ ಶಸ್ತ್ರಸನ್ಯಾಸ ಪರಿಷತ್ತುಗಳು ಪ್ರಪಂಚದ ಆರ್ಥಿಕ ಪರಿಷತ್ತುಗಳ—ನಿರುಪಾಯಕ, ಅಸಾಹಯಕರ ಪರಿಸ್ಥಿತಿಗಳನ್ನು ಪರಿಶೀಲಿಸಿದರೆ ಮನಗಾಣುವುದು. ಏಕೆ, ಇಂಟರ್ ನೇಶನಲ್ ಲೇಬರ್ ಆಫೀಸು ಕೂಡಾ ಈ ಪ್ರತಿಸ್ಪರ್ಧಿಗಳಿಗೆ ತಲೆಬಾಗುವುದೆಂದರೆ ಈ ಬಲಗಳ ಮಹಿಮೆಯೆಂತಹುದು! ಎರಡೂವರೆ ವರ್ಷಗಳ ತನಕ ಪರಿಷತ್ತಿನಲ್ಲಿ ಕುಳಿತ ಪ್ರಪಂಚ ಶಸ್ತ್ರಸನ್ಯಾಸ ಪರಿಷತ್ತು—ಶಸ್ತ್ರಗಳು ಅಧಿಕಾಧಿಕವಾಗಿ ಸಿದ್ಧವಾಗುತ್ತಿದ್ದ ವಿಷಮ ದಿನಗಳ ಮಧ್ಯೆ ಬಿದ್ದು ಹೋಯಿತೆಂದರೆ, ನಿಸ್ಸಂದೇಹವಾಗಿಯೂ ಹೊರಗಿನಿಂದ ಕಾಣದ ಬಹು ಬಲಶಾಲಿ ಶಕ್ತಿಗಳು ಲೀಗ್ ಒಫ್ ನೇಶನ್ಸಿನ ಅದೃಷ್ಟವನ್ನು ನಿರ್ದೇಶಿಸುತ್ತಿದೆಯೆಂದು ಭಾಸವಾಗುವುದಿಲ್ಲವೇ? ಈ ನೀತಿಜ್ಞರು ಆ ಕೇಳಿಕೆಗೆ ತಲೆವಾಗಿದರು. ಇಂಗ್ಲೆಂಡು ಎಂಟು ನಾವೆಗಳನ್ನು ಕಟ್ಟಿತು. ಎಂಟು ವರ್ಷಗಳ ನಂತರ ಮಹಾಯುದ್ಧವು ಪ್ರಾರಂಭವಾಯಿತು.

ಮೊದಲಿನ ಆಶಕ್ತಿಯು ಈಗಲೂ ಕಾರ್ಯತತ್ಪರವಾಗಿರುತ್ತದೆ. ಅಂದಿನ ಆಂದೋಲನವೇ ಇಂದೂ ತಲೆಯೆತ್ತಿದೆ. ಮೊದಲಿಗಿಂತಲೂ ಭಯಂಕರವಾದ ಇನ್ನೊಂದು ಶಸ್ತ್ರಸಿದ್ಧತೆಯ ಓಟವು ಪ್ರಾರಂಭವಾಗಿರುತ್ತದೆ,—ಮೊದಲಿಗಿಂತಲೂ ಭಯಂಕರವೆನ್ನಲು ಕಾರಣವೇನು?—೧೯೧೮ರಿಂದ ಇಂದಿನ ವರೆಗೆ ನೂರಾರು ಪಾಲು ಶಸ್ತ್ರಗಳು ತಯಾರಾಗಿವೆ. ಹೀಗಾಗಿ ಜಗತ್ತು ವಿನಾಶದ ಹೆದ್ದಾರಿಯಲ್ಲಿ ನಡೆಯುತೊಡಗಿದೆ,—ಸನ್ನಿವೇಶಗಳ ಸಮಾಗಮವನ್ನು ತಡೆಯದೆ ಹೋದರೆ ವಿನಾಶವೇ ಉಂಟಾಗುವುದು.

ಆದರೆ ತಡೆಯುವುದಾರು; ಹೇಗೆ?

ಆಧುನಿಕ ಪ್ರಪಂಚದ ಶಾಂತಿಯ ಸ್ಥಿತಿಯು

ಆಗಬೇಕು. ತಮ್ಮನರೀ ಪ್ರತಿಯೊಂದು ಸ್ಥಾನದಲ್ಲಿರಬೇಕು.

ಇದರಿಂದಾಗಿ ಪಂಗಡಗಳ ಬಲೆಯೇ ಹರಡಿಕೊಂಡಂತಾಗಿದೆ. ಪ್ರತಿಯೊಂದು ವರ್ಗವು ತನ್ನಷ್ಟಕ್ಕೆ ತಾನಿರುತ್ತದೆ. ಅದಕ್ಕೆ ಜನತೆಯ ಜವಾಬ್ದಾರಿಕೆಯೇ ಅಗತ್ಯವಿಲ್ಲ. ಜನತೆಯ ಜವಾಬ್ದಾರಿಕೆಯುಳ್ಳ ಜನಾಂಗ ಸಭೆಯನ್ನಾಗಲೀ ಯಾವ ಸರಕಾರವನ್ನಾಗಲೀ ಅದು ಲಕ್ಷಿಸುವಂತೆಯೇ ಇಲ್ಲ. ಹೀಗಾದುದರಿಂದಲೇ ಜನಾಂಗಸಭೆಗೆ ಬರುವ ಶಸ್ತ್ರತ್ಯಾಗ ಪರಿಷತ್ತಿಗೆ ಪ್ರವೇಶಿಸುವ ಸರಕಾರಗಳೆಲ್ಲ ಹೆಡಮುರಿ ಕಟ್ಟಿಕೊಂಡು ಬರುತ್ತವೆ. ಇವುಗಳಿಗೆಲ್ಲ ಒಂದೊಂದು ಅಂತರ್ಯವಿರುತ್ತದೆ. ಒಂದರ ಅಂತರ್ಯವು ಇನ್ನೊಂದರಂತಿರುವುದಿಲ್ಲ. ಫಲಿತಾಂಶವೇನು? ಅಂತಹ ಸಭೆಗಳ ಪರಿಗೋಣದಿಂದ ಯಾವ ಪ್ರಯೋಜನವೂ ಉಂಟಾಗುವುದಿಲ್ಲ. ಭಂಡವಾಳಿಗರ ಸಂಸ್ಥಾನಗಳಲ್ಲಿ ಇಂತಹ ಸಣ್ಣ ಕೂಟಗಳ ಆಶಯಗಳೇ ಪ್ರಗತಿಗೆ ವಿಘ್ನವಾಗಿ ನಿಂತಿವೆ.

ಮಂಗಳೂರಿನ ಪೇಟೆ [illegible]

ಪದಾರ್ಥಗಳು	ಇಂದ	ವರೆಗೆ
[illegible]	[illegible]	[illegible]
[illegible]	[illegible]	[illegible]
[illegible]	[illegible]	[illegible]
[illegible]	3— [illegible]	[illegible]
ಊರ ಅಕ್ಕಿ ಬೆಳ್ತಿಗೆ ...	4—12	5— [illegible]
ರಂಗೂನು ಬೆ. ಗೋ. ಗೋಣಿ ...	5—0	6—0
ಎಲ್ಲೂರು ಬೆ. ಮು. ಗೋಣಿ ...	4—2	4—4
ಗೋದಿ ಗೋಣಿ ...	10—0	12—8
ಕಡಲೆ ಗೋಣಿ ...	9—6	10—0
ಹುರುಳಿ ಗೋಣಿ ...	6—8	7—0
ಅವರೆ ಗೋಣಿ ...	7—0	10—8
ತೊಗರಿಬೇಳೆ ಗೋಣಿ ...	10—0	17—0
ಉದ್ದು ಗೋಣಿ ...	8—0	8—2
ಹೆಸರು ಗೋಣಿ ...	6—10	7—6
ಊರುಬೆಲ್ಲ ಖಂಡಿ ...	32—0	40—0
ಉಪ್ಪು ಗೋಣಿ ...	4—8	5—0
ಕೊಬ್ಬರಿ ಖಂಡಿ ...	41—0	43—0
ಕೊಬ್ಬರಿ ಹಿಂಡಿ ಖಂಡಿ ...	35—8	34—0
ಎಳ್ಳಿಂಡಿ ಖಂಡಿ ...	30—0	35—12
ಕೊಬ್ಬರಿ ಎಣ್ಣೆ ಮಣ ...	3—2	4—2
ಎಳ್ಳೆಣ್ಣೆ ಮಣ ...	5—2	5—10
ಸೀಮೆಎಣ್ಣೆ ಪೆಟ್ಟಿಗೆ ...	5—7	5—7
ಮೋರಿಸ ಸಕ್ಕರೆ ಮು. ...	3—9	3—10
ಮೆಣಸು ...	5—10	7—0
ಸಾಸಿವೆ ಮುಡಿ ...	4—12	5—4
ಕಾಳುಮೆಣಸು ಖ. ...	160—0	165—0
ಯೇಲಕ್ಕಿ ಮಣ ...	24—0	26—0
ಗೇರುಬೀಜ ಮು. ...	4—0	4—2
ಕಬ್ಬಿಣ ಖಂಡಿ ...	42—0	44—0
ತಾಂಬ್ರತಗಡು ಮ. ...	9—8	10—0
ತಾಂಬ್ರಪಾತ್ರಗಳು ಮ.	12—8	14—0
ಚೀನಿಬೆಳ್ಳಿ ಸೇರು ...	14—12	15—0
ಹಿತ್ತಾಳೆ ತಗಡು ಮ. ...	9—2	9—10
ಸವನು ...	20—10	21—0
ಹುಣಸೆ ಹುಳಿ ಖಂಡಿ	30—0	40—0
ನೇಟಿವ್ ಕಾಫಿ ಖಂಡಿ	175—0	180—0
ಫಿಟೇರಿ ಕಾಫಿ ಖಂಡಿ ...	275—0	280—0
ಹಳೆ ಅಡಿಕೆ ...	85—0	115—0
ಹೊಸ ಅಡಿಕೆ ..	55—0	61—0

[illegible] ಡಿ 4000

[illegible] 600. Rs. 11,000.

[illegible]

ದಿ ಗ್ರೇಂಡ್ [illegible]

For Sale! For Sale!

One slightly used "CLIMAX" vertical 6 B. H. P. Crude oil Engine in quite good & running order. For prices and particular write to or call at.,

Kanara Medical & Surgical Institute, Udipi.

ಮಾರಾಟಕ್ಕಿದೆ! ಮಾರಾಟಕ್ಕಿದೆ!

ಸ್ವಲ್ಪ ಸಮಯ ಉಪಯೋಗಿಸಿದ್ದು, ಸರಿಯಾಗಿ ಆರ್ಡರಿನಲ್ಲಿ ಕೆಲಸ ಮಾಡುವ "ಕ್ಲೈಮೇಕ್ಸ್" ವರ್ಟಿಕಲ್ 6 B. H. P. ಕ್ರೂಡ್ ಆಯಿಲ್ ಇಂಜಿನ್ ಒಂದು ಮಾರಾಟಕ್ಕಿದೆ. ಕ್ರಯ ವಗೈರೆಯನ್ನು ತಿಳಿದುಕೊಳ್ಳುವರೆ ಈ ಕೆಳಗಿನ ಎಡ್ರೆಸಿಗೆ ಬರೆಯಿರಿ.

ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ.

NEW ARRIVALS.

Medicines.

Dr. Schuessler's Twelve Tissue Remedies 5 gr. bot. As. 4/-
Homoeopathy Medicines 5 gr. bot. As. 5/—
Sugar of Milk Dr. Schwabe's original bot. 1 lb Rs. 2/-
H[illegible] Oil [illegible] world renowned remedy As. 8/-per phial.
Dr. [illegible] Curative Earth—Radium Cure Rs. 4/-per lb.
[illegible] special remedies are always in stock [illegible] requirements.

[illegible] Guide to Biochemistry Re. 1/-
[illegible] Homoeopathy Re. 1-4/-
[illegible] Book [illegible] able to pick up treatment [illegible] medicines successfully without consulting [illegible]

[illegible] sticks and [illegible] Powders.

[illegible] from As. 2/6 [illegible] aroma [illegible] fragrance. Please try [illegible]

Kirloskar Pumps.

[illegible] for Kirloskar Brothers for their reliable [illegible] Pumps, Spring Cots, Spring Couches etc. and stock.

Pipes and pipe fittings [illegible] prices. Coir Mats and Mattings Steadler Pencils and Stationeries.

We are the recognised agents for STEADLER'S all stationeries and shall be glad to serve you.

Olympai Typwriter.

An up-to-date Machine in Standard and portable sizes.

For Futher particulars please write to:—

Basel Mission Book & Tract Depository,
Mangalore, S. K. or Hubli, S. M.

ಶಾಲಿವಾಹನ ಬ॥ ಶಕ ೧೮೫೬ನೆಯ ಭಾವ ಸಂವತ್ಸರದ ಮಾರ್ಗಶಿರ ಶು॥ ೧೦ ಶನಿವಾರದಿಂದ– ಮಾರ್ಗಶಿರ ಬ॥ ೧ ಶುಕ್ರವಾರದ ವರೆಗಿನ ಪಂಚಾಂಗ. (೧೯೩೪ನೇಯ ಸಿಂಹಸೋಣ

ತಾರೀಖು	ವಾರ	ತಿಥಿ	ಘಳಿಗೆ	ನಕ್ಷತ್ರ	ಘಳಿಗೆ	ಚಂದ್ರರಾಶಿ	ಸೂರ್ಯ ಉ.	ಸೂರ್ಯ ಅಸ್ತ	ಡಿಸೆಂಬರ
15	ಶನಿ	೧೦	[illegible]	ರೇವತಿ	[illegible]	[illegible]	6 22	6.18	
16	ರವಿ	೧೧	[illegible]	ಅಶ್ವಿನಿ	[illegible]	೧	6.22	6.17	
17	ಸೋಮ	೧೨	[illegible]	ಭರಣಿ	[illegible]	[illegible]	6.22	6.17	
18	ಕುಜ	೧೩	[illegible]	ಕೃತ್ತಿಕ	[illegible]	[illegible]	6 2 2	6.16	
19	ಬುಧ	೧೪	[illegible]	ರೋಹಿಣಿ	[illegible]	[illegible]	6.22	6.15	
20*	ಗುರು	೧೫	[illegible]	ಮೃಗಶಿರ	[illegible]	[illegible]	6.22	6.14	
21	ಶುಕ್ರ	೧	[illegible]	ಆರ್ದ್ರ	[illegible]	[illegible]	6.22	6.14	

Standard Furniture Co. Ltd

KALLAI, MALABAR

The BEST HOUSE for FURNITURE.

BRANCHES:—

Madras:—34—35, General Patters Road, Mount Road.

Trichinopoly:—11, Promenade Road, Cantt.

"ITS A PARAGON PRODUCT."

ಅದರ ಬೆಲೆಯೇನೂ ಇಲ್ಲ. –

ಅಂದರೆ, – ನೀವದರ ಹಲವು ಗುಣಗಳನ್ನು ಗಣಿಸಿದರೆ! 'ಬೇಬಿಸ್ ಜುವೆನೋಲ್'ವು ಮಕ್ಕಳಿಗೆ, ಪ್ರಪಂಚದ ಅತಿದಿವ್ಯ ಟಾನಿಕ್ ಎಂಬುದಕ್ಕೆ, – ಇತ್ತಲಾಗೆ ದೇಶದ ಪ್ರಸಿದ್ಧ ವೈದ್ಯರೂ ವೈಜ್ಞಾನಿಕರೂ ನೆರಗಿಸಿದ 'ಆಲ್ ಇಂಡಿಯಾ ಸಾಯಿನ್ಸ್ ಮತ್ತು ಸೈಂಟಫಿಕ್ ಎಗ್ಜಿಬಿಶನಿನಲ್ಲಿ ಸ್ವರ್ಣಪದಕವನ್ನು ಪಡೆದಿದೆಯೆಂಬುದಕ್ಕಿಂತ ಬಲವಾದ ರುಜುವಾತು ಬೇಕೆ? ಇಂದಿನಿಂದಲೇ ನಿಮ್ಮ ಮಗುವಿಗೆ ಈ ಸರಳ, ಸುರಕ್ಷಿತ ಹಾಗೂ ಶಾಸ್ತ್ರೋಕ್ತ ಅಮೃತವನ್ನು ಕೊಡಲಾರಂಭಿಸಿರಿ. ನಿಮ್ಮ ಮಗುವು ಆರೋಗ್ಯ – ಪುಷ್ಟಿಗಳನ್ನು ಹೊಂದಿ ಬಹು ಕಾಲ ಬಾಳುವುದೇ ನಿಮಗೊಂದು ಮಹಾನಿಧಿಯ ರಕ್ಷಣೆಯಾದಂತೆ.

ಇದನ್ನು ಕೊಂಡುಕೊಳ್ಳುವ ಆಗ್ರಹವಿರಲಿ–

BABY'S Juvenol

RECOMMENDED BY EMINENT MEDICAL MEN.

ಎಲ್ಲ ಕೆಮಿಸ್ಟರಲ್ಲಿಯೂ ರೂ. 2 ಮತ್ತು ರೂ. 1¼ಕ್ಕೆ ದೊರೆಯುತ್ತದೆ.

ಅಥವಾ

ಮೆಸರ್ಸ್ ಪೈ ಫಾರ್ಮಸಿ ಎಂಡ್ ಕಂಪೆನಿ,
ರಥಬೀದಿ, ಮಂಗಳೂರು.

ಸ್ಫುಟವಿಚಾರಗಳು

ಪಾತ್ರೋರವರ ನಂತರ—

—ಜಸ್ಟಿಸ್ ಪಕ್ಷದ ಚುನಾವಣೆ ಸೋಲುಗಳನ್ನು, ವಿಶೇಷ ದುಃಖದಿಂದ ಕಾಣುತ್ತಿರದೆ, ತಲೆಯೆತ್ತಿ ಗೌರವದಿಂದಾಡುತ್ತಿರುವವರಲ್ಲಿ ಬೊಬ್ಬಿಲಿ ರಾಜರಿಗೆ ದ್ವಿತೀಯ ಸ್ಥಾನ ಸಲ್ಲಬೇಕಾಗಿದೆ. 'ಪಕ್ಷದ ನಿಜವಾದ ಬಲವನ್ನು ನೋಡಬೇಕಾದುದು ಸ್ಥಳೀಯ [illegible]ಗಳ ಚುನಾವಣೆಗಳಲ್ಲಿ, ಜಸ್ಟಿಸ್ ಪಕ್ಷವು ಸ್ಥಳೀಯ ಸಂಸ್ಥೆಗಳಲ್ಲಿ ಹೆಚ್ಚಿನ ಸ್ಥಾನ[illegible]ವುದು ಇದಕ್ಕೆ ನಿದರ್ಶನ[illegible] ಅವರು ವಿಜಯವಾಣಿಯಿಂದಾಡುತ್ತಿರು[illegible]. ಪರಾಜಯ ಹೊಂದಿದಾಗಲೂ ತನ್ನ ಪಕ್ಷದ ಪ್ರೇಮವನ್ನು ತೊರೆಯದೆ ಧೈರ್ಯದಿಂದ[illegible]ವವರು ಪ್ರಶಂಸೆಗೆ ಪಾತ್ರರಾದರೂ—ರಾ[illegible] ನುಡಿವ ಆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಕೊಂಗ್ರೆಸ್ ಉಮೇದ್ವಾರರು ಇರಲಿಲ್ಲವೆಂಬ ಸತ್ಯವನ್ನು ಅವಲೋಕಿಸದೆ ಅವರು ಅವಸರವಾಗಿ ತಮ್ಮ ಪಕ್ಷದ ಬಲವನ್ನು ಹೊಗಳಿದುದು ಮಾತ್ರ ನಿರರ್ಥಕವಾಯಿತೆನ್ನಬೇಕಾಗಿದೆ.

ಒತ್ತಾವ ಒಪ್ಪಂದವನ್ನು—

—ಕೆನಡವೇ ಮುರಿಯುವುದೇ ಎಂಬ ಸಂದೇಹವು ಬ್ರಿಟೈನಿನಲ್ಲುಂಟಾಗಿದ್ದು, ಅಲ್ಲಿಯ ಉಕ್ಕಿನ ಕಾರ್ಖಾನೆಯವರೂ ಗಿರಣಿಮಾಲಕರೂ ದಿಗಿಲುಗೊಳ್ಳುವಂತಾಗಿದೆ ಕೆನಡದ ಬೆನ್ನೆಟ್ ಮಂತ್ರಿಮಂಡಲವು, ಸಂಯುಕ್ತ ಅಮೇರಿಕದೊಳಗೆ ಕೆನಡದ ಜಾನುವಾರು, ಮಾಂಸ, ಬೆಣ್ಣೆ, ಮೀನು, ಒಟಾಟಗಳ ಅಬಾಧಿತವಾದ ಆಮದಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಳ್ಳುವುದರಲ್ಲಿದೆ ಈ ಸಂದರ್ಭವನ್ನು ನೋಡಿ ಅಮೇರಿಕವು—ತನ್ನ ಉಕ್ಕಿನ ಸಾಮಾನನ್ನೂ ಅರಿವೆಗಳನ್ನೂ ಕೆನಡದೊಳಗೆ ತಳ್ಳಲು ನೋಡುತ್ತಿದೆ ಈ ಕರಾರು ಆಗುವುದಾದರೆ, ಒತ್ತಾವದ ಒಪ್ಪಂದವನ್ನು, ಮಾತೃಸ್ಥಾನವಾದ ಕೆನಡವೇ ಮುರಿದಂತಾಯಿತು 'ಎಂಪಾಯರ್ ಪ್ರಫರೆನ್ಸ್' ಎಂದು ಕುಣಿಯುತ್ತಿದ್ದ ಬ್ರಿಟೈನೂ ಒಂದು ಕಹಿಮಾತ್ರೆಯನ್ನು ನುಂಗಿದಂತಾಗುವುದು

ಬೊಂಬಾಯಿಯ ಹೊಟೇಲು ಕೆಲಸಗಾರರು—

—ಅಲ್ಲಿಯ ಹೊಟೇಲು ಇತಿಹಾಸದಲ್ಲಿ ಇದೀಗ ಪ್ರಥಮಸಲ, ತಮ್ಮದೇ ಆದ ಒಂದು ಸಭೆಯನ್ನು ಸೇರಿಸಿ,—ಯಜಮಾನರು ತಮ್ಮನ್ನು ನಡೆಸಿಕೊಂಡು ಹೋಗಬೇಕಾದ ರೀತಿ, ತಮ್ಮ ಹಿತಚಿಂತನೆಯಿಂದ ಅನುಸರಿಸಬೇಕಾದ ಹೊಸ ನಿಯಮಮಾವಳಿ, ರಜಾ ಅನುಕೂಲ್ಯ ಇತ್ಯಾದಿಗಳನ್ನು ಚರ್ಚಿಸಿ, ಕೆಲವೊಂದು ಕೇಳಿಕೆಗಳನ್ನು ಮುಂದುಮಾಡಿ ಠರಾವು ಮಾಡಿರುವರು ನಿರಾತಂಕವಾಗಿ ತಮ್ಮ ಅಧಿಕಾರವನ್ನು ಸ್ವೇಚ್ಛೆಯಾಗಿ ಉಪಯೋಗಿಸಿಕೊಂಡು ಬರುತ್ತ, ಯಾವ ನಿಯಮವೂ ಇಲ್ಲದೆ ತಮ್ಮ ನೌಕರರಿಗೆ ತಾವೇ ನಿರ್ದೇಶಕರಾಗಿ ಇರುತ್ತಿದ್ದ ಯಜಮಾನರಿಗೆ ಈ ಕೇಳಿಕೆಗಳ ಬಲು ಕಠಿನವಾಗಿಯೇ ತೋರದಿರವು ಹೊಟೇಲು ನೌಕರರು ಮುಂದಿರಿಸಿರುವ ಎಲ್ಲ ಕೇಳಿಕೆಗಳೂ ಸಮುಚಿತವೆಂದು ನಮ್ಮ ಅಭಿಪ್ರಾಯವಲ್ಲ ಆದರೆ, ಅವುಗಳಲ್ಲಿ ಹೆಚ್ಚಿನವು ಹೊಟೇಲು ಮಾಲಕರಿಂದ ಅನುಕೂಲವಾಗಿ ಪರ್ಯಾಲೋಚಿಸಲ್ಪಟ್ಟು, ಕೆಲಸಗಾರರಿಗೆ ನ್ಯಾಯವು ದೊರೆಯಬೇಕಾಗಿದೆ

ಆದರದೊಂದು ಖಾನೇಸುಮಾರಿ ಬೇಕು.

ಬೊಂಬಾಯಿ ನಗರದೊಳಗೆ ಇರುವ ಹೊಟೇಲುಗಳ ಸಂಖ್ಯೆಯೆಷ್ಟು?—ಅವುಗಳಲ್ಲಿ ಕೆಲಸ ಮಾಡುವವರೆಷ್ಟು?—ಇದನ್ನು ಹೊಟೇಲು ಕೆಲಸಗಾರರ ಸಂಘದ ಕಾರ್ಯಕಾರಿ ಮಂಡಲಿಯು ಅಗತ್ಯವಾಗಿ ಗೊತ್ತುಪಡಿಸಿಕೊಂಡು ಸಂಘವನ್ನೆಲ್ಲರೂ ಸೇರುವಂತೆ ಯತ್ನಿಸಬೇಕಾಗಿದೆ. [illegible] ಯಾವುದಾದರೂ ಒಂದೇ ಸಂಘದವರಾಗಿರದೆ—ಸಮಸ್ತ ಹೊಟೇಲು ಕೆಲಸಗಾರರಿಗೂ ತೆರೆದಿಡಲ್ಪಟ್ಟದಿರಬೇಕು. ಸಂಘದ ಮಾಸಿಕ ಅಥವಾ ತ್ರೈಮಾಸಿಕ ಕೂಟಗಳು ಜರಗುವಂತೆಯೂ ವರ್ಷಕ್ಕೊಮ್ಮೆ ಮಹಾಸಭೆ ಜರಗಿ, ಕೆಲಸಗಾರರ ಜೀವನಕ್ಕೆ ಸಂಬಂಧಿಸಿದ ಮಹದ್ವಿಷಯ[illegible]ವಂತೆಯೂ ಆಗಬೇಕು. [illegible] ಮಾಲಕರು [illegible]ದು [illegible] ಕೆಲಸಗಾರರ [illegible] [illegible] ನೌಕರರ [illegible] ಕಾರಿರುವದೆಂಬುದ[illegible]ದು, ಅವರ ಸ್ಥಾನ[illegible] [illegible] ಪರಸ್ಪರ ಮೈತ್ರಿಯ ದೃಷ್ಟಿಯಿಂದ ಅವಶ್ಯಕವಾಗಿದೆ.

ಸರ್ ಮಾಲ್ಕಮ್ ಹೈಲಿಯವರು—

—ಈಗಣ ಸಿವಿಲಿಯಾನರಲ್ಲಿ '[illegible] [illegible]ಷರು' ಎಂಬ ಕೀರ್ತಿ[illegible] ಇಂಗ್ಲಾಂಡಿಗೆ ಹೊರಟುಹೋದ[illegible] [illegible] [illegible] ಡಿಪಾರ್ಟ್ಮೆಂಟಿನಲ್ಲಿಯೂ [illegible]ಂಡರಾಗಿ ಮೆರೆದವರಿವರು; ಪಂಜಾಬ [illegible]ವಮುಂದೆ, ಸಂಯುಕ್ತ ಪ್ರಾಂತ್ಯದಲ್ಲಿಯೂ ಗವರ್ನರ ಪದವಿಯಲ್ಲಿ ರಾರಾಜಿಸಿರುವರು ಹೀಗೆ ಹಲವು ಜವಾಬುದಾರಿ ಹುದ್ದೆಗಳಲ್ಲಿ ಮೆರೆದ ಕೆಲವೇ ಸಿವಿಲಿಯಾನರಲ್ಲಿ ಇವರೊಬ್ಬರು 'ಹೊಸ ರಾಜ್ಯಾಂಗ ರಚನೆಯು, ಆರ್ಥಿಕ ಸಂಕಷ್ಟದಿಂದ ಮುಂದು ಹೋಗುವುದು' ಎಂಬುದೇ ಹಿಂದೂದೇಶದ ವಿಷಯವಾಗಿ ಇವರ ಕೊನೆಯ ಅಭಿಪ್ರಾಯ—('ಸಂದೇಶ'ವಲ್ಲ) ಹೊಸ ಹೊಸ ತೆರಿಗೆಗಳ ದಳೀ ನಡೆಯಬೇಕಾಗವ ಈ ಹೊಸ ರಾಜ್ಯಭಾರ ಪದ್ಧತಿಯು ಜನತೆಯ ಅಸಾದರಕ್ಕೆ ಪಾತ್ರವಾಗುವುದೆಂದೇ ಅವರಿಗೆ ಭಯ. ಸಹಜವಾದುದನ್ನ ಆಡಿರುವರೆನ್ನುವ ಆದರೆ, ಇಂಡಿಯದ ಸಾಲದ ಹೊರೆಯು ಇಷ್ಟರೊಳಗಾಗಿ ಬಹುತೇಕ ಇಳಿಸಲ್ಪಡುತಿತ್ತೆಂಬುದನ್ನು ನೆನೆಯಬೇಕಾಗ ಬಂದ ಈ ಕಾಲದಲ್ಲಿ—ಸರ್ ಮಾಲ್ಕಮರವರ ಧೋರಣೆಯಿಂದ ಬಂಗಾರವು ತೇಲಿಹೋದ ದುಃಖವು ಯ ಕಾರಣದಿಂದ, ಆರ್ಥಿಕ ತಳಹದಿಯು ಬಲಗೊಳ್ಳಲು ಪೋಷಕವಾದುದಾವುದೂ ನಡೆಯಲಿಲ್ಲವೆಂಬುದು ಅತ್ಯಂತ ವಿಷಾದಕರ ಈ ಕುರಿತಾಗಿ ಸರ್ ಮಾಲ್ಕಮರವರು ಮೌನವಾಗಿರುವರು, ಪರಂತು, ಇತಿಹಾಸವು ಮಾತ್ರ ಅದನ್ನು ಹೈಲಿಯವರ ಲಕ್ಷಣೀಯ ಕೃತಿಯೆಂದು ಲಿಖಿಸದಿದ್ದೀತೆ?

'ಶಾಂತಿ'ಯ ನೊಬೆಲ್ ಬಹುಮಾನಗಳು!—

—೧೯೩೩ರ ಬಹುಮಾನವು ಸರ್ ನೊರ್ಮನ್ ಎಂಜಲ್ಲರವರಿಗೂ, ೧೯೩೪ರ ಬಹುಮಾನವು ಸರ್ ಆರ್ಥರ್ ಹೆಂಡರ್ಸನ್ನರವರಿಗೂ ಸಂದಿತೆಂದು ರ್‍ಯೂಟರನ ತಂತಿಬಂತು! ಬಹುಮಾನ ಮೊಬಲಗೂ ಸುಮಾರು ೭ ಸಾವಿರ ಪವನುಗಳಷ್ಟಾಗುವುದು ಹೆಂಡರ್ಸನ್ನರವರಿಗೆ ಕಾರ್ನೆಗಿ ಕೊರ್ಪೊರೇಶನ ಬಹುಮಾನವೊಂದೂ (೨೦೦೦ ಪವನು) ದೊರೆತಿದೆ ಸರ್ ನೊರ್ಮನ್ ಎಂಜಲ್ಲರವರು 'ಗ್ರೇಟ್ ಇಲ್ಲೂಝನ್' ಎಂಬ ಗ್ರಂಥವನ್ನು ಬರೆದು, ಪ್ರಪಂಚದಲ್ಲಿ ರಕ್ತಪಾತವನ್ನು ಹೇಗೆ—ಏಕೆ—ನಿಲ್ಲಿಸಬೇಕೆಂಬುದನ್ನು ಮಾರ್ಮಿಕವಾಗಿಯೂ ಉದಾಹರಣಾಪೂರ್ವಕವಾಗಿಯೂ ಪ್ರಚುರಪಡಿಸಿದರು—ಸರ್ ಹೆಂಡರ್ಸನ್ನರು ಶಸ್ತ್ರಸನ್ಯಾಸ ಪರಿಷತ್ತಿನ ಅಧ್ಯಕ್ಷರಾಗಿ ಶಾಂತಿಗಾಗಿ ತ್ರಿಕರಣಪೂರ್ವಕ ಶ್ರಮಪಟ್ಟುದನ್ನು ಪ್ರಪಂಚವೇ ಬಲ್ಲದು. ಇವರಿಬ್ಬರಿಗೂ ಈ ಸಂಭಾವನೆ ದೊರೆತುದಕ್ಕೆ ಪ್ರಪಂಚವು ಸಂತೋಷಿಸದಿರದು. ಎರಡು ವರ್ಷಗಳ ಸಂಕೋಚ—ಸಂದೇಹಗಳನಂತರ ಇವರಿಬ್ಬರನ್ನು ಗುರುತಿಸಿದ ಈ ಬಹುಮಾನ ಕಮಿಟಿಯ ವರ್ತನೆಯು ಹೇಗೆ ಪ್ರಶ್ನಿಸಲ್ಪಡಲಾರದೋ ಹಾಗೆಯೇ ತೀವ್ರ ಟೀಕೆಗೂ ಗುರಿಯಾಗದಂತೆ ಈ ಸಂಭಾವನೆಗಳು ಸಂದಿವೆ.

ನೋಟಗಳು
NOTES

[illegible]ರು ಕರ್ಣಾಟಕ [illegible] ಕೊಂಗ್ರೆಸ್ [illegible] ಅಧ್ಯಕ್ಷರಾಗುವರೇ?—[illegible] [illegible] [illegible], [illegible]ರನ್ನು ದಸ್ತಗಿರಿ ಮಾ[illegible] ಬಂತೀ ಬಂತು ಪಾನರ [illegible]ಲ್ಲವೆಂದು ಸರಕಾರದ ಉತ್ತರ [illegible]ವದು.

• • •

ಬೊಂಬಾಯಿಯಲ್ಲಿಯ ಅವರು ಕೊಟ್ಟ ಒಂದು ಭಾಷಣದಲ್ಲಿ ರಾಜದ್ರೋಹವಿತ್ತೆಂದೂ, ಅಪಾಯಕರನೆಂದು ಇವರನ್ನು ಗಡಿನಾಡಿನ ಹೊ[illegible]ರಿಸಿದ್ದರೂ, [illegible]ಯೂ ಅಪಾಯವೇ ಬಂ[illegible]!

• • •

ಮಂಗಳೂರಿನಲ್ಲಿ ಹಿಂದೀ ಸಪ್ತಾಹ ಪೂರ್ಣ[illegible]ನಡೆದು, ಮುಗಿಯಿತು ವಿಶೇಷ.—ನಾಟಕಗಳು, ಸಂಗೀತ ಮತ್ತು ಕನ್ನಡ ಪ್ರಹಸನ

• • •

ಹುಚ್ಚು ಬಾರದಿರಲು ಏನು ಮಾಡಬೇಕು?—ರಾಂಚಿಯ ಓರ್ವ ಮಹಾನುಭಾವನೊಬ್ಬನು ಚಿಕಿತ್ಸೆ ಹೇಳುತ್ತಾನೆ—ತನ್ನ ವಂಶಪಾರಂಪರ್ಯವಾಗಿ ಹುಚ್ಚು ಇದ್ದು ತನಗೂ ಬರಬಹುದೆಂದು ಬೆದರಿ ಆತನು, ನಿವಾರಣೋಪಾಯವಾಗಿ ತನ್ನ ಅಜ್ಜಿಯನ್ನು ಕೊಂದನು ಫಲ—ಇದುವೇ ಹುಚ್ಚು ಎಂದು ತೀರ್ಮಾನವಾಗಿ, ಕೊಂದವನಿಗೆ ಹುಚ್ಚರ ಆಸ್ಪತ್ರೆ!

• • •

ಬ್ರಿಟೈನಿನಲ್ಲಿ ಈ ವರ್ಷ ಮಕ್ಕಳಿಗೆ ಕ್ರಿಸ್ಮಸ್ ಬಹುಮಾನಗಳಾಗಿ ಮೆಶೀನ್ ಗನ್ನುಗಳು ಮಾರಾಟ ಮಾಡಲ್ಪಡುತ್ತಿವೆ! (ಇವು "ಗೊಂಬೆ"ಗಳೇ) ಯುದ್ಧಗಳೆಂಬುವೂ ರಾಜಕೀಯ ಮುಖಂಡರ ಆಟಗಳಷ್ಟೆ

• • •

ಕ್ರಿಸ್ಮಸ್ ಎಂಬುದು ಪ್ರಪಂಚದಲ್ಲಿ ಶಾಂತಿ—ಪ್ರೇಮಗಳ ಸಂದೇಶವನ್ನು ಸಾರುವ ಉತ್ಸವ ಮೆಶೀನ್ ಗನ್ನುಗಳೂ ಶಾಂತಿಯನ್ನು ಸಾರುವುದಿಲ್ಲವೆನ್ನುವನಾರ ?

• • •

'ಗಾಂಧಿಜಿಯವರೊಂದಿಗೆ ನಿಲ್ಲಿ!' ಎಂದು ಹಿಂದೀಯರಿಗೆ ಮೇರಿ ಚೆಸ್ ಎಂಬ ಆಂಗ್ಲ ಮಹಿಳೆಯ ಉಪದೇಶ ಪ್ರಾಯಶಃ ಆಕೆಗೆ ಹಿಂದೂದೇಶದ ಜೈಲುಗಳ ಅಳತೆ ತಿಳಿದಿಲ್ಲ

• • •

ಹಿಂದೂದೇಶದ ಹವೆಯೆಂದರೆ ಇಷ್ಟೂ ಕೆಟ್ಟದು—ನಮ್ಮ ಮಹಾರಾಜರುಗಳಿಗೆ ಆರೋಗ್ಯವೇ ಇಲ್ಲ ಇಲ್ಲಿ ಮೂರು ತಿಂಗಳು ವಾಸ ಮಾಡುತ್ತಲೇ ವಿಲಾಯತಿಗೆ ಹೊರಡುವಂತೆ ಅಪ್ಪಣೆ ಮಾಡುತ್ತಿದೆ ಈ ಹವೆ!

• • •

ಬಡೋದಾ ಮಹಾರಾಜರಿಗೆ ಮತ್ತಷ್ಟು ಕಷ್ಟ! ವಿಲಾಯತಿಗೆ ಹೋದವರಿಗೆ ಅಲ್ಲಿ ಶ್ವಾಸಖಾಸ ಸಂಬಂಧವಾದ ಪೀಡೆಯೊಂದು,—ಹಿಂದೂದೇಶಕ್ಕೆ ಇನ್ನು ಕೆಲಕಾಲದ ತನಕ ಹೋಗಲೇ ಬಾರದೆಂದು ಡಾಕ್ಟರರ ಸಲಹೆ ಮಹಾರಾಜರುಗಳಿಗೆ ಹಿಂದೂದೇಶದಲ್ಲಿ ಅಸ್ವಸ್ಥವಾದರೆ ವಿಲಾಯತಿಗೆ ಹೋಗಬೇಕಾಗಿದೆ, ಅಲ್ಲೇನಾದರೂ ಆದರೆ, ಇಲ್ಲಿಗೆ ಬರಬಾರದಾಗಿದೆ

• • •

ಮಹಾರಾಜರುಗಳು ವಿಲಾಯತಿಯಲ್ಲೇ ಉತ್ತಮ ಹವೆಯಲ್ಲಿ ನಿಂತು, ಅಲ್ಲಿಂದಲೇ ತಮ್ಮ ಸಂಸ್ಥಾನಗಳನ್ನು ಆಳುವ ನೂತನ ಯೋಜನೆಯೊಂದನ್ನು ಜ್ಯಾರಿಗೆ ತರುವಂತೆ ಸಾಧಿಸಬಾರದೇ?

• • •

"ನಿಕೊಟಿನ್" ವಿಷವಿಲ್ಲದ ತಂಬಾಕನ್ನು ಬೆಳೆಸಬೇಕೆಂದು ಕೆಲವು ಜರ್ಮನ್ ಪ್ಲಾಂಟರುಗಳ ಪ್ರಯತ್ನವಂತೆ. ಶ್ವಾಸಕೋಶವಿಲ್ಲದವರೂ ಅದನ್ನು ಸೇವಿಸುವುದನ್ನೂ ಅವರೇ ಕಲಿಸಬಹುದೆಂದು ನಿರೀಕ್ಷಿಸಲಾಗಿದೆ.

ಹೊಟೇಲು ನೌಕರರ ಸಂಘ, ಮುಂಬಾಯಿ.

[illegible]ಮುಂಬಾಯಿಯಲ್ಲಿ ಸಾವಿರಾರು ಹೊಟೇಲುಗಳಿವೆ. [illegible]ಗಳಲ್ಲಿ ಕೆಲಸಮಾಡುತ್ತಿರುವ ನೌಕರರು ಹೊಸ[illegible]ವಾಗಿ ತಮ್ಮದೊಂದು ಸಂಘವನ್ನು [illegible] ತಿಂಗಳ[illegible]ಾ, ೧೩ರಲ್ಲಿ [illegible]ರು. ಇದರ ಕಾರ್ಯ[illegible] [illegible] ಮಂಡಲಿಯು [illegible] [illegible] ಈ ಕೆಳಗಿನ ಮಹನೀಯರು [illegible] [illegible] [illegible] ಭಾಟವಾಲಾ, [illegible] [illegible] ಟರೇ, ಅಬ್ದುಲ್ ರಹಿಮಾನ್ [illegible], ಪಿ. ಎಸ್. ಶಿಬ್ರೂರ್‌ಕಾರ್, [illegible] ಗುಲಾಮ್ ಹುಸ್ಸೇನ್, ಸುಲೇಮಾನ್ ರಾಜಾ ಮಹಮ್ಮದ್, ಹಬೀಬ್ ಸುಲೇಮಾನ್ ಗುಜ್ರಾತಿವಾಲಾ ಮತ್ತು ಇಬ್ರಾಹಿಮ್ ಅಹಮ್ಮದ್ ಖಾನ್ ಹೊಟೇಲು ನೌಕರರ ಪ್ರಕೃತದ ಕೇಳಿಕೆಗಳು – (೧) ದಿನದ ಕೆಲಸದ ಅವಧಿಯು ಹೆಚ್ಚೆಂದರೆ ೧೦ ಘಂಟೆಗಳಿಗೆ ಮೀರಬಾರದು (೨) ನೌಕರರಿಗೆ ತಿಂಗಳ ಸಂಬಳವನ್ನು ನಿರ್ಧರಿಸಬೇಕು. (೩) ಸಂಬಳವನ್ನು ಕೊಡಬೇಕಾದ ದಿನ ಅಥವಾ ಆ ದಿನದಿಂದ ಐದು ದಿನಗಳೊಳಗೆ ಕೊಡಬೇಕು, (೪) ನೌಕರರನ್ನು ಕೆಲಸದಿಂದ ತೆಗೆದುಹಾಕುವ ಸಂದರ್ಭದಲ್ಲಿ, ಅವರಿಗೆ ಒಂದು ತಿಂಗಳ ಮುಂಚಿತವಾಗಿ ನೋಟೀಸು ಕೊಡಬೇಕು ಮತ್ತು ಸಂಬಳ ಹೆಚ್ಚು ಸಲ್ಲುತ್ತಿದೆಯೆಂಬ ಕಾರಣದಿಂದ ನೌಕರರನ್ನು ಕೆಲಸದಿಂದ ತೆಗೆಯಬಾರದು. (೫) ನೌಕರರಿಗೆ ಆಕಸ್ಮಿಕವಾಗಿ ಅಸ್ವಸ್ಥವುಂಟಾದರೆ ಅದನ್ನು ರಜೆಯಾಗಿ ಪರಿಗಣಿಸಬಾರದು, ಮತ್ತು ಸಂಬಳವನ್ನು ಕಡಿಯಬಾರದು, ಒಬ್ಬನ ಅಸ್ವಸ್ಥವು ಒಂದು ತಿಂಗಳಿಗಿಂತ ಹೆಚ್ಚು ಬೆಳೆದರೆ ಅರ್ಧ ಸಂಬಳವನ್ನು (ಒಂದು ತಿಂಗಳು ಮಾತ್ರ) ಕೊಡಬೇಕು ಆತನು ಗುಣಹೊಂದಿದ ಬಳಿಕ ಕೆಲಸಕ್ಕೆ ಸೇರಿಸಿಕೊಳ್ಳಲ್ಪಡಬೇಕು. (೬) ರಜೆಗಾಗಿ ಅರ್ಜಿ ಒರೆದುಕೊಂಡುದೇ ಆತನನ್ನು ಕೆಲಸದಿಂದ ತಳ್ಳಿಹಾಕುವ ನೆಪವಾಗಬಾರದು. (೭) ಕೆಲಸದಲ್ಲಿ, ಉದ್ದೇಶವಿಲ್ಲದೆ ಏನಾದರೂ ಹೊಟೇಲು ಸಾಮಾನು ಒಡೆದ ಮುಂತಾದ ನಷ್ಟಸಂಭವಿಸಿದರೆ ಅದಕ್ಕಾಗಿ ಕೆಲಸಗಾರರ ಸಂಬಳವನ್ನು ಕಡಿಯಬಾರದು (ಆ ಸರಕಿನ ಬೆಲೆಯನ್ನು ಆತನ ಮೇಲೆ ಹೊರಿಸಬಾರದು). (೮) ಕೆಲಸದ ಮೇಲಿದ್ದಾಗ ಕೆಲಸಗಾರನಿಗೆ ಅಪಘಾತವುಂಟಾಗಿ ಜಖಂ ಹೊಂದಿದರೆ, ಆತನು ಗುಣಮುಖನಾಗುವ ವರೆಗೆ ಪೂರ್ತಿ ಸಂಬಳವನ್ನು ತೆರಬೇಕಲ್ಲದೆ ಅಂಗಹೀನತೆ ಇತ್ಯಾದಿ ಊನಗಳುಂಟಾದರೆ ಪರಿಹಾರದ್ರವ್ಯ ಕೊಡಬೇಕು

ನೋಟೀಸು.

ಪಳ್ಳಿಕೆರೆ ಪಂಚಾಯತ ಕೋರ್ಟಿನಲ್ಲಿ.

ಸಿವಿಲ್ ವ್ಯಾಜ್ಯ ನಂಬ್ರ 228/1934

ತಾಯತ್ತ ಅಪ್ಪೆ—ಬಿಲ್ಲಚಂದನ ಮಗ—ಪಳ್ಳಿಕೆರೆ ಗ್ರಾಮದ ಚೆರೆಮೇಲ್ ಎಂಬಲ್ಲಿ ಇರುವವ— ವಾದಿ

ಮತ್ತು

1 ಶೇಕ್ ರಜಬ್ ಸ್ಯಾಬ, 2 ಫಕೀರ ಹಮ್ಮದ್ ಸ್ಯಾಬ, 3 ಶೇಕ್ ಬುಡನ್ ಸ್ಯಾಬ, 4 ಪಕ್ರುದ್ದಿನ್ ಸ್ಯಾಬ, 5 ಶೇಕ್ ಹಸನ್ ಸ್ಯಾಬ, 6 ಜೈನಬಿ ಕೂಡಾ- ಪ್ರತಿವಾದಿರು

1ರಿಂದ 5ನೇ ವರೆಗಿನ ಪ್ರತಿವಾದಿರು ಪಳ್ಳಿಕೆರೆ ಗ್ರಾಮದ ಚೆರೆಮೇಲ್ ಎಂಬಲ್ಲಿ ಇರುವ ಶೇಕ್ ಮದಾರ ಸಾಹೇಬರ ಮಕ್ಕಳೂ, 6ನೇ ಪ್ರತಿವಾದಿಯು ಸದರಿ ಮದಾರಸಾಹೇಬರ ಹೆಂಡತಿಯೂ ಆಗಿರುತ್ತಾರೆ

ಇವರೊಳಗೆ—

ಪ್ರತಿವಾದಿರಿಂದ ವಾದಿಗೆ ಲೇವಾದೇವಿ ಬಾಬ್ತು ಬರತಕ್ಕ ಐವೇಜು ವಸೂಲು ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ವ್ಯಾಜ್ಯವು ಅಪ್ಪೆರು ತೀರ್ಮಾನಕ್ಕೆ ತಾ. 25-12-'34ಕ್ಕೆ ಇಟ್ಟಿರುವುದರಿಂದ ಆ ದಿನ ಪ್ರತಿವಾದಿರಿಗೆ ಈ ವ್ಯಾಜ್ಯದಲ್ಲಿ ಏನಾದರೂ ಆಕ್ಷೇಪ ಇದ್ದರೆ, ಆ ದಿನ ಈ ಕೋರ್ಟಿನಲ್ಲಿ ಹಗಲು ಗಂಟೆ 11ಕ್ಕೆ ಸರಿಯಾಗಿ ಹಾಜರಾಗಿ ಆಕ್ಷೇಪ ದಾಖಲು ಮಾಡತಕ್ಕದ್ದು ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂತ ಈ ಮೂಲಕ ತಿಳಿಸೋಣಾಗಿದೆ.

ಪಳ್ಳಿಕೆರೆ ಗ್ರಾಮ, ತಾ. 10-12-34 } **P. T. Abdul Voli,** ಪ್ರೆಸಿಡೆಂಟ್.

[illegible]

ಸ್ವದೇಶಾಭಿಮಾನಿ

ತಾ. ೭ನೇ ಶುಕ್ರವಾರ ಡಿಸೆಂಬರ '೪೪

ದ್ವಂದ್ವ ಧೋರಣೆ.

ಸುಧಾರಣಾ ವರದಿಯು ಪ್ರಕಟವಾಗಿ, ಜನಸಾಮಾನ್ಯವು ಅದರ ಹಿತಾಹಿತಗಳ ವಿಮರ್ಶೆಯಲ್ಲಿರುವಾಗಲೇ, ದೇಶದಲ್ಲಿ ಗಣನೀಯರೂ ಜನಾದರಕ್ಕೆ ಪಾತ್ರರಾದವರೂ ಆದ ಗಫರ್ ಖಾನ್, ಡಾ॥ ಸತ್ಯಪಾಲ ಇವರ ದಸ್ತಗಿರಿಯೂ; ವಿಯನ್ನಾದಿಂದ ಈಗತಾನೆ ಮರಳಿದ್ದ ಸುಭಾಷ್ಚಂದ್ರ ಬೋಸರ ಮೇಲಿನ ನಿರ್ಬಂಧವೂ, ಮಹಾತ್ಮಾಜಿಯವರು ಗಡಿನಾಡಿಗೆ ತೆರಳಲು ಕೇಳಿರುವ ಅಪ್ಪಣೆಯ ತಿರಸ್ಕರಣವೂ—ಒಂದರ ಹಿಂದೆ ಒಂದರಂತೆ, ಅಲ್ಪಾವಧಿಯೊಳಗೆ ಸಂಭವಿಸುವಂತಾಗಿ, ಜನರೆಲ್ಲ ವಿಸ್ಮಯಹೊಂದುವಂತಾಗಿದೆ. ಕೃದುಗಳಿಗೆ ಕಾರಣವಾದ ಆಪಾದನೆಗಳ ಕೂಲಂಕಷಗಳಿನ್ನೂ ತಿಳಿದು ಬಂದಿಲ್ಲವಾದಕಾರಣ ಅವುಗಳ ಯುಕ್ತಾಯುಕ್ತತೆಗಳ ವಿಮರ್ಶೆಯು ಇಲ್ಲಿ ಅನುಚಿತವಾಗುವುದು. ಆದರೆ, ಮಹಾತ್ಮಾಜಿಯವರಂತಹವರ ಮೇಲೆ ಇರಿಸಿದ ನಿರ್ಬಂಧವನ್ನು ಚಿಂತಿಸುತ್ತ, ಸರಕಾರವು ತನ್ನ ಭದ್ರಮುಷ್ಟಿಯನ್ನು ಯಾವ ಕಾಲಕ್ಕೂ ಸಡಿಲಿಸದಿರಲು ನಿಶ್ಚೈಸಿದೆಯೋ ಎಂದು ಸಂದೇಹಪಡಬೇಕಾಗುವುದು. ಶಾಂತಿಪಾಲನೆಗಾಗಿರುವ ಸರಕಾರದ ಕಾರ್ಯತತ್ಪರತೆಯು ಒಮ್ಮೊಮ್ಮೆ ಔಚಿತ್ಯವನ್ನೂ ಮೀರುವಷ್ಟಕ್ಕಾಗುವುದಿದೆ. ಕೊಂಗ್ರೆಸ್ಸಿನ ಸಂಬಂಧವನ್ನೆ ತೊರೆದು, ಕೇವಲ ಗ್ರಾಮ ಕೈಗಾರಿಕಾ-ಅಭ್ಯುದಯದ ಮಹದ್ಯೋಜನೆಯ ಚಿಂತನೆಯಲ್ಲಿರುವ ಗಾಂಧಿಜಿಯವರು ಇನ್ನೂ ಶಾಂತಿಸಾಧಕರ ಬದಲಾಗಿ ಶಾಂತಿಭಂಗಕರರಾಗಿಯೇ ಇರುವರೆಂದು ಸರಕಾರದ ಅಭಿಪ್ರಾಯವಿರುವುದೆಂದೆಣಿಸಲು ತುಂಬ ವಿಸ್ಮಯವಾಗುವುದು.

ಅತ್ತ ಸರಕಾರದ ಮತ್ತೊಂದು ಮಹಾಹಸ್ತವು ಹಿಂದೀಯರೊಪ್ಪಲಾರದ ಸುಧಾರಣೆಗಳ ತುತ್ತನ್ನು ಹಿಡಿದು ಬಾಯಿಗೆ ತುರುಕಿಸಲು ಯತ್ನಿಸುತ್ತಿದೆ. ಈ ಸುಧಾರಣಾ ವರದಿಯ ಮೇಲೆ ಭಿನ್ನಾಭಿಪ್ರಾಯಗಳೇಳಬಹುದೆಂದು ನಿಶ್ಚಯವಾಗಿ ತಿಳಿದಿದ್ದರೂ, ಕೆಲವು ಪಕ್ಷೀಯರಿಗೆ ಇದು ಸ್ವೀಕಾರಾರ್ಹವೆನಿಸದೆಂಬುದನ್ನು ಪ್ರತೀಕ್ಷಿಸಿಯಾದರೂ ಈ ಸುಧಾರಣಾ ವರದಿಯು ಬಂದಿದೆ. 'ವಿದ್ಯೂಶಿಗಳಿಲ್ಲದೆ, ಅನ್ಯೋನ್ಯದ ಪರಸ್ಪರ ಸಂತೃಪ್ತಿಯ ಒಂದು ಯೋಜನೆಯನ್ನು ಮುಂದಿಡಲಾರದೆ ಜನತೆಯ ಪ್ರಾಮಾ

[illegible]

ಭಾಷಣರೂಪವಾಗಿ [illegible] ರಾಜದ್ರೋಹ [illegible] ರಕ್ಕೆ ಅಸಾಧ್ಯ [illegible] ಹಿಂದೂದೇಶದಲ್ಲಿ [illegible] ತಿಸಲು ವಿಶೇಷ ಶ್ರಮವೇ ಇಲ್ಲ [illegible] ಆದರೆ, ಗಫರ್ ಖಾನರ [illegible] (ಅದಾವುದೆಂದು ಇನ್ನೂ ಹೆಚ್ಚಿನ ಜನರಿಗೆ ತಿಳಿದೇ ಇಲ್ಲ)—ದೇಶದಲ್ಲಿ ಅಥವಾ ಅವರು ಭಾಷಣಮಾಡಿದ ಪ್ರದೇಶದಲ್ಲಿ ಯಾವ ವಿಧದ ಶಾಂತಿಭಂಗವಾದುದೂ ಕಂಡುಬಂದಿಲ್ಲ. ಆಡಿದಾಗಲೇ ಖಾನರು ಮರೆತ ಅಥವಾ ಕೇಳಿದಾಗಲೇ ಶ್ರೋತೃಗಳು ಮರೆತ ಒಂದು ಭಾಷಣವನ್ನು, ಅನೇಕಕಾಲದ ನಂತರ ರಾಜದ್ರೋಹಕರವೆಂದು ಕಂಡುಹಿಡಿದು, ದಸ್ತಗಿರಿ ಮಾಡುವುದು—ಶಾಂತಿಸ್ಥಾಪನೆಯ ಯತ್ನಗಳು ಎಂದಿಗಿಂತಲೂ ಹೆಚ್ಚಾಗಿ ನಡೆಯುತ್ತಿರುವ ಈ ಕಾಲದಲ್ಲಿ ಉಚಿತವಾಗಿಲ್ಲವೆನ್ನಬೇಕಾಗಿದೆ. ಸುಧಾರಣಾ ವರದಿಯನ್ನು ಜನರ ಮುಂದಿರಿಸಿ 'ಸರ್ವಜನಹಿತದೃಷ್ಟಿಯಿಂದ ರಚಿಸಿದುದನ್ನು ಈರ್ಷೆ-ಸ್ವಾರ್ಥಗಳಿಲ್ಲದೆ ಪರಿಶೀಲಿಸಿ ಸ್ವೀಕರಿಸಿರಿ' ಎನ್ನುವಾಗ; 'ರಕ್ಷಾಕವಚವನ್ನೂ ವಿಶೇಷಾಧಿಕಾರಗಳನ್ನೂ ರಾಜ್ಯಾಡಳಿತದ ಅಬಾಧಿತ ಕ್ರಮಾನುಗತಿಗಾಗಿಯೇ ಇರಿಸಲಾಯಿತೆಂ'ದು ಆಶ್ವಾಸನೆ ಕೊಡುವಾಗ—ಈ ಬಗೆಯ ದಸ್ತಗಿರಿಗಳು ಜನರಲ್ಲಿ ಈ ಮೊದಲೇ ಉಂಟಾದ ಸಂಕೋಚ-ಸಂದೇಶಗಳನ್ನು ನಿವೃತ್ತಿಮಾಡಲು ಖಂಡಿತವಾಗಿ ಸಹಾಯಕಾರಿಯಾಗವು. ಡಾ॥ ಸತ್ಯಪಾಲರೂ ಗಫರ್ ಖಾನರೂ ಶಾಂತಿ ಸಾಧಕರೂ ಹಿಂದೂ-ಮುಸ್ಲಿಂ ಐಕ್ಯಚಿಂತಕರೂ ಆಗಿರುವರೆಂಬುದು ನಿರ್ವಿವಾದ. ಸರಕಾರವು ಎಂದಿಗಿಂತಲೂ ಹೆಚ್ಚಾಗಿ ಇಂದು ಅನುಕೂಲ ಜನಾಭಿಪ್ರಾಯವನ್ನು ನಿರೀಕ್ಷಿಸುವಾಗ ಇವರನ್ನು ರಾಜದ್ರೋಹದ ಕ್ರೂರಶಾಸನಕ್ಕೆ ಬಲಿಗೊಡದೆ, ತನ್ನ ವಿಶಾಲಹೃದಯವನ್ನು ವ್ಯಕ್ತಪಡಿಸುವ ಧೋರಣೆಯನ್ನು ಪ್ರಕಟಿಸಬೇಕಾದುದು ಅವಶ್ಯವಿದೆ. ಸಮಯವಿನ್ನೂ ಮೀರಿ ಹೋಗಿಲ್ಲದಿರುತ್ತ, ಸರಕಾರದಿಂದ ಅದನ್ನು ನಿರೀಕ್ಷಿಸಬಹುದೇ?

ಸ್ಪೀವರ್ ರಿಪೋರ್ಟಿಗೆ ಆಕ್ಷೇಪಣೆಗಳು.

ಸ್ಪೆಶಲ್ ಸೆಟ್ಲಮೆಂಟ್ ಆಫೀಸರರ ರಿಸೆಟ್ಲಮೆಂಟ್ ವರದಿಗೆ ಆಕ್ಷೇಪಣೆಗಳನ್ನು ಜಿಲ್ಲಾ ವರ್ಗದಾರ ಸಂಘದವರು ಇದೇ ಕಳೆದ ಆಗೋಸ್ತು ತಾ. ೨೭ರಲ್ಲಿ ಸಭೆಸೇರಿ ನಿರ್ಣಯಿಸಿದಂತೆ, ಸರಕಾರಕ್ಕೊಪ್ಪಿಸಿರುವರಲ್ಲದೆ, ವರ್ಗದಾರ ಸಂಘದಿಂದ ನಿಯೋಜಿತರಾದ ಪ್ರಮುಖ ಮಹನೀಯರ ಡೆಪ್ಯುಟೇಶನೂ ಮಾನ್ಯ ಗವರ್ನರರಿಗೆ ಈಗಾಗಲೇ ಹೋಗಿರುವುದು. ನಮ್ಮ ಜಿಲ್ಲೆಯ ರೈತರ ದುಃಸ್ಥಿತಿಯನ್ನು ಮಾರ್ಮಿಕವಾಗಿ, ಸುಸ್ಪಷ್ಟವಾಗಿ ಆಕ್ಷೇಪಣಾ ಮನವಿಯಲ್ಲಿ ತಿಳಿಸಲಾಗಿದೆ. ಧಾರಣೆವಾಸಿಗಳ ಇಳಿತಾರ, ನೆರೆಗಳ ಅನಾಹುತಗಳು, ಕೃಷಿಕರ ಸಾಲದ ಹೊರೆ, ಅರಣ್ಯ ರಿಯಾಯತಿಯು ರದ್ದುಗೊಂಡಾದ ಸಂಕಷ್ಟಗಳು ಇವೆಲ್ಲವೂ, ಸಾಧಾರ ಅಂಕಿಸಂಖ್ಯೆಗಳನ್ನು ಕೊಟ್ಟು ತಿಳಿಸಲಾಗಿದೆ. ನಾಡಿನ ಜೀವಾಳವಾಗಿರುವ ರೈತ

ಜನಾಂಗದ ಹಿತಚಿಂತನೆಯು ತನ್ನಆದ್ಯಕರ್ತವ್ಯವೆಂದು ಆಗಾಗ ಹಿತೋಕ್ತಿಗಳನ್ನಾಡುತ್ತಿರುವ ಸರಕಾರವು, ಈ ಮನವಿಯನ್ನು ಪರ್ಯಾಲೋಚಿಸಿ, ಅನುಕೂಲವಾಗಿ ವರ್ತಿಸಿ, ರೈತರಿಗೆ ಅನಿವಾರ್ಯವಾಗಿ, ಅವಶ್ಯವಾಗಿ ಸಲ್ಲಬೇಕಾದ ಈ ರಿಯಾಯತಿಗಳನ್ನು ಕೊಡಿಸುವಂತೆ ಕರುಣೆ ತೋರಬೇಕೆಂದು ಜನಾಂಗದ ಮೊರೆ. ಕಂದಾಯದಲ್ಲಿ ರಿಯಾಯತಿ, ಅರಣ್ಯಗಳಿಂದ ರೈತರು ಸಾಕಷ್ಟು ಪ್ರಯೋಜನ ಹೊಂದುವಂತೆ ಅನುಕೂಲತೆ, ನಿರಾತಂಕವಾಗಿ ಶಿಖಾರಿ ಮಾಡುವ ಪರವಾನಗಿ, ಮಲೇರಿಯ ಮೊದಲಾದ ಪೀಡೆಗಳಿರುವ ಪ್ರದೇಶಗಳಲ್ಲಿ ವೈದ್ಯಕೀಯ ವ್ಯವಸ್ಥೆ, ಆರ್ಥಿಕ ಸಹಾಯ, ಶಿಕ್ಷಣಾಭಿವೃದ್ಧಿಯ ಏರ್ಪಾಡು—ಇವುಗಳೆಲ್ಲವೂ ರೈತರ ಅವನತಿಯನ್ನು ತಡೆಯಲು ಅತೀವ ಅಗತ್ಯವಾಗಿ, ದೇಶಹಿತಚಿಂತನೆಯಿಂದ, ಔದಾಸೀನ್ಯವಿಲ್ಲದೆ ನಡೆಯಬೇಕಾದ ಕಾರ್ಯಗಳಾಗಿವೆಯೆಂದು ಪುನಃ ಸೂಚಿಸಲಿಚ್ಛಿಸುವೆವು.

[illegible]

"ಕಲ್ಲು [illegible] ಕ್ಷಲನೆಂಬ [illegible] ಆತನ ಮೈಮೇಲಿನ ಆಭರಣಗಳನ್ನು [illegible] ಸಿಕ್ಕಿಬಿದ್ದನು. ಆತನನ್ನು 'ಸರಿಹಾದ' [illegible] ನಿರೂಪಿಸಲ್ಪಟ್ಟು, ಮೊನ್ನೆ ಫಾಶಿಕೆಟ್ಟಿಗೆ ಗುರಿಯಾದನು.

"ಪಾರ್ವಾಭೌಮರಿಗೂ ಕ್ರೈಸ್ತಅರಸರಿಗೂ ಒಂದು ಬಹಿರಂಗ ಪತ್ರ"ವೆಂಬುದನ್ನು ಪ್ರಕಟಿಸಿದುದರ ಪರಿಣಾಮವಾಗಿ ಲಾಹೋರಿನ 'ಅಜಾನ್ಸಾರ್' ಪತ್ರಿಕೆಯಿಂದ ೬೦೦೦ ರೂಪಾಯಿಯ ಭದ್ರತೆಯನ್ನು ಕೇಳಲಾಗಿದೆ.

ಕಾನ್‌ಪುರದ ರೈಲ್ವೇ ಹೊಟೇಲಿನಲ್ಲಿಯ ಹಿಂದೂ ಮುಸ್ಲಿಂ ಕೆಲಸಗಾರರಿಬ್ಬರೊಳಗೆ ಹೊಡೆದಾಟವಾಗಿ ಅದೊಂದು ಮಹಾ ಹಿಂದೂಮುಸ್ಲಿಂ ಜಗಳವಾಗಲಿದ್ದಾಗ ಅಲ್ಲಿಯ ಸ್ಟೇಶನ್‌ಮಾಸ್ತರರು ಬಂದು ಶಾಂತಿಯನ್ನು ಸ್ಥಾಪಿಸಿದರು.

ವರನು ಉಬ್ಬಸರೋಗಿ ಮತ್ತು ಕ್ಷಯರೋಗಿಯಾಗಿರುವುದರಿಂದಲೂ ಅಲ್ಲದೆ ಆತನು ಬೊಂಬಾಯಿಕೋರಿಯಲ್ಲಿ ಸೆರೆಹಿಡಿಯಲ್ಪಟ್ಟವನಾದ್ದರಿಂದಲೂ ಹುಡುಗಿಯನ್ನು ಆ ವರನಿಗೆ ಕೊಡಬಾರದೆಂದು ಕುಟುಂಬಿಕನೊಬ್ಬನು ಅರ್ಜಿ ಮಾಡಲಾಗಿ ಆ ಬಗ್ಗೆ ವಿಚಾರಣೆಯಾಗಿ ಹುಡುಗನ ಮೇಲಿನ ಆರೋಪವು ಸತ್ಯವಾಗಿಲ್ಲವೆಂದು ತೀರ್ಮಾನಿಸಿ ಮಧುರೆಯಲ್ಲಿ ಸಂಜೀವ ಎಂಬ ಆ ಹುಡುಗನಿಗೆ ಚೊಕ್ಕಾಳು ಎಂಬ ತರುಣಿಯನ್ನು ವಿವಾಹವಾಗಬಹುದೆಂದು ಜಡ್ಜರು ಅಪ್ಪಣೆಕೊಟ್ಟರು.

"ಎಂದಿನಂತೆ ಈ ಬಾರಿಯೂ ಕರ್ನಾಟಕದ ಭಿನ್ನ ಭಿನ್ನ ಪರೀಕ್ಷಾ ಕೇಂದ್ರಗಳಲ್ಲಿಯೂ ಹಿಂದೀ ಪ್ರಾರಂಭಿಕ ಪ್ರಥಮ ಮತ್ತು ಪಿಶೇಷ ಪರೀಕ್ಷೆಗಳು ಬರುವ ಫೆಬ್ರವರಿ ತಿಂಗಳಲ್ಲಿ ನಡೆಯುವುವು. ಈ ಪರೀಕ್ಷೆಗಳಿಗೆ ನಿಯಮಿತ ಶುಲ್ಕಗಳೊಂದೊಡಗೂಡಿದ ಅರ್ಜಿದಾರ ಪತ್ರಗಳು ಡಿಸೆಂಬರ್ ೨೫ನೇ ತಾರೀಕಿನೊಳಗೆ ಪರಿಷತ್ತಿನ ಪರೀಕ್ಷಾ

[illegible]

"ಹುಡ್ಸನ್ [illegible] ಗಳು ಜನಾಂಗದ ಆಶಯಗಳಿಗೆ ವಿರುದ್ಧವಾಗಿರುವುದರಿಂದಲೂ ಅವಮಾನಕರವೆಂದು ಕಂಡುಬರುವುದರಿಂದ [illegible] ಕಾಂಗ್ರೆಸ್ ಕಾರ್ಯಕಾರಿ ಮಂಡಲಿಯು [illegible] ಪ್ರತಿಸ್ಪಷ್ಟ" ಎಂಬ ಠರಾವು, ಕಳೆದ ವಾರ [illegible] ಶ್ರೀ [illegible] ಸಮಿತಿಯ ಸಭೆಯಲ್ಲಿ [illegible] ಎಸೆಂಬ್ಲಿಯಲ್ಲಿ ಸದಸ್ಯರೆಲ್ಲರೂ ಈ ಸುಧಾರಣಾ ಆಯೋಜನೆಯನ್ನು ಪೂರ್ಣವಾಗಿ ವಿರೋಧಿಸಬೇಕೆಂದು ಸಮಿತಿಯ ವಿನಂತಿ.

ವಿದೇಶ ವರ್ತಮಾನ.

೧೯೪೪ರ ನೋಬೆಲ್ ಪೀಸ್ ಬಹುಮಾನವು ಸರ್ [illegible] ಎಂಗೆಲ್ ಎಂಬವರಿಗೂ, ೧೯೪೪ರ ಅದೇ ಬಹುಮಾನವು ಮಿ॥ ಆರ್ಥರ್ ಹೆಂಡರ್‌ಸನ್‌ರವರಿಗೂ ಸಿಕ್ಕಲಿತ್ತು. ಮೊದಲನೆ ಬಹುಮಾನದ ಮೊಬಲಗು ೬೦೦೦ ಪೌಂಡುಗಳು. ೧೯೪೪ರ ಶಾಂತಿಗಿ ಪೀಸ್ ಬಹುಮಾನವು ಮಿ॥ ಚಂಡರ್ಸನರಿಗೆ ದೊರಕಿದೆ. ಈ ಬಹುಮಾನವು ೨೦೦೦ ಪೌಂಡು.

ಅಮೇರಿಕಕ್ಕೆ ಸಲುವ ಯುದ್ಧದ ಸಾಲದ ಒಂದು ಕಂತನ್ನು ಫ್ರಾನ್ಸು ಇದೇ ತಾ॥ ೧೫ಕ್ಕೆ ಕೊಡಲಿದೆಯೆಂದು ಫ್ರಾನ್ಸು ಮೊದಲು ಹೇಳಿತ್ತಾದರೂ, ಈಗ ಮಂತ್ರಿಮಂಡಲವು ಅದನ್ನು ಕೊಡಬಾರದೆಂದು ನಿರ್ಧರಿಸಿದೆ.

ಒಸ್ಟ್ರೇಲಿಯದ ವೈಮಾನಿಕನಾದ ಅಲ್ಲನು ಹೊನೊಲುಲು ಕಡೆಗೆ ಹಾರಿಕೊಂಡು ಹೋಗಿರುತ್ತಾನೆಂಬುದೂ, ಆ ಮೇಲೆ ಆತನು ಪಯಂದರಿಂದ ಚಿಹ್ನೆಗಳು ಕಾಣುವುದಿಲ್ಲವೆಂದೂ ತಿಳಿಯಲಾಗಿದೆ. ಅನೇಕ ವಿಮಾನಗಳು ಆತನನ್ನು ಸಮುದ್ರದಲ್ಲಿ ಹುಡುಕುತ್ತಿವೆ.

ಇಂದಿನ ವಾರ್ತೆ.

ಬಂಗಾಳ ಸರಕಾರವು ಒಂದು ವೈದ್ಯಕೀಯ ಬೋರ್ಡನ್ನು ರಚಿಸಿ ಸುಭಾಷಬೋಸರನ್ನು ಚಿಕಿತ್ಸೆ ಮಾಡಿ ರೋಗದ ವಿವರವನ್ನು ತಮಗೆ ತಿಳಿಸಬೇಕೆಂದು ಅಪ್ಪಣೆಕೊಟ್ಟಿರುವರು.

ಖಾನ್ ಗಫರ್ ಖಾನರನ್ನು ದಿಲ್ಲಿ ಭುಭಾಭಾಯಿ ಪಟೇಲರು ಸೆರೆಯೊಳಗೆ ಸಂದರ್ಶಿಸಿ ಪ್ರತಿಪಾದಿಸುವುದಕ್ಕಾಗಿ ವಕಾಲತ್ ಕಟ್ಟುವ ಕುರಿತು ವಿಚಾರಿಸಿದರು, ಗಫರ್ ಖಾನರು ಸಮ್ಮತಿಸಿರುವುದಿಲ್ಲ.

ಗಾಂಧಿಯವರ ಗಡಿನಾಡ ಸಂಚಾರದ ಸಂಬಂಧವಾಗಿ ಅವರೊಳಗೂ ವೈಸರಾಯರೊಳಗೂ ನಡೆದ ಪತ್ರವ್ಯವಹಾರವು ಪ್ರಕಟಿಸಲ್ಪಟ್ಟಿದೆ. "ನೀವು ಸದ್ಯಕ್ಕೆ ಅಲ್ಲಿ ಹೋಗುವುದು, ಅಗತ್ಯವಿಲ್ಲ"ವೆಂದೇ ವೈಸರಾಯರ ಮತವಾಗಿದೆ.

ಮುಂಬಯಿಯ ವರ್ಕರ್ ಸಂಘದವರು, ಸಭೆಸೇರಿ, ಹೊಯಿಟ್‌ಪಾರ್ಲಿಮೆಂಟರಿ ಕಮಿಟಿ ರಿಪೋರ್ಟನ್ನು ನಿಷೇಧಿಸಿ ಠರಾವು ಮಾಡಿರುವರು.

ಅಮೇರಿಕದ ಒಂದು ವಿಲಾಸೀ ಹೊಟೇಲಿನಲ್ಲಿ ಬೆಂಕಿಯಿದ್ದು ೪೦ ಮಾನವಪ್ರಾಣಿಗಳು ನಷ್ಟವಾದ ಭೀಕರವಾರ್ತೆ ಬಂದಿದೆ.

ಇಂಗ್ಲಂಡೂ ಕೂಡ ಡಿಸೆಂಬರದ ಯುದ್ಧ ಸಾಲದ ಕಂತನ್ನು ಅಮೇರಿಕಕ್ಕೆ ತೆರಬಾರದೆಂದಿದೆ.

FOR SALE

A Coffee Estate situated in Mudigere Taluk, Banakal Hobli with a decent Bungalow in the middle of the Estate on the roadside. Total area of the Estate including wet lands etc. about 240 acres.

For further particulars apply to:

B. Ramanatha Prabhu,
Coffee Planter, Baxagode Estate,
Banakal Post, Mudigere Taluk,
Kadur District.

ಮಂಗಳೂರು

ಇದೇ ತಾ. ೧೬ನೇ ರವಿವಾರ ಸಾಯಂಕಾಲ ಘಂಟೆ ೫ಕ್ಕೆ ಶ್ರೀ ಕೃಷ್ಣಾರ್ಪಣ ಭುವನೇಂದ್ರ ಸಭಾಸದನದಲ್ಲಿ "ಗೀತಾ ಜಯಂತಿ ಉತ್ಸವ"ವು ಜರಗುವುದು. ಶ್ರೀ ಎಸ್. ಬಿ. ಭಾಲರಾವ್, ಬಿ. ಎ., ಎಲ್. ಟಿ., ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರ (ದ. ಕನ್ನಡ) ಇವರು ಅಧ್ಯಕ್ಷ ಸ್ಥಾನವನ್ನು ವಹಿಸುವರು. ಸರ್ವರಿಗೂ ಸುಸ್ವಾಗತವಿದೆಯೆಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಶ್ರೀ ಕೃಷ್ಣ ಸಿನೆಮಾದಲ್ಲಿ ಸಾಗರ್ ಮೂವಿಟೋನಿನವರ "ಗೃಹಲಕ್ಷ್ಮಿ" ಎಂಬ ಚಲನಚಿತ್ರವು ಪ್ರದರ್ಶಿಸಲ್ಪಡುತ್ತಿದೆ. ಸಬಿತಾ ದೇವಿ, ಜಾಲ್ ಮರ್ಚೆಂಟ್, ಬೊಂಬಾಯಿಯ ಅಂಧಗಾಯಕ ಕೆ. ಸಿ. ಡೇ ಮೊದಲಾದವರು ಇದರಲ್ಲಿ ಅಭಿನಯಿಸುವರು. ಅದರ ನಂತರದಲ್ಲಿ ರೋಮನ್ ನವಾರೊ ಮತ್ತು ಹೆಲೆನ್ ಹೇಸ್, ಇವರು ಮುಖ್ಯ ಅಭಿನಯವಿರುವ ಮೆಟ್ರೋ ಗೋಲ್ಡ್‌ವಿನ್ ಮೇಯರ್ಸ್‌ರವರ "ಸನ್ ಎಂಡ್ ಡಾಟರ್" ಎಂಬ ಚಿತ್ರವು ಪ್ರದರ್ಶಿಸಲಾಗುವುದೆಂದು ಆಡಳಿತಗಾರರು ತಿಳಿಸುತ್ತಾರೆ.

ಅನೇಕ ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಹಿಂದೀ ಪ್ರಚಾರಕರಾಗಿದ್ದ ಶ್ರೀ ಕೆ. ರಾಘವಾಚಾರ್ಯರು ತಮ್ಮ ಹುಟ್ಟೂರಾದ ಕಣ್ಣಂಗೂರಿನಲ್ಲಿ, ಇದೇ ಕಳೆದ ತಾ. ೯ನೇ ರವಿವಾರ ಮುಂಜಾನೆ ಅಕಾಲಮೃತ್ಯುವಿಗೀಡಾದರೆಂದು ತಿಳಿಸಲು ತುಂಬ ವಿಷಾದಿಸುವೆವು. ಇವರು ಕೆಲಕಾಲದಿಂದ ಕ್ಷಯರೋಗ ಪೀಡಿತರಾಗಿದ್ದು, ನಮ್ಮ ಜಿಲ್ಲೆಯಲ್ಲಿಯೂ, ಅನಂತರ ಮದರಾಸು, ಬೆಂಗಳೂರುಗಳಲ್ಲಿಯೂ ಚಿಕಿತ್ಸೆ ಪಡೆದೂ ಸಫಲವಾಗದೆ, ಕೊನೆಗೆ ಕಣ್ಣಂಗೂರಿಗೆ ಕೆಲವೇ ದಿನಗಳ ಹಿಂದೆ ಮರಳಿ ಬಂದಿದ್ದರು. ಇವರು ತಮ್ಮ ಶಾಂತಸ್ವಭಾವ ಮತ್ತು ಸೌಜನ್ಯದಿಂದ ಜಿಲ್ಲೆಯಲ್ಲಿ ಹಲವರ ಪ್ರೀತಿಗೆ ಪಾತ್ರರಾಗಿದ್ದರು. ನಮ್ಮ ಜಿಲ್ಲೆಯ ಪ್ರಮುಖ ಸಾಹಿತ್ಯ ಸಂಸ್ಥೆಯೆನಿಸಿರುವ ಮಿತ್ರಮಂಡಳಿಯ ವ್ಯವಸ್ಥಾಪಕರಲ್ಲೊಬ್ಬರು. ಹಿಂದೀ ಪ್ರಚಾರಕರಾಗಿದ್ದರೂ ಕನ್ನಡದ ಮೇಲಣ ಇವರ ಪ್ರೇಮವು ಹೆಚ್ಚಿನದೇ ಇದ್ದಿತು. ಆಗಾಗ ಚಿಕ್ಕ ಚಿಕ್ಕ ಕವಿತೆಗಳನ್ನು ಬರೆಯುತ್ತಿದ್ದರು. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ!

ಸ್ಟೀಮರ್ ರಿಪೋರ್ಟಿನ ಕುರಿತಾದ ಆಕ್ಷೇಪಣೆಗಳನ್ನು ದಯಾಳು ಸರಕಾರಕ್ಕೆ ತಿಳಿಸಲೋಸುಗ ಜಿಲ್ಲಾ ವರ್ತಕರ ಕಡೆಯಿಂದ ನಿಯೋಜಿತರಾದ ಶ್ರೀಗಳಾದ ಎ. ಬಿ. ಶೆಟ್ಟಿ, ಮೊಳಹಳ್ಳಿ ಶಿವರಾವ್ (ಪುತ್ತೂರು) ಮೈಲೂರು ವಾಸುದೇವರಾವ್ (ಉಡುಪಿ), ಬಂಡಿಗೆ ಮಹಾಲಿಂಗ ಭಟ್ಟ (ಕಾಸರಗೋಡು), ಬಿ. ಎ. ಪಾಲನ್ ಹೆಗ್ಡೆ ಮತ್ತು ಕೆ. ಆರ್. ಕಾರಂತ ಇವರ ಡೆಪ್ಯುಟೇಶನು ಇದೇ ತಾ. ೧೨ರಲ್ಲಿ ಮಾನ್ಯ ಮದರಾಸು ಗವರ್ನರರನ್ನು ಕಂಡು, ಕುಂದುಕೊರತೆಗಳನ್ನು ಅವರಲ್ಲಿ ನಿವೇದಿಸಲಾಗಿದೆಯೆಂದು ತಿಳಿದುಬರುತ್ತದೆ.

ಕಾಂಡೇಶ್ವರದ ಮುಸಾಫಿರ್ ಬಂಗಲೆಯ ಬಾವಿಯಲ್ಲಿ ಮೊನ್ನೆ ಒಂದು ಹೆಣವು ಕಾಣಿಸಿತು. ಪೋಲೀಸರು ಬಂದು ಅದನ್ನು ಮೇಲಕ್ಕೆ ತೆಗೆದು ಪರೀಕ್ಷಿಸಲಾಗಿ ಮೃತನು ಬಂದರದಲ್ಲಿ ಟಿಕೇಟ್ ಕಲೆಕ್ಟರ್ ಕೆಲಸ ಮಾಡುತ್ತಿದ್ದ ಒಬ್ಬ ಕ್ರೈಸ್ತನೆಂದು ತಿಳಿದುಬಂದಿದೆ. ಆತ್ಮಹತ್ಯೆಯೆಂದು ಊಹಿಸಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಲಕ್ಷದೀಪೋತ್ಸವದ ಸಂದರ್ಭದಲ್ಲಿ ಜರಗಿದ ಸರ್ವಧರ್ಮ ಸಮ್ಮೇಳನದ ಅಧ್ಯಕ್ಷರಾಗಿ ದಯಮಾಡಿಸಿದ ಬೆಂಗಳೂರಿನ ಪ್ರಾಕ್ತನ ವಿಮರ್ಶವಿಚಕ್ಷಣ ಪ್ರಾಚ್ಯವಿದ್ಯಾವೈಭವ ಮಹಾಮಹೋಪಾಧ್ಯಾಯ ರಾವ್ ಬಹದೂರ್ ಆರ್ ನರಸಿಂಹಾಚಾರ್ಯ, ಎಮ್. ಎ., ಎಮ್. ಆರ್. ಎ. ಎಸ್. ಇವರನ್ನು ಇಲ್ಲಿಯ ಮಿತ್ರಮಂಡಳಿಯವರು ಆಮಂತ್ರಿಸಿ ಒಂದು ಸತ್ಕಾರಕೂಟವನ್ನು ಇದೇ ತಾ. ೧೦ರಲ್ಲಿ ಕೆನರಾ ಹೈಸ್ಕೂಲಿನಲ್ಲಿ ಏರ್ಪಡಿಸಿದ್ದರು. ಈ ಕೂಟಕ್ಕೆ ಹಲವು ಊರ ಮಹನೀಯರು ಆಮಂತ್ರಿಸಲ್ಪಟ್ಟಿದ್ದರು. ಕಾರ್ಯಕ್ರಮಾರಂಭದಲ್ಲಿ, ಮಿತ್ರಮಂಡಳಿಯ ವ್ಯವಸ್ಥಾಪಕರಲ್ಲೊಬ್ಬರಾದ ಶ್ರೀ ರಾಘವಾಚಾರ್ಯರ ಅಕಾಲ ನಿಧನಕ್ಕಾಗಿ ವಿಷಾದಿಸಿ ಠರಾವಾಯಿತು. ಅನಂತರ ಅಧ್ಯಕ್ಷರಾಗಿ ಶ್ರೀ ಪಂಜೆ ಮಂಗೇಶರಾಯರೂ, ಅತಿಥಿಗಳಾಗಿ ಬಂದಿದ್ದ ಶ್ರೀ ಎಮ್. ಶಿವಸಿಂಗರಾವ್, ಎಮ್. ಎ., ಬಿ. ಎಲ್., ನಿವೃತ್ತ ಡಿಸ್ಟ್ರಿಕ್ಟ್ ಜಡ್ಜ ಇವರೂ, ಶ್ರೀ ಮುಳಿಯ ತಿಮ್ಮಪ್ಪಯ್ಯ, ವಿದ್ವಾನ್, ಶ್ರೀ ಎಮ್. ಎಸ್. ಕಾಮತ್, ಶ್ರೀ ಲಕ್ಷ್ಮೀನಾರಾಯಣ ಪುಣಿಂಚಿತ್ತಾಯ ಇವರೂ ಭಾಷಣ ಮಾಡಿದರು. ಕೊನೆಗೆ ಅಧ್ಯಕ್ಷರು, ತಮ್ಮನ್ನು ಪ್ರೀತಿ ಆದರಗಳಿಂದ ಈ ಬಗ್ಗೆಯಾಗಿ ಸತ್ಕರಿಸಿದುದಕ್ಕೆ ತಕ್ಕ ವಂದನೆಗಳನ್ನು ಸಮರ್ಪಿಸುತ್ತ, ಭಾರತೀಯ ಸಂಸ್ಕೃತಿಯ ಕುರಿತು ಚಿಕ್ಕೋಪನ್ಯಾಸ ಮಾಡಿ, ಆತ್ಮಸೇವೆ, ದೇಶಸೇವೆ, ಭಾಷಾಸೇವೆ ಇವುಗಳನ್ನು ಸ್ಪಷ್ಟೀಕರಿಸಿ ಭಾಷಣ ಮಾಡಿದರು. ರಾಯಚೂರಿನಲ್ಲಿ ಇದೇ ತಿಂಗಳ ಕೊನೆಯ ವಾರದಲ್ಲಿ ಜರಗುವ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಹೋಗುವ ಶ್ರೀ ಪಂಜೆ ಮಂಗೇಶರಾಯರ [illegible] ಭಾಷಣವಾದ ನಂತರ ಮಿತ್ರಮಂಡಳಿಯ ಅಧ್ಯಕ್ಷರಾದ ಶ್ರೀ ಕೆ. ವಾಮನ ಭಟ್ಟ, ಬಿ. ಎ., ಇವರು [illegible] ಮಂಡಳಿಯ ಪರವಾಗಿ ವಂದನೆಗಳನ್ನರ್ಪಿಸಿದ ನಂತರ ಸಮಾರಂಭವು ಕೊನೆಗೊಂಡಿತು.

ಶ್ರೀ ಮಂಜುನಾಥೇಶ್ವರ ಯಕ್ಷಗಾನ ಕಲಾವರ್ಧಕ ಸಂಘವು ಮಂಗಳೂರು ಶ್ರೀ ಕ್ಷೇತ್ರ ಮಂಜುನಾಥೇಶ್ವರ ದೇವಸ್ಥಾನಕ್ಕೆ ಸಂಬಂಧಿಸಿದ [illegible] ಕಟ್ಟೋಣದಲ್ಲಿ ತನ್ನ ಕಾರ್ಯಕಲಾಪಗಳನ್ನು ನಡೆಸುತ್ತಿರುವುದಲ್ಲದೆ ಪ್ರತಿ ಆದಿತ್ಯವಾರ ಸಂಜೆ ೫ರಿಂದ ೭ರ ತನಕ ತಾಳಮದ್ದಳೆಯು ಸಂಘದ ಉತ್ತೇಜಕ ಮುಂಬರಿಂದ ಜರಗಿಸಲ್ಪಡುವುದು. ಯಕ್ಷಗಾನಾಭಿಮಾನಿಗಳು ಸಂಘದ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಿ ಶ್ರೇಯೋಭಿವೃದ್ಧಿಗೆ ಸಹಾಯಕರಾಗುವರೆಂದು ಹಾರೈಸಿ [illegible] ಕಾರ್ಯದರ್ಶಿ [illegible].

[illegible] ತಾ. ೯ಕ್ಕೆ ಅಂತ್ಯವಾಗುವ ಒಂದು ವಾರದ ನಮ್ಮ ನಗರದ ಆರೋಗ್ಯದ ವರದಿ:- ಮರಣ ೧೭, ಜನನ ೫೮. ಮರಣಗಳ ಪೈಕಿ ಸಿಡುಬು ೧, ಮಲೇರಿಯ ೧, ಇತರ ಜ್ವರ [illegible] ನ್ಯುಮೋನಿಯಾ ೨ ಮತ್ತು ಇತರ ಕಾರಣಗಳಿಂದ ೧೩, ಇವುಗಳ ಪೈಕಿ ಒಂದು ವಯಸ್ಸಿನೊಳಗಣ ಶಿಶುಮರಣ ೫.

ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ಇದೇ ತಾ. ೧೫ನೇ ಶನಿವಾರ ಸಾಯಂಕಾಲ ಘಂಟೆ ೫ಕ್ಕೆ, ಗವರ್ನಮೆಂಟ್ ಕೊಲೇಜಿನ ಪ್ರಿನ್ಸಿಪಾಲರಾದ ಶ್ರೀ ಜೆ. ಕೆ. ಚೆಟ್ಟೂರ್, ಎಮ್. ಎ., (ಒಕ್ಸನ್) ಇವರ ಅಧ್ಯಕ್ಷತೆಯಲ್ಲಿ ಜರಗುವುದು.

ಕಳೆದ ಆದಿತ್ಯವಾರ ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜಿಲ್ಲೆಯ ಹಿಂದೀ ಪ್ರೇಮಿಗಳ ಮತ್ತು ಪ್ರಚಾರಕರ ಸಭೆಯು ಸೇರಿತ್ತು. ಜಿಲ್ಲೆಯ ಬೇರೆಬೇರೆ ಕಡೆಯಿಂದ ಒಟ್ಟು ೬೦ ಮಂದಿ ಸದಸ್ಯರು ಹಾಜರಿದ್ದರು. ಕಾರ್ಯಾರಂಭದಲ್ಲಿ ಕಳೆದ ೩-೪ ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಅತಿ ಉತ್ಸಾಹದಿಂದ ಹಿಂದೀ ಪ್ರಚಾರ ಕಾರ್ಯವನ್ನು ಮಾಡಿಕೊಂಡು ಜನರ ಪ್ರೀತಿಗೆ ಪಾತ್ರರಾಗಿದ್ದ ಪಂಡಿತ ರಾಘವಾಚಾರ್ಯರ ಅಕಾಲ ನಿಧನಕ್ಕಾಗಿ ದುಃಖಸೂಚಕ ಠರಾವು ಮಂಜೂರಾಯಿತು. ಬಳಿಕ ಉಪಸಮಿತಿಯಿಂದ ತಯಾರಿಸಲ್ಪಟ್ಟ ದ. ಕ. ಜಿಲ್ಲಾ ಹಿಂದೀ ಪ್ರಚಾರ ಸಭೆಯ ನಿಯಮಾವಳಿ, ಕಾರ್ಯಕ್ರಮ ಮತ್ತು ಮುಂದಿನ ವರ್ಷದ ಅಂದಾಜು ಆಯವ್ಯಯ ಪಟ್ಟಿಯು ಸರ್ವಸಮ್ಮತದಿಂದ ಅಂಗೀಕರಿಸಲ್ಪಟ್ಟು, ಈ ಕೆಳಗಿನ ಕಾರ್ಯನಿರ್ವಾಹಕ ಸಮಿತಿಯು ನಿಯಮಿಸಲ್ಪಟ್ಟಿತು:—

ಶ್ರೀ ಸದಾಶಿವ ರಾವ್, ಕಾರ್ನಾಡ (ಅಧ್ಯಕ್ಷ), ಶ್ರೀಮತಿ ಕಮಲಾದೇವಿ ತಲಚೇರಿಕರ್, (ಉಪಾಧ್ಯಕ್ಷೆ) ಶ್ರೀ ವಿ. ಯಸ್. ಬಿಜೂರು, ಶ್ರೀ ಬಿ. ಕೆ. ಭಂಡಾರಿ, ಜತೆಕಾರ್ಯದರ್ಶಿಯರು, ಶ್ರೀ ಗೋಪಾಲಕೃಷ್ಣ ಕಾಮತ್, ಶ್ರೀ ಕಾಪಬೆಟ್ಟು ಶ್ರೀನಿವಾಸ ಶೈ, ಶ್ರೀಮತಿ ಬಿ. ಎಸ್. ರತ್ನಾಬಾಯಿ, ಶ್ರೀ ಎಮ್. ಉಮೇಶ ರಾವ್, ಇತರ ಸದಸ್ಯರು

ಮ॥ ರಾ॥ ರಾ॥ ಮೂಲ್ಕಿ ಕೃಷ್ಣಯ್ಯ ಬಿ. ಎ., ಇವರ ದ್ವಿತೀಯ ಪುತ್ರರಾದ ಶ್ರೀಯುತ ಮೂಲ್ಕಿ ಗೋಪಾಲಕೃಷ್ಣಯ್ಯರವರು ಇದೇ ನವಂಬರ ತಿಂಗಳಲ್ಲಿ ಲಂಡನಿನಲ್ಲಿ ನಡೆದ F. R. C. S. (London) (ರೋಯಲ್ ಕೊಲೇಜ್ ಒಫ್ ಸರ್ಜನ್ಸ್ ಫೈನಲ್ ಫೆಲೋಶಿಪ್) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರೆಂದು ತಿಳಿದುಬಂದಿದೆ. ಇವರು ೧೯೩೦ರಲ್ಲಿ ಮುಂಬಾಯಿಯ ಗ್ರೇಂಟ್ ಮೆಡಿಕಲ್ ಕೊಲೇಜಿನಲ್ಲಿ ಎಮ್. ಬಿ., ಬಿ. ಎಸ್. ಪರೀಕ್ಷೆಯಲ್ಲಿ ಪಾಸಾಗಿ ಮುಂಬಾಯಿಯ ಜೆ. ಜೆ. ಆಸ್ಪತ್ರೆಯಲ್ಲಿ ೬ ತಿಂಗಳುಗಳ ವರೆಗೆ ಹೌಸ್ ಸರ್ಜನರಾಗಿದ್ದು ೧೯೩೨ರಲ್ಲಿ ಲಂಡನಿಗೆ ಹೋದರು. ದಕ್ಷಿಣ ಕನ್ನಡದ ಹಿಂದುಳಿದ ಸಮಾಜದವರಲ್ಲಿ ಈ ಪದವಿಯನ್ನು ಹೊಂದಿದವರಲ್ಲಿ ಇವರೇ ಮೊದಲಿಗರು. ಇವರು, ಬರುವ ಮಾರ್ಚ ತಿಂಗಳಲ್ಲಿ ಸ್ವದೇಶಕ್ಕೆ ಹಿಂದಿರುಗಲಿರುವರು.

ತಾಲೂಕುಗಳಿಂದ

ಮೂಲ್ಕಿ— ಮೂಲ್ಕಿ ಸೆಂಟರ್ ಉಪಾಧ್ಯಾಯರ ಮಾಸಿಕ ಸಭೆಯು ಇದೇ ತಿಂಗಳ ತಾ. ೮ರಲ್ಲಿ [illegible] ಶಾಲೆಯಲ್ಲಿ [illegible] ಉಪಾಧ್ಯಾಯರಾದ [illegible] ಅಧ್ಯಕ್ಷತೆಯಲ್ಲಿ ಜರಗಿತು. ಇದ್ರ ಸಂಘದ ಬರುವ ಸಭೆಯು ಬರುವ ಜನವರಿ ತಿಂಗಳ ತಾ. ೨೬ನೇ ಶನಿವಾರ [illegible] ಘಂಟೆ ೨ಕ್ಕೆ [illegible] ಬೋ॥ ಎಲಿಮೆಂಟರಿ ಶಾಲೆಯಲ್ಲಿ ಜರಗಿಸಲ್ಪಡುವದು.

[illegible]— ಇಲ್ಲಿಯ ಶ್ರೀ ಶಾರದಾ ಕಲಾವರ್ಧಕ ಸಂಘಕ್ಕೆ ಶ್ರೀಯುತರುಗಳಾದ ಕೆ. ನಾರಾಯಣ [illegible] ಮತ್ತು ಕೆ. ಗುರುಪ್ರಸಾದ [illegible] ಪ್ರೋತ್ಸಾಹದಿಂದ [illegible] ಒಂದು ಗಡಿಯಾರವನ್ನು ತಾ. [illegible] ಉದಾರದಾನವಾಗಿ ಕೊಟ್ಟಿರುತ್ತಾರೆಂದು ಒಬ್ಬ ಬಾತ್ಮಿದಾರರು ಬರೆದು ತಿಳಿಸುತ್ತಾರೆ.

ಕಾರ್ಕಳ— ಈ ಹಿಂದೆ ಪ್ರಕಟವಾದಂತೆ ಕಾರ್ಕಳ ಶ್ರೀ ಪದ್ಮಸಾಲಿಯಾನ ಶೆಟ್ಟಿಗಾರ ವೈಶ್ಯಸಮಾಜ ಸೇವಾ ಯುವಕ ಸಂಘದ ದ್ವಿತೀಯ ವಾರ್ಷಿಕ ವರ್ಧಂತಿಯು ಪ್ರಾತಃ ಸ್ನಾನ, ಪ್ರಭಾತಫೇರಿ, ದಿನಪೂರ್ಣ ಭಜನೆ, ಉತ್ಸವ ಉಪಾಸನಾದಿಗಳಿಂದ ಬಹು ವಿಜೃಂಭಣೆಯಿಂದ ಯಶಸ್ವಿಯಾಗಿ ನಡೆಯಿತು. ಉತ್ಸವ ನಂತರ ರಾತ್ರಿಯಲ್ಲಿ ಸ್ಥಳೀಯ [illegible] ನೇತೃತ್ವದಲ್ಲಿ ಸಮಾಜದ ಪ್ರಮುಖ [illegible]ರಲ್ಲೊಬ್ಬರಾದ ರಾ॥ ಕೆ. ಟಿ. ಮಾಧವಶೆಟ್ಟಿಗಾರರ ಅಧ್ಯಕ್ಷತೆಯಲ್ಲಿ ಸಭೆಕೂಡಿ, ವರ್ಧಂತಿಗೆ ಯಶಸ್ಸನ್ನು ಕೋರಿ ಬಂದ ಪರಸ್ಥಳೀಯರ ಪತ್ರಗಳನ್ನೂ, ಗತವರ್ಷದ ವಾರ್ಷಿಕ ವರದಿಯನ್ನೂ ಓದಿ ಹೇಳಲಾಯಿತು. ತರುವಾಯ ಅಧ್ಯಕ್ಷರ ಭಾಷಣವಾಗಿ, [illegible] ಪ್ರೋತ್ಸಾಹಿಸಿದ ವಿವಿಧ ಸಮಾಜದ ಪುರಗೃಹಸ್ಥರೆಲ್ಲರಿಗೂ ಧನ್ಯವಾದಗಳನ್ನರ್ಪಿಸಲಾಗಿ, ಬುದ್ಧಿಬೋಧಕ ಭಾಷಣಗಳಿಂದ ಸಭಾವಿಸರ್ಜನೆಯಾಯಿತು.

ಕಾರ್ಕಳವನ್ನು ವಿದ್ಯುಚ್ಛಕ್ತಿಯ ದೀಪಗಳಿಂದಲಂಕರಿಸುವ ಯೋಜನೆಯು ತಯಾರಾಗಿದ್ದು ನಿಯಮಿತ ಜವಾಬುದಾರಿಯ ಕಂಪೆನಿಯೊಂದನ್ನು [illegible] ರಲ್ಲಿದ್ದಾರೆ. ಈಗಾಗಲೇ ಹಲವು ಪಾಲುಗಳನ್ನು ಕೊಂಡುಕೊಳ್ಳುವ ವಾಗ್ದಾನಗಳಾಗಿರುವವು.

ಬಂಟ್ವಾಳ— "ದಿ॥ ಬೋ॥ ಪ್ರೆಸಿಡೆಂಟರೂ ದಿ॥ ಬೋ॥ ಇಂಜಿನಿಯರರೂ ಧರ್ಮಸ್ಥಳಕ್ಕೆ ಹೋದವರು ಮಂಗಳೂರಿಗೆ ಹಿಂತಿರುಗುವಾಗ ಇಲ್ಲಿಯ ಬೋರ್ಡ್ ಹುಡುಗರ ಶಾಲೆಯನ್ನು ಸಂದರ್ಶಿಸಿ, ಸ್ಕೌಟ್ ದಳ [illegible] ಬೇಕೆಂದು ರಿಮಾರ್ಕ್ ಬರೆದಿರುವರಂತೆ. ಶಾಲೆಯ ಮಾಡಿನ [illegible] ಹಂಚುಗಳು ಮಕ್ಕಳ ತಲೆಯ ಮೇಲೆ ಬೀಳಬೇಕಾದುದನ್ನು ನೋಡಲಿಲ್ಲವೆಂದು ತೋರುತ್ತದೆ" ಎಂದೊಂದು ಬಾತ್ಮಿ.

ಚೆಂಪಿಯನ್ ಸ್ಕೀಮ್ ಪ್ರಕಾರ ಇಲ್ಲಿಯ ಬೋರ್ಡ್ ಹುಡುಗಿಯರ ಶಾಲೆಯನ್ನು ಬರುವ ಎಪ್ರಿಲ್ ತಿಂಗಳಿನಿಂದ ಮುಚ್ಚುತ್ತಾರಂತೆ.

ಇದೇ ತಾ. ೯ನೇ ರವಿವಾರ ದಿನ ಶ್ರೀ ಶಿವಭಕ್ತಿಯೋಗ ಸಂಘದಲ್ಲಿ ಬ್ರಹ್ಮ ಸಮಾಜದ ಪ್ರಚಾರಕರಾದ ಶ್ರೀ ಸುಬ್ಬು ಕೃಷ್ಣಯ್ಯನವರು "ಬ್ರಹ್ಮ ಸಮಾಜವೆಂದರೇನು?" ಎಂಬ ಕುರಿತು ಭಾವಭರಿತ ಭಾಷಣಮಾಡುತ್ತ, ಸರ್ವಮತ ಸಹಿಷ್ಣುತೆಯುಳ್ಳ ಬ್ರಹ್ಮಸಮಾಜವು ಹಿಂದೀಯರ ಮತ್ತು ಜಗತ್ತಿನ ಏಳಿಗೆಗೆ ಹೇಗೆ ಸಾಧಕವಾಗಿದೆ ಎಂದು ಹೇಳಿದರು. ಇದೇ ತಾ. ೧೬ನೇ ರವಿವಾರ ಮೇಲ್ಕಂಡ ಸಂಘದಲ್ಲಿ ಆರ್ಯಸಮಾಜದ ಪ್ರಚಾರಕರಾದ ಶ್ರೀಯುತ ಲಕ್ಷ್ಮಣದೇವ ವಿದ್ಯಾರ್ಥಿಯವರು "ಆರ್ಯಸಮಾಜವೆಂದರೇನು?" ಎಂಬುದಾಗಿ ಭಾಷಣ ಮಾಡಲಿರುವರು. ಸರ್ವರಿಗೂ ಸುಸ್ವಾಗತವಿದೆ.

ಕುದ್ರೋಳಿಯ ಶ್ರೀ ಗೋಕರ್ಣನಾಥ ಕ್ಷೇತ್ರದ ವಠಾರದಲ್ಲಿ ಇದೇ ತಾ. ೧೬ನೇ ರವಿವಾರ "ದಿ ಕೆನರಾ ಸಿವಿಲ್ಯನ್ [illegible] ಶೋ" ಎಂಬ ಅಂಗಸಾಧಕ ಸಂಸ್ಥೆಯವರ ಮಹಾ ಪ್ರದರ್ಶನವಿದೆ. ಸ್ಟೀಮ್ ರೋಲರನ್ನು ಎದೆಯ ಮೇಲೆ ನಡೆಸುವುದು; ಮೋಟರ್ ನಿಲ್ಲಿಸುವುದು; ಬಂದೂಕಿನಿಂದ ಹೊಡೆಸಿಕೊಳ್ಳುವುದು; ಆಕಾಶದಲ್ಲಿ ನೇತಾಡುವುದು; ಉಸಿರುಗಟ್ಟಿ ಭೂಮಿಯೊಳಗೆ ಹೂಳಿಸಿಕೊಳ್ಳುವುದು; ವಿಷದ್ರವ್ಯಗಳನ್ನು ಕುಡಿಯುವುದು, ಇದೇ ಮೊದಲಾದ ಪ್ರದರ್ಶನಗಳಿವೆ.

[illegible] ಹೈಸ್ಕೂಲಿನಲ್ಲಿ ಹಿಂದೀ ಪದವೀದಾನ ಸಮಾರಂಭವು ಶಾಲೆಯ ಹೆಡ್ ಮಾಸ್ಟರ್ ಶ್ರೀ ಎಂ. ಮಂಗೇಶರಾವ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಯುತ ಬನ್ನಿ ಪುಂಡರೀಕ ಶೆಣೈಯವರು ಇಲ್ಲಿಯ ಹಿಂದೀ ಪ್ರಚಾರ ಕಮಿಟಿಯ ಪರವಾಗಿ ವರದಿಯನ್ನು ಓದಿ ಹೇಳಿದ ನಂತರ, ಅಧ್ಯಕ್ಷರು ಕಳೆದ ಹಿಂದೀ ಪರೀಕ್ಷೆಯಲ್ಲಿ ಪಾಸಾದವರಿಗೆ ಪ್ರಶಸ್ತಿಪತ್ರಗಳನ್ನು ಕೊಟ್ಟರು. ತದನಂತರ ಶ್ರೀಗಳಾದ [illegible] ಪ್ರಭು, [illegible] ಬಾಳಿಗ, [illegible] ಭಟ್ಟ, ಮತ್ತು ಸುಬ್ರಾಯ [illegible] ಯವರು ಹಿಂದೀ ಭಾಷೆಯ ಬೆಳವಣಿಗೆಯ ವಿಷಯವನ್ನೆತ್ತಿ [illegible] ಮೇಲೆ ಅಧ್ಯಕ್ಷರ ಭಾಷಣವಾಗಿ, [illegible] ಸಮಾರಂಭವು ಕೊನೆಗೊಂಡಿತು.

ಶ್ರೀ ಕ್ಷೇತ್ರ, ನೆಲ್ಲಿತೀರ್ಥ:— ಮಂಗಳೂರು ತಾಲೂಕಿನ ಬಜಪೆಯ ಸಮೀಪವಿರುವ ಈ ಪುರಾತನ ಕ್ಷೇತ್ರದಲ್ಲಿ ಇದೇ ಮಾರ್ಗಶಿರ ಶು॥ ೧೪ ಧನುರ್ಮಾಸ ೪ (ತಾ. ೧೮—೧೨—೩೪ರಿಂದ ೨೪—೧೨—೩೪) ದಿಂದ ಧ್ವಜಾರೋಹಣ, ರಥೋತ್ಸವ, ತೀರ್ಥಸ್ನಾನ ಮೊದಲಾದ ಉತ್ಸವಗಳ ಕಾರ್ಯಕ್ರಮಗಳು ಯಥಾವಿಧಿ ಜರಗಲಿವೆ. ಆಸ್ತಿಕ ಮಹಾಜನಂಗಳು ಸಕಾಲಕ್ಕೆ ದಯಮಾಡಿಸಿ ಶ್ರೀದೇವರ ದರ್ಶನಲಾಭ ಪಡೆದು ಕೃತಾರ್ಥರಾಗಬೇಕಾಗಿ ಮೊಕ್ತೇಸರರ ಪ್ರಕಟಣೆ.

ಉಡುಪಿ— ಹಿಂದೀ ಸಪ್ತಾಹವು ಇದೇ ತಾ. ೨ರಿಂದ ೯ರ ತನಕ ಜರಗಿಸಲ್ಪಟ್ಟಿತು. ಪ್ರಭಾತಫೇರಿ, ಭಾಷಣ ಮತ್ತು ವಂತಿಗೆಯೆತ್ತುವಿಕೆ ಇವೇ ಮುಖ್ಯ ಕಾರ್ಯಕ್ರಮಗಳಾಗಿದ್ದುವು. ಮುಖ್ಯವಾಗಿ ಶ್ರೀ ಬಿ. ರಾಮಕೃಷ್ಣಾಚಾರ್, ಇವರು ವಿಶೇಷ ಪ್ರಯತ್ನಪಟ್ಟು, ಕೆಲಸಮಾಡಿರುವರು. ಮಂಗಳೂರಿನಂತೆ ಇಲ್ಲಿಯೂ ವಿವಿಧ ವಿನೋದಾದಿಗಳನ್ನೇರ್ಪಡಿಸಿ, ಆ ಮೂಲಕ ಜನರನ್ನು ಆಕರ್ಷಿಸಿ ಹಿಂದೀಯ ಮಹತ್ವದ ಕುರಿತು ಭಾಷಣಗಳನ್ನು ಕೊಡುತ್ತಿದುದು ಉತ್ತಮವಿತ್ತು. ಇನ್ನು ಮುಂದಾದರೂ ಇಲ್ಲಿಯ ಹಿಂದೀ ಪ್ರೇಮಿಗಳು ಇನ್ನಷ್ಟು ಉತ್ಸಾಹದಿಂದ ಇದನ್ನು ನಡೆಸುವರಾಗಲೆಂದೊಂದು ಬಾತ್ಮಿ.

ಕಿನ್ನಿಗೋಳಿ— ಅಸ್ಪೃಶ್ಯತಾ ನಿವಾರಣಾ ಕಮಿಟಿ ಕಡೆಯಿಂದ ಶ್ರೀ ನಾರಾಯಣ ಕಿಲ್ಲೆಯವರು ಇದೇ ತಾ ೮—೧೨—೩೪ರಲ್ಲಿ ಇಲ್ಲಿಗೆ ಬಂದು, ಇಲ್ಲಿಯ ಪ್ರಮುಖ ಗೃಹಸ್ಥರೊಡನೆ ಮಾತನಾಡಿ ಹಳ್ಳಿಯಲ್ಲಿ ಪ್ರಚಾರಕಾರ್ಯ ಮಾಡಲು ಸದ್ಯದಲ್ಲೇ ಬರುವುದಾಗಿ ತಿಳಿಸಿ, ಹೋಗಿರುತ್ತಾರೆ.

ಏಲಂ ನೋಟೀಸು ಏಲಂ

ಮಂಗಳೂರು ಸಬ್ ಕೋರ್ಟ್ ಕ್ರಮ ಅಮಲ್‌ಜಾರಿ ನಂಬ್ರ 67/33 ಅರ್ಜಿಯಲ್ಲಿ ನೇಮಕಪಟ್ಟ ಕಮಿಶನರು M. Anantha Shastri ಮತ್ತು U. Shrinivas Rau ಯವರು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನಂದರೆ:-

ಇದರ ಮುಂಚೆ ಕೊಟ್ಟ ಜಾಹೀರಾತುಗಳನ್ನು ರದ್ದುಪಡಿಸಿ ಮೃತಪಟ್ಟ ಅತ್ತಾವರ ರಾಮರಾಯರ ಬಾಬ್ತು ಆಸ್ತಿಗಳನ್ನು ಆಯಾಯ ಸ್ಥಳಗಳಲ್ಲಿ ಏಲಂ ಮಾಡಲು ಲೋಟುಗಳು ಮತ್ತು ಅವುಗಳ ದಿವಸಗಳು ಈ ಕೆಳಗೆ ವಿವರಿಸಿಯದೆ:-

ಫೋರ್ಟ್ ವಾರ್ಡ

ಮುಂಚೆ ಬಾಕಿ ಇದ್ದ ಮತ್ತು ಲೋಟ್ ನಂಬ್ರ 17ರಿಂದ 2[illegible], 27ರಿಂದ 36, 37ರಿಂದ 46, 47ರಿಂದ 56, 57ರಿಂದ 66, 67ರಿಂದ 76, 77ರಿಂದ 86, 87ರಿಂದ 96, 97ರಿಂದ 106, 107ರಿಂದ 115, ಇವುಗಳು 1934ನೇ ಡಿಸೆಂಬರ ತಾ. 17, 18, 19, 20, 21 ಮತ್ತು 1935ನೇ ಜನವರಿ ತಾ. 3, 4, 5, 7, 8, ಮತ್ತು ಅನಂತರದ ದಿವಸಗಳು.

ಕೆಂಟೋನ್‌ಮೆಂಟ್ ವಾರ್ಡ

ಮುಂಚೆ ಬಾಕಿ ಇದ್ದ ಮತ್ತು ಲೋಟ್ ನಂಬ್ರ 116ರಿಂದ 125, 126ರಿಂದ 135, 136ರಿಂದ 145, 146ರಿಂದ 155, 156ರಿಂದ 165, 166ರಿಂದ 175, 176ರಿಂದ 185, 186ರಿಂದ 195, 196ರಿಂದ 205, 206ರಿಂದ 215, 216ರಿಂದ 225, 226ರಿಂದ 285, 236ರಿಂದ 239 ಇವುಗಳು 1935ನೇ ಜನವರಿ ತಾ. 9, 10, 11, 12, 14, 15, 16, 17, 18, 21, 22, 23, 24, ಮತ್ತು ಅನಂತರದ ದಿವಸಗಳು.

...ದಕ್ಷಿಣ ಭಾರ... ಪ್ರಚಾರಕನಾದ ... ಸಪ್ತಾಹದಾಚರಣೆಗಾಗಿ ... ಕರಪತ್ರಗಳ ವಿತರಣೆ, ವಿದ್ಯಾರ್ಥಿಗಳಿ... ಗಳ ಮೂಲಕ ಹಿಂದೀ ಕಲಿಯುವ ಅವಕಾಶ... ತೋರಿಸಿ ಕೊಟ್ಟಿದ್ದಲ್ಲದೆ, ದೇಶಭಕ್ತ ರಾಜಗೋಪಾಲಾಚಾರ್ಯರು ಮಾಡಿದ ವಿನಂತಿ ಮೇರೆಗೆ ದೇವನಾಗರಿ ಲಿಪಿಯಿಂದ ಹಿಂದೀ ಭಾಷೆಯಲ್ಲಿ ಹಸ್ತಾಕ್ಷರಹಾಕು ವಷ್ಟಾದರೂ ಯೋಗ್ಯತೆಯುಳ್ಳವರ ಹಸ್ತಾಕ್ಷರಗಳನ್ನು ಪಡೆಯುವ ಪ್ರಯತ್ನಗಳಾದುವು. ಈ ಕಾರ್ಯದಲ್ಲಿ ಶ್ರೀ ಪಿ ಕೃಷ್ಣನವರು ಒಳ್ಳೇ ಸಹಾಯ ಮಾಡಿದರು. ಶಂಕ್ಯೆ ಮಿಕ್ಕಿದ ಹಿಂದೀ ಗೊತ್ತಿಲ್ಲದ ವಿದ್ಯಾರ್ಥಿಗಳನ್ನು ಕಂಡು, ಅವರ ಹೆಸರು, ಪ್ರಾಯ, ವೃತ್ತಿ ವಿಳಾಸಾದಿಗಳನ್ನು ದೇವನಾಗರಿ ಲಿಪಿಯಲ್ಲಿ ಅವರ ಸ್ವಹಸ್ತಾಕ್ಷರಗಳಿಂದಲೇ ಬರೆದು ತೆಗೆದುಕೊಳ್ಳಲಾದುವು. ಮೇಲೆ ಹೇಳಿದ ರೀತಿಯಲ್ಲಿ, ಕೆಲವು ವಕೀಲರೂ, ವೈದ್ಯರೂ, ಸಾಹುಕಾರರೂ, ಉಪಾಧ್ಯಾಯರೂ ತಮ್ಮ ಹಸ್ತಾಕ್ಷರಗಳನ್ನು ಕೊಟ್ಟಿರುವರು. ಇವರೊಳಗೆ ದೇವನಾಗರಿಲಿಪಿಯನ್ನು ಹೊಸದಾಗಿ ಕಲಿತು, ಬರೆದುಕೊಟ್ಟವರೂ ಕೆಲವು ಮಂದಿ ಇರುವರು. ಹೀಗೆ ಪ್ರಚಾರ ಮಾಡಿದ್ದರಿಂದ ಇಲ್ಲಿ ಹಿಂದೀ ಭಾಷಾ ಪ್ರಚಾರಕ್ಕೆ ಕ್ಷೇತ್ರವು ಅನುಕೂಲವಾಗಿದ್ದರೂ ಪ್ರಚಾರಕ್ರಮವನ್ನು ತಿಳಿದ ಅನುಭವವುಳ್ಳ ಮತ್ತು ಉತ್ಸಾಹೀ ಕಾರ್ಯಕರ್ತರ ಅಭಾವವಿರುವುದೆಂದು ತಿಳಿದುಬಂತು. ಮೊದಲಿನಂತೆ, ನಾನು ಪುನಃ ಪ್ರಚಾರಕಾರ್ಯದಲ್ಲಿ ತೊಡಗಲಿಕ್ಕೆ ಅಸಮರ್ಥನಿರುವೆನಾದರೂ ಕೆಲವು ವಿದ್ಯಾರ್ಥಿಗಳ ಹಿಂದೀ ಕಲಿಯುವ ಆತುರವನ್ನು ತೃಪ್ತಿಪಡಿಸಲಿಕ್ಕೆ ಮಾತ್ರ ಇದೇ ಸಪ್ತಾಹದ ಮೊದಲನೇ ದಿನ ಒಂದು ಸಣ್ಣ ಹಿಂದೀ ವರ್ಗವನ್ನು ಕೂಡ ತೆರೆಯಲಾಯಿತು.

ಶ್ರೀಮತಿ ಲೀಲಾದೇವಿ ಭವಾನಿ ಶಂಕರರವರು ತಮ್ಮ ವಿದ್ಯಾರ್ಥಿನಿಯರಿಂದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಗೆ ಆರ್ಥಿಕ ಸಹಾಯವನ್ನು ಅಪೇಕ್ಷಿಸಿದ ಪ್ರಕಾರ ಶ್ರೀಮತಿಯವರಾದ ಲೀಲಾದೇವಿ ವಿಜಯಾದೇವಿ, ಚಂದ್ರಾದೇವಿಯವರು ಒಂದು ರೂಪಾಯಿಯಂತೆಯೂ, ಸುಂದರಿ, ಲಕ್ಷ್ಮಿ, ಗಂಗಾ ಶಾಂತಾ ಚೊ ಗಂಗಾ ಪಾರ್ವತಿ, ಮನೋರಮಾ, ಜೀಬಿ ಕಮಲಾ, ಮೀನಾಕ್ಷಿ, ವರದ, ಕೆಜ್ಜಿ ಸುಭುತ್ರಾ ಇವರು ಎಂಟಾಣೆಯಂತೆಯೂ ಶಾರದಾ, ಸಂಜೀವಿ, ವತ್ಸಲಾ ಇವರು ನಾಲ್ಕಾಣೆಯಂತೆಯೂ ಕೊಟ್ಟಿರುವರಲ್ಲದೆ ಶ್ರೀಯುತರಾದ ಕೆ ಎಸ್ ಕೃಷ್ಣಭಟ್ಟರು ನಾಲ್ಕಾಣೆ ಜನಾರ್ಧನ ಶೆಟ್ಟಿ ಎರಡಾಣೆ ಪ್ರತ್ಯೇಕ ಸಹಾಯ ಮಾಡಿರುವರು ಹೀಗೆ ವಸೂಲಾದ ಎಲ್ಲಾ ಹಣವನ್ನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಗೆ ಕಳುಹಿಸಿಕೊಡಲಾಗುವುದು

ಹಲವು ಕಾರಣಗಳಿಂದ ಸಾರ್ವಜನಿಕರಿಂದ ಧನ ಸಹಾಯವನ್ನು ಕೇಳುವುದಕ್ಕೆ ಹೋಗಲಿಲ್ಲ. ಆದರೂ ಧನಸಹಾಯವನ್ನಪೇಕ್ಷಿಸಿ ಮದ್ರಾಸಿನಿಂದ ಬಂದ ವಿನಂತಿ ಪತ್ರಗಳನ್ನು ಅವರಿಗೆ ಹಂಚಲಾಗಿದೆ.

ಪ್ರಚಾರ ಕಾರ್ಯದಲ್ಲಿ ಸಹಕಾರವನ್ನಿತ್ತ ಎಲ್ಲರಿಗೂ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇನೆ

ಕಟಪಾಡಿ ಶ್ರೀನಿವಾಸ ಶೆಟ್ಟಿ, ಕಾರ್ಕಳ.

ಮೂಡಬಿದ್ರೆ, ಜಾನುವಾರುಗಳ ಗೋಳಾಟ

ಅಯ್ಯಾ ಸ್ವದೇಶಾಭಿಮಾನಿಯೇ,

ನಮ್ಮಲ್ಲಿಯ ಪೋಲೀಸರು ಅಕಸ್ಮಾತ್ತಾಗಿ ಈಗ ಜಾನುವಾರುಗಳ ಮೇಲೆ ಬಿದ್ದಿರುವುದು ತುಂಬಾ ತೋಚನೀಯ. ... ಸ್ಟೇಶನಿನ ಬಳಿ ಮೂರು ಮಾರ್ಗಗಳು ಕೂಡುವದರಿಂದಲೂ ವಾಹನಗಳ ಸಂಚಾರವು ಅತಿಯಾಗಿರುವುದರಿಂದಲೂ ಜಾನುವಾರುಗಳು ಅಲ್ಲಿ ಕೂಡುವುದರಿಂದ ತೊಂದರೆಯಾಗುತ್ತದೆಂಬುದು ನಿಜ. ಆದರೆ ಮಾರ್ಗಗಳಲ್ಲಿ ಪಕ್ಕಪಕ್ಕ ಹೋಗಿ ಬರುವ ದನಗಳನ್ನು ಪೋಲೀಸರು ಹಗ್ಗಗಳಿಂದ ಕಟ್ಟಿ ದೊಡ್ಡಿಗೆ ಕಟ್ಟುವುದು ಎಷ್ಟು ಸಂತಾಪಕರ! ದನಕರುಗಳಿಲ್ಲದ ಮನೆ ಈ...

...ದನಗಳನ್ನು ಎಷ್ಟೋ ದೂರದ ಸ್ಥಳಗಳಿಗೆ ... ಹೋಗುವುದು ವಿಷಾದಕರ. ಆದುದರಿಂದ ದಯಾಳುವಾದ ಸರಕಾರದವರು ಅಥವಾ ಜಿಲ್ಲಾಬೋರ್ಡಿನವರು ಈ ಸಂಕಷ್ಟವನ್ನು ದೂರಗೊಳಿಸಿ ಬಡವರನ್ನೂ ಜಾನುವಾರುಗಳನ್ನೂ ಉದ್ಧರಿಸಿ ಎಲ್ಲರ ಕೃತಜ್ಞತೆಗೆ ಪಾತ್ರರಾಗಬೇಕಾಗಿ ಕೋರುವ

ಮೂಡಬಿದ್ರೆ ನಿವಾಸಿ.

ಸತ್ಯವಿಜಯ ಶಾಲೆ, ಮಾರ್ನಾಡು

ಮೂಡಬಿದ್ರೆ ಪೋಸ್ಟು

ಅಯ್ಯಾ ಸ್ವದೇಶಾಭಿಮಾನಿಯೇ

ಮೇಲಿನ ಶಾಲೆಯ ಮೆನೇಜರರು ತರುಣರೂ ಉತ್ಸಾಹಿಗಳೂ ಆಗಿದ್ದು ಮಂಗಳೂರು ಬೆಂಗಳೂರು ಚಿಕ್ಕಮಗಳೂರು, ಮೈಸೂರು ಹಾಸನ ಶೃಂಗೇರಿ ಹುಬ್ಬಳ್ಳಿ, ಧಾರವಾಡ ಧರ್ಮಸ್ಥಳ ಮೊದಲಾದ ಅನೇಕ ಊರುಗಳನ್ನು ಸಂಚರಿಸಿ ಶಾಲೆಗಾಗಿ ಎಂದು ಹಣವನ್ನು ಸಂಗ್ರಹಿಸಿದ್ದು ಎಲ್ಲರಿಗೂ ಗೊತ್ತಿದೆ. ಆದರೆ ವಸೂಲಾದ ಹಣವನ್ನು ಯಾವ ರೀತಿಯಲ್ಲಿ ಖರ್ಚುಮಾಡಿರುವರಾಗಿ ಒಂದು ಪಟ್ಟಿಯನ್ನು ಅವರು ಪ್ರಕಟಿಸುವುದು ಅವರ ಘನತೆಗೆ ಯೋಗ್ಯವು ಮಾತ್ರವಲ್ಲ ಇನ್ನೊಮ್ಮೆ ಹಣವನ್ನು ಸಂಗ್ರಹಿಸುವುದಕ್ಕೆ ಪ್ರೋತ್ಸಾಹವೂ ಸಿಗುವುದು

ಹಣ ಮುಖ್ಯವಾಗಿರುವುದಾಗಿ ನನ್ನ ಅಭಿಪ್ರಾಯವಲ್ಲ. ಆದರೆ ಧರ್ಮ ಮಾಡಿದವರ ಮೊಬಲಗನ್ನು ಯಾವ ರೀತಿಯಲ್ಲಿ ವಿನಿಯೋಗಿಸಿರುವುದೆಂಬುದನ್ನು ದಯಮಾಡಿ ಇನ್ನಾದರೂ ಮೆನೇಜರರು ಪ್ರಕಟಿಸಬೇಕಾಗಿ ವಿನಂತಿ

ಹಣ ಸಹಾಯಕ

ತಾ ೬ರಲ್ಲಿ ಗುಂಟೂರಿನ ಮಾರ್ಗವೊಂದರಲ್ಲಿ ಇಬ್ಬರು ಸ್ತ್ರೀಯರ ಮೇಲೆ ಪುಂಡರಿಬ್ಬರು ಬಿದ್ದು ಸ್ತ್ರೀಯರ ಮೈಮೇಲಿದ್ದ ಚಿನ್ನಾಭರಣಗಳನ್ನು ಅಪಹರಿಸಿಕೊಂಡು ಓಡಿರುವರು. ಚಿನ್ನಗಳ ಬೆಲೆಯು ರೂಪಾಯಿ ೧೫೦೦ ಆಗಿರಬಹುದೆಂದು ಅಂದಾಜು. ಕೆಲವು ಕೈದುಗಳಾಗಿವೆ

... ಜಯಕರ್ನಾಟಕ ನಾಟ್ಯಾಂಕ ...

ಕರ್ನಾಟಕ ಪತ್ರಿಕೆಯವರು ... ವಾರದಲ್ಲಿ ಹೊರಡಿಸಿರುವ ಈ ಉತ್ಕೃಷ್ಟ ಅಂಕವನ್ನು ಆದರದಿಂದ ಸ್ವೀಕರಿಸಿರುವೆವು. ವಿಷಯ ಸಂಗ್ರಹ, ಚಿತ್ರ ಸಂಗ್ರಹ ಮುದ್ರಣ—ಈ ಮೂರು ದೃಷ್ಟಿಗಳಿಂದಲೂ ನಾಟ್ಯಾಂಕವು ಮನಮೋಹಕವಾಗಿದ್ದು ಪ್ರತಿಯೋರ್ವ ಕನ್ನಡಿಗನಿಂದ ಸಂಗ್ರಹಯೋಗ್ಯವಾಗಿದೆ ಬೆಲೆ ರೂ ೧ ಜಯಕರ್ನಾಟಕ ಕಾರ್ಯಾಲಯ ಧಾರವಾಡ

ಚುರಮರಿಕೃತ ಶಾಕುಂತಳ ನಾಟಕ:— ಪುಟ ಡೆಮಿ ⅛ ಆಕಾರದ ೧೯೪+೫೮, ಬೆಲೆ ರೂ ... ಪ್ರಕಾಶಕರು—ಶ್ರೀ ವಿದ್ಯಾರಣ್ಯ ಗ್ರಂಥ ಪ್ರಕಾಶನ ಸಮಿತಿ ಬೆಳಗಾವಿ

ತುಂಡು ವಾರ್ತೆಗಳು.

ರಂಗೂನಿನ ಚರಿತ್ರೆಯಲ್ಲಿ ಪ್ರಥಮ ಸಲ ಡ್ಯಾಗಿ ಮಾಸೀನ್ ಎಂಬ ೩೪ ವರ್ಷ ಪ್ರಾಯದ ಸ್ತ್ರೀಯೊಬ್ಬಳು ಕಾರಿನ್ ಎಂಬವಳನ್ನು ಕತ್ತಿಯಿಂದ ಹೊಡೆದು ಕೊಂದು ಮರಣದಂಡನೆಗೊಳಗಾಗಿರುವಳು

ದೀನಬಂಧು ಸಿ ಎಫ್ ಅಂಡ್ರ್ಯೂಸರು "ಇಂಡಿಯಾ ಮತ್ತು ಬ್ರಿಟನ್" ಎಂಬ ತನ್ನ ಗ್ರಂಥವನ್ನು ಬರೆದು ಮುಗಿಸುವುದಕ್ಕಾಗಿಯೂ ಆಫ್ರಿಕದ ಕೆಲಸಗಳ ಸಂಬಂಧವಾಗಿಯೂ ಪುನಃ ಹಿಂದೂದೇಶಕ್ಕೆ ಬಂದಿರುವರು. ಮೊನ್ನೆ ಮುಂಬಾಯಿಯಲ್ಲಿಳಿದು ವಾರ್ಧಕ್ಕೆ ಮಹಾತ್ಮರಲ್ಲಿಗೆ ಹೋದರು

ಮಿಡ್ನಾಪುರದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಾದ ಮಿ॥ ಬಿ ಜೆ ಗ್ರಿಫಿತ್ಸರವರು ಭಾಷಣ ಮಾಡುತ್ತಾ ಮಿಡ್ನಾಪುರದಲ್ಲಿ ಕ್ರಾಂತಿಯು ಕಡಿಮೆಯಾಗಿಲ್ಲವಾದುದರಿಂದ ಸಾರ್ವಜನಿಕರು ಇನ್ನಷ್ಟು ಯತ್ನಿಸಿ ಅದನ್ನಡಗಿಸಬೇಕೆಂದು ಹೇಳಿದರು

...ಸುಭಾಷ್ಚಂದ್ರ ... ಕ್ರಿಸ್ತ ... ತಮ್ಮ ... ಗುರುಗಳೆಂದು ... ನಮ್ಮ ... ಮುಸಲ್ಮಾನರು ಅವರ ಮೇಲೆ ಬಿದ್ದು ಕೆಲವು ಕ್ರೈಸ್ತರಿಗೆ ಹೊಡೆದರು, ಕೆಲವರು ಆಸ್ಪತ್ರೆ ಪಾಲಾದರು. ಪೋಲೀಸರ ತನಿಖೆ ನಡೆಯುತ್ತಿದೆ.

ಸುಭಾಷ್ಚಂದ್ರ ಬೋಸರು ಹಿಂದೂದೇಶದಲ್ಲಿ ಹೆಚ್ಚು ದಿನ ಉಳಿಯದೆ, ಸಂಪೂರ್ಣ ಗುಣಮುಖರಾಗಬೇಕಾದರೆ ಆದಷ್ಟು ಶೀಘ್ರದಲ್ಲೇ ಅವರು ಯುರೋಪ್ಯಕ್ಕೆ ತೆರಳಬೇಕೆಂದು ಡಾಕ್ಟರರ ಅಭಿಪ್ರಾಯವಿದೆ.

LOOK SHARP! LOOK AHEAD!

Murdeshwer's Banking Institute.

Pioneer Institute on the West Coast

Opens out Careers for Business men, Graduates, Under-graduates, and S. S. L. C's and also for those who have not passed any University examination

Coaches students for the Specialised Banking Courses (C A I B. & C A I I B) and also for Accountancy Secretarial and Insurance Courses (L A A, A C R A, F C R A F I S A, A C I I etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted

Enrol yourself NOW Classes are in full swing Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar, Principal
Dip Econ F R Econ S (Lond)
Ganapathy High School Street,
Mangalore

ಸಿದ್ಧವಾಗಿವೆ! ತ್ವರೆಮಾಡಿರಿ!

1935

ಸಣ್ಣ ಮತ್ತು ದೊಡ್ಡ ಸುಂದರ ಡೈರಿಗಳ್ಳು

ಬೆಲೆ — ಆ 12 9 8 5

ಶಾರದಾ ಛಾಪಖಾನೆ, ಮಂಗಳೂರು



"ಕಿಂಗ್ ಒಫ್ ಕಿಂಗ್ಸ್" ಚಲಚ್ಚಿತ್ರದೊಳಗಿನ ಒಂದು ದೃಶ್ಯ.

(ಸಿಸಿಲ್ ಬಿ. ಡಿ ಮಿಲ್ಲೆ ಎಂಬ ಪ್ರಸಂಚವಿಖ್ಯಾತ ಅಭಿನಯ ನಿರ್ದೇಶಕನ ಮೇಲ್ವಿಚಾರದಲ್ಲಿ ಸಿದ್ಧಗೊಳಿಸಿದುದು ಇದು, ಬರುವ ಜನವರಿ ಮೊದಲನೆ ವಾರದಲ್ಲಿ ಶ್ರೀ ಕೃಷ್ಣ ಸಿನೆಮದಲ್ಲಿ ಪ್ರದರ್ಶಿಸಲ್ಪಡುವುದು.)

ಜರ್ಮನ್—ರಷ್ಯಾ ಸಂಬಂಧ.

ಜರ್ಮನಿಯಲ್ಲಿ ನಾಝೀ ಸರಕಾರವು ಅಧಿಕಾರಾರೂಢವಾದಂದಿನಿಂದ ಯಹೂದಿಗಳಿಷ್ಟೋ ಗಡೀಪಾರು ಮಾಡಲ್ಪಟ್ಟರು. ಜರ್ಮನಿಯೊಂದಿಗೆ—ಇತರ ದೇಶಗಳಿಗೂ ಸ್ನೇಹವೇನೂ ವರ್ಧಿಸಿದ ಚಿಹ್ನೆಗಳಿಲ್ಲ. ರಷ್ಯವಂತೂ ಜರ್ಮನಿಯಿಂದ ದೂರದೂರವಾಗುತ್ತಿದೆಯೆನ್ನುವರು. ಜರ್ಮನಿಯು ಜನಸಂಖ್ಯೆಯೂ ನಿರ್ಗತ ವ್ಯಾಪಾರವೂ ಅಧೋಗತಿಯಲ್ಲಿರುವುದನ್ನು ಕಂಡು ಸರಕಾರವೂ ಒಳಗಿಂದೊಳಗೇ ಗಾಬರಿಪಟ್ಟಿದೆಯೆನ್ನಬೇಕು. ೧೯೩೨ರಿಂದ (ಹಿಟ್ಲರ್ ರಾಜ್ಯಭಾರದ ವಿಶ್ವರೂಪ ದರ್ಶನ ಕಾಲದಿಂದ) ಜರ್ಮನಿಯು ರಷ್ಯದ ಮೇಲಿನ್ನು ತನ್ನ ವರ್ಚಸ್ಸನ್ನು ಕಳಕೊಳ್ಳುತ್ತ ಬಂದಿತೆನ್ನಬೇಕು. ಇದರಿಂದ ಜರ್ಮನ್ [illegible] ಅಘಾತವಿದೆ. ೧೯೩೨ರಲ್ಲಿ ರಷ್ಯದವರು ಕೊಂಡುಕೊಳ್ಳುವ ಸರಕುಗಳ [illegible] ಮಿಲ್ಲಿಯನ್ ಮಾರ್ಕುಗಳಿಗೆ ಇದ್ದು [illegible] ಮುಂದೆ ಒಂಭತ್ತೇ [illegible] ೧೯೩೩ರಲ್ಲಿ ಮತ್ತು ೮೦ ಅಥವಾ ೯೦ [illegible] ಮಾರ್ಕುಗಳ ಸಂಖ್ಯೆಯು ಇಳಿದು ಹೋಗುವುದಾಯಿತು.

ಈ ರಾಜ್ಯಗಳೊಳಗಿನ ಆರ್ಥಿಕ ಸಂಬಂಧವೇನು? ರಷ್ಯವು ಜರ್ಮನಿಗೆ ಕೊಡಲಿರುವ ಸಾಲದ ಮೊತ್ತವಿನ್ನೂ ೩೦೦ ಮಿಲ್ಲಿಯ ಫ್ರಾಂಕು. ಆದರೆ, ೧೯೩೬ರೊಳಗೆ ಇದೆಲ್ಲವೂ ತೆತ್ತು ಮುಗಿವುದೆಂದು ಎಣಿಸಲಾಗಿದೆ. ಆ ಮೇಲೆ ರಷ್ಯವು ಜರ್ಮನಿಯೊಡನೆ ವಾಣಿಜ್ಯ ಸಂಬಂಧವನ್ನು ಹೇಗೆ ಇಟ್ಟುಕೊಳ್ಳುವುದೋ ಹೇಳಲಾಗುವುದಿಲ್ಲ.

ಚೀನವು ಮುಂದಡಿಯಿಡುತ್ತಿದೆ

ವಾಣಿಜ್ಯ ಪ್ರಪಂಚದಲ್ಲಿ ಲಕ್ಷಣೀಯ ಸ್ಥಾನವೊಂದನ್ನು ಗಳಿಸಬೇಕೆಂಬುದು ಚೀನದ ಇಚ್ಛೆಯಾಗಿದೆ. ಅದಕ್ಕಾಗಿ ಪ್ರಚಂಡ ನೌಕಾ ನಿರ್ಮಾಣ ಕಾರ್ಯದಲ್ಲಿಂದು ಚೀನವು ಕೈ ಹಾಕಿದೆ. ಚೀನದ ಕೈಗಾರಿಕೆಯೇ ಈ ಸ್ಟೀಮರ್ ನಿರ್ಮಾಣದಲ್ಲಿ ಉಪಯೋಗಿಸಲ್ಪಟ್ಟಿರುವುದು.

ನೌಕಾ ಸಂಬಂಧವಾದ ನಿಯಮಾವಳಿಗಳೂ ತಿದ್ದಲ್ಪಟ್ಟಿವೆ. ಪೂರ್ಣ ತರಬೇತಿಯಿರುವವರನ್ನೆ ಕೆಲಸಗಳಿಗಾರಿಸುತ್ತಿರುವರು.

ಸ್ಟೀಮರ್ ನಿರ್ಮಾಣಕ್ಕೆ ಹೊಸ [illegible] ವೊಂದನ್ನು ಕಟ್ಟಿಸಲಾಗುತ್ತಿದೆ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 170/1934.

ಸುಭದ್ರಾ ಅಂತರ್ಜನಂ, ಮೃತಪಟ್ಟ ಕೇಶವನ್ ಪಣ್ಣಿ ಕೊಳತ್ತಾಯ ಯಾನೆ ಪಣ್ಣಿ ಕೊಳತ್ತಾಯ ಇಲ್ಲತ್ತ ಕೇಶವನ್ [illegible] ವಿಧವೆ, ಮುಡಿಕ್ಕೆ ಗ್ರಾಮದಲ್ಲಿರುವ [illegible] ಅರ್ಜಿದಾರಳು

ಮತ್ತು

ನಂಗೇಲಿ ಅಂತರ್ಜನಂ, ಮೃತಪಟ್ಟ ಕೇಶವನ್ ಪಣ್ಣಿ ಕೊಳತ್ತಾಯ ಯಾನೆ ಪಣ್ಣಿ ಕೊಳತ್ತಾಯ ಇಲ್ಲತ್ತ ಕೇಶವನ್ ನಂಬೂದಿರಿ ತಾಯಿ, ಸದ್ರಿ ಮುಡಿಕ್ಕೆ ಗ್ರಾಮದಲ್ಲಿರುವವಳು—ರೆಸ್ಪಾಂಡೆಂಟಳು

ಇವರೊಳಗೆ—

ತಾ 10 12—'34

ಸದ್ರಿ ಅರ್ಜಿದಾರಳ ಕಡೆಯಿಂದ ಬರಕೊಂಡ ನೋಟೀಸು.

ಕಾಸರಗೋಡು ತಾಲೂಕು ಮುಡಿಕ್ಕೆ ಗ್ರಾಮದಲ್ಲಿರುವ ಮೃತಪಟ್ಟ ಕೇಶವನ್ ಪಣ್ಣಿ ಕೊಳತ್ತಾಯ ಯಾನೆ ಪಣ್ಣಿ ಕೊಳತ್ತಾಯ ಇಲ್ಲತ್ತ ಕೇಶವನ್ ನಂಬೂದಿರಿಯು ಕಾಸರಗೋಡು ಕಸಬೆಯಲ್ಲಿರುವ ಕೆನರಾ ಬೇಂಕಿನಲ್ಲಿ ಅಡವಿಟ್ಟ ಲೋನ ನಂಬ್ರ 2081/8ನೇ ನಗವನ್ನು ಅರ್ಜಿದಾರಳಿಗೆ [illegible] ಅವಳು ಸದ್ರಿ ಮೃತನ ನ್ಯಾಯವಾದ [illegible] ರಳು ಆದ್ದರಿಂದ ಸದ್ರಿ [illegible] ಮಾಡಿದ [illegible] ತಾ. 8—1—1935ಕ್ಕೆ [illegible] ಆಕ್ಷೇಪವುಳ್ಳವರು ಆ [illegible] ಹಾಜರಾಗಿ ತಮ್ಮ ಆಕ್ಷೇಪ [illegible] ಜ್ಯಾಹೀರು ಮಾಡತಕ್ಕದ್ದೆಂದು ಈ ಮೂಲಕ ತಿಳಿಸೋಣಾಗುತ್ತದೆ.

C. M. K[illegible]ambu Nair,
Vakil for Ptnr.

East & West Insurance Co., Ltd.
East & West Building, Apollo Street, Fort Bombay.

Notice.

Notice is hereby given that the services of Mr H. S Nayak as an Organizer of the Company at Mangalore have been despensed with from 1st October 1934 and he is not connected with the Company in any capacity whatsoever. The Policyholders and the Public are therefore requested not to have any dealings with him on behalf of this Company. They may do so at their own account and risk.

Dalal & Co.
Secretaries.

Notice.

Under Section 27 of the Madras Town Planning Act, 1920, the Revenue Divisional Officer, Mangalore, has been appointed by the Government of Madras to be the Arbitrator in respect of the Guliga Hithlu Town Planning Scheme, Mangalore, sanctioned in G. O. No. [illegible] H, dated 11—9—1933. He will commence his duties with effect from 10-12-1934 and will hold his office in the Revenue Divisional Office, Mangalore. All correspondence relating to the scheme should be addressed to him at the above address.

(*Sd*) C. Innayya Reddi Garu,
Revenue Divisional Officer,
Mangalore.

ರೋಗಬಾರದಿರಲು

ದುಷ್ಟ ರೋಗಗಳಲ್ಲಿ ಹೆಂಗಸರ ನೋವಿಗೆ ಒಳಪಟ್ಟು ಸಾಯಬೇಡಿರಿ! ಈ ರೋಗ ಹತ್ತದಂತೆ ಇರಲು ನಾವು ಜರ್ಮನಿಯಿಂದ ತರಿಸುವ ರಬ್ಬರಿನ ಸಾಧನವನ್ನು ಉಪಯೋಗಿಸಿರಿ!

ಗಂಡಸರದ್ದು ಬೆಲೆ 1 8 0
ಹೆಂಗಸರಿಗೆ (ಗರ್ಭನಿರೋಧಕ್ಕೆ) 2-4-0
ಆರ್ಡರಿನೊಡನೆ 4 ಆಣೆ ಸ್ಟಾಂಪು ಕಳುಹಿಸಬೇಕು

ವಿಳಾಸ— ಕರ್ನಾಟಕ ಏಜನ್ಸಿ,
82, ಕೃಷ್ಣಪ್ಪ ನಾಯ್ಕರ್ ಅಗ್ರಹಾರಂ ಸ್ಟ್ರೀಟ್,
ಜಿ. ಟಿ. ಮದ್ರಾಸು

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel,
Calicut, 17—6 1934

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd) A. V. Ramaswami.

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,
ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ ಮಂಗಳೂರು—ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇಲೂರಿಗೆ, ಕಡೂರಿಗೆ.
ಮೂಡಗೆರೆಗೆ, ಸಕಲೇಶಪುರಕ್ಕೆ.
—ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ
—ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ಆಯಾಸದ ಪ್ರಯಾಣ! ಉತ್ಸಾಹಕರ ಸೌಕರ್ಯ

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ದಕ್ಷಿಣ ಭಾರತ ... ಪ್ರಚಾರಕ್ಕಾಗಿ ... ಸಹಸ್ರಾಕ್ಷರಗಳಿಗಾಗಿ ... ಕರಪತ್ರಗಳು, ಪತ್ರಿಕೆ, ವಿದ್ಯಾರ್ಥಿಗಳ ... ಗಳ ಮೂಲಕ ಹಿಂದೀ ಕಲಿಯುವ ಆವಶ್ಯಕತೆ ... ತೋರಿಸಿ ಕೊಟ್ಟಿದ್ದಲ್ಲದೆ, ದೇಶಭಕ್ತ ರಾಜಗೋಪಾಲಾಚಾರ್ಯರು ಮಾಡಿದ ವಿನಂತಿ ಮೇರೆಗೆ ದೇವನಾಗರಿ ಲಿಪಿಯಿಂದ ಹಿಂದೀ ಭಾಷೆಯಲ್ಲಿ ಸಹಸ್ರಾಕ್ಷರವನ್ನು ಬರೆಯಬಲ್ಲ ಯೋಗ್ಯತೆಯುಳ್ಳವರ ಹಸ್ತಾಕ್ಷರಗಳನ್ನು ಪಡೆಯುವ ಪ್ರಯತ್ನಗಳಾದುವು. ಈ ಕಾರ್ಯದಲ್ಲಿ ಶ್ರೀ ಪಿ. ಕೃಷ್ಣನವರು ಒಳ್ಳೇ ಸಹಾಯ ಮಾಡಿದರು. ೨೦೦ಕ್ಕೆ ಮಿಕ್ಕಿದ ಹಿಂದೀ ಗೊತ್ತಿಲ್ಲದ ವಿದ್ಯಾರ್ಥಿಗಳನ್ನು ಕಂಡು, ಅವರ ಹೆಸರು, ಪ್ರಾಯ, ವೃತ್ತಿ, ವಿಳಾಸಾದಿಗಳನ್ನು ದೇವನಾಗರಿ ಲಿಪಿಯಲ್ಲಿ ಅವರ ಸ್ವಹಸ್ತಾಕ್ಷರಗಳಿಂದಲೇ ಬರೆದು ತೆಗೆದುಕೊಳ್ಳಲಾದುವು. ಮೇಲೆ ಹೇಳಿದ ರೀತಿಯಲ್ಲಿ, ಕೆಲವು ವಕೀಲರೂ, ವೈದ್ಯರೂ, ಸಾಹುಕಾರರೂ, ಉಪಾಧ್ಯಾಯರೂ ತಮ್ಮ ಹಸ್ತಾಕ್ಷರಗಳನ್ನು ಕೊಟ್ಟಿರುವರು. ಇವರೊಳಗೆ ದೇವನಾಗರಿಲಿಪಿಯನ್ನು ಹೊಸದಾಗಿ ಕಲಿತು, ಬರೆದುಕೊಟ್ಟವರೂ ಕೆಲವು ಮಂದಿ ಇರುವರು. ಹೀಗೆ ಪ್ರಚಾರ ಮಾಡಿದ್ದರಿಂದ ಇಲ್ಲಿ ಹಿಂದೀ ಭಾಷಾ ಪ್ರಚಾರಕ್ಕೆ ಕ್ಷೇತ್ರವು ಅನುಕೂಲವಾಗಿದ್ದರೂ ಪ್ರಚಾರಕ್ರಮವನ್ನು ತಿಳಿದ ಅನುಭವವುಳ್ಳ ಮತ್ತು ಉತ್ಸಾಹೀ ಕಾರ್ಯಕರ್ತರ ಅಭಾವವಿರುವುದೆಂದು ತಿಳಿದುಬಂತು. ಮೊದಲಿನಂತೆ, ನಾನು ಪುನಃ ಪ್ರಚಾರಕಾರ್ಯದಲ್ಲಿ ತೊಡಗಲಿಕ್ಕೆ ಅಸಮರ್ಥನಿರುವೆನಾದರೂ ಕೆಲವು ವಿದ್ಯಾರ್ಥಿಗಳ ಹಿಂದೀ ಕಲಿಯುವ ಆತುರವನ್ನು ತೃಪ್ತಿಪಡಿಸಲಿಕ್ಕೆ ಮಾತ್ರ ಇದೇ ಸಪ್ತಾಹದ ಮೊದಲನೇ ದಿನ ಒಂದು ಸಣ್ಣ ಹಿಂದೀ ವರ್ಗವನ್ನು ಕೂಡ ತೆರೆಯಲಾಯಿತು.

ಶ್ರೀಮತಿ ಲೀಲಾದೇವಿ ಭವಾನಿ ಶಂಕರರವರು ತಮ್ಮ ವಿದ್ಯಾರ್ಥಿನಿಯರಿಂದ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಗೆ ಆರ್ಥಿಕ ಸಹಾಯವನ್ನು ಅಪೇಕ್ಷಿಸಿದ ಪ್ರಕಾರ ಶ್ರೀಮತಿಯವರಾದ ಲೀಲಾದೇವಿ ವಿಜಯಾದೇವಿ ಚಂದ್ರಾದೇವಿಯವರು ಒಂದು ರೂಪಾಯಿಯಂತೆಯೂ ಸುಂದರಿ, ಲಕ್ಷ್ಮಿ, ಗಂಗಾ, ಶಾಂತಾ ಬಿ. ಗಂಗಾ, ಪಾರ್ವತಿ, ಮನೋರಮಾ ಜೇಬಿ ಕಮಲಾ ಮೀನಾಕ್ಷಿ, ವರದ, ಕಿಟ್ಟಿ, ಸುಮಿತ್ರಾ ಇವರು ಎಂಟಾಣೆಯಂತೆಯೂ ಶಾರದಾ, ಸಂಜೀವಿ, ವತ್ಸಲಾ ಇವರು ನಾಲ್ಕಾಣೆಯಂತೆಯೂ ಕೊಟ್ಟಿರುವರಲ್ಲದೆ, ಶ್ರೀಯುತರಾದ ಕೆ ಎನ್ ಕೃಷ್ಣಭಟ್ಟರು ನಾಲ್ಕಾಣೆ ಜನಾರ್ದನ ಶೆಟ್ಟಿ ಎರಡಾಣೆ ಪ್ರತ್ಯೇಕ ಸಹಾಯ ಮಾಡಿರುವರು. ಹೀಗೆ ವಸೂಲಾದ ಎಲ್ಲಾ ಹಣವನ್ನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಗೆ ಕಳುಹಿಸಿಕೊಡಲಾಗುವುದು.

ಹಲವು ಕಾರಣಗಳಿಂದ ಸಾರ್ವಜನಿಕರಿಂದ ಧನಸಹಾಯವನ್ನು ಕೇಳುವುದಕ್ಕೆ ಹೋಗಲಿಲ್ಲ. ಆದರೂ ಧನಸಹಾಯವನ್ನಪೇಕ್ಷಿಸಿ ಮದ್ರಾಸಿನಿಂದ ಬಂದ ವಿನಂತಿಪತ್ರಗಳನ್ನು ಅವರಿಗೆ ಹಂಚಲಾಗಿದೆ.

ಪ್ರಚಾರ ಕಾರ್ಯದಲ್ಲಿ ಸಹಕಾರವಿತ್ತ ಎಲ್ಲರಿಗೂ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಕಟಪಾಡಿ ಶ್ರೀನಿವಾಸ ಶೆಟ್ಟಿ, ಕಾರ್ಕಳ.

... ಬಡವರ ... ಅಮೂಲ್ಯವಾದ ... ಗುತ್ತಿನ ... ದಿನಗಳನ್ನು ... ಹೋಗುವುದು ವಿಷಾದಕರ. ಆದುದರಿಂದ ದಯಾಳು ಧರ್ಮದ ಸರಕಾರದವರು ಅಥವಾ ಶ್ರೀಮಂತ ಪಟ್ಟಣಿಗರು ಈ ಸಂಕಷ್ಟವನ್ನು ದೂರಗೊಳಿಸಿ ಬಡವರನ್ನೂ ಜಾನುವಾರುಗಳನ್ನೂ ಉದ್ಧರಿಸಿ ಎಲ್ಲರ ಕೃತಜ್ಞತೆಗೆ ಪಾತ್ರರಾಗಬೇಕಾಗಿ ಕೋರುವ

ಮೂಡಬಿದ್ರೆ ನಿವಾಸಿ.

ಸತ್ಯವಿಜಯ ಶಾಲೆ, ಮಾರ್ನಾಡು

ಮೂಡಬಿದ್ರೆ ಪೋಸ್ಟು

ಅಯ್ಯಾ ಸ್ವದೇಶಾಭಿಮಾನಿಯೇ,

ಮೇಲಿನ ಶಾಲೆಯ ಮನೇಜರರು ಕರುಣರೂ ಉತ್ಸಾಹಿಗಳೂ ಆಗಿದ್ದು ಮಂಗಳೂರು, ಬೆಂಗಳೂರು ಚಿಕ್ಕಮಗಳೂರು ಮೈಸೂರು ಹಾಸನ ಶೃಂಗೇರಿ ಹುಬ್ಬಳ್ಳಿ, ಧಾರವಾಡ ಧರ್ಮಸ್ಥಳ ಮೊದಲಾದ ಅನೇಕ ಊರುಗಳನ್ನು ಸಂಚರಿಸಿ ಶಾಲೆಗಾಗಿ ಎಂದು ಹಣವನ್ನು ಸಂಗ್ರಹಿಸಿದ್ದು ಎಲ್ಲರಿಗೂ ಗೊತ್ತಿದೆ. ಆದರೆ ವಸೂಲಾದ ಹಣವನ್ನು ಯಾವ ರೀತಿಯಲ್ಲಿ ಖರ್ಚುಮಾಡಿರುವರಾಗಿ ಒಂದು ಪಟ್ಟಿಯನ್ನು ಅವರು ಪ್ರಕಟಿಸುವುದು ಅವರ ಘನತೆಗೆ ಯೋಗ್ಯವು ಮಾತ್ರವಲ್ಲ ಇನ್ನೂ ಮುಂದೆ ಹಣವನ್ನು ಸಂಗ್ರಹಿಸುವುದಕ್ಕೆ ಪ್ರೋತ್ಸಾಹವೂ ಸಿಗುವುದು.

ಹಣ ದುರ್ವ್ಯಯವಾಗಿರುವುದಾಗಿ ನನ್ನ ಅಭಿಪ್ರಾಯವಲ್ಲ. ಆದರೆ ಧರ್ಮ ಮಾಡಿದವರ ಮೊಬಲಗನ್ನು ಯಾವ ರೀತಿಯಲ್ಲಿ ವಿನಿಯೋಗಿಸಿರುವುದೆಂಬುದನ್ನು ದಯಮಾಡಿ ಇನ್ನಾದರೂ ಮನೇಜರರು ಪ್ರಕಟಿಸಬೇಕಾಗಿ ವಿನಂತಿ.

ಹಣ ಸಹಾಯಕ

